ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು : ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ

(ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ
ವಳಪಾಯಿ ಪ್ರಭಾವತಿ ಶಿವನಗೌಡ

ಮಾರ್ಗದರ್ಶಕರು
ಡಾ. ಟಿ.ಆರ್. ಚಂದ್ರಶೇಖರ
ವಿಶ್ರಾಂತ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು : ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ

(ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ

ದಳವಾಯಿ ಪ್ರಭಾವತಿ ಶಿವನಗೌಡ

ಮಾರ್ಗದರ್ಶಕರು

ಡಾ. ಟಿ.ಆರ್. ಚಂದ್ರಶೇಖರ

ವಿಶ್ರಾಂತ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೪

<u>ಮಾರ್ಗದರ್ಶಕರ ದೃಢೀಕರಣ ಪತ್ರ</u>

ಶ್ರೀಮತಿ ದಳವಾಯಿ ಪ್ರಭಾವತಿ ಶಿವನಗೌಡ ಇವರು ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು : ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ** ಎಂಬ ಅರ್ಥಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೧-೦೨-೨೦೧೪
ಸ್ಥಳ : ವಿದ್ಯಾರಣ್ಯ

(ಡಾ. ಟಿ.ಆರ್. ಚಂದ್ರಶೇಖರ)
ಮಾರ್ಗದರ್ಶಕರು
ವಿಶ್ರಾಂತ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು: ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ ಎಂಬ ಅರ್ಥಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ **ಡಾ. ಟಿ.ಆರ್. ಚಂದ್ರಶೇಖರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೧-೦೨-೨೦೧೪
ಸ್ಥಳ : ವಿದ್ಯಾರಣ್ಯ

(ದಳವಾಯಿ ಪ್ರಭಾವತಿ ಶಿವನಗೌಡ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ಕೋಷ್ಟಕ

ಸ್ತಂಭ ರೇಖಾಚಿತ್ರ

ಪೈ ರೇಖಾ ಚಿತ್ರ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಅಧ್ಯಯನದ ವಿಷಯ ಮತ್ತು ಸಮಸ್ಯೀಕರಣ

೧.೨. ಅಧ್ಯಯನದ ಉದ್ದೇಶಗಳು

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ವ್ಯಾಪ್ತಿ, ಮಿತಿಗಳು ಮತ್ತು ಮಹತ್ವ

೧.೫. ಅಧ್ಯಾಯಗಳ ವಿನ್ಯಾಸ

ಅಧ್ಯಾಯ ಒಂದು

ಪ್ರಸ್ತಾವನೆ

ಪೀಠಿಕೆ

ದುಡಿಮೆಗೆ ಲಿಂಗಸಂಬಂಧಿ ಆಯಾಮವಿದೆ. ಪುರುಷ ದುಡಿಮೆಯನ್ನು ಮಾತ್ರ ಸಮಾಜದಲ್ಲಿ ದುಡಿಮೆಯೆಂದು ಪರಿಗಣಿಸುತ್ತಾ ಬರಲಾಗಿದೆ. ಆದರೆ ಮಹಿಳೆಯರು ದುಡಿಮೆಯಲ್ಲಿ ನಿರತರಾಗಿರುವುದನ್ನು ಅಲ್ಲಗಳೆಯಲು ಬರುವುದಿಲ್ಲ. ದುಡಿಮೆಯನ್ನು ಸಂಪಾದನೆಯ ಒಂದು ಸಂಗತಿಯನ್ನಾಗಿ ಪರಿಗಣಿಸಲಾಗಿದೆ. ಸಂಪಾದನೆಯಿಲ್ಲದ ದುಡಿಮೆಯನ್ನು ಸಮಾಜವು ದುಡಿಮೆಯೆಂದು ಪರಿಗಣಿಸುವುದಿಲ್ಲ. ಮಹಿಳೆಯರ ದುಡಿಮೆಯು–ಪರಿಶ್ರಮವು ಪ್ರಧಾನವಾಗಿ ಸಂಪಾದನಾ ರಹಿತವಾಗಿರುತ್ತದೆ. ಈ ಕಾರಣದಿಂದ ಅವರ ದುಡಿಮೆಯನ್ನು ಆರ್ಥಿಕ ಸೂಚಿಯಾಗಿ ಪರಿಗಣಿಸುತ್ತಿಲ್ಲ.

ಮಹಿಳೆಯರ ಸಂಪಾದನಾ–ರಹಿತ ದುಡಿಮೆಯಲ್ಲಿ ಹೆಚ್ಚಿನ ಭಾಗವು ಮನೆಗೆಲಸಕ್ಕೆ ಸಂಬಂಧಿಸಿದೆ. ಮಹಿಳೆಯರನ್ನು ಪ್ರಧಾನವಾಗಿ 'ಗೃಹಿಣಿ' ಎಂದು ಪರಿಗಣಿಸಲಾಗುತ್ತದೆ. 'ಗೃಹಕೃತ್ಯ ಮತ್ತು ಗೃಹಿಣಿ' ನಡುವೆ ಸಂಬಂಧವಿದೆ. ಮಹಿಳೆಯ ದುಡಿಮೆಯು ಸಂಪಾದನಾ–ರಹಿತವಾಗಿರುವುದರಿಂದ ಅವರ ದುಡಿಮೆಯು ಆರ್ಥಿಕ ಖಾತೆಗೆ, ರಾಷ್ಟ್ರೀಯ ವರಮಾನದ ಲೆಕ್ಕಾಚಾರಕ್ಕೆ ಸೇರುತ್ತಿಲ್ಲ.

ಇಂದು ಪರಿಸ್ಥಿತಿ ಬದಲಾಗಿದೆ. ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ದುಡಿಮೆಯ ಆರ್ಥಿಕ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಾರೆ. ಗಂಡ ಮತ್ತು ಹೆಂಡತಿ ಇಬ್ಬರೂ ದುಡಿಯುವ ಕುಟುಂಬಗಳ ಸಂಖ್ಯೆ ಅಧಿಕವಾಗುತ್ತಿದೆ. ಇದು ಸದ್ಯ ನಗರ ಪ್ರದೇಶದಲ್ಲಿ ದಟ್ಟವಾಗಿ ಕಂಡು ಬರುತ್ತದೆ. ದುಡಿಯುವ ಕುಟುಂಬಗಳ ಸಂಖ್ಯೆಯು ನಗರದಲ್ಲಿ ಅಧಿಕವಾಗುತ್ತಿರುವುದರಿಂದ ಮನೆಗೆಲಸ ಮಾಡುವ ಮಹಿಳಾ ದುಡಿಮೆಗಾರರಿಗೆ ಬೇಡಿಕೆ ಅಧಿಕವಾಗುತ್ತಿದೆ. ನಗರಗಳಲ್ಲಿ ಮನೆಗೆಲಸ ಮಾಡುವ ಮಹಿಳಾ ದುಡಿಮೆಗಾರ ವರ್ಗ ಎನ್ನುವುದು ಸೃಷ್ಟಿಯಾಗಿದೆ. ಇದು ಪ್ರಧಾನವಾಗಿ ನಗರ ಕೇಂದ್ರಿತ ಸಂಗತಿಯಾಗಿದೆ. ಈ ಮನೆಗೆಲಸದ ದುಡಿಮೆಗಾರ ವರ್ಗವೇನಿದೆ ಇದು ಅಸಂಘಟಿತ ವಲಯಕ್ಕೆ ಸೇರಿದುದಾಗಿದೆ. ಪ್ರಸ್ತುತ

ಅಧ್ಯಯನದಲ್ಲಿ ಅಸಂಘಟಿತ ವಲಯದಲ್ಲಿನ ಮನೆಗೆಲಸದ ಮಹಿಳಾ ದುಡಿಮೆಗಾರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಬಳಸಲಾದ ಸ್ಥಿತಿ-ಗತಿ ಎಂಬುದು ಮುಖ್ಯ. ಮಹಿಳಾ ದುಡಿಮೆಗಾರರ ಬದುಕಿನ ಸ್ಥಿತಿಯು ದಾರುಣವಾಗಿದೆ ಎಂಬುದು ನಿಜ. ಆದರೆ ಅದು ನಿಂತ ನೀರಾಗಿಲ್ಲ. ಅದು ಗತಿಶೀಲತೆಗೆ ಒಳಗಾಗಿದೆ. ಇವರ ಸ್ಥಿತಿಯು ಕೆಳಮಟ್ಟದಲ್ಲಿದೆ. ಆದರೆ ಅದು ಬದಲಾಗುತ್ತಿದೆ.

ಇಂದು ಮಹಿಳೆಯರ ದುಡಿಮೆಯನ್ನು ತಾತ್ವಿಕವಾಗಿ ಆರ್ಥಿಕ ಸೂಚಿಯಾಗಿ ಒಪ್ಪಿಕೊಳ್ಳಲಾಗಿದೆ. ಅವರ ದುಡಿಮೆಯನ್ನು ವಿಶ್ವಬ್ಯಾಂಕು 'ಸ್ಮಾರ್ಟ ಎಕನಾಮಿಕ್ಸ್' ಎಂದು ಘೋಷಿಸಿದೆ. ಅಂದರೆ ಅದೊಂದು ಆರ್ಥಿಕ ಸೂಚಿ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ.

ಅನಾದಿ ಕಾಲದಿಂದಲೂ ಮಹಿಳೆ ದುಡಿಯುತ್ತಿದ್ದಾಳೆ. ಆದರೆ ಸಾಂಪ್ರದಾಯಿಕ ದುಡಿಮೆಗಿಂತ ಇಂದಿನ ದುಡಿಮೆಯ ವಿಧಾನಗಳು ಭಿನ್ನವಾಗಿವೆ. ಸಾಮಾಜಿಕವಾದ ಹಾಗೂ ಸಾರ್ವಜನಿಕವಾದ ಹೊರಗಿನ ದುಡಿಮೆಯಲ್ಲಿ ಪ್ರಮುಖವಾಗಿ ಎರಡು ವಲಯಗಳನ್ನು ಕಾಣುತ್ತೇವೆ. ಸಂಘಟಿತ ಮತ್ತು ಅಸಂಘಟಿತ ವಲಯಗಳೆಂದು. ಭಾರತದಲ್ಲಿ ಶೇ. ೧೦ಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯದಲ್ಲಿ ಹಾಗೂ ಶೇ. ೯೦ಕ್ಕಿಂತ ಹೆಚ್ಚು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ (ಅರ್ಜುನ್‌ಸೇನ ಗುಪ್ತಾ ವರದಿ, ೨೦೦೭). ಅಸಂಘಟಿತ ವಲಯದ ಒಂದು ವೈಶಿಷ್ಟ್ಯವೆಂದರೆ ಅದರಲ್ಲಿನ ಕೆಲಸ ಕಾರ್ಯಗಳು ಸ್ಥಳೀಯವಾಗಿದ್ದು ಅದಕ್ಕೆ ಸ್ಥಳೀಯ ಜನರನ್ನೆ ನೇಮಿಸಿಕೊಳ್ಳಬೇಕಾದದ್ದು. ಸಾಂಪ್ರದಾಯಿಕ ಗೃಹಕೃತ್ಯ ಜವಾಬ್ದಾರಿ ಹೊಂದಿದ ಮಹಿಳೆಯರು ಸಾಮಾನ್ಯವಾಗಿ ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ(ಡಾ. ಅಂಜಿನಪ್ಪ ಬಿ.ಹೆಚ್., ೨೦೦೬).

ಅಭಿವೃದ್ಧಿ ಎನ್ನುವುದು ಮಾನವನಿಂದಲೇ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ಇದರಲ್ಲಿ ಜನರು ಪ್ರಮುಖ ಪಾತ್ರ ವಹಿಸುವರು. ಮಾನವ ಸಂಪನ್ಮೂಲ ಅಭಿವೃದ್ಧಿಯು ಪುರುಷ ಮತ್ತು ಮಹಿಳೆಯರಿಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮಾನ ಸ್ಥಾನಮಾನವನ್ನು ನೀಡಿದೆ. ಆದರೆ ಅಭಿವೃದ್ಧಿಯ ಫಲಾಫಲಗಳು ಮಾತ್ರ ಪುರುಷ ಮತ್ತು ಸ್ತ್ರೀಯರ ನಡುವೆ ಅಸಮಾನವಾಗಿ ವಿತರಿಸಲ್ಪಟ್ಟಿವೆ ಎಂದು (ಲಾಲ್ನೆಯಿತ್ ಜೋವಿ, ೨೦೦೭) ಅಭಿಪ್ರಾಯ ಪಡುತ್ತಾರೆ.

ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆಗಾರರು ಹೆಚ್ಚಿನ ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರಿಗೆ ಸ್ವಾತಂತ್ರ್ಯ ಸ್ವಾಯತ್ತತೆ ಇಲ್ಲದಿರುವುದರಿಂದ ತಮ್ಮ ನಿಲುವುಗಳನ್ನು ಮಂಡಿಸಲು ಪ್ರತಿಷ್ಠಾಪಿಸಲು ಹಕ್ಕು ಚಲಾಯಿಸಲು ಸಾಧ್ಯವಾಗುವುದಿಲ್ಲ. (ಡಾ.ವಿಜಯಲಕ್ಷ್ಮೀ ಎಸ್. ಕರೀಕಲ್, ೨೦೦೭)

ಕಾರ್ಲ್‌ಮಾರ್ಕ್ಸ್‌ರವರ ಬಂಡವಾಳಶಾಹಿ ತತ್ವದಲ್ಲಿ ವರ್ಗವು ಕೇಂದ್ರ ಸ್ಥಾನದಲ್ಲಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ಅಪಾರವಾಗಿ ಶೋಷಿಸಲ್ಪಡುವರು. ಅದರಲ್ಲೂ ಮುಖ್ಯವಾಗಿ ಮಹಿಳೆ ಕುಟುಂಬದ ಒಳಗೆ ಕೂಲಿಯೇತರ ಗುಲಾಮಳಾಗಿ, ಕುಟುಂಬದ ಹೊರಗಡೆ ಆರ್ಥಿಕತೆಯಲ್ಲಿ ಕಾರ್ಮಿಕಳಾಗಿ ಕೂಲಿ ಗುಲಾಮಳಾಗಿ ಶೋಷಿಸಲ್ಪಡುತ್ತಾಳೆ. ಅಂದರೆ ಮಹಿಳೆಯರ ದಮನವು ದ್ವಿಮುಖ ದಮನವೇ ಆಗಿದೆ. (ಡಾ. ಒಡೆಯರ್.ಡಿ.ಹೆಗ್ಗಡೆ ಮತ್ತು ಡಾ. ಅನ್ನಪೂರ್ಣೇಶ್ವರಿ ೨೦೦೮)

ಅಸಂಘಟಿತ ವಲಯದ ಕೆಲಸದ ಸ್ವರೂಪ, ಸ್ಥಿತಿಗತಿ ಹಾಗೂ ಸಮಸ್ಯೆಗಳನ್ನು ಮೊದಲಿಗೆ ಬೆಳಕಿಗೆ ತಂದದ್ದು ೧೯೭೪ರಲ್ಲಿ ನ್ಯಾಷನಲ್ ಕಮಿಟಿ ಆನ್ ಸ್ಟೇಟಸ್ ಆಫ್ ವುಮನ್ ವರದಿ ಟುವರ್ಡ್ಸ್ ಈಕ್ವಾಲಿಟಿ. ಇದು ಸರ್ಕಾರದ ನೀತಿ ನಿರೂಪಕರ ಹಾಗೂ ಅರ್ಥಶಾಸ್ತ್ರಜ್ಞರ ಗಮನ ಸೆಳೆಯಿತು.[೧] ನಂತರ ಅಸಂಘಟಿತ ವಲಯದ ಹಾಗೂ ಮಹಿಳಾ ದುಡಿಮೆಗಾರರ ಕಡೆ ಹೆಚ್ಚಿನ ಗಮನ ಹರಿಯಲು ಪ್ರಾರಂಭವಾಯಿತು. (ಡಾ.ಹೇಮಲತಾ.ಹೆಚ್.ಎಂ.)

ಅಭಿವೃದ್ಧಿಗೆ ಮಹಿಳೆಯ ಕೊಡುಗೆ ಅಪಾರವಾಗಿದೆ. ಅದಕ್ಕಾಗಿ ಮಹಿಳೆಯರ ನಿಸ್ವಾರ್ಥ ಸೇವೆಯನ್ನು ಅಪಮೌಲ್ಯೀಕರಿಸದೇ, ಅವರ ಅಮೂಲ್ಯ ಸೇವೆಗೆ ಮನ್ನಣೆ ಹಾಗೂ ಗೌರವ ದೊರಕಿಸಿ ಕೊಡಬೇಕಾದದ್ದು, ಇಂದಿನ ಸಾಮಾಜಿಕ ಅಗತ್ಯತೆಗಳಲ್ಲಿ ಒಂದಾಗಿದೆ.[೨] ಹಾಗಾದಾಗ ಮಾತ್ರ ಮಹಿಳೆಗೆ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಹೆಚ್ಚಿನ ಉತ್ಸುಕತೆಯಿಂದ ಭಾಗವಹಿಸಲು ಉತ್ತೇಜನ ದೊರೆತಂತಾಗುತ್ತದೆ.

ಇದುವರೆಗೆ ನಡೆದ ಅಧ್ಯಯನಗಳಿಂದಾಗಲಿ ಕೈಕೊಂಡ ಕ್ರಮಗಳಿಂದಾಗಲೀ ಅಸಂಘಟಿತ ವಲಯದ ದುಡಿಮೆಗಾರರ ಸ್ಥಿತಿಗತಿಗಳಲ್ಲಿ ಯಾವುದು ಬದಲಾವಣೆ ಅಥವಾ ಸುಧಾರಣೆಗಳು ಕಂಡು ಬಂದಿರುವುದಿಲ್ಲ. ಅಲ್ಲದೆ ಏನೇ ಕಾನೂನುಗಳು ಜಾರಿಯಲ್ಲಿದ್ದರೂ ಅವು ಕಾರ್ಮಿಕರಿಗೆ ತಲುಪದೇ ಅವರ ಬದುಕು ತೀರಾ ಹೀನಾಯವಾಗಿದೆ. ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಬದುಕನ್ನು ಹಸನುಗೊಳಿಸಲು ಅವರ ಸ್ಥಿತಿಗತಿಗಳ ಕುರಿತಾಗಿ ಕೂಲಂಕುಷವಾಗಿ ಅಧ್ಯಯನವನ್ನು ಮಾಡುವುದು ಹಾಗೂ ಸರ್ಕಾರ ಮತ್ತು ಕಾರ್ಮಿಕ ಸಂಘಗಳು ಈ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ ಮಾಡುವ ಕಾರಣಕ್ಕಾಗಿ ಈ ಕ್ಷೇತ್ರದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವುದು, ಅವರನ್ನು ಸಮಾನತೆಯತ್ತ ಕೊಂಡೊಯ್ಯುವುದು ಹಾಗೂ ಸಶಕ್ತಿಗೊಳಿಸುವುದು ಸರ್ಕಾರದ ಅಭಿವೃದ್ಧಿ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಗುರಿಯಾಗಿದ್ದರೆ ಅವುಗಳ ಗಮನ ಮೊದಲು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಮೇಲೆ ಕೇಂದ್ರೀಕೃತವಾಗಬೇಕು. ದುಡಿಮೆಗೆ ಸಂಬಂಧಿಸಿದ ಅದರಲ್ಲೂ ಮಹಿಳೆಯರಿಗೆ ನೇರವಾಗಿ ಸಂಬಂಧಿಸಿದ ಕಾಯಿದೆಗಳ ಕಟ್ಟುನಿಟ್ಟಿನ ಜಾರಿ, ಸರ್ಕಾರದ ಕಡೆಯಿಂದ ಸಾಮಾಜಿಕ ಭದ್ರತೆಯ ಕಾರ್ಯರೂಪ, ಜಾಗತೀಕರಣ ಹಾಗೂ ಖಾಸಗೀಕರಣದ ಸವಾಲುಗಳನ್ನು ಎದುರಿಸಲು ಮಹಿಳೆಯರನ್ನು ಸನ್ನದ್ಧರನ್ನಾಗಿಸುವುದು, ಅವರ ಇಬ್ಬಗೆಯ ಹೊರೆಯನ್ನು ಕಡಿಮೆ ಮಾಡಲು ಕೌಟುಂಬಿಕ ರಚನೆಯಲ್ಲಿ ಬದಲಾವಣೆ ತರುವುದು ಇತ್ಯಾದಿ, ಈ ವಲಯದಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳು ಎಂಬ ಡಾ. ಹೇಮಲತಾ ಹೆಚ್.ಎಂ. ಅವರ ಕಾಳಜಿಯ ಮಾತುಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರನ್ನು ಸಶಕ್ತಗೊಳಿಸುವ ಪರಿಣಾಮಕಾರಿ ಧೋರಣೆಗಳಾಗಿವೆ. ಇವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸಮಾಜದ, ಕುಟುಂಬದ ಹಾಗೂ ಸರ್ಕಾರದ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ.

ಭಾರತದ ಮಾನವ ಸಂಪನ್ಮೂಲದ ಅರ್ಧದಷ್ಟಿರುವ ಮಹಿಳೆಯರ ಜೀವನ ಸಮಸ್ಯೆಗಳ ಗೂಡಾಗಿದೆ. ಎಲ್ಲಿ ಮಹಿಳೆ ಗೌರವಿಸಲ್ಪಡುತ್ತಾಳೋ ಅಲ್ಲಿ ಜಯ, ಕೀರ್ತಿ ಲಭಿಸುವುದು ಎಂಬ ಹೇಳಿಕೆಗೆ ನಮ್ಮ ಸಮಾಜದಲ್ಲಿ ಕಿಂಚಿತ್ತೂ ಬೆಲೆ ಇಲ್ಲದಂತಾಗಿದೆ. ಪ್ರತಿ ರಂಗದಲ್ಲಿಯೂ ಮಹಿಳೆಯ ಶ್ರಮಬಲವು ವ್ಯರ್ಥವಾಗುವುದರಿಂದ ಅಥವಾ ಅಪಮೌಲ್ಯಗೊಳ್ಳುತ್ತಿರುವುದರಿಂದ ಮಹಿಳಾ ಕಾರ್ಮಿಕ ಬಲಕ್ಕೆ ಬಹಳ ಹಿನ್ನಡೆಯಾಗುತ್ತಿದೆ. ಅದರ ಜೊತೆಗೆ ದೇಶದ ಅಭಿವೃದ್ಧಿ ಕೂಡ ಕುಂಠಿತವಾಗುತ್ತಿದೆ. ಅರ್ಹತೆ, ಸಾಮರ್ಥ್ಯ, ದಕ್ಷತೆ, ಸ್ಪರ್ಧಾತ್ಮಕ ಮನೋಭಾವ ಗಂಡಾಂತರ ಎದುರಿಸುವ ಎದೆಗಾರಿಕೆ, ಇದ್ದ ಯಾರೇ ಆದರೂ ಮುಂದೆ ಬರಬಹುದೆಂದಿದ್ದರೂ ನಮ್ಮ ಸಾಮಾಜಿಕ ರಚನೆ, ಪುರುಷ ಪ್ರಧಾನ ಮೌಲ್ಯ ಆರ್ಥಿಕ ಪರಿಸ್ಥಿತಿಗಳು ಜಾಗತೀಕರಣದ ಪ್ರಭಾವ ಸ್ತ್ರೀಪುರುಷರ ಸ್ಥಾನಮಾನಗಳಲ್ಲಿ ಏರುಪೇರು ಉಂಟುಮಾಡುತ್ತಿವೆ. ಮಹಿಳೆಯರಿಗೆ ಸ್ವ ಹಿತಾಸಕ್ತಿಯ ಬಗ್ಗೆ ಅರಿವು, ಪ್ರಜ್ಞೆ ಇಲ್ಲದಿರುವುದರಿಂದ ಅವಳ ಶೋಷಣೆ ಸಮಾಜಕ್ಕೆ ಸುಲಭವಾಗಿದೆ. ಮಹಿಳೆಯರಿಗೆ ಹೆಚ್ಚು ಹೆಚ್ಚು ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಹೊರ ಜಗತ್ತಿನ ಸಮಾನತೆ, ಸ್ವಾತಂತ್ರ್ಯ ಗೌರವಗಳನ್ನು ದೊರಕಿಸಿಕೊಡುವಲ್ಲಿ ಪ್ರಯತ್ನಗಳು ನಡೆಯಬೇಕಾಗಿದೆ. ಈ ದಿಶೆಯಲ್ಲಿ ಸರಕಾರ ಹಾಗೂ ಸಂಘ ಸಂಸ್ಥೆಗಳ ಪಾತ್ರವನ್ನು ಮರೆಯುವಂತಿಲ್ಲ. ಸಮಾಜದಲ್ಲಿ ಮಹಿಳೆ ನಿರ್ವಹಿಸುತ್ತಿರುವ ಬಹು ಮುಖ ಪಾತ್ರಗಳನ್ನು ಗೌರವಿಸುವ ಹಾಗೂ ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿನ ಆಕೆಯ ಕೊಡುಗೆಯನ್ನು ಗುರುತಿಸುವುದು ಬಹಳ ಮುಖ್ಯವಾಗಿದೆ.

೧.೧: ಅಧ್ಯಯನದ ವಿಷಯ ಮತ್ತು ಸಮಸ್ಯೀಕರಣ

ಪ್ರಸ್ತುತ ಅಧ್ಯಯನವು 'ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು : ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ' ವಿಷಯದ ಕುರಿತಾಗಿದ್ದು, ಸಮಯ ಹಾಗೂ ಸಂಪನ್ಮೂಲಗಳ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವನ್ನು ಜಿಲ್ಲೆಗೆ ಸೀಮಿತಗೊಳಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ, ಹೊಸಪೇಟೆ ತಾಲೂಕಿನ ಮನೆಗಳಲ್ಲಿ ಕೆಲಸ ಮಾಡುವ ಮಹಿಳೆಯರ ಅಧ್ಯಯನ ಪ್ರಮುಖವಾದದ್ದು, ಅದಕ್ಕೆ ಸಂಬಂಧಪಟ್ಟಂತೆ ತೀರ್ಮಾನವು ಕರ್ನಾಟಕಕ್ಕೆ ಸಂಬಂಧಿಸಿದ ಸ್ಥೂಲ ಚಿತ್ರಣ ಕೊಡುತ್ತದೆ.

ಆರ್ಥಿಕ ಅಭಿವೃದ್ಧಿಗೆ ಅವಶ್ಯಕವಿರುವ ಪ್ರಮುಖ ಅಂಶಗಳೆಂದರೆ ಆಯಾ ಆರ್ಥಿಕತೆಗಳು ಹೊಂದಿರುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳು. ಒಂದು ರಾಷ್ಟ್ರ ಪ್ರಗತಿ ಪಥದತ್ತ ಸಾಗಿದೆ ಎಂದರೆ ಆ ದೇಶದಲ್ಲಿ ಈ ಎರಡು ಸಂಪನ್ಮೂಲಗಳ ಸದ್ಬಳಕೆಯಾಗುತ್ತಿವೆ ಎನ್ನುವುದು ಗಮನಾರ್ಹ ಸಂಗತಿಯಾಗಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೇರಳವಾಗಿ ಸಂಪನ್ಮೂಲಗಳು ದೊರಕುತ್ತಿವೆ. ಆದರೆ ಅವುಗಳ ಸದ್ಬಳಕೆ ಮಾತ್ರ ಸರಿಯಾಗಿ ಆಗದೆ ಇರುವುದು ಖೇದದ ಸಂಗತಿ.

ಭಾರತ ಜಗತ್ತಿನ ಒಟ್ಟು ಜನಸಂಖ್ಯೆಯ ಶೇಕಡಾ ೧೬.೭೦ರಷ್ಟು ಪಾಲನ್ನು ಹೊಂದಿದೆಯಾದರೂ ಇದರ ಸಮರ್ಪಕ ಬಳಕೆ ಅಭಿವೃದ್ಧಿಗೆ ಪೂರಕವಾಗಿ ಆಗುತ್ತಿಲ್ಲ. ನಮ್ಮ ಸಾಂಪ್ರದಾಯಿಕ ಮೌಲ್ಯಗಳು ಸ್ತ್ರೀಪುರುಷರ ದುಡಿಮೆಯ ನಡುವೆ ಭೇದ, ತಾರತಮ್ಯ ಹಾಗೂ ನಿರ್ಬಂಧಗಳನ್ನು ಹೇರುತ್ತಿವೆ.

ಪುರುಷರು ಹೊರಗೆ ಹೋಗಿ ದುಡಿದು ಆದಾಯ ಗಳಿಸಿ ಕುಟುಂಬವನ್ನು ನಿರ್ವಹಿಸಬೇಕು ಎಂದು ಹೇಳುತ್ತವೆ. ಸ್ತ್ರೀಯರು ಮನೆಯೊಳಗೆ ಇದ್ದು ಮನೆಗೆಲಸವನ್ನು ಮಾಡಬೇಕೆಂದು ಹೇಳುತ್ತಾ, ಸ್ತ್ರೀಯರು ಹೊರಗೆ ದುಡಿಯುವುದನ್ನು ನಿರ್ಬಂಧಿಸುತ್ತದೆ. ಆದರೆ ಅನಿವಾರ್ಯವಾಗಿ ಅಂದರೆ ಕುಟುಂಬದಲ್ಲಿ ಪುರುಷನಿಲ್ಲದಿದ್ದರೆ, ಇದ್ದರೂ ಮನೆಯ ನಿರ್ವಹಣೆ ಮಾಡದಿದ್ದರೆ ಸ್ತ್ರೀಯರು ಹೊರಗೂ ದುಡಿದು ಮನೆಯನ್ನು ನೋಡಿಕೊಳ್ಳುತ್ತಿರುತ್ತಾರೆ. ಆದರೂ ಅವಳನ್ನು ಕುಟುಂಬದ ಯಜಮಾನಿ ಎಂದು ಗುರುತಿಸುವುದಿಲ್ಲ. ಏಕೆಂದರೆ ಅವಳ ದುಡಿಮೆ ಹಣಕ್ಕೆ ವಿನಿಮಯಿಸಲ್ಪಡುವುದಿಲ್ಲ. ಹಾಗಾದರೆ ದುಡಿಮೆ ಎಂದರೇನು? ಎಂಬ ಪ್ರಶ್ನೆಗೆ ಈ ರೀತಿಯಾಗಿ ವಿಶ್ಲೇಷಿಸಲಾಗಿದೆ. ಯಾವುದೇ ಆರ್ಥಿಕ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸುವುದು. ದುಡಿಮೆಯಲ್ಲಿ ನಿಜವಾದ ಶ್ರಮದ ಕೆಲಸವಷ್ಟೇ ಅಲ್ಲ. ನಿರ್ವಹಣೆ ಮತ್ತು ಕೆಲಸಕ್ಕೆ ನಿರ್ದೇಶನ ಕೊಡುವುದನ್ನು ಸೇರಿಸಲಾಯಿತು. (ಡಾ. ಹೇಮಲತಾ ಹೆಚ್.ಎಂ.)

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಪುರುಷರಿಗಿಂತ ಕಡಿಮೆ, ಜೊತೆಗೆ ಮಹಿಳೆಯರನ್ನು ಎರಡನೆ ದರ್ಜೆ ಪ್ರಜೆಯನ್ನಾಗಿ ಪರಿಗಣಿಸಲಾಗಿದೆ. ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ರೂಢಿ, ಪದ್ಧತಿ, ಪರಂಪರೆಗಳು ಕೂಡ ಮಹಿಳೆಯು ಪುರುಷನ ಅಧೀನಳೆಂಬ ಭಾವನೆಗಳನ್ನು ಜಾಗೃತಗೊಳಿಸಿ ಅವಳ ಸರ್ವಾಂಗೀಣ ಪ್ರಗತಿಗೆ ಕಂಟಕ ಪ್ರಾಯವಾಗಿದೆ. ಸಮಾಜ ಜೀವನ ಆರಂಭದಿಂದಲೂ ಮಹಿಳೆ ಪುರುಷನೊಂದಿಗೆ ದುಡಿಯುತ್ತಿದ್ದಾಳೆ. ಬಂಡವಾಳಶಾಹಿಯ ಬೆಳವಣಿಗೆ ಹಾಗೂ ಶ್ರಮದ ಅವಶ್ಯಕತೆಗಾಗಿ ಜೊತೆಗೆ ಕುಟುಂಬದ ಪೋಷಣೆಯ ಸಲುವಾಗಿ ಮಹಿಳೆಯರನ್ನು ದುಡಿತಕ್ಕೆ ಆಹ್ವಾನಿಸಿದ್ದರೂ, ಮಹಿಳೆ ಉತ್ಪಾದನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ಹೊರನೋಟಕ್ಕೆ ಕಾಣುತ್ತಿದ್ದರೂ ಅದೇ ಮಹಿಳೆಯ ಸ್ವಾತಂತ್ರ್ಯವಲ್ಲ. ದುಡಿಮೆಯಲ್ಲಿ ಸಮಪಾಲನ್ನು ಹೊಂದಿರುವ ಮಹಿಳೆ ಆರ್ಥಿಕವಾಗಿ ಸಮಪಾಲನ್ನು ಹೊಂದಿಲ್ಲ. ದುಡಿಯುವ ರಂಗ ಪ್ರವೇಶಿಸಿದಂದಿನಿಂದ ನಿವೃತ್ತಿವರೆಗೆ ಪ್ರತಿಯೊಂದು ಹಂತದಲ್ಲಿಯೂ ಅವಳು ರಾಜೀ ಮಾರ್ಗಕ್ಕೆ ಹೋಗುತ್ತಾಳೆ.[೩] ತಂದೆ ಅಥವಾ ಗಂಡನ ಮನೋಗುಣಕ್ಕನುಗುಣವಾಗಿ ವೃತ್ತಿ ಆರಿಸಿಕೊಳ್ಳುವುದು ಅವಳ ದೇಹ ಮತ್ತು ಮನಸ್ಸುಗಳೆರಡೂ ಯಂತ್ರಗಳಂತೆ ಬಳಕೆಯಾಗುತ್ತಿರುವ ರೀತಿ ಮಹಿಳೆಯರನ್ನು ಸಾಮಾಜಿಕ ಉತ್ಪಾದನಾ ಕಾರ್ಯದಿಂದ ಹೊರಗಿರಿಸಿ ಅಪಮೌಲ್ಯಗೊಳಿಸಲಾದ ಕೌಟುಂಬಿಕ ಕೆಲಸಗಳಲ್ಲಿ ತೊಡಗಿಸಿದ್ದರಿಂದಲೇ ಅವಳ ಶೋಷಣೆ ಪ್ರಾರಂಭವಾಯಿತು ಎಂದು ಏಂಗೆಲ್ಸ್‌ರವರು 'ದಿ ಓರಿಜಿನ್ ಆಫ್ ಫ್ಯಾಮಿಲಿ ಪ್ರೈವೇಟ್ ಪ್ರೋಪ್ರೈಟರ್ ಅಂಡ್ ದಿ ಸ್ಟೇಟ್' ಎಂಬ ಮಹಾ ಪ್ರಬಂಧದಲ್ಲಿ ಪ್ರತಿಪಾದಿಸಿದ್ದಾರೆ (ಡಾ.ಅಂಜಿನಪ್ಪ. ಬಿ.ಹೆಚ್).

ಮಹಿಳೆಯ ದುಡಿಮೆಗೆ ಸಂಬಂಧಿಸಿದಂತೆ ನಾವು ಮುಖ್ಯವಾಗಿ ತಿಳಿಯುವುದೇನೆಂದರೆ ಕೂಲಿ ಸಹಿತ ದುಡಿಮೆ ಮತ್ತು ಕೂಲಿ ರಹಿತ ದುಡಿಮೆಗಳ ನಡುವಿನ ಸಂಬಂಧ. ಕುತೂಹಲ ಸಂಗತಿಯೇನೆಂದರೆ ಯಾವುದನ್ನು ಕೌಟುಂಬಿಕ ಖಾಸಗಿ ಮನೆಯೊಳಗಿನ ಸಂಗೋಪನ ಕೆಲಸಗಳೆಂದು ಕರೆಯುತ್ತೇವೆಯೋ ಅವುಗಳು ಕೂಲಿ ರಹಿತ ದುಡಿಮೆ ಎನಿಸಿಕೊಳ್ಳುತ್ತವೆ.[೪] ಅತ್ಯಂತ ಆತಂಕಕಾರಿ

ಹಾಗೂ ದುರಾದೃಷ್ಟಕರ ಸಂಗತಿಯೆಂದರೆ ಕೂಲಿ ರಹಿತ ದುಡಿಮೆಯನ್ನು ಅನುತ್ಪಾದಕವೆಂದೂ ಮಾರುಕಟ್ಟೆಯ ವ್ಯಾಪ್ತಿಯ ಹೊರಗಿನ ಚಟುವಟಿಕೆಯೆಂದು ನಿರ್ವಚಿಸಲಾಗಿದೆ. ಕೂಲಿ ಸಹಿತ ದುಡಿಮೆಯಲ್ಲಿ ಅನೇಕ ಬಗೆಯ ಸರಕು ಸೇವೆಗಳ ಉತ್ಪಾದನೆಯಾಗುತ್ತದೆ. ಅವುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದಾಗಿದೆ. ಆದರೆ ಕೂಲಿ ರಹಿತ ಆರ್ಥಿಕತೆಯಲ್ಲಿ ಉತ್ಪಾದನೆಯಾಗುವ ಸರಕು ಸೇವೆಗಳಿಗೆ ಮಾರುಕಟ್ಟೆಯಲ್ಲಿ ಯಾವುದೇ ಪರ್ಯಾಯ ದೊರೆಯುವುದಿಲ್ಲ. ಜವಾಬ್ದಾರಿ, ವಿಶ್ವಾಸಾರ್ಹತೆ, ಹೃದಯ ವೈಶಾಲ್ಯತೆ, ಭ್ರಾತೃತ್ವ, ಸಾಂತ್ವನ, ಮುಂತಾದ ಗುಣಗಳನ್ನು ಸಂಗೋಪನಾ ದುಡಿಮೆ ಒಳಗೊಂಡಿದೆ.(ಡಾ.ಟಿ.ಆರ್.ಚಂದ್ರಶೇಖರ್ ೨೦೦೬) ಹೀಗೆ ಮಹಿಳೆಯರ ದುಡಿಮೆಯು ಅಪಮೌಲ್ಯೀಕರಣ ಗೊಳ್ಳಲು ಕಾರಣವೇನು? ಎಂಬ ಪ್ರಶ್ನೆಗೆ ಈ ರೀತಿ ವಿಶ್ಲೇಷಿಸಲಾಗಿದೆ.

ಮಾರುಕಟ್ಟೆಗಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಕ್ರಿಯೆಯನ್ನು ದುಡಿಮೆಯೆಂದು ಕರೆಯಲಾಗಿದೆ. ಮಾರಾಟ ಉದ್ದೇಶದಿಂದ ಸರಕುಗಳನ್ನು ತಯಾರಿಸುವಂತಹ ಒಂದು ಚಟುವಟಿಕೆ ದುಡಿಮೆಯಾಗಿದೆ. ಹಣ ಇಲ್ಲದೇ ದುಡಿಮೆಯನ್ನು ಪರಿಭಾವಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಮಹಿಳೆಯರ ದುಡಿಮೆಯ ಬಹುಪಾಲನ್ನು ಮನೆಗೆ ಸೀಮಿತಗೊಳಿಸಿರುವುದರಿಂದ ಮಹಿಳೆಯ ದುಡಿಮೆಯನ್ನು ಪರಿಗಣಿಸದೆ ಇರುವುದರಿಂದ ಅವರ ದುಡಿಮೆಯನ್ನು ದುಡಿಮೆಯ ವ್ಯಾಖ್ಯಾನದ ಒಳಗೆ ಸೇರಿಸುತ್ತಿಲ್ಲ. ಗೃಹ ಚಟುವಟಿಕೆಗಳಿಗೆ ಯಾರೂ ಕೂಲಿ ಕೊಡುವುದಿಲ್ಲ. ಈ ಕಾರಣದಿಂದಾಗಿ ಮಹಿಳೆಯರ ದುಡಿಮೆ ಸಮಾಜದಲ್ಲಿ ಮನ್ನಣೆಗೆ ಒಳಗಾಗುವುದಿಲ್ಲ. (ಡಾ.ಹೆಚ್.ಎಸ್. ಶ್ರೀಮತಿ ೨೦೦೭) ದಿ ನ್ಯಾಷನಲ್ ಸ್ಯಾಂಪಲ್ ಸರ್ವೆ ಗ್ರಾಮೀಣ ಮತ್ತು ನಗರ ಪ್ರದೇಶಗಳ ಉದ್ಯೋಗ ಮಟ್ಟವನ್ನು ತಿಳಿಸುವ ಉತ್ತಮ ಸಂಸ್ಥೆಯಾಗಿದೆ. ಇದರ ಪ್ರಕಾರ ದುಡಿಮೆಯು ಆದಾಯ ಗಳಿಸುವ ಚಟುವಟಿಕೆ ಆಗಿದೆ. ಯಾವುದೇ ಕೆಲಸವು ಕುಟುಂಬದ ಲಾಭಕ್ಕಾಗಿ ಹಣಕ್ಕೋಸ್ಕರ ಮಾಡಲ್ಪಡುತ್ತದೆಯೋ ಮತ್ತೆ ಯಾವ ಚಟುವಟಿಕೆಯು ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆ ನೀಡುತ್ತದೆಯೋ ಅದನ್ನು ದುಡಿಮೆಯೆಂದು ಕರೆಯಲಾಗುತ್ತದೆ ಎಂದು ಡಾ. ಹೆಚ್.ಎಂ. ಹೇಮಲತಾರವರು ತಿಳಿಸುತ್ತಾರೆ.

ಸಾಮಾಜಿಕವಾದ ಹಾಗೂ ಸಾರ್ವಜನಿಕವಾದ ಹೊರಗಿನ ದುಡಿಮೆಯಲ್ಲಿ ಪ್ರಮುಖವಾಗಿ ಎರಡು ವಲಯಗಳನ್ನು ಕಾಣುತ್ತೇವೆ. ಒಂದನೇಯದಾಗಿ ಸಂಘಟಿತ ವಲಯ, ಎರಡನೇಯದಾಗಿ ಅಸಂಘಟಿತ ವಲಯ. ಸಂಘಟಿತ ವಲಯ ಎಂದರೆ ಕೆಲಸದ ಭದ್ರತೆ ಇರುವ, ಸರಕಾರವು ಕಾರ್ಮಿಕರಿಗಾಗಿ ರೂಪಿಸಿರುವ ಕಾನೂನುಗಳನ್ನು ಪಾಲಿಸುವಂತಹ ಸಂಘ ಸಂಸ್ಥೆಗಳಲ್ಲಿನ ದುಡಿಮೆಯನ್ನು ಸಂಘಟಿತ ವಲಯದ ದುಡಿಮೆ ಎಂದು ಕರೆಯಲಾಗಿದೆ. ಆದರೆ ಉದ್ಯೋಗದ ಭದ್ರತೆಯನ್ನು ಒದಗಿಸುವ ಹಾಗೂ ಸೇವಾ ನಿಯಮಗಳನ್ನು ಪಾಲಿಸುವ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘಟನೆಗಳು ಇಲ್ಲದ ಉತ್ಪಾದನಾ ಘಟಕಗಳನ್ನು ಅಸಂಘಟಿತ ಹಾಗೂ ಅನೌಪಚಾರಿಕ ಘಟಕಗಳೆಂದು, ಅಲ್ಲಿನ ದುಡಿಮೆಗಾರರನ್ನು ಅಸಂಘಟಿತ ದುಡಿಮೆಗಾರರೆಂದು ಕರೆಯುವರು. (ಡಾ. ವಿಜಯಲಕ್ಷ್ಮೀ. ಎಸ್. ಕರೀಕಲ್) ಯಾವ ದುಡಿಮೆಯಲ್ಲಿ ಒಂದೇ ಉದ್ದೇಶಕ್ಕಾಗಿ ಒಗ್ಗೂಡಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸಾಧ್ಯವಿಲ್ಲವೋ ಅವೆಲ್ಲವೂ ಅಸಂಘಟಿತ ವಲಯಗಳು ಎಂದು ಕಾರ್ಮಿಕ ಆಯೋಗ ಅಸಂಘಟಿತ ವಲಯವನ್ನು ವ್ಯಾಖ್ಯಾನಿಸಿದೆ.

ಶಾಸನಬದ್ಧವಾದ ದೇಶದಲ್ಲಿ ಎಲ್ಲವೂ ಕಾನೂನಿನ ಚೌಕಟ್ಟಿನಲ್ಲಿಯೇ ನಡೆಯಬೇಕು. ಅಸಂಘಟಿತ ವಲಯವು ಬೃಹತ್ ವಲಯವಾಗಿದೆ ಹಾಗೂ ರಾಷ್ಟ್ರಾದಾಯಕ್ಕೆ ಇದರ ಕೊಡುಗೆ ಅನನ್ಯವಾಗಿದೆ. ಹಾಗಿದ್ದರೂ ಕೂಡ ಅಸಂಘಟಿತ ವಲಯವನ್ನು ಕಾನೂನಿನ ಚೌಕಟ್ಟಿನಿಂದ ಹೊರಗಿರಿಸಲಾಗಿದೆ. ಹೀಗೆ ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯ ಎಂಬ ಪ್ರತ್ಯೇಕತೆ ಉಂಟಾಗಲು ಕಾರಣವೇನು? ಎಂಬುದು ಈ ಅಧ್ಯಯನದ ಬಹುಮುಖ್ಯ ಪ್ರಶ್ನೆಯಾಗಿದೆ.

ಸಂಘಟಿತ ವಲಯದ ವಿದ್ಯಮಾನಗಳ ಕುರಿತಂತೆ ಜಾಗತಿಕ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ, ಅನೇಕ ಅಧ್ಯಯನಗಳು ನಡೆದಿವೆ. ಅನೇಕ ಅರ್ಥಶಾಸ್ತ್ರಜ್ಞರು ಸಂಘಟಿತ ವಲಯದ ದುಡಿಮೆ ಹಾಗೂ ದುಡಿಮೆಗಾರರ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಮಂಡಿಸಿದ್ದಾರೆ. ಸರ್ಕಾರವೂ ಕೂಡ ಈ ವಲಯದ ವೇತನ, ಉದ್ಯೋಗ ಭದ್ರತೆ, ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸುವುದರ ಮೂಲಕ ದುಡಿಮೆಗಾರರ ಸ್ಥಿತಿಗತಿಗಳ ಬಗ್ಗೆ ಚಿಂತನೆ ನಡೆಸಿ, ಅವರ ಭವಿಷ್ಯ ಉತ್ತಮಗೊಳಿಸುವ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ.

ಆದರೆ ಅಸಂಘಟಿತ ವಲಯವು ಬಹಳ ಸಂಕೀರ್ಣ ವ್ಯವಸ್ಥೆಯಾಗಿದ್ದುದಲ್ಲದೇ ವಿಸ್ತೃತವಾದುದಾಗಿದೆ. ಈ ದುಡಿಮೆಗಾರರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿರುವುದಿಲ್ಲ. ಅಲ್ಲದೆ ದುಡಿಮೆಗಾರರ ಬದುಕು ಹಸನುಗೊಳಿಸುವ ಕಾರ್ಯಯೋಜನೆಗಳೂ ಅವರಿಗೆ ತಲುಪಿರುವುದಿಲ್ಲ. ಹೀಗಾಗಿ ಅಸಂಘಟಿತ ವಲಯದ ಕಾರ್ಮಿಕರ ಜೀವನ ಸ್ಥಿತಿಗತಿ ಸುಧಾರಣೆ ಸರ್ಕಾರಕ್ಕೆ ಒಂದು ಸವಾಲೇ ಅಗಿದೆ. ಸರ್ಕಾರಕ್ಕೆ ಅಸಂಘಟಿತ ವಲಯದಿಂದ ಬರುವ ಆದಾಯ ಹೆಚ್ಚಿನ ಪ್ರಮಾಣದಲ್ಲಿದ್ದರೂ, ದುಡಿಮೆಗಾರರು ಮಾತ್ರ ಅದರ ಫಲಾನುಭವಿಗಳಾಗಿಲ್ಲ ಎಂಬ ವಿಷಯ ಯಾವ ಸರ್ಕಾರಕ್ಕೂ ಗೌರವ ನೆಮ್ಮದಿ ತರುವಂಥದಲ್ಲ. ಈ ನಿಟ್ಟಿನಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಜೀವನ ಉತ್ತಮಗೊಳಿಸಲು ಸರ್ಕಾರ ಅರ್ಜುನ್ ಸೆನ್ ಗುಪ್ತಾರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. 'ನ್ಯಾಷನಲ್ ಕಮಿಷನ್ ಫಾರ್ ಎಂಟ್ರಪ್ರೈಸಸ್ ಇನ್ ದಿ ಅನ್‌ಅರ್ಗನೈಸ್ಡ್ ಸೆಕ್ಟರ್' ಎಂಬ ಸಮಿತಿಯು ಅಗಸ್ಟ್ ೬, ೨೦೦೭ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

ಅಸಂಘಟಿತ ವಲಯದ ಘಟಕಗಳ ಅಧ್ಯಯನಕ್ಕಾಗಿ ಸರ್ಕಾರ ನೇಮಿಸಿದ ಈ ಸಮಿತಿಯ ವರದಿಯ ಮೇರೆಗೆ ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಸಂಘಟಿತ ವಲಯದ ದುಡಿಮೆಗಾರರಿಗೆ ಔಪಚಾರಿಕ ವಲಯದ ದುಡಿಮೆಗಾರರಂತೆ ಉದ್ಯೋಗ ಕ್ಷೇತ್ರದಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಅವರ ಬದುಕು ಉತ್ತಮಗೊಳಿಸಲು ಸಂಘಟಿತ ವಲಯದ ಚೌಕಟ್ಟಿನೊಳಗೆ ತರಬೇಕು ಎಂಬ ಶಿಫಾರಸ್ಸನ್ನು ಕೂಡ ಮಾಡಿದೆ.

ಜರ್ಮನಿಯ ಅರ್ಥಶಾಸ್ತ್ರಜ್ಞರಾದ ಜೆನ್‌ಬ್ರೆಮೆನ್(೧೯೩೬)ರವರೂ ಕೂಡ ತಮ್ಮ ಜೀವನದ ಅನುಭವಗಳನ್ನು ಮಾದರಿಯಾಗಿಟ್ಟುಕೊಂಡು, ಅಸಂಘಟಿತ ವಲಯದ ದುಡಿಮೆಗಾರರ ಕುರಿತಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಫುಟ್ ಲೂಜ್ ಲೇಬರ್ಸ್',

'ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್' ಹಾಗೂ 'ದಿ ಮೇಕಿಂಗ್ ಅಂಡ್ ಅನ್ ಮೇಕಿಂಗ್ ಆಫ್ ಇಂಡಸ್ಟ್ರಿಯಲ್ ವರ್ಕಿಂಗ್ ಕ್ಲಾಸ್'. ಬ್ರೆಮೆನ್‌ರವರ ಕೃತಿಗಳಲ್ಲಿ ಪ್ರಮುಖವಾಗಿ ಅಸಂಘಟಿತ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗದಲ್ಲಿ ತೊಡಗಿದ ದುಡಿಮೆಗಾರರ ಸ್ಥಿತಿಗತಿಗಳ ಕುರಿತಾದ ವಿಸ್ತೃತ ಅಧ್ಯಯನವಿದೆ, ಅವರ ಅಭಿಪ್ರಾಯದಲ್ಲಿ ಅಸಂಘಟಿತ ವಲಯದ ದುಡಿಮೆಗಾರರಿಗೆ ಸರ್ಕಾರವು ಉದ್ಯೋಗ ಭದ್ರತೆಯನ್ನು ಒದಗಿಸಬೇಕು ಎಂಬುದಾಗಿದೆ.

ಸಂಘಟಿತ ವಲಯವನ್ನು ಲೇಖಕರು ಈ ರೀತಿಯಾಗಿ ಅರ್ಥೈಸಿದ್ದಾರೆ. ಖಾಯಂ ಉದ್ಯೋಗವನ್ನು ಹೊಂದಿದ ಕೈಗಾರಿಕಾ ಉದ್ಯಮಗಳು, ಸರ್ಕಾರಿ ಕಛೇರಿಗಳು ಹಾಗೂ ಬೃಹತ್ ಪ್ರಮಾಣದ ಉತ್ಪಾದನಾ ವಲಯಗಳು ಇದರಲ್ಲಿ ಸಂಘಟನೆಗೊಂಡ ಶ್ರಮಿಕರು ಇರುತ್ತಾರೆ ಹಾಗೂ ಇವರ ಕೆಲಸದ ಸ್ಥಿತಿಗತಿಗಳು ಅಧಿಕೃತವಾಗಿ ಆರ್ಥಿಕ ಲೆಕ್ಕಮಸ್ತಕದಲ್ಲಿ ನೋಂದಣಿಯಾಗಿರುತ್ತದೆ ಹಾಗೂ ಕಾನೂನಿನ ರಕ್ಷಣೆಯನ್ನು ಪಡೆದಿರುತ್ತವೆ.

ಇದಕ್ಕೆ ತದ್ವಿರುದ್ಧವಾಗಿ ಅಸಂಘಟಿತ ವಲಯವು ಕಡಿಮೆ ಬಂಡವಾಳ, ಕಡಿಮೆ ಉತ್ಪಾದನಾ ಸಾಮರ್ಥ್ಯ, ಹಳೆಯ ತಂತ್ರಜ್ಞಾನ, ಕುಟುಂಬ ಯಜಮಾನಿಕೆ, ಸುಲಭ ಪ್ರವೇಶ ಅಂಶಗಳಲ್ಲದೇ, ಕೊನೆಯದಾದ ಹಾಗೂ ಬಹುಮುಖ್ಯವಾದ ಲಕ್ಷಣ ಎಂದರೆ ಸರ್ಕಾರದಿಂದ ಬೆಂಬಲ ಹಾಗೂ ಮಾನ್ಯತೆ ಪಡೆಯದ ಒಂದು ಉತ್ಪಾದನಾ ಘಟಕವಾಗಿದೆ.

ಜೆನ್ ಬ್ರೆಮೆನ್(೧೯೯೪)ರವರ 'ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್' ಕೃತಿಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯದ ಸಾಮಾನ್ಯ ಲಕ್ಷಣಗಳನ್ನು ವಿವರಿಸುತ್ತಾ ಅವುಗಳ ನಡುವಿನ ಭಿನ್ನತೆಯನ್ನು ಚರ್ಚಿಸಿದ್ದಾರೆ. ಅನೌಪಚಾರಿಕ ವಲಯದ ವಿಶೇಷತೆ ಏನೆಂದರೆ ಸರ್ಕಾರದಿಂದ ಯಾವುದೇ ಬೆಂಬಲ ಹಾಗೂ ಮಾನ್ಯತೆಯನ್ನು ಪಡೆಯದ ಒಂದು ಉತ್ಪಾದನಾ ವಲಯ ಎಂದಿದ್ದಾರೆ. ಇದುವರೆಗೆ ನಡೆದ ಸಂಶೋಧನೆ ಹಾಗೂ ಸಮೀಕ್ಷೆಗಳು ಕೇವಲ ಔಪಚಾರಿಕ ವಲಯಕ್ಕಷ್ಟೆ ಸೀಮಿತವಾಗಿದ್ದವು. ಆದರೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಬಲವಾದ ಪ್ರಯತ್ನಗಳಿಂದ ಅನೌಪಚಾರಿಕ ವಲಯದ ವಿದ್ಯಮಾನಗಳನ್ನು ಕುರಿತು ಅಧ್ಯಯನಗಳು ನಡೆಯುತ್ತಿವೆ ಎಂದಿರುತ್ತಾರೆ. ಬ್ರೆಮೆನ್‌ರವರ ಅಧ್ಯಯನದಿಂದ ತಿಳಿದುಬರುವ ಅಂಶವೇನೆಂದರೆ ಅನೌಪಚಾರಿಕ ವಲಯದಲ್ಲಿ ಕೇವಲ ಹೆಣ್ಣುಮಕ್ಕಳಷ್ಟೇ ಅಲ್ಲ, ವೃದ್ಧರು, ಮಕ್ಕಳು ಹಾಗೂ ಅಂಗವಿಕಲರು ಇದ್ದಾರೆ. ಹೀಗಾಗಿ ಕೆಲವೊಮ್ಮೆ ಅವರ ಶ್ರಮ ಪ್ರಯೋಜನಕ್ಕೆ ಬರುವುದಿಲ್ಲ. ಅಲ್ಲದೆ ಅನೌಪಚಾರಿಕ ವಲಯವು ಔಪಚಾರಿಕ ವಲಯದ ಅನುಗ್ರಹದಿಂದ ಹುಟ್ಟಿ ಬಂದುದಾಗಿದೆ.[೫] ಇಲ್ಲಿ ಕಡಿಮೆ ಕೂಲಿಯ, ನೈಪುಣ್ಯತೆಯಿಲ್ಲದ, ಅನಿಯಮಿತ ಕೆಲಸವನ್ನು ದೈಹಿಕ ಶ್ರಮವನ್ನು ಬಳಸಿ ಮಾಡುವುದು ಹೊಟ್ಟೆಪಾಡಿಗಾಗಿ ಮಾತ್ರ, ಇವರಲ್ಲಿ ಅಧಿಕ ಸಂಖ್ಯೆಯ ದುಡಿಮೆಗಾರರು ಪಟ್ಟಣದಲ್ಲಿ ಉತ್ತಮ ಜೀವನ ಕಂಡುಕೊಳ್ಳಲು ವಲಸೆ ಬಂದವರಾಗಿರುತ್ತಾರೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಅಸಂಘಟಿತ ವಲಯದ ವ್ಯಾಖ್ಯೆ ಹಾಗೂ ಲಕ್ಷಣ

ಅಸಂಘಟಿತ ವಲಯವು ಅನೌಪಚಾರಿಕ ವಲಯ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತದೆ. ಅನೌಪಚಾರಿಕ ವಲಯ ಪದವನ್ನು ಮೊದಲಿಗೆ ಬಳಕೆಗೆ ತಂದವರು ಕೀತ್ ಹಾರ್ಟ್ (೧೯೭೧). ಅವರ ಅಭಿಪ್ರಾಯದಲ್ಲಿ ಅನೌಪಚಾರಿಕ ವಲಯವೆಂದರೆ, ನಗರದ ಶ್ರಮಶಕ್ತಿಯ ಒಂದು ಭಾಗವು ಔಪಚಾರಿಕ ಮಾರುಕಟ್ಟೆಯ ಹೊರಗುಳಿಯುವುದು ಎಂದು. ಇಂತಹ ಮಾರುಕಟ್ಟೆಯಲ್ಲಿ ಅನೇಕ ರೀತಿಯ ಆದಾಯ ತರುವಂತಹ ಹಾಗೂ ಉದ್ಯೋಗ ಸೃಷ್ಟಿಸುವಂತಹ ಚಟುವಟಿಕೆಗಳು ನಡೆಯುತ್ತಿರುತ್ತವೆ. ಇದರಲ್ಲಿ ಸಾಮಾನ್ಯವಾಗಿ ಗ್ರಾಮಗಳಿಂದ ವಲಸೆ ಬಂದ ಜನರನ್ನು ಒತ್ತಾಯ ಪೂರ್ವಕವಾಗಿ ಕೆಲಸಕ್ಕೆ ಆಹ್ವಾನಿಸಲಾಗುತ್ತದೆ. ಈ ಜನರಿಗೆ ಔಪಚಾರಿಕ ವಲಯದ ಉದ್ಯೋಗಗಳು ತರಬೇತಿಯ ಹಾಗೂ ಅನುಭವದ ಕೊರತೆಯಿಂದ ಲಭ್ಯವಾಗುವುದಿಲ್ಲ ಎಂಬ ಮಾಹಿತಿಯನ್ನು ಒದಗಿಸುತ್ತಾರೆ.

ಅನೌಪಚಾರಿಕ ಆರ್ಥಿಕತೆಯನ್ನು ಕುರಿತು (ILO) ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ನೀಡಿದ ವ್ಯಾಖ್ಯೆಯು ಈ ರೀತಿಯಾಗಿದೆ.

ಹತ್ತಕ್ಕಿಂತ ಕಡಿಮೆ ಮಂದಿ ಕಾರ್ಮಿಕರನ್ನೊಳಗೊಂಡ ಪಾಲುದಾರಿಕೆ ಅಥವಾ ಖಾಸಗಿ ಒಡೆತನದ ತಳಹದಿಯಲ್ಲಿ ಸರಕು ಸೇವೆಗಳ ಮಾರಾಟ ಮತ್ತು ಉತ್ಪಾದನೆಯಲ್ಲಿ ತೊಡಗಿದ ವ್ಯಕ್ತಿಗಳ ಅಥವಾ ಕುಟುಂಬ ಒಡೆತನದಲ್ಲಿರುವ, ಏಕೀಕೃತಗೊಂಡಿಲ್ಲದ ಖಾಸಗಿ ಉದ್ದಿಮೆಗಳನ್ನು ಹೊಂದಿದ ವಲಯವೇ ಅಸಂಘಟಿತ ವಲಯ.

ಲೂಯಿಸ್ ವಾಟ್ಟೆಯವರು ಬರೆದ 'ಕೇರಳದ ಅನೌಪಚಾರಿಕ ಕಾರ್ಮಿಕ ಮಾರುಕಟ್ಟೆ' ಎಂಬ ಲೇಖನದಲ್ಲಿ ಬ್ರೆಮನ್ (೧೯೯೬) ಅವರ ವ್ಯಾಖ್ಯೆಯನ್ನು ಉಲ್ಲೇಖಿಸಿದ್ದಾರೆ. 'ಆರ್ಥಿಕತೆಯ ಕೆಳಸ್ತರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಭಿನ್ನ ರೀತಿಯ ಅನಿಯಮಿತ ಮತ್ತು ಅನಿರ್ಧಿಷ್ಟ ಕಾಲದ ಶ್ರಮ ವ್ಯವಸ್ಥೆಯೇ ಅನೌಪಚಾರಿಕ ವಲಯ' ಎಂಬ ವಿವರಣೆಯನ್ನು ಕಾಣುತ್ತೇವೆ.

ಸ್ಕಾಯರ್ (೧೯೮೧) ಅವರು ಅಸಂಘಟಿತ ವಲಯವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾರೆ. ಅಸಂಘಟಿತ ವಲಯದಲ್ಲಿ ಕೂಲಿಯು ಬೇಡಿಕೆ ಹಾಗೂ ಪೂರೈಕೆ ನಿಯಮಗಳಿಂದ ನಿರ್ಧರಿಸಲ್ಪಡುತ್ತವೆ ಎಂದು.

ಸೇತುರಾಮನ್ (೧೯೭೬) ಅವರು ಅಸಂಘಟಿತ ವಲಯವನ್ನು 'ಜನರಿಗೆ ಉದ್ಯೋಗ ಹಾಗೂ ವರಮಾನವನ್ನು ತಂದುಕೊಡುವ ಪ್ರಮುಖ ಉದ್ದೇಶದಿಂದ ಸರಕು ಹಾಗೂ ಸೇವೆಗಳ ಉತ್ಪಾದನೆಯಲ್ಲಿ ತೊಡಗಿರುವ ಸಣ್ಣ ಪ್ರಮಾಣದ ಉತ್ಪಾದನಾ ಘಟಕ' ಎಂದು ವ್ಯಾಖ್ಯಾನಿಸಿದ್ದಾರೆ.

ಮೇಲಿನ ವ್ಯಾಖ್ಯೆಗಳನ್ವಯ ಅಸಂಘಟಿತ ವಲಯದ ದುಡಿಮೆಯು ಕಡಿಮೆ ವೇತನ ತರುವ ಹಾಗೂ ಯಾವ ಸಾಮಾಜಿಕ ಭದ್ರತೆಗಳೂ ಇಲ್ಲದ ಕಡಿಮೆ ಬಂಡವಾಳ ತೊಡಗಿಸಿ ಹಿಂದುಳಿದ ತಂತ್ರಜ್ಞಾನದಿಂದ ನಡೆಯುವುದಾಗಿದ್ದು, ಅಲ್ಲಿ ಪ್ರಮುಖ ಉದ್ದೇಶ ಉದ್ಯೋಗವನ್ನು ಸೃಷ್ಟಿಸುವುದು ಹಾಗೂ ಅಧಿಕ ಲಾಭ ಗಳಿಸುವುದಾಗಿರುತ್ತದೆ.

ಆದರೆ ಶ್ರೀಮತಿ ಹೆಚ್.ಎಂ.ಹೇಮಲತಾರವರು ಅಸಂಘಟಿತ ಹಾಗೂ ಸಂಘಟಿತ ವಲಯದ ಬಗ್ಗೆ ಈ ಪ್ರಕಾರವಾಗಿ ವ್ಯಾಖ್ಯಾನಿಸಿದ್ದಾರೆ. ಸಂವಿಧಾನ ಮತ್ತು ಸರ್ಕಾರದ ಕಾಯಿದೆಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವ ಉದ್ಯೋಗ ಭದ್ರತೆ ನೀಡುವ, ಸಂಘಟನೆಗೊಂಡ ಕಾರ್ಮಿಕರಿರುವ ಹಾಗೂ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತ ವಲಯ. ಇದಕ್ಕೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ವಲಯವೇ ಅಸಂಘಟಿತ ವಲಯ. ಇಲ್ಲಿ ಹೆಚ್ಚು ಕಾರ್ಮಿಕರನ್ನು ಕಡಿಮೆ ಕೂಲಿಗೆ ನೇಮಿಸಿಕೊಳ್ಳಲಾಗುತ್ತದೆ. ಜಂಡರ್, ಜಾತಿ, ವರ್ಗದ ಆಧಾರದ ಮೇಲೆ ವೇತನ ತಾರತಮ್ಯವಿರುತ್ತದೆ, ಔದ್ಯೋಗಿಕ ಸೇವಾ ಸೌಲಭ್ಯಗಳಿರುವುದಿಲ್ಲ. ಕಾಯಿದೆ ಕಾನೂನು ಚೌಕಟ್ಟಿನೊಳಗೆ ಇರುವುದಿಲ್ಲ. ಕೆಳಮಟ್ಟದ ತಂತ್ರಜ್ಞಾನವಿರುತ್ತದೆ ಹಾಗೂ ಕಾರ್ಮಿಕರು ಸಂಘಟನೆಗೊಂಡಿರುವುದಿಲ್ಲ. ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನರು ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯಗಳಲ್ಲಿ ಹೆಚ್ಚಾಗಿ ದುಡಿಯುತ್ತಾರೆ. ಹೀಗೆ ದುಡಿಯುವವರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಿರುವ ಅಂಶವನ್ನು ಬೆಳಕಿಗೆ ತಂದಿರುತ್ತಾರೆ. ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳಾ ದುಡಿಮೆಗಾರರು ಕಾಣಲು ಕಾರಣವೇನು? ಎಂಬುದನ್ನು ಈ ರೀತಿಯಾಗಿ ವಿಶ್ಲೇಷಿಸಲಾಗಿದೆ.

ಜೇಮಾಲ್ ಉನ್ನಿಯವರು (೨೦೦೧) ಅನೌಪಚಾರಿಕ ವಲಯದ ಬೆಳವಣಿಗೆ ಹಾಗೂ ಈ ಮಾರುಕಟ್ಟೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಹಲವಾರು ಕಾರಣಗಳನ್ನು ಕೊಡುತ್ತಾರೆ. ಅವುಗಳಲ್ಲಿ ಮುಖ್ಯವಾದ ಕಾರಣವೇನೆಂದರೆ, ರಚನಾತ್ಮಕ ಹೊಂದಾಣಿಕೆ ನೀತಿಯಿಂದಾಗಿ ಔಪಚಾರಿಕ ವಲಯದಲ್ಲಿ ಮಹಿಳೆಯರು ತಮ್ಮ ಉದ್ಯೋಗದಿಂದ ವಂಚಿತರಾದರು. ಇದರ ಜೊತೆ ಮಹಿಳೆಯರ ಕೌಟುಂಬಿಕ ಆದಾಯವೂ ಕಡಿಮೆಯಾಗಿ ಅವರು ಕಾರ್ಮಿಕ ಮಾರುಕಟ್ಟೆಯ ಕಡೆ ಮುಖ ಮಾಡುವಂತಾಯಿತು. ಜಾಗತೀಕರಣ ಪ್ರಕ್ರಿಯೆಗಳಿಂದ ಕೈಗಾರಿಕೆಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸ್ಥಳಾಂತರಿಸಿದ್ದರಿಂದಲೂ ಹಾಗೂ ರಫ್ತು ಆಧಾರಿತ ಕೈಗಾರಿಕೀಕರಣದಿಂದ ಮಹಿಳೆಯರ ಉದ್ಯೋಗಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (EPW June -30-2010).

ಅಸಂಘಟಿತ ವಲಯಗಳಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡು ಬರಲು ಕಾರಣಗಳನ್ನು ಡಾ.ಹೆಚ್.ಎಂ.ಹೇಮಲತಾರವರು ಈ ರೀತಿಯಾಗಿ ನೀಡಿದ್ದಾರೆ.

ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನು ಅವರು ವಾಸಿಸುವ ಸ್ಥಳಗಳಿಂದ ಹೊರತುಪಡಿಸಿ ಬೇರೆ ಸ್ಥಳಗಳಿಗೆ ಕೆಲಸ ಮಾಡಲು ಕಳುಹಿಸುವುದಿಲ್ಲ. ಅವರ ಚಲನೆಯ ಮೇಲಿರುವ ನಿರ್ಬಂಧದಿಂದ ಅವರು ತಾವು ವಾಸಿಸುವ ಸ್ಥಳದಲ್ಲೇ ಸಿಗುವಂತಹ ಕಡಿಮೆ ಕೂಲಿ, ಕಡಿಮೆ ಕೌಶಲ್ಯದ ಋತು ಮಾನಕ್ಕನುಗುಣವಾದ ನಿರಂತರ ದುಡಿಮೆ ನಿರೀಕ್ಷಿಸುವ ಕೆಲಸಗಳಲ್ಲಿ ತೊಡಗುತ್ತಾರೆ. ದುಡಿಯುವ ಮಹಿಳೆಯರ ವಯೋಮಿತಿಯನ್ನು ತೆಗೆದುಕೊಂಡರೆ ಸಾಮಾನ್ಯವಾಗಿ ೧೫-೪೦ ವರ್ಷಗಳ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಈ ವಯಸ್ಸು ಸಂತಾನೋತ್ಪತ್ತಿಯ ಹಾಗೂ

ಕುಟುಂಬದ ಜವಾಬ್ದಾರಿ ಹೊರಲು ನಿಯಮಿತ ಕೆಲಸಗಳಲ್ಲಿ ತೊಡಗುವುದಾಗಿದೆ. ಈ ಕಾರಣದಿಂದ ತಮ್ಮ ಅನುಕೂಲತೆಗೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸದಲ್ಲಿ ತೊಡಗುತ್ತಾರೆ. ಅದು ಲಭ್ಯವಿರುವುದು ಅಸಂಘಟಿತ ಕ್ಷೇತ್ರದಲ್ಲಿ.

ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಮಹಿಳೆಯರು ಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಮೇಲಿನ ಅಪೇಕ್ಷೆಗಳನ್ನು ನಿರೀಕ್ಷಿಸದ ಅಸಂಘಟಿತ ಕ್ಷೇತ್ರ ಸುಲಭವಾಗಿ ಮಹಿಳೆಯರನ್ನು ತನ್ನತ್ತ ಸೆಳೆಯುತ್ತದೆ ಅಥವಾ ಮಹಿಳೆಯರು ಸುಲಭವಾಗಿ ಈ ವಲಯವನ್ನು ಪ್ರವೇಶಿಸುತ್ತಾರೆ. ಸಂಘಟಿತ ವಲಯವನ್ನು ಪ್ರವೇಶಿಸಲಾಗದೇ ಅಂದರೆ ಅಲ್ಲಿಯ ಕಡ್ಡಾಯ ಮತ್ತು ಅಪೇಕ್ಷಣೀಯ ಪೂರೈಕೆಗಳನ್ನು ಪೂರೈಸಲಾಗದೇ ಅಸಂಘಟಿತ ವಲಯಕ್ಕೆ ಹೋಗುತ್ತಾರೆ. ಅಲ್ಲದೇ ಅದು ತೆಗೆದುಕೊಳ್ಳುವ ದೀರ್ಘ ಸಮಯ, ಲಿಖಿತ ಪರೀಕ್ಷೆ ಸಂದರ್ಶನ ಮತ್ತು ಇತರೆ ಪ್ರಕ್ರಿಯೆಗಳಿಗೆ ಕಾಯಲು ಸಾಧ್ಯವಾಗದೇ ತಕ್ಷಣ ಸಿಗುವ ಹಂಗಾಮಿ ಆಧಾರದ ಕೆಲಸಗಳಲ್ಲಿ ತೊಡಗುತ್ತಾರೆ. ಮಹಿಳೆಯರ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ತೆಗೆದುಕೊಂಡರೆ ಪೂರೈಕೆ ಅಧಿಕವಾಗಿರುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಅವರ ಚೌಕಾಶಿ ಶಕ್ತಿಯು ಕಡಿಮೆಯಾಗಿ ಕೌಶಲ್ಯ ರಹಿತ ಕೆಲಸಗಳಲ್ಲಿ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ.

ಸರ್ಕಾರದ ಕೃಷಿನೀತಿ, ಭೂಕಾಯಿದೆ, ಪರಿಸರ ನಾಶ, ಆರ್ಥಿಕ ಹಾಗೂ ಅಭಿವೃದ್ಧಿ ಕಾರ್ಯ ನೀತಿ, ಯೋಜನೆ ಹಾಗೂ ಚಟುವಟಿಕೆಗಳು ಜನರನ್ನು ಭೂರಹಿತರನ್ನಾಗಿ ಮಾಡುತ್ತವೆ, ಸ್ಥಳಾಂತರ ಗೊಳಿಸುತ್ತವೆ, ನಿರುದ್ಯೋಗಿಗಳನ್ನಾಗಿಸಿ ಬಡತನಕ್ಕೆ ತಳ್ಳುತ್ತವೆ. ಇವುಗಳಿಂದ ಹೆಚ್ಚು ಸಂಕಷ್ಟಕ್ಕೊಳಗಾಗುವ ಮಹಿಳೆಯರು ದುಡಿಯುವುದು ಅನಿವಾರ್ಯವಾಗಿ ಯಾವುದೇ ಕೆಲಸ ಮಾಡಲು ಮುಂದಾಗುತ್ತಾರೆ. ಇತ್ತೀಚಿನ ತಂತ್ರಜ್ಞಾನ ಬೆಳವಣಿಗೆ, ಆಧುನೀಕರಣ, ಹೊಸ ಆರ್ಥಿಕ ನೀತಿ, ಜಾಗತೀಕರಣ ಮಹಿಳೆಯ ರನ್ನು ಅಸಂಘಟಿತ ಕ್ಷೇತ್ರಕ್ಕೆ ತಳ್ಳುತ್ತಿವೆ ಎಂಬ ಕಾರಣಗಳನ್ನು ನೀಡುತ್ತಾರೆ.[೬]

'ದಿ ಸಿಸ್ಟಮ್ ಆಫ್ ನ್ಯಾಷನಲ್ ಅಕೌಂಟ್ಸ್ ೧೯೯೩' ಪುಸ್ತಕದಲ್ಲಿ ಅನೌಪಚಾರಿಕ ಮಾರುಕಟ್ಟೆಯ ಲಕ್ಷಣಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ತೊಡಗಿದ ಘಟಕಗಳು ಉದ್ಯೋಗ ನಿರ್ಮಾಣ ಮತ್ತು ಅದರಲ್ಲಿ ತೊಡಗಿದ ಕಾರ್ಮಿಕರಿಗೆ ಆದಾಯವನ್ನು ತಂದುಕೊಡುವ ಪ್ರಮುಖ ಗುರಿಯನ್ನು ಹೊಂದಿರುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಸೇತುರಾಮನ್ (೧೯೮೮) ರವರು ಗೃಹಕೃತ್ಯ ನಿಭಾಯಿಸುವ ಸಹಾಯಕರನ್ನು ಅನೌಪಚಾರಿಕ ವಲಯದ ಕೂಲಿ ಕಾರ್ಮಿಕರ ಗುಂಪಿಗೆ ಸೇರಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರ ಶ್ರಮಬಲ ಹೆಚ್ಚಾಗುತ್ತಿದೆ. ಮಹಿಳೆಯರ ನೈಜ ಆದಾಯವು ಕಡಿಮೆಯಾಗಿರುವುದರಿಂದ ಹಾಗೂ ಕೈಗಾರಿಕೆಗಳಲ್ಲಿ ಹೊಸ ಉದ್ಯೋಗಾವಕಾಶಗಳು ಉಂಟಾಗುತ್ತಿರುವುದರಿಂದ ಮಹಿಳೆಯರು ಹೆಚ್ಚಾಗಿ ಶ್ರಮದ ಮಾರುಕಟ್ಟೆಗೆ ಪ್ರವೇಶಿಸಿದ್ದಾರೆ.

ಮೇಲಿನ ಹೇಳಿಕೆಗನ್ವಯವಾಗಿ ಎ.ಸೆಲ್ವಕುಮಾರ್‌ರವರು ಸಂಪಾದಿಸಿದ ಗ್ರಂಥದಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. ಅಸಂಘಟಿತ ವಲಯದ ವಿವಿಧ ಬಗೆಯ ವೃತ್ತಿಗಳಲ್ಲಿ ಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ಈ ವೃತ್ತಿಗಳು ಸಂಘಟನೆ ಇಲ್ಲದ ಅನಿಯಮಿತ ಗುಣ ಲಕ್ಷಣಗಳಿಂದ ಕೂಡಿವೆ. ಅಲ್ಲಿನ ಕಾರ್ಮಿಕರಿಗೆ ಕನಿಷ್ಟ ಕೂಲಿ ಕೊಡದೆ ಕಡಿಮೆ ಕೊಡಲಾಗುತ್ತದೆ. ಈ ಕ್ರಮವನ್ನು ಪ್ರಶ್ನಿಸಲು ಅವರಿಗೆ ಯಾವುದೇ ಕಾರ್ಮಿಕ ಸಂಘಗಳ ಬೆಂಬಲವಿರುವುದಿಲ್ಲ. ಅವರು ಬೇರೆ ಬೇರೆ ಊರು ರಾಜ್ಯ ಹಾಗೂ ದೇಶಗಳಿಂದ ಬಂದವರಾಗಿದ್ದು ಯಾವುದೇ ವಿದ್ಯಾಭ್ಯಾಸ ಹಾಗೂ ತರಬೇತಿ ಹೊಂದಿರುವುದಿಲ್ಲವಾದ್ದರಿಂದ ಅವರನ್ನು ಬಹಳ ಕೀಳಾಗಿ ಕಾಣಲಾಗುತ್ತದೆ. ಬಾಲ ಕಾರ್ಮಿಕರೂ ಕೂಡ ಈ ವಲಯದಲ್ಲಿ ಕಾಣಸಿಗುತ್ತಾರೆ. ಅದರಲ್ಲೂ ಮಹಿಳೆಯರೇ ಹೆಚ್ಚಾಗಿ ಕಾಣುತ್ತಾರೆ. ಅವರಿಗೆ ಯಾವುದೇ ತರಬೇತಿ, ವೃತ್ತಿ ಕೌಶಲ್ಯವಿಲ್ಲದುದರಿಂದ ಕಡಿಮೆ ವೇತನವನ್ನು ಒಪ್ಪಿಕೊಳ್ಳುತ್ತಾರೆ. ಈ ಪ್ರವೃತ್ತಿಯು ಉದ್ಯೋಗದಾತರಿಗೆ ಬಹಳ ಲಾಭದಾಯಕವಾಗಿದ್ದು, ಇಲ್ಲಿನ ಕಾರ್ಮಿಕರು ಮಾತ್ರ ಸ್ವಚ್ಛತೆ ಇಲ್ಲದ ಅನಾರೋಗ್ಯಕರ ವಾತಾವರಣದಲ್ಲಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಕೇವಲ ಜೀವನೋಪಾಯಕ್ಕಾಗಿ ಈ ವೃತ್ತಿಯಲ್ಲಿ ತೊಡಗಿರುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.(ಎಂ. ಜೀಜರ್ ಮತ್ತು ಈಲಿಯಾಸ್)

ಈ ಎಲ್ಲಾ ಅಭಿಪ್ರಾಯಗಳಿಗೆ ಪೂರಕವಾಗಿ ಸಿದ್ಧಾರ್ಥ ಸರ್ಕಾರ್‌ರವರು ತಮ್ಮ ಗ್ರಂಥದಲ್ಲಿ ಅನೌಪಚಾರಿಕ ವಲಯದ ಲಕ್ಷಣಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಮೊದಲನೆಯದಾಗಿ ಸುಲಭ ಪ್ರವೇಶ. ಮಹಿಳಾ ಉದ್ಯೋಗಿಗಳು ಅಸಂಘಟಿತ ವಲಯವನ್ನು ಸುಲಭವಾಗಿ ಪ್ರವೇಶಿಸಬಹುದೆಂದು ಅಭಿಪ್ರಾಯಪಡುತ್ತಾರೆ. ಮಹಿಳೆಯರು ತಮ್ಮ ಕುಟುಂಬದ ಆರ್ಥಿಕ ಮುಗ್ಗಟ್ಟಿನಿಂದಲೋ ಇಲ್ಲವೇ ಅಧಿಕ ಹಣಗಳಿಸುವ ಆಕಾಂಕ್ಷೆಯಿಂದಲೋ ತಮ್ಮ ಮೂಲ ಸ್ಥಳವನ್ನು ಬಿಟ್ಟು ಪಟ್ಟಣಕ್ಕೆ ವಲಸೆ ಬರುತ್ತಾರೆ. ಹೀಗೆ ಬರುವ ಮಹಿಳೆಯರಿಗೆ ಪಟ್ಟಣದಲ್ಲಿರುವ ಆವರ ಸ್ನೇಹಿತರು ಹಾಗೂ ಸಂಬಂಧಿಗಳು ಬೆಂಬಲವಾಗಿ ನಿಲ್ಲುತ್ತಾರೆ.

ಎರಡನೆಯದಾಗಿ ಸಣ್ಣ ಪ್ರಮಾಣದ ಉತ್ಪಾದನೆ. ಅನೌಪಚಾರಿಕ ವಲಯವು ಕಡಿಮೆ ಬಂಡವಾಳದೊಂದಿಗೆ ಸ್ಥಾಪಿತವಾಗಿ, ಕಡಿಮೆ ಮಟ್ಟದ ಉದ್ದಿಮೆಗಳನ್ನು ಸ್ಥಾಪಿಸುವುದಲ್ಲದೇ, ಶ್ರಮ ಸಾಂದ್ರ ಚಟುವಟಿಕೆಗಳಿಂದ ಕೂಡಿರುತ್ತದೆ.

ಮೂರನೆಯದಾಗಿ ಕುಟುಂಬ ಯಜಮಾನಿಕೆ. ಅನೌಪಚಾರಿಕ ವಲಯದಲ್ಲಿ ಶ್ರಮ ವಿಭಜನೆ ಹಾಗೂ ಕೆಲಸದ ಪರಿಣತಿ ಕೆಳಮಟ್ಟದಲ್ಲಿರುತ್ತದೆ. ಅದು ಶ್ರಮಸಾಂದ್ರವಾಗಿದ್ದು, ಶ್ರಮಿಕರು ದೈಹಿಕ ಶ್ರಮವನ್ನೇ ಅವಲಂಬಿಸಿರುವುದಲ್ಲದೆ ಕಡಿಮೆ ಉತ್ಪಾದನಾ ತಂತ್ರಜ್ಞಾನದಿಂದ ಕೂಡಿರುತ್ತದೆ ಎಂಬ ಜಾನ್ ವೀಕ್ (೧೯೭೫) ಅವರ ಹೇಳಿಕೆಯನ್ನು ಪುನರುಚ್ಚರಿಸಿರುತ್ತಾರೆ. ಬಂಡವಾಳದ ಕೊರತೆ ಹಾಗೂ ಆಧುನಿಕ ತಂತ್ರಜ್ಞಾನದ ಕೊರತೆಯಿಂದ ಉತ್ಪಾದನೆ ಕುಂಠಿತಗೊಳ್ಳುತ್ತದೆ.

ನಾಲ್ಕನೆಯದಾಗಿ ಸರ್ಕಾರದ ಬೆಂಬಲವಿರುವುದಿಲ್ಲ. ಸಂಘಟಿತ ವಲಯದಲ್ಲಿರುವಂತೆ ಸರ್ಕಾರದ ಪ್ರೋತ್ಸಾಹ, ಬ್ಯಾಂಕ್ ಹಣಕಾಸು, ವಿದೇಶಿ ತಂತ್ರಜ್ಞಾನ, ಕಚ್ಚಾ ವಸ್ತುಗಳ ಪೂರೈಕೆ ಹಾಗೂ ವಿದೇಶೀ ಪೈಪೋಟಿಯಿಂದ ರಕ್ಷಣೆ ಈ ಯಾವ ರೀತಿಯ ಸೌಲಭ್ಯಗಳು ಅನೌಪಚಾರಿಕ ವಲಯದಲ್ಲಿರುವುದಿಲ್ಲ.

ಐದನೆಯದಾಗಿ ಸ್ಪರ್ಧಾತ್ಮಕ ಹಾಗೂ ಅನಿಯಂತ್ರಿತ ಉತ್ಪಾದನಾ ಮಾರುಕಟ್ಟೆ, ಅನೌಪಚಾರಿಕ ಮಾರುಕಟ್ಟೆಯಲ್ಲಿ ಸುಲಭ ಪ್ರವೇಶದ ಕಾರಣದಿಂದಾಗಿ ಅಲ್ಲಿ ಪೂರ್ಣ ಪ್ರಮಾಣದ ಪೈಪೋಟಿ ಏರ್ಪಡುವುದಲ್ಲದೆ ಅನಿಯಂತ್ರಿತ ವಾತಾವರಣ ಉಂಟಾಗುತ್ತದೆ. ಔಪಚಾರಿಕ ವಲಯದಲ್ಲಿ ಉದ್ಯೋಗ ಪಡೆಯಲು ಅಸ್ತಿತ್ವದಲ್ಲಿರುವ ನಿಬಂಧನೆಗಳು ಅನೌಪಚಾರಿಕ ವಲಯದ ಕಡೆ ಶ್ರಮಬಲದ ಚಲನೆ ಹೆಚ್ಚಾಗುವಂತೆ ಪ್ರೇರೇಪಿಸುತ್ತವೆ. ಈ ಕಾರಣದಿಂದ ಕಡಿಮೆ ಆದಾಯ ಹಾಗೂ ಅರೆ ನಿರುದ್ಯೋಗ ಉಂಟಾಗುವ ಸಂಭವವನ್ನು ಮಜುಂದಾರ್ (೧೯೭೭) ರವರ ಹೇಳಿಕೆಯಿಂದ ಸಮರ್ಥಿಸಿಕೊಂಡಿದ್ದಾರೆ.

ಸಂಘಟಿತ ವಲಯಕ್ಕೆ ಉದಾಹರಣೆಯಾಗಿ ಸರ್ಕಾರಿ ಸ್ವಾಮ್ಯದ ಉದ್ಯಮಗಳು, ಪೆಟ್ರೋಲಿಯಂ ತೈಲ ಉದ್ಯಮ, ರೈಲ್ವೆ ಇಲಾಖೆ, ದೂರವಾಣಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆ, ಅಂಚೆ ಇಲಾಖೆ, ವೈಮಾನಿಕ ಕ್ಷೇತ್ರ, ರಕ್ಷಣಾವಲಯ, ಬ್ಯಾಂಕ್ ಕ್ಷೇತ್ರ ಇತ್ಯಾದಿ. ಖಾಸಗಿಯಾಗಿದ್ದರೂ ಸರ್ಕಾರದ ನಿಯಂತ್ರಣದಲ್ಲಿರುವ ಸಂಸ್ಥೆಗಳು, ಆಧುನಿಕ ಯಂತ್ರೋಪಕರಣಗಳನ್ನು ಉತ್ಪಾದಿಸುವ ಕಂಪನಿಗಳು ಇತ್ಯಾದಿಗಳನ್ನು ಹೆಸರಿಸಿದ್ದಾರೆ. ಅಸಂಘಟಿತ ವಲಯದಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆದಿರುತ್ತವೆ. ಇಲ್ಲಿ ಕೃಷಿ ವಲಯ, ಕಟ್ಟಡ ನಿರ್ಮಾಣ, ರಸ್ತೆ ದುರಸ್ತಿ, ಗೃಹ ಕೈಗಾರಿಕೆ, ಸಣ್ಣ ಸ್ವಯಂ ಉದ್ಯೋಗ, ಹಣ್ಣು ತರಕಾರಿ ಮಾರಾಟ ಮಾಡುವುದು, ಮನೆಗೆಲಸ, ನೂಲು ತೆಗೆಯುವುದು, ಬಟ್ಟೆ ನೇಯುವುದು, ಮೀನುಗಾರಿಕೆ, ಪಶುಸಂಗೋಪನೆ, ತೋಟಗಾರಿಕೆ, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಸುವುದು, ಆಹಾರ ಸಂಸ್ಕರಣೆ ಮತ್ತು ಇತರೆ ಉತ್ಪನ್ನ ಘಟಕಗಳಲ್ಲಿ ದುಡಿಯುವುದು ಮುಂತಾದ ಹತ್ತು ಹಲವು ಕೆಲಸಗಳನ್ನು ಹೆಸರಿಸಿದ್ದಾರೆ.

ಇತ್ತೀಚಿನ ದಶಕಗಳಲ್ಲಿ ಜಾಗತಿಕ ಶ್ರಮಬಲ ತೀವ್ರವಾಗಿ ಅಧಿಕಗೊಳ್ಳುತ್ತಿದೆ. ಇದಕ್ಕೆ ಪ್ರಮುಖ ಕಾರಣ ತೀವ್ರಗೊಳ್ಳುತ್ತಿರುವ ಉತ್ಪಾದನಾ ಚಟುವಟಿಕೆಗಳು. ಇದರಿಂದ ಯುವ ಶ್ರಮಿಕರೂ ಕೂಡ ಅಸಂಘಟಿತ ವಲಯಗಳಲ್ಲಿ ಉದ್ಯೋಗಕ್ಕಾಗಿ ತಡಕಾಡುವಂತಾಗಿದೆ. ಈ ರೀತಿಯಾಗಿ ಅಸಂಘಟಿತ ವಲಯವು ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಆದರೆ ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸ್ಥಿತಿಗತಿ ತುಂಬಾ ಶೋಚನೀಯವಾಗಿದೆ. ಉತ್ತಮ ಆದಾಯ ಹಾಗೂ ಸಾಮಾಜಿಕ ಭದ್ರತಾ ಕಾಯಿದೆಗಳಿಂದ ಅವರನ್ನು ದೂರವಿರಿಸಲಾಗಿದೆ. ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗಾಗಿ ಅನೇಕ ಶಾಸನಗಳನ್ನು ಜಾರಿಗೆ ತಂದರೂ ಅವು ಯಾವ ರೀತಿಯಲ್ಲೂ ಫಲಕಾರಿಯಾಗಿರುವುದಿಲ್ಲ. ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಲಾಯಿತು. ಅಲ್ಲದೇ ಕಾರ್ಮಿಕರ ಎರಡನೇ ರಾಷ್ಟ್ರೀಯ ಸಮಿತಿಯು (SNCL) ಛತ್ರಿ ಶಾಸನ(ಅಂಬ್ರೆಲಾ ಲೆಜಿಸ್ಲೇಷನ್)ವನ್ನು ಶಿಫಾರಸ್ಸು ಮಾಡಿತು. ಆದಾಗ್ಯೂ ಜಾಗತೀಕರಣಗೊಂಡ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚು ಹೆಚ್ಚು ಯುವಶಕ್ತಿಯು ಸುರಕ್ಷಿತವಲ್ಲದ, ಕೆಳದರ್ಜೆಯ, ಕಡಿಮೆ ಆದಾಯ ತರುವ ಶ್ರಮಸಾಂದ್ರ ಅಸಂಘಟಿತ ವಲಯದ ಕಡೆ ಅನಿವಾರ್ಯವಾಗಿ ಮುಖ ಮಾಡುವಂತಾಗಿದೆ ಎಂದು ಜೇಜರ್ ಜೆಬಿನ್‌ಸನ್ ಹಾಗೂ ಪಿ.ಈಲಿಯಾಸ್ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ವಿವರಿಸುತ್ತಾರೆ. ಮಹಿಳೆಯರು ನಿರ್ವಹಿಸುವ ವೈವಿಧ್ಯಮಯ ಚಟುವಟಿಕೆಗಳು ಹೇಗೆ ವರ್ಗೀಕರಿಸಲ್ಪಟ್ಟಿವೆ? ಎಂಬುದನ್ನು ಈ ರೀತಿಯಾಗಿ ವಿಶ್ಲೇಷಿಸಲಾಗಿದೆ.

ಮನೆವಾರ್ತೆ ದುಡಿಮೆಗಾರರು : ಬೇರೆಯವರ ಮನೆಯಲ್ಲಿ ಸಂಬಳಕ್ಕಾಗಿ ಕೆಲಸ ಮಾಡುವ ಕೆಲಸಗಾರರನ್ನು ಮನೆಗೆಲಸದ ದುಡಿಮೆಗಾರರು ಎಂದು ಕರೆಯಲಾಗುತ್ತದೆ. ಮಹಿಳೆಯರು ಹೆಚ್ಚಾಗಿ ಈ ಕೆಲಸದಲ್ಲಿ ಕಂಡುಬರುತ್ತಾರೆ. ಈ ಕೆಲಸಕ್ಕೆ ಹೆಚ್ಚಿನ ನೈಪುಣ್ಯತೆ ಏನೂ ಬೇಕಿರುವುದಿಲ್ಲ. ಅಲ್ಲದೇ ಇಂಥಹ ಕೆಲಸಗಳಿಗೆ ಯಾವ ಸಾಮಾಜಿಕ ಭದ್ರತೆಯೂ ಇರುವುದಿಲ್ಲ. ಇವರು ಮನೆ ಒಡೆಯರಿಂದ ಅಧಿಕ ರೀತಿಯ ಶೋಷಣೆಗೊಳಗಾಗುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗುತ್ತಿಗೆ ದುಡಿಮೆಗಾರರು : ಈ ರೀತಿಯ ವ್ಯವಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡ ನಿಗಧಿತ ಕೂಲಿ ಕೊಡುವ ಜವಾಬ್ದಾರಿಯನ್ನು ಗುತ್ತಿಗೆದಾರರು ವಹಿಸಿಕೊಳ್ಳುವುದಿಲ್ಲ. ತಾವು-ನೇಮಿಸಿಕೊಂಡ ಕಾರ್ಮಿಕರಿಗೆ ಕಡಿಮೆ ಕೂಲಿ ಕೊಡುವುದರ ಮೂಲಕ ತಮ್ಮ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿಕೊಂಡು ಲಾಭಗಳಿಸುತ್ತಾರೆ. ಇಂತಹ ಕಾರ್ಮಿಕರಿಗೆ ನಿಗಧಿತ ಕೆಲಸದ ಅವಧಿಯೂ ಇರುವುದಿಲ್ಲ. ವಾರದ ರಜೆಯ ಸೌಲಭ್ಯ ಹಾಗೂ ಬಿಡುವು ಇಲ್ಲದ ಹಾಗೂ ಯಾವ ಸಾಮಾಜಿಕ ಭದ್ರತೆಗಳೂ ಇಲ್ಲದ ಕೆಲಸ ಇದಾಗಿರುತ್ತದೆ. ಒಂದು ವೇಳೆ ಕೆಲಸಗಾರರು ತಮ್ಮ ಸ್ಥಿತಿಗತಿಗಳ ವಿರುದ್ಧ ದನಿ ಎತ್ತಿದರೆ ಕೆಲಸದಿಂದ ವಜಾ ಮಾಡಲಾಗುತ್ತದೆ. ಹೀಗೆ ಉದ್ಯೋಗ ಭದ್ರತೆ ಇಲ್ಲದೇ ಉದ್ಯೋಗದಾತನು ನೀಡುವ ಮಾನಸಿಕ ಹಿಂಸೆಗೆ ಬಲಿಯಾಗುತ್ತಾರೆ.

ಸಾಂದರ್ಭಿಕ ದುಡಿಮೆಗಾರರು : ಇವರ ದುಡಿಮೆಯು ನಿರಂತರವಾಗಿರುವುದಿಲ್ಲ. ವಿವಿಧ ರೀತಿಯ ಕಾರ್ಮಿಕ ಕಾನೂನುಗಳು ವೇತನ ನಿಗಧಿಗಾಗಿ ಹಾಗೂ ಕೆಲಸದ ಸಮಯ ನಿಗಧಿಗಾಗಿ ರೂಪಿಸಲ್ಪಟ್ಟರೂ ಅವು ಸಾಂದರ್ಭಿಕ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ವಿಫಲವಾಗಿದೆ. ಇಂತಹ ಕಾರ್ಮಿಕರ ಜೀವನ ಡೋಲಾಯಮಾನವಾಗಿದೆ.

ಕಟ್ಟಡ ನಿರ್ಮಾಣ ದುಡಿಮೆಗಾರರು : ಕಟ್ಟಡಗಳ ನಿರ್ಮಾಣ ಕಾರ್ಯವು ಸಾಂದರ್ಭಿಕ ದುಡಿಮೆಯಾಗಿದ್ದು, ಈ ರೀತಿಯ ಕೆಲಸದಲ್ಲಿ ದುಡಿಮೆಗಾರರು ವರ್ಷ ಪೂರ್ತಿ ಕೆಲಸದಲ್ಲಿ ತೊಡಗಲು ಸಾಧ್ಯವಿಲ್ಲ. ಕಡಿಮೆ ಕೂಲಿ, ಹಾಗೂ ಅನಾರೋಗ್ಯಕರವಾದ ವಾತಾವರಣ, ಜೀತದ ವ್ಯವಸ್ಥೆ, ಕೆಲಸ ಮಾಡುವ ಸ್ಥಳದ ಬದಲಾವಣೆ, ಅಸ್ಥಿರ ಕೆಲಸದ ವಾತಾವರಣ ಮುಂತಾದ ಸಮಸ್ಯೆಗಳಿಂದ ಈ ಕಾರ್ಮಿಕರು ಬಳಲುತ್ತಿದ್ದಾರೆ.

ಸಣ್ಣ ಪ್ರಮಾಣದ ಕೈಗಾರಿಕೆಗಳ ದುಡಿಮೆಗಾರರು : ಕೈಗಾರಿಕಾ ವಲಯಗಳ ಕಾಯಿದೆ ಹಾಗೂ ಕಾರ್ಖಾನೆ ಕಾಯಿದೆಗಳು ಅಸ್ತಿತ್ವದಲ್ಲಿದ್ದರೂ ಅವುಗಳು ಕಾರ್ಮಿಕರಿಗೆ ತಲುಪುವಲ್ಲಿ ಯಶಸ್ವಿಯಾಗಿಲ್ಲ. ಉದ್ದಿಮೆದಾರರು ಕೆಲಸವನ್ನು ಸಣ್ಣ ಸಣ್ಣ ಘಟಕಗಳನ್ನಾಗಿ ವಿಭಜಿಸುವುದರ ಮೂಲಕ ಈ ಕಾನೂನುಗಳು ಅಳವಡಿಕೆಯಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ಪೌರ ಕಾರ್ಮಿಕರು : ಈ ರೀತಿಯ ಕೆಲಸಗಾರರು ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಇಂತಹ ದುಡಿಮೆಯಲ್ಲಿ ತೊಡಗುವುದು ಅವರ ಜೀವನ ನಿರ್ವಹಣೆಗೆ ಅನಿವಾರ್ಯವಾಗಿದೆ.

ತಲೆ ಮೇಲೆ ಹೊತ್ತುಕೊಂಡು ಬೀದಿಗಳಲ್ಲಿ ಮಾರಾಟ ಮಾಡುವವರು : ಈ ಕೆಲಸಗಾರರು ಅಸಂಘಟಿತರಾಗಿದ್ದು, ಪೋಲೀಸರಿಂದ ಹಾಗೂ ಸ್ಥಳೀಯ ಸರ್ಕಾರಗಳಿಂದ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಅವರು ಕಾನೂನಿನ ಯಾವುದೇ ರಕ್ಷಣೆಯಿಲ್ಲದೆ ಜೀವನೋಪಾಯಕ್ಕಾಗಿ ಈ ವೃತ್ತಿಯನ್ನು ಅವಲಂಬಿಸಿರುತ್ತಾರೆ.

ಅಂಗಡಿಗಳಲ್ಲಿ ಮತ್ತು ಆಹಾರ ಸಿದ್ಧಪಡಿಸುವ ಘಟಕಗಳಲ್ಲಿ ದುಡಿಯುವವರು : ಈ ರೀತಿಯ ಕೆಲಸಗಾರರಿಗೆ ಕೆಲಸದ ಅವಧಿ ನಿಗಧಿಯಾಗದೆ ಉದ್ಯೋಗದಾತರು ಹೆಚ್ಚು ಹೆಚ್ಚು ಗಂಟೆಗಳ ಕಾಲ ದುಡಿಯಲು ಒತ್ತಾಯಿಸುತ್ತಾರೆ. ಬಿಡುವಿಲ್ಲದ ದುಡಿಮೆ ಹಾಗೂ ಕಡಿಮೆ ವೇತನದಲ್ಲಿ ದುಡಿಯುವುದು ಇಂತಹ ಕಾರ್ಮಿಕರಿಗೆ ಅನಿವಾರ್ಯವಾಗಿದೆ.

ಕುಟುಂಬ ಆಧಾರಿತ ದುಡಿಮೆಗಾರರು : ಗೃಹ ಆಧಾರಿತ ದುಡಿಮೆಗಾರರಲ್ಲಿ ಬೀಡಿ ಕಟ್ಟುವುದು, ಸಿದ್ಧ ಉಡುಪು ತಯಾರಕರು, ಜರಿ ಕೆಲಸ, ಚಾಪೆ ಹಾಗೂ ಹಾಸುಗಂಬಳಿ ತಯಾರಿಕೆ, ಸೆಣಬು ಕೆಲಸ, ಉಪ್ಪಿನಕಾಯಿ ತಯಾರಿಕೆ ಮುಂತಾದವು. ಇಲ್ಲಿ ಉದ್ಯೋಗಿಗಳ ಹಾಗೂ ಉದ್ಯೋಗದಾತರ ನಡುವೆ ಯಾವುದೇ ನೇರ ಸಂಬಂಧವಿರುವುದಿಲ್ಲ. ಅವರ ವೇತನ ನಿಗಧಿಯಲ್ಲಿ ಉದ್ಯೋಗದಾತರ ಪಾತ್ರ ಏನೂ ಇರುವುದಿಲ್ಲ. ಕೇವಲ ಉಪಗುತ್ತಿಗೆದಾರರು ಈ ಕೆಲಸವನ್ನು ನೋಡಿಕೊಂಡು ಹೋಗುವುದರಿಂದ ಕೆಲಸಗಾರರಿಗೆ ನಿಗಧಿತ ಕೂಲಿ ಕೂಡ ದೊರೆಯುವುದಿಲ್ಲ.

ಅಕ್ರಮ ದುಡಿಮೆಗಾರರು : ಜೂಜುಗಾರರು ಹಾಗೂ ಅನೈತಿಕ ಕೆಲಸದಲ್ಲಿ ನಿರತರಾದವರು ಈ ಗುಂಪಿಗೆ ಸೇರುತ್ತಾರೆ. ಇವುಗಳನ್ನು ಸಮಾಜ ಮಾನ್ಯ ಮಾಡುವುದಿಲ್ಲ. ಹಣ ಗಳಿಕೆಗಾಗಿ ಈ ಕಾರ್ಯದಲ್ಲಿ ತೊಡಗಿರುತ್ತಾರೆ. (HIV/AIDS)ಖಾಯಿಲೆಗಳಿಗೆ ಬಲಿಯಾಗುವುದಲ್ಲದೆ, ಸಮಾಜದಲ್ಲಿ ಅಂತಹ ಭಯಾನಕ ಖಾಯಿಲೆ ಹರಡುವುದಕ್ಕೆ ಕಾರಣರಾಗುತ್ತಾರೆ. ತಮ್ಮ ಜೀವನ ನಿರ್ವಹಣೆಗೆ ಈ ಕೆಲಸ ಅನಿವಾರ್ಯವಾಗಿದೆ.

ಮೇಲೆ ಹೇಳಿದ ವರ್ಗೀಕರಣದನ್ವಯ ಅಸಂಘಟಿತ ವಲಯದ ಕಾರ್ಮಿಕರು ಅತೀ ಕೆಳದರ್ಜೆಯ ದುಡಿಮೆಯಲ್ಲಿ ನಿರತರಾಗಿದ್ದರೂ ಅವರಿಗೆ ಶೋಷಣೆಯಿಂದ ಮುಕ್ತಿಯಿಲ್ಲ ಹಾಗೂ ಕೈತುಂಬಾ ಸಂಬಳವೂ ದೊರೆಯುವುದಿಲ್ಲ. ಸಮಾನತೆಯನ್ನು ಎತ್ತಿ ಹಿಡಿಯುವ ಸರ್ಕಾರದ ಯಾವ ಕಾನೂನು ಗಳು ಇಂಥಹ ವ್ಯಕ್ತಿಗಳ ಬೆಂಬಲಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಆದರೆ ಸಿದ್ದಾರ್ಥ ಸರ್ಕಾರ್‌ರವರು ಅನೌಪಚಾರಿಕ ಹಾಗೂ ಔಪಚಾರಿಕ ವಲಯಗಳ ಸಂಬಂಧ ಹಾಗೂ ವ್ಯತ್ಯಾಸಗಳನ್ನು ಕುರಿತು ವಿವರವಾದ ಅಧ್ಯಯನ ನಡೆಸಿದ್ದಾರೆ. ಅವರು ವರ್ಗೀಕರಣ ಮಾಡಿದ ಅನೌಪಚಾರಿಕ ವಲಯವು ಈ ಕೆಳಗಿನಂತಿದೆ.

ಕುಟುಂಬ ಆಧಾರಿತ ದುಡಿಮೆಗಾರರು : ತಮ್ಮ ಸಾಂಪ್ರದಾಯಿಕ ಕೌಶಲ್ಯವನ್ನು ಉಪಕರಣವನ್ನು ಬಳಸಿ ದುಡಿಮೆಯಲ್ಲಿ ತೊಡಗಿರುವ ಕಾರ್ಮಿಕರು ಈ ವಲಯಕ್ಕೆ ಸೇರಿದವರಾಗಿದ್ದಾರೆ. ಹೆಚ್ಚಿನ ಕೆಲಸಗಾರರು ತಮ್ಮ ಮನೆಯಲ್ಲಿಯೇ ಕೆಲಸ ಮಾಡುತ್ತಿರುತ್ತಾರೆ. ಇವರ ಕೆಲಸವು ದೃಶ್ಯ ಗೋಚರ

ವಲ್ಲದ ರೂಪದಲ್ಲಿರುತ್ತದೆ. ಉದಾಹರಣೆಗೆ ಗ್ರಾಮದಲ್ಲಿ ಮಣ್ಣಿನ ಮಡಿಕೆ ಮಾಡುವವರು, ಕುಶಲ ಕೆಲಸಗಾರರು, ಕಮ್ಮಾರರು, ಇತ್ಯಾದಿ.

ಸ್ವಯಂ ಉದ್ಯೋಗ ಮಾಡುವವರು ಮತ್ತು ಸ್ವಂತ ದುಡಿಮೆ ಮಾಡುವವರು : ತಮ್ಮ ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗಲು ಯಾವುದೇ ಖಾಯಂ ಆದ ಸ್ಥಳ ಹೊಂದಿರದ ವ್ಯಕ್ತಿಗಳು ಈ ಗುಂಪಿಗೆ ಸೇರಿರುತ್ತಾರೆ. ಕೆಲವು ಬಾರಿ ಜನ ತಮ್ಮ ಕೆಲಸದ ಸ್ಥಳವನ್ನು ದಿನೇ ದಿನೇ ಬದಲಾಯಿಸುತ್ತಿರುತ್ತಾರೆ. ಹೊತ್ತು ಮಾರುವವರು, ರಿಕ್ಷಾ ತುಳಿಯುವವರು, ಸೆಕ್ಸ್ ವರ್ಕರ್ಸ್ ಈ ವರ್ಗಕ್ಕೆ ಸೇರಿದವರಾಗಿದ್ದಾರೆ.

ನಿಗಧಿತ ಕೂಲಿಗೆ ಕೆಲಸ ಮಾಡುವವರು : ಈ ವರ್ಗಕ್ಕೆ ಸೇರಿದ ಕೆಲಸಗಾರರಿಗೆ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆಯಿದೆ. ಬಟ್ಟೆ ಹೊಲಿಗೆ, ಹೆಣಿಕೆ ಮುಂತಾದ ಚಟುವಟಿಕೆಗಳನ್ನು ಇಲ್ಲಿ ಹೆಸರಿಸಬಹುದು. ಉದ್ಯಮಿಗಳು ಪೀಸ್ ವೇಜ್ ಆಧಾರದ ಮೇಲೆ ಇವರನ್ನು ನೇಮಕ ಮಾಡಿಕೊಂಡಿರುತ್ತಾರೆ, ಅವರು ಸ್ವತಂತ್ರ್ಯವಾಗಿ ತಮ್ಮ ಕೆಲಸ ಮುಂದುವರೆಸಿಕೊಂಡು ಹೋಗುತ್ತಿದ್ದರೂ, ಅವರಿಗೆ ಮುಂಗಡ ಹಣವನ್ನು ನೀಡುವ ಮೂಲಕ ಹಾಗೂ ಕಚ್ಚಾ ಸಾಮಗ್ರಿಗಳನ್ನು ಪೂರೈಸುವುದರ ಮೂಲಕ ಉದ್ಯಮಿಗಳು ಅವರ ಮೇಲೆ ಹಿಡಿತ ಇಟ್ಟುಕೊಂಡಿರುತ್ತಾರೆ. ಬೀಡಿ ತಯಾರಿಕೆ, ಹಾಸುಗಂಬಳಿ ತಯಾರಿಕೆ, ಚಾಪೆ ಹೆಣಿಕೆ ಮುಂತಾದವು ಈ ವರ್ಗಕ್ಕೆ ಸೇರುತ್ತವೆ.

ಕಾಲಾವಧಿ ಆಧರಿತ ದುಡಿಮೆಗಾರರು : ಈ ವರ್ಗಕ್ಕೆ ಸೇರಿದ ಕೆಲಸಗಾರರು ತಮ್ಮ ಶ್ರಮಕ್ಕೆ ಕಡಿಮೆ ಕೂಲಿ ಪಡೆಯುತ್ತಾರೆ. ಆ ವರ್ಗದ ನೌಕರರು ಖಾಯಂ ಉದ್ಯೋಗಿಗಳಾಗಿರುವುದಿಲ್ಲ ಹಾಗೂ ಅನಾನುಕೂಲಕರ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಅವರು ಜೀವನೋಪಾಯಕ್ಕಾಗಿ ತಮ್ಮ ಶ್ರಮವನ್ನು ನಂಬಿಕೊಂಡಿರುತ್ತಾರೆ. ತೋಟದ ಕೆಲಸಗಾರರು, ಸ್ವಚ್ಛತೆ ಕಾಪಾಡುವವರು, ಕಸಗುಡಿಸುವವರು, ಕಟ್ಟಡ ನಿರ್ಮಾಣ ಮಾಡುವವರು, ಇಟ್ಟಿಗೆ ಮಾಡುವವರು, ಮನೆಗೆಲಸದವರು ಈ ವರ್ಗಕ್ಕೆ ಸೇರಿದವರಾಗಿದ್ದಾರೆ.

ಹೀಗೆ ಅನೌಪಚಾರಿಕ ವಲಯವು ಬಹಳ ವೈವಿಧ್ಯಮಯವಾಗಿದ್ದು, ವರ್ಗೀಕರಣವು ಅತೀ ಗುರುತರ ಕೆಲಸವಾಗಿದೆ ಎಂಬ ಅಭಿಪ್ರಾಯವನ್ನು ಸಿದ್ಧಾರ್ಥ ಸರ್ಕಾರ್‌ರವರು ವ್ಯಕ್ತಪಡಿಸಿರುತ್ತಾರೆ.

ಭಾರತದಲ್ಲಿ ಶೇ. ೧೦ಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯಗಳಲ್ಲಿ, ಶೇ. ೯೦ಕ್ಕಿಂತ ಅಧಿಕ ಮಹಿಳೆಯರು ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಪುರುಷ ತನ್ನ ಅಧಿಕಾರದ ಮೇಲೆ ಸಶಕ್ತತೆ ಹೆಚ್ಚಿಸಿ ಸಂಪನ್ಮೂಲ ಪಡೆದು ತನ್ನ ಮಾನವ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತಾನೆ. ಇದರಿಂದ ಹೊರಗಿನ ಜಗತ್ತಿನಲ್ಲಿ ಶ್ರಮ ಶಕ್ತಿಯಲ್ಲಿ ಭಾಗವಹಿಸುವುದು ಸಾಧ್ಯವಾಗುತ್ತದೆ. ಮಹಿಳೆಯರ ಮಾನವ ಬಂಡವಾಳ ಕಡಿಮೆ ಇರುತ್ತದೆ. ಆದ್ದರಿಂದ ಅಸಂಘಟಿತ ವಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕಂಡು ಬರುತ್ತಾರೆ. ಅದರ ಹಿನ್ನೆಲೆ ಮಹಿಳೆಯರಿಗೆ ಹೆಚ್ಚಿನ ಶಿಕ್ಷಣ, ಜ್ಞಾನ ಕೌಶಲ್ಯ ಇಲ್ಲ. ಕುಟುಂಬದ ತಾರತಮ್ಯದಿಂದ ಅವಳಿಗೆ ಈ ಅವಕಾಶ ಕಡಿಮೆ ಎನ್ನುವುದು (ಡಾ.ಛಾಯಾ ದೇಗಾಂವ್‌ಕರ್) ಅವರ ಅಭಿಪ್ರಾಯವಾಗಿದೆ.

೧೯ನೇಯ ಶತಮಾನದ ಮಧ್ಯಭಾಗದಿಂದ ಇಪ್ಪತ್ತನೆಯ ಶತಮಾನದ ಪ್ರಾರಂಭದ ಸಮಯದಲ್ಲಿ ಕೈಗಾರಿಕೀಕರಣ ಮತ್ತು ನಗರೀಕರಣಗಳಿಂದ ಗ್ರಾಮಗಳಿಂದ ಕುಟುಂಬ ಸಮೇತ ವಲಸೆ ಬಂದ ಮಹಿಳೆಯರು ಗಣಿ, ಹತ್ತಿ ಗಿರಣಿ ಮತ್ತು ಕಾರ್ಖಾನೆಗಳಲ್ಲಿ ದುಡಿಯಲು ಪ್ರಾರಂಭಿಸಿದರು. ಯಾವಾಗ ಅವರ ಶ್ರಮವು ಹಣದ ವಿನಿಮಯಕ್ಕೆ ಒಳಗಾಗಿ ಆದಾಯ ಗಳಿಸಲಾರಂಭಿಸಿದರೋ ಆವಾಗ ಅವರನ್ನು ದುಡಿಮೆಗಾರರನ್ನಾಗಿ ಗುರುತಿಸಲಾಯಿತು. ಮೊದಲಿಗೆ ಅನಕ್ಷರಸ್ಥ ಕೆಳವರ್ಗದ ಸ್ತ್ರೀಯರು ದುಡಿಮೆ ಕ್ಷೇತ್ರವನ್ನು ಪ್ರವೇಶಿಸಿದರು. ಅಸಂಘಟಿತ ವಲಯದ ಕೆಲಸದ ಸ್ವರೂಪ, ಸ್ಥಿತಿಗತಿ ಹಾಗೂ ಸಮಸ್ಯೆಗಳನ್ನು ಮೊದಲಿಗೆ ಬೆಳಕಿಗೆ ತಂದಿದ್ದು, ೧೯೭೪ರಲ್ಲಿ ನ್ಯಾಷನಲ್ ಕಮಿಟಿ ಆನ್ ಸ್ಟೇಟಸ್ ಆಫ್ ವುಮೆನ್ ವರದಿ ಟುವರ್ಡ್ಸ್ ಈಕ್ವಾಲಿಟಿ. ಇದು ಸರ್ಕಾರದ ನೀತಿ ನಿರೂಪಕರ ಹಾಗೂ ಅರ್ಥ ಶಾಸ್ತ್ರಜ್ಞರ ಗಮನ ಸೆಳೆಯಿತು. ನಂತರ ಅಸಂಘಟಿತ ವಲಯದ ಹಾಗೂ ಮಹಿಳಾ ದುಡಿಮೆಗಾರರ ಕಡೆ ಹೆಚ್ಚಿನ ಗಮನ ಹರಿಯಲು ಪ್ರಾರಂಭವಾಯಿತು.

ಇವಲ್ಲದೇ ೧೯೮೮ರಲ್ಲಿ ದಿ ನ್ಯಾಷನಲ್ ಕಮಿಷನ್ ಆನ್ ಸೆಲ್ಫ್ ಎಂಪ್ಲಾಯಡ್ ವುಮೆನ್ ಅಂಡ್ ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್‌ನ ವರದಿ. ಈ ವಲಯದ ಮಹಿಳೆಯರಿಗೆ ಅವರ ಸ್ಥಿತಿಗತಿಗಳ ಬಗ್ಗೆ ಮತ್ತಷ್ಟು ಅಂಕಿ ಅಂಶಗಳನ್ನು ಬೆಳಕಿಗೆ ತಂದು ಅವುಗಳ ವಿಶ್ಲೇಷಣೆ ನೀಡಿ ಸರ್ಕಾರವು ನಿರ್ದಿಷ್ಟ ಕ್ರಮ ಕೈಕೊಳ್ಳುವಂತೆ ಶಿಫಾರಸ್ಸು ಮಾಡಿತು. ಅದರ ಫಲವಾಗಿ ೧೯೯೧ರ ಜನಗಣತಿಯಲ್ಲಿ ಮೊದಲ ಬಾರಿಗೆ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರನ್ನು ಸೇರಿಸಲಾಯಿತು. ಇದರಿಂದ ಮಹಿಳೆಯರ ದುಡಿಮೆ ಸಹಭಾಗಿತ್ವವು ಹೆಚ್ಚಾಗಿದ್ದು ಕಂಡು ಬರುತ್ತದೆ. ಅಲ್ಲಿಯವರೆಗೆ ಸರ್ಕಾರವಾಗಲೀ, ಜ್ಞಾನ ಶಾಸ್ತ್ರಗಳಾಗಲೀ, ವಿಷಯ ತಜ್ಞರಾಗಲೀ ಅಸಂಘಟಿತ ವಲಯದ ಮಹಿಳೆಯರನ್ನು ದುಡಿಮೆಗಾರರೆಂದು ಪರಿಗಣಿಸುತ್ತಲೇ ಇರಲಿಲ್ಲ. (ಡಾ.ಹೇಮಲತಾ.ಹೆಚ್.ಎಂ)

ಸ್ವಯಂ ಉದ್ಯೋಗಿ ಮಹಿಳಾ ದುಡಿಮೆಗಾರರನ್ನು ಕುರಿತಂತೆ ಅಧ್ಯಯನ ಮಾಡಲು ಕೇಂದ್ರ ಸರ್ಕಾರವು ನೇಮಿಸಿದ್ದ ರಾಷ್ಟ್ರೀಯ ಆಯೋಗವು ಸಿದ್ಧಪಡಿಸಿದ ಶ್ರಮಶಕ್ತಿ ವರದಿಯಲ್ಲಿ ಉಲ್ಲೇಖಿಸಿರುವಂತೆ ಮಹಿಳಾ ದುಡಿಮೆಗಾರರಲ್ಲಿ ಶೇ. ೯೪ರಷ್ಟು ಅಸಂಘಟಿತ ವಲಯದಲ್ಲಿದ್ದಾರೆ. ಭಾರತದಲ್ಲಿ ಅಸಂಘಟಿತ ಕ್ಷೇತ್ರವು ಸಂಘಟಿತ ಕ್ಷೇತ್ರದ ಕಾರ್ಮಿಕರು ಅನುಭವಿಸುವ ಕಾಯಿದೆ, ರಕ್ಷಣೆ ಮತ್ತು ಆರ್ಥಿಕ ಲಾಭಗಳಿಂದ ಹೊರತಾಗಿದೆ. ಸಾಮಾಜಿಕ ಭದ್ರತಾ ಕಾಯ್ದೆಗಳಿದ್ದರೂ ಅಸಂಘಟಿತ ವಲಯದ ಉದ್ಯೋಗಿಗಳಿಗೆ ಅನ್ವಯಿಸುವುದಿಲ್ಲ. ಅನ್ವಯಿಸಿದರೂ ಕೆಲವು ಉದ್ಯಮ ಘಟಕಗಳು ಅವುಗಳನ್ನು ಪಾಲಿಸುವಲ್ಲಿ ಹಿಂದೇಟು ಹಾಕುತ್ತಿವೆ. ಕೆಲವು ವೇಳೆ ಭದ್ರತಾ ಯೋಜನೆಗಳ ಅರಿವು ಇಲ್ಲದೇ ಮಹಿಳೆಯರು ರಕ್ಷಣಾ ಪರಿಹಾರದಿಂದ ವಂಚಿತರಾಗುತ್ತಾರೆ. ತಿಳುವಳಿಕೆಯಿದ್ದರೂ ಕಾರ್ಮಿಕರು ಅಂಜಿಕೆಯಿಂದ ಲಭ್ಯವಿರುವ ಸೌಲಭ್ಯವನ್ನು ಬೇಡಲೂ ಕೂಡ ಹಿಂಜರಿಯುತ್ತಾರೆ ಎಂದು ಅಸಂಘಟಿತ ವಲಯದ ಮಹಿಳಾ ಕಾರ್ಮಿಕರ ಅಸಹಾಯಕ ಸ್ಥಿತಿಗತಿಗಳ ಬಗ್ಗೆ ಡಾ. ಬಿ.ಹೆಚ್. ಅಂಜಿನಪ್ಪ ಇವರು ಬೆಳಕು ಚೆಲ್ಲಿದ್ದಾರೆ.

ಈ ಎಲ್ಲಾ ಅನಾನುಕೂಲತೆಗಳ ಪರಿಣಾಮವಾಗಿ ಮಹಿಳೆಯರ ಉದ್ಯೋಗ ಭಾಗವಹಿಸುವಿಕೆ ದರವೂ ಕೂಡ ಭಾರತದಲ್ಲಿ ಕಡಿಮೆ ಇದೆ. ೨೦೦೧ರಲ್ಲಿ ದೇಶದ ಜನಸಂಖ್ಯೆಯಲ್ಲಿ ಒಟ್ಟು ಉದ್ಯೋಗಸ್ಥರ ಪ್ರಮಾಣ ಶೇ. ೩೯.೨ರಷ್ಟು ಇದೆ. ಈ ದುಡಿಯುವ ಕೆಲಸಗಾರರಲ್ಲಿ ಪುರುಷರ ಭಾಗವಹಿಸುವಿಕೆ ದರ ಶೇ. ೫೧.೯ರಷ್ಟು ಮತ್ತು ಮಹಿಳೆಯರ ಉದ್ಯೋಗ ಭಾಗವಹಿಸುವಿಕೆ ದರ ಶೇ. ೨೫.೬೮ರಷ್ಟು ಆಗಿದೆ.

ಡಾ. ಇಂದಿರಾ ಕುಮಾರಿ ಹಾಗೂ ಸಾಂಬಶಿವರಾವ್ರವರ 'ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ' ಕುರಿತ ಅಧ್ಯಯನದಲ್ಲಿ ಎಸ್ತರ್ ಬೋಸರಪ್ ಅವರ ಅಭಿಪ್ರಾಯವನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರೇ ಯಾವಾಗಲೂ ಬಲಿಯಾಗುತ್ತಾರೆ, ಆದರೆ ಇದರ ನಿಜವಾದ ಫಲಾನುಭವಿಗಳು ಪುರುಷರಾಗಿದ್ದಾರೆ, ಮಹಿಳೆಯರ ಮೇಲಿನ ಶೋಷಣೆಯು ಸಮುದಾಯದ ಮೇಲೆ ಪರಿಣಾಮ ಬೀರುತ್ತದೆ. ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ವಿಫಲವಾಗುತ್ತಿರಲು ಕಾರಣವೇನೆಂದರೆ, ಮಹಿಳೆಯರ ಉತ್ಪಾದನಾ ಶಕ್ತಿಯನ್ನು ಕಡೆಗಣಿಸುತ್ತಿರುವುದು, ಅದಕ್ಕೆ ಮಹಿಳೆಯರನ್ನು ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದು ಎಂದು ಪರಿಗಣಿಸಬೇಕು ಎಂದು ಲೇಖಕರು ಒತ್ತಾಯಿಸಿದ್ದಾರೆ.

ಮೇಲಿನ ಲೇಖಕರ ಅಭಿಪ್ರಾಯವನ್ನು ಸಮರ್ಥಿಸುವಂತೆ **ನೈಲಾ ಕಬೀರ್** 'ದಿ ಡಿವಿಜನ್ ಆಫ್ ಲೇಬರ್ ಇನ್ ದಿ ಟ್ರಿಪಲ್ ರೋಲ್ಸ್ ಪ್ರೇಮ್ ವರ್ಕ್ಸ್' ಲೇಖನದಲ್ಲಿ ಮೋಸರ್(೧೯೮೯) ರವರ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ, ಮಹಿಳೆಯ ಟ್ರಿಪಲ್ ರೋಲ್ಸ್ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಹೇಗೆ ರೂಢಿಯಲ್ಲಿದೆ ಎಂಬುದನ್ನು ವಿವರಿಸಿದ್ದಾರೆ. ಈ ಮೂರು ಬಗೆಯ ಕೆಲಸಗಳೆಂದರೆ ಉತ್ಪಾದನಾ ಕಾರ್ಯ, ಸಂತಾನೋತ್ಪತ್ತಿ ಕಾರ್ಯ ಹಾಗೂ ಸಾಮುದಾಯಿಕ ಜವಾಬ್ದಾರಿಗಳು.[೬] ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರಿಬ್ಬರೂ ಈ ಮೂರು ಜವಾಬ್ದಾರಿಗಳಲ್ಲಿ ಏಕರೂಪವಾಗಿ ತೊಡಗಿಸಿಕೊಂಡಿಲ್ಲವೆಂಬುದು ಮೋಸರ್‌ರವರ ಅಭಿಪ್ರಾಯ. ಮಹಿಳೆ ಸಂತಾನೋತ್ಪತ್ತಿ ಚಟುವಟಿಕೆಯಲ್ಲಿ ಪ್ರಧಾನವಾಗಿ ತೊಡಗಿಸಿಕೊಂಡರೂ ಉತ್ಪಾದಕ ಚಟುವಟಿಕೆಯಲ್ಲಿಯೂ ಅವಳ ಪಾತ್ರವನ್ನು ತೆಗೆದು ಹಾಕುವಂತಿಲ್ಲ, ಆದರೆ ಸಮಾಜದಲ್ಲಿ ಪುರುಷನ ಉತ್ಪಾದಕ ಕೆಲಸವನ್ನು ಮಾತ್ರ ಗಣನೆಗೆ ತೆಗೆದು ಕೊಂಡು, ಮಹಿಳೆಯ ಜವಾಬ್ದಾರಿಗಳನ್ನು ಕಡೆಗಣಿಸುತ್ತಾರೆ. ಅವು ಸ್ವಾಭಾವಿಕವಾಗಿ ಮಹಿಳೆ ನಿರ್ವಹಿಸಲೇ ಬೇಕಾದ ಕಾರ್ಯಗಳೆಂದು ಪರಿಭಾವಿಸಲಾಗಿದೆ. ಅವಳ ದುಡಿಮೆ ಆರ್ಥಿಕ ಮೌಲ್ಯಮಾಪನಕ್ಕೊಳ ಪಡಬೇಕೆಂದರೆ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದಿದ್ದಾರೆ. ನೈಲಾ ಕಬೀರ್ ರವರು ಸ್ವ ಉದ್ಯೋಗಿಗಳ ಕುರಿತಾದ ಒಂದು ಅಧ್ಯಯನದಲ್ಲಿ ಈ ರೀತಿ ತಿಳಿಸಿದ್ದಾರೆ. ಆರ್ಥಿಕತೆಯಲ್ಲಿ ಮಹಿಳೆಯರ ವೈವಿಧ್ಯಮಯ ಚಟುವಟಿಕೆಗಳನ್ನು ಗುರುತಿಸಲು ಪ್ರಯತ್ನಿಸಲಾಯಿತು. ಇದರ ಅಂಗವಾಗಿ ಭಾರತದ ಸ್ವ ಉದ್ಯೋಗಿ ಮಹಿಳಾ ಸಂಘವೂ, ನಗರದ ಸ್ವ ಉದ್ಯೋಗಿ ಬಡ ಮಹಿಳೆಯರ ಕುರಿತು ಚಿಂತನೆ ನಡೆಸಿದೆ. ಸ್ವ ಉದ್ಯೋಗಿ ಮಹಿಳೆಯರು ಅಸಂಘಟಿತರು, ಅಸುರಕ್ಷಿತರು, ನೋಂದಣಿಯಾಗದವರು, ಅನೌಪಚಾರಿಕ ವಲಯದವರು, ಅಂಚಿನ ಸೇವೆಗೆ ಸೇರಿದವರು, ಕಪ್ಪು ಆರ್ಥಿಕತೆಯ ಉದ್ಯೋಗಿಗಳೆಂದು ಪರಿಗಣಿಸಲ್ಪಟ್ಟರು. ಮಹಿಳಾ ದುಡಿಮೆಗಾರರು

ತಮಗಾಗುತ್ತಿರುವ ಶೋಷಣೆಯ ವಿರುದ್ಧ, ಗುತ್ತಿಗೆದಾರರ ವಿರುದ್ಧ, ಪೋಲೀಸ್ ಕಿರುಕುಳದ ವಿರುದ್ಧ, ತಾರತಮ್ಯವಾದ ಕಾನೂನುಗಳ ವಿರುದ್ಧ ಪ್ರತಿಭಟನೆ ನಡೆಸಿದ ವಿಷಯ ಬೆಳಕಿಗೆ ತಂದಿರುತ್ತಾರೆ.

ಈ ರೀತಿಯ ಹೋರಾಟ ಮನೋಭಾವವು ಮಹಿಳೆಯರಲ್ಲಿ ಹುಟ್ಟಿಬರಲು ಅವರ ಸ್ಥಿತಿಗತಿಗಳು ಹೇಗೆ ಕಾರಣವಾಗಿವೆ ಎಂಬುದನ್ನು **ನಿರ್ಮಲಾ ಬ್ಯಾನರ್ಜಿಯವರು** ಬರೆದ 'ವುಮೆನ್ ವರ್ಕರ್ಸ್ ಇನ್ ದಿ ಅನ್‌ಆರ್ಗನೈಸ್ಡ ಸೆಕ್ಟರ್' ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಅಸಂಘಟಿತ ವಲಯ ಎಂದರೆ ಸಡಿಲವಾಗಿ ರೂಪುಗೊಂಡ ಗುಂಪುಗಳು. ವಿವಿಧ ರೀತಿಯ ಅನೌಪಚಾರಿಕ ಕೆಲಸದ ಒಪ್ಪಂದಗಳ ಉತ್ಪಾದನಾ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಹಾಗೂ ಅಲ್ಲಿ ಸ್ವ-ಉದ್ಯೋಗಿಗಳು, ಕೂಲಿಗಾಗಿ ದುಡಿಯುವವರು, ಕೌಟುಂಬಿಕ ಉತ್ಪಾದನಾಕಾರರು ಮುಂತಾದವರು ಇರುತ್ತಾರೆ. ಅಸಂಘಟಿತ ವಲಯ ಹಾಗೂ ಸಂಘಟಿತ ವಲಯ ಎಂದು ಗುರುತಿಸಲು ಅಲ್ಲಿಯ ದುಡಿಮೆಗಾರರು ಪಡೆಯುವ ವೇತನ ಹಾಗೂ ಕೆಲಸ ಮಾಡುವ ಪರಿಸರ ಹಾಗೂ ಅವರು ಅನುಭವಿಸುವ ಸವಲತ್ತುಗಳು ನೆರವಾಗುತ್ತದೆ. ಸಂಘಟಿತ ವಲಯದ ದುಡಿಮೆಗಾರರು ತಮ್ಮ ಅನುಪಮ ಕಾರ್ಯ ಕೌಶಲ್ಯದಿಂದ ತಮ್ಮ ಉದ್ಯೋಗದಾತರಿಂದ ಹೆಚ್ಚಿನ ಚೌಕಾಶಿ ಶಕ್ತಿಯನ್ನು ಪಡೆಯುತ್ತಾರೆ. ಇದಕ್ಕೆ ಪೂರಕವಾಗಿ ಕಾರ್ಮಿಕ ಸಂಘಗಳೂ ಅವರ ನೆರವಿಗೆ ಬರುತ್ತವೆ. ಆದರೆ ಕೌಶಲ್ಯದ ಕೊರತೆ ಹಾಗೂ ಕಾರ್ಮಿಕ ಸಂಘಗಳ ಬೆಂಬಲವಿಲ್ಲದೇ ಅಸಂಘಟಿತ ವಲಯದ ಕಾರ್ಮಿಕರು ಚಿಂತಾಜನಕವಾದ ಸನ್ನಿವೇಶದಲ್ಲಿ ದುಡಿಯುತ್ತಿದ್ದಾರೆ. ಆದರೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ನೀತಿ ನಿರೂಪಕರಿಗೂ ಕೂಡ ಇದು ಬಿಡಿಸಲಾಗದ ಸಮಸ್ಯೆಯಾಗಿದೆ. ಉದ್ಯೋಗದಾತರು ಕೊಡುವ ಅಲ್ಪ ಆದಾಯಕ್ಕೆ ಅನೇಕ ರೀತಿಯ ಕಷ್ಟಕರ ಚಟುವಟಿಕೆಗಳಲ್ಲಿ ತೊಡಗಿ ಲಾಭದ ಕೆಲವೇ ಭಾಗವನ್ನು ಮಾತ್ರ ಅನುಭವಿಸುತ್ತಿದ್ದಾರೆ. ಕೆಲವು ಕಾರ್ಮಿಕ ಮಂತ್ರಾಲಯ ಹಾಗೂ ಯೋಜನಾ ಆಯೋಗಗಳಿಗೂ ಕೂಡ ಈ ವಲಯದ ಅಂಕಿ ಅಂಶಗಳು ಲಭ್ಯವಿಲ್ಲದೆ ನೀತಿ ನಿರೂಪಕರನ್ನು ದಾರಿತಪ್ಪಿಸುತ್ತಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಹಿಳೆಯರು ಅಸಂಘಟಿತ ವಲಯವನ್ನು ಪ್ರವೇಶಿಸಲು ಕಾರಣವೇನು? ಎಂಬುದಕ್ಕೆ ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. ೨೦ನೇ ಶತಮಾನದ ಮೊದಲ ಅರ್ಧಭಾಗದಲ್ಲಿ ಮಹಿಳೆಯರ ಸಂಖ್ಯೆಗನುಗುಣವಾಗಿ ಅವರ ಶ್ರಮಬಲದಲ್ಲಿ ಅಷ್ಟೇನೂ ಹೆಚ್ಚಳ ಕಂಡುಬರಲಿಲ್ಲ, ಒಮ್ಮೆ ಪ್ರವರ್ಧಮಾನದಲ್ಲಿದ್ದ ಭಾರತೀಯ ಗೃಹಕೈಗಾರಿಕೆಗಳು ಹಿನ್ನೆಡೆ ಅನುಭವಿಸಬೇಕಾಯಿತು. ಇದರಲ್ಲಿ ಉತ್ಪಾದಿಸುವ ಸರಕುಗಳಿಗೆ ಯುರೋಪಿನ ಹಾಗೂ ವಿದೇಶದ ಮಾರುಕಟ್ಟೆಯೂ ಕೂಡ ಲಭ್ಯವಿಲ್ಲದಂತಾಯಿತು. ಈ ಎರಡೂ ಕಾರಣಗಳು ಭಾರತದ ಆರ್ಥಿಕತೆಯ ಮೇಲೆ ತನ್ನದೇ ಆದ ಪ್ರಭಾವ ಬೀರಿದವು. ಅದರಲ್ಲೂ ಮಹಿಳೆಯರು ತೀವ್ರ ತೊಂದರೆಗೆ ಒಳಗಾದರು, ಇದರಿಂದಾಗಿಯೇ ಮಹಿಳೆಯರು ಅಸಂಘಟಿತ ವಲಯದ ಕಡೆ ನೋಡುವಂತಾಯಿತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಬಿ.ಕೆ. ಶರ್ಮಾ ಹಾಗೂ ವಿಶ್ವಮಿತ್ತರ ಅವರು ಬರೆದ ಚೈಲ್ಡ್ ಲೇಬರ್ ಆಂಡ್ ಅರ್ಬನ್ ಇನ್ ಪಾರ್ಮಲ್ ಸೆಕ್ಟರ್ ಎಂಬ ಗ್ರಂಥದಲ್ಲಿ ಅನೌಪಚಾರಿಕ ವಲಯದ ಮೂಲದ ಬಗ್ಗೆ ವಿವರವಾಗಿ

ವಿಶ್ಲೇಷಿಸಿದ್ದಾರೆ. ಆರ್ಥಿಕ ವಲಯದಲ್ಲಿ ಔಪಚಾರಿಕ ವಲಯದ ಗುಣಲಕ್ಷಣಗಳನ್ನು ಹೊಂದದೇ ಇರುವುದೇ ಅನೌಪಚಾರಿಕ ವಲಯ ಎಂದು ಹೇಳುತ್ತಾ, ಅನೌಪಚಾರಿಕ ವಲಯ ಎಂದರೆ ಈಗಾಗಲೇ ಅನೇಕ ಲೇಖಕರು ಹೇಳಿದ ಲಕ್ಷಣಗಳನ್ನು ಇವರು ಪುನರುಚ್ಚರಿಸಿದ್ದಾರೆ. ವಿಶೇಷತೆ ಎಂದರೆ ಅನೌಪಚಾರಿಕ ಹಾಗೂ ಔಪಚಾರಿಕ ವಲಯದ ನಡುವಿನ ವ್ಯತ್ಯಾಸಗಳನ್ನು ಗುರುತಿಸುವ ಮೂಲಕ ಈ ಎರಡೂ ವಲಯದ ಅರ್ಥ ವಿವರಣೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಅನೌಪಚಾರಿಕ ವಲಯದಲ್ಲಿ ಮುಖ್ಯವಾಗಿ ಉತ್ಪಾದನಾ ಚಟುವಟಿಕೆಗಳನ್ನು ಸ್ಥಾಪಿಸಲು ಸ್ಥಳಾವಕಾಶವೇ ಇಲ್ಲದಂತಹ ಸನ್ನಿವೇಶ. ಅದಕ್ಕೆ ಬಹಳ ಸಂದರ್ಭಗಳಲ್ಲಿ ಮನೆಯ ಕಟ್ಟೆಗಳ ಮೇಲೆ, ರಸ್ತೆಯ ಬದಿಗೆ, ಹಾಗೂ ಮನೆಗಳಲ್ಲಿಯೇ ಈ ಕೆಲಸಕಾರ್ಯಗಳು ನಡೆಯುತ್ತಿರುತ್ತವೆ. ಅಲ್ಲದೇ ಹೆಚ್ಚಿನ ಕೆಲಸಗಾರರು ಮಹಿಳೆಯರು ಮತ್ತು ಮಕ್ಕಳು ಆಗಿರುತ್ತಾರೆ. ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳೆರಡೂ ಆರ್ಥಿಕತೆಯಲ್ಲಿ ದ್ವಿವಲಯಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬ ವಿಷಯವನ್ನು ಹಾರ್ಟರವರು ಘಾನಾದ ವಿದ್ಯಮಾನಗಳನ್ನು ಕುರಿತು ವಿವರಿಸುವಾಗ ಹಾಗೂ (ILO) ಕೀನ್ಯಾದ ವಿದ್ಯಮಾನಗಳನ್ನು ವಿವರಿಸುವಾಗ ಬೆಳಕಿಗೆ ತಂದಿದ್ದಾರೆ. ಆದರೆ ಈ ಮಾರುಕಟ್ಟೆಗಳಿಗೆ ಸಾಂಪ್ರದಾಯಿಕ ಹಾಗೂ ಆಧುನಿಕ ಪದಗಳ ಬದಲಿಗೆ ಔಪಚಾರಿಕ ಹಾಗೂ ಅನೌಪಚಾರಿಕ ಮಾರುಕಟ್ಟೆ ಎಂಬ ಪದಗಳ ಬಳಕೆಯೇ ಬಹು ಸೂಕ್ತವಾದದ್ದು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಮಾರುಕಟ್ಟೆಯ ರಚನೆ, ತಂತ್ರಜ್ಞಾನದ ಬಳಕೆ ಹಾಗೂ ಸರ್ಕಾರದ ಜೊತೆ ಹೊಂದಿರುವ ಸಂಬಂಧವು ಔಪಚಾರಿಕ ಹಾಗೂ ಅನೌಪಚಾರಿಕ ವಲಯದ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ನೆರವಾಗುತ್ತದೆ.[೮] ಈ ಸಂಬಂಧವಾಗಿ ಹೀದರ್ ಹಾಗೂ ವಿಜಯ್ ಜೋಷಿಯವರ ಅಭಿಪ್ರಾಯಗಳನ್ನು ಲೇಖಕರು ತಿಳಿಸುತ್ತಾರೆ. ಔಪಚಾರಿಕ ವಲಯವೆಂದರೆ ಅಧಿಕ ಉತ್ಪಾದನಾ ಸಂಸ್ಥೆಗಳು, ಕೆಲಜನ ಸ್ವಾಮ್ಯದ, ವಿದೇಶಿ ಸ್ಪರ್ಧೆ, ಅಧಿಕ ಸುಂಕ ಹಾಗೂ ಪ್ರಯೋಗಾತ್ಮಕ ನಿಯಂತ್ರಣಗಳಿಂದ ವಿನಾಯಿತಿ ಪಡೆದ ಹಾಗೂ ತಮ್ಮ ಸರಕುಗಳನ್ನು ಮಧ್ಯಮ ಹಾಗೂ ಅಧಿಕ ಆದಾಯ ಪಡೆದ ವರ್ಗದವರಿಗೆ ಮಾರಾಟ ಮಾಡುವ ಸಂಸ್ಥೆಗಳಾಗಿವೆ. ಇದಕ್ಕೆ ವಿರುದ್ಧವಾಗಿ ಅನೌಪಚಾರಿಕ ವಲಯವು ಅಧಿಕ ಸಂಖ್ಯೆಯ ಸಣ್ಣ ಸಣ್ಣ ಉತ್ಪಾದನಾ ಘಟಕಗಳಿಂದ ಕೂಡಿದ, ಮಾರುಕಟ್ಟೆ ಹೆಚ್ಚು ಸ್ಪರ್ಧಾತ್ಮಕವಾಗಿದ್ದು, ವೈವಿಧ್ಯಮಯವಾದ ಸರಕುಗಳನ್ನು ಕಡಿಮೆ ಆದಾಯದ ವರ್ಗಕ್ಕೆ ಮಾರಾಟ ಮಾಡುವಲ್ಲಿ ತೊಡಗಿರುತ್ತವೆ. ಆದರೆ ಔಪಚಾರಿಕ ವಲಯವು ಬಲವಾದ ಕಾರ್ಮಿಕ ಸಂಘಗಳ ಹಾಗೂ ಕಾರ್ಮಿಕ ಕಾನೂನುಗಳಿಂದ ರಕ್ಷಣೆಯನ್ನು ಪಡೆದಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಅನೌಪಚಾರಿಕ ವಲಯವು ಯಾವುದೇ ಶಾಸನಾತ್ಮಕವಾದ ಹಾಗೂ ಕಾರ್ಮಿಕ ಸಂಘಟನೆಗಳ ಬೆಂಬಲವನ್ನು ಪಡೆದಿರುವುದಿಲ್ಲ, ಅದರಲ್ಲಿ ಹೆಚ್ಚಿನ ಭಾಗ ಮಕ್ಕಳ ಹಾಗೂ ಮಹಿಳೆಯರ ಸೇವೆಯನ್ನೇ ಪಡೆದಿರುತ್ತಾರೆ. ಔಪಚಾರಿಕ ಮಾರುಕಟ್ಟೆಯು ಬಂಡವಾಳ ಸಾಂದ್ರವಾಗಿದ್ದು, ಆಧುನಿಕ ತಂತ್ರಜ್ಞಾನವನ್ನು ಉತ್ಪಾದನೆಯಲ್ಲಿ ಅಳವಡಿಸಿ ಕೊಂಡಿರುತ್ತವೆ. ಆದರೆ ಅನೌಪಚಾರಿಕ ವಲಯವು ಶ್ರಮಸಾಂದ್ರವಾಗಿದ್ದು, ಸಾಂಪ್ರದಾಯಕವೂ ಹಳೆಯ ಕಾಲದ ಉಪಕರಣಗಳನ್ನು ಉತ್ಪಾದನೆಯಲ್ಲಿ ಬಳಸಿಕೊಳ್ಳುವಂಥದ್ದು ಆಗಿದೆ.

ಹೀಗೆ ಔಪಚಾರಿಕ ಹಾಗೂ ಅನೌಪಚಾರಿಕ ವಲಯದಲ್ಲಿ ದುಡಿಯುವ ಮಹಿಳೆಯರನ್ನು **ಎ.ವಿ.ಜೋಸ್‌ರವರು** (೧೯೮೯) ತಮ್ಮ 'ಲಿಮಿಟೆಡ್ ಆಪ್ಷನ್ಸ್' ಕೃತಿಯಲ್ಲಿ ಮುಖ್ಯ ದುಡಿಮೆಗಾರರು ಹಾಗೂ ಅಂಚಿನ ದುಡಿಮೆಗಾರರೆಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಮುಖ್ಯ ದುಡಿಮೆಗಾರರು ಆದಾಯ ತಂದುಕೊಡುವ ಆರ್ಥಿಕ ಚಟವಟಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿರುತ್ತಾರೆ ಆದರೆ ಅಂಚಿನ ದುಡಿಮೆಗಾರರು ಆದಾಯ ತಂದುಕೊಡುವ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದರೂ ಅವರು ಪೂರ್ಣಾವಧಿ ದುಡಿಮೆಗಾರರೆಂದು ಪರಿಗಣಿಸಲ್ಪಡುವುದಿಲ್ಲ. ಭಾರತದಲ್ಲಿ ಅಧಿಕ ಸಂಖ್ಯೆ ಮಹಿಳೆಯರು ಎರಡನೇ ವಿಭಾಗಕ್ಕೆ ಸೇರಿದವರಾಗಿದ್ದಾರೆ. (ಅಸಂಘಟಿತ ವಲಯ) ಮಹಿಳೆಯರು ಹೆಚ್ಚಾಗಿ ಕೃಷಿ ವಲಯದಲ್ಲಿಯೇ ಕೇಂದ್ರೀಕೃತವಾಗಿದ್ದಾರೆ. ಏಕೆಂದರೆ ಮಹಿಳೆಯು ಯಾವ ತರಬೇತಿ ಇಲ್ಲದೇ, ಶ್ರಮ ಮಾರುಕಟ್ಟೆಯನ್ನು ಪ್ರವೇಶ ಮಾಡುತ್ತಾಳೆ. ಇದರಲ್ಲಿ ಭೂ ಒಡೆತನ ಹೊಂದಿದವರು ಹಾಗೂ ಕೂಲಿಗಾರರು ಎಂದು ವಿಂಗಡಿಸಿದ್ದಾರೆ. ಭೂ ಒಡೆತನ ಹೊಂದಿದ ಮಹಿಳೆಯರು ಗ್ರಾಮದಲ್ಲಿ ಆಸ್ತಿಯುಳ್ಳವರಾಗಿದ್ದು, ಕೂಲಿಗಾರ ಮಹಿಳೆಯರು ಭೂಒಡೆತನವಿಲ್ಲದೇ ಅಂಚಿನ ದುಡಿಮೆಗಾರರಾಗಿದ್ದಾರೆ. ಭಾರತದಂತಹ ಆರ್ಥಿಕತೆಯಲ್ಲಿ ಮಹಿಳಾ ಶ್ರಮಬಲ ವೃದ್ಧಿಯಾಗಲು ಬಡತನವೇ ಕಾರಣ ಎಂಬ ಅಭಿಪ್ರಾಯವನ್ನು ಆಗರ್ವಾಲ, ಚಕ್ರವರ್ತಿ, ಚಟರ್ಜಿ, ಸೇನ್ ಮತ್ತು ಸೇನ್‌ರವರು ವ್ಯಕ್ತಪಡಿಸಿದ್ದಾರೆ. ತಮ್ಮ ಕುಟುಂಬವನ್ನು ನಿರ್ವಹಿಸಲು ಆದಾಯ ಕಡಿಮೆಯಾಗಿ ಮಹಿಳೆ ಮತ್ತು ಮಕ್ಕಳು ಶ್ರಮದ ಮಾರುಕಟ್ಟೆಯನ್ನು ಪ್ರವೇಶಿಸುತ್ತಾರೆ.

ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಯಲ್ಲಿ ಮಹಿಳಾ ಶ್ರಮಬಲದ ಪೂರೈಕೆ ಅಧಿಕಗೊಳ್ಳಲು ಕಾರಣವೇನು? ಎಂಬ ಪ್ರಶ್ನೆಗೆ ಲೇಖಕರು ಎರಡು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ ಜನಸಂಖ್ಯಾ ಹೆಚ್ಚಳ, ಎರಡನೆಯದಾಗಿ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ. ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ತೊರೆದು ಹೊರಗೆ ಬಂದ ಮಹಿಳೆಯರು ಪುರುಷರಿಗಿಂತ ಕಷ್ಟಕರ ಕೆಲಸಗಳಲ್ಲಿ ತೊಡಗಿಸಿಕೊಂಡರು, ಆದರೂ ಅವರ ಶ್ರಮಕ್ಕೆ ತಕ್ಕ ಪ್ರತಿಫಲವೇನೂ ದೊರೆಯಲಿಲ್ಲ. ಜೊತೆಗೆ ಉತ್ತಮ ಉದ್ಯೋಗದ ಅವಕಾಶಗಳು ದೊರೆಯದೇ ಆರ್ಥಿಕತೆಯ ಕೆಳದರ್ಜೆಯ ದುಡಿಮೆಗಾರಳಾಗಿ ನೆಲೆ ಕಂಡುಕೊಳ್ಳುವಂತಾಯಿತು.

ಎಸ್.ಸಿ ಪಂಥ (೧೯೮೫) ಅವರ 'ಇಂಡಿಯನ್ ಲೇಬರ್ ಪ್ರಾಬ್ಲೆಮ್ಸ್' ಎಂಬ ಗ್ರಂಥದಲ್ಲಿ ಇಂಥಹ ದುಡಿಮೆಗಾರರ ಸಮಸ್ಯೆಗಳನ್ನು ವಿವರವಾಗಿ ಕಾಣಬಹುದು. ಮಹಿಳೆ ಮತ್ತು ಬಾಲಕಾರ್ಮಿಕರ ಪ್ರಬಂಧದಲ್ಲಿ ಲೇಖಕರು ಈ ರೀತಿಯಾಗಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಉತ್ಪಾದನಾ ಕ್ಷೇತ್ರಕ್ಕೆ ಯಂತ್ರಗಳನ್ನು ಪರಿಚಯಿಸಿದ ನಂತರವೇ ಮಹಿಳೆ ಮತ್ತು ಮಕ್ಕಳು ದುಡಿಮೆಯಲ್ಲಿ ತೊಡಗಿಸಿಕೊಂಡರು. ಇದರಿಂದ ಆಧುನಿಕ ಕಾರ್ಖಾನೆಗಳಿಗೆ ಶ್ರಮಬಲದ ಪೂರೈಕೆಯೇನೋ ಆಯಿತು ಆದರೆ ಅವರು ಈ ಹಿಂದೆ ನಿರ್ವಹಿಸುತ್ತಿದ್ದ ಗೃಹ ಕೈಗಾರಿಕೆಗಳು ನಾಶವಾದವು. ಇಂತಹ ಉದ್ಯೋಗದಲ್ಲಿ ನಿರತರಾದ ಪುರುಷರ ಕೂಲಿ ಪ್ರಮಾಣವೂ ಕೂಡ ಕಡಿಮೆಯಿದ್ದು, ಇದರಿಂದ ಕುಟುಂಬದ ನಿರ್ವಹಣೆ ಆಗದೇ ಇದ್ದುದರಿಂದ ಮಹಿಳೆಯರು ಅದಕ್ಕೆ ಸಹಾಯಕವಾಗಿ ದುಡಿಮೆಯಲ್ಲಿ ತೊಡಗಿ ಆದಾಯ

ಗಳಿಸತೊಡಗಿದರು. ಹೀಗೆ ಉದ್ಯೋಗದಾತರು ಇದರ ಪೂರ್ಣಲಾಭವನ್ನು ಪಡೆದುಕೊಂಡರು. ಇತ್ತೀಚಿನವರೆಗೂ ಆರ್ಥಿಕತೆಯಲ್ಲಿ ಮಹಿಳೆಯ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ ಎಂಬುದಕ್ಕೆ ಅನೇಕ ಕಾರಣಗಳನ್ನು ಕೊಡುತ್ತಾರೆ, ಮಹಿಳೆಯರು ತಮ್ಮ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಾತ್ರ ಶ್ರಮದ ಮಾರುಕಟ್ಟೆಯನ್ನು ಪ್ರವೇಶಿಸುತ್ತಾರೆ. ಹೀಗೆ ಅವರ ದುಡಿಮೆಯು ಪುರುಷರ ದುಡಿಮೆಗೆ ಪೂರಕವಾಗಿರುತ್ತದೆಯೇ ವಿನಃ ತಮ್ಮ ಭವಿಷ್ಯ ನಿರ್ಧರಿಸುವಲ್ಲಿ ಅಲ್ಲ, ಹೀಗಿರುವಾಗ ತುರ್ತು ಪರಿಸ್ಥಿತಿಗಳಲ್ಲಿ ಮಾತ್ರ ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳಲಾಗುತ್ತದೆ. ಆದರೆ ಮಾರುಕಟ್ಟೆಯಲ್ಲಿ ಶ್ರಮದ ಬೇಡಿಕೆ ಕಡಿಮೆಯಾದಾಗ ಅವರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ. ಹೀಗೆ ಕುಟುಂಬದಲ್ಲಿ ಹಾಗೂ ಆರ್ಥಿಕತೆಯಲ್ಲಿ ಮಹಿಳೆಯನ್ನು ಸಮತೋಲನ ಶಕ್ತಿಯಾಗಿ ಪರಿಗಣಿಸಲಾಗಿದೆ.[೯] ಹೀಗೆ ಉದ್ಯೋಗದಲ್ಲಿ ನಿರಂತರತೆ ಇಲ್ಲವಾದ ಕಾರಣ ಅದಕ್ಕೆ ಬೇಕಾಗಿರುವ ನೈಪುಣ್ಯತೆಯನ್ನು ಹೊಂದಲು ಮಹಿಳೆ ವಿಫಲಳಾಗಿದ್ದಾಳೆ. ಮಹಿಳೆಯ ಪೋಷಕರೂ ಕೂಡ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿಲ್ಲ. ಉದ್ಯೋಗದಾತರೂ ಕೂಡ ಮಹಿಳೆಗೆ ಉದ್ಯೋಗ ತರಬೇತಿಯನ್ನು ನೀಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಏಕೆಂದರೆ ಮಹಿಳೆಯ ಔದ್ಯೋಗಿಕ ಅವಧಿಯೂ ಕೂಡ ಅತೀ ಕಡಿಮೆ ಎಂಬುದು ಅವರ ಅಭಿಪ್ರಾಯವಾಗಿದೆ. ಹೀಗಾಗಿ ಮಹಿಳೆ ಕಡಿಮೆ ವೇತನದ ಉದ್ಯೋಗದಲ್ಲಿಯೇ ಉಳಿಯಲು ಕಾರಣವಾಗಿದೆ. ಹೀಗೆ ಮಹಿಳೆಯು ದೀರ್ಘ ಅವಧಿಗಳ ಹಾಗೂ ಕಡಿಮೆ ಗುಣಮಟ್ಟದ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಾ ಶೋಷಣೆಗೊಳ ಗಾಗಿದ್ದಾಳೆ. ಇದಕ್ಕೆ ಪರಿಹಾರವೆಂದರೆ ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡುವುದು ಹಾಗೂ ಅವರಿಗೆ ವೃತ್ತಿ ತರಬೇತಿಯನ್ನು ನೀಡುವುದೊಂದೇ ಮಾರ್ಗವಾಗಿದೆ ಎಂದು ತಿಳಿಸಿದ್ದಾರೆ.

ಬಾರ್ಬರಾ ಎ. ಗುಟೆಕ್ ಮತ್ತು ರಾಮಾ ಜೆ. ಜೋಷಿ : ಮಹಿಳೆಯರ ವೇತನರಹಿತ ದುಡಿಮೆಯ ಬಗ್ಗೆ ಬಾರ್ಬಾರಾ ಗುಟೆಕ್‌ರವರು ಈ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ. ಮಹಿಳೆಯರು ನಿಭಾಯಿಸುವ ವೇತನರಹಿತ ದುಡಿಮೆಯನ್ನು ಉದ್ಯೋಗದ ಒಂದು ಭಾಗವಾಗಿ ಪರಿಗಣಿಸಿದರೆ ಅದಕ್ಕೆ ಹೆಚ್ಚಿನ ಮಹತ್ವವಿದೆ. ೧೯೯೧ರ ಯು.ಎನ್.ವರದಿಯ ಪ್ರಕಾರ ಮಹಿಳೆಯು ವೇತನ ರಹಿತವಾದ ಕೌಟುಂಬಿಕ ದುಡಿಮೆಯಲ್ಲಿ ಪುರುಷರಿಗಿಂತ ಹೆಚ್ಚಿನ ಅವಧಿಗಳವರೆಗೆ ನಿರತರಾಗಿರುತ್ತಾರೆ. ಆದರೆ ಕೂಲಿಸಹಿತ ಮತ್ತು ಕೂಲಿರಹಿತ ದುಡಿಮೆಗಳೆರಡೂ ಅವಳಿಗೆ ಸಮಾಜದಲ್ಲಿ ಉತ್ತಮ ಸ್ಥಾನವನ್ನು ತಂದುಕೊಡುವಲ್ಲಿ ನೆರವಾಗಿಲ್ಲ ಎಂಬ ಹೇಳಿಕೆಯನ್ನು ನೀಡಿದೆ.

ಇದಕ್ಕೆ ಪೂರಕವಾದ ಹೇಳಿಕೆಯನ್ನು **ರಾಮಾ.ಜೆ. ಜೋಷಿಯವರ** 'ವುಮೆನ್ ಎಟ್ ವರ್ಕ' ಎಂಬ ಪ್ರಬಂಧದಲ್ಲಿ ಕಾಣಬಹುದು. ಭಾರತದ ಔದ್ಯೋಗಿಕ ಸಂರಚನೆಯ ಬಗ್ಗೆ ವಿವರಣೆ ನೀಡುತ್ತಾ, ಪುರುಷ ಮತ್ತು ಮಹಿಳೆಯರು ಒಂದೇ ಕಾರ್ಖಾನೆಯಲ್ಲಿ ದುಡಿಯುತ್ತಿದ್ದರೂ ಆ ವಾತಾವರಣದಲ್ಲಿ ಪುರುಷರ ಹಾಗೂ ಮಹಿಳೆಯರ ಕೆಲಸ ಎಂಬ ವರ್ಗೀಕರಣ ಮಾಡಲಾಗಿದೆ. ಆದರೆ ಮಹಿಳೆಯರ ಕೆಲಸವು ಕೌಶಲ್ಯರಹಿತವಾದದ್ದು, ಕಡಿಮೆ ವೇತನ ತಂದುಕೊಡುವಂತಹದ್ದು ಆಗಿದ್ದು, ಕೆಳ ಶ್ರೇಣಿಗೆ ಸೇರಿರುತ್ತದೆ. ಅವರ ವೇತನವು ಪುರುಷರಿಗಿಂತ ಕಡಿಮೆಯೇ ಇರುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಪುರುಷ ಹಾಗೂ ಮಹಿಳೆಯರ ವೇತನ ತಾರತಮ್ಯ ಕುರಿತಾಗಿ **ಜೆ. ಪಾರ್ಥಸಾರಥಿ ಮತ್ತು ಕೆ. ಅನ್ನಿ ನಿರ್ಮಲಾರವರ** ಸಂಶೋಧನಾ ಪ್ರಬಂಧದಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. ಸಾಂಪ್ರದಾಯಿಕ ಉತ್ಪಾದನಾ ಪದ್ಧತಿಯಿಂದ ಆಧುನಿಕ ಉತ್ಪಾದನಾ ಪದ್ಧತಿಗೆ ಬದಲಾವಣೆ ಹೊಂದಿದ್ದು, ಮಹಿಳೆಯರ ಮೇಲೆ ಒಳ್ಳೆಯ ಪರಿಣಾಮವನ್ನೇನೂ ಬೀರಲಿಲ್ಲ. ಆಧುನೀಕರಣದಿಂದ ಮಹಿಳೆ ಹಾಗೂ ಪುರುಷರ ಜ್ಞಾನ ಹಾಗೂ ತರಬೇತಿ ಮಟ್ಟದಲ್ಲಿ ಅಂತರ ಕಂಡುಬಂದಿತು. ಇದರಿಂದ ಮಹಿಳೆಯರು ಪುರುಷನಿಗಿಂತ ಕೆಳಮಟ್ಟದ ಸ್ಥಾನಮಾನ ಹೊಂದಿದವರು ಎಂದು ಪರಿಗಣಿಸಲಾಯಿತು ಎಂದು ಎಸ್ತರ್ ಬೋಸರಪ್ ಅವರ ಅಭಿಪ್ರಾಯ ತಿಳಿಸಿರುತ್ತಾರೆ. ತಾಂತ್ರಿಕ ಬದಲಾವಣೆಯಿಂದ ಮಹಿಳೆಯರು ಕಡಿಮೆ ವೇತನದ ಕೆಲಸಗಳಿಗೆ ನೇಮಿಸಲ್ಪಟ್ಟರು. ಏಕೆಂದರೆ ಮಹಿಳೆಗೆ ತರಬೇತಿ ಹಾಗೂ ಕೌಶಲ್ಯ ವೃದ್ಧಿಯ ಅವಕಾಶಗಳಿರಲಿಲ್ಲ, ಇದನ್ನು ಪಡೆಯುವಲ್ಲಿ ಪುರುಷ ಸಫಲನಾದನು. ಇದು ಪುರುಷ ಹಾಗೂ ಮಹಿಳೆಯರ ನಡುವಿನ ವೇತನ ತಾರತಮ್ಯಕ್ಕೆ ನಾಂದಿಯಾಯಿತು ಎಂದು ತಿಳಿಸಿದ್ದಾರೆ.

ಮಹಿಳೆಯರು ಅಸಂಘಟಿತ ವಲಯದಲ್ಲಿ ನೆಲೆಸಲು ಕಾರಣವಾದ ಕೌಟುಂಬಿಕ ಅಂಶಗಳಾವುವು? ಎಂಬುದನ್ನು **ಐ.ಎಸ್.ಎ ಚೌಡರವರು** (೧೯೯೨) ಬರೆದ ಫಾರ್ಮ್ಸ್ ಆಫ್ ಪ್ರೊಡಕ್ಷನ್ ಅಂಡ್ ವುಮೆನ್ ಲೇಬರ್ ಎಂಬ ಕೃತಿಯಲ್ಲಿ ಕಾಣಬಹುದು. ಕೈಗಾರಿಕೀಕರಣದ ಪ್ರಕ್ರಿಯೆಯಲ್ಲಿ ಮಹಿಳೆಯರ ಉದ್ಯೋಗ ಬದಲಾವಣೆ ಕುರಿತಾದ ವಿಶ್ಲೇಷಣೆ ಹೀಗಿದೆ. ಇಲ್ಲಿ ಪುರುಷರು ವೇತನ ತರುವ ಉದ್ಯೋಗದಲ್ಲಿ ತೊಡಗಿದ್ದರೆ, ಮಹಿಳೆಯರು ಕೌಟುಂಬಿಕ ಜವಾಬ್ದಾರಿಗಳಲ್ಲಿ ತೊಡಗಿದ್ದುಕೊಂಡು ಸಂದರ್ಭ ಬಂದಾಗ ಮಾತ್ರ ಉದ್ಯೋಗ ಕ್ಷೇತ್ರಕ್ಕೆ ಬರುತ್ತಾರೆ. ಅದಕ್ಕಾಗಿ ಮಹಿಳೆಯರನ್ನು ರಿಜರ್ವ್‌ಆರ್ಮಿ ಎಂದು ಸಂಭೋದಿಸಿರುತ್ತಾರೆ.[೧೦] ಹೀಗಿದ್ದಾಗ ಅವರ ದುಡಿಮೆಯು ಆಯ್ಕೆಯಿಂದ ಬಂದಿರುವುದಿಲ್ಲ, ತನ್ನ ಕುಟುಂಬವನ್ನು ಹಾಗೂ ಮಕ್ಕಳನ್ನು ಪೋಷಿಸಲು ಮಹಿಳೆಗೆ ಈ ದುಡಿಮೆ ಅನಿವಾರ್ಯವಾಗಿರುತ್ತದೆ. ಕೌಟುಂಬಿಕ ಹೊರೆ ಹೆಚ್ಚಾದ ಕಾರಣ ಮಹಿಳೆಗೆ ತಾನು ಬಯಸಿದ ಸಂಘಟಿತ ವಲಯದಲ್ಲಿ ಉದ್ಯೋಗ ಪಡೆಯಲು ಬೇಕಾದ ಅರ್ಹತೆಯನ್ನು ಗಳಿಸಲು ಸಾಧ್ಯವಾಗುವುದಿಲ್ಲ, ಅದಕ್ಕೆ ಕೆಲವೇ ಕೆಲವು ಮಹಿಳೆಯರು ಔಪಚಾರಿಕ ವಲಯದ ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ವೃತ್ತಿ ಪರಿಣತಿಯನ್ನು ಪುರುಷರು ಪಡೆದವರಾದ್ದರಿಂದ ಅವರು ಅಧಿಕ ಆದಾಯದ ಹಾಗೂ ಶಾಸನಾತ್ಮಕವಾದ ಉದ್ಯೋಗ ಭದ್ರತೆಯನ್ನು ಪಡೆದು ಔಪಚಾರಿಕ ವಲಯದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಈ ರೀತಿಯ ಕೆಲಸಗಳು ಮಹಿಳೆಯರಿಗೆ ದೊರಕದೇ ಅನೌಪಚಾರಿಕ ವಲಯದ ಸುಲಭವಾಗಿ ದೊರಕುವ ವೃತ್ತಿಗಳನ್ನು ಕೈಗೊಳ್ಳುತ್ತಾರೆ. ಈ ವಲಯದಲ್ಲಿ ಮಹಿಳೆಯು ಅನೇಕ ರೀತಿಯ ತಾರತಮ್ಯಗಳಿಗೆ ಬಲಿಯಾಗುತ್ತಾಳೆಂದು ಹೇಳುವುದರ ಮೂಲಕ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಹಿಳೆ ಹೇಗೆ ಶೋಷಿಸಲ್ಪಡುತ್ತಾಳೆ ಹಾಗೂ ಇದರ ಪರಿಣಾಮ ರಾಷ್ಟ್ರದ ಪ್ರಗತಿಗೆ ಹೇಗೆ ಮಾರಕವಾಗಿದೆ ಎಂಬುದರ ವಿಶ್ಲೇಷಣೆ ಮಾಡಿದ್ದಾರೆ.

ಈ ರೀತಿಯ ಮಹಿಳೆಯರ ಶೋಷಣೆಯು ಕೃಷಿ ಕ್ಷೇತ್ರದಲ್ಲಿ ಹೇಗೆ ಉಂಟಾಗುತ್ತದೆ ಎಂಬುದನ್ನು **ಬಿನಿತಾ ಶರ್ಮಾ** (೧೯೯೩)ರವರು ಬರೆದಿರುವ 'ಎಕ್ಸಪ್ಲಾಯಿಟೇಷನ್ ಆಫ್ ವುಮೆನ್ ಲೇಬರ್

ಇನ್ ಇಂಡಿಯಾ' ಕೃತಿಯಲ್ಲಿ ಕಾಣಬಹುದು. ಇದರಲ್ಲಿ ಕೃಷಿಯಲ್ಲಿ ನಿರತರಾದ ಮಹಿಳೆಯರ ಸ್ಥಿತಿಗತಿಗಳ ವಿವರಣೆ ಇದೆ. ಅದರಲ್ಲೂ ಮುಖ್ಯವಾಗಿ ಹಸಿರು ಕ್ರಾಂತಿಯ ನಂತರ ಬಿಹಾರದ ವ್ಯವಸಾಯ ಕ್ಷೇತ್ರದಲ್ಲಿ ಆದ ಬದಲಾವಣೆಗಳು ಹಾಗೂ ಅದು ಮಹಿಳೆಯರ ಮೇಲೆ ಯಾವ ಪರಿಣಾಮ ಬೀರಿತು ಎನ್ನುವುದರ ವಿಶ್ಲೇಷಣೆ ಇದೆ. ೬೦ರ ದಶಕದಲ್ಲಿ ಕೃಷಿ ಉತ್ಪಾದನೆಯಲ್ಲಿ ಹಸಿರು ಕ್ರಾಂತಿಯಿಂದ ಅಭೂತ ಪೂರ್ವ ಹೆಚ್ಚಳವೇನೋ ಉಂಟಾಯಿತು. ಆದರೆ ಅಷ್ಟೇ ಕಹಿ ಅನುಭವ ಸಮಾಜ ಜೀವನದಲ್ಲಾಯಿತು ಎಂದು ತಿಳಿಸಿದ್ದಾರೆ. ಅದರಲ್ಲೂ ಪುರುಷರಿಗಿಂತ ಮಹಿಳಾ ದುಡಿಮೆಗಾರರು ಹೆಚ್ಚು ಕಷ್ಟ ಅನುಭವಿಸಬೇಕಾಯಿತು. ಏಕೆಂದರೆ ಯಾಂತ್ರೀಕರಣದಿಂದ ಬಹುತೇಕ ಮಹಿಳೆಯರು ತಮ್ಮ ಕೆಲಸವನ್ನು ಕಳೆದುಕೊಂಡಿರುವುದಲ್ಲದೇ ಕಷ್ಟಕರವಾದ ಕಲ್ಲು ಒಡೆಯುವ ಹಾಗೂ ಕಟ್ಟಡ ನಿರ್ಮಾಣದಂತಹ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು ಎಂದು ಮಹಿಳೆಯರ ಹದಗೆಟ್ಟ ಜೀವನ ಸ್ಥಿತಿಯನ್ನು ವಿವರಿಸಿದ್ದಾರೆ. ಇಂತಹ ಶೋಷಿತರ ಸ್ಥಿತಿಗತಿ ಸುಧಾರಿಸಲು ಅವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು ಸಂವಿಧಾನಾತ್ಮಕ ಪ್ರಯತ್ನಗಳೇನೋ ನಡೆದಿವೆ, ಆದರೆ ಕೃಷಿ ಕಾರ್ಮಿಕರ ಪಾಲಿಗೆ ಅವು ಬರಿ ಸಾಮಾಜಿಕ ದಾಖಲೆಗಳಾಗಿ ಉಳಿದವು ಎಂದಿದ್ದಾರೆ.

ಸರಕಾರದ ಕಾರ್ಯಯೋಜನೆಗಳ ವೈಫಲ್ಯತೆಯ ಹೊರತಾಗಿಯೂ ದುಡಿಮೆಗಾರರು ಸಂಘಟಿತರಾಗುವ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಬಹುದೆಂಬ ಅಭಿಪ್ರಾಯವನ್ನು ಈ ಕೆಳಗಿನ ಲೇಖನದಲ್ಲಿ ಕಾಣಬಹುದು.

ಸುಜಾತಾ ಗೊತಾಸ್ಕರ್ (೧೯೯೨)ಅವರ ಸಂಪಾದಿತ ಕೃತಿ 'ಸ್ಟ್ರಗಲ್ಸ್ ಆಫ್ ವುಮೆನ್ ಎಟ್ ವರ್ಕ'ನಲ್ಲಿ ರೇನನಾ ಜಾಬ್ವಾಲಾರವರ ಅಭಿಪ್ರಾಯಗಳು ಈ ಕೆಳಗಿನಂತಿವೆ. ಅನೌಪಚಾರಿಕ ವಲಯವು ಆರ್ಥಿಕತೆಯ ಎಲ್ಲಾ ವಲಯಗಳಲ್ಲಿಯೂ ವಿಸ್ತರಿಸಿದೆ. ಗ್ರಾಮ, ನಗರ, ಅಡವಿ, ಗುಡ್ಡಬೆಟ್ಟಗಳು, ಮೈದಾನ ಪ್ರದೇಶ ಹಾಗೂ ಗಣಿಗಳು ಎಲ್ಲಾ ಕಡೆ ಇರುವುದು ಅನೌಪಚಾರಿಕ ವಲಯ. ಅನೌಪಚಾರಿಕ ವಲಯದ ದುಡಿಮೆಗಾರರನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ. ಮೊದಲನೆಯದಾಗಿ ಸರಕುಗಳನ್ನು ಮಾರುವವರು, ಉದಾ: ತರಕಾರಿ, ಹಣ್ಣು, ಮೀನು, ತತ್ತಿ ಹಾಗೂ ಸಿದ್ಧ ಉಡುಪುಗಳು ಮುಂತಾದವು. ಎರಡನೆಯದಾಗಿ ಗೃಹ ಆಧಾರಿತ ಉತ್ಪಾದನಾಕಾರರು, ಉದಾ: ಬೀಡಿ ಕಟ್ಟುವವರು, ಅಗರಬತ್ತಿ ತಯಾರಕರು, ಸಿದ್ಧ ಉಡುಪು ತಯಾರಕರು, ಚಿನಿವಾರರು, ಕರಕುಶಲ ವಸ್ತು ತಯಾರಕರು. ಮೂರನೆಯದಾಗಿ ಕಾರ್ಮಿಕರು, ಅಂದರೆ ಕೃಷಿಕಾರ್ಮಿಕರು, ಕಟ್ಟಡ ನಿರ್ಮಾಣಕಾರರು, ಕಲ್ಲು ಒಡೆಯುವವರು ಇತ್ಯಾದಿ. ಇಂತಹ ದುಡಿಮೆಗಾರರನ್ನು ಸಂಘಟಿಸುವ ಪ್ರಯತ್ನಗಳು ನಡೆದಿವೆ. ಆದರೆ ಕೆಲವು ಘಟನೆಗಳನ್ನು ಹೊರತುಪಡಿಸಿ ಮಹಿಳೆಯರು ಇಂತಹ ಸಂಘಟನೆಗಳಿಂದ ಹೊರಗುಳಿದಿರುವುದೇ ಹೆಚ್ಚು.

ಮಹಿಳಾ ಸ್ವ-ಉದ್ಯೋಗಿಗಳ ಸಂಘ(ಸೇವಾ) ೧೯೭೨ರಲ್ಲಿ ನೋಂದಣಿಯಾಯಿತು. ಸ್ವ ಉದ್ಯೋಗಿ ಹೆಸರೇ ಸೂಚಿಸುವಂತೆ ಇದು ದುಡಿಮೆಗಾರರ ಗೌರವವನ್ನು ಎತ್ತಿ ಹಿಡಿಯುತ್ತದೆ. ಇದರ ಪ್ರಮುಖ ಧೋರಣೆಗಳೆಂದರೆ ಹೋರಾಟ ಹಾಗೂ ಅಭಿವೃದ್ಧಿ. ವ್ಯಕ್ತಿ ತನ್ನ ಹಕ್ಕುಗಳಿಗಾಗಿ ಈ ಸಂಘಟನೆಯ

ಮೂಲಕ ಹೋರಾಡಬಹುದು. ಏಕೆಂದರೆ 'ಸೇವಾ' ಹೋರಾಟವು ಅಭಿವೃದ್ಧಿಯ ಪ್ರಮುಖ ಭಾಗವೆಂದು ತಿಳಿದಿದೆ. ಅನ್ಯಾಯ, ಅತ್ಯಾಚಾರ, ಆತ್ಮ ಗೌರವಕ್ಕೆ ಧಕ್ಕೆ ಇಂತಹ ಪರಿಸ್ಥಿತಿಗಳಲ್ಲಿ ಹೋರಾಟ ಅನಿವಾರ್ಯ. 'ಸೇವಾ'ದ ಮುಖ್ಯ ತತ್ವ 'ಸಂಘಟನೆ' 'ಸಂಘಟನೆ' 'ಸಂಘಟನೆ' ಎಂದು ಲೇಖಕರ ಅಭಿಪ್ರಾಯವಾಗಿದೆ. ಅಲ್ಲದೇ ಅನೌಪಚಾರಿಕ ವಲಯದ ದುಡಿಮೆಗಾರರು ಅವಿದ್ಯಾವಂತರಾಗಿದ್ದು, ವೃತ್ತಿ ಪರಿಣತಿ ಹಾಗೂ ತರಬೇತಿಯನ್ನು ಹೊಂದಿಲ್ಲವಾದ್ದರಿಂದ ಔಪಚಾರಿಕ ವಲಯದಿಂದ ಹೊರ ನೂಕಲ್ಪಟ್ಟು ಅನೌಪಚಾರಿಕ ಮಾರುಕಟ್ಟೆಯನ್ನು ಹುಡುಕಿಕೊಂಡು ಬಂದ ವಲಸೆಗಾರರಾಗಿರುತ್ತಾರೆಂದು ಲೇಖಕರು ಅಭಿಪ್ರಾಯ ಪಡುತ್ತಾರೆ.

ಹೀಗೆ ವಲಸೆಬಂದ ಮಹಿಳೆಯರು ಅಸಂಘಟಿತ ವಲಯದಲ್ಲಿ ಹೇಗೆ ಶೋಷಣೆಗೊಳಗಾಗುತ್ತಾರೆಂಬುದನ್ನು **ಸ್ವಪ್ನ ಮುಖ್ಯೋಪಾಧ್ಯಾಯರವರ** 'ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್' ಎನ್ನುವ ಪ್ರಬಂಧದಲ್ಲಿ ಕಾಣಬಹುದು. ಶೇ. ೯೦ರಷ್ಟು ಮಹಿಳಾ ದುಡಿಮೆಗಾರರು ವಾರಕ್ಕೆ ೪೨ ಗಂಟೆಗಳಿಗಿಂತಲೂ ಅಧಿಕ ಸಮಯ ಉದ್ಯೋಗದಲ್ಲಿ ನಿರತರಾಗಿರುತ್ತಾರೆ ಎಂಬ ವಿಷಯ ತಿಳಿಸಿದ್ದಾರೆ. ಅಧಿಕ ಸಂಖ್ಯೆಯ ಶ್ರಮ ಬಲವು ಬಡವರ್ಗಕ್ಕೆ ಸೇರಿದ್ದು, ಕುಟುಂಬ ನಿರ್ವಹಣೆಗಾಗಿ ಉದ್ಯೋಗದಲ್ಲಿ ನಿರತರಾಗಿರುತ್ತಾರೆ ಹಾಗೂ ಕಡಿಮೆ ಕೂಲಿಯ ಕೆಲಸದಲ್ಲಿ ಅಧಿಕ ಸಮಯದವರೆಗೆ ದುಡಿಯುತ್ತಿರುತ್ತಾರೆ. ಇವರು ಹೆಗಲ ಮೇಲೆ ತಮ್ಮ ಕುಟುಂಬವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತಿರುತ್ತಾರೆ. ಇಂತಹ ಮಹಿಳೆಯರನ್ನು ಲೇಖಕರು 'ಟಾರ್ಗೆಟ್ ಅರ್ನರ್ಸ್' ಎಂದು ಸಂಭೋದಿಸಿದ್ದಾರೆ. ಏಕೆಂದರೆ ಒಂದು ಬಾರಿ ಈ ವಲಯಕ್ಕೆ ಪ್ರವೇಶಿಸಿದರೆ ಅವರು ಕಡಿಮೆ ಕೂಲಿ, ಗಳಿಕೆಯಲ್ಲಿ ಬದಲಾಗದ ಸ್ಥಿತಿ, ಅಧಿಕ ಅವಧಿಯ ಕೆಲಸ, ಕೆಲಸದ ಅದೃಶ್ಯತೆ ಹೀಗೆ ಮಹಿಳೆಯರು ಒಂದಾದ ಮೇಲೊಂದರಂತೆ ಅನಾನುಕೂಲತೆಗಳನ್ನು ಎದುರಿಸುತ್ತಾ ಹೋಗುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಘಾಲೇಂದ್ರ ಕೆ. ಸೂಡಾನ್ ಹಾಗೂ ನಿರ್ಮಲಾ ಕೆ. ಗುಪ್ತಾರವರು ಬರೆದ 'ವುಮೆನ್ ಎಟ್ ವರ್ಕ ಇನ್ ಡೆವಲಪಿಂಗ್ ಎಕಾನಾಮಿ' ಎಂಬ ಗ್ರಂಥದಲ್ಲಿ ಲೇಖಕರು ಭಾರತದಲ್ಲಿ ಮಹಿಳೆಯ ಸ್ಥಿತಿಗತಿಗಳನ್ನು ಸುಧಾರಿಸಲು ಏನೇ ಕಾನೂನುಗಳನ್ನು ರೂಪಿಸಿದರೂ ಆರ್ಥಿಕ ಅಭಿವೃದ್ಧಿಯ ಫಲಾಫಲಗಳನ್ನು ಪಡೆಯುವಲ್ಲಿ ಮಹಿಳೆ ಪುರುಷನಿಗಿಂತ ಹಿಂದೆ ಬಿದ್ದಿದ್ದಾಳೆ ಎಂಬ ಅಂಶವನ್ನು ಬಹಿರಂಗ ಪಡಿಸಿದ್ದಾರೆ. ಮೂರನೇ ಜಗತ್ತಿನ ಗ್ರಾಮೀಣ ಮಹಿಳೆಯರು ಬದುಕಲು ಹೋರಾಟ ನಡೆಸುತ್ತಿದ್ದಾರೆ. ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಅಳವಡಿಕೆಯಿಂದ ಮಹಿಳೆಯರು ಅಂಚಿನ ದುಡಿಮೆಗೆ ತಳ್ಳಲ್ಪಟ್ಟರು. ಹೊಸ ಹೊಸ ಯಂತ್ರಗಳನ್ನು ಬಳಸುವ ಕಲೆಯನ್ನು ಮಹಿಳೆ ಮೈಗೂಡಿಸಿಕೊಳ್ಳಲು ವಿಫಲಳಾಗಿದ್ದು, ಅವಳ ಆರ್ಥಿಕ ಸ್ವಾತಂತ್ರ್ಯಕ್ಕೆ ಹಿನ್ನಡೆಯಾಯಿತು. ಹೀಗಾಗಿ ಮಹಿಳೆಯರ ಉತ್ಪಾದನಾ ಶಕ್ತಿ ಕ್ರಮೇಣ ಕಡಿಮೆಯಾಗುತ್ತಾ, ಕೃಷಿ ಚಟುವಟಿಕೆಗಳಿಂದ ಹಿಂದೆ ಸರಿದು ಗೃಹಕೃತ್ಯಗಳ ಕಡೆ ಗಮನ ಕೊಡಬೇಕು ಇಲ್ಲದೇ ಹೋದರೆ ಗ್ರಾಮವನ್ನು ಬಿಟ್ಟು ಜೀವನೋಪಾಯಕ್ಕಾಗಿ ಪಟ್ಟಣಕ್ಕೆ ವಲಸೆ ಬರಬೇಕು. ಹೀಗೆ ಜೀವನದ ದಾರಿಯನ್ನು ಆರಿಸಿಕೊಳ್ಳುವ ಸ್ಥಿತಿ ಮಹಿಳೆಗೆ ಒದಗಿ ಬಂದಿತು. ಮಹಿಳೆಯ ಈ ಹದಗೆಟ್ಟ ಸ್ಥಿತಿಗೆ ನೂತನ ತಂತ್ರಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿದ್ದೇ ಕಾರಣ ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.

ಬಿಟೆಕ್ ಡಿಬ್ರಿ ಹಾಗೂ ಐ.ಡಿ. ಕೌಶಿಕ್ ಅವರು ಸಂಪಾದಿಸಿದ 'ರಿಫಾರ್ಮಿಂಗ್ ದ ಲೇಬರ್ ಮಾರ್ಕೆಟ್' ಎನ್ನುವ ಗ್ರಂಥದಲ್ಲಿ ಶ್ರಮಶಕ್ತಿಯಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ದರ ಹಾಗೂ ಆರ್ಥಿಕ ಉದಾರೀಕರಣದ ಕುರಿತಾಗಿ ಅಮರೇಶ್ ಡೋಬೇ ಅವರ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ. ಮಹಿಳೆಯ ವಿದ್ಯಾಭ್ಯಾಸವು ಅವಳ ಉದ್ಯೋಗ ಭಾಗವಹಿಸುವಿಕೆ ಮೇಲೆ ಹೇಗೆ ಪ್ರಭಾವ ಬೀರುತ್ತದೆ, ಇದರ ಪರಿಣಾಮ ತಲಾ ಆದಾಯ ಹಾಗೂ ರಾಷ್ಟ್ರೀಯ ಆದಾಯದ ಹೆಚ್ಚಳಕ್ಕೆ ದಾರಿ ಮಾಡಿ ಕೊಡುತ್ತದೆ ಎನ್ನುವ ವಿಶ್ಲೇಷಣೆ ಇದೆ. ಮಹಿಳೆಯ ವಿದ್ಯಾಭ್ಯಾಸ ಹಾಗೂ ಶ್ರಮ ಶಕ್ತಿಯಲ್ಲಿ ಪಾಲ್ಗೊಳ್ಳುವಿಕೆಯು ಆರ್ಥಿಕ ಅಭಿವೃದ್ಧಿಯ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಹಿಳಾ ಶ್ರಮಶಕ್ತಿಯ ಉದ್ಯೋಗ ಭಾಗವಹಿಸುವಿಕೆ ದರದಲ್ಲಿ ಹೆಚ್ಚಳ ಕಂಡು ಬರುತ್ತದೆ. (ಎರೆನ್ ಬರ್ಗ ಮತ್ತು ಸ್ಮಿತ್ ೨೦೦೦) ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಹಿಳೆಯರ ಉದ್ಯೋಗ ಭಾಗವಹಿಸುವಿಕೆ ದರ ಕಡಿಮೆಯಾಗುತ್ತದೆ. ಅದರಲ್ಲೂ ಭಾರತದಲ್ಲಿ ೧೯೯೯-೨೦೦೦ ವರ್ಷದ ಅಂದಾಜಿನ ಪ್ರಕಾರ (FWPR) ಮಹಿಳಾ ಉದ್ಯೋಗ ಭಾಗವಹಿಸುವಿಕೆ ದರವು ಶೇ. ೩೦.೫೪ರಷ್ಟು ಇಳಿಕೆ ಕಂಡಿದೆ. ಆದರೆ ೧೯೮೩ರಲ್ಲಿ ಇದು ಶೇ. ೩೪ರಷ್ಟು ಇದ್ದಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶ್ರಮಶಕ್ತಿಯಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳಲು ಕಾರಣ ಅವರು ವಿದ್ಯಾವಂತರಾಗಿದ್ದು, ವೃತ್ತಿ ನೈಪುಣ್ಯತೆ ಪಡೆದಿರುವುದು. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಹಿಳೆಗೆ ವಿದ್ಯೆ ಹಾಗೂ ವೃತ್ತಿ ನೈಪುಣ್ಯತೆ ಕೊರತೆಯಿಂದ ಶ್ರಮಶಕ್ತಿಯಲ್ಲಿ ಭಾಗವಹಿಸುವಿಕೆ ದರ ಕಡಿಮೆ ಇರುತ್ತದೆ. ವಿದ್ಯೆ ಹಾಗೂ ವೃತ್ತಿಪರ ತರಬೇತಿಗಳಿಂದ ಮಾತ್ರ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುವಂತೆ ಮಾಡಬಹುದೆಂದು ತಿಳಿಸಿದ್ದಾರೆ. ಅಸಂಘಟಿತ ವಲಯದಲ್ಲಿ ಮಹಿಳೆಯರು ಹೆಚ್ಚಾಗಿ ಕಂಡುಬರಲು ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಈ ಕೆಳಗಿನ ಲೇಖನದಲ್ಲಿ ಕಾಣಬಹುದು.

ತಲ್ವಾರ್ ಸಾಬಣ್ಣನವರು ಲಿಂಗ ತಾರತಮ್ಯದ ಕುರಿತು ಈ ಕೆಳಗಿನಂತೆ ವಿವರಿಸಿದ್ದಾರೆ. ೧೯೬೭ ನವೆಂಬರ್‌ನಲ್ಲಿ ಅಮೇರಿಕಾ ಸಂಸ್ಥಾನವು ಮಹಿಳೆಯ ವಿರುದ್ಧದ ತಾರತಮ್ಯ ನಿವಾರಣೆಗೆ ಘೋಷಣೆಯನ್ನು ಹೊರಡಿಸಿದಾಗ್ಯೂ ಮಹಿಳೆಗೆ ಯಾವ ರೀತಿಯ ಸಮಾನತೆ ಅವಕಾಶಗಳೂ ದೊರೆತಿಲ್ಲ. ಉದ್ಯೋಗ ಕ್ಷೇತ್ರಕ್ಕೆ ಬೇಕಾಗುವ ತರಬೇತಿ, ಕೌಶಲ್ಯ ಅನುಭವಗಳನ್ನು ಪುರುಷರು ಕುಟುಂಬ ಹಂತದಲ್ಲಿಯೇ ಮೈಗೂಡಿಸಿಕೊಂಡಿರುತ್ತಾರೆ. ಆದರೆ ಮಹಿಳೆಗೆ ಕುಟುಂಬ ನಿರ್ವಹಣಾ ತರಬೇತಿ ಹೊರತುಪಡಿಸಿ ಬೇರೆ ಯಾವ ತರಬೇತಿಯೂ ಸಿಗುವುದಿಲ್ಲ, ಯಾವಾಗ ಕುಟುಂಬಕ್ಕೆ ತನ್ನ ದುಡಿಮೆಯ ಅಗತ್ಯತೆ ತಲೆದೋರುತ್ತದೆಯೋ ಆಗ ಉದ್ಯೋಗ ರಂಗಕ್ಕೆ ಧುಮುಕುತ್ತಾಳೆ. ಯಾವ ಪೂರ್ವ ಸಿದ್ಧತೆಯೂ ಇರದ ಕಾರಣ ಮಹಿಳೆ ಪುರುಷನಿಗಿಂತ ಕಡಿಮೆ ಮಟ್ಟದ ಉದ್ಯೋಗದಲ್ಲಿ ತೊಡಗಿಸಿಕೊಳ್ಳುತ್ತಾಳೆ. ಸಾಂಸ್ಕೃತಿಕ, ಸಾಂಪ್ರದಾಯಿಕ, ಸಾಮಾಜಿಕ ನಂಬಿಕೆಗಳು ಮಹಿಳೆಯು ಔದ್ಯೋಗಿಕ ಕ್ಷೇತ್ರದಲ್ಲಿ ತಾರತಮ್ಯವನ್ನು ಎದುರಿಸಲು ಕಾರಣವಾಗಿವೆ. ಹೀಗೆ ಶ್ರಮದ ಮಾರುಕಟ್ಟೆಯನ್ನು ಕೊನೆಯದಾಗಿ ಪ್ರವೇಶಿಸಿದರೂ ಮೊದಲನೆಯದಾಗಿ ಹೊರ ಹಾಕಲ್ಪಡುವಳು ಎಂದು ಅಭಿಪ್ರಾಯಪಟ್ಟಿದ್ದಾರೆ.

ಅನಿತಾ ಆರ್ಯರವರು ಬರೆದ 'ವುಮೆನ್ ಇನ್ ದಿ ಅನ್‌ಅರ್ಗನೈಸ್ಡ್ ಸೆಕ್ಟರ್' ಪ್ರಬಂಧದಲ್ಲಿ ಈ ರೀತಿಯಾಗಿ ಅಭಿಪ್ರಾಯಪಟ್ಟಿರುತ್ತಾರೆ. ಮಹಿಳಾ ಸ್ವ ಉದ್ಯೋಗಿಗಳ ರಾಷ್ಟ್ರೀಯ ಸಮಿತಿ ಅಂದಾಜಿನ ಪ್ರಕಾರ ಶೇ. ೯೪ರಷ್ಟು ಮಹಿಳೆಯರು ಅತಿಯಾಗಿ ಶೋಷಣೆಗೊಳಗಾಗುತ್ತಿರುವ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಆದರೆ ಕೆಲವೇ ಕಾನೂನುಗಳು ಹಾಗೂ ಕಾರ್ಮಿಕ ಸಂಘಗಳು ಮಾತ್ರ ಅಸಂಘಟಿತ ವಲಯದ ಪರ ಧ್ವನಿ ಎತ್ತಿವೆ. ಕೌಟುಂಬಿಕ ಜವಾಬ್ದಾರಿಗಳಿಂದ ಮಹಿಳೆ ತನಗೆ ಬೇಕಾದ ಔದ್ಯೋಗಿಕ ತರಬೇತಿ ಪಡೆಯುವಲ್ಲಿ ವಿಫಲಳಾಗುತ್ತಾಳೆ. ಇದರಿಂದ ಅವಳ ಆರ್ಥಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ.

ಸುಭಾಶಿನಿ ಮಹಾಪಾತ್ರ ಅವರ ಕೃತಿಯಲ್ಲಿ ಮಹಿಳೆಯರು ಹೇಗೆ ತಾರತಮ್ಯಕ್ಕೆ ಒಳಗಾಗಿದ್ದಾರೆ ಎಂಬ ವಿವರಣೆ ಇದೆ. ೧೯೫೦ ಮತ್ತು ೧೯೬೦ರ ದಶಕಗಳಲ್ಲಿ ಮಹಿಳೆಯರು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿರುವ ಕುರಿತು ಕೆಲವು ಸಮ್ಮೇಳನಗಳಲ್ಲಿ ಚರ್ಚಿಸಲಾಯಿತು. ಎಸ್ತರ್ ಬೋಸರಪ್‌ರವರ 'ವುಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್' ಎನ್ನುವ ಗ್ರಂಥದಲ್ಲಿ ಮಹಿಳೆಯರ ತಾರತಮ್ಯ ಕುರಿತು ವಿವರಣೆ ನೀಡಲಾಗಿದೆ. ಆಧುನೀಕರಣದ ದುಷ್ಪರಿಣಾಮಗಳು ಮಹಿಳೆಯ ಸ್ಥಾನಮಾನವನ್ನು ಕೆಳಮಟ್ಟಕ್ಕಿಳಿಸಿ ಪುರುಷರನ್ನು ಹೇಗೆ ಮೇಲ್ದರ್ಜೆಗೇರಿಸಿವೆ ಎಂಬುದನ್ನು ತಿಳಿಯಪಡಿಸಿದ್ದಾರೆ. ಅಭಿವೃದ್ಧಿ ಕಾರ್ಯದಲ್ಲಿ ಲಿಂಗ ತಾರತಮ್ಯದ ಕುರಿತಾಗಿ ವಿವರಣೆ ನೀಡಿದ ಪ್ರಥಮ ಹೆಜ್ಜೆ ಬೋಸರಪ್ ಅವರದಾಗಿದೆ, ಹೊಸ ತಂತ್ರಜ್ಞಾನದ ಕುರಿತಂತೆ ಮಾಹಿತಿಗಳು ಹಾಗೂ ಸಲಕರಣೆಗಳು ಪುರುಷರಿಗೆ ಲಭ್ಯವಾದಂತೆ ಮಹಿಳೆಯರಿಗೆ ಲಭ್ಯವಾಗದೇ ಇದ್ದುದು ವಿಷಾದಕರ ಎಂದಿದ್ದಾರೆ. ಮಹಿಳೆಯರಿಗೆ ತಂತ್ರಜ್ಞಾನ, ತರಬೇತಿ ಅವಶ್ಯಕತೆ ಇದೆ ಎಂಬುದೂ ಲೇಖಕರ ಅಭಿಪ್ರಾಯ.

ಉಷಾ ಶರ್ಮಾರವರ ಕೃತಿಯ್ಲಲಿ ಮಹಿಳಾ ಸ್ವ ಉದ್ಯೋಗಿಗಳ ಹಾಗೂ ಅಸಂಘಟಿತ ವಲಯದ ಮಹಿಳೆಯರ ಕುರಿತಾದ ರಾಷ್ಟ್ರೀಯ ಸಮಿತಿ ಸಭೆಯಲ್ಲಿ ನಡೆದ ಘಟನೆಯನ್ನು ಈ ಕೆಳಗಿನಂತೆ ವಿವರಿಸಿದ್ದಾರೆ. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಈ ರೀತಿಯಾಗಿ ತಿಳಿಸಿದರು. ನಮ್ಮ ರಾಜ್ಯದಲ್ಲಿ ಯಾವ ಮಹಿಳೆಯರೂ ಅಸಂಘಟಿತ ವಲಯದಲ್ಲಿ ದುಡಿಯುತ್ತಿಲ್ಲ ಎಂದು. ಅದಕ್ಕೆ ಸಮಿತಿಯ ಸದಸ್ಯರು ಈ ರೀತಿಯಾಗಿ ಪ್ರಶ್ನಿಸಿದರು, ನಿಮ್ಮ ರಾಜ್ಯದಲ್ಲಿ ಯಾವ ಮಹಿಳೆಯರೂ ಕಟ್ಟಿಗೆ ತರಲು ಕಾಡಿಗೆ ಹೋಗುವುದಿಲ್ಲವೇ? ಗ್ರಾಮೀಣ ಭಾಗದಲ್ಲಿ ಯಾವ ಮಹಿಳೆಯೂ ದನಕರುಗಳನ್ನು ಸಾಕುತ್ತಿಲ್ಲವೇ? ಎಂದು. ಅದಕ್ಕೆ ನಿರ್ದೇಶಕರು ಅನೇಕ ಮಹಿಳೆಯರು ಈ ರೀತಿಯ ಕೆಲಸದಲ್ಲಿ ತೊಡಗಿದ್ದಾರೆ ಎಂದರು. ಹೀಗೆ ಕೌಟುಂಬಿಕ ಚಟುವಟಿಕೆಗಳು ದೃಶ್ಯಗೋಚರವಲ್ಲದ ರೂಪದಲ್ಲಿವೆ. ಈ ಎಲ್ಲಾ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಂಡರೆ ಶೇ. ೮೮ರಷ್ಟು ಗ್ರಾಮೀಣ ಭಾಗದ ಮಹಿಳೆಯರು ಶೇ. ೬೬ರಷ್ಟು ನಗರ ಪ್ರದೇಶಗಳ ಮಹಿಳೆಯರು ಆರ್ಥಿಕವಾಗಿ ಉತ್ಪಾದನಾಕಾರರೆಂದು ಪರಿಗಣಿಸಲ್ಪಡುತ್ತಾರೆ ಎಂದು ತಿಳಿಸಿದ್ದಾರೆ.

ಅಜಿತ್‌ಕುಮಾರ್ ಸಿನ್ಹಾರವರು ಔದ್ಯೋಗಿಕ ಕ್ಷೇತ್ರದ ಲಿಂಗ ತಾರತಮ್ಯದ ಕುರಿತಾಗಿ ಚಿಂತನೆ ನಡೆಸಿದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ಶೇ. ೫೮ರಷ್ಟು ಶ್ರಮಿಕರು ಕೃಷಿ ಕ್ಷೇತ್ರದಲ್ಲಿ ನೆಲೆಯೂರಿದ್ದಾರೆ. ಇದರಲ್ಲಿ ಶೇ. ೪೨.೨ರಷ್ಟು ಪುರುಷ ಸಾಗುವಳಿದಾರರಿದ್ದರೆ, ಕೇವಲ ೩೬.೫ರಷ್ಟು ಮಹಿಳಾ ಸಾಗುವಳಿದಾರರಿದ್ದಾರೆ, ಇನ್ನು ಮುಂದುವರೆದು ಹೇಳುತ್ತಾರೆ, ಶೇ. ೪೩.೪ರಷ್ಟು ಮಹಿಳೆಯರು ಕೃಷಿಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದರೆ, ಶೇ.೨೭.೫ರಷ್ಟು ಮಾತ್ರ ಪುರುಷರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಮಹಿಳೆ ಕೆಳಮಟ್ಟದ ದುಡಿಮೆಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾಳೆ ಎಂದು ತಿಳಿಸಿದ್ದಾರೆ.

ಪ್ರಿಯಾಂಕ ಶರ್ಮಾ (೨೦೦೮) ಅವರ ಅಭಿಪ್ರಾಯದಲ್ಲಿ ಶೇ. ೮೪ರಿಂದ ಶೇ. ೭೬ರಷ್ಟು ಉಳಿತಾಯವು ಅಸಂಘಟಿತ ವಲಯದಿಂದ ಬರುವುದು. ಹೀಗೆ ಅಸಂಘಟಿತ ವಲಯವು ಅದರಲ್ಲೂ ಮುಖ್ಯವಾಗಿ ಮಹಿಳೆಯರು ಆರ್ಥಿಕತೆಗೆ ಪ್ರಮುಖ ಕೊಡುಗೆದಾರರಾಗಿದ್ದಾರೆ. ದುರದೃಷ್ಟವಶಾತ್ ಅದನ್ನು ನೀತಿನಿರೂಪಕರು ಒಪ್ಪಿಕೊಳ್ಳದೇ ಅಭಿವೃದ್ಧಿ ನೀತಿಯನ್ನು ಕೇವಲ ಸಂಘಟಿತ ವಲಯಕ್ಕೆ ಸೀಮಿತಗೊಳಿಸಿದ್ದಾರೆ ಎಂಬ ವಾದವನ್ನು ಮಂಡಿಸಿದ್ದಾರೆ.

ಮಹಿಳೆಯರು ವೈವಿಧ್ಯಮಯವಾದ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ದುರದೃಷ್ಟವಶಾತ್ ಈ ಉದ್ಯೋಗಗಳು ಅಸಂಘಟಿತ ವಲಯಕ್ಕೆ ಸೇರಿವೆ. ಹೀಗಾಗಿ ಅವರು ನಿರ್ವಹಿಸುವ ಕೆಲಸಗಳೂ ಸಮಾಜದ ಕೆಳಸ್ತರದಲ್ಲಿದ್ದು ಹೆಚ್ಚಿನ ಲಾಭವನ್ನೇನೂ ಕೊಡುತ್ತಿಲ್ಲ. ಮಹಿಳೆಯರಲ್ಲಿ ಒಗ್ಗಟ್ಟಿನ ಕೊರತೆ ಹಾಗೂ ಸಂಘಟನಾ ಶಕ್ತಿ ಇಲ್ಲದಿರುವುದು ಅವರನ್ನು ಉತ್ತಮ ಉದ್ಯೋಗಾವಕಾಶಗಳಿಂದ ವಂಚಿತರನ್ನಾಗಿ ಮಾಡಿದೆ. ಮಹಿಳೆ ಎಷ್ಟೇ ಕಷ್ಟಸಹಿಷ್ಣು ಆಗಿದ್ದರೂ ಅವಳಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಸಿಗುತ್ತಿಲ್ಲ, ಕೇವಲ ಪುರಷನ ಬೆಂಬಲಕ್ಕೆ ನಿಂತು ಅವಳು ಕೆಲಸ ಮಾಡುತ್ತಿದ್ದಾಳೆ. ಅತೀ ಶ್ರಮದ ಕೆಲಸವನ್ನು ನಿರ್ವಹಿಸುವುದರಿಂದ ಅವಳ ದುಡಿಯುವ ಸಾಮರ್ಥ್ಯ ಕ್ಷೀಣಿಸುತ್ತಿದೆ ಎಂಬ ಅಭಿಪ್ರಾಯವನ್ನು (ಲಾಲ್ನವೀತ್ ಜೋವಿ ೨೦೦೭) ವ್ಯಕ್ತಪಡಿಸುತ್ತಾರೆ.

ಮೇಲೆ ಹೇಳಿದ ಲೇಖಕರ ಅಭಿಪ್ರಾಯಕ್ಕೆ ಪೂರಕವಾಗಿ **ಲೂಯಿಸ್ ವಾಟ್ಟೆಯವರು** (EPW June–೩೦–೨೦೦೧)ತಮ್ಮ ಲೇಖನದಲ್ಲಿ ಉದ್ಯೋಗ ಹಾಗೂ ವ್ಯಕ್ತಿಗಳ ಕ್ಷೇಮಾಭ್ಯುದಯದ ನಡುವಿರುವ ಸಂಬಂಧದ ಕುರಿತು ಚಿಂತನೆ ನಡೆಸಿದ್ದಾರೆ. ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವುದರಿಂದ ಅವರ ಜೀವನ ಮಟ್ಟವನ್ನು ಸುಧಾರಿಸಬಹುದೆಂದು ಕಲ್ಪಿಸಲಾಗಿದೆ, ಆರ್ಥಿಕತೆಯಲ್ಲಿ ಶ್ರಮಬಲದ ಹೆಚ್ಚಳದಿಂದ ಬಡತನದ ನಿರ್ಮೂಲನೆ ಸಾಧ್ಯ ಹಾಗೂ ಆರ್ಥಿಕ ಬೆಳವಣಿಗೆ ಸಾಧ್ಯವಾಗಬಹುದು ಎಂಬುದು ಸಾಮಾನ್ಯ ನಂಬುಗೆಯಾಗಿದೆ. ಅಂದರೆ ಜನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಅವರ ಆದಾಯವನ್ನು ಹೆಚ್ಚಿಸಬಹುದೆಂದು ಸರ್ಕಾರದ ತೀರ್ಮಾನವಾಗಿದೆ. ಇದು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಮಾರ್ಗವೂ ಕೂಡ ಆದರೆ ದೈಹಿಕ ಶ್ರಮದ ಕೆಲಸಗಳಿಂದ ಈ ಉದ್ದೇಶ ಈಡೇರುವುದಾದರೂ ಹೇಗೆ ಎಂಬುದು ಲೇಖಕರ ಪ್ರಶ್ನೆಯಾಗಿದೆ.

ಉದ್ಯೋಗವು ಆದಾಯವನ್ನು ತರುವುದು ಖಚಿತವಾದರೂ ಅದು ಜನರ ಆರೋಗ್ಯದ ಮೇಲೆ ಎಂತಹ ಪರಿಣಾಮ ಬೀರಬಹುದು ಎಂಬುದು ನಿಜಕ್ಕೂ ಚರ್ಚೆಗೆ ಗ್ರಾಸವಾಗಿದೆ, ಏಕೆಂದರೆ ಅಸಂಘಟಿತ ವಲಯದ ದುಡಿಮೆಗಳು ಶ್ರಮ ಸಾಂದ್ರವಾಗಿದ್ದು, ದೈಹಿಕ ಶ್ರಮವೇ ಪ್ರಮುಖ ಪಾತ್ರ ವಹಿಸುತ್ತದೆ. ಅತೀ ಶ್ರಮದ ಚಟುವಟಿಕೆಗಳು ಜನರ ದೈಹಿಕ ಬಂಡವಾಳ ಆರ್ಥಿಕ ಬಂಡವಾಳ ಹಾಗೂ ಸಾಮಾಜಿಕ ಬಂಡವಾಳದ ಮೇಲೆ ಭೀಕರ ಪರಿಣಾಮವನ್ನುಂಟು ಮಾಡುತ್ತವೆ ಎಂಬ ವಾದವನ್ನು ಲೇಖಕರು ಮಂಡಿಸಿರುತ್ತಾರೆ.

ಆರ್ಥಿಕತೆಯ ಹಲವಾರು ವಲಯಗಳಲ್ಲಿ ಮಹಿಳೆ ದುಡಿಯುತ್ತಿದ್ದಾಳೆ. ಆದರೆ ಅದು ಕೇವಲ ಕಡಿಮೆ ಆದಾಯದ ಶ್ರಮದಾಯಕ ಹಾಗೂ ಕೆಳವರ್ಗದ ತಂತ್ರಜ್ಞಾನವನ್ನೊಳಗೊಂಡ ದುಡಿಮೆಯಾಗಿರುತ್ತದೆ. ಉದಾ: ಕೃಷಿಯಲ್ಲಿ ಮಹಿಳೆಯರು ಕಳೆ ತೆಗೆಯುವ ಹಾಗೂ ಸಸಿ ನೆಡುವ ಕೆಲಸಗಳಲ್ಲಿ ಮಾತ್ರ ತೊಡಗಿರುತ್ತಾರೆ. ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ಪುರುಷರು ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರೆ, ಅದಕ್ಕೆ ನೆರವಾಗುವ ತಲೆಯ ಮೇಲೆ ಸರಕುಗಳನ್ನು ಹೊತ್ತು ಕೊಡುವ ಕಾರ್ಯದಲ್ಲಿ ಮಹಿಳೆಯರು ತೊಡಗಿರುತ್ತಾರೆ. ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿಯೂ ಪುರುಷರು ಗುಣಮಟ್ಟದ ಉಡುಪುಗಳನ್ನು ಆಧುನಿಕ ಯಂತ್ರಗಳ ಸಹಾಯದಿಂದ ಸಿದ್ಧಪಡಿಸಿದರೆ ಮಹಿಳೆಯರು ಹಳೆಯ ಯಂತ್ರಗಳಿಂದ ಕಡಿಮೆ ಗುಣಮಟ್ಟದ ಉಡುಪುಗಳನ್ನು ತಯಾರಿಸುತ್ತಾರೆ. ಹೀಗೆ ಶ್ರಮದಾಯಕವಾದ ಸಮಾನ ಶ್ರಮವುಳ್ಳ ಕೆಲಸಗಳನ್ನು ನಿರ್ವಹಿಸಿದರೂ ಮಹಿಳೆಗೆ ಕಡಿಮೆ ಆದಾಯ ಕೊಡುವುದು ಅಸಂಘಟಿತ ವಲಯದ ಪ್ರಮುಖ ಲಕ್ಷಣವಾಗಿದೆ (ಪ್ರಿಯಾಂಕ ಶರ್ಮಾ). ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿರುವು ದೇನೆಂದರೆ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಅಸಂಘಟಿತ ವಲಯದಲ್ಲಿ ತಮ್ಮ ಬದುಕನ್ನು ಕಂಡುಕೊಳ್ಳುತ್ತಿರುವುದು. ಅದಕ್ಕೆ ಅನೌಪಚಾರಿಕ ವಲಯ ಎಂದರೆ ಮಹಿಳೆಯರಿಗಾಗಿಯೇ ಇರುವ ವಲಯ ಎಂಬ ಮಾತು ಇತ್ತೀಚೆಗೆ ಗಟ್ಟಿಯಾಗುತ್ತಿದೆ. ಏಕೆಂದರೆ ಮಹಿಳೆಯರು ಹೆಚ್ಚಾಗಿ ಈ ವಲಯದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದು (Macewan Scott ೧೯೯೧) ತಿಳಿಸಿರುತ್ತಾರೆ.

ಬಲ್ಬೀರ ಸೋನಿಯವರ ಅಭಿಪ್ರಾಯದಲ್ಲಿ ಹೇಳುವುದಾದರೆ ಮಹಿಳಾ ಕಾರ್ಮಿಕರು ಅಸಂಘಟಿತ ವಲಯದಲ್ಲಿ ಕೇಂದ್ರೀಕೃತವಾಗಿರುವುದು ಅವರ ಆಯ್ಕೆಯಿಂದಲ್ಲ, ಇದು ಅವರಿಗೆ ಅನಿವಾರ್ಯವಾಗಿದೆ. ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದೆ ಅವರು ಜೀವನವಿಡೀ ಈ ಉದ್ಯೋಗದಲ್ಲಿಯೇ ಮುಂದು ವರೆಯುತ್ತಿದ್ದಾರೆ.

ಮಹಿಳಾ ಕೃಷಿ ಕಾರ್ಮಿಕರು ನಿಜವಾಗಿಯೂ ಭಾರತೀಯ ಸಮಾಜದಲ್ಲಿ ಕಡೆಗಣಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿದ್ದಾರೆ. ಹೆಚ್ಚುತ್ತಿರುವ ಬಡತನವು ಮಹಿಳೆಯರನ್ನು ಕೂಲಿ ಕಾರ್ಮಿಕರ ವರ್ಗಕ್ಕೆ ನೂಕುತ್ತಿದೆ. ಕೃಷಿಯಲ್ಲಾಗುತ್ತಿರುವ ಬದಲಾವಣೆಯಿಂದ ಹಾಗೂ ಕಡಿಮೆ ಇಳುವರಿಯಿಂದ ಹಿಂದಿನಿಂದಲೂ ಭೂ ಒಡೆತನವನ್ನು ಹೊಂದಿ ಸಾಗುವಳಿದಾರರಾದವರು ಇಂದು ಕೃಷಿ ಕಾರ್ಮಿಕರೆಂದು ಪರಿಗಣಿಸಲ್ಪಟ್ಟಿದ್ದಾರೆ.

ಕಡಿಮೆ ಕೂಲಿ, ಕಡಿಮೆ ಬಂಡವಾಳವನ್ನೊಳಗೊಂಡ ಹಾಗೂ ಹಿಂದುಳಿದ ಪುರಾತನ ಯಂತ್ರಗಳಿಂದ ನಡೆಯುವ ಗುಣ ಲಕ್ಷಣಗಳನ್ನೊಳಗೊಂಡ ಉದ್ಯೋಗಗಳಾವುವೆಂದರೆ: ನಿರ್ಮಾಣ ಕಾರ್ಯಗಳು, ಗೃಹಕೃತ್ಯ ಸೇವೆಗಳು ಹಾಗೂ ಗ್ರಾಮಗಳಲ್ಲಿ ಕೃಷಿ ಕೆಲಸ. ಈ ಕೆಲಸಗಳನ್ನು ಲೇಖಕರು ಉದ್ಯೋಗವೆಂದು ಸಂಭೋಧಿಸದೆ ಕೂಲಿ ಕೆಲಸವೆಂದು ನಿರ್ವಚಿಸಿದ್ದಾರೆ. ಈ ರೀತಿಯ ಕಾರ್ಮಿಕರು ಕೊನೆಯವರೆಗೂ ಅಂಚಿನ ಉತ್ಪಾದಕರಾಗಿ ಅಥವಾ ಆರ್ಥಿಕತೆಯಲ್ಲಿ ಕಡೆಗಣಿಸಲ್ಪಟ್ಟವರಾಗಿ ಉಳಿಯಬೇಕಾಗುತ್ತದೆ ಎಂದರೆ ಆಶ್ಚರ್ಯವೇನಿಲ್ಲ ಎಂಬ ಸತ್ಯ ಸಂಗತಿಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಮಹಿಳಾ ಉದ್ಯೋಗ ಹಾಗೂ ಆರ್ಥಿಕ ಅಭಿವೃದ್ಧಿ ಎಂಬ ಸಂಶೋಧನಾ ಪ್ರಬಂಧದಲ್ಲಿ **ಅನಿಲ್ ಕುಮಾರ್ ಜೈನ್**‌ರವರು ಈ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ಸಾಮಾನ್ಯವಾದ ವಿಷಯವಾಗಿದೆ ಅಲ್ಲದೇ ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರವು ಪ್ರಧಾನವಾದದ್ದು ಎಂಬ ವಿಷಯವನ್ನು ಎಲ್ಲಾ ರಾಷ್ಟ್ರಗಳಿಗೂ ಮಹಿಳೆಯು ಮನವರಿಕೆ ಮಾಡಿಕೊಟ್ಟಿದ್ದಾಳೆ. ಮಹಿಳೆ ಕಾರ್ಮಿಕಳಾಗಿ ಉತ್ಪಾದಕಳಾಗಿ, ವ್ಯಾಪಾರಿಯಾಗಿ ಹಾಗೂ ಗೃಹಿಣಿಯಾಗಿ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಮಾರುಕಟ್ಟೆಯ ಹೊರಗೆ ಉತ್ಪಾದಕ ಕೆಲಸಗಾರಳಾಗಿ ಹಾಗೂ ಮನೆಯಲ್ಲಿ ಕೂಲಿ ರಹಿತ ಕಾರ್ಮಿಕಳಾಗಿ ದುಡಿಯುತ್ತಿದ್ದಾಳೆ. ಮಾನವ ಅಭಿವೃದ್ಧಿ ಸಾಹಿತ್ಯದಲ್ಲಿ ಕೂಡ ಮಹಿಳೆಯ ಪಾತ್ರವನ್ನು ವಿವರಿಸಲಾಗಿದೆ. ಭಾರತದ ಪ್ರಥಮ ಪ್ರಧಾನಿಯವರಾದ ಪಂಡಿತ್ ಜವಾಹರ್ ಲಾಲ್ ನೆಹರೂರವರು ಕೂಡ 'ನಮ್ಮ ನೈಜ ಹಾಗೂ ಮೂಲ ಅಭಿವೃದ್ಧಿಯು, ಮಹಿಳೆಯು ಸಾರ್ವಜನಿಕ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಾಗಲೇ ಸಾಧ್ಯ, ಮಹಿಳೆಗೆ ಒಂದು ವೇಳೆ ಅವಕಾಶ ಸಿಕ್ಕರೆ ಪುರುಷನಿಗಿಂತ ಅಧಿಕ ಪ್ರಮಾಣದಲ್ಲಿ ತನ್ನ ಸಾಮಾರ್ಥ್ಯವನ್ನು ತೋರಿಸಬಲ್ಲಳು, ಈ ರೀತಿಯಾಗಿ ಭಾರತದ ಭವಿಷ್ಯವು ಕೊನೆಯದಾಗಿ ಪುರುಷರಿಗಿಂತ ಮಹಿಳೆಯ ಮೇಲೆಯೇ ಅವಲಂಬಿತವಾಗಿವೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮಹಿಳೆಯ ಘನತೆಯನ್ನು ಎತ್ತಿ ತೋರಿಸಿದ್ದಾರೆ.

ಅಮೇರಿಕಾದಲ್ಲಿ ನಡೆದ ಸರಣಿ ವಿಚಾರ ಸಂಕಿರಣಗಳು (೧೯೯೦-೧೯೯೫)ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯ ಪ್ರಮುಖ ಪಾತ್ರವನ್ನು ಒತ್ತಿ ಹೇಳಿವೆ. ೧೯೯೫ರ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಈ ಕೂಲಿರಹಿತ ಚಟುವಟಿಕೆಗಳನ್ನು ಈಗ ಚಾಲ್ತಿಯಲ್ಲಿರುವ ವೇತನದಲ್ಲಿ ಮಾರುಕಟ್ಟೆ ವಹಿವಾಟುಗಳೆಂದು ಪರಿಗಣಿಸಿದರೆ ಅವು ಅಗಾಧವಾದ ಆರ್ಥಿಕ ಮೌಲ್ಯಮಾಪನವನ್ನು ಒದಗಿಸುತ್ತವೆ ಎಂಬ ಅಭಿಪ್ರಾಯವನ್ನು ಒದಗಿಸಿಕೊಟ್ಟಿವೆ. ಮಹಿಳೆಯ ವೇತನ ರಹಿತವಾದ ಕೆಲಸಗಳು ರಾಷ್ಟ್ರದ ಆದಾಯದಲ್ಲಿ ಮೌಲ್ಯ ಮಾಪನಕ್ಕೊಳಪಟ್ಟಿಲ್ಲ, ಇದಕ್ಕೆ ಸ್ತ್ರೀವಾದಿಗಳು ಒಂದು - ಪರ್ಯಾಯ ಮಾರ್ಗವನ್ನು ಸೂಚಿಸಿರುತ್ತಾರೆ.

ತಾಂತ್ರಿಕ ಬದಲಾವಣೆಗಳಿಂದಾಗಿ ಮಹಿಳೆಯರು ಹೇಗೆ ಸಂಕಷ್ಟಕ್ಕೆ ಗುರಿಯಾಗಿದ್ದಾರೆ ಎಂಬ ಅಭಿಪ್ರಾಯವನ್ನು **ನಿವೇದಿತ ಮೆನನ್** (೧೯೯೯) ವ್ಯಕ್ತಪಡಿಸುತ್ತಾರೆ. ಅದರಲ್ಲೂ ಕಾರ್ಖಾನೆಗಳ

ಕೆಲಸದಲ್ಲಿ ಮಹಿಳೆಯರು ಪುರುಷರಿಗಿಂತ ಅತೀ ಕಡಿಮೆ ಕೂಲಿಯನ್ನು ಪಡೆಯುತ್ತಿದ್ದಾರೆ. ಇದಕ್ಕೆ ಲೇಖಕರು ಹಲವಾರು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ ಅಸಂಘಟಿತ ವಲಯದಲ್ಲಿ ಮಹಿಳೆಯರ ಸಂಖ್ಯೆ ಅಧಿಕವಾಗಿದೆ, ಒಂದೇ ಕೆಲಸಕ್ಕೆ ಸಂಘಟಿತ ಮತ್ತು ಅಸಂಘಟಿತ ವಲಯದ ವೇತನದಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಸತ್ಯಾಂಶವೇನೆಂದರೆ ಮಿಲಿಯನ್‌ಗಟ್ಟಲೆ ಮಹಿಳೆಯರು ತಮ್ಮ ವೇತನ ಸಹಿತ ದುಡಿಮೆಯ ಜೊತೆಗೆ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಕೆಲವು ವೇಳೆ ಮಹಿಳೆಯರು ೧೮ ಗಂಟೆಗಿಂತ ಅಧಿಕವಾಗಿ ದುಡಿಮೆಯಲ್ಲಿ ನಿರತರಾಗಿರುತ್ತಾರೆ. ಅವರಿಗೆ ಬಿಡುವು ಎಂಬುವುದೇ ಇಲ್ಲ. ಈ ಕಾರಣದಿಂದಲೇ ಮಹಿಳೆಯರು ಕೆಲವು ಖಾಯಿಲೆಗಳಿಗೆ ತುತ್ತಾಗುತ್ತಾರೆ. ಯಾಂತ್ರೀಕರಣದ ಪ್ರಭಾವದಿಂದ ಉದ್ಯೋಗ ವಂಚಿತರಾಗಿ ಮಾನಸಿಕವಾಗಿ ಘಾಸಿಗೊಂಡಿರುತ್ತಾರೆ. ಸರ್ಕಾರವು ೧೯೭೪ರಲ್ಲಿ ಸ್ಥಾಪಿಸಿದ ಸಮಿತಿಯ ಪ್ರಕಾರ ಒಂದು ಪವರ್‌ಲೂಮ್ ಯಂತ್ರವು ಆರು ಹ್ಯಾಂಡ್‌ಲೂಮ್ ನೌಕರರನ್ನು ಉದ್ಯೋಗ ಬಾಹಿರರನ್ನಾಗಿ ಮಾಡುತ್ತದೆ. ಇದೇ ರೀತಿಯಲ್ಲಿ ೧೯೭೪ ಮತ್ತು ೧೯೮೧ರ ನಡುವೆ ೨೮ ಮಿಲಿಯನ್ ನಷ್ಟು ಕಾರ್ಮಿಕರು ತಮ್ಮ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಂಡರು. ಇದರಲ್ಲಿ ಶೇ. ೪೩.೭೫ರಷ್ಟು ಮಹಿಳೆಯರು. ಇದೇ ಕಾರಣಕ್ಕಾಗಿಯೇ ಕೆಲವು ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡಿದರೂ ಕೆಲವು ಮಹಿಳೆಯರು ಮಾತ್ರ ಉದ್ಯೋಗ ಪಡೆಯುವಲ್ಲಿ ಸಫಲರಾದರು. ಆದರೆ ಈ ಉದ್ಯೋಗಾವಕಾಶಗಳು ಲಕ್ಷಗಟ್ಟಲೆ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಆಗಲಿಲ್ಲ (Action India ೧೯೯೫).

ಡೋರಿಯನ್ ರೋವನ್ ಕ್ಯಾಂಪಬೆಲ್ ರೋವತ್ (೨೦೦೬)ರವರು ಮಹಿಳೆಯರ ಬಗೆಗಿನ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಜಗತ್ತಿನಾದ್ಯಂತ ಮಹಿಳೆಯರನ್ನು ಕೆಲವು ಕೌಟುಂಬಿಕ ಕೆಲಸಗಳಲ್ಲಿ ತೊಡಗಿಸಿ ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಕಾಣಲಾಗುತ್ತದೆ. ಬಡತನ ಹಾಗೂ ಶೋಷಣೆಯಿಂದ ಮಹಿಳೆ ಕುಗ್ಗಿ ಹೋಗಿದ್ದಾಳೆ, ಮನೆಯ ಯಜಮಾನನಿಗೆ ಬೆಂಬಲವಾಗಿಯೋ, ಕೆಲವೊಂದು ಬಾರಿ ಮನೆಯ ಜವಾಬ್ದಾರಿ ಹೊತ್ತುಕೊಂಡೆ ದುಡಿಮೆ ಕ್ಷೇತ್ರಕ್ಕೆ ಧುಮುಕುತ್ತಾಳೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹಾಗೂ ಬಡ ರಾಷ್ಟ್ರಗಳಲ್ಲಿ ಮಹಿಳೆ ಉತ್ತಮ ಕೆಲಸಕ್ಕಾಗಿ ಪುರುಷರೊಂದಿಗೆ ಸ್ಪರ್ಧೆಗಿಳಿಯಲು ಸಾಧ್ಯವಿಲ್ಲ. ಹೀಗಾಗಿ ಕೇವಲ ಕೆಳದರ್ಜೆಯ ಅನೌಪಚಾರಿಕ ವಲಯದಲ್ಲಿ ತೊಡಗಿಸಿ ಕೊಂಡಿದ್ದಾಳೆ ಅಲ್ಲದೆ ಅವಳಿಗೆ ತನ್ನ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವ ಅವಕಾಶಗಳು ಕಡಿಮೆ. ಹೀಗೆ ಕಡಿಮೆ ವೇತನ ಸಿಗುವ ಕೆಲಸಗಳಲ್ಲಿ ತೊಡಗುವುದರಿಂದ ಅವಳಿಗೆ ಆರ್ಥಿಕ ಅಭದ್ರತೆ ಕಾಡುತ್ತಿವೆ. ಅದಕ್ಕಾಗಿ ಮಹಿಳೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವಂತಾಗಿದೆ ಎಂದಿದ್ದಾರೆ.

ಬಿ.ವಿಲಿಯಂ ಧರ್ಮರಾಜರವರ ಮಹಿಳಾ ಉದ್ಯೋಗಿಗಳ ಕುರಿತಾಗಿ ಬರೆದ ಸಂಶೋಧನಾ ಪ್ರಬಂಧದಲ್ಲಿ ಮಹಿಳೆಯರ ಕುರಿತಾಗಿ ಈ ರೀತಿಯ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಲಿಂಗಭೇದವನ್ನೊಳಗೊಂಡ ಸಮಾಜದಲ್ಲಿ ಕೆಲವು ವಿಭಾಗದ ಜನ ದುರಾದೃಷ್ಟವಶಾತ್ ಕೆಳಮಟ್ಟದ ಸ್ಥಾನಮಾನವನ್ನು ಹೊಂದುವುದು ಸಹಜ ಎಂಬುದು ಸಾಮಾನ್ಯ ಸಂಗತಿಯಾಗಿದೆ. ನಮ್ಮ ಸಂವಿಧಾನವು ಇಂತಹ

ಜನರ ಏಳಿಗೆಗಾಗಿ ಸಮಾನ ಹಕ್ಕುಗಳ ಕಾಯಿದೆಯನ್ನು ಜಾರಿಗೆ ತಂದರೂ ಅದು ಕೆಳವರ್ಗದ ಜನರನ್ನು ತಲುಪಲು ಸಾಧ್ಯವಾಗಿಲ್ಲ. ಅವರು ಜೀವನೋಪಾಯಕ್ಕಾಗಿ ಹೋರಾಟ ಮಾಡುವ ಪರಿಸ್ಥಿತಿ ಎದುರಾಗಿದೆ. ಸ್ವಾತಂತ್ರ್ಯ ಬಂದು ೬ ದಶಕಗಳು ಕಳೆದರೂ ಮನೆಗೆಲಸ ಮಾಡುವ ಮಹಿಳೆಯರ ಸ್ಥಿತಿಗತಿಯಲ್ಲಿ ಯಾವ ಬದಲಾವಣೆಯು ಇಲ್ಲದೆ ಸಮಾಜದಲ್ಲಿ ಶೋಷಣೆಗೊಳಗಾದ ದುಡಿಮೆಗಾರರಾಗಿದ್ದಾರೆ. ಭಾರತದ ಆರ್ಥಿಕತೆಯ ಅಂಕಿ ಅಂಶಗಳನ್ನು ಗಮನಿಸಿದರೆ ಮಹಿಳೆಯರು ಅಸಂಘಟಿತ ವಲಯಕ್ಕೆ ಸೇರಿದ ಕೃಷಿ ಹತ್ತಿ, ಹಾಗೂ ಚಹಾ ಎಲೆ ಕೀಳುವುದು, ಗಡಿಗೆ ತಯಾರಿಕೆ, ಕೈಮಗ್ಗ, ಕಟ್ಟಡ ನಿರ್ಮಾಣ ಹಾಗೂ ಮನೆಗೆಲಸಗಳಲ್ಲಿ ನಿರತರಾಗಿದ್ದಾರೆ.

ಸಮಾಜದಲ್ಲಿ ಅತೀ ಕೆಳಸ್ತರದ ದುಡಿಮೆ ಎನಿಸಿಕೊಂಡ ಮನೆಗೆಲಸದಲ್ಲಿ ಮಹಿಳೆಯರು ತೊಡಗಿಸಿಕೊಳ್ಳಲು ಕಾರಣವೇನು? ಎಂಬುದನ್ನು ಹೀಗೆ ವಿವೇಚಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಗರಗಳ ಜನ ಬಡ ಮಹಿಳೆಯರನ್ನು ಮನೆಗೆಲಸಕ್ಕೆ ಆಕರ್ಷಿಸುವುದು ಬಹಳವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಜೀವನ ನಿರ್ವಹಣೆಗೆ ಕೆಲಸ ಸಿಗದೇ ಹೋದಾಗ ಮಹಿಳೆಯರು ಪಟ್ಟಣಕ್ಕೆ ಬರುತ್ತಾರೆ. ಅಲ್ಲದೇ ಪಟ್ಟಣದ ಮಧ್ಯಮ ವರ್ಗದ ಮಹಿಳೆಯರು ತಮಗೆ ದೊರಕುವ ವಿದ್ಯಾಭ್ಯಾಸ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ವಿದ್ಯಾವಂತರಾಗಿ ಉದ್ಯೋಗದಲ್ಲಿ ತೊಡಗಿಸಿಕೊಂಡಿರುತ್ತಾರೆ. ಇಂತಹ ಮಹಿಳೆಯರಿಗೆ ಮನೆಗೆಲಸದ ಒತ್ತಡ ಜಾಸ್ತಿಯಾದಾಗ ಈ ಹೊರೆಯನ್ನು ನಿಭಾಯಿಸಲು ಬಡ ಮಹಿಳೆಯರ ಮೊರೆ ಹೋಗುತ್ತಾರೆ. ಅಲ್ಲದೇ ಉನ್ನತ ವರ್ಗದ ಹಾಗೂ ಮಧ್ಯಮ ವರ್ಗದ ಮಹಿಳೆಯರು ಸಮಾಜದಲ್ಲಿ ತಮ್ಮ ಘನತೆ ಗೌರವವನ್ನು ಹೆಚ್ಚಿಸಿಕೊಳ್ಳಲು ತಮ್ಮ ಸಹಾಯಕರನ್ನಾಗಿ ಮನೆಗೆಲಸದ ಮಹಿಳೆಯರನ್ನು ನೇಮಿಸಿಕೊಳ್ಳುತ್ತಾರೆ.

ಈ ರೀತಿಯ ಕೆಲಸಕ್ಕೆ ಹೆಚ್ಚಿನ ಬೇಡಿಕೆಯಿಂದಾಗಿ ಗ್ರಾಮದ ಮಹಿಳೆಯರು ಕಡಿಮೆ ಆದಾಯದ ಋತುಮಾನ ಆಧಾರಿತ ಉದ್ಯೋಗವನ್ನು ಬಿಟ್ಟು ಪಟ್ಟಣಕ್ಕೆ ಧಾವಿಸುತ್ತಾರೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಅವರು ಅವಿದ್ಯಾವಂತರಾಗಿರುವುದರಿಂದ ಪಟ್ಟಣಗಳಲ್ಲಿ ತಮಗೆ ಬೇಕಾದ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಯಾವ ಅವಕಾಶವೂ ಇರುವುದಿಲ್ಲ. ಅನುಭವದ ಕೊರತೆ ಹಾಗೂ ನೈಪುಣ್ಯದ ಅಭಾವದಿಂದ ತಮಗೆ ಒದಗಿದ ಕೆಳಮಟ್ಟದ ಉದ್ಯೋಗದಲ್ಲೇ ಉಳಿದುಕೊಳ್ಳಬೇಕಾಗುತ್ತದೆ. ಅವರು ಈ ರೀತಿಯಾಗಿ ಸುಲಭವಾಗಿ ಶೋಷಣೆಗೊಳಗಾಗುತ್ತಾರೆ.

ಮಹಿಳಾ ಉದ್ಯೋಗಿಗಳಿಗೆ ಸರಕಾರದ ಶಾಸನಾತ್ಮಕವಾದ ಯಾವುದೇ ರಕ್ಷಣೆ ಸಿಗದೇ ಇರಲು ಕಾರಣವೇನು? ಎಂಬ ಪ್ರಶ್ನೆಗೆ ಈ ರೀತಿಯಾಗಿ ವಿಶ್ಲೇಷಿಸಲಾಗಿದೆ. ಮನೆಗೆಲಸದವರು ತಮ್ಮ ಉದ್ಯೋಗದಾತರಿಂದ ಅನೇಕ ರೀತಿಯ ಶೋಷಣೆಗೆ ಕಿರುಕುಳಕ್ಕೆ ಒಳಗಾಗುತ್ತಾರೆ. ಇವರ ಬೆಂಬಲಕ್ಕೆ ಯಾವುದೇ ಕಾನೂನಿನ ಕ್ರಮಗಳು ಜಾರಿಯಲ್ಲಿರುವುದಿಲ್ಲ. ಇದಕ್ಕೆ ಕಾರಣ ಅವರಲ್ಲಿ ಒಗ್ಗಟ್ಟಿನ ಕೊರತೆ ಇರುವುದು, ಇನ್ನು ಮಹಿಳಾ ಮನೆಗೆಲಸದ ದುಡಿಮೆಗಾರರ ಸಮಸ್ಯೆಯು ಸಂಶೋಧಕರ ಗಮನಕ್ಕೆ ಅಷ್ಟಾಗಿ ಬಾರದೇ ಇರುವುದು. ಸ್ವಯಂ ಸೇವಾ ಸಂಘಗಳು, ಸಮಾಜ ಸೇವಾ ಕಾರ್ಯಕರ್ತರು ಇಂತಹ ಶೋಷಿತರ ಕಷ್ಟ ಕೋಟಲೆಗಳನ್ನು ಅಧ್ಯಯನಕ್ಕೆ ಒಳಪಡಿಸದೆ ಇರುವುದು ಪ್ರಮುಖ ಸಮಸ್ಯೆಯಾಗಿದೆ.

ಮನೆಗೆಲಸದ ಮಹಿಳೆಯರ ಮತ್ತು ಒಡತಿಯರ ನಡುವಿನ ಸಂಬಂಧ ಸುಧಾರಿಸಲು ಹಾಗೂ ಮಾಲೀಕರು ತಮ್ಮ ಸಹಾಯಕರನ್ನು ಒಳ್ಳೆಯ ಭಾವನೆಯಿಂದ ನೋಡುವಂತೆ ಮನವೊಲಿಸುವುದು ಇಂತಹ ಸಂಘ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದೆ.

ಅಸಂಘಟಿತ ವಲಯದ ಮಹಿಳಾ ಮನೆಗೆಲಸದ ದುಡಿಮೆಗಾರರ ಕುರಿತಾಗಿ **ಜೋಸೆಫ್ ಕ್ಸೇವಿಯರ್** (೨೦೦೯) ರವರ ಅಭಿಪ್ರಾಯದಂತೆ ಗ್ರಾಮಗಳಲ್ಲಿ ಮಹಿಳೆಯರು ಕೃಷಿ ಹಾಗೂ ಇತರೆ ಕೆಲಸಗಳಲ್ಲಿ ತೊಡಗಿದ್ದಾರೆ. ಪಟ್ಟಣದ ಮಹಿಳೆಯರು ಸಾಮಾನ್ಯವಾಗಿ ಬೇರೆಯವರ ಮನೆಗಳಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಗ್ರಾಮದಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದ ಮಹಿಳೆಯರು ಕೃಷಿಯಿಂದ ತಮಗೆ ಯಾವ ರೀತಿಯ ಸಹಾಯ ಸಿಗದೇ ಉದ್ಯೋಗ ವಂಚಿತರಾಗಿ ಪಟ್ಟಣಕ್ಕೆ ಉದ್ಯೋಗವನ್ನರಸುತ್ತಾ ಬರುತ್ತಾರೆ. ಇದಕ್ಕೆ ಪ್ರಮುಖ ಕಾರಣ ಗ್ರಾಮಗಳಲ್ಲಿ ಕೃಷಿಯ ಕಾರ್ಯಗಳು ಋತುಮಾನ ಸಂಬಂಧಿಯಾಗಿದ್ದು ಅದು ಸ್ಥಗಿತಗೊಂಡಿರುತ್ತದೆ.

ಅಂತರಾಷ್ಟ್ರೀಯ ಕಾರ್ಮಿಕ ಸಂಘವು (ILO) ನಡೆಸಿದ ಸಮೀಕ್ಷೆಯಂತೆ ಮನೆಗೆಲಸದಲ್ಲಿಯೂ ಕೂಡ ಹೆಚ್ಚಿನ ದುಡಿಮೆಗಾರರೂ ನಿರತರಾಗಿದ್ದಾರೆ. ಆದರೆ ಅವರ ಕೂಲಿಯನ್ನು ನಿಗಧಿಪಡಿಸಲು ಹಾಗೂ ಸ್ಥಿತಿಗತಿಗಳನ್ನು ಸುಧಾರಿಸಲು ಯಾವುದೇ ಕಾನೂನಿನ ಸುರಕ್ಷತೆಯಿಲ್ಲ.

ಅಂತರಾಷ್ಟ್ರೀಯ ಕಾರ್ಮಿಕ ಸಂಘದ ವ್ಯಾಖ್ಯೆಯಂತೆ ಮನೆಗೆಲಸವನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದೆ. ವೇತನ ಪಾವತಿಗಾಗಿ ಅಥವಾ ಕೂಲಿಗಾಗಿ ಗೃಹಕೃತ್ಯದಲ್ಲಿ ಭಾಗಿಯಾಗುವುದು ಅಥವಾ ಕೆಲಸದಲ್ಲಿ ತೊಡಗುವುದು ಎಂದು.

ಜೋಸೆಫ್ ಕ್ಸೇವಿಯರ್ರವರ ಅಭಿಪ್ರಾಯದಲ್ಲಿ ಮನೆಗೆಲಸದವರು ಎಂದರೆ ಮನೆಯ ಕೆಲಸಕ್ಕಾಗಿ ನೇಮಿಸಲ್ಪಟ್ಟವರು ಹಾಗೂ ಗುಲಾಮರ ಸ್ಥಿತಿಗತಿಗಳಿಗಿಂತ ವಿಭಿನ್ನರಾದವರು. ಏಕೆಂದರೆ ಇವರು ತಮ್ಮ ಕೆಲಸಕ್ಕೆ ಕೂಲಿಯನ್ನು ಪಡೆಯುತ್ತಾರೆ. ಅಲ್ಲದೆ ತಾವು ತಮ್ಮ ಉದ್ಯೋಗವನ್ನು ಮಧ್ಯೆಯೇ ಬಿಡಲು ಸ್ವತಂತ್ರರಾಗಿರುತ್ತಾರೆ. ದೊಡ್ಡ ದೊಡ್ಡ ಕುಟುಂಬಗಳಲ್ಲಿ ಅನೇಕ ಜನ ಮನೆಗೆಲಸದವರು ಕರ್ತವ್ಯ ನಿಭಾಯಿಸುತ್ತಾರೆ. ಅಂತಹ ಕೆಲಸಗಳು ಯಾವುದೆಂದರೆ ಅಡುಗೆ ಕೆಲಸ, ಇಸ್ತ್ರಿ ಮಾಡುವುದು, ನೈರ್ಮಲ್ಯ ಕಾಪಾಡುವುದು, ಮನೆ ಒಡತಿಯ ಜೊತೆ ಮಾರುಕಟ್ಟೆಗೆ ಹೋಗಿ ಸಾಮಾನು ತರಲು ನೆರವಾಗುವುದು, ಮಕ್ಕಳನ್ನು ನೋಡಿಕೊಳ್ಳುವುದು, ಜೊತೆಗೆ ಮನೆಯ ನಾಯಿಯನ್ನು ಹೊರಗಡೆ ಕರೆದುಕೊಂಡು ಹೋಗುವುದು ಮುಂತಾದವು. ಇತ್ತೀಚಿನ ವರ್ಷಗಳಲ್ಲಿ ನಮ್ಮ ಆರ್ಥಿಕ ಸ್ಥಿತಿ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ದೆಹಲಿಯೂ ಸೇರಿದಂತೆ ದೊಡ್ಡ ನಗರಗಳಲ್ಲಿ ಮನೆಗೆಲಸದವರ ಸಂಖ್ಯೆ ಅಧಿಕವಾಗುತ್ತಿದೆ.

ಮನೆಗೆಲಸದ ಮಹಿಳೆಯರು ಸಾಮಾನ್ಯವಾಗಿ ಕೆಳಸ್ತರದ ಕೂಲಿಯವರಂತೆ ಬದುಕು ಸಾಗಿಸುತ್ತಿದ್ದಾರೆ. ಅವರು ಎದುರಿಸುವ ಸಮಸ್ಯೆಗಳನ್ನು ಲೇಖಕರು ಈ ರೀತಿಯಾಗಿ ವಿವರಿಸುತ್ತಾರೆ. ಮನೆಗೆಲಸದ ಮಹಿಳೆಯರು ಸಾಮಾನ್ಯವಾಗಿ ಮಾನವ ಹಕ್ಕುಗಳಿಂದ ವಂಚಿತರಾಗಿರುವುದಲ್ಲದೇ ಜೀವನದ

ಮೂಲಭೂತ ಅವಶ್ಯಕತೆಗಳಾದ ಆರೋಗ್ಯ, ಶಿಕ್ಷಣ, ಕನಿಷ್ಠ ಜೀವನಮಟ್ಟ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ಇಂತಹ ಕೆಲಸದಲ್ಲಿ ತೊಡಗಿರುವ ಜನರು ಹೋರಾಟ ಮನೋಭಾವವನ್ನೇ ಮರೆತವರಾಗಿರುತ್ತಾರೆ. ಪ್ರಜಾಪ್ರಭುತ್ವ ಸರ್ಕಾರವು ಸಮಾನತೆಯ ಹಕ್ಕನ್ನು ಎಲ್ಲಾ ಜನರಿಗೆ ನೀಡಿದ್ದರೂ ಅದು ಕೆಳವರ್ಗದ ಜನರಿಗೆ ತಲುಪುವಲ್ಲಿ ಅಡೆತಡೆಯಾಗಿದೆ.

ಅಸಂಘಟಿತ ವಲಯದ ರಾಷ್ಟ್ರೀಯ ಸಮಿತಿಯ ನೇತೃತ್ವ ವಹಿಸಿದ ಹಾಗೂ ನಮ್ಮ ದೇಶದ ಮಾಜಿ ಪ್ರಧಾನಿಯವರಾದ ದಿ. ಇಂದಿರಾ ಗಾಂಧಿಯವರ ಆರ್ಥಿಕ ಸಲಹೆಗಾರರಾದ ಅರ್ಜುನ ಸೇನ್ ಗುಪ್ತಾರವರು ಹಾಗೂ ಸಮಿತಿಯ ಸಿಬ್ಬಂದಿ ವರ್ಗದವರು, ಕೆಳವರ್ಗದ ಜನರು ಇನ್ನೂ ಕೆಳಗೆ ಬೀಳದಂತೆ ಒಂದು ಸಾಮಾಜಿಕ ಕಟ್ಟೆಯನ್ನು ಕಟ್ಟುವುದು ಬಹುಮುಖ್ಯವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಮನೆಗೆಲಸ ಮಾಡುವ ದುಡಿಮೆಗಾರರ ಸಮೀಕ್ಷೆ ನಡೆಸಿದ ಅಮೇರಿಕ ಸಮಿತಿ (೧೯೯೧) ವರದಿಯ ಪ್ರಕಾರ ಪುರುಷ ಉದ್ಯೋಗಿಗಳಿಗಿಂತ ಮಹಿಳಾ ಉದ್ಯೋಗಿಗಳು ಹೆಚ್ಚು ಅವಧಿಯವರೆಗೆ ಕೆಲಸದಲ್ಲಿ ನಿರತರಾಗಿರುತ್ತಾರೆ. ಅಲ್ಲದೇ ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಪರುಷರು ಹೆಚ್ಚಾಗಿ ಮನೆಗೆಲಸಕ್ಕೆ ನಿಯುಕ್ತರಾಗಿರುತ್ತಾರೆ ಎಂದು ತಿಳಿಸಿದೆ.

ಮಹಿಳೆಯರು ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ತಾವು ನಿರೀಕ್ಷೆ ಮಾಡಿದ ಕೂಲಿಗಿಂತ ಕಡಿಮೆ ಕೂಲಿಯನ್ನು ಪಡೆಯುತ್ತಾರೆ. ಅಲ್ಲದೇ ತಮ್ಮ ಜೊತೆಯೇ ಕೆಲಸ ಮಾಡುವ ಪುರುಷರಿಗಿಂತ ಕಡಿಮೆ ಕೂಲಿ ಪಡೆಯುತ್ತಾರೆ. ನಿಗಧಿತ ಅವಧಿಗಿಂತ ಹೆಚ್ಚಿನ ಕೆಲಸಗಳನ್ನು ಮಾಡಬೇಕಾಗುತ್ತದೆ. ಆದರೆ ಈ ಕೆಲಸಕ್ಕೆ ಅವರು ಹೆಚ್ಚಿನ ಕೂಲಿಯನ್ನೇನೂ ಪಡೆಯುವುದಿಲ್ಲ, ಕೌಟುಂಬಿಕ ಹಾಗೂ ಅನಾರೋಗ್ಯದ ಕಾರಣಗಳಿಂದ ಕೆಲಸಕ್ಕೆ ಗೈರು ಹಾಜರಾದರೆ ಕೂಲಿಯನ್ನು ಕಡಿತಗೊಳಿಸಲಾಗುತ್ತದೆ ಅವರಿಗೆ ಯಾವ ರಜಾ ಸೌಲಭ್ಯವು ಇರುವುದಿಲ್ಲ. ಮಹಿಳಾ ದುಡಿಮೆಗಾರರು ಕೆಲವೆಡೆ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಅವಿದ್ಯಾವಂತರಾಗಿರುವ ಕಾರಣ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಂಘಗಳನ್ನು ಸ್ಥಾಪಿಸುವ ಜಾಗೃತ ಭಾವನೆಯು ಅವರಲ್ಲಿ ಇರುವುದಿಲ್ಲ. ಕೆಲವೊಂದು ಸಮಯ ಉದ್ಯೋಗದಾತರು ಒದಗಿಸುವ ಊಟ ಬಟ್ಟೆಯು ಸಹ ಕೆಳದರ್ಜೆಯದ್ದಾಗಿರುತ್ತದೆ. ಆದರೂ ಅದರ ವಿರುದ್ಧ ಧ್ವನಿ ಎತ್ತಲು ಅವರು ಅಶಕ್ತರಾಗಿದ್ದಾರೆ, ಏಕೆಂದರೆ ಜೀವನ ನಿರ್ವಹಣೆಗಾಗಿ ಅವರು ಆ ಕೆಲಸವನ್ನು ಮಾಡಲೇಬೇಕಾಗಿರುತ್ತದೆ. ಭಾರತ ಸರ್ಕಾರದ ಕಾರ್ಮಿಕ ಸಚಿವಾಲಯವು ಶಾಸನಾತ್ಮಕ ವಿಧಾನಗಳನ್ನು ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕಾಗಿ ಜಾರಿಗೆ ತಂದರೂ ಅವುಗಳ ಅಳವಡಿಕೆ ಮಾತ್ರ ಕೆಲವೊಂದು ಕ್ಷೇತ್ರದಲ್ಲಿ ಆಗಿರುವುದಿಲ್ಲ.

ಮನೆಗೆಲಸದ ಮಹಿಳಾ ದುಡಿಮೆಗಾರರ ಕುರಿತು ಅಧ್ಯಯನ ನಡೆಸಿರುವ ಸಿದ್ಧಾರ್ಥ ಸರ್ಕಾರವರು ಕೂಡ ಮನೆಗೆಲಸದ ಮಹಿಳೆಯರು ಸಮಾಜದಲ್ಲಿ ಅತೀ ಕೆಳ ವರ್ಗಕ್ಕೆ ಸೇರಿದವರಾಗಿದ್ದಾರೆಂದು ಅಭಿಪ್ರಾಯ ಪಡುತ್ತಾರೆ. ಲೇಖಕರ ಅಭಿಪ್ರಾಯದಲ್ಲಿ ಮಹಿಳೆಯರು ತಮ್ಮ ಮನೆಯಲ್ಲಿ ನಿರ್ವಹಿಸುವ

ಕೆಲಸಗಳನ್ನು ಬೇರೆಯವರ ಮನೆಯಲ್ಲೂ ಮಾಡುತ್ತಾರೆ. ಆದರೆ ಮನೆಯಲ್ಲಿ ಮಾಡುವ ಕೆಲಸವು ವೇತನ ರಹಿತವಾಗಿರುತ್ತದೆ. ಬೇರೆಯವರ ಮನೆಯಲ್ಲಿ ಮಾಡುವ ಕೆಲಸಕ್ಕೆ ವೇತನವನ್ನು ಪಡೆಯುತ್ತಾರೆ. ಇಂತಹ ಕೆಲಸಗಾರರನ್ನು 'ಟೈಮ್ ವೇಜ್ ಲೇಬರ್ಸ್' ಗುಂಪಿಗೆ ಸೇರಿಸಬಹುದು. ಕೆಲವು ಗ್ರಾಮಗಳಲ್ಲಿ ಮಹಿಳೆಯರು ತಮ್ಮ ದಿನನಿತ್ಯದ ಕೆಲಸದ ಜೊತೆಗೆ ಕೃಷಿಯಲ್ಲು ನಿರತರಾಗಿರುತ್ತಾರೆ ಎಂಬ ಕೋಥಾರಿ (೧೯೯೧) ಯವರ ಹೇಳಿಕೆಯನ್ನು ಪುನರುಚ್ಚರಿಸುತ್ತಾರೆ. ಈ ಕೆಲಸದಿಂದ ಅನೇಕ ಮಹಿಳೆಯರು ಉದ್ಯೋಗ ಕಂಡುಕೊಳ್ಳುವುದರ ಜೊತೆಗೆ ಹಣ ಸಂಪಾದಿಸಲು ಅನುಕೂಲವಾಗಿದೆ.

ಮಹಿಳೆಯರು ತಮ್ಮ ಮನೆಯಲ್ಲಿಯೇ ನಿಭಾಯಿಸುವ ಕೆಲಸವು ದೃಶ್ಯಗೋಚರವಲ್ಲದ ಚಟುವಟಿಕೆಯಾಗಿದ್ದು, ಬೇರೆಯವರ ಮನೆಯಲ್ಲಿ ಒಪ್ಪಿಕೊಂಡ ವೇತನಕ್ಕೆ ದುಡಿಯುವುದು ದೃಶ್ಯಗೋಚರ ದುಡಿಮೆಯಾಗಿದೆ. ಅಮೇರಿಕ ರಾಷ್ಟ್ರಗಳ ೧೯೯೧ರ ವರದಿಯ ಪ್ರಕಾರ ಮನೆಗೆಲಸದ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗಲು ಎರಡು ಕಾರಣಗಳಿವೆ. ಏನೆಂದರೆ ಪುರುಷರು ಮನೆಯೊಳಗಿನ ದುಡಿಮೆಯಲ್ಲಿ ಕಡಿಮೆ ವೇಳೆಯನ್ನು ವಿನಿಯೋಗಿಸುತ್ತಾರೆ. ಇದರಿಂದ ಮನೆಯ ಎಲ್ಲಾ ಜವಾಬ್ದಾರಿಯು ಹೆಣ್ಣುಮಕ್ಕಳ ಹೆಗಲ ಮೇಲೆಯೇ ಬೀಳುತ್ತದೆ. ಅಲ್ಲದೇ ಮನೆಯೊಡತಿಯರು ಯಾವುದೇ ಉದ್ಯೋಗದಲ್ಲಿ ನಿರತರಾಗಿದ್ದರೆ ಮನೆಗೆಲಸವನ್ನು ನಿಭಾಯಿಸಲು ಕೂಲಿಯನ್ನು ಕೊಟ್ಟು ಬೇರೆ ಕೆಲಸದವರನ್ನು ನೇಮಿಸಿಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ಮನೆಗೆಲಸದ ವೃತ್ತಿಯಲ್ಲಿ ಮೂರು ರೀತಿಯ ಕೆಲಸಗಾರರನ್ನು ಕಾಣುತ್ತೇವೆ. ಮೊದಲನೆಯದಾಗಿ ಕೇವಲ ಎರಡು, ಮೂರು ಗಂಟೆಗಳಲ್ಲಿ ಮನೆಯ ಎಲ್ಲಾ ಕೆಲಸವನ್ನು ಮುಗಿಸಿ ಬೇರೆ ಮನೆಯ ಕೆಲಸಕ್ಕೆ ತೆರಳುವವರು, ಎರಡನೆಯದಾಗಿ ಜೀವನ ಪೂರ್ತಿ ಮನೆಯಲ್ಲಿಯೇ ವಾಸವಾಗಿ, ಮನೆಯ ಸದಸ್ಯರಲ್ಲಿ ಒಬ್ಬರಾಗಿ ಕೆಲಸ ಮಾಡುವವರು. ಇವರಿಗೆ ಮನೆಯ ಒಡೆಯರು ಊಟ, ವಸತಿ, ಬಟ್ಟೆಯನ್ನು ಕೊಡುವುದರ ಜೊತೆಗೆ ಹಿರಿಯ ಸದಸ್ಯರೆಂದು ಗೌರವದಿಂದ ಕಾಣುತ್ತಾರೆ. ಕೆಲವೊಂದು ಬಾರಿ ಇವರ ಸಲಹೆಗಳನ್ನು ಪಡೆಯಲಾಗುತ್ತದೆ. ಮೂರನೆಯದಾಗಿ ಕೇವಲ ಕೆಲವೇ ಸಂದರ್ಭಗಳಲ್ಲಿ (ತುರ್ತು ಪರಿಸ್ಥಿತಿಗಳಲ್ಲಿ) ಅಥವಾ ಸಂಕಷ್ಟಗಳಿದ್ದಾಗ ಮಾತ್ರ ತಾತ್ಕಾಲಿಕವಾಗಿ ನೇಮಕಗೊಂಡು ಕೆಲಸವಾದ ತಕ್ಷಣ ತಮ್ಮ ಕೂಲಿ ಪಡೆದು ಹಿಂದಿರುಗುವವರು. ಎಲ್ಲಾ ಕೆಲಸದವರೂ ಸಾಮಾನ್ಯವಾಗಿ ಒಂದೇ ರೀತಿಯ ಕೆಲಸಗಳನ್ನು ನಿಭಾಯಿಸುತ್ತಿರುತ್ತಾರೆ. ಈ ಕೆಲಸಗಳಿಗೆ ವೃತ್ತಿ ನೈಪುಣ್ಯತೆ ಬೇರೆ ಇರುವುದಿಲ್ಲ. ಆದರೆ ಅಡುಗೆ ಕೆಲಸವನ್ನು ಹಾಗೂ ಕೆಲವು ಯಂತ್ರಗಳನ್ನು ನಿರ್ವಹಿಸುವಲ್ಲಿ, ತರಬೇತಿ ಹಾಗೂ ಕೌಶಲ್ಯ ಬೇಕಾಗುತ್ತದೆ. ಅಂತಹ ಕೆಲಸಗಳಿಗೆ ದಕ್ಷ ಹಾಗೂ ನುರಿತ ಕೆಲಸಗಾರರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ.

ಮನೆಗೆಲಸದ ದುಡಿಮೆಯಲ್ಲಿಯೂ ಜಾತಿ ಭೂತವು ಬೆಂಬಿಡದೇ ಕಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಸಾಮಾನ್ಯವಾಗಿ ಕೆಳವರ್ಗದ ಜನರು ಕೌಶಲ್ಯಯುತವಾದ ಕೆಲಸಗಳಿಗೆ ನೇಮಕವಾಗಿರುವುದಿಲ್ಲ. ಏಕೆಂದರೆ ಮೇಲ್ಜಾತಿಗೆ ಸೇರಿದ ಉದ್ಯೋಗದಾತರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕೆಲಸಗಾರರಿಗೆ ಅಡುಗೆ ಮನೆಗೆ ಪ್ರವೇಶಿಸಲು ಅವಕಾಶ ಮಾಡಿಕೊಡುವುದಿಲ್ಲ.

ವನಿತಾಸಿಂಗ್‌ರವರ ಕೃತಿ (೨೦೦೭) 'ವುಮೆನ್ ಡೊಮೆಸ್ಟಿಕ್ಸ್ : ವರ್ಕರ್ಸ್ ವಿಥಿನ್ ಹೌಸ್ ಹೋಲ್ಡ್' ನಲ್ಲಿ ಮಹಿಳಾ ಮನೆಗೆಲಸಗಾರರ ಬಗ್ಗೆ ವಿಶೇಷ ಅಧ್ಯಯನ ಕೈಗೊಂಡಿದ್ದಾರೆ. ಅವರ ಪ್ರಕಾರ ಮನೆಗೆಲಸದ ದುಡಿಮೆಗಾರರು ಮೇಡ್, ಆಯಾ, ದಾಯಿ, ಆಯಿ, ಬಾಯಿ, ಕಾಮ್‌ವಾಲಿ ಎಂಬ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಮನೆಯೊಡೆಯರಿಗೆ ಬೇಕೇ ಬೇಕಾದ ದುಡಿಮೆಗಾರ ರಾಗಿದ್ದಾರೆ. ತಮ್ಮ ದೈನಂದಿನ ಕೆಲಸದ ಹೊರೆಯನ್ನು ಶ್ರೀಮಂತರು ಇವರ ಮೇಲೆ ಹಾಕಿ ವಿಶ್ರಾಂತಿ ಪಡೆಯುತ್ತಾರೆ.

ಮನೆಗೆಲಸದ ದುಡಿಮೆಗಾರರಿಗೆ ಕೆಲವು ಯಂತ್ರಗಳನ್ನು ನಿರ್ವಹಿಸಲು ತರಬೇತಿ ಬೇಕಾಗುತ್ತದೆ ಆದರೆ ಉಳಿದ ದಿನನಿತ್ಯದ ಕೆಲಸಗಳೆಲ್ಲಾ ತಮ್ಮ ಮನೆಯಲ್ಲಿಯೇ ಮಾಡುವ ಕೆಲಸಗಳಾಗಿದ್ದು, ಅವುಗಳಿಗೆ ವಿಶೇಷ ಕೌಶಲ್ಯ ಏನೂ ಬೇಕಾಗಿರುವುದಿಲ್ಲ. ಇಂತಹ ಕೆಲಸಗಾರರ ದುಡಿಮೆಯು ಅರೆಕಾಲಿಕ ಅಥವಾ ಪೂರ್ಣಕಾಲಿಕವಾಗಿದ್ದು, ಕೆಲಸದ ಅವಧಿಯು ಮಾತ್ರ ನಿಗಧಿಯಾಗಿರುವುದಿಲ್ಲ. ಮನೆಗೆಲಸದ ದುಡಿಮೆಗಾರರು ಸಾಮಾನ್ಯವಾಗಿ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ಮಹಿಳೆಯರಾಗಿರುತ್ತಾರೆ. ಕೆಲವೊಮ್ಮೆ ಮನೆಯೊಡತಿಯರ ಜಾತಿಗೆ ಸೇರಿದವರಾಗಿದ್ದರೂ, ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ಮನೆಗೆಲಸಕ್ಕೆ ನಿಯುಕ್ತರಾಗಿರುತ್ತಾರೆ.

ಮನೆಗೆಲಸದ ಮಹಿಳೆಯರೂ ಕೂಡ ಹೊಸ ಆರ್ಥಿಕ ನೀತಿ ಹಾಗೂ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮ, ಉದಾರೀಕರಣ ಹಾಗೂ ಜಾಗತೀಕರಣ ಸಂದರ್ಭದಲ್ಲಿ ಬಲಿಪಶುಗಳಾಗಿದ್ದಾರೆ. ಹೊಸ ಆರ್ಥಿಕ ನೀತಿಯಿಂದಾಗಿ ತಾಂತ್ರಿಕ ಶಿಕ್ಷಣ ಪಡೆದವರು ಉತ್ತಮ ಉದ್ಯೋಗಾವಕಾಶಗಳನ್ನು ಪಡೆದರೆ ಕೆಲವರು ಅಂಚಿನ ಉದ್ಯೋಗಿಗಳಾಗಿ ಮುಂದುವರೆಯಬೇಕಾಗುತ್ತದೆ. ಈ ಜೀವನ ಅವರಿಗೆ ಅನಿವಾರ್ಯವಾಗಿದೆ ಏಕೆಂದರೆ ಅವರು ತಮ್ಮ ಕುಟುಂಬವನ್ನು ಸಲಹುವ ಹೊಣೆ ಹೊತ್ತಿರುತ್ತಾರೆ ಎಂಬ ಸ್ತ್ರೀ ವಾದಿಗಳಾದ ನಿರ್ಮಲಾ ಬ್ಯಾನರ್ಜಿ, ಕಲ್ಪಾಗಮ್, ಇಳಾಭಟ್ ಹಾಗೂ ಜಯಂತಿ ಘೋಶ್‌ರವರ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆದರೂ ಮಹಿಳಾ ಮನೆಗೆಲಸದ ದುಡಿಮೆಗಾರರು ಸ್ತ್ರೀವಾದಿ ಹೋರಾಟಗಾರರ ಗಮನಕ್ಕೆ ಹೆಚ್ಚಾಗಿ ಬಾರದೇ ಹೋದದ್ದು ವಿಪರ್ಯಾಸದ ಸಂಗತಿಯಾಗಿದೆ. ಏಕೆಂದರೆ ಮನೆಗೆಲಸವು ಕೂಡ ಅನೌಪಚಾರಿಕ ವಲಯದ ಗುಣಲಕ್ಷಣಗಳನ್ನು ಹೊಂದಿದ್ದು, ಸಮಾಜದ ಕೆಳಸ್ತರದ ಹಾಗೂ ಶೋಷಣಾಮಯವಾದ ವಲಯವಾಗಿದೆ. ಮಹಿಳೆಯರ ದುಡಿಮೆಯು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಏಕೆಂದರೆ ಮನೆಯೊಳಗೆ ಹಾಗೂ ಬೇರೆಯವರ ಮನೆಯ ದುಡಿಮೆಗಳು ಮಹಿಳೆಯರಿಗೆ ಇಬ್ಬಗೆಯ ಹೊರೆಯಾಗುತ್ತದೆ. ಮಹಿಳೆಯರ ಕುಟುಂಬ ವರ್ಗದವರು ಕೂಡ ಇಲ್ಲಿ ಬಲಿಪಶುಗಳಾಗಿರುತ್ತಾರೆ. ಏಕೆಂದರೆ ಮನೆಯ ಮಕ್ಕಳು ಹಾಗೂ ಹಿರಿಯರು ಮಹಿಳೆಯ ಪೋಷಣೆಯಿಂದ ವಂಚಿತರಾಗುವುದಲ್ಲದೆ, ಉತ್ತಮ ಶಿಕ್ಷಣ ಹಾಗೂ ಆರೋಗ್ಯದಿಂದ ಹೊರ ಉಳಿದು ತಾವು ಕೂಡ ಇದೇ ವೃತ್ತಿಗೆ ತೆರಳಬೇಕಾಗುತ್ತದೆಂಬುದು ಲೇಖಕರ ವಿಷಾದಮಯ ಹೇಳಿಕೆಯಾಗಿದೆ.

ಭಾರತದಂತಹ ರಾಷ್ಟ್ರದಲ್ಲಿ ಇಂತಹ ದುಡಿಮೆಗಾರರ ಬಗ್ಗೆ ಅಂಕಿಅಂಶಗಳು ಅಷ್ಟೇನೂ ಲಭ್ಯವಿಲ್ಲ, ಆದರೂ ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಜೇಷನ್ ಹಾಗೂ ಶ್ರಮಶಕ್ತಿ ಸಂಘದವರು ೧೯೮೮ ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ೧೬.೮ ಲಕ್ಷ ಮಹಿಳಾ ದುಡಿಮೆಗಾರರು ಹಾಗೂ ೬.೨ ಲಕ್ಷ ಪುರುಷ ಮನೆಗೆಲಸಗಾರರಿರುವರೆಂದು ಅಂದಾಜು ಮಾಡಲಾಗಿದೆ. ಮಹಿಳಾ ಮನೆಗೆಲಸದ ದುಡಿಮೆಗಾರರು ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಒಂದು ದುಡಿಮೆಗಾರರ ಪಡೆಯಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಮೇಲೆ ಹೇಳಿದ ಎಲ್ಲಾ ರೀತಿಯ ಸಮಸ್ಯೆಗಳನ್ನು ಎದುರಿಸಲು ಅಥವಾ ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಕೆಲಸಗಾರರು ಒಗ್ಗಟ್ಟಾಗಬೇಕು. ಆದರೆ ಈ ರೀತಿಯ ಒಗ್ಗಟ್ಟಿನ ಹೋರಾಟ ಕರ್ನಾಟಕದಲ್ಲಿ ಅಷ್ಟಾಗಿ ಕಾಣಸಿಗುವುದಿಲ್ಲ, ಆದರೆ ಲೇಖಕರು ಕರ್ನಾಟಕವನ್ನು ಹೊರತು ಪಡಿಸಿ ದೇಶದ ಬೇರೆ ಬೇರೆ ಕಡೆ ಸಂಘಟಿತರಾಗಿ ಹೋರಾಟ ನಡೆಸಿರುವ ಸಂಘಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.

ಮಹಿಳಾ ಕಾರ್ಮಿಕರು ತಮಗಾಗುತ್ತಿರುವ ಕಿರುಕುಳದಿಂದ ತಪ್ಪಿಸಿಕೊಳ್ಳಲು ಅಥವಾ ಶೋಷಣೆಯ ವಿರುದ್ಧ ದನಿಯೆತ್ತಲು ಅವರಿಗೆ ಅನೇಕ ಎಡರು ತೊಡರುಗಳಿವೆ. ಅದರಲ್ಲಿ ಮೊದಲನೆಯದಾಗಿ ಮಹಿಳೆಯರು ಒಂದೇ ಕೆಲಸದಲ್ಲಿ ನೆಲೆಯೂರಿ ನಿಲ್ಲುವುದಿಲ್ಲ, ಯಾವ ಕೆಲಸ ತಮಗೆ ಹೆಚ್ಚಿನ ಲಾಭ ವೇತನ ತರುತ್ತದೆಯೋ ಅಂತಹ ಕೆಲಸಕ್ಕೆ ಬೇಗನೆ ಪಲ್ಲಟಗೊಳ್ಳುತ್ತಾರೆ, ಎರಡನೇಯದಾಗಿ ಬಹಳ ಸಂಖ್ಯೆಯ ಕೆಲಸಗಾರರು ಅವಿದ್ಯಾವಂತರಿರುವುದರಿಂದ ಸಂಘಗಳನ್ನು ಸ್ಥಾಪಿಸಿ ಹೋರಾಡುವ ಚಾಣಾಕ್ಷತನ ಹಾಗೂ ಜಾಗೃತ ಮನೋಭಾವ ಇರುವುದಿಲ್ಲ. ಇಂತಹ ಸನ್ನಿವೇಶಗಳ ವಿರುದ್ಧ ಹೋರಾಡಿದ ಸಂದರ್ಭಗಳನ್ನು ಮನಗಾಣಲು ಸಮೂಹ ಮಾಧ್ಯಮಗಳ ಸಂಪರ್ಕವಿರಬೇಕು. ಆದರೆ ಅವರಿಗೆ ಇದಕ್ಕೆಲ್ಲಾ ಸಮಯದ ಅಭಾವ ಕಾಡುತ್ತದೆ. ಈ ಎಲ್ಲಾ ಕಾರಣಗಳಿಂದ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಾಣದೆ ಹಾಗೂ ಹೋರಾಡಲೂ ಆಗದೆ ಜೀವನ ನಿರ್ವಹಣೆಗಾಗಿ ಇದ್ದ ಸ್ಥಿತಿಯಲ್ಲಿಯೇ ಮುಂದುವರೆಯುವುದು ಅವರಿಗೆ ಅನಿವಾರ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಅಸಂಘಟಿತ ವಲಯದ ದುಡಿಮೆಗಾರರಲ್ಲಿ ಅತೀ ಕೆಳವರ್ಗಕ್ಕೆ ಸೇರಿದ ಹಾಗೂ ಹೆಚ್ಚಿನ ಶೋಷಣೆಗೊಳಗಾಗುವ ಮನೆಗೆಲಸದ ದುಡಿಮೆಗಾರರ ಸ್ಥಿತಿಗತಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವುದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕು. ಬಳ್ಳಾರಿಯು ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ೩೦೪ ಕಿ.ಮೀ ದೂರದಲ್ಲಿದೆ. ಇದು ಅನೇಕ ರಾಜ ಮನೆತನಗಳು ಆಳಿದ ರಾಜಕೀಯ, ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ವಿಶ್ವ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಕೇಂದ್ರವಾದ ಹಂಪಿ ಈ ಜಿಲ್ಲೆಯಲ್ಲಿ ಇದೆ. ಈ ಜಿಲ್ಲೆ ಭೌಗೋಳಿಕವಾಗಿ ವೈವಿಧ್ಯಮಯವಾದ ಪ್ರದೇಶವಾಗಿದ್ದು, ೭ ತಾಲೂಕುಗಳು, ೨೮ ಹೋಬಳಿಗಳು, ಹಾಗೂ ೧೮೯ ಗ್ರಾಮಪಂಚಾಯಿತಿಗಳನ್ನು ಒಳಗೊಂಡಿದೆ. ಪಶ್ಚಿಮ ಭಾಗದ ತಾಲೂಕುಗಳಾದ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ,

ಕೂಡ್ಲಿಗಿಗಳಲ್ಲಿ ಕೃಷಿಯು ಪ್ರಧಾನ ಚಟುವಟಿಕೆಯಾಗಿದ್ದರೆ, ಪೂರ್ವದ ತಾಲೂಕುಗಳಾದ ಸಂಡೂರು, ಹೊಸಪೇಟೆ, ಬಳ್ಳಾರಿಯಲ್ಲಿ ಕೃಷಿಯ ಜೊತೆ ಗಣಿಗಾರಿಕೆ ಉದ್ಯಮ ಪ್ರಮುಖವಾಗಿದೆ.

'ಕರ್ನಾಟಕ ಅಭಿವೃದ್ಧಿಯ ಆಕೃತಿ' ಎಂಬ ಕೃತಿಯಲ್ಲಿ ಚಂದ್ರಶೇಖರ್ ಟಿ.ಆರ್ ಅವರು ರಾಷ್ಟ್ರದ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವವರ ಆಶಯವನ್ನು ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. ೧೧ನೇ ಯೋಜನೆಯಲ್ಲಿ ಪ್ರಧಾನ ಮಂತ್ರಿ ಮನ್‌ಮೋಹನ್ ಸಿಂಗ್‌ರವರು 'ಜನರನ್ನು ಒಳಗೊಳ್ಳುವ ಅಭಿವೃದ್ಧಿ' ಕುರಿತಾಗಿ ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ. ಈಗಿನ ಹಣಕಾಸು ಮಂತ್ರಿ ಪಿ.ಚಿದಂಬರಂ ಕೂಡ ೨೦೦೭-೦೮ರ ಬಜೆಟ್‌ನಲ್ಲಿ ನಮ್ಮ ಉದ್ದೇಶ 'ವರ್ಧನೆಯಾದ ವರಮಾನವು ಹೆಚ್ಚು ಜನರನ್ನು ಒಳಗೊಳ್ಳಬೇಕು' ಎಂದಿದ್ದಾರೆ. ಅಭಿವೃದ್ಧಿಯಾದ ವರಮಾನವು ಆಹಾರವಾಗಿ, ಅಕ್ಷರವಾಗಿ, ಆರೋಗ್ಯವಾಗಿ, ಪರಿವರ್ತನೆಯಾಗಬೇಕು ಎಂದಿದ್ದಾರೆ. ಜನರನ್ನು ಒಳಗೊಳ್ಳುವ ಅಭಿವೃದ್ಧಿಯು ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಒಳಗೊಂಡ ಅಭಿವೃದ್ಧಿಯಾಗಬೇಕು ಎಂಬುವುದು ಇವರೆಲ್ಲರ ಆಶಯವಾಗಿದೆ.

ಆದರೆ ರಾಷ್ಟ್ರ ಮತ್ತು ರಾಜ್ಯದಲ್ಲಿ ಶೇ. ೮೦ರಷ್ಟು ಸಂಪನ್ಮೂಲಗಳನ್ನು ಬಳಸಿ ಶೇ. ೧೦ರಷ್ಟು ಜನ ಲಾಭ ಪಡೆಯುತ್ತಿದ್ದಾರೆ, ಇನ್ನುಳಿದ ಶೇ. ೯೦ರಷ್ಟು ಜನ ಶೇ. ೧೦ರಿಂದ ೨೦ರಷ್ಟು ಸಂಪನ್ಮೂಲ ಗಳನ್ನು ಅವಲಂಬಿಸಿ ಜೀವಿಸುತ್ತಿದ್ದಾರೆಂದು (ಸಂಗೀತಾ.ಪಿ.೨೦೦೭) ಅಭಿಪ್ರಾಯ ಪಡುತ್ತಾರೆ.

ಕೈಗಾರಿಕೀಕರಣದಿಂದ ಸ್ಥಾಪಿತಗೊಂಡ ಕಾರ್ಖಾನೆಗಳಲ್ಲಿ ಹಾಗೂ ಗಣಿಗಾರಿಕೆಯಲ್ಲಿ ಕೆಲಸ ಅರಸಿ, ಅನೇಕ ಜನ ಬಳ್ಳಾರಿ ಜಿಲ್ಲೆಗೆ ವಲಸೆ ಬರುತ್ತಿದ್ದಾರೆ. ಹಳ್ಳಿಗಳಲ್ಲಿ ಕೃಷಿ ಹಿನ್ನಡೆ ಉಂಟಾಗಿದ್ದರಿಂದ ಈ ವಲಸೆ ಜನರಿಗೆ ಅನಿವಾರ್ಯವಾಗಿದೆ. ಇಂತಹ ಜನ ಕೃಷಿಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮನೆಗೆಲಸದಂತಹ ಕಡಿಮೆ ಕೂಲಿಯ ಕೆಲಸವನ್ನು ಆಯ್ದುಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಂತಹ ಜನರ ಜೀವನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿರುತ್ತದೆ. ಇದುವರೆಗೆ ಚರ್ಚಿಸಲಾದ ವಿದ್ವಾಂಸರ ಅಭಿಪ್ರಾಯದ ಮೇರೆಗೆ ಅಧ್ಯಯನದ ಸಂಶೋಧನಾ ಪ್ರಶ್ನೆಗಳನ್ನು ರೂಪಿಸಲಾಗಿದೆ. ಪ್ರಶ್ನೆಗಳು ಈ ರೀತಿಯಾಗಿವೆ.

ಸಂಶೋಧನಾ ಪ್ರಶ್ನೆಗಳು:

೧. ಮಹಿಳೆಯರ ದುಡಿಮೆಯು ಅಪಮೌಲ್ಯೀಕರಣಗೊಳ್ಳಲು ಕಾರಣವೇನು?

೨. ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಹಾಗೂ ಅಸಂಘಟಿತ ವಲಯ ಎಂಬ ವರ್ಗೀಕರಣ ಏಕೆ ಉಂಟಾಗುತ್ತಿದೆ?

೩. ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ ಕಾಣಲು ಕಾರಣವೇನು?

೪. ಅಸಂಘಟಿತ ವಲಯದ ಪ್ರಮುಖ ಲಕ್ಷಣಗಳಾವುವು?

೫. ಮಹಿಳೆಯರು ನಿರ್ವಹಿಸುವ ವೈವಿಧ್ಯಮಯ ಚಟುವಟಿಕೆಗಳು ಹೇಗೆ ವಿಂಗಡಿಸಲ್ಪಟ್ಟಿವೆ?

೬. ಮಹಿಳೆಯರು ಅಸಂಘಟಿತ ವಲಯವನ್ನು ಪ್ರವೇಶಿಸಲು ಕಾರಣವೇನು?

೭. ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಯಲ್ಲಿ ಮಹಿಳಾ ಶ್ರಮಬಲದ ಪೂರೈಕೆ ಅಧಿಕಗೊಳ್ಳಲು ಕಾರಣವೇನು?

೮. ಮಹಿಳೆಯು ಅಸಂಘಟಿತ ವಲಯದಲ್ಲಿ ನೆಲೆಯೂರಲು ಕಾರಣವಾದ ಕೌಟುಂಬಿಕ, ಸಾಮಾಜಿಕ, ಹಾಗೂ ಆರ್ಥಿಕ ಅಂಶಗಳಾವುವು?

೯. ಸಮಾಜದ ಅತೀ ಕೆಳಸ್ತರದ ದುಡಿಮೆ ಎನಿಸಿಕೊಂಡ ಮನೆಗೆಲಸದ ದುಡಿಮೆಯಲ್ಲಿ ಮಹಿಳೆಯು ತೊಡಗಲು ಕಾರಣವೇನು?

೧೦. ಮಹಿಳಾ ಉದ್ಯೋಗಿಗಳಿಗೆ ಸರಕಾರದ ಶಾಸನಾತ್ಮಕವಾದ ಯಾವ ರಕ್ಷಣೆಯೂ ಸಿಗದೇ ಇರಲು ಕಾರಣವೇನು?

೧.೨: ಅಧ್ಯಯನದ ಉದ್ದೇಶಗಳು

ಅಧ್ಯಯನದ ಸಂದರ್ಭದಲ್ಲಿ ಆರ್ಥಿಕ ಅಭಿವೃದ್ಧಿಗೆ ಪ್ರಮುಖ ಕೊಡುಗೆಯನ್ನು ನೀಡುವ ಅಸಂಘಟಿತ ವಲಯದ ಸವಿವರವಾದ ಅಧ್ಯಯನವನ್ನು ಕೈಗೊಳ್ಳುವುದರ ಜೊತೆಯಲ್ಲಿ ಈ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಮನೆಗೆಲಸಗಾರರ ಸ್ಥಿತಿಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನದ ಸಂಶೋಧನಾ ಪ್ರಶ್ನೆಗಳು ಸಮೀಕ್ಷೆಯನ್ನು ಆಧರಿಸಿವೆ. ಈ ಸಂಶೋಧನಾ ಪ್ರಶ್ನೆಗಳನ್ನು ಆಧರಿಸಿಯೇ ಅಧ್ಯಯನದ ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿದೆ.

೧. ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಹಾಗೂ ಅಸಂಘಟಿತ ವಲಯವೆಂಬ ವರ್ಗೀಕರಣ ಉಂಟಾಗಲು ಕಾರಣಗಳನ್ನು ಗುರುತಿಸುವುದು.

೨. ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ ಕಂಡು ಬರಲು ಕಾರಣವೇನೆಂದು ವಿಶ್ಲೇಷಿಸುವುದು.

೩. ಮಹಿಳೆಯರು ಅಸಂಘಟಿತ ವಲಯವನ್ನು ಪ್ರವೇಶಿಸಲು ಕಾರಣವಾದ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.

೪. ಮಹಿಳಾ ಮನೆಗೆಲಸದ ದುಡಿಮೆಗಾರರ ಔದ್ಯೋಗಿಕ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸುವುದರ ಜೊತೆಗೆ ದುಡಿಮೆಗಾರರಿಗೆ ಸರ್ಕಾರದ ಸಾಮಾಜಿಕ ಭದ್ರತಾ ಸೌಲಭ್ಯಗಳು ದೊರೆಯದೇ ಇರಲು ಕಾರಣವಾದ ಸಂಗತಿಗಳನ್ನು ಪರಿಶೀಲಿಸುವುದು ಅಧ್ಯಯನದ ಬಹುಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶಗಳಿಗೆ ಉತ್ತರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ವಿಧಾನವನ್ನು ರೂಪಿಸಲಾಗಿದೆ.

೧.೩: ಅಧ್ಯಯನದ ವಿಧಾನ

ಈ ಅಧ್ಯಯನವು ಲಿಂಗಸಂಬಂಧಗಳನ್ನು ಕುರಿತಾದದ್ದು, ಇದರಲ್ಲಿ ಅನೇಕ ವೈಧಾನಿಕವಾದ ಸಮಸ್ಯೆಗಳಿವೆ. ಏಕೆಂದರೆ ಪುರಾವೆಗಳಿಲ್ಲದೆ, ದಾಖಲೆಯಿಲ್ಲದೆ, ವಿಷಯವು ಯಾರಿಗೂ ಒಪ್ಪಿಗೆಯಾಗುವುದಿಲ್ಲ. ಆದರೆ ಮಹಿಳಾ ಮನೆಗೆಲಸಗಾರರ ಪರಿಸ್ಥಿತಿಯು ಅನುಭವಾತ್ಮಕವಾದದ್ದು. ಈ ಕಾರಣಕ್ಕಾಗಿ ಅಧ್ಯಯನದಲ್ಲಿ ವಸ್ತುನಿಷ್ಠ ಹಾಗೂ ವ್ಯಕ್ತಿ ನಿಷ್ಠ ಅನುಭವಗಳನ್ನು ಸಂಯೋಜನೆ ಮಾಡಿಕೊಂಡು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಅಧ್ಯಯನದಲ್ಲಿ ಗುರುತಿಸಿಕೊಂಡ ನಾಲ್ಕು ಉದ್ದೇಶಗಳಿಗೆ ಅಗತ್ಯ ಮಾಹಿತಿಯನ್ನು ಈ ಕೆಳಕಂಡ ವಿಧಾನಗಳಿಂದ ಸಂಗ್ರಹಿಸಲಾಗಿದೆ.

೧. **ಆನುಷಂಗಿಕ ಮೂಲಗಳಿಂದ ಮಾಹಿತಿ ಸಂಗ್ರಹಣೆ:** ಜನಗಣತಿ ವರದಿ, ಕರ್ನಾಟಕ ಮಾನವ ಅಭಿವೃದ್ಧಿ ವರದಿ, ಕರ್ನಾಟಕ ಅಭಿವೃದ್ಧಿ ವರದಿ, ಟುವರ್ಡ್ಸ್ ಈಕ್ವಾಲಿಟಿ ವರದಿ, ಅರ್ಜುನ್‌ಸೇನ್ ಗುಪ್ತಾ ವರದಿ, ಶ್ರಮಶಕ್ತಿ ವರದಿ, ಪಿಎಚ್.ಡಿ ಸಂಶೋಧನೆಗಳು, ವಿದ್ವಾಂಸರ ಗ್ರಂಥಗಳು ಮುಂತಾದ ಮೂಲಗಳಿಂದ ಮಾಹಿತಿ ಸಂಗ್ರಹಿಸಿಕೊಂಡು ವಿಶ್ಲೇಷಣೆ ಮಾಡಿ ಅಧ್ಯಯನದ ಒಂದನೆಯ ಹಾಗೂ ಎರಡನೇಯ ಉದ್ದೇಶಗಳಿಗೆ ಉತ್ತರ ಕಂಡುಕೊಳ್ಳಲಾಗಿದೆ.

೨. **ಮಹಿಳಾ ಮನೆಗೆಲಸಗಾರರಿಗೆ ಪ್ರಶ್ನಾವಳಿ:** ಮಹಿಳೆಯರ ದುಡಿಮೆಗೆ ಸಂಬಂಧಿಸಿದಂತೆ ಮತ್ತು ಮನೆಗೆಲಸದ ಕ್ಷೇತ್ರವನ್ನು ಪ್ರವೇಶಿಸಲು ಕಾರಣವಾದ ಆರ್ಥಿಕ, ಸಾಮಾಜಿಕ ಹಾಗೂ ಕೌಟುಂಬಿಕ ಅಂಶಗಳನ್ನು ಕಂಡು ಹಿಡಿಯಲು ಮತ್ತು ಮಹಿಳೆಯರಿಗೆ ದೊರೆಯುತ್ತಿರುವ ಸೌಲಭ್ಯಗಳ ಕುರಿತಂತೆ ಸಂಬಂಧಿಸಿದ ಮಾಹಿತಿಯನ್ನು ವಿವರವಾದ ಪ್ರಶ್ನಾವಳಿ ಮೂಲಕ ಸಂಗ್ರಹಿಸಲಾಗಿದೆ.

೩. **ಸಂದರ್ಶನ ಹಾಗೂ ಗುಂಪು ಚರ್ಚೆ:** ಮಹಿಳಾ ಮನೆಗೆಲಸಗಾರರು ಮತ್ತು ಅವರನ್ನು ನೇಮಿಸಿ ಕೊಳ್ಳುವ ಕುಟುಂಬದ ಸದಸ್ಯರಿಗೆ ಸಂದರ್ಶನ ಹಾಗೂ ಗುಂಪು ಚರ್ಚೆ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೪. **ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆ:** ಪ್ರಶ್ನಾವಳಿ, ಸಂದರ್ಶನ ಮತ್ತು ಗುಂಪುಚರ್ಚೆ ವಿಧಾನ ಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸುವುದರ ಮೂಲಕ ಅಧ್ಯಯನದ ಮೂರು ಹಾಗೂ ನಾಲ್ಕನೆಯ ಉದ್ದೇಶಗಳಿಗೆ ಉತ್ತರವನ್ನು ಕಂಡುಕೊಳ್ಳಲಾಗಿದೆ.

೫. **ಮಾಹಿತಿ ವಿಶ್ಲೇಷಣೆ ವಿಧಾನ:** ಗಣತೀಯ ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿ ಕೊಂಡು ಸಂಗ್ರಹಿಸಿದ ಮಾಹಿತಿ ವಿಶ್ಲೇಷಣಾ ಕಾರ್ಯವನ್ನು ಮಾಡಲಾಗಿದೆ. ಉದಾ: ಶೇಕಡಾ ಪ್ರಮಾಣ, ಅನುಪಾತ ವಿಧಾನ, ಸೂಚ್ಯಂಕ, ಕೋಷ್ಟಕ ಹಾಗೂ ಗ್ರಾಫ್ ವಿಧಾನ ಇತ್ಯಾದಿ. ಈ ಎಲ್ಲಾ ರೀತಿಯ ವಿಶ್ಲೇಷಣೆ ಹಾಗೂ ಚರ್ಚೆಯ ಮೂಲಕ ಅಧ್ಯಯನಕ್ಕೆ ಸಂಬಂಧಪಟ್ಟ ತೀರ್ಮಾನಗಳನ್ನು ರೂಪಿಸಲಾಗಿದೆ.

೬. **ನಮೂನೆಯ ಆಯ್ಕೆಯ ವಿನ್ಯಾಸ:** ಈ ಅಧ್ಯಯನವು ಅಸಂಘಟಿತ ವಲಯದಲ್ಲಿನ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿಗತಿಯನ್ನು ತಿಳಿಯಲು ನಡೆಸಿದ ಅಧ್ಯಯನವಾಗಿದೆ. ಆದ್ದರಿಂದ

ಮಾಹಿತಿ ಸಂಗ್ರಹಿಸುವುದಕ್ಕೆ ಅಗತ್ಯವಾದ ಮನೆಗೆಲಸದ ಮಹಿಳಾ ದುಡಿಮೆಗಾರರನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ಉದ್ದೇಶ ಪೂರಿತ ಆಯ್ಕೆ. ಇದಕ್ಕೆ ಕೆಳಗಿನ ಕಾರಣ ಗಳನ್ನು ಸಮರ್ಥನೆಯಾಗಿ ನೀಡಲಾಗಿದೆ.

ಅ) ಕರ್ನಾಟಕ ರಾಜ್ಯದಲ್ಲಿ ನಗರೀಕರಣವು ವೇಗವಾಗಿ ನಡೆಯುತ್ತಿರುವ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಒಂದಾಗಿದೆ. ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ನಗರವಾಸಿಗಳ ಪ್ರಮಾಣದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಗೆ ಐದನೆಯ ಸ್ಥಾನವಿದೆ. ರಾಜ್ಯ ಮಟ್ಟದಲ್ಲಿ ನಗರವಾಸಿಗಳ ಪ್ರಮಾಣ ೨೦೧೧ರಲ್ಲಿ ಶೇ. ೩೮.೬೭ರಷ್ಟಿದ್ದರೆ, ಬಳ್ಳಾರಿ ಜಿಲ್ಲೆಯಲ್ಲಿ ಅದು ೩೭.೫೨ರಷ್ಟಿದೆ. ಹೊಸಪೇಟೆಯ ನಗರವಾಸಿಗಳ ಪ್ರಮಾಣ ಶೇ. ೫೮.೯೨ರಷ್ಟಿದೆ.

ಬ) ಮನೆಗೆಲಸಕ್ಕೆ ಬೇಡಿಕೆಯು ನಗರ ಪ್ರದೇಶದಲ್ಲಿ ಅಧಿಕವಾಗಿರುತ್ತದೆ. ಹಾಗೂ ಕೃಷಿಯೇತರ ಉದ್ಯೋಗ ಎಲ್ಲಿ ಅಧಿಕವಾಗಿರುವುದೋ ಅಲ್ಲಿ ಮನೆಗೆಲಸದ ಬೇಡಿಕೆ ಅಧಿಕ ವಾಗಿರುತ್ತದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಒಟ್ಟು ದುಡಿಮೆಗಾರರಲ್ಲಿ ಕೃಷಿಯನ್ನು ಅವಲಂಬಿಸಿ ಕೊಂಡಿರುವವರ ಪ್ರಮಾಣ ಶೇ. ೪೪.೧೫ರಷ್ಟಾದರೆ ಕೃಷಿಯೇತರ ಚಟುವಟಿಕೆಗಳನ್ನು ಅವಲಂಬಿಸಿ ಕೊಂಡಿರುವವರ ಪ್ರಮಾಣ ೫೫.೮೫ರಷ್ಟಿದೆ.

ಕ) ಹೊಸಪೇಟೆ ತಾಲೂಕು ನಗರದಲ್ಲಿನ ಒಟ್ಟು ದುಡಿಮೆಗಾರರ ಸಂಖ್ಯೆ ೯೮೭೫೯. ಇವರಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಕೇವಲ ಶೇ. ೧೮.೮೭.

ಈ ಮೇಲಿನ ಸಂಗತಿಗಳು ನಮ್ಮ ಅಧ್ಯಯನಕ್ಕೆ ಹೊಸಪೇಟೆ ನಗರವನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಸೂಕ್ತವಾದ ಆಧಾರಗಳಾಗಿವೆ ಎಂದು ಭಾವಿಸಲಾಗಿದೆ.

ನಮ್ಮ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ಸಂಗ್ರಹಿಸುವುದಕ್ಕೆ ಮನೆಗೆಲಸದ ಮಹಿಳಾ ದುಡಿಮೆಗಾರರನ್ನು ಕೆಳಕಂಡ ವಿಧಾನದಲ್ಲಿ ಆಯ್ಕೆ ಮಾಡಲಾಗಿದೆ. ಮನೆಗೆಲಸದ ಮಹಿಳಾ ದುಡಿಮೆಗಾರರ ಬಗ್ಗೆ ಕಾರ್ಮಿಕ ಇಲಾಖೆಯಲ್ಲಾಗಲಿ ಅಥವಾ ನಗರಸಭೆಯಲ್ಲಾಗಲಿ ಮಾಹಿತಿ ಇಲ್ಲ. ಆದ್ದರಿಂದ ೨೦೧೧ರ ಜನಗಣತಿಯನ್ನು ಆಧರಿಸಿ ನಮೂನೆಯನ್ನು ಸಿದ್ಧಪಡಿಸಲಾಗಿದೆ.

ಜನಗಣತಿಯಲ್ಲಿ ದುಡಿಮೆಗಾರರನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಲಾಗುತ್ತದೆ. (೧) ಸಾಗುವಳಿದಾರರು (೨) ಕೃಷಿ ಕಾರ್ಮಿಕರು (೩) ಕೌಟುಂಬಿಕ ಕೈಗಾರಿಕಾ ದುಡಿಮೆಗಾರರು (೪) ಇತರೆ ದುಡಿಮೆಗಾರರು.

ಈ ನಾಲ್ಕು ಗುಂಪುಗಳಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರು ನಾಲ್ಕನೆಯ ವರ್ಗವಾದ 'ಇತರೆ ದುಡಿಮೆಗಾರರು' ಗುಂಪಿಗೆ ಸೇರುತ್ತಾರೆ. ಹೊಸಪೇಟೆ ನಗರದಲ್ಲಿ ಇತರೆ ಮಹಿಳಾ ದುಡಿಮೆಗಾರರ ಸಂಖ್ಯೆ ೧೫೯೪. ಈ ಗುಂಪಿನಲ್ಲಿ ವಿಧವಿಧದ ಉದ್ಯೋಗ ಮಾಡುವ ಮಹಿಳೆಯರಿದ್ದಾರೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳು, ನಗರ ಸಭೆಯ ಅಧಿಕಾರಿಗಳು, ತಜ್ಞರು, ಮಾರ್ಗದರ್ಶಕರ

ಜೊತೆ ನಡೆಸಿದ ಚರ್ಚೆಯಲ್ಲಿ 'ಇತರೆ ದುಡಿಮೆಗಾರರು' ಎಂಬ ಮೊತ್ತದಲ್ಲಿ ಶೇ. ೧೫ರಷ್ಟು ಮನೆಗೆಲಸದ ಮಹಿಳೆಯರಿದ್ದಾರೆಂದು ತೀರ್ಮಾನಿಸಲಾಗಿದೆ. ಇದು ಉದ್ದೇಶ ಪೂರ್ವ (ಪರ್ಪಸಿವ್ ಸ್ಯಾಂಪಲಿಂಗ್) ಆಯ್ಕೆಯಾಗಿದೆ.

ಮೇಲೆ ಚರ್ಚಿಸಿರುವ ಪ್ರಕಾರ ಹೊಸಪೇಟೆ ನಗರದಲ್ಲಿರುವ 'ಇತರೆ ಮಹಿಳಾ ದುಡಿಮೆಗಾರರ' ಸಂಖ್ಯೆ ೧೫೩೯೪. ಇವರಲ್ಲಿ ಶೇ. ೧೫ರಷ್ಟು ಮನೆಗೆಲಸದ ಮಹಿಳಾ ದುಡಿಮೆಗಾರರಿದ್ದಾರೆ. ಅವರ ಸಂಖ್ಯೆ ೨೩೦೯. ಇವರನ್ನು ೨೫೦೦ ಎಂದು ರೂಪಿಸಿಕೊಳ್ಳಲಾಗಿದೆ.

ಹೊಸಪೇಟೆ ನಗರದಲ್ಲಿರುವ ೨೫೦೦ ಮನೆಗೆಲಸದ ಮಹಿಳಾ ದುಡಿಮೆಗಾರರಲ್ಲಿ ಶೇ. ೧೦ರಷ್ಟನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟಾರೆ ನಮ್ಮ ನಮೂನೆಯಲ್ಲಿರುವ ಮನೆಗೆಲಸದ ಮಹಿಳಾ ದುಡಿಮೆಗಾರರ ಸಂಖ್ಯೆ ೨೫೦. ಈ ನಮೂನೆಯು ನಗರದ ಬಡಾವಣೆಗಳ ದೃಷ್ಟಿಯಿಂದ ಮತ್ತು ಜಾತಿವಾರು ದೃಷ್ಟಿಯಿಂದ ಪ್ರಾತಿನಿಧಿಕವಾಗಿರುವಂತೆ ನೋಡಿಕೊಳ್ಳಲಾಗಿದೆ. ಹೊಸಪೇಟೆ ನಗರದ ಹತ್ತು ಮುಖ್ಯ ಬಡಾವಣೆಗಳಿಂದ ಮನೆಗೆಲಸದ ಮಹಿಳಾ ದುಡಿಮೆಗಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೪: ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು: ಅಧ್ಯಯನದ ಮಹತ್ವ

ವ್ಯಾಪ್ತಿ : ಅಧ್ಯಯನದ ಸಂದರ್ಭದಲ್ಲಿ ಆರ್ಥಿಕ ಅಭಿವೃದ್ಧಿಗೆ ಪ್ರಮುಖ ಕೊಡುಗೆಯನ್ನು ನೀಡುವ ಅಸಂಘಟಿತ ವಲಯದ ಸವಿವರವಾದ ಅಧ್ಯಯನವನ್ನು ಕೈಕೊಳ್ಳುವುದರ ಜೊತೆಯಲ್ಲಿ ಈ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಮನೆಗೆಲಸಗಾರರ ಸ್ಥಿತಿಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಗರ ಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನವು ೨೦೧೨ನೇ ಸಾಲಿನ ಮನೆಗೆಲಸದ ಮಹಿಳಾ ದುಡಿಮೆಗಾರರ ಕುರಿತಾದ ಕ್ಷೇತ್ರಾಧ್ಯಯನವನ್ನು ಆಧರಿಸಿದೆ.

ಮಿತಿಗಳು : ಅಭಿವೃದ್ಧಿಶೀಲ ಆರ್ಥಿಕತೆಯಾದ ಭಾರತದಂತಹ ದೇಶದಲ್ಲಿ ಮನೆಗೆಲಸದ ದುಡಿಮೆಗಾರರ ಸ್ಥಿತಿಗತಿ ಕುರಿತಾದ ಅಧ್ಯಯನವು ತನ್ನದೇ ಆದ ಮಹತ್ವದಿಂದ ಕೂಡಿದೆಯಾದರೂ, ನಮ್ಮ ಅಧ್ಯಯನದ ಸಂದರ್ಭದಲ್ಲಿ ಈ ಕೆಳಕಂಡ ಮಿತಿಗಳನ್ನು ಗುರುತಿಸಲಾಗಿದೆ.

ಅಧ್ಯಯನವು ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರನ್ನು ಪ್ರಧಾನವಾಗಿ ಪರಿಗಣಿಸಿದೆ. ಅನೇಕ ಅಧ್ಯಯನಕಾರರು ಗುರುತಿಸಿದಂತೆ ಅಸಂಘಟಿತ ವಲಯದಲ್ಲಿರುವ ದುಡಿಮೆಗಾರರ ಗಣತಿ ಕಾರ್ಯವು ನಡೆದಿರುವುದಿಲ್ಲ. ಆದ್ದರಿಂದ ಜನಗಣತಿ ವರದಿಯನ್ನು ಆಧರಿಸಿ, ಹೊಸಪೇಟೆ ನಗರದ ಕಾರ್ಮಿಕ ಇಲಾಖೆ, ಪುರಸಭೆ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ನಮೂನೆಯನ್ನು ರೂಪಿಸಲಾಗಿದೆ.

ಕಾಲ ಮತ್ತು ಸಂಪನ್ಮೂಲದ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹೊಸಪೇಟೆ ನಗರವನ್ನು ಮಾತ್ರ ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಸಂಘಟಿತ ವಲಯದ ಅತೀ ಕೆಳಸ್ತರದ ದುಡಿಮೆ ಎನಿಸಿಕೊಂಡ ಮನೆಗೆಲಸದ ದುಡಿಮೆಯಲ್ಲಿ ಪುರುಷರೂ ನಿರತರಾಗಿದ್ದಾರೆ. ಆದರೆ ನಮ್ಮ ಅಧ್ಯಯನದ ಸಂದರ್ಭದಲ್ಲಿ ಮಹಿಳಾ ಮನೆಗೆಲಸದ ದುಡಿಮೆಗಾರರನ್ನು ಮಾತ್ರ ಪರಿಗಣಿಸಲಾಗಿದೆ. ಪುರುಷ ಮತ್ತು ಮಹಿಳಾ ದುಡಿಮೆಗಾರರ ಸ್ಥಿತಿಗತಿಗಳನ್ನು ತುಲನೆ ಮಾಡುವ ಪ್ರಯತ್ನ ನಡೆದಿರುವುದಿಲ್ಲ.

ಅಧ್ಯಯನದ ಮಹತ್ವ : ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು ಸಮಾಜದ ಹಾಗೂ ಸರ್ಕಾರದ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಮಹಿಳೆ ತನ್ನ ಕುಟುಂಬದ ಹಿತಕ್ಕಾಗಿ ಮತ್ತು ಕುಟುಂಬವನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಲು ಇಬ್ಬಗೆಯ ದುಡಿಮೆಯಲ್ಲಿ ನಿರತಳಾಗಿದ್ದಾಳೆ. ಆದರೂ ಅವಳ ದುಡಿಮೆಗೆ ಯಾವುದೇ ಮನ್ನಣೆ ಸಿಗುತ್ತಿಲ್ಲ. ಮಹಿಳೆಯ ದುಡಿಮೆ ಕ್ರಯರಹಿತವಾಗಿದೆ ಮತ್ತು ಇದಕ್ಕೆ ಮರುಕಟ್ಟೆ ಮೌಲ್ಯ ಇಲ್ಲದಿರುವುದರಿಂದ ಅವರ ಕೆಲಸವನ್ನು ದುಡಿಮೆಯ ವ್ಯಾಪ್ತಿಗೆ ಸೇರಿಸುತ್ತಿಲ್ಲ. ಸಾಮಾನ್ಯವಾಗಿ ಮಹಿಳೆಯರು ವೇತನರಹಿತ ಮತ್ತು ವೇತನಸಹಿತ ದುಡಿಮೆಯಲ್ಲಿ ದಿನದ ಪೂರ್ತಿ ಸಮಯವನ್ನು ಕಳೆಯುತ್ತಿದ್ದರೂ ಅದು ಅವಳ ಕರ್ತವ್ಯವೆಂದೇ ಪರಿಗಣಿಸಲಾಗುತ್ತಿದೆ. ಸರ್ಕಾರ ಕಾರ್ಮಿಕರ ರಕ್ಷಣೆಗೆ ಮತ್ತು ಅವರ ಕಲ್ಯಾಣ ಕಾರ್ಯಕ್ರಮದ ಕುರಿತು ಶಾಸನಾತ್ಮಕ ಮತ್ತು ಸಂವಿಧಾನಾತ್ಮಕವಾದ ಕ್ರಮ ಕೈಕೊಂಡರೂ ಮಹಿಳಾ ದುಡಿಮೆಗಾರರ ಮೇಲೆ ದಬ್ಬಾಳಿಕೆ, ಶೋಷಣೆ ನಿರಂತರವಾಗಿ ನಡೆಯುತ್ತಿದೆ. ಇದಕ್ಕೆ ಕಾರಣ ಕಾರ್ಮಿಕರ ರಕ್ಷಣೆಗಾಗಿ ರಚಿತವಾಗಿರುವ ಕಾನೂನುಗಳನ್ನು ಜಾರಿಗೆ ತರುವಲ್ಲಿನ ತೊಡಕುಗಳು ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳು ಮಹಿಳಾ ದುಡಿಮೆಗಾರರ ಗಮನಕ್ಕೆ ಬಾರದೇ ಇರುವುದು.

ಮನೆಗೆಲಸದ ಮಹಿಳಾ ದುಡಿಮೆಗಾರರು ತಮ್ಮ ಔದ್ಯೋಗಿಕ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರ ಶ್ರಮವನ್ನು ದುಡಿಮೆ ಎಂದು ಪರಿಗಣಿಸುವಲ್ಲಿ ಜಿಜ್ಞಾಸೆ ಏರ್ಪಟ್ಟಿದೆ. ದುಡಿಮೆಗಾರರ ಹೆಸರು ಯಾವ ಸರ್ಕಾರಿ ಕಛೇರಿಗಳಲ್ಲಿಯೂ ನೋಂದಣಿಯಾಗಿರುವುದಿಲ್ಲ. ಈ ಕಾರಣದಿಂದಲೇ ಮಹಿಳಾ ದುಡಿಮೆಗಾರರ ಹಿತ ರಕ್ಷಣೆಗೆ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ನೀತಿ ನಿರೂಪಕರಿಗೆ ತೊಡಕಾಗಿದೆ. ಸರ್ಕಾರ ಇತ್ತೀಚೆಗೆ ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತಾ ಕ್ರಮಗಳನ್ನು ಜಾರಿಗೆ ತಂದರೂ ಅದು ಮನೆಗೆಲಸದ ಮಹಿಳಾ ದುಡಿಮೆಗಾರರಿಗೆ ಅನ್ವಯವಾಗಿರುವುದಿಲ್ಲ. ಈ ಕಾರಣಕ್ಕಾಗಿ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿಗತಿಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶವನ್ನು ಅಧ್ಯಯನವು ಒಳಗೊಂಡಿದೆ.

೧.೫: ಅಧ್ಯಾಯಗಳ ವಿನ್ಯಾಸ

ಪ್ರಥಮ ಅಧ್ಯಾಯ ಪ್ರಸ್ತಾವನೆಯು **"ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು, ಮಹಿಳಾ ಮನೆಗೆಲಸಗಾರರ ಸ್ಥಿತಿಗತಿ ಅಧ್ಯಯನ"** ಸಂಶೋಧನೆಗೆ ಸಂಬಂಧಪಟ್ಟಂತೆ, ಅಧ್ಯಯನದ ಸಮಸ್ಯೆಗಳನ್ನು ಹಾಗೂ ಅಧ್ಯಯನದ ಉದ್ದೇಶ ಮತ್ತು ಅಧ್ಯಯನವು ಯಾವ ವಿಧಾನದಲ್ಲಿ ನಡೆಯುತ್ತದೆ ಎಂಬ ಪರಿಕಲ್ಪನೆಯನ್ನು ನೀಡುತ್ತದೆ. ಅಧ್ಯಾಯಗಳ ವಿನ್ಯಾಸ, ವಿಷಯದ ವ್ಯಾಪ್ತಿ, ಮಿತಿ, ಮಹತ್ವಗಳ ಜೊತೆಗೆ ಈ ಕ್ಷೇತ್ರದಲ್ಲಿ ಈವರೆಗೆ ನಡೆದ ಅಧ್ಯಯನಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯ **ಅಧ್ಯಯನಗಳ ಸಮೀಕ್ಷೆ** ಎಂಬುದಾಗಿದ್ದು ಈ ಅಧ್ಯಾಯದಲ್ಲಿ ಅಸಂಘಟಿತ ವಲಯ ಹಾಗೂ ಅಲ್ಲಿನ ದುಡಿಮೆಗಾರರ ಕುರಿತಾಗಿ ಇದುವರೆಗೆ ನಡೆದ ಅಧ್ಯಯನಗಳನ್ನು ಪರಾಮರ್ಶಿಸಲಾಗಿದೆ. ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯ ಎಂಬ ವರ್ಗೀಕರಣ ಉಂಟಾಗಲು ಕಾರಣವೇನೆಂಬುದಕ್ಕೆ ವಿದ್ವಾಂಸರ ಅಭಿಪ್ರಾಯಗಳಿಂದ ಉತ್ತರ ಕಂಡು ಕೊಳ್ಳಲಾಗಿದೆ. ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ನೆಲೆಗೊಳ್ಳಲು ಕಾರಣವಾದ ಅಂಶಗಳನ್ನು ಪರಿಶೀಲಿಸಲಾಗಿದೆ. ಹಾಗೂ ಅಸಂಘಟಿತ ವಲಯದ ಅತೀ ಕೆಳಸ್ತರದ ದುಡಿಮೆ ಎನಿಸಿಕೊಂಡ ಮನೆಗೆಲಸದ ದುಡಿಮೆಯಲ್ಲಿನ ಮಹಿಳಾ ದುಡಿಮೆಗಾರರ ಕುರಿತಾದ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯ **ಅಧ್ಯಯನ ಕ್ಷೇತ್ರ: ಜಿಲ್ಲಾ ಪರಿಚಯ** ಎಂಬುದಾಗಿದ್ದು ಈ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರವಾದ ಬಳ್ಳಾರಿ ಜಿಲ್ಲೆ ಹಾಗೂ ಹೊಸಪೇಟೆಯ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಅಲ್ಲದೇ ಇಲ್ಲಿನ ಜನಸಂಖ್ಯೆ, ಸಾಕ್ಷರತೆ ಹಾಗೂ ಆದಾಯದ ಮಾಹಿತಿಯಲ್ಲದೇ ಇಲ್ಲಿ ಅಸಂಘಟಿತ ವಲಯ ಬೆಳೆದು ಬರಲು ಕಾರಣವಾದ ಅಂಶಗಳನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯ **ಮನೆಗೆಲಸದ ಮಹಿಳೆಯರ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ** ಆಗಿದ್ದು ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅಸಂಘಟಿತ ವಲಯವನ್ನು ಪ್ರವೇಶಿಸಲು ಕಾರಣವಾದ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಸಂಗತಿಗಳನ್ನು ವಿವೇಚಿಸಲಾಗಿದೆ. ಲಿಂಗತಾರತಮ್ಯವು ಕುಟುಂಬ ವ್ಯವಸ್ಥೆಯಲ್ಲಿ ಹೇಗೆ ಮೂಡಿಬರುತ್ತದೆ, ಆರ್ಥಿಕ ಮುಗ್ಗಟ್ಟು ಮಹಿಳೆಯು ಸಮಾಜದ ಕೆಳಸ್ತರದ ದುಡಿಮೆಯಲ್ಲಿ ನೆಲೆಯೂರಲು ಹೇಗೆ ಕಾರಣವಾಗುತ್ತದೆ ಮತ್ತು ಸಾಮಾಜಿಕ ಕಟ್ಟುಪಾಡುಗಳು ಮಹಿಳೆಯ ಪ್ರಗತಿಗೆ ಹೇಗೆ ಕಂಟಕಪ್ರಾಯವಾಗಿವೆ ಎಂಬುದನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯ **ಮಹಿಳೆಯರ ರಾಜಕೀಯ ಪ್ರಜ್ಞೆ ಹಾಗೂ ಔದ್ಯೋಗಿಕ ಸ್ಥಿತಿಗತಿಗಳ ಅಧ್ಯಯನ** ಎಂಬುದಾಗಿದ್ದು ಮನೆಗೆಲಸದ ಮಹಿಳೆಯರ ರಾಜಕೀಯ ಪ್ರಜ್ಞೆಯ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೇ ಮಹಿಳೆಯರು ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಲಾಗಿದೆ. ಮನೆಗೆಲಸಗಾರರ ದುಡಿಮೆಯ ಅವಧಿ, ಅವರ ವೇತನ, ಮುಂತಾದ ವಿಷಯಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಮಹಿಳಾ ದುಡಿಮೆಗಾರರು ಅಸ್ತಿತ್ವದಲ್ಲಿರುವ ಸಾಮಾಜಿಕ ಭದ್ರತಾ ಕ್ರಮಗಳಿಂದ ವಂಚಿತರಾಗಲು ಕಾರಣವೇನೆಂಬುದನ್ನು ವಿವರವಾದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯ **ಮನೆ ಮಾಲೀಕರ ಮಾಹಿತಿ** ಎಂಬುದಾಗಿದ್ದು ಇಲ್ಲಿ ಮನೆ ಮಾಲೀಕರು ತಮ್ಮ ಮನೆಯ ಕೆಲಸಗಾರರ ಕುರಿತು ನೀಡಿದ ಮಾಹಿತಿಗಳನ್ನು ವಿವರಿಸಲಾಗಿದೆ. ಅದರ ಜೊತೆಗೇ ಮನೆಗೆಲಸದ ಮಹಿಳಾ ದುಡಿಮೆಗಾರರಿಂದ ಸಂಗ್ರಹಿಸಿದ ಮಾಹಿತಿ ಹಾಗೂ ಮನೆ ಮಾಲೀಕರು ನೀಡಿದ ಮಾಹಿತಿಯನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯ **ಉಪಸಂಹಾರ**ದಲ್ಲಿ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರವಾಗಿ ಚರ್ಚಿಸುವುದರ ಜೊತೆಗೆ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿಗತಿಗಳ ಅವಲೋಕನವನ್ನೂ ಮಾಡಲಾಗಿದೆ. ಕೊನೆಯ ಹಂತವಾಗಿ ಮನೆಗೆಲಸದ ದುಡಿಮೆಗಾರರ ಸ್ಥಿತಿಗತಿ ಸುಧಾರಣೆಗಾಗಿ ಕೆಲವು ಸಲಹೆಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಅಸಂಘಟಿತ ವಲಯವು ಸರ್ಕಾರ ಹಾಗೂ ನೀತಿ ನಿರೂಪಕರ ನಿರ್ಲಕ್ಷ್ಯಕ್ಕೆ ಒಳಗಾದ ಬಗೆಯನ್ನು ಹೇಮಲತಾ ಹೆಚ್.ಎಂ. (೨೦೦೬) ಅವರ ಮಹಿಳಾ ಅಧ್ಯಯನ ಭಾಗ–೩, ಪು.ಸಂ. ೩೯ರಲ್ಲಿ ನೋಡಬಹುದು.

೨. ಅಪಮೌಲ್ಯೀಕರಣ ಎಂದರೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕಾರಣಗಳಿಂದ ಯಾವುದೇ ಒಂದು ವಸ್ತು ಅಥವಾ ಸಂಗತಿಯು ತನ್ನ ಮಹತ್ವ ಅಥವಾ ಮೌಲ್ಯವನ್ನು ಕಳೆದುಕೊಳ್ಳುವುದು. ಪ್ರಸ್ತುತ ಪ್ರಬಂಧದಲ್ಲಿ ಈ ಪದವನ್ನು ಮಹಿಳೆಯರ ದುಡಿಮೆಗೆ ಯಾವ ಮಹತ್ವವನ್ನು ಕೊಡುತ್ತಿಲ್ಲ ಎಂಬ ವಿಷಯವನ್ನು ವಿವರಿಸುವ ಪ್ರಸಂಗದಲ್ಲಿ ಬಳಸಲಾಗಿದೆ. ಹೇಮಲತಾ ಹೆಚ್.ಎಂ (೨೦೦೬)ಅವರ ಕೃತಿ 'ಮಹಿಳಾ ಅಧ್ಯಯನ'ದಲ್ಲಿ ದುಡಿಮೆಯ ಕುರಿತು ವ್ಯಾಖ್ಯಾನವಿದೆ. ಹಾಗೂ ಮಹಿಳೆಯರ ದುಡಿಮೆಯು ಅಪಮೌಲ್ಯೀಕರಣಗೊಳ್ಳುತ್ತಿರುವ ಕುರಿತು ವಿವರಣೆ ಇದೆ. (ಪು.ಸಂ.೧೭)

೩. ಅಂಜಿನಪ್ಪ ಬಿ.ಎಚ್. (೨೦೦೬) ಅವರ 'ಮಹಿಳೆ ಮತ್ತು ದುಡಿಮೆ' ಕೃತಿಯಲ್ಲಿ ಮಹಿಳೆಯ ಉದ್ಯೋಗದ ಕುರಿತಾಗಿ ಪುರುಷರ ನಿಲುವುಗಳ ಬಗ್ಗೆ ವಿವರವಾದ ವಿಶ್ಲೇಷಣೆ ಇದೆ. ಹೆಚ್ಚಿನ ವಿವರಗಳಿಗಾಗಿ ಲೇಖಕರ 'ಮಹಿಳೆ ಮತ್ತು ದುಡಿಮೆ' ಕೃತಿಯ ಪು.ಸಂ. ೮೪ನ್ನು ನೋಡಿರಿ.

೪. ಚಂದ್ರಶೇಖರ್ ಟಿ.ಆರ್. (೨೦೦೬) ಅವರ 'ದುಡಿಯುವ ಮಹಿಳೆಯ ಸಾಮಾಜಿಕ ಸ್ವರೂಪ' ಲೇಖನದಲ್ಲಿ ಸಂಗೋಪನ ದುಡಿಮೆಯ ಕುರಿತು ವಿವರಣೆ ಇದೆ. ಹೆಚ್ಚಿನ ವಿವರಗಳಿಗಾಗಿ ಲೇಖಕರ 'ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು' ಮಂಟಪ ಮಾಲೆ–೧೬೦. ಪು.ಸಂ. ೧೪೬–೧೪೭ನ್ನು ನೋಡುವುದು.

೫. ಅನೌಪಚಾರಿಕ ವಲಯವು ಔಪಚಾರಿಕ ವಲಯದ ಅನುಗ್ರಹದಿಂದ ಹುಟ್ಟಿ ಬಂದುದು ಎಂಬ ಗಹನವಾದ ಸಂಗತಿಯನ್ನು ಅತೀ ಸೂಕ್ಷ್ಮವಾಗಿ ಬಿಡಿಸಿ ಹೇಳಿದವರು ಜೆನ್ ಬ್ರೆಮೆನ್ (೧೯೯೪). ಲೇಖಕರ 'ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್' ಕೃತಿಯ ಪು.ಸಂ. ೧೦–೧೧ರಲ್ಲಿ ವಿವರಣೆ ಇದೆ.

೬ ಅಸಂಘಟಿತ ಹಾಗೂ ಸಂಘಟಿತ ವಲಯಗಳ ಕುರಿತ ಹೆಚ್ಚಿನ ಮಾಹಿತಿಯನ್ನು ಮತ್ತು ಅಸಂಘಟಿತ ವಲಯದಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ತೊಡಗಲು ಕಾರಣವಾದ ಅಂಶಗಳ ವಿವರವಾದ ಅಧ್ಯಯನಕ್ಕೆ ಹೇಮಲತಾ ಹೆಚ್.ಎಂ. (೨೦೦೬) ಅವರು ಬರೆದ ಮಹಿಳಾ ಅಧ್ಯಯನ–ಭಾಗ–೩ರ ಪು.ಸಂ. ೩೯ರಿಂದ ೪೦ನ್ನು ನೋಡುವುದು.

೭ ಆರ್ಥಿಕತೆಯಲ್ಲಿ ಮಹಿಳೆ ನಿರ್ವಹಿಸುತ್ತಿರುವ ಟ್ರಿಪಲ್ ರೋಲ್ಸ್(ಉತ್ಪಾದನಾ ಕಾರ್ಯ, ಸಂತಾನೋತ್ಪತ್ತಿ ಕಾರ್ಯ ಹಾಗೂ ಸಮುದಾಯಿಕ ಜವಾಬ್ದಾರಿಗಳು)ಗಳ ಬಗ್ಗೆ ನೈಲಾ ಕಬೀರ್ (೧೯೯೫) ಅವರು ತಮ್ಮ ಕೃತಿ 'ರಿವರ್ಸ್ಡ್ ರಿಯಾಲಿಟೀಸ್' ಪು.ಸಂ. ೨೭೫ರಲ್ಲಿ ವಿವರಣೆ ನೀಡಿದ್ದಾರೆ.

೮ 'ಚೈಲ್ಡ್ ಲೇಬರ್ ಅಂಡ್ ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್' ಕೃತಿಯಲ್ಲಿ ಬಿ.ಕೆ.ಶರ್ಮಾ ಹಾಗೂ ವಿಶ್ವಮಿತ್ತರ್ (೧೯೯೦) ಅವರು ಸಂಘಟಿತ ಹಾಗೂ ಅಸಂಘಟಿತ ವಲಯಗಳ ವ್ಯತ್ಯಾಸವನ್ನು ಗುರುತಿಸಿದ್ದಾರೆ. ವಿವರವಾದ ಅಧ್ಯಯನಕ್ಕೆ ಇದೇ ಕೃತಿಯ ಪು.ಸಂ. ೧೯-೨೦ನ್ನು ನೋಡುವುದು.

೯ ಕುಟುಂಬದಲ್ಲಿ ಹಾಗೂ ಆರ್ಥಿಕತೆಯಲ್ಲಿ ಮಹಿಳೆ ಸಮತೋಲನ ಶಕ್ತಿಯಾಗಿ ಹೇಗೆ ಕಾರ್ಯ ನಿರ್ವಹಿಸುತ್ತಿದ್ದಾಳೆ ಎಂಬ ಹೆಚ್ಚಿನ ಮಾಹಿತಿಗಾಗಿ ಎ.ಸಿ.ಪಂಥ (೧೯೮೫) ಅವರು ಬರೆದ 'ಇಂಡಿಯನ್ ಲೇಬರ್ ಪ್ರಾಬ್ಲೆಮ್ಸ್' ಕೃತಿಯ ಪು.ಸಂ. ೩೨೨-೩೨೩ನ್ನು ನೋಡುವುದು.

೧೦ ಮಹಿಳೆಯನ್ನು 'ರಿಜರ್ವ್ ಆರ್ಮಿ' ಎಂದು ಗುರುತಿಸಲು ಕಾರಣವಾದ ಹೆಚ್ಚಿನ ಮಾಹಿತಿಗಾಗಿ ಬೌಡ್ (೧೯೯೨) ಅವರು ಬರೆದ 'ಫಾರ್ಮ್ಸ್ ಆಫ್ ಪ್ರೊಡಕ್ಷನ್ ಅಂಡ್ ವುಮೆನ್ ಲೇಬರ್' ಕೃತಿಯ ಪು.ಸಂ. ೧೬-೧೭-೨೪ನ್ನು ನೋಡುವುದು.

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

೨.೧. ಅಸಂಘಟಿತ ವಲಯದ ಉದಯಕ್ಕೆ ಸಂಬಂಧಿಸಿದ ಅಧ್ಯಯನಗಳು

೨.೨. ಲಿಂಗಸಂಬಂಧಿ ಅಧ್ಯಯನಗಳು

೨.೩. ಮನೆಗೆಲಸದ ದುಡಿಮೆಯ ಕುರಿತಾದ ಅಧ್ಯಯನಗಳು

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಯನಗಳ ಸಮೀಕ್ಷೆ ಎನ್ನುವ ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಪರಾಮರ್ಶಿಸಲಾಗಿದೆ. ಪ್ರಮುಖವಾಗಿ ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಹಾಗೂ ಅಸಂಘಟಿತ ವಲಯಗಳ ವರ್ಗೀಕರಣ ಉಂಟಾಗಲು ಕಾರಣವನ್ನು ತಿಳದುಕೊಳ್ಳಲು ಪ್ರಯತ್ನಿಸಲಾಗಿದೆ. ಅಲ್ಲದೇ ಅಸಂಘಟಿತ ವಲಯದ ಕುರಿತಾಗಿ ಖ್ಯಾತ ಲೇಖಕರ ಅಭಿಪ್ರಾಯಗಳನ್ನು ವಿಮರ್ಶಾತ್ಮಕವಾಗಿ ಅಭ್ಯಸಿಸಲಾಗಿದೆ.

ಮುಂದುವರೆದ ಭಾಗದಲ್ಲಿ ಅಸಂಘಟಿತ ವಲಯವನ್ನು ಅನೌಪಚಾರಿಕ ವಲಯ ಎಂದು ಗುರುತಿಸುವುದರೊಂದಿಗೆ ಅನೌಪಚಾರಿಕ ವಲಯದಲ್ಲಿ ಕಂಡು ಬರುವ ವೈವಿಧ್ಯಮಯ ವೃತ್ತಿಗಳನ್ನು ಪರಿಚಯಿಸಲಾಗಿದೆ. ಅನೌಪಚಾರಿಕ ವಲಯವು ಬೃಹದಾಕಾರವಾಗಿ ಬೆಳೆದು ಬರಲು ಕಾರಣಗಳನ್ನು ವಿಶ್ಲೇಷಿಸುತ್ತಾ ಈ ವಲಯದಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡು ಬರಲು ಕಾರಣವಾದ ಸನ್ನಿವೇಶಗಳನ್ನು ತಿಳಿಸಲಾಗಿದೆ. ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಲಿಂಗಭೇದ ನೀತಿಯು ಮಹಿಳೆಯರು ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಯೂರಲು ಕಾರಣವಾಯಿತು ಎಂಬುದು ಎಲ್ಲ ವಿದ್ವಾಂಸರ ಒಮ್ಮತದ ತೀರ್ಮಾನವಾಗಿದೆ.

ಈ ಅಧ್ಯಾಯದಲ್ಲಿ ಪ್ರಮುಖವಾಗಿ ಅನೌಪಚಾರಿಕ ವಲಯದ ಅತೀ ಕೆಳಸ್ತರದ ದುಡಿಮೆ ಎನಿಸಿಕೊಂಡಿರುವ ಹಾಗೂ ಸರ್ಕಾರದ ನಿರ್ಲಕ್ಷಕ್ಕೆ ಗುರಿಯಾದ ದುಡಿಮೆ ಎನಿಸಿಕೊಂಡಿರುವ ಮನೆಗೆಲಸದ ದುಡಿಮೆಗಾರರ ಕುರಿತು ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದೆ. ಮನೆಗೆಲಸದ ಮಹಿಳಾ ದುಡಿಮೆಗಾರರು ಎದುರಿಸುವ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡುತ್ತಾ ಈ ಮಹಿಳೆಯರು ಸರ್ಕಾರದ ಸವಲತ್ತುಗಳನ್ನು ಪಡೆಯುವಲ್ಲಿ ಇರುವ ಅಡೆತಡೆಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಲಾಗಿದೆ.

ಹಾಗೂ ಮಹಿಳಾ ದುಡಿಮೆಗಾರರ ಈ ಸಮಸ್ಯೆಗಳಿಗೆ ಪರಿಹಾರ ಕೇವಲ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

೨.೧: ಅಸಂಘಟಿತ ವಲಯದ ರೂಪುಗೊಳ್ಳುವಿಕೆ ಕುರಿತ ಅಧ್ಯಯನಗಳು

ಸಂತೋಷ ಮರೋತ್ರ ಮತ್ತು ಮೇರಿಯೋ ಬಿಗ್ಗೇರಿ ಅವರು ಏಶಿಯಾದ ಅನೌಪಚಾರಿಕ ವಲಯದ ದುಡಿಮೆಗಾರರ ಕುರಿತು ಚರ್ಚೆ ಮಾಡಿದ್ದಾರೆ.

ಅಭಿವೃದ್ಧಿಶೀಲ ರಾಷ್ಟ್ರಗಳು ಕೈಗಾರಿಕಾ ಕ್ರಾಂತಿಯಿಂದ ಪ್ರೇರಣೆ ಪಡೆದು ಉತ್ಪಾದನೆಯಲ್ಲಿ ಬಂಡವಾಳ ಹಾಗೂ ತಂತ್ರಜ್ಞಾನವನ್ನು ಅಧಿಕ ಪ್ರಮಾಣದಲ್ಲಿ ಬಳಸಿಕೊಂಡರು. ಇದರ ಪರಿಣಾಮವಾಗಿ ಸಂಘಟಿತ ವಲಯದ ಉತ್ಪಾದನಾ ಪ್ರಮಾಣವೇನೋ ಹೆಚ್ಚಳಗೊಂಡಿತು. ಆದರೆ ಉದ್ಯೋಗಗಳ ಪ್ರಮಾಣ ಹೆಚ್ಚಾಗಲಿಲ್ಲ. ಔಪಚಾರಿಕ ವಲಯವು ಹೆಚ್ಚಿದ ಶ್ರಮಶಕ್ತಿಗೆ ಉದ್ಯೋಗವನ್ನು ಒದಗಿಸುವಲ್ಲಿ ವಿಫಲವಾಯಿತು. ಕೃಷಿ ವಲಯವು ಕೂಡ ಜನಸಂಖ್ಯೆ ಹೆಚ್ಚಾದ ಹಾಗೆ ಶ್ರಮಶಕ್ತಿಯನ್ನು ಹೊರ ಹಾಕಲಾರಂಭಿಸಿತು. ಈ ಶ್ರಮಶಕ್ತಿಯು ಅನೌಪಚಾರಿಕ ವಲಯದಲ್ಲಿ ನೆಲೆಯನ್ನು ಕಂಡುಕೊಂಡಿತು.[೧] ಹೀಗೆ ಆರ್ಥಿಕತೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಉದಯವಾಯಿತು ಎಂಬ ವಿಚಾರವನ್ನು ಲೇಖಕರು ಮಂಡಿಸಿದ್ದಾರೆ. ಅನೌಪಚಾರಿಕ ವಲಯವನ್ನು ಕಡಿಮೆ ಆದಾಯದ ಉದ್ಯೋಗ ಸೃಷ್ಟಿ ಮಾಡುವ ವಲಯ ಎಂದೇ ಕರೆಯಲಾಗಿದೆ.

ಲೇಖಕರು ಅನೌಪಚಾರಿಕ ವಲಯವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದಾಗಿ ವೇತನರಹಿತ ಕಾರ್ಮಿಕರ ವಲಯ ಎರಡನೆಯದು ವೇತನಸಹಿತ ಕಾರ್ಮಿಕರ ವಲಯ. ವೇತನರಹಿತ ದುಡಿಮೆಗಾರರಲ್ಲಿ ಅನೌಪಚಾರಿಕ ಉದ್ಯಮಪತಿಗಳು ಹಾಗೂ ಸ್ವಉದ್ಯೋಗಿಗಳನ್ನು ಸೇರಿಸಿದರೆ ವೇತನ ಸಹಿತ ದುಡಿಮೆಗಾರರಲ್ಲಿ ಅನೌಪಚಾರಿಕ ವಲಯದ ಕಾರ್ಮಿಕರು, ಗೃಹ ಆಧಾರಿತ ದುಡಿಮೆಗಾರರು ಹಾಗೂ ನೋಂದಾಯಿತರಲ್ಲದ ಕಾರ್ಮಿಕರು ಸೇರಿದ್ದಾರೆ. ಈ ರೀತಿ ಅನೌಪಚಾರಿಕ ವಲಯವು ಏಶಿಯಾದಲ್ಲಿ ಶೇ. ೬೫ರಷ್ಟು, ಲ್ಯಾಟಿನ್ ಅಮೇರಿಕಾದಲ್ಲಿ ಶೇ. ೫೧ರಷ್ಟು ಉತ್ತರ ಆಫ್ರಿಕಾದಲ್ಲಿ ಶೇ. ೪೮ರಷ್ಟು ಹಾಗೂ ಸಹರಾ ಆಫ್ರಿಕಾದಲ್ಲಿ ಅತೀ ಹೆಚ್ಚು ಅಂದರೆ ಶೇ. ೭೨ರಷ್ಟು ಗಾತ್ರ ಹೊಂದಿದೆ. ಅನೌಪಚಾರಿಕ ಉದ್ಯಮ ಕ್ಷೇತ್ರವು ಮಹಿಳೆಯರಿಗೆ ಉದ್ಯೋಗ ಒದಗಿಸುವ ಕ್ಷೇತ್ರವಾಗಿದೆ ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

'ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್, ಪ್ರಾಬ್ಲೆಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್' ಎಂಬ ಕೃತಿಯಲ್ಲಿ ಆರ್.ಎಸ್. ತಿವಾರಿಯವರು ಘಾನ ನಗರದ ಹಾಗೂ ಭಾರತದ ಅನೌಪಚಾರಿಕ ವಲಯದ ಕುರಿತು ವಿವರಣೆ ನೀಡಿದ್ದಾರೆ. ನಗರದ ಜನಸಂಖ್ಯೆ ಹೆಚ್ಚಳಕ್ಕೆ ಪ್ರಮುಖ ಕಾರಣವೆಂದರೆ ಗ್ರಾಮದ ಜನರು ನಗರಕ್ಕೆ ವಲಸೆ ಬರುವುದು. ಹೆಚ್ಚುತ್ತಿರುವ ಜನಸಂಖ್ಯೆಯು ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿ ಮಾಡುತ್ತದೆ. ಈ ಸಮಸ್ಯೆಗೆ ಪರಿಹಾರ ಅನೌಪಚಾರಿಕ ವಲಯದಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಎರಡು ಬಗೆಯ ಮಾರುಕಟ್ಟೆಗಳು ಅಸ್ತಿತ್ವದಲ್ಲಿರುತ್ತವೆ. ಅವು ಯಾವುವೆಂದರೆ

ಸಂಘಟಿತ ಮತ್ತು ಅಸಂಘಟಿತ ಎಂದು. ಈ ರೀತಿಯ ಮಾರುಕಟ್ಟೆಯಲ್ಲಿ ಆಯಾ ವಲಯಗಳ ಉತ್ಪಾದನಾ ಸ್ವರೂಪ, ಮಾರುಕಟ್ಟೆಯ ಸನ್ನಿವೇಶ, ತಂತ್ರಜ್ಞಾನ ಹಾಗೂ ಸರ್ಕಾರದ ಪ್ರಭಾವಗಳ ಆಧಾರದ ಮೇಲೆ ಈ ವರ್ಗೀಕರಣ ಮಾಡಲಾಗಿದೆ. ಸಂಘಟಿತ ವಲಯವು ಮೊದಲನೆಯದಾಗಿ ಬೃಹತ್ ಪ್ರಮಾಣದ ಉತ್ಪಾದನೆ ಮಾಡುವ ಸಂಸ್ಥೆಯಾಗಿದ್ದು, ಇದಕ್ಕೆ ವಿದೇಶದ ಸ್ಪರ್ಧೆಯಿಂದ ರಕ್ಷಣೆ ದೊರೆಯುತ್ತದೆ. ಈ ವಲಯದ ಪ್ರಮುಖ ಗ್ರಾಹಕರೆಂದರೆ ಮಧ್ಯಮ ಹಾಗೂ ಶ್ರೀಮಂತ ವರ್ಗದವರು. ಇದಕ್ಕೆ ವ್ಯತಿರಿಕ್ತವಾದ ಸನ್ನಿವೇಶವನ್ನು ನಾವು ಅಸಂಘಟಿತ ವಲಯದಲ್ಲಿ ಕಾಣುತ್ತೇವೆ. ಅಲ್ಲಿಯ ದೊಡ್ಡ ಪ್ರಮಾಣದ ಉತ್ಪಾದಕರು ತಮ್ಮ ಸರಕುಗಳನ್ನು ಹೆಚ್ಚು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಕಡಿಮೆ ಆದಾಯದ ವರ್ಗಕ್ಕೆ ಸೇರಿದ ಜನರಿಗೆ ಮಾರುತ್ತಾರೆ. ಸಂಘಟಿತ ವಲಯದಲ್ಲಿ ಹೆಚ್ಚಿನ ಬಂಡವಾಳವನ್ನು, ವಿದೇಶಿ ತಂತ್ರಜ್ಞಾನವನ್ನು ಬಳಸಿದರೆ, ಅಸಂಘಟಿತ ವಲಯದಲ್ಲಿ ಕಾರ್ಮಿಕರ ಬಲದಿಂದ ಕಡಿಮೆ ತಂತ್ರಜ್ಞಾನವನ್ನು ಬಳಸುತ್ತಾರೆ. ಹೀಗಾಗಿ ಅಸಂಘಟಿತ ವಲಯದ ಉತ್ಪಾದನಾ ಸಾಮರ್ಥ್ಯ ಕಡಿಮೆ ಇರುತ್ತದೆ. ಸರಕಾರದ ಕೃಪಕಟಾಕ್ಷ ಇಲ್ಲದೆ, ಸ್ವಸಾಮರ್ಥ್ಯದಿಂದ ನಡೆಸಿಕೊಂಡು ಹೋಗುವ ಸಂಸ್ಥೆಗಳು ಅಸಂಘಟಿತ ವಲಯದಲ್ಲಿವೆ.

ಅನೌಪಚಾರಿಕ ವಲಯದ ಮಾರುಕಟ್ಟೆ ಎಂಬ ಪದವು ಮೊದಲಿಗೆ ಅಂದರೆ ೧೯೫೦ರ ಅಧ್ಯಯನಗಳಲ್ಲಿ ದೊರಕುತ್ತದೆ. ನಂತರ ಅನೇಕ ಸಮಾಜ ಶಾಸ್ತ್ರಜ್ಞರು ಹಾಗೂ ಅರ್ಥಶಾಸ್ತ್ರಜ್ಞರು ಈ ಪದವನ್ನು ಬಳಸಿಕೊಂಡರು. ಲೆವಿಸ್ (೧೯೫೪) ರವರ ಅಧ್ಯಯನಗಳಲ್ಲಿ ಮತ್ತು ಫೈ ಹಾಗೂ ರಾನಿಸ್ (೧೯೬೪)ರವರ ಅಧ್ಯಯನಗಳಲ್ಲಿ ಈ ಪದ ಬಳಕೆ ಆಗಿದೆ. ಹಾಗೂ ೧೯೭೧ರಲ್ಲಿ ಕೀತ್ ಹಾರ್ಟರವರು ಅರ್ಬನ್ ಘಾನಾದ ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ಪದವನ್ನು ಬಳಕೆ ಮಾಡಿಕೊಂಡಿರುವುದನ್ನು ಕಾಣಬಹುದು. ಅನಂತರದ ಅಧ್ಯಯನ ಕೂಡ ಅನೌಪಚಾರಿಕ ಎಂಬ ಪದ ಬಳಸಿಕೊಂಡಿದೆ. ನಂತರ ಅಂತರಾಷ್ಟ್ರೀಯ ಕಾರ್ಮಿಕ ಸಂಘವು ಕೂಡ ಅನೌಪಚಾರಿಕ ವಲಯದ ಲಕ್ಷಣಗಳನ್ನು ವಿವರಿಸುತ್ತ ಸಂಘಟಿತ ಹಾಗೂ ಅಸಂಘಟಿತ ವಲಯದ ವರ್ಗೀಕರಣ ಕುರಿತು ವಿವರಿಸಿದೆ. ಸಾಮಾನ್ಯವಾಗಿ ನಗರವಾಸಿಗಳು ಅನೌಪಚಾರಿಕ ವಲಯದಲ್ಲಿ ಕಂಡುಬರುತ್ತಾರೆ. ಉದಾ: ಮನೆಗೆಲಸದ ದುಡಿಮೆಗಾರರು, ದೋಬಿಗಳು, ತೋಟದಲ್ಲಿ ಕೆಲಸ ಮಾಡುವವರು, ತರಕಾರಿ ಮಾರುವವರು, ವಿದ್ಯುತ್ ಉಪಕರಣ ತಯಾರಿಸುವವರು ಇತ್ಯಾದಿ. ನಗರದ ಬಡ ಜನತೆಗೆ ಉದ್ಯೋಗ ಮತ್ತು ಆದಾಯವನ್ನು ಒದಗಿಸುವ ಈ ವಲಯದ ಬಗ್ಗೆ ಸರಿಯಾದ, ನಿಖರವಾದ ಅಂಕಿ ಅಂಶಗಳು ಲಭ್ಯವಿರದೆ ಇರುವುದು ಆಶ್ಚರ್ಯಕರ ವಾದರೂ ಸತ್ಯಸಂಗತಿಯಾಗಿದೆ. ಇದು ಅನೌಪಚಾರಿಕ ವಲಯದ ಅಧ್ಯಯನಕ್ಕಿರುವ ಒಂದು ದೊಡ್ಡ ಅಡೆತಡೆಯಾಗಿದೆ ಎಂಬ ವಿಚಾರವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ಹೀಗೆ ಅನೌಪಚಾರಿಕ ವಲಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಿಕೊಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ನ್ಯಾಷನಲ್ ಕಮೀಷನ್ ಆನ್ ಸೆಲ್ಫ್ ಎಂಪ್ಲಾಯಿಡ್ ವುಮೆನ್ ಅಂಡ್ ವುಮೆನ್ ಇನ್ ದಿ ಇನ್‌ಪಾರ್ಮಲ್ ಸೆಕ್ಟರ್ (ಶ್ರಮಶಕ್ತಿ ೧೯೮೮) ವರದಿಯಲ್ಲಿ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರ ದುಡಿಮೆ, ಅವರಿಗೆ ಸಿಗುವ ಪ್ರತಿಫಲದ ಕುರಿತು ಚರ್ಚಿಸಲಾಗಿದೆ. ಈ ಸಮಿತಿಯು ೧೯೮೭ರಲ್ಲಿ

ರಚಿತವಾಯಿತು. ಈ ಸಮಿತಿಯ ಅಧ್ಯಯನಕಾರರಾಗಿ ನೇಮಕಗೊಂಡ ಸದಸ್ಯರು ಭಾರತದ ೧೭ ರಾಜ್ಯಗಳಲ್ಲಿ ೭ ತಿಂಗಳ ಕಾಲ ಸುದೀರ್ಘವಾದ ಪ್ರವಾಸ ಕೈಗೊಂಡು ದುಡಿಯುವ ಮಹಿಳೆಯರ ಸ್ಥಿತಿಗತಿಗಳ ಕುರಿತು ಕೂಲಂಕುಷವಾಗಿ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿಯ ಪ್ರಕಾರ ಅಸಂಘಟಿತ ವಲಯದ ಉದ್ಯೋಗಗಳನ್ನು ಭೂ ಆಧಾರಿತ, ಗೃಹ ಆಧಾರಿತ ಕೈಗಾರಿಕೆಗಳು ಎಂದು ವರ್ಗೀಕರಣ ಮಾಡಲಾಗಿದೆ. ಭೂ ಆಧಾರಿತ ಚಟುವಟಿಕೆಗಳಲ್ಲಿ ಮುಖ್ಯವಾಗಿ ಕೃಷಿ, ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ವ್ಯವಸಾಯ, ಗಣಿಗಾರಿಕೆ, ತಂಬಾಕು ಹಾಗು ಬೀಡಿಕಟ್ಟುವಿಕೆ ಮುಂತಾದವುಗಳನ್ನು ಹೆಸರಿಸಿದರೆ, ಗೃಹ ಆಧಾರಿತ ಚಟುವಟಿಕೆಗಳಲ್ಲಿ ಕೈಮಗ್ಗದ ಕೆಲಸ, ನೇಯ್ಗೆ, ಕುಶಲ ಕಲೆಗಾರಿಕೆ, ಸಿದ್ಧ ಉಡುಪು ತಯಾರಿಕೆ, ಆಹಾರ ತಯಾರಿಕೆ, ಹೊತ್ತು ಮಾರುವ ಕೆಲಸ, ಕಟ್ಟಡ ನಿರ್ಮಾಣ, ಮನೆಗೆಲಸದ ಸೇವೆ ಮುಂತಾದವುಗಳನ್ನು ಹೆಸರಿಸಲಾಗಿದೆ.[೨]

ಈ ಹತ್ತು ಹಲವು ವೈವಿಧ್ಯಮಯ ಕ್ಷೇತ್ರಗಳ ಮಹಿಳಾ ದುಡಿಮೆಗಾರರ ಬದುಕನ್ನು ಕ್ಷೇತ್ರಕಾರ್ಯದ ಮೂಲಕ ವಿಸ್ತೃತ ಅಧ್ಯಯನ ಕೈಕೊಳ್ಳುವುದರ ಜೊತೆಗೆ ವಿವಿಧ ಕ್ಷೇತ್ರಗಳ ಪರಿಣಿತರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಹಾಗೂ ಸರಕಾರದ ಪ್ರತಿನಿಧಿಗಳ ಅಭಿವೃದ್ಧಿ ಮಂತ್ರಾಲಯದ ಇಲಾಖೆಗಳ ಸಲಹೆ ಸೂಚನೆಗಳನ್ನು ಪಡೆದು ಅಸಂಘಟಿತ ವಲಯದ ಮಹಿಳೆಯರ ಕಲ್ಯಾಣಕ್ಕಾಗಿ ಕೆಲವು ಶಿಫಾರಸುಗಳನ್ನು ಮಾಡಲಾಗಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರು ತುಳಿತಕ್ಕೊಳಗಾಗಿ ಲಿಂಗತಾರತಮ್ಯವನ್ನು ಎದುರಿಸುತ್ತಿದ್ದಾರೆ. ಅವಕಾಶವಂಚಿತರಾಗಿ, ಶೋಷಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೇ ಉದ್ಯೋಗ ಕ್ಷೇತ್ರದಲ್ಲಿ ಅನಾರೋಗ್ಯಕರ ವಾತಾವರಣದಲ್ಲಿ ದುಡಿಯುತ್ತಿದ್ದಾರೆ. ಬಡತನ, ನಿರುದ್ಯೋಗ, ಅನಕ್ಷರತೆ, ಅಪೌಷ್ಠಿಕತೆ, ಅನಾರೋಗ್ಯ ಇವರ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಉದ್ಯೋಗ ಕ್ಷೇತ್ರದಲ್ಲಿ ನಿರ್ಲಕ್ಷಿಸಲ್ಪಟ್ಟಿದ್ದಾರೆ. ಉತ್ಪಾದನೆ ಹಾಗೂ ಸಂತಾನೋತ್ಪತ್ತಿಯಂತಹ ಗುರುತರ ಹೊಣೆ ಹೊತ್ತಾಗ್ಯೂ ಸಮಾಜ ಅವರ ದುಡಿಮೆಯನ್ನು ಪುರುಷರ ದುಡಿಮೆಗೆ ಸರಿಸಮಾನವಾಗಿ ಕಾಣುತ್ತಿಲ್ಲ ಎಂಬುದು ಸಮಿತಿ ಕಂಡುಕೊಂಡ ಸತ್ಯವಾಗಿದೆ. ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರು ಯಾವ ಸ್ವಂತ ಆಸ್ತಿಯನ್ನು ಹೊಂದಿರುವುದಿಲ್ಲ. ಒಂದು ವೇಳೆ ಹೊಂದಿದ್ದರೂ ಕುಟುಂಬ ಹಂತದಲ್ಲಿ ಅವಳಿಗೆ ಆಸ್ತಿಯ ಮೇಲೆ ಒಡೆತನ ಇರುವುದಿಲ್ಲ. ಈ ರೀತಿಯ ಒಡೆತನ ಮಹಿಳೆಯರಿಗೆ ಇದ್ದದ್ದೇ ಆದರೆ ಮಹಿಳೆಯರೂ ಕೂಡ ಉದ್ಯೋಗ ಕ್ಷೇತ್ರಕ್ಕೆ ಅವಶ್ಯವಿರುವ ವಿದ್ಯಾಭ್ಯಾಸ, ತರಬೇತಿ. ಕೌಶಲ್ಯವನ್ನು ಪಡೆಯುತ್ತಿದ್ದರು. ಇದರಿಂದ ಮಹಿಳೆಯರ ಪುನಃಶ್ಚೇತನಕ್ಕೆ ಅಧಿಕ ಆತ್ಮವಿಶ್ವಾಸಕ್ಕೆ ದಾರಿಯಾಗುತ್ತದೆ ಎಂಬುದು ಸಮಿತಿಯ ದೃಢನಿಶ್ಚಯವಾಗಿದೆ.

ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಸ್ಥಿತಿಗತಿ ಸುಧಾರಣೆಗೆ ಸಮಿತಿಯು ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಗ್ರಾಮೀಣ ಪ್ರದೇಶದ ಜನರ ಬಡತನ ಸ್ಥಿತಿಯು ಅವರನ್ನು ಪಟ್ಟಣಕ್ಕೆ ಉದ್ಯೋಗವನ್ನರಸಿ ವಲಸೆ ಹೋಗುವಂತೆ ಮಾಡಿದೆ. ಈ ರೀತಿಯ ವಲಸಿಗರಿಗೆ ಪಟ್ಟಣದಲ್ಲಿ ಇರಲು ಜಾಗ ಹಾಗೂ ದುಡಿಯಲು ಕೆಲಸವಿರುವುದಿಲ್ಲ. ಇಂತಹ ಜನ ಕೊಳಗೇರಿಯಲ್ಲೇ ವಾಸಿಸುತ್ತಾ

ಜೀವನೋಪಾಯಕ್ಕಾಗಿ ಯಾವುದೋ ಒಂದು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಔಪಚಾರಿಕ ವಲಯದ ಉದ್ಯೋಗವನ್ನು ಹೊಂದುವ ವಿದ್ಯಾಭ್ಯಾಸ ಕೌಶಲ್ಯ ಇಲ್ಲದೇ ಇರುವುದರಿಂದ ಸೀಮಾಂತ ದುಡಿಮೆಗಾರರಾಗಿಯೇ ಮುಂದುವರೆಯುತ್ತಾರೆ. ಇವರಿಗೆ ತಮ್ಮ ಉದ್ಯೋಗದಲ್ಲಿ ಅನುಕೂಲವಾಗುವಂತೆ ಸರಿಯಾದ ಸ್ಥಳಾವಕಾಶ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಶಿಶು ಸಂರಕ್ಷಣಾಲಯಗಳ ವ್ಯವಸ್ಥೆ ಮಾಡಿಕೊಡಬೇಕು ಹಾಗೂ ವಸತಿಯನ್ನು ಒದಗಿಸಬೇಕು. ಗೃಹ ಆಧಾರಿತ ಚಟುವಟಿಕೆಗಳನ್ನು ಪ್ರಾರಂಭಿಸಲು ಅವರಿಗೆ ಸೂಕ್ತ ಸ್ಥಳದ ವ್ಯವಸ್ಥೆ ಮಾಡಿಕೊಡಬೇಕು. ಅಸಂಘಟಿತ ಕಾರ್ಮಿಕರಿಗಾಗಿ ನಗರ ಯೋಜನೆಯಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕಿಸಿಕೊಡಬೇಕು ಹಾಗೂ ಆಧುನೀಕರಣ ಹಾಗೂ ಕೈಗಾರಿಕೀಕರಣದಿಂದ ಮೂಲೆಗುಂಪಾದ ಸಾಂಪ್ರದಾಯಿಕ ವಲಯದ ಉದ್ಯೋಗಗಳ ಪುನಃಶ್ಚೇತನಕ್ಕಾಗಿ ಅಗತ್ಯ ಸಾಲ ಸೌಲಭ್ಯವನ್ನು ಒದಗಿಸಿಕೊಡಬೇಕು. ಈ ರೀತಿ ಅಸಂಘಟಿತ ವಲಯದ ಪ್ರತಿ ಕ್ಷೇತ್ರದ ಅಭಿವೃದ್ಧಿಕಾಗಿ ಸಮಿತಿಯು ಪ್ರತ್ಯೇಕವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಳ್ಳಲು ಸಲಹೆ ಸೂಚನೆಗಳನ್ನು ನೀಡಿರುತ್ತದೆ. ದುರದೃಷ್ಟವಶಾತ್ ಈ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಪೂರ್ತಿಯಾಗಿ ಯಶಸ್ವಿಯಾಗಿಲ್ಲವೆಂದೇ ಹೇಳಬಹುದು. ೨೦೦೭ರಲ್ಲಿ ಅನುಷ್ಠಾನಗೊಂಡ ಸ್ವಾಸ್ಥ ಭೀಮಾ ಯೋಜನೆಯನ್ನು ಕೂಡ ಸಂಪೂರ್ಣವಾಗಿ ಕಾರ್ಮಿಕರಿಗೆ ತಲುಪಿಸುವಲ್ಲಿ ಕರ್ನಾಟಕ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿದೆ ಎಂಬುದು ಇತ್ತೀಚಿನ ವರದಿಗಳ ಪ್ರಕಾರ ತಿಳಿದುಬಂದಿದೆ. ಏನೇ ಆದರೂ ಅಸಂಘಟಿತ ವಲಯದ ಕ್ಷೇಮಾಭಿವೃದ್ಧಿಯ ವಿಷಯದಲ್ಲಿ ಸರ್ಕಾರದ ಈ ನಿರ್ಧಾರ ಪ್ರಯತ್ನ, ಕಾರ್ಮಿಕರ ಜೀವನಮಟ್ಟ ಸುಧಾರಣೆಗೆ ಒಂದು ಮಹತ್ವದ ಯೋಜನೆ ಎಂಬುದಲ್ಲದೇ ಕಾರ್ಮಿಕರ ಜೀವನದ ಆಶಾಕಿರಣ ಎಂದೇ ಭಾವಿಸಬಹುದಾಗಿದೆ.

ಮಹಿಳೆಯರ ಶೋಷಣೆಯನ್ನು ಕುರಿತು ಎಸ್ತರ್ ಬೋಸರಪ್ ಅವರು ತಮ್ಮ ಗ್ರಂಥ 'ವುಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್' ನಲ್ಲಿ ಕಾರ್ಖಾನೆಗಳಲ್ಲಿ ಪುರುಷ ಹಾಗೂ ಮಹಿಳೆಯರ ಕೆಲಸಗಳ ಹಂಚಿಕೆಯಲ್ಲಿನ ತಾರತಮ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಕಾರ್ಖಾನೆಗಳಲ್ಲಿ ಪುರುಷರನ್ನು ಮುದ್ರಣಕಾರರನ್ನಾಗಿ ನೇಮಿಸಿ ಮಹಿಳೆಯರಿಗೆ ಕೇವಲ ಯಂತ್ರಗಳನ್ನು ನಿಭಾಯಿಸುವ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಇದು ಕಷ್ಟಕರ ಕೆಲಸವಾದರೂ ಕೂಲಿ ಕಡಿಮೆ ಏಕೆಂದರೆ ಮಹಿಳೆಯರು ತರಬೇತಿ ಹೊಂದಿಲ್ಲದ ಹಾಗೂ ನೈಪುಣ್ಯ ಹೊಂದದವರೆಂದು ಅವರ ಅಭಿಪ್ರಾಯ.[೩] ಇದರ ಜೊತೆಗೆ ನಮ್ಮ ಸಾಮಾಜಿಕ ನಿಯಂತ್ರಣಗಳೂ, ಮೂಢನಂಬಿಕೆಗಳೂ, ಮಹಿಳೆಯರನ್ನು ದೂರದ ಸ್ಥಳಗಳಿಗೆ ಕೆಲಸಕ್ಕೆ ಕಳಿಸಲು ಅಡ್ಡಿಯುಂಟು ಮಾಡುತ್ತವೆ. ಅದನ್ನು ದಾಟಿ ಕೆಲವೇ ಮಹಿಳೆಯರು ಕೆಲಸಕ್ಕೆ ಸೇರಿದರೆ ಆ ಕೆಲಸಕ್ಕೆ ಹೆಚ್ಚಿನ ವೇತನ ಪಡೆಯುತ್ತಾರೆ. ಇಂತಹ ಕಟ್ಟುಪಾಡುಗಳಿಂದ ಕೆಲವೇ ವೃತ್ತಿಗಳಲ್ಲಿ ಅಧಿಕ ಶ್ರಮದ ಪೂರೈಕೆಯಾಗಿ ಕಡಿಮೆ ಕೂಲಿ ಪಡೆಯುವಂತಾಗಿದೆ.

ಜಾವಾದ ಸನ್ನಿವೇಶವನ್ನು ವರ್ಣಿಸುತ್ತಾ ಲೇಖಕರು ಈ ರೀತಿಯಾಗಿ ಹೇಳಿದ್ದಾರೆ. ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಮಹಿಳೆಯರು ಹಿಂದಿನಿಂದ ನಡೆಸುತ್ತಾ ಬಂದ ಗೃಹ ಕೈಗಾರಿಕೆಗಳು ನಾಶ ಹೊಂದಿದವು. ಅಲ್ಲಿಯೂ ಪುರುಷರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದ್ದರಿಂದ ಮಹಿಳೆಯರು ತಮ್ಮ

ಕೆಲಸ ಕಳೆದುಕೊಳ್ಳುವಂತಾಯಿತು. ಉದ್ಯಮಿಗಳು ಮಹಿಳೆಯರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡಬೇಕಾಗುವುದು ಎಂಬ ಕಾರಣದಿಂದ ಪುರುಷರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟು ಮಹಿಳೆಯರಿಗೆ ಈ ಅವಕಾಶಗಳನ್ನು ತಿರಸ್ಕರಿಸುತ್ತಾರೆ. ಮಹಿಳೆಯರನ್ನು ನೇಮಿಸಿಕೊಂಡರೆ ತಮ್ಮ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ ಎಂಬುದು ಉದ್ಯಮಿಗಳ ಅಭಿಪ್ರಾಯವಾಗಿದೆ ಎಂದು ಲಿಂಗತಾರತಮ್ಯದ ಕುರಿತು ವಿವರಿಸಿದ್ದಾರೆ.

ಅರ್ಜುನ್‌ಸೇನ್ ಗುಪ್ತಾ ಅವರ ನೇತೃತ್ವದಲ್ಲಿ ರಚಿಸಲಾದ ನ್ಯಾಷನಲ್ ಕಮೀಷನ್ ಫಾರ್ ಎಂಟ್ರಪ್ರೈಸಸ್ ಇನ್ ದಿ ಅನ್ ಆರ್ಗನೈಸ್ಡ್ ಸೆಕ್ಟರ್ (೨೦೦೪) ವರದಿಯಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಜೀವನ ಚಿತ್ರಣ ಹಾಗೂ ದುಡಿಮೆಗಾರರ ಕಲ್ಯಾಣಕ್ಕಾಗಿ ಮಾಡಿದ ಶಿಫಾರಸ್ಸುಗಳು ಈ ಕೆಳಗಿನಂತಿವೆ.

ಅಸಂಘಟಿತ ವಲಯದ ಶ್ರಮಿಕರ ಕಲ್ಯಾಣ ಮತ್ತು ಹಿತಾಸಕ್ತಿಯನ್ನು ಕಾಪಾಡಲಿಕ್ಕಾಗಿ ಸೆಪ್ಟೆಂಬರ್ ೨೦, ೨೦೦೪ರಲ್ಲಿ ಯು.ಪಿ.ಎ ಸರ್ಕಾರವು ಒಂದು ರಾಷ್ಟ್ರೀಯ ಸಮಿತಿಯನ್ನು ರಚಿಸಿತು. ಈ ಸಮಿತಿಯು ಶ್ರಮಿಕರ ಕೆಲಸದ ಸ್ಥಿತಿಗತಿಗಳನ್ನು ಕುರಿತು ಕೂಲಂಕುಷವಾಗಿ ಅಧ್ಯಯನ ನಡೆಸಿತು. ಸಮಿತಿಯ ವರದಿಯ ಪ್ರಕಾರ ಅಸಂಘಟಿತ ವಲಯದ ದುಡಿಮೆಗಾರರಿಗೆ ಉದ್ಯೋಗದ ಭದ್ರತೆ ಹಾಗೂ ಸಾಮಾಜಿಕ ಭದ್ರತೆಗಳಿಲ್ಲ, ಶೇ. ೭೭ರಷ್ಟು ಜನರು ಕೇವಲ ೨೦ ರೂಪಾಯಿಗಳ ದೈನಂದಿನ ತಲಾ ಉಪಭೋಗದಲ್ಲಿ ಬದುಕುತ್ತಿದ್ದಾರೆ. ಬಡತನ ಹಾಗೂ ದುಃಸ್ಥಿತಿಗಳನ್ನೆದುರಿಸುತ್ತಿರುವ ಇಂತಹ ದುಡಿಮೆಗಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿದೆ. ೧೯೯೯–೨೦೦೦ದಲ್ಲಿ ಕೇವಲ ೮೧೧ ಮಿಲಿಯನ್‌ಗಳಿದ್ದ ಇವರ ಸಂಖ್ಯೆ ೨೦೦೪–೦೫ಕ್ಕೆ ೮೩೬ ಮಿಲಿಯನ್‌ಗಳಷ್ಟಾಗಿದೆ. ಇವರ ಸ್ಥಿತಿಗತಿಗಳನ್ನು ಸುಧಾರಿಸಲು ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟರೂ ದುರದೃಷ್ಟವಶಾತ್ ಅದು ಅನೌಪಚಾರಿಕ ವಲಯವೇ ಆಗಿದೆ. ಅದೂ ಸ್ವ–ಉದ್ಯೋಗಿಗಳು ಹಾಗೂ ಕೂಲಿ ಕೆಲಸಗಾರರಿಂದ ಕೂಡಿದ್ದು, ಸಾಂದರ್ಭಿಕ ಕಾರ್ಮಿಕರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರ ಆದಾಯವು ಬಹಳ ಕಡಿಮೆ ಮಟ್ಟದಲ್ಲಿದ್ದು ತಮ್ಮ ಬಡತನದಿಂದ ಹೊರಬರಲು ಈ ಆದಾಯದಿಂದ ಸಾಧ್ಯವಾಗುವುದಿಲ್ಲ. ದುಡಿಮೆಗಾರರ ಈ ಅನಿಶ್ಚಿತ ಬದುಕನ್ನು ಹಸನುಗೊಳಿಸಲು ಸಮಿತಿಯು ಅವರ ಕೆಲಸದ ಸ್ಥಿತಿಗತಿಗಳನ್ನು ಸುಧಾರಿಸಲು ಸಾಮಾಜಿಕ ಭದ್ರತೆಯನ್ನು ಒದಗಿಸಿಕೊಡಬೇಕೆಂದು ಶಿಫಾರಸ್ಸು ಮಾಡಿದೆ ಅಲ್ಲದೇ ಶೇ. ೯೩ರಷ್ಟು ದುಡಿಮೆಗಾರರ ಸ್ಥಿತಿಗತಿ ಸುಧಾರಣೆಗಾಗಿ ೧೩ ಅಂಶಗಳ ಕಾರ್ಯನೀತಿಯನ್ನು ಪ್ರಕಟಿಸಿದೆ. ಸಮಿತಿಯ ಕಾರ್ಯನೀತಿಯು ಸರಿಯಾಗಿ ಕಾರ್ಯರೂಪಕ್ಕೆ ಬಂದದ್ದೇ ಆದರೆ ಅಸಂಘಟಿತ ವಲಯದ ದುಡಿಮೆಗಾರರ ಜೀವನದ ಸ್ಥಿತಿಗತಿಯೂ ಸುಧಾರಿಸಬಹುದೆಂದು ಸಮಿತಿಯು ಆಶಾಭಾವ ವ್ಯಕ್ತಪಡಿಸಿದೆ.

ಸಮಿತಿಯ ವರದಿಯ ಪ್ರಕಾರ ಅಸಂಘಟಿತ ವಲಯದ ದುಡಿಮೆಗಾರರ ಜೀವನವು ಶೋಷಣಾಮಯ ವಾಗಿದೆ. ಭಾರತವು ಸರ್ವರಂಗದಲ್ಲಿಯೂ ಅಭಿವೃದ್ಧಿ ಸಾಧಿಸುತ್ತಾ ಮುನ್ನಡೆದಿದ್ದರೂ, ಈ ಅಭಿವೃದ್ಧಿಗೆ ಕಾರಣರಾದ ಜನರ ಜೀವನ ಮಾತ್ರ ಸುಖಮಯವಾಗಿರುವುದಿಲ್ಲ. ದಿನಕ್ಕೆ ಕೇವಲ ೨೦ ರೂ. ತಲಾ ಆದಾಯವನ್ನು ಹೊಂದಿ, ತಮ್ಮ ಕೆಲಸಕ್ಕೆ ನ್ಯಾಯಸಮ್ಮತವಾದ ರಕ್ಷಣೆಯಿಲ್ಲದೇ ಉದ್ಯೋಗ ಭದ್ರತೆ

ಇಲ್ಲದೇ ಬಡತನದ ಕರಾಳ ಹಿಡಿತದಲ್ಲಿ ಸಿಲುಕಿ ಭಾರತದ ಅನೌಪಚಾರಿಕ ವಲಯದಲ್ಲಿ ಬಂಧಿಗಳಾಗಿ ವೈಭವಯುತ ಭಾರತದ ಆರ್ಥಿಕತೆಯಿಂದ ಹೊರನೂಕಲ್ಪಟ್ಟಿದ್ದಾರೆ. ಈ ದುಡಿಮೆಗಾರರ ಉತ್ತಮ ಜೀವನಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆಯಾದರೂ ಅವುಗಳ ಅನುಷ್ಠಾನ ದಲ್ಲಾಗುತ್ತಿರುವ ವಿಳಂಬ ಹಾಗೂ ಲೋಪದೋಷಗಳಿಂದಾಗಿ ದುಡಿಮೆಗಾರರು ಹಾಗೂ ಅವರ ಕುಟುಂಬದ ಬದುಕು ಶೋಚನೀಯವಾಗಿದೆ.

ಸೆಪ್ಟೆಂಬರ್ ೨೦, ೨೦೦೪ರಲ್ಲಿ ನೇಮಿಸಿದ ರಾಷ್ಟ್ರೀಯ ಸಮಿತಿಯು ಮೇ ೧೬, ೨೦೦೬ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅನೌಪಚಾರಿಕ ವಲಯದ ಅರ್ಹ ದುಡಿಮೆಗಾರರಿಗೆ ರಾಷ್ಟ್ರೀಯ ಕನಿಷ್ಠ ಸಾಮಾಜಿಕ ಭದ್ರತೆಯನ್ನು ಒದಗಿಸಿಕೊಡಬೇಕೆಂದು ಶಿಫಾರಸು ಕೂಡ ಮಾಡಿದೆ. ಇದನ್ನು ಒಂದು ಐತಿಹಾಸಿಕವಾದ ನಿರ್ಣಯವೆಂದೇ ಪರಿಗಣಿಸಲಾಗಿದೆ. ಅಸಂಘಟಿತ ವಲಯದ ದುಡಿಮೆಗಾರರನ್ನು ಈ ರೀತಿಯಾಗಿ ವರ್ಣಿಸಲಾಗಿದೆ. ಸಾಮಾಜಿಕ ಭದ್ರತೆ ಹಾಗೂ ಅವಕಾಶಗಳಿಂದ ವಂಚಿತರಾದ ಅಥವಾ ಹೊರಗುಳಿದ, ಅನೌಪಚಾರಿಕ ವಲಯದಲ್ಲಿ ಉದ್ಯೋಗ ಭದ್ರತೆಗಳನ್ನು ಹೊಂದಿರದೆ ದುಡಿಯುವ ದುಡಿಮೆಗಾರರು ಅನೌಪಚಾರಿಕ ವಲಯದ ದುಡಿಮೆಗಾರರಾಗಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಉದ್ಯೋಗ ಕ್ಷೇತ್ರದಲ್ಲಿ ಕನಿಷ್ಠ ಸೌಲಭ್ಯಗಳನ್ನು ಪಡೆಯದೇ ತಮ್ಮ ಜೀವನ ನಿರ್ವಹಣೆಗಾಗಿ ಕೆಲಸದಲ್ಲಿ ತೊಡಗುವ ಒಂದು ಕಾರ್ಮಿಕ ವರ್ಗ ಅಥವಾ ದುಡಿಮೆಗಾರರ ಪಡೆ ಎಂದು ವರ್ಣಿಸಿದೆ.

ಭಾರತದಂತಹ ಮುಂದುವರೆಯುತ್ತಿರುವ ದೇಶದಲ್ಲಿ ಮಧ್ಯಮ ವರ್ಗ ಹಾಗೂ ಶ್ರೀಮಂತ ವರ್ಗದವರ ಅನುಭೋಗ ವೆಚ್ಚ ಹೆಚ್ಚುತ್ತಿದೆಯಾದರೂ ಬಡವರ ಅದರಲ್ಲೂ ಶೇ. ೭೭ರಷ್ಟು ಜನರ ಅನುಭೋಗ ವೆಚ್ಚ ಮಾತ್ರ ಒಂದೇ ರೀತಿಯಾಗಿದೆ. ಅದರಲ್ಲಿ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗದವರು ಹಾಗೂ ಮುಸಲ್ಮಾನರು ಸೇರಿರುತ್ತಾರೆಂದು ಸಮಿತಿಯ ವರದಿಯಿಂದ ತಿಳಿದುಬಂದಿದೆ ಇಂತಹ ಜನರು ತೀರಾ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ. ಅವರು ಇನ್ನೂ ಕೆಳಗೆ ಬೀಳದಂತೆ ಸಾಮಾಜಿಕ ಕಟ್ಟೆಯನ್ನು ಕಟ್ಟಬೇಕೆಂದು ಸಮಿತಿಯ ವರದಿಯಲ್ಲಿ ತಿಳಿಸಿದ ಪ್ರಪ್ರಥಮ ಶಿಫಾರಸ್ಸಾಗಿದೆ.

ಸಮಿತಿಯ ಶಿಫಾರಸ್ಸಿನ ಮೇರೆಗೆ ಸರ್ಕಾರವು ದುಡಿಮೆಗಾರರಿಗೆ ಕನಿಷ್ಠ ಸಾಮಾಜಿಕ ಭದ್ರತೆಯನ್ನು ಒದಗಿಸಲಿಕ್ಕಾಗಿ 'ಕಾಮನ್ ಮಿನಿಮಮ್ ಪ್ರೋಗ್ರಾಮ್'ನ್ನು ಜಾರಿಗೆ ತಂದಿದೆ. ಅಲ್ಲದೇ ಇದನ್ನು ರಾಷ್ಟ್ರೀಯ ಶಾಸನವೆಂದೇ ಪರಿಗಣಿಸಿ ಕಾಲಕಾಲಕ್ಕೆ ಕಾರ್ಯರೂಪಕ್ಕೆ ಬರುವ ಸುಧಾರಣೆಗಳನ್ನು ಪರಿಶೀಲಿಸಬಹುದಾಗಿದೆ. ಮಾನವ ಅಭಿವೃದ್ಧಿ ಸಾಧ್ಯವಾಗುವಂತಹ ಕನಿಷ್ಠ ಕೂಲಿ ಕಾಯಿದೆಯನ್ನು ಸಮಿತಿಯು ಶಿಫಾರಸ್ಸು ಮಾಡುವುದರೊಂದಿಗೆ ಉತ್ಪಾದನೆಯನ್ನು ತ್ವರಿತಗೊಳಿಸಬಹುದೆಂದು ತಿಳಿಸಿದೆ. ದುಡಿಮೆಗಾರರ ಕನಿಷ್ಠ ವೇತನವು ಉದ್ಯೋಗ ಹಾಗೂ ಭಾರತದ ಆರ್ಥಿಕ ಅಭಿವೃದ್ಧಿಯ ಮೇಲೆ ಉತ್ತಮ ಪರಿಣಾಮ ಉಂಟು ಮಾಡುತ್ತದೆ ತನ್ಮೂಲಕ ಬಡತನ ನಿವಾರಣೆ ಸಾಧ್ಯವೆಂಬುದು ಅವರ ಅಭಿಪ್ರಾಯ.

ಅರ್ಜುನ್‌ಸೆನ್ ಗುಪ್ತಾ ಸಮಿತಿಯು ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಸ್ಥಿತಿಗತಿಗಳ ಕುರಿತು ವಿಶೇಷ ಅಧ್ಯಯನ ನಡೆಸಿದೆ. ರಾಷ್ಟ್ರೀಯ ಆದಾಯಕ್ಕೆ ಮಹಿಳೆಯ ಕೊಡುಗೆ ಅಧಿಕವಿಲ್ಲದಿದ್ದರೂ

ಉತ್ಪಾದನೆ ಹಾಗು ಸಂತಾನೋತ್ಪತ್ತಿ ವಿಷಯಕ್ಕೆ ಬಂದಾಗ ಅವಳ ಕೊಡುಗೆ ಅಪಾರವಾಗಿದೆ. ಈ ರೀತಿಯ ದ್ವಿಮುಖ ಜವಾಬ್ದಾರಿಯು ಮಹಿಳೆಯನ್ನು ಪುರುಷನಿಂದ ಪ್ರತ್ಯೇಕ ಸ್ಥಾನದಲ್ಲಿ ನಿಲ್ಲಿಸಿದೆ. ಭಾರತದಂತಹ ಆರ್ಥಿಕತೆಯಲ್ಲಿ ಮಹಿಳೆಯರನ್ನು ಕಡೆಗಣಿಸಿ ಅವರನ್ನು ಸಮಾಜದ ಕೆಳಸ್ತರದಲ್ಲಿರಿಸುತ್ತಿದ್ದಾರೆ. ಅದೂ ಅಲ್ಲದೇ ಅವಳು ದುಡಿಯುವ ಪರಿಸರವೂ ಕೂಡ ಅಸಂಘಟಿತ ವಲಯದ ಗುಣಲಕ್ಷಣಗಳನ್ನು ಹೊಂದಿದೆ.

ಮಹಿಳೆ ನಿರ್ವಹಿಸುವ ಇನ್ನೊಂದು ಗುರುತರ ಕೆಲಸವೆಂದರೆ ಸಂತಾನೋತ್ಪತ್ತಿ ಕಾರ್ಯ. ಸಂತಾನೋತ್ಪತ್ತಿ ಕೆಲಸವು ದೃಶ್ಯಗೋಚರವಲ್ಲದ ರೂಪದಲ್ಲಿದ್ದು ಸಮಾಜದಲ್ಲಿ ಯಾವುದೇ ಮನ್ನಣೆಯನ್ನು ಪಡೆದಿರುವುದಿಲ್ಲ, ಮಹಿಳೆ ನಿರ್ವಹಿಸುವ ಉತ್ಪಾದಕ ಹಾಗೂ ಸಂತಾನೋತ್ಪತ್ತಿ ಕೆಲಸಗಳು ಆರ್ಥಿಕ ಅಭಿವೃದ್ಧಿಗೆ ಹಾಗೂ ಸಮಾಜದ ಮುನ್ನಡೆಗೆ ಹೆಚ್ಚಿನ ಕೊಡುಗೆ ಸಲ್ಲಿಸಿದರೂ ಅದರ ಪ್ರಯೋಜನ ಮಾತ್ರ ಮಹಿಳೆಯರ ಪಾಲಿಗಿರುವುದಿಲ್ಲ, ಕಠಿಣ ಪರಿಶ್ರಮ ಹಾಗೂ ನಿರಂತರ ದುಡಿಮೆಯಿಂದ ಮಹಿಳೆಯರು ಆಗಾಗ್ಗೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆಂಬುದು ಅವರ ಅಭಿಪ್ರಾಯ. ಮಹಿಳೆಯರು ತಮ್ಮ ದುಡಿಮೆಯ ಜೊತೆಗೆ ಹೆಚ್ಚುವರಿ ಕೆಲಸದಲ್ಲಿಯೂ ತೊಡಗುತ್ತಾರೆ. ತಮ್ಮ ಅನುಭೋಗಕ್ಕೆ ಬೇಕಾಗುವ ಸರಕುಗಳನ್ನು ಪಡೆಯಲು ಈ ದುಡಿಮೆ ಮಹಿಳೆಯರಿಗೆ ಅನಿವಾರ್ಯವಾಗಿದೆ.

ಮಹಿಳಾ ದುಡಿಮೆಗಾರರ ಚಲನೆಯ ಮೇಲಿರುವ ನಿರ್ಬಂಧವೂ ಕೂಡ ಅವರ ಉದ್ಯೋಗದ ಮೇಲೆ ಪ್ರತೀಕೂಲ ಪರಿಣಾಮವನ್ನು ಉಂಟು ಮಾಡುತ್ತದೆ ಅಲ್ಲದೇ ಸಾಂದರ್ಭಿಕ ಕಾರ್ಮಿಕರು ತಮ್ಮ ಉದ್ಯೋಗವನ್ನು ಆಗಿಂದಾಗ್ಗೆ ಬದಲಾಯಿಸುತ್ತಾರೆ. ಇದಕ್ಕೆ ಪ್ರಮುಖ ಕಾರಣ ತಮ್ಮ ಉದ್ಯೋಗದ ಮೇಲಿರುವ ಅನಾದರ. ಯಾವುದೇ ಶಾಸನಾತ್ಮಕ ಕಾನೂನುಗಳೂ ಅವರ ನೆರವಿಗೆ ಬರುವುದಿಲ್ಲವಾದ್ದರಿಂದ ಅವರ ಕೆಲಸದ ಸ್ಥಿತಿಗತಿಗಳು ಬದಲಾಗುವುದಿಲ್ಲ. ಆದರೂ ಆಧಿಕ ಸಂಖ್ಯೆಯಲ್ಲಿ ಮಹಿಳೆಯರು ದುಡಿಮೆಯಲ್ಲಿ ತೊಡಗಿರಲು ಕಾರಣವೇನೆಂದರೆ ಆರ್ಥಿಕ ಮುಗ್ಗಟ್ಟೇ ಹೊರತು ದುಡಿಮೆಯ ಅವಕಾಶಗಳಲ್ಲ. ಮಹಿಳೆಯರು ಕಡಿಮೆ ವೇತನದ ಅಭದ್ರ ಉದ್ಯೋಗಾವಕಾಶದ ದುಡಿಮೆಯಲ್ಲಿ ತೊಡಗಲು ಪ್ರಮುಖ ಕಾರಣ ಅನಕ್ಷರತೆ ಹಾಗೂ ವೃತ್ತಿ ನೈಪುಣ್ಯರಹಿತತೆ. ಅದರೊಂದಿಗೆ ಭಾರತದಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ ಕಟ್ಟುಪಾಡುಗಳು. ತಿರುಪುರದ ಗಾರ್ಮೆಂಟ್ ಕಾರ್ಖಾನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಎಲ್ಲಾ ಅಭಿಪ್ರಾಯಗಳೂ ಮೂಡಿಬಂದಿವೆ. ಸಿದ್ಧಉಡುಪು ತಯಾರಿಕಾ ಕಾರ್ಖಾನೆಯಲ್ಲಿ ಲಿಂಗಾಧಾರಿತ ಶ್ರಮವಿಭಜನೆ ಮಹಿಳೆಯ ಕೆಲಸದ ಮೇಲೆ ಯಾವ ಪರಿಣಾಮ ಬೀರಿದೆ ಎಂಬುದು ತಿಳಿದುಬರುತ್ತದೆ. ಅನೌಪಚಾರಿಕ ವಲಯದಲ್ಲಿ ಕೆಳದರ್ಜೆಯ ಕೆಲಸಗಳನ್ನು ಮಾತ್ರ ನಿರ್ವಹಿಸಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಮಹಿಳೆಯರು ನಿರ್ವಹಿಸುವ ಕೆಲಸಗಳು ನೈಪುಣ್ಯಯುತವಾಗಿದ್ದರೂ (ಉದಾ: ಮಡಿಕೆ ತಯಾರಿಕೆಯಲ್ಲಿ ಮಣ್ಣು ಹದಮಾಡುವ ಕೆಲಸ, ಸಿದ್ಧ ಉಡುಪು ತಯಾರಿಕೆಯಲ್ಲಿ ಸೂಕ್ಷ್ಮ ಹೆಣಿಕೆಯ ಕೆಲಸ, ವ್ಯವಸಾಯ ಕ್ಷೇತ್ರದಲ್ಲಿ ಕಳೆ ಕೀಳುವ ಕೆಲಸ) ಕಷ್ಟದಾಯಕವಾಗಿದ್ದರೂ ಅವುಗಳಿಗೆ ಹೆಚ್ಚಿನ ಬೆಲೆ ಕಟ್ಟಲಾಗುವುದಿಲ್ಲ, ಇವು ಬೆನ್ನು ಮುರಿಯುವ ಕೆಲಸಗಳೇ ಆದರೂ ಲಿಂಗತಾರತಮ್ಯವು ಅವುಗಳ ಮೌಲ್ಯ ನಿರ್ಧರಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ಅನೌಪಚಾರಿಕ ವಲಯದಲ್ಲಿ ಮಹಿಳೆಯರು ಹೆಚ್ಚಾಗಿ ಕಾಣುತ್ತಾರೆ ಎಂಬುದರ ಬಗ್ಗೆಯೂ ವಿಶ್ಲೇಷಿಸಲಾಗಿದೆ. ಇಲ್ಲಿಯೂ ಕೂಡ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯೇ ಇದಕ್ಕೆ ಕಾರಣ. ಪುರುಷರು ಸಾಮಾನ್ಯವಾಗಿ ಉತ್ಪಾದನಾಕಾರರು, ಕುಟುಂಬದ ರಕ್ಷಕರು ಎಂದು ಪ್ರತಿಬಿಂಬಿಸುತ್ತಾ ಮಹಿಳೆಯರ ಕರ್ತವ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಮನೆಯ ಜವಾಬ್ದಾರಿಯನ್ನು ನಿರ್ವಹಿಸಿ ಗೃಹ ಆಧಾರಿತ ಚಟುವಟಿಕೆಗಳಲ್ಲಿಯೂ ತೊಡಗುವ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ತಮ್ಮ ಕುಟುಂಬವನ್ನು ಆರ್ಥಿಕವಾಗಿ ಬೆಂಬಲಿಸಬೇಕೆಂಬ ಉದ್ದೇಶದಿಂದಲೇ ಕೂಡಿರುತ್ತದೆ. ಆವರೂ ಕೂಡ ಈ ಕೆಲಸದಲ್ಲಿ ಗುತ್ತಿಗೆದಾರರ ಶೋಷಣೆಗೆ ಒಳಗಾಗುತ್ತಿದ್ದಾರೆ. ಅದೂ ಅಲ್ಲದೇ ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆಗಳಿಂದ ತಮ್ಮ ಕೆಲಸವನ್ನು ಕಳೆದುಕೊಳ್ಳುವ ಭಯದ ವಾತಾವರಣದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಕಡಿಮೆ ಕೂಲಿ ಹಾಗೂ ಶೋಷಣಾಮಯ ಸನ್ನಿವೇಶದ ಹೊರತಾಗಿಯೂ ಅಸಂಘಟಿತ ವಲಯದಲ್ಲಿ ಮಹಿಳೆಯರು ಇರುವುದು ಎಂದರೆ ಅದು ಮಹಿಳೆಯರ ದುಃಸ್ಥಿತಿಯನ್ನು ತೋರ್ಪಡಿಸುತ್ತದೆ. ಮಹಿಳೆಯರು ತಾವಾಗಿ ಆಯ್ಕೆ ಮಾಡಿಕೊಂಡು ಬಂದ ಕ್ಷೇತ್ರ ಇದಾಗಿರದೇ ಅನಿವಾರ್ಯವಾಗಿ ಬದುಕಲಿಕ್ಕೆ ಬಂದ ಕ್ಷೇತ್ರವಾಗಿದೆ. ಸ್ವಆಧಾರಿತ ಚಟುವಟಿಕೆಯಾಗಲೀ, ಗೃಹ ಆಧಾರಿತ ಚಟುವಟಿಕೆಯಾಗಲೀ, ವೇತನಕ್ಕಾಗಿ ದುಡಿಯುವ ಕ್ಷೇತ್ರವಾಗಲೀ, ಮಹಿಳೆಯರೇ ಮೊದಲು ಬಲಿಪಶುಗಳಾಗುತ್ತಾರೆ ಎಂಬುದು ಸ್ತ್ರೀವಾದಿಗಳ ವಾದವಾಗಿದೆ. ಮಹಿಳೆಯರು ಈ ದುಃಸ್ಥಿತಿಯನ್ನೆದುರಿಸಲು ಮೊದಲ ಕಾರಣವೆಂದರೆ ಸಾಮಾಜಿಕ ಕಟ್ಟುಪಾಡುಗಳು. ಮಹಿಳೆಯರ ಚಲನಶೀಲತೆ ಯನ್ನು ಕಡಿಮೆ ಮಾಡಿ ಅವರು ಮಾರುಕಟ್ಟೆಯಲ್ಲಿ ಜನಪ್ರಿಯತೆ ಕಳೆದುಕೊಳ್ಳುವಂತೆ ಮಾಡುತ್ತವೆ ಎಂದಿದ್ದಾರೆ. ಲೇಖಕರು ಅಸಂಘಟಿತ ವಲಯದ ವೈವಿಧ್ಯಮಯ ಚಟುವಟಿಕೆಗಳನ್ನು ಪರಿಚಯಿಸುತ್ತಾ ಈ ವಲಯದಲ್ಲಿ ಕಾರ್ಯನಿರ್ವಹಿಸುವ ಮೂರು ಕುಟುಂಬಗಳ ಜೀವನದ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ಚಿಂದಿ ಆರಿಸುವ ವೃತ್ತಿಯಲ್ಲಿ ತೊಡಗಿದ ದಂಪತಿಗಳಿಗೆ ತಮ್ಮ ಸರಕನ್ನು ಕೊಳ್ಳುವವರೇ ಒಡೆಯರಾಗಿರುತ್ತಾರೆ. ಅವರೊಂದಿಗೆ ವಿಶ್ವಾಸವನ್ನು ಗಳಿಸಿ ವಿಶ್ವಾಸದ ಆಧಾರದ ಮೇಲೆಯೇ ತಮ್ಮ ಕಷ್ಟಕಾಲಕ್ಕಾಗಿ ಬೇಕಾಗುವ ಸಾಲವನ್ನು ಪಡೆಯುತ್ತಾರೆ, ಮಾಲೀಕರೂ ಕೂಡ ಮುಂದೆ ಈ ಕೆಲಸಗಾರರು ಸರಕನ್ನು ತಮಗೇ ಒಪ್ಪಿಸುತ್ತಾರೆ ಎಂಬ ಆಧಾರದ ಮೇಲೆ ಹಣ ಸಹಾಯ ಮಾಡುತ್ತಾರೆ. ಇದೇ ರೀತಿಯಾಗಿ ನಿರ್ಮಾಣ ಕಾರ್ಯದಲ್ಲಿ ತೊಡಗುವ ಕಾರ್ಮಿಕರು ಕೆಲಸವನ್ನು ಪಡೆಯಲು ತಮ್ಮ ಕೂಲಿಯ ಕೆಲವು ಭಾಗವನ್ನು ಗುತ್ತಿಗೆದಾರರಿಗೆ ನೀಡಬೇಕಾಗುತ್ತದೆ ಹಾಗೂ ಮನೆಗೆಲಸದಲ್ಲಿ ತೊಡಗುವ ಮಹಿಳೆಯರು ತಮ್ಮ ಮನೆಮಾಲೀಕರ ಮನವೊಲಿಸಲು ಪ್ರಯತ್ನಿಸಬೇಕಾಗುತ್ತದೆ. ಈ ರೀತಿ ಅನೌಪಚಾರಿಕ ವಲಯದಲ್ಲಿ ಉದ್ಯೋಗದಾತರು ಲಾಭ ಪಡೆಯುತ್ತಾರೆ. ಅನೌಪಚಾರಿಕ ವಲಯದಲ್ಲಿ ದುಡಿಮೆಗಾರರು ತಮ್ಮ ಜೀವನ ಸಾಗಿಸಲು ತಮ್ಮ ಶ್ರಮ ಅಷ್ಟೇ ಅಲ್ಲ, ಕುಟುಂಬದಲ್ಲಿಯ ಮಕ್ಕಳ ಸಹಾಯವನ್ನು ಪಡೆಯುತ್ತಾರೆ. ಈ ವಲಯದ ಇನ್ನೊಂದು ವೈಶಿಷ್ಟವೆಂದರೆ ಇಲ್ಲಿನ ದುಡಿಮೆಗಾರರಿಗೆ ಒಂದು ಕೆಲಸದಲ್ಲಿ ಜೀವನ ನಿರ್ವಹಣೆ ಆಗದೇ ಹೋದಾಗ ಇನ್ನೊಂದು ಕೆಲಸಕ್ಕೆ ಹೋಗುತ್ತಾರೆ. ಹೀಗೆ ಆಹಾರ ವಸತಿಗೆ ಮಾತ್ರ ಸ್ವಲ್ಪಮಟ್ಟಿನ ಕಾಳಜಿವಹಿಸಿ ಆರೋಗ್ಯವನ್ನು ನಿರ್ಲಕ್ಷಿಸುತ್ತಾರೆ. ದೇಶದ ಆರ್ಥಿಕ ಪ್ರಗತಿ ಹಾಗೂ

ರಾಷ್ಟ್ರೀಯ ಆದಾಯಕ್ಕೆ ತಮ್ಮದೇ ಆದ ಕೊಡುಗೆ ಸಲ್ಲಿಸುತ್ತಿರುವ ಅನೌಪಚಾರಿಕ ವಲಯದ ದುಡಿಮೆಗಾರರು ಇಷ್ಟು ಕನಿಷ್ಠ ಜೀವನ ನಡೆಸುವುದು ಯಾವ ರಾಷ್ಟ್ರಕ್ಕೂ ಶೋಭೆ ತರುವುದಲ್ಲ, ದುಡಿಮೆಗಾರರ ಸ್ಥಿತಿಗತಿ ಸುಧಾರಣೆಗೆ ರೂಪಿತವಾಗಿರುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ವ್ಯವಸ್ಥೆ ಆಗಬೇಕು ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.

ಎಲಿಜಬೆತ್ ಹಿಲ್ ಅವರು ಬರೆದ 'ವರ್ಕರ್ ಐಡೆಂಟಿಟಿ ಏಜೆನ್ಸಿ, ಅಂಡ್ ಎಕನಾಮಿಕ್ ಡೆವಲಪ್‌ಮೆಂಟ್' ಗ್ರಂಥದಲ್ಲಿ ಭಾರತದ ಅನೌಪಚಾರಿಕ ಆರ್ಥಿಕತೆಯಲ್ಲಿ ಮಹಿಳೆಯರ ಸಬಲೀಕರಣ ವಿಷಯದ ಕುರಿತು ಚರ್ಚಿಸಿದ್ದಾರೆ. ಮೊದಲನೆಯದಾಗಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಅರ್ಥ ಹಾಗೂ ವ್ಯತ್ಯಾಸ ತಿಳಿಸುತ್ತಾ ಅಂತರಾಷ್ಟ್ರೀಯ ಕಾರ್ಮಿಕರ ಸಂಘಟನೆ, ವಿಶ್ವಬ್ಯಾಂಕು, ನವಮಾರ್ಕ್ಸ್ ವಾದಿಗಳ ಅಭಿಪ್ರಾಯದಲ್ಲಿ ಅನೌಪಚಾರಿಕ ವಲಯದ ವಿವರಣೆ ಇದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅನೌಪಚಾರಿಕ ವಲಯವು ಅಭಿವೃದ್ಧಿ ಕಾರ್ಯಗಳಿಗೆ ಹೇಗೆ ಸ್ಪಂದಿಸುತ್ತಿದೆ ಎಂಬುದನ್ನು ೧೯೭೨ರ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಹಾಗೂ ೧೯೭೩ ರಲ್ಲಿ ಕೀತ್‌ಹಾರ್ಟ್‌ರವರು ವಿಶ್ಲೇಷಿಸಿದ್ದಾರೆ. ILO ತನ್ನ ಅಂತಿಮ ವರದಿಯಲ್ಲಿ ಅನೌಪಚಾರಿಕ ವಲಯದ ಲಕ್ಷಣಗಳನ್ನು ಈ ರೀತಿಯಾಗಿ ತಿಳಿಸಿದೆ.

ಮಾರುಕಟ್ಟೆಗೆ ಸುಲಭವಾಗಿ ಪ್ರವೇಶನೀಡುವ, ಸ್ಥಳೀಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರುವ, ಕುಟುಂಬ ಯಜಮಾನಿಕೆಯುಳ್ಳ, ಶ್ರಮಸಾಂದ್ರ ಉತ್ಪಾದನಾ ಪದ್ಧತಿಯನ್ನು ಅನುಸರಿಸುವ ಹಾಗೂ ಅನಿಯಂತ್ರಿತ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ವ್ಯವಹರಿಸುವ ಘಟಕ ಎಂದು ವರದಿಯಾಗಿದೆ. ಆದರೆ ಔಪಚಾರಿಕ ವಲಯದಲ್ಲಿ ಮಾರುಕಟ್ಟೆ ಪ್ರವೇಶ ಮಾಡುವುದು ನಿರ್ಬಂಧಯುತವಾಗಿದ್ದು, ವಿದೇಶೀ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರುತ್ತದೆ. ಸಹಕಾರಿ ಮಾಲೀಕತ್ವ ಹೊಂದಿದೆ, ಬೃಹತ್ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ನಡೆಸುವ, ಸುಂಕಮಿತಿ ಹಾಗು ವ್ಯಾಪಾರ ಪರವಾನಗಿಯಂತಹ ನಿಯಂತ್ರಿತ ಮಾರುಕಟ್ಟೆಯನ್ನು ಒಳಗೊಂಡಿರುತ್ತದೆ.[೪] ಬಂಡವಾಳ ಸಾಂದ್ರವಾಗಿದ್ದು ಉತ್ಪಾದನೆಯಲ್ಲಿ ಅಧಿಕವಾಗಿ ವಿದೇಶಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುತ್ತದೆ. ಅನೌಪಚಾರಿಕ ವಲಯವು ಅಭಿವೃದ್ಧಿ ದೃಷ್ಟಿಯಿಂದ ತಾರತಮ್ಯ ನೀತಿಯನ್ನು ಅನುಸರಿಸುತ್ತದೆ. ಆದರೆ ಔಪಚಾರಿಕ ವಲಯವು ಸರ್ಕಾರದಿಂದ ಸಾಲಸೌಲಭ್ಯ, ಸಹಾಯಧನ ಮುಂತಾದ ಅನುಕೂಲಗಳನ್ನು ಪಡೆಯುತ್ತಲೇ ಬಂದಿದೆ. ಅನೌಪಚಾರಿಕ ವಲಯವು ಇವುಗಳಿಂದ ವಂಚಿತವಾಗಿ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ, ಉತ್ಪಾದನಾಂಗಗಳ ಬೆಲೆ ಅಧಿಕವಾಗಿದ್ದಾಗ ಉತ್ಪಾದನೆ ಮಾಡುವಂತಹ ಪರಿಸ್ಥಿತಿಗೆ ಸಿಲುಕುತ್ತದೆ. ಈ ರೀತಿಯ ತಾರತಮ್ಯ ದೂರವಾಗ ಬೇಕಾದರೆ ಅನೌಪಚಾರಿಕ ವಲಯದ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿಶ್ವಬ್ಯಾಂಕ್‌ನ ಅಧ್ಯಯನಗಳೂ ಕೂಡ ಔಪಚಾರಿಕ ವಲಯದ ಉದ್ಯೋಗವು ಸರಕಾರ ಹಾಗೂ ಸಂಘಟನೆಗಳ ಕೃಪಕಟಾಕ್ಷದಿಂದ ಕೂಡಿದ್ದು, ಅಲ್ಲಿ ಕೆಲಸಕ್ಕೆ ರಕ್ಷಣೆ ದೊರೆಯುತ್ತದೆ. ಆದರೆ ಅನೌಪಚಾರಿಕ

ವಲಯದ ಉದ್ಯೋಗಗಳು ಈ ಎಲ್ಲಾ ಸೌಲಭ್ಯಗಳಿಂದ ವಂಚಿತವಾಗಿವೆ. ಔಪಚಾರಿಕ ವಲಯದಲ್ಲಿ ಉದ್ಯೋಗ ಪಡೆಯಲು ಇರುವ ಹತ್ತು ಹಲವಾರು ನಿಬಂಧನೆಗಳನ್ನು ಟೀಕಿಸುತ್ತಾ ಇದು ಮಾನವ ಸಂಪನ್ಮೂಲದ ಅದಕ್ಷ ಬಳಕೆ ಎಂದೇ ತಿಳಿಸಿದೆ. ಇಂತಹ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ.

ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರಕಾರ ಔಪಚಾರಿಕ ವಲಯದಲ್ಲಿ ಉತ್ಪಾದನೆಯು ಮಾಲೀಕರಿಗೆ ಲಾಭಾಂಶವನ್ನು ತಂದುಕೊಡುವುದಕ್ಕಾಗಿ ಇದ್ದು ಶ್ರಮವಿಭಜನೆಯಿಂದ ಕೂಡಿರುತ್ತದೆ. ಆದರೆ ಅನೌಪಚಾರಿಕ ವಲಯದ ಉತ್ಪಾದನೆಯು ಬಂಡವಾಳ ಸಾಂದ್ರವಿರುವುದಿಲ್ಲ ಹಾಗೂ ಉತ್ಪಾದನಾಂಗಗಳಿಗೆ ಅದನ್ನು ನಿಭಾಯಿಸುವವರೇ ಮಾಲೀಕರಾಗಿರುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ. ಅನೌಪಚಾರಿಕ ವಲಯದ ಮಹಿಳೆಯರ ಕರ್ತವ್ಯಗಳು ಆರ್ಥಿಕ ಲೆಕ್ಕಾಚಾರದಲ್ಲಿ ಸೇರಿರುವುದಿಲ್ಲ. ಇದಕ್ಕೆ ಮೊದಲ ಕಾರಣ ಮಹಿಳೆಯರು ತಾವು ಗೃಹಿಣಿಯರು, ಮನೆ ಜವಾಬ್ದಾರಿ ನಮ್ಮದು ಎಂದೇ ಸಮಾಜದಲ್ಲಿ ಗುರುತಿಸಿ ಕೊಳ್ಳುತ್ತಾರೆ. ಎರಡನೆಯದಾಗಿ ಅಧಿಕ ಮಹಿಳೆಯರು ಬಹಳ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಅವರ ದುಡಿಮೆಯ ಕ್ಷೇತ್ರ ಪರಿಚಯವಿಲ್ಲದೇ, ಕ್ಷೇತ್ರ ಗುರುತಿಸುವುದು ಕಷ್ಟವೆನಿಸುತ್ತದೆ. ಹೀಗೆ ಮಹಿಳೆಯರ ದುಡಿಮೆಯ ವಿವರ ಕಛೇರಿಗಳಲ್ಲಿ ದಾಖಲಾಗಿರುವುದಿಲ್ಲ. ಇದಕ್ಕೆ ಅರ್ಥಶಾಸ್ತ್ರಜ್ಞರು ಹಾಗೂ ನೀತಿನಿರೂಪಕರು ಮಹಿಳೆಯ ಅವಶ್ಯಕತೆಗಳನ್ನು ಗುರುತಿಸದೇ ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳಿಗೆ ಅಡ್ಡಿಯಾಗಿದೆ. ಭಾರತದಲ್ಲಿ ೧೦ರಲ್ಲಿ ೯ ಜನ ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿದ್ದಾರೆ. ಬಡತನಕ್ಕೂ ಅನೌಪಚಾರಿಕ ವಲಯಕ್ಕೂ ಗಾಢಸಂಬಂಧವಿದೆ. ಅನೌಪಚಾರಿಕ ವಲಯದಲ್ಲಿ ಪುರುಷ ಹಾಗೂ ಮಹಿಳೆಯರ ನಡುವೆ ವೇತನ ತಾರತಮ್ಯವಿದೆ. ಅದಕ್ಕೂ ಹೆಚ್ಚಿನ ವಿಶೇಷತೆಯೆಂದರೆ ಅನೌಪಚಾರಿಕ ವಲಯದ ಮಹಿಳೆಯರ ಆದಾಯವು ಔಪಚಾರಿಕ ವಲಯದ ಮಹಿಳೆಯರ ಆದಾಯಕ್ಕಿಂತ ಶೇ. ೫೦ರಷ್ಟು ಕಡಿಮೆ ಇದೆ ಎಂದು ತಿಳಿದು ಬರುತ್ತಿದೆ.

ಕಾರ್ಮಿಕರ ರಾಷ್ಟ್ರೀಯ ಸಮಿತಿ(೨೦೦೨)ಯ ವರದಿಯಲ್ಲಿ ತಿಳಿಸಿದಂತೆ ಈಗಾಗಲೇ ಹಲವಾರು ಸಮಿತಿಗಳು ಅಸಂಘಟಿತ ವಲಯದ ಕುರಿತು ಹಲವಾರು ಶಿಫಾರಸ್ಸುಗಳನ್ನು ಮಾಡಿದ್ದರೂ, ಸರ್ಕಾರವು ಮೊದಲ ಬಾರಿಗೆ ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕಾಗಿ ಅವರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಛತ್ರಿಶಾಸನವನ್ನು ಜಾರಿಗೆ ತರುವಂತೆ ಕೇಳಿಕೊಂಡಿತು. ಆದರೆ ಈ ನಿಟ್ಟಿನಲ್ಲಿ ಎದುರಾಗುವ ಒಂದು ಸಮಸ್ಯೆ ಎಂದರೆ ಅಸಂಘಟಿತ ವಲಯದ ಕಾರ್ಮಿಕರ ಅಂಕಿಅಂಶಗಳ, ಅವರ ಕೆಲಸದ ಸ್ವರೂಪಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇರುವುದು. ಸಮಿತಿಯು ಅಸಂಘಟಿತ ವಲಯದ ಕಾರ್ಮಿಕರ ಜೀವನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅವರ ಕಲ್ಯಾಣಕ್ಕಾಗಿ ಹತ್ತು ಹಲವು ಸಲಹೆಗಳನ್ನು ನೀಡಿದೆ. ಇದರಲ್ಲಿ ಮುಖ್ಯವಾದ ಹಾಗೂ ಅತೀ ಶೋಷಿತ ವರ್ಗವಾದ ಮನೆಗೆಲಸದ ಸೇವಕರನ್ನು ಪತ್ತೆ ಹಚ್ಚುವಲ್ಲಿ ಸರಿಯಾದ ಅಂಕಿ ಅಂಶಗಳ ಅಲಭ್ಯತೆಯನ್ನು ಸಮಿತಿಯು ಮನಗಂಡಿದೆ. ಈ ಕೆಲಸಕ್ಕೆ ಯಾವ ಕೌಶಲ್ಯವೂ ಬೇಕಾಗಿರುವುದಿಲ್ಲ. ಅವರು ಕಡುಬಡವರಾಗಿದ್ದು, ಗ್ರಾಮೀಣ ಭಾಗದಿಂದ ಬಂದವರಾಗಿರುತ್ತಾರೆ, ಅವರಿಗಾಗಿ ಯಾವ ಸಾಮಾಜಿಕ ಭದ್ರತೆಗಳೂ ಇಲ್ಲ,

ಮನೆಗೆಲಸದ ಸೇವಕರು ದೀರ್ಘಾವಧಿಯವರೆಗೆ ವೈವಿಧ್ಯಮಯ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಕೆಲವೊಮ್ಮೆ ಅವರು ನಿದ್ದೆ ಮಾಡಲು ಒಂದು ಸುರಕ್ಷಿತ ಸ್ಥಳಕೂಡ ಇರುವುದಿಲ್ಲ, ಇಂತಹ ಸಮಾಜದ ಅತೀ ಕೆಳದರ್ಜೆಯ ಕೆಲಸಗಾರರನ್ನು ಮಾನವೀಯ ದೃಷ್ಟಿಯಿಂದ ನೋಡುವುದು ಅಗತ್ಯವಿದೆ ಹಾಗೂ ಶ್ರಮಶಕ್ತಿ ವರದಿಯ ಶಿಫಾರಸ್ಸಿನಂತೆ ಪ್ರತೀ ಮನೆಗೆಲಸಗಾರರನ್ನು ಗುರುತಿಸಿ ಅವರ ಹೆಸರನ್ನು ನೋಂದಣಿ ಮಾಡಿಸುವ ಮುಖಾಂತರ ಗುರುತಿನ ಚೀಟಿಯನ್ನು ಒದಗಿಸಿ ಕನಿಷ್ಠ ವೇತನವನ್ನು ಜಾರಿಗೊಳಿಸುವ ಅಗತ್ಯತೆಯನ್ನು ತಿಳಿಸಲಾಗಿದೆ.

ಅಸಂಘಟಿತ ವಲಯವು ಆರ್ಥಿಕ ಪ್ರಗತಿಗೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದೆ. ೧೯೯೫ರ ನ್ಯಾಷನಲ್ ಅಕೌಂಟ್ಸ್ ಸ್ಟಾಟಿಸ್ಟಿಕ್ಸ್ ವರದಿಯ ಪ್ರಕಾರ ಶೇ. ೬೫ರಷ್ಟು ಆದಾಯವು ರಾಷ್ಟ್ರೀಯ ಆದಾಯಕ್ಕೆ ಅಸಂಘಟಿತ ವಲಯದಿಂದ ಬರುತ್ತದೆ ಇಲ್ಲಿ ಮಹಿಳೆಯರು ಅಧಿಕ ಸಂಖ್ಯೆ ಯಲ್ಲಿದ್ದಾರೆ. ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳು ಇವರಿಗೆ ಅನ್ವಯವಾಗುವುದಿಲ್ಲ. ಈ ರೀತಿಯ ಕಾರ್ಮಿಕರ ಕಲ್ಯಾಣಕ್ಕಾಗಿ ರಚಿತವಾಗಿರುವ ಕಾನೂನುಗಳು ಅಸಂಘಟಿತ ವಲಯದ ಕಾರ್ಮಿಕರಿಗೂ ಅನ್ವಯವಾದರೆ ಖಂಡಿತವಾಗಿಯೂ ಅವರು ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಕಾರ್ಮಿಕರ ರಾಷ್ಟ್ರೀಯ ಸಮಿತಿ ೨೦೦೨ರ ಪ್ರಮುಖ ಉದ್ದೇಶ ಅಸಂಘಟಿತ ವಲಯದ ಕಾರ್ಮಿಕರನ್ನು ಗುರುತಿಸಿ ಅವರ ಹೆಸರನ್ನು ಇಲಾಖೆಯ ದಾಖಲೆಗಳಲ್ಲಿ ಸೇರಿಸುವುದು. ಇದು ಬಹಳ ಗುರುತರ ಕೆಲಸವೆಂದು ಹಲವರ ಅಭಿಪ್ರಾಯವಾಗಿದೆ. ಆದರೂ ಜೀವನ ನಿರ್ವಹಣೆಗಾಗಿ ಹೋರಾಡುತ್ತಾ ಪರೋಕ್ಷವಾಗಿ ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ಸಲ್ಲಿಸುತ್ತಿರುವ ಅಸಂಘಟಿತ ವಲಯದ ಕಾರ್ಮಿಕರನ್ನು ಗುರುತಿಸಿ ಅವರಿಗೆ ಕಾನೂನುರೀತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬುದು ಪ್ರಮುಖ ವಿಷಯವಾಗಿದೆ.

ಡಾ. ಅನಿತಾ ಆರ್ಯ ಅವರು ಬರೆದಿರುವ 'ಇಂಡಿಯನ್ ವುಮೆನ್' ಎಂಬ ಗ್ರಂಥದಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಚಿತ್ರಣವನ್ನು ನೋಡುತ್ತೇವೆ. ಶೇ. ೯೪ರಷ್ಟು ಮಹಿಳೆಯರು ಆರ್ಥಿಕತೆಯ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಶೇ. ೮೧.೪ರಷ್ಟು ಕೃಷಿಯಲ್ಲಿ ಉಳಿದವರು ಕೃಷಿಯೇತರ ದುಡಿಮೆಯಲ್ಲಿ ತೊಡಗಿದ್ದಾರೆ ಎಂದು ತಿಳಿಸುತ್ತಾ ಅಸಂಘಟಿತ ವಲಯದ ಕ್ಷೇತ್ರಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ಯಾತನೆ, ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿಶ್ಲೇಷಿಸಿದ್ದಾರೆ.

ಅದರಲ್ಲಿ ಕಲ್ಕತ್ತಾದ ಮಹಿಳಾ ಮನೆಗೆಲಸಗಾರರ ಜೀವನ ಸ್ಥಿತಿಗತಿ ಅಧ್ಯಯನ ಮಾಡಿ ಬರೆದ ಟಿಪ್ಪಣಿ ಈ ರೀತಿಯಾಗಿದೆ. ಮನೆಗೆಲಸದ ಸೇವೆಯು ಆಹಾರ ತಯಾರಿಕೆ, ಸ್ವಚ್ಛತೆ, ಕಸಗುಡಿಸುವುದು, ಬಟ್ಟೆತೊಳೆಯುವುದು, ಮಕ್ಕಳನ್ನು ನೋಡಿಕೊಳ್ಳುವುದು, ಇತ್ಯಾದಿ ಕೆಲಸಗಳನ್ನು ಒಳಗೊಂಡಿರುತ್ತದೆ. ಹೆಚ್ಚಿನ ಮನೆಗೆಲಸಗಾರರು ನಗರಗಳಲ್ಲಿ ಕಂಡು ಬರುತ್ತಾರೆ. ದುರದೃಷ್ಟವಶಾತ್ ಮನೆಗೆಲಸಗಾರರ ವೇತನ, ಕೆಲಸದ ಸ್ಥಿತಿಗತಿ ಕುರಿತಾಗಿ ಸಂಗ್ರಹಿಸಿದ ಅಂಕಿ ಅಂಶಗಳು ಬಹಳ ವಿರಳ. ಕನಿಷ್ಠ ಕೂಲಿ ವೇತನವು ಈ ವಲಯದ ದುಡಿಮೆಗಾರರಿಗೆ ಅನ್ವಯಿಸುವುದಿಲ್ಲ. ದೊಡ್ಡ ಪಟ್ಟಣಗಳಲ್ಲಿ ಅವರ

ವೇತನವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದರೂ, ಅದು ಇಂದಿನ ಬೆಲೆ ಏರಿಕೆ ಸ್ಥಿತಿಗೆ ಸಾಟಿಯಾಗುವುದಿಲ್ಲ. ಅವರ ಕೆಲಸದ ಸಮಯವೂ ನಿಗಧಿಯಾಗಿರುವುದಿಲ್ಲ. ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಅವರು ಅನೇಕ ಮನೆಗಳಲ್ಲಿ ಕೆಲಸ ಮಾಡಬೇಕಾಗುತ್ತದೆ."

ಲೇಖಕರು ಕಲ್ಕತ್ತದ ಕೊಳಚೆ ಪ್ರದೇಶದಲ್ಲಿ ವಾಸಿಸುವ ಮನೆಗೆಲಸದ ದುಡಿಮೆಗಾರರನ್ನು ಭೇಟಿಯಾಗಿ ಅವರ ಸ್ಥಿತಿಗತಿಯನ್ನು ತಿಳಿದುಕೊಂಡಿದ್ದಾರೆ. ಅನೇಕ ಮಹಿಳೆಯರು ತಮ್ಮ ಕುಟುಂಬವನ್ನು ಸಾಕುವ ಜವಾಬ್ದಾರಿ ಹೊತ್ತಿರುತ್ತಾರೆ. ಅದಕ್ಕೆ ಅನೇಕ ಮನೆಗಳಲ್ಲಿ ಕೆಲಸ ಮಾಡುತ್ತಾರೆ. ತಮ್ಮ ಜೊತೆ ತಮ್ಮ ಮಕ್ಕಳನ್ನು ಕೆಲಸಕ್ಕೆ ಕರೆದೊಯ್ಯುತ್ತಾರೆ. ಹೀಗೆ ಚಿಕ್ಕಮಕ್ಕಳು ತಮ್ಮ ೮ನೇ ವಯಸ್ಸಿನಿಂದಲೇ ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಸಣ್ಣ ಕೂಸುಗಳನ್ನು ಮನೆಯ ಹತ್ತಿರ ಪರಿಚಯಸ್ಥರ ಮನೆಗಳಲ್ಲಿ ಬಿಟ್ಟು ಹೋಗುತ್ತಾರೆ. ಆದರೆ ಒಂದು ಹೃದಯವಿದ್ರಾವಕ ಸನ್ನಿವೇಶವನ್ನು ಲೇಖಕರು ಹೇಳುತ್ತಾರೆ. ಒಂದು ಕೊಳೆಗೇರಿಯಲ್ಲಿ ಒಬ್ಬ ಮಹಿಳೆ ತನ್ನ ಮಗುವನ್ನು ಮರಕ್ಕೆ ಕಟ್ಟಿಹಾಕಿ ದುಡಿಮೆಗೆ ಹೋಗಿರುವ ಚಿತ್ರಣವನ್ನು ವಿವರಿಸಿದ್ದಾರೆ. ಲಿಂಗತಾರತಮ್ಯದ ಕಹಿ ಅನುಭವವನ್ನು ಎದುರಿಸುತ್ತಿರುವ ಮಹಿಳೆಯರೇ ಈ ಅನಿಷ್ಟ ಜಾಡ್ಯದ ರೂವಾರಿಗಳು ಎಂಬುದನ್ನು ತಿಳಿಸುವುದಕ್ಕೆ ಲೇಖಕರು ಉದಾಹರಣೆ ಕೊಟ್ಟಿರುತ್ತಾರೆ. ಮಹಿಳಾ ಮನೆಗೆಲಸದ ಸೇವಕರು ತಾವು ಕೆಲಸಕ್ಕೆ ಹೋಗುವಾಗ ಹೆಣ್ಣು ಮಕ್ಕಳನ್ನು ತಮ್ಮ ಜೊತೆಗೆ ಕೆಲಸಕ್ಕೆ ಕರೆದೊಯ್ಯುತ್ತಾರೆ. ಆದರೆ ಗಂಡು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಆದರೆ ಮೇಲ್ವಿಚಾರಣೆಯ ಕೊರತೆಯಿಂದಾಗಿ ಮಕ್ಕಳು ಶಾಲೆ ಕಲಿಯುವ ಭರವಸೆ ಏನೂ ಇರುವುದಿಲ್ಲ. ಅಪೌಷ್ಟಿಕತೆಯು ಇಂತಹ ಕುಟುಂಬಗಳಲ್ಲಿ ಹೆಚ್ಚಾಗಿರುತ್ತದೆ. ಮಕ್ಕಳು ಹಾಗೂ ಹಿರಿಯರು ಕೊಳೆಗೇರಿಯಲ್ಲಿ ಎಲ್ಲ ರೀತಿಯ ರೋಗಗಳಿಗೆ ತುತ್ತಾಗುತ್ತಾರೆ. ಅದಕ್ಕಾಗಿ ಇಂತಹ ಕುಟುಂಬಗಳಿಗೆ ಹಾಗೂ ಮಹಿಳೆಯರಿಗೆ ಕನಿಷ್ಠ ಜೀವನದ ಅಗತ್ಯತೆಗಳನ್ನಾದರೂ ಒದಗಿಸಿಕೊಡಬೇಕೆಂದು ಲೇಖಕರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಆದರೆ ಈ ಗ್ರಂಥದಲ್ಲಿ ಮಹಿಳೆಯರು ಇಂತಹ ಕನಿಷ್ಠ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲಿಕ್ಕೆ ಕಾರಣವಾದ ಸನ್ನಿವೇಶವನ್ನು ಗುರುತಿಸಿ,ಅದಕ್ಕೆ ತಕ್ಕ ಪರಿಹಾರವನ್ನು ಸೂಚಿಸಿದ್ದರೆ ಲೇಖನ ಇನ್ನೂ ಅರ್ಥಪೂರ್ಣವಾಗಿರುತ್ತಿತ್ತು.

'ಜರ್ನಲ್ ಆಫ್ ಸೋಶಿಯಲ್ ಅಂಡ್ ಎಕನಾಮಿಕ್ ಡೆವಲಪ್‌ಮೆಂಟ್' ೨೦೧೧ರಲ್ಲಿ ವರದಿಯಾದಂತೆ ಔಪಚಾರಿಕ ವಲಯವು ಸಾಂಘಿಕವಾದ ಉದ್ಯಮಶೀಲತೆಯನ್ನು ಹೊಂದಿದ್ದರೆ, ಅನೌಪಚಾರಿಕ ವಲಯವು ಸಾಂಘಿಕವಲ್ಲದ ಉದ್ಯಮ ಶೀಲತೆಯನ್ನು ಹೊಂದಿರುತ್ತದೆ. ಉದ್ಯೋಗವು ಔದ್ಯೋಗಿಕ ಭದ್ರತೆ, ಕೆಲಸದ ಸುರಕ್ಷತೆ, ಸಾಮಾಜಿಕ ಭದ್ರತೆಯನ್ನು ಹೊಂದಿದ್ದರೆ ಅದನ್ನು ಔಪಚಾರಿಕ ವಲಯವೆಂದು ಪರಿಗಣಿಸಲಾಗುತ್ತದೆ. ಈ ರೀತಿಯ ವರ್ಗೀಕರಣವು ನಾಲ್ಕು ಭಾಗಗಳನ್ನು ಹೊಂದಿದೆ. ಅವು ಯಾವುವೆಂದರೆ ಅನೌಪಚಾರಿಕ ವಲಯದ ಅನೌಪಚಾರಿಕ ಕೆಲಸ, ಅನೌಪಚಾರಿಕ ವಲಯದ ಔಪಚಾರಿಕ ಕೆಲಸ, ಔಪಚಾರಿಕ ವಲಯದ ಔಪಚಾರಿಕ ಕೆಲಸ, ಔಪಚಾರಿಕ ವಲಯದ ಅನೌಪಚಾರಿಕ ಕೆಲಸ. ಈ ನಾಲ್ಕು ಉಪಾಂಗಗಳಲ್ಲಿ ಅನೌಪಚಾರಿಕ ವಲಯದ ಔಪಚಾರಿಕ ಕೆಲಸವು ಅಧಿಕವಾಗಿ ಕಂಡುಬರುತ್ತದೆ. ಅನೌಪಚಾರಿಕ ವಲಯದ ಉದ್ಯೋಗ ಹಂಚಿಕೆಯನ್ನು ಗಮನಿಸಿದರೆ ೧೯೯೯– ೨೦೦೦ದಲ್ಲಿ ಅನೌಪಚಾರಿಕ ವಲಯದ ಶ್ರಮಿಕರ ಗಾತ್ರ ಶೇ. ೯೧.೧೭ರಷ್ಟು ಇದ್ದರೆ ಔಪಚಾರಿಕ

ವಲಯದ ಗಾತ್ರ ಶೇ. ೮.೮೩ ಆಗಿದೆ. ೨೦೦೪-೦೫ರ ವೇಳೆಗೆ ಅನೌಪಚಾರಿಕ ವಲಯದ ಶ್ರಮಿಕರ ಗಾತ್ರ ಶೇ. ೯೨.೩೮ ಆಗಿದ್ದು, ಔಪಚಾರಿಕ ವಲಯದ ಶ್ರಮಿಕರ ಗಾತ್ರ ಕೇವಲ ೭.೪೬ ಆಗಿರುತ್ತದೆ ಎಂದು ಮಾಹಿತಿ ಇದೆ. ಹೀಗೆ ಭಾರತದ ಶ್ರಮದ ಮಾರುಕಟ್ಟೆಯಲ್ಲಿ ಕೇವಲ ಕೆಲವೇ ಖಾಯಂ ಉದ್ಯೋಗಿಗಳು ಉದ್ಯೋಗದ ಸೌಲಭ್ಯಗಳನ್ನು ಹಕ್ಕುಗಳನ್ನು ಹೊಂದಿರುತ್ತಾರೆ ಎಂದು ತಿಳಿದು ಬರುತ್ತದೆ.

೨.೨: ಲಿಂಗ ಸಂಬಂಧಿ ಅಧ್ಯಯನಗಳು

ರಾಮೇಶ್ವರಿ ಪಾಂಡ್ಯ ಅವರು ಬರೆದ 'ವುಮೆನ್ ಇನ್ ಛೇಂಜಿಂಗ್ ಇಂಡಿಯ' ಎಂಬ ಕೃತಿಯಲ್ಲಿ ಸ್ತ್ರೀ ಪುರುಷರು ಕುಟುಂಬದಲ್ಲಿ ಹಾಗು ಸಮಾಜದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳು ಹಾಗೂ ಅದರಿಂದ ಆರ್ಥಿಕತೆಯ ಮೇಲಾಗುವ ಪರಿಣಾಮಗಳ ಕುರಿತು ವಿಶ್ಲೇಷಿಸಲಾಗಿದೆ.

ಕಳೆದ ಐದು ದಶಕಗಳಿಂದ ಮಹಿಳಾ ಸಂಘಟನೆಗಳು ಹಾಗೂ ಅಭಿವೃದ್ಧಿ ಪರಿಣಿತರು, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಸುಧಾರಿಸಲು ಹಾಗೂ ಸ್ತ್ರೀಯರ ವಿಧ್ಯಾಭ್ಯಾಸ, ವರಮಾನ, ನಿರ್ಧಾರವನ್ನು ಕೈಗೊಳ್ಳುವಲ್ಲಿ ಅವರಿಗಿರುವ ಅಧಿಕಾರಗಳ ಕುರಿತು ಚಿಂತನೆ ನಡೆಸಿವೆ.[೬] ಜನಸಂಖ್ಯೆ ಹಾಗೂ ಅಭಿವೃದ್ಧಿಯ ಕುರಿತಾಗಿ ೧೯೯೪ರಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸ್ತ್ರೀಪುರುಷರಿಗೆ ಮಗುವನ್ನು ಬೆಳೆಸುವ, ಮನೆಗೆಲಸ ಹಾಗೂ ಮನೆಯ ನಿರ್ವಹಣೆ ಮಾಡುವ ಕೆಲಸದಲ್ಲಿ ಸಮಾನ ಅವಕಾಶ ಹಾಗೂ ಜವಾಬ್ದಾರಿ ಇರಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ ಸಮ್ಮೇಳನದಲ್ಲಿ ವ್ಯಕ್ತವಾದ ಈ ಆಶಯ ಈಡೇರಬೇಕೆಂದರೆ ಎಷ್ಟು ವರ್ಷಗಳು ಅಥವಾ ತಲೆಮಾರುಗಳು ಬೇಕಾಗಬಹುದು ಎಂಬುದೇ ಪ್ರಶ್ನೆಯಾಗಿದೆ. ಅಲ್ಲದೇ ಮಹಿಳೆಯ ಸಮಾನತೆ ಎಂಬ ಸಿದ್ಧಾಂತವು ಜಾರಿಗೆ ಬರುವುದು ಯಾವಾಗ ಎಂಬುದು ಲೇಖಕರಿಗೆದುರಾದ ಸಮಸ್ಯೆಯಾಗಿದೆ. ಏಕೆಂದರೆ ಸಮಾಜವು ಪುರುಷರು ಆರೈಕೆ ಮಾಡುವ ಹಾಗು ಮನೆಯಲ್ಲಿ ಕೆಲಸ ಮಾಡುವುದನ್ನು ನಿರೀಕ್ಷಿಸುವುದಿಲ್ಲ ಹಾಗೆ ಮಾಡಿದರೆ ಅವರನ್ನು ಕೀಳಾಗಿ ಕಂಡ ಹಾಗಾಗುತ್ತದೆ ಎಂದೇ ಮಹಿಳೆಯರು ಭಾವಿಸುತ್ತಾರೆ. ಇದು ಸ್ವಾಭಾವಿಕವಾಗಿ ಪುರುಷರು ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯುವಂತೆ ಮಾಡುತ್ತದೆ. ಆದರೆ ೨೧ನೆಯ ಶತಮಾನದಲ್ಲಿ ಮಹಿಳೆಯರು ಶ್ರಮದ ಮಾರುಕಟ್ಟೆಯನ್ನು ಪ್ರವೇಶ ಮಾಡಿರುವುದರಿಂದ ಸಾಂಪ್ರದಾಯಿಕವಾಗಿ ಬಂದ ಶ್ರಮವಿಭಜನೆಯ ವ್ಯವಸ್ಥೆಗೆ ಹಿನ್ನಡೆಯುಂಟಾಗಿದೆ ಎಂಬ ಅಭಿಪ್ರಾಯವನ್ನು ಲೇಖಕರು ಬರೋಡದ ೬೦ ಕುಟುಂಬಗಳನ್ನು ತಮ್ಮ ಪ್ರಶ್ನಾವಳಿಯ ಮೂಲಕ ಅಧ್ಯಯನ ಮಾಡಿ ವ್ಯಕ್ತಪಡಿಸಿದ್ದಾರೆ.

ಆಲ್ವಾಮಿರ್ಡಾಲ್ ಹಾಗೂ ವಿಯೋಲಾ ಲೀನ್ ಅವರು ಬರೆದ 'ವುಮೆನ್ ಟು ರೋಲ್ಸ್ ಹೋಮ್ ಅಂಡ್ ವರ್ಕ್' ಕೃತಿಯಲ್ಲಿ ಲೇಖಕರು ಮಹಿಳಾ ಶ್ರಮಿಕರ ಔದ್ಯೋಗಿಕ ಸಮಸ್ಯೆಗಳ ಕುರಿತು ಚರ್ಚಿಸಿದ್ದಾರೆ. ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರು ಎಷ್ಟೇ ಅನಿವಾರ್ಯವಾದರೂ ಅವರಿಗೆ ಉದ್ಯೋಗ ಕ್ಷೇತ್ರದಲ್ಲಿ ರಿಯಾಯಿತಿಗಳನ್ನು ಕೊಡುವಲ್ಲಿ ಹಿಂದೇಟು ಹಾಕುತ್ತಿರುವ ಹಾಗೂ ಈ ಕಾರಣದಿಂದಲೇ ಎಷ್ಟೋಂದು ಮಹಿಳೆಯರು ಕೇವಲ ಅರೆಕಾಲಿಕ ಉದ್ಯೋಗದಲ್ಲಿಯೇ ಮುಂದುವರೆಯುವ ಇಚ್ಛೆಯುಳ್ಳವ ರಾಗಿರುತ್ತಾರೆ ಎಂಬ ವಿಷಯಗಳನ್ನು ಬಹಳ ಗಹನವಾಗಿ ಚರ್ಚಿಸಿದ್ದಾರೆ.

ಮಹಿಳೆಯರು ತಮಗೆ ಪ್ರಕೃತಿದತ್ತವಾಗಿ ಬಂದ ಸಂತಾನೋತ್ಪತ್ತಿ ಕಾರ್ಯವನ್ನು ನಿಭಾಯಿಸುವುದರ ಜೊತೆಗೆ ಆರ್ಥಿಕ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡು ಇಬ್ಬಗೆಯ ಹೊರೆಯನ್ನು ಹೊತ್ತಿದ್ದಾರೆ. ಆದರೆ ಕೌಟುಂಬಿಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಉದ್ಯೋಗ ರಂಗದಲ್ಲಿ ಹಿನ್ನಡೆಯನ್ನು ಅನುಭವಿಸುವಂತಾಗಿದೆ.[೬] ಇದರ ಪರಿಣಾಮವಾಗಿ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕುವುದು ಸರ್ವೇಸಾಮಾನ್ಯವಾಗಿದೆ. ಅತಿಯಾಗಿ ಕೆಲಸಕ್ಕೆ ಗೈರು ಹಾಜರಾಗುವುದು, ತಡವಾಗಿ ಕೆಲಸಕ್ಕೆ ಬರುವುದು ಇಂತಹ ತಪ್ಪುಗಳನ್ನು ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರೇ ಮಾಡುತ್ತಾರೆ ಎಂಬ ಉಲ್ಲೇಖವಿದೆ. ಇದನ್ನು ಲೇಖಕರು ಅಂಕಿಅಂಶ ಸಮೇತವಾಗಿ ತಮ್ಮ ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ. ಆದರೆ ಕೌಟುಂಬಿಕ ಸಮಸ್ಯೆಗಳಲ್ಲಿ ಮಹಿಳೆ ತೊಡಗಿಸಿಕೊಂಡಷ್ಟು ಪುರುಷರು ತೊಡಗಿಸಿಕೊಂಡಿರುವುದಿಲ್ಲ. ಅದು ಅಲ್ಲದೇ ಮಹಿಳೆಗೆ ಸ್ವಾಭಾವಿಕವಾಗಿ ಬಂದ ಜವಾಬ್ದಾರಿಯಾದ ಸಂತಾನೋತ್ಪತ್ತಿ ಕಾರ್ಯವನ್ನು ಯಾರಿಗೂ ವರ್ಗಾಯಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಭಾವಿ ಜನಾಂಗದ ಭವಿಷ್ಯವನ್ನೇ ಮಹಿಳೆ ಬರೆಯುತ್ತಿರುವಾಗ ಉದ್ಯೋಗ ಕ್ಷೇತ್ರದಲ್ಲಿ ಪುರುಷರಿಗಿಂತ ಅಧಿಕವಾದ ಸವಲತ್ತುಗಳನ್ನು ಮಾಡಿಕೊಡುವಲ್ಲಿ ತಪ್ಪೇನಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಇದರಿಂದ ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರೂ ಪುರುಷರಂತೆ ಪ್ರತ್ಯಕ್ಷವಾಗಿಯೇ ಭಾಗಿಯಾಗುವಂತೆ ಉತ್ತೇಜನ ನೀಡಿದಂತಾಗುತ್ತದೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಹೇಳುವುದಾದರೆ ಲೇಖಕರ ಅಭಿಪ್ರಾಯಗಳಿನ್ನೂ ಮಹಿಳೆಯರ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲವೆಂದೇ ಹೇಳಬೇಕು. ಆದರೆ ರಾಮೇಶ್ವರಿ ಪಾಂಡೆಯವರು ತಮ್ಮ ಕೃತಿಯಲ್ಲಿ ಈ ವಿಷಯವಾಗಿ ಉದಾತ್ತ ಅಂಶಗಳನ್ನೇ ತಿಳಿಸಿದ್ದಾರೆ. ಕೌಟುಂಬಿಕ ಕೆಲಸಕಾರ್ಯಗಳಲ್ಲಿ ಮಹಿಳೆಯರಿಗೆ ಪುರುಷ ಯಾವ ರೀತಿ ಸಹಕರಿಸಬೇಕು ಎಂಬುದನ್ನು ಎಳೆಎಳೆಯಾಗಿ ಬಿಡಿಸಿಹೇಳುತ್ತಾ ಲಿಂಗ ತಾರತಮ್ಯವನ್ನು ಬದಿಗಿರಿಸುವ ಹಾಗೂ ಪುರುಷ ಪ್ರಾಧಾನ್ಯತೆಗೆ ತಿಲಾಂಜಲಿ ನೀಡುವ ಪ್ರಯತ್ನ ಮಾಡಿದ್ದಾರೆ.

ಮಾರ್ಥಾ ಸಿ. ನುಸ್‌ಭಾಮ್ ಅವರು ಬರೆದ 'ವುಮೆನ್ ಅಂಡ್ ಹ್ಯೂಮನ್ ಡೆವಲಪ್‌ಮೆಂಟ್' ಕೃತಿಯಲ್ಲಿ ಮಹಿಳೆಯರು ಆರ್ಥಿಕ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಇರುವ ಅಡೆತಡೆಗಳ ಕುರಿತು ಚಿಂತನೆ ನಡೆಸಿದ್ದಾರೆ. ಮೊದಲನೆಯದಾಗಿ ಮಹಿಳೆಯರಿಗೆ ಸರಿಯಾದ ಬೆಂಬಲವಿಲ್ಲ. ಪುರುಷರಂತೆ ಗಟ್ಟಿಮುಟ್ಟಾಗಿರುವುದಿಲ್ಲ. ದೈಹಿಕವಾದ ಹಿಂಸೆಗೆ ಒಳಗಾಗುವ ಸಾಧ್ಯತೆಗಳಿವೆ. ಹೊರಗಿನ ಜಗತ್ತನ್ನು ಪ್ರವೇಶಿಸಲು ಕುಟುಂಬದಿಂದಲೇ ಸಮಸ್ಯೆ ಉದ್ಭವಿಸುತ್ತದೆ. ಲಿಂಗತಾರಮ್ಯದ ನೆರಳು ಅವಳನ್ನು ಹಿಂಬಾಲಿಸುತ್ತದೆ. ಮಹಿಳೆ ಪುರುಷನ ಸಮಾನಳು ಎಂದು ಎಲ್ಲೂ ಪರಿಗಣಿಸಲ್ಪಟ್ಟಿಲ್ಲ, ಅವಳಿಗೆ ಆಸ್ತಿ ಹಕ್ಕೂ ಇಲ್ಲ. ಇದ್ದರೂ ಅದು ಸಮರ್ಪಕವಾಗಿ ಜಾರಿಗೆ ಬಂದಿರುವುದಿಲ್ಲ. ಆದರೂ ಮನೆಯ ಸಮಸ್ತ ಜವಾಬ್ದಾರಿಯನ್ನು ಹೊತ್ತು ಬಿಡುವಿಲ್ಲದೇ ದುಡಿದರೂ ಅವಳ ದುಡಿಮೆಯನ್ನು ಯಾರೂ ಗೌರವಿಸುವುದಿಲ್ಲ. ಕುಟುಂಬದಲ್ಲಿಯೇ ಮಹಿಳೆ ಪರುಷನಂತೆ ಪ್ರೀತಿ ಗೌರವಗಳನ್ನು ಪಡೆಯಲಾಗುವುದಿಲ್ಲ.[೮] ಮದುವೆಯ ವಿಷಯದಲ್ಲಿಯೂ ಅವಳು ಹಿರಿಯರ ಅಭಿಪ್ರಾಯಗಳಿಗೆ ಮನ್ನಣೆ ಕೊಡಬೇಕೇ ವಿನಃ ಅವಳ

ಇಚ್ಛೆಗನುಸಾರ ನಡೆಯುವುದಿಲ್ಲ. ಹೀಗಾಗಿ ಮಹಿಳೆಯ ಅರ್ಹತೆಗಳು ಆಸೆಗಳು ಕಮರಿಹೋಗುವ ಸಂದರ್ಭಗಳೇ ಹೆಚ್ಚು. ಕೇವಲ ಬೇರೆಯವರ ಆಶೋತ್ತರಗಳನ್ನು ಈಡೇರಿಸುವ ಸಾಧನವಾಗಿ ಮಹಿಳೆಯನ್ನು ಬಳಸಿಕೊಳ್ಳುತ್ತಾರೆ. ಈ ತಾರತಮ್ಯವನ್ನು ಮಹಿಳೆ ಕುಟುಂಬ ಹಂತದಲ್ಲಿಯೇ ಎದುರಿಸುತ್ತಾಳೆ. ಹೆಣ್ಣು ಮಗುವನ್ನು ಎಂದಿದ್ದರೂ ಮನೆಬಿಟ್ಟು ಹೋಗುವವಳು ಎಂದು ನಿರ್ಲಕ್ಷ ತೋರಿ ಅವಳ ಭವಿಷ್ಯಕ್ಕೆ ಕಲ್ಲು ಹಾಕುತ್ತಾರೆ. ಮಹಿಳೆಯರ ಸಾಕ್ಷರತಾ ಪ್ರಮಾಣ, ವೇತನಮಟ್ಟ, ಪುರುಷರಿಗಿಂತ ಬಹಳ ಕಡಿಮೆ ಇದ್ದು ಅದರ ಅಂಕಿ ಅಂಶಗಳು ಮಾತ್ರ ಸರಿಯಾಗಿ ಲಭ್ಯವಿಲ್ಲದೇ ಮಹಿಳೆಗಾಗುವ ದೌರ್ಜನ್ಯವು ಬೆಳಕಿಗೆ ಬರುತ್ತಿಲ್ಲ. ಭಾರತದಂತಹ ಸನ್ನಿವೇಶದಲ್ಲಿ ಮಹಿಳಾ ಹಕ್ಕುಗಳು ಕೇವಲ ಸಂವಿಧಾನದಲ್ಲಿ ಬರೆಯಲ್ಪಟ್ಟಿವೆಯೇ ವಿನಃ ನಿಜ ಜೀವನದಲ್ಲಿ ಅವಳು ದ್ವಿತೀಯ ದರ್ಜೆಯ ಪ್ರಜೆಯಾಗಿ ಬದುಕು ಸಾಗಿಸುತ್ತಿದ್ದಾಳೆ. ಹೀಗಾಗಿ ಮಹಿಳೆಯರಿಗೆ ಸಂವಿಧಾನಾತ್ಮಕವಾಗಿ ದೊರೆಯಬೇಕಾದ ಸ್ಥಾನಮಾನವನ್ನು ಕಲ್ಪಿಸಿಕೊಡಲು ಪ್ರಯತ್ನಿಸುವಂತೆ ನೋಡಿಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸ್ತ್ರೀ ವಾದಿಗಳು ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳ ಬಡಮಹಿಳೆಯರ ದುಡಿಮೆಯ ಕುರಿತು ಚಿಂತನೆ ನಡೆಸಿದ್ದಾರೆ. ಮಹಿಳೆಯರ ಶಿಕ್ಷಣ, ಪೌಷ್ಠಿಕ ಆಹಾರ, ಭೂ ಸ್ವಾಧೀನ ಹಕ್ಕು ಹಾಗೂ ಮಹಿಳೆಯರಿಗೆ ಮನೆಯಿಂದ ಹೊರಬಂದು ದುಡಿಯುವ ಅವಕಾಶಗಳನ್ನು ಕಲ್ಪಿಸಿಕೊಡುವುದು ಈ ಎಲ್ಲ ವಿಷಯಗಳೂ ಸ್ತ್ರೀವಾದಿಗಳ ಆದರ್ಶ ತತ್ವಗಳಾಗಿವೆ. ಈ ಗ್ರಂಥದಲ್ಲಿ ಜಯಮ್ಮ ಹಾಗೂ ವಾಸಂತಿ ಎಂಬ ಇಬ್ಬರು ಮಹಿಳೆಯರ ಜೀವನ ಶೈಲಿಯನ್ನು ಅಧ್ಯಯನ ಮಾಡಿ ಅಂತಿಮ ನಿರ್ಧಾರಕ್ಕೆ ಬರಲಾಗಿದೆ. ಮಹಿಳಾ ಸಮಾನತೆ ಎನ್ನುವುದು ಕೇವಲ ಸಿದ್ಧಾಂತವಾಗಿ ಬರೆಯಲ್ಪಟ್ಟಿದೆಯೇ ಹೊರತು ನಿಜ ಜೀವನದಲ್ಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಜಿತ್ ಕೆ.ಘೋಶ್(೨೦೧೦) ಆವರು ಭಾರತೀಯ ಔದ್ಯೋಗಿಕ ಕ್ಷೇತ್ರದ ಸಮಸ್ಯೆಗಳನ್ನು ಬಿಡಿಸಿ ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ ಭಾರತದಲ್ಲಿ ಕೇವಲ ಕೆಲವೇ ಜನ ಉತ್ತಮ ಕೆಲಸದಲ್ಲಿ ನಿರತರಾಗಿದ್ದಾರೆ. ಆದರೆ ಅಧಿಕ ಸಂಖ್ಯೆಯ ಶ್ರಮಬಲವು ಕಡಿಮೆ ಉತ್ಪಾದನೆಯ, ಕಡಿಮೆ ಆದಾಯದ ಕೆಲಸದಲ್ಲಿ ತೊಡಗಿದ್ದಾರೆ, ಉತ್ತಮ ಉದ್ಯೋಗಗಳನ್ನು ಔಪಚಾರಿಕ ಆಧುನಿಕ ಆರ್ಥಿಕತೆಯ ಉದ್ಯೋಗ ಗಳೆಂದು ಕರೆದರೆ, ಕಡಿಮೆ ಗುಣಮಟ್ಟದ ಕೆಲಸಗಳನ್ನು ಅಸಂಘಟಿತ ಆರ್ಥಿಕ ವಲಯದ ಒಂದು ಭಾಗ ಎಂದು ಕರೆಯಲಾಗುತ್ತದೆ.[೯] ಅದರಲ್ಲಿ ಸ್ವಉದ್ಯೋಗ ಹಾಗೂ ಸಾಂದರ್ಭಿಕ ಉದ್ಯೋಗವೆಂದು ಎರಡು ವಿಧಗಳಿವೆ. ಇವು ಸರ್ಕಾರದ ಶಾಸನಾತ್ಮಕ ರಕ್ಷಣೆಯಿಲ್ಲದ ಕಡಿಮೆ ಆದಾಯದ ಕೆಲಸಗಳಾಗಿವೆ. ಅಸಂಘಟಿತ ವಲಯದ ಕಾರ್ಮಿಕರು ಸಂಘಟಿತ ವಲಯದ ದುಡಿಮೆಗಾರರಿಗಿಂತ ಮೂರು ಪಟ್ಟು ಹೆಚ್ಚು ಬಡತನಕ್ಕೆ ಗುರಿಯಾಗಿದ್ದಾರೆ ಎಂಬುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

ಪ್ರಿಯಾಂಕ ಸಿಂಗ್ ಹಾಗೂ ಬಿ.ಪಿ.ಸಿಂಗ್ ಅವರು 'ಜರ್ನಲ್ ಆಫ್ ಸೋಶಿಯಲ್ ಅಂಡ್ ಎಕನಾಮಿಕ್ ಸ್ಟಡೀಸ್'ನಲ್ಲಿ ಲಿಂಗತಾರತಮ್ಯದ ಕುರಿತು ತಮ್ಮ ಚಿಂತನೆ ವ್ಯಕ್ತಪಡಿಸಿದ್ದಾರೆ. ಮಹಿಳೆಯರು ಕೇವಲ ಸಂತಾನೋತ್ಪತ್ತಿ ಹಾಗೂ ಗೃಹ ಕೆಲಸಕ್ಕೆ ಸೀಮಿತ ಎಂಬ ಭಾವನೆ ಪುರುಷರದಾಗಿದೆ. ಇತ್ತೀಚೆಗೆ

ಮಹಿಳೆಯರು ಮನೆಯಿಂದ ಹೊರಗೆ ಬಂದು ಕೆಲಸದಲ್ಲಿ ತೊಡಿಗಿದಾಗ್ಯೂ ಅವರ ಉತ್ಪಾದನಾ ಕೌಶಲ್ಯಕ್ಕೆ ಯಾವ ಬೆಲೆಯೂ ಸಿಗುತ್ತಿಲ್ಲ, ಅದರಲ್ಲೂ ಅಸಂಘಟಿತ ವಲಯದ ಮಹಿಳೆಯರು ಅತಿಯಾಗಿ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಬಿ.ಎಸ್. ಪ್ರಕಾಶ್ (೨೦೧೦) ಅವರು ಅನೌಪಚಾರಿಕ ವಲಯದ ಕೊಡುಗೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಮೊದಲಬಾರಿಗೆ ಅಂದರೆ ೧೯೭೦ರಲ್ಲಿ ಕೀತ್ ಹಾರ್ಟ್ ಅವರು ಆರ್ಥಿಕತೆಯನ್ನು ಔಪಚಾರಿಕ ಹಾಗೂ ಅನೌಪಚಾರಿಕ ಎಂಬ ವಲಯವಾರು ವಿಭಾಗವನ್ನು ಮಾಡಿದ್ದಾರೆ. ಇದಕ್ಕಿಂತ ಮೊದಲು ಸಾಂಪ್ರದಾಯಿಕ ಹಾಗೂ ಆಧುನಿಕ ಎಂಬ ಎರಡೇ ಹೆಸರು ರೂಢಿಯಲ್ಲಿದ್ದವು. ಈ ಎರಡು ವಲಯಗಳಲ್ಲಿ ಅತೀ ಹೆಚ್ಚಿನ ಉದ್ಯೋಗವನ್ನು ಕಲ್ಪಿಸಿಕೊಡುವ ವಲಯ ಎಂದರೆ ಅನೌಪಚಾರಿಕ ವಲಯ. ಆದರೆ ಕಡಿಮೆ ಜನರಿಗೆ ಉದ್ಯೋಗ ಕಲ್ಪಿಸಿ ಹೆಚ್ಚಿನ ಕೌಶಲ್ಯಯುತವಾದ ನೈಪುಣ್ಯದ ಕೆಲಸ ಆಪೇಕ್ಷಿಸುವ ವಲಯ ಎಂದರೆ ಔಪಚಾರಿಕ ವಲಯ. ಇಲ್ಲಿ ಆದಾಯ ಹೆಚ್ಚಿನ ಮಟ್ಟದಲ್ಲಿರುತ್ತದೆ. ಅನೌಪಚಾರಿಕ ವಲಯದ ದುಡಿಮೆಗಾರರ ದುಃಸ್ಥಿತಿಗೆ ಕಾರಣ ಶ್ರಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪೂರೈಕೆಯಾಗುತ್ತಿರುವುದು. ಗ್ರಾಮಗಳಲ್ಲಿ ಉದ್ಯೋಗ ಸಿಗದೇ ಹೋದಾಗ ಹಾಗೂ ತಮ್ಮ ದುಡಿಮೆಗೆ ತಕ್ಕ ಕೂಲಿ ಸಿಗದೇ ಹೋದಾಗ ಜನ ಪಟ್ಟಣಕ್ಕೆ ಬಂದು ಅನೌಪಚಾರಿಕ ವಲಯದ ದುಡಿಮೆಯಲ್ಲಿ ಕಡಿಮೆ ವೇತನಕ್ಕೆ ನಿಯುಕ್ತಿ ಹೊಂದುತ್ತಾರೆ. ಈ ರೀತಿಯ ಸನ್ನಿವೇಶವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ಅನಾಮಿಕಾ ಪ್ರಿಯದರ್ಶಿನಿ (೨೦೧೧)ಯವರ ಲೇಖನ 'ದಿ ಕ್ವಯಟ್ ರೆವಲೂಷನ್ ಅಂಡ್ ವುಮೆನ್ ಪ್ರಾಲಿಟೇರಿಯನೈಶೇಷನ್'ನ ಅಭಿಪ್ರಾಯ ಈ ರೀತಿಯಾಗಿ ವ್ಯಕ್ತವಾಗಿದೆ. ೨೦ನೇ ಶತಮಾನದ ಕೊನೆಯ ಭಾಗದಲ್ಲಿ ಬಂಡವಾಳಶಾಹಿಗಳು ಕಡಿಮೆ ಬೆಲೆಯ ಕಾರ್ಮಿಕರಿಗಾಗಿ ನಡೆಸಿದ ಶೋಧ ಹಾಗೂ ಇದಕ್ಕೆ ಪ್ರತಿಯಾಗಿ ಮಹಿಳೆಯರ ಶಾಂತ ಹೋರಾಟದ ಬಗ್ಗೆ ವಿಶ್ಲೇಷಣೆ ಮೂಡಿಬಂದಿದೆ. ಮಹಿಳಾ ದುಡಿಮೆಗಾರರ ಪೂರೈಕೆ ಹೆಚ್ಚಿದಂತೆಲ್ಲ ಅವರು ಕಡಿಮೆ ವೇತನದ ಕೆಲಸದಲ್ಲಿ ತೊಡಗ ಬೇಕಾಯಿತು, ಅದರಂತೆ ಉತ್ಪಾದನೆಯೂ ಹೆಚ್ಚಾಯಿತಾದರೂ ಅದಕ್ಕೆ ಬೇಡಿಕೆ ದೊರೆಯದಂತಾಯಿತು, ಇದಕ್ಕೆ ಪ್ರಮುಖ ಕಾರಣ ಜನರ ವೇತನದ ಕಡಿತದಿಂದಾಗಿ ಅವರ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಇದು ಬಂಡವಾಳಶಾಹಿ ಮಾರುಕಟ್ಟೆಯ ದೊಡ್ಡ ದುರಂತ. ಇದರ ಜೊತೆ ಮಹಿಳಾ ದುಡಿಮೆಗಾರರು ತಮ್ಮ ಮೇಲಿನ ದೈಹಿಕ ಹಾಗೂ ಮಾನಸಿಕ ಶೋಷಣೆಯನ್ನು ಸಹಿಸಲಾರದೇ ಬಂಡೆದ್ದರು. ಅವರು ಕಾರ್ಮಿಕ ಸಂಘಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಇಂತಹ ಪರಿಸ್ಥಿತಿಯನ್ನು ನಿಭಾಯಿಸುವ ಮೊದಲ ಹಂತವಾಗಿ ಮಹಿಳಾ ಸ್ಥಿತಿಗತಿಗಳ ಕಡೆ ಗಮನ ಹರಿಸಲಾಯಿತು ಎಂದು ವರದಿಯಲ್ಲಿ ಶ್ರಮಿಕರ ಮಾನಸಿಕ ತುಮುಲವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ತಮ್ಮ ದುಡಿಮೆಗೆ, ಶ್ರಮಕ್ಕೆ ತಕ್ಕ ಪ್ರತಿಫಲ ಸಿಗದೇ ಹೋದಾಗ ಹೋರಾಟದ ಮಾರ್ಗ ಅನಿವಾರ್ಯ ಎಂಬುದು ಲೇಖಕರ ಅಭಿಪ್ರಾಯ ವಾಗಿದೆ.

'ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ'(೨೦೦೮)ರ ವರದಿಯಲ್ಲಿ ರಂಜನ್‌ಕುಮಾರ್ ಭರತ್‌ರವರ 'ಅನ್ ಆರ್ಗನೈಸ್ಡ್ ಸೆಕ್ಟರ್' ಎಂಬ ಲೇಖನವೂ ಅಸಂಘಟಿತ ವಲಯದ ಚಿತ್ರಣವನ್ನು ನೀಡುತ್ತದೆ. ೨೦೦೭ರ NCEUS ವರದಿಯ ಪ್ರಕಾರ ಭಾರತದ ೮೩೬ ಮಿಲಿಯನ್ ಅಂದರೆ ಶೇ. ೭೭ರಷ್ಟು ಜನಸಂಖ್ಯೆ ದಿನಕ್ಕೆ ೨೦ ರೂ.ಗಳಿಗಿಂತ ಕಡಿಮೆ ಆದಾಯ ಪಡೆಯುತ್ತಿದೆ. ಇದರಲ್ಲಿ ಶೇ. ೯೨ರಷ್ಟು ಶ್ರಮಬಲವು ಕೆಲಸ ಮಾಡುತ್ತಾ ತಮ್ಮ ಅವಲಂಬಿಗಳ ಜವಾಬ್ದಾರಿಯನ್ನು ಹೊತ್ತು ಜೀವನ ನಡೆಸುತ್ತಿರುವುದು ಯಾವುದೇ ಸಾಮಾಜಿಕ ಹಾಗೂ ಔದ್ಯೋಗಿಕ ಸುರಕ್ಷತೆ ಇಲ್ಲದಂತಹ ಅಸಂಘಟಿತ ಕ್ಷೇತ್ರದಲ್ಲಿ ಎಂಬುದನ್ನು ಮನವರಿಕೆ ಮಾಡಿಕೊಟ್ಟಿರುತ್ತಾರೆ. ಈ ಅಸಂಘಟಿತ ಕ್ಷೇತ್ರವನ್ನು ವ್ಯವಸ್ಥಿತವಾಗಿ ಸಂಘಟನೆ ಗೊಳ್ಳದ, ನೋಂದಣಿಯಾಗದ, ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡಲು ಯಾವುದೇ ಕಾನೂನಿನ ರಕ್ಷಣೆಯಿಲ್ಲದ ಒಂದು ವಲಯ ಎಂದು ಬಣ್ಣಿಸಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಘವು ಅಸಂಘಟಿತ ವಲಯದ ಕಾರ್ಮಿಕರ ಹಿತರಕ್ಷಣೆ ಕಾಪಾಡುವಲ್ಲಿ ತುಂಬಾ ಶ್ರಮ ವಹಿಸುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸೇರಿದ ಅನೇಕ ಪಟ್ಟಣಗಳಲ್ಲಿ ಕಸ ಹಾಗೂ ಚಿಂದಿ ಆರಿಸುವ ಮಹಿಳೆಯರನ್ನು ಹಾಗೂ ಗ್ಯಾರೇಜಿನಲ್ಲಿ ದುಡಿಯುವ ಮಕ್ಕಳನ್ನು ಉತ್ತಮ ಕೆಲಸಗಳಲ್ಲಿ ತೊಡಗಿಸುವ ಪ್ರಯತ್ನ ನಡೆದಿದೆ ಎಂದು ತಿಳಿಸಿದ್ದಾರೆ.

ಎ ವರ್ಲ್ಡ್ ಬ್ಯಾಂಕ್ ಕಂಟ್ರಿ ಸ್ಟಡಿಯ 'ಜೆಂಡರ್ ಅಂಡ ಪಾವರ್ಟಿ ಇನ್ ಇಂಡಿಯಾ' ವರದಿಯಲ್ಲಿ (೧೯೯೧) ನಗರದ ಅಸಂಘಟಿತ ಮಹಿಳೆಯರ ಕುರಿತಾದ ಮಾಹಿತಿ ಇದೆ. ಔಪಚಾರಿಕ ವಲಯದಿಂದ ಹೊರಗುಳಿದ ಮಹಿಳೆಯರು ಅನೌಪಚಾರಿಕ ವಲಯವನ್ನು ಪ್ರವೇಶಿಸುತ್ತಾರೆ. ILO (೧೯೭೨) ವ್ಯಾಖ್ಯೆಯ ಪ್ರಕಾರ ಅನೌಪಚಾರಿಕ ವಲಯದ ಪ್ರಮುಖ ಲಕ್ಷಣಗಳೆಂದರೆ: ಸುಲಭ ಪ್ರವೇಶ, ಕುಟುಂಬ ಯಜಮಾನಿಕೆ, ಸಣ್ಣ ಪ್ರಮಾಣದ ಉದ್ಯಮ, ಶ್ರಮಸಾಂದ್ರ ಹಾಗೂ ಕಡಿಮೆ ತಾಂತ್ರಿಕತೆ, ಅನಿಯಂತ್ರಿತ ಸ್ಪರ್ಧಾತ್ಮಕ ಮಾರುಕಟ್ಟೆ ಮುಂತಾದವು. ನಿರ್ಮಲಾ ಬ್ಯಾನರ್ಜಿಯವರು ಕಚ್ಚಾರೇಷ್ಮೆ ನೂಲುವ ವ್ಯಾಪಾರಿಗಳು ಅದರಲ್ಲಿ ಕೆಲಸಮಾಡುವ ಮಹಿಳೆಯರನ್ನು ಹೇಗೆ ಶೋಷಿಸುತ್ತಾರೆ ಎಂಬುದನ್ನು ಇದಕ್ಕೆ ಪೂರಕವಾಗಿ ಉದಾಹರಣೆ ನೀಡಿದ್ದಾರೆ.

ನಿರ್ಮಲಾ ಕೆ. ಗುಪ್ತಾ ಹಾಗೂ ಫಾಲೇಂದ್ರ ಕೆ. ಸೂಡಾನ್‌ರವರು ಬರೆದ 'ವುಮೆನ್ ಎಟ್‌ವರ್ಕ್ ಇನ್ ಡೆವಲಪಿಂಗ್ ಎಕಾನಮಿ' ಗ್ರಂಥದಲ್ಲಿ ಜಮ್ಮುವಿನ ಕಟ್ಟಡ ನಿರ್ಮಾಣ ಕೆಲಸದಲ್ಲಿ ತೊಡಗಿದ್ದ ಮಹಿಳಾ ದುಡಿಮೆಗಾರರ ಜೀವನ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ಆರ್ಥಿಕತೆಯಲ್ಲಿ ಆಧುನೀಕರಣ ವ್ಯವಸ್ಥೆಯನ್ನು ಅಳವಡಿಸಲು ಯತ್ನಿಸಿದ ಸರ್ಕಾರದ ಪ್ರಯತ್ನವು, ಅಶಕ್ತ ವರ್ಗದ ಶೋಷಣೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಲಿಲ್ಲ, ಅದರಲ್ಲೂ ಪ್ರಮುಖವಾಗಿ ಅಪರಿಣಿತ ಮಹಿಳಾ ಶ್ರಮಿಕರು ನಿರ್ಮಾಣ ಕಾರ್ಯದಲ್ಲಿ ತೊಡಗಿ ಯಾವ ರೀತಿ ಶೋಷಣೆಗೊಳಗಾಗುತ್ತಿದ್ದಾರೆ ಎಂಬುದರ ಬಗ್ಗೆ ವಿಶ್ಲೇಷಿಸಿದ್ದಾರೆ. ಲೇಖಕರು ತಮ್ಮ ಅಧ್ಯಯನಕ್ಕಾಗಿ ಜಮ್ಮುವಿನ ನೂರು ಮಹಿಳಾ ಕಟ್ಟಡ ನಿರ್ಮಾಣಕಾರರನ್ನು ಸಮೀಕ್ಷೆ ಗೊಳಪಡಿಸಿದ್ದಾರೆ. ಈ ಅಧ್ಯಯನದ ಪ್ರಮುಖ ಉದ್ದೇಶ ಅವರ ಸಾಮಾಜಿಕ, ಆರ್ಥಿಕ ಹಾಗೂ ವೃತ್ತಿಜೀವನದ ಸ್ಥಿತಿಗತಿಗಳನ್ನರಿಯುವುದು ಆಗಿದೆ.

ನಿರ್ಮಾಣ ಕಾರ್ಯವು ಅನಿಶ್ಚಿತವಾದ, ಸಾಂದರ್ಭಿಕ ದುಡಿಮೆಯಾಗಿದ್ದು, ಇದರಲ್ಲಿ ಕೌಶಲ್ಯ ರಹಿತವಾದ ಮಹಿಳೆಯರು ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಇವರಿಗೆ ವಹಿಸುವ ಕೆಲಸವು ಮರಳನ್ನು, ಇಟ್ಟಿಗೆಗಳನ್ನು, ಕಲ್ಲನ್ನು ಎತ್ತಿ ಬೇರೆ ಕಡೆ ಸಾಗಿಸುವ ದೈಹಿಕ ಶ್ರಮದ ಕೆಲಸವಾಗಿದೆ. ಇದು ಬೇರೆ ಕೆಲಸಗಳಿಗಿಂತ ಅಧಿಕ ಶ್ರಮದ ಕೆಲಸವಾಗಿದೆ. ಖಾಯಂ ಕೆಲಸವಾಗದ ಕಾರಣ, ಕೆಲಸಗಾರರು ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡುವುದು ಅನಿವಾರ್ಯವಾಗಿ, ಒಂದು ಸ್ಥಳದಲ್ಲಿ ನೆಲೆಸುವುದಿಲ್ಲ. ಈ ಮಹಿಳಾ ಶ್ರಮಿಕರು ಗ್ರಾಮೀಣ ಭಾಗದ ಬಡ ಜನರಾಗಿದ್ದು, ಅವರನ್ನು ಬಿಹಾರ್, ಒರಿಸ್ಸಾ, ಉತ್ತರಪ್ರದೇಶದಿಂದ ಕರೆತರಲಾಗಿರುತ್ತದೆ. ಸರ್ಕಾರ ಕಟ್ಟಡ ನಿರ್ಮಾಣಕಾರರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರೂ, ಅವುಗಳನ್ನು ಕಾರ್ಮಿಕರಿಗೆ ಅನ್ವಯ ಮಾಡಿಕೊಡುವಲ್ಲಿ ಗುತ್ತಿಗೆದಾರರು ಹಿಂದೇಟು ಹಾಕುತ್ತಿದ್ದಾರೆ. ಏಕೆಂದರೆ ಈ ಅನುಕೂಲಗಳನ್ನು ಕಾರ್ಮಿಕರಿಗೆ ಒದಗಿಸಿಕೊಟ್ಟರೆ, ಕೂಲಿ ವೆಚ್ಚ ಅಧಿಕವಾಗಿ ತಮ್ಮ ಲಾಭಾಂಶ ಇಳಿಮುಖವಾಗುತ್ತದೆ. ಆದರೆ ಕೂಲಿ ಕಾರ್ಮಿಕರ ದಾರುಣ ಬದುಕನ್ನು ಸ್ವಲ್ಪಮಟ್ಟಿಗಾದರೂ ಕಲ್ಯಾಣಮಯವನ್ನಾಗಿ ಮಾಡಲು ಶಾಸನಗಳನ್ನು ಜಾರಿಗೆ ತರುವ ಅಗತ್ಯತೆಯನ್ನು ಲೇಖಕರು ಎತ್ತಿಹಿಡಿದಿದ್ದಾರೆ. ಆದರೆ ಮಹಿಳಾ ದುಡಿಮೆಗಾರರ ಕುರಿತಾದ ಲೇಖನ ಇದಾಗಿರುವುದರಿಂದ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಎದ್ದು ಕಾಣುತ್ತಿರುವ ಲಿಂಗ ತಾರತಮ್ಯ, ಕೆಲಸದ ವಿಷಯವಾಗಲಿ, ಕೂಲಿಯ ವಿಷಯದಲ್ಲಾಗಲೀ ಪುರುಷರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವುದರ ಅಂಶವನ್ನು ಪರಿಗಣನೆಗೆ ತೆಗೆದುಕೊಂಡು ಪರಿಹಾರ ಸೂಚಿಸಿದ್ದರೆ ಲೇಖನ ಇನ್ನೂ ಅರ್ಥಪೂರ್ಣವಾಗಿರುತ್ತಿತ್ತು.

ಹೀಗೆ ಅನೌಪಚಾರಿಕ ವಲಯದ ವಿಶೇಷ ಲಕ್ಷಣವನ್ನು ಜೆನ್‌ಬ್ರೆಮೆನ್ ಅವರ 'ಫುಟ್ ಲೂಜ್ ಲೇಬರ್' 'ವರ್ಕಿಂಗ್ ಇನ್ ಇಂಡಿಯಾಸ್ ಇನ್‌ಫಾರ್ಮಲ್ ಎಕಾನಮಿ' ಕೃತಿಯಲ್ಲಿ ಕಾಣಬಹುದು. ೧೯೭೦ರ ಮೊದಲ ಭಾಗದಲ್ಲಿ ಸಂಶೋಧಕರು ಹಾಗೂ ನೀತಿನಿರೂಪಕರು, ಇದುವರೆಗೆ ಕಡೆಗಾಣಿಸಿದ್ದ ಅನೌಪಚಾರಿಕ ವಲಯದ ಮಾರುಕಟ್ಟೆ ಹಾಗೂ ಅಲ್ಲಿನ ದುಡಿಮೆಗಾರರ ಕುರಿತು ಅಧ್ಯಯನ ಮಾಡಲು ಹೆಚ್ಚಿನ ಆಸಕ್ತಿ ತೋರಿಸಿದರು. ಹತಾಶ ಮನೋಭಾವದ, ಅನಿಶ್ಚಿತ ಬದುಕಿನ, ಅಲೆದಾಡುವ ಜೀವನಶೈಲಿಯ ದುಡಿಮೆಗಾರರು, ಸಮಾಜದ ಕೆಳಸ್ತರದಲ್ಲಿ ಜೀವನ ನಡೆಸುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಆರ್ಥಿಕತೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಎಂಬ ಪ್ರತ್ಯೇಕತೆ ಉಂಟಾಗಲು ಕಾರಣಗಳನ್ನು ಪರಿಶೀಲಿಸಲಾಯಿತು ಹಾಗೂ ಔಪಚಾರಿಕ ವಲಯದಲ್ಲಿ ಕಡಿಮೆ ಸಂಖ್ಯೆಯ ಕಾರ್ಮಿಕರು ಅಂದರೆ ಶೇ. ೧೧ರಷ್ಟು ಜನ ತೊಡಗಲು ಕಾರಣಗಳನ್ನು ಹುಡುಕಲು ಪ್ರಯತ್ನಿಸಲಾಯಿತು. ಈ ಸಂಶೋಧನಾ ಕೃತಿಯ ಮೂಲಧ್ಯೇಯವೆಂದರೆ ಕೃಷಿಯಲ್ಲಿ ತೊಡಗಿದವರು ಕೃಷಿಯೇತರ ಉದ್ಯೋಗಗಳಿಗೆ ಸ್ಥಳಾಂತರ ಹೊಂದುವ ಅನಿವಾರ್ಯತೆ ಗುರುತಿಸುವುದು. ಅನೌಪಚಾರಿಕ ವಲಯವು ನೈಪುಣ್ಯತೆಯಿಲ್ಲದ ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸಲು ಕಾಯ್ದಿರಿಸಿದ ಸ್ಥಳವಾಗಿದೆ. ಇವರು ನಗರಗಳಲ್ಲಿ ತಮ್ಮ ಬದುಕು ಕಂಡುಕೊಳ್ಳಲು ವಲಸೆ ಬರುತ್ತಾರೆ ಎಂಬುದು ಲೇಖಕರ ವಾದವಾಗಿದೆ. ಈ ರೀತಿ ಪಟ್ಟಣಗಳಲ್ಲಿ ಬಂದು ನೆಲಸಿ ಉದ್ಯೋಗದಲ್ಲಿ ತೊಡಗಿದ, ವೃತ್ತಿ ನೈಪುಣ್ಯರಹಿತ ಜನ ಕೆಲ ಸಮಯದ ನಂತರ ತಮ್ಮ ವೃತ್ತಿಯಲ್ಲಿ ನೈಪುಣ್ಯತೆಯನ್ನು ಪಡೆಯುತ್ತಾರೆ.

ಹೀಗೆ ಮೊದಲ ತಂಡ ಅನೌಪಚಾರಿಕ ವಲಯದಿಂದ ಔಪಚಾರಿಕ ವಲಯದಲ್ಲಿ ಸ್ಥಾನವನ್ನು ಪಡೆಯುತ್ತಾರೆ ಹೀಗೆ ಔಪಚಾರಿಕ ವಲಯವು ಆಧುನಿಕತೆಯ ಸೂಚಕವೆನಿಸಿಕೊಳ್ಳುತ್ತದೆ ಎಂಬ ಊಹೆಯನ್ನು ಲೇಖಕರು ಮಾಡಿದ್ದಾರೆ. ಆದರೆ ೧೯೭೩ರಿಂದ ೧೯೮೭ರ ನಡುವೆ ಕೃಷಿಯೇತರ ಚಟುವಟಿಕೆಗಳು ಅನೌಪಚಾರಿಕ ವಲಯದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಕಂಡವು. ಏಕೆಂದರೆ ಜನ ಔಪಚಾರಿಕ ವಲಯದಲ್ಲಿ ಉದ್ಯೋಗ ಭರವಸೆ ಇಲ್ಲದೇ ಅನೌಪಚಾರಿಕ ವಲಯದ ಕೂಲಿ ದುಡಿಮೆಗೆ ಮೊರೆಹೋದರು. ಈ ವಲಯದಲ್ಲಿ ಅತಿಯಾದ ಶೋಷಣೆ ಮತ್ತು ಮಹಿಳೆಯರ ಶೋಚನೀಯ ಸ್ಥಿತಿಗತಿಗಳನ್ನು ಸರಕಾರಿ ದಾಖಲೆಗಳಲ್ಲಿ ಅಷ್ಟಾಗಿ ನೋಂದಣಿ ಮಾಡಿಕೊಂಡಿರುವುದಿಲ್ಲ. ಇಂತಹ ದುಡಿಮೆಯಲ್ಲಿರುವ ಕೆಲಸಗಾರರು ಉತ್ತಮ ಆದಾಯದ ಉದ್ಯೋಗದ ಅನ್ವೇಷಣೆಯಲ್ಲಿರುತ್ತಾರೆ ಹಾಗೂ ಸಾಂದರ್ಭಿಕ ದುಡಿಮೆಯಿಂದ ತಮ್ಮ ಜೀವನ ನಡೆಯದೇ ಹೋದಾಗ ಉದ್ಯೋಗವನ್ನರಸಿ ಬೇರೆ ಕಡೆ ತೆರಳುತ್ತಾರೆ. ದಕ್ಷಿಣ ಗುಜರಾತಿನ ಗ್ರಾಮದ ಸಣ್ಣ ಹಿಡುವಳಿದಾರರು ಹಾಗೂ ಭೂರಹಿತ ಕಾರ್ಮಿಕರಿಗೆ ಈ ವಲಸೆಯು ಪ್ರವೃತ್ತಿಯಾಗಿದೆ. ಹೀಗೆ ವಲಸೆ ಬಂದ ಜನ ತಮ್ಮ ಕೆಲಸ ಮುಗಿದ ತಕ್ಷಣ ಪುನಃ ಗ್ರಾಮಕ್ಕೆ ಮರಳುತ್ತಾರೆ, ಹೀಗೆ ಅನೌಪಚಾರಿಕ ವಲಯದಲ್ಲಿ ಉದ್ಯೋಗಕ್ಕಾಗಿ ಜನ ಅಲೆಮಾರಿ ಜೀವನವನ್ನು ನಡೆಸುತ್ತಿದ್ದಾರೆ. ಲೇಖಕರು ಈ ಜನರನ್ನು 'ಲೇಬರ್ ನೊಮ್ಯಾಡ್ಸ್' ಎಂದು ಕರೆದಿದ್ದಾರೆ, ಇಲ್ಲಿಯೂ ಕೂಡ ಲಿಂಗತಾರತಮ್ಯದ ಛಾಯೆ ವ್ಯಕ್ತವಾಗಿದೆ. ಅಂದರೆ ಪುರುಷರು ಉದ್ಯೋಗವನ್ನರಿಸಿ ಬೇರೆ ಸ್ಥಳಕ್ಕೆ ಹೋದರೆ ಮಹಿಳೆಯರು ಮನೆಯ ಜವಾಬ್ದಾರಿ ಹಾಗೂ ಸಂತಾನೋತ್ಪತ್ತಿ ಕಾರ್ಯದಲ್ಲಿ ತೊಡಗಿರುತ್ತಾರೆ, ಸಂದರ್ಭ ಬಂದರೆ ಕೂಲಿಗಳಾಗಿಯೂ ದುಡಿಯುತ್ತಾರೆ.

ಅನೌಪಚಾರಿಕ ವಲಯದ ದುಡಿಮೆಗಾರರಿಗೆ ದುಡಿಯುವ ಸ್ಥಳದಲ್ಲಿ ಸರಿಯಾದ ಉಪಕರಣಗಳೂ ಲಭ್ಯವಿರದೇ ಅವರು ತಮ್ಮ ದೈಹಿಕ ಶಕ್ತಿಯ ಮೇಲೆಯೇ ಕೆಲಸ ನಿರ್ವಹಿಸುತ್ತಾರೆ. ಒಂದು ವೇಳೆ ಕೆಲಸಕ್ಕೆ ತಕ್ಕ ಉಪಕರಣಗಳನ್ನು ಒಡೆಯರು ಪೂರೈಸಿದಲ್ಲಿ ಅದಕ್ಕೆ ಬೇರೆ ಲೆಕ್ಕ ಬರೆಯುತ್ತಾರೆ. ಹೀಗೆ ಶ್ರಮಿಕರು ದುಡಿಯುತ್ತಲೇ ಕೆಲಸವನ್ನು ಕಲಿತು ಕೆಲಸದಲ್ಲಿ ಪರಿಣತಿಯನ್ನು ಪಡೆಯುತ್ತಾರೆ. ಅಗರ್ವಾಲಾರವರು ಸೂರತ್‌ನಲ್ಲಿ ಕೈಮಗ್ಗದ ಕೆಲಸಮಾಡುವ ಮಹಿಳೆಯರ ಸ್ಥಿತಿಗತಿಯನ್ನು ಕುರಿತು ಸಂಶೋಧನೆ ನಡೆಸಿದ ವಿಷಯವನ್ನು ಲೇಖಕರು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಮಹಿಳೆಯರನ್ನು ಕೇವಲ ಕೆಳ ದರ್ಜೆಯ ಕೆಲಸಗಳಿಗಾಗಿಯೇ ನೇಮಿಸಿಕೊಳ್ಳುತ್ತಾರೆ, ಮಹಿಳೆಯರಿಗೆ ಮಗ್ಗವನ್ನು ಉಪಯೋಗಿಸುವ ಸ್ವಾತಂತ್ರ್ಯವನ್ನೇ ಕೊಡುವುದಿಲ್ಲ. ಮಹಿಳೆಯರಿಗಾಗಿ ಮೀಸಲಾದ ಕೆಲಸಗಳಿಗೆ ಪುರುಷರನ್ನು ನೇಮಿಸಿಕೊಳ್ಳುತ್ತಾರೆ ಆದರೆ ಪುರುಷರಿಗಾಗಿ ಕಾಯ್ದಿರಿಸಿದ ಸ್ಥಾನಗಳಿಗೆ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದಿಲ್ಲ. ಉದ್ಯೋಗದಲ್ಲಿ ತೊಡಗಿದ ಕಾರ್ಮಿಕರಿಗೆ ಕೆಲಸದ ಸಮಯ ನಿಗಧಿಯಾಗಿರುವುದಿಲ್ಲ. ಯಾವಾಗ ಎಲ್ಲಿಗೆ ಕರೆದರೂ ಹೋಗಿ ಕೆಲಸ ಮಾಡಬೇಕಾಗುತ್ತದೆ. ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ಕೂಲಿ ಕೂಡ ದೊರೆಯುವುದಿಲ್ಲ. ವಿರಾಮದ ಅವಧಿ ಕೂಡ ಕಡಿಮೆ ಇರುತ್ತದೆ. ಆತನ ಗೈರು ಹಾಜರಿಯಲ್ಲಿ ಏನಾದರೂ ಅವಘಡ ಸಂಭವಿಸಿದರೆ ಆ ನಷ್ಟವನ್ನು ಶ್ರಮಿಕರೇ ತುಂಬಿಕೊಡಬೇಕಾಗುತ್ತದೆ. ಅನಿವಾರ್ಯವಾಗಿ ರಜೆ ತೆಗೆದುಕೊಂಡರೆ ಅವರು ತಿರುಗಿ ಬರುವ ಸಮಯಕ್ಕೆ ಆತನ ಸ್ಥಾನವನ್ನು ಬೋರೊಬ್ಬ ವ್ಯಕ್ತಿ ಆಕ್ರಮಿಸಿಕೊಂಡಿರುತ್ತಾರೆ.

ಹೀಗೆ ಅನೌಪಚಾರಿಕ ವಲಯದ ಅನಿಶ್ಚಿತ ಹತಾಶ ಬದುಕಿನ ಚಿತ್ರಣವನ್ನು ಲೇಖಕರು ವಿವರಿಸಿದ್ದಾರೆ. ಲೇಖಕರು ಗ್ರಾಮೀಣ ಭಾಗದ ಜನ ಮೊದಲಿಗೆ ಪಟ್ಟಣಕ್ಕೆ ಬಂದಾಗ ಅನೌಪಚಾರಿಕ ವಲಯದ ಕೆಲಸದಲ್ಲಿ ತೊಡಗಿರುತ್ತಾರೆ. ಕಾಲಾನಂತರ ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಂಡು ಔಪಚಾರಿಕ ವಲಯದ ಕೆಲಸಕ್ಕೆ ಮರಳುತ್ತಾರೆ ಎಂದಿದ್ದಾರೆ. ಆದರೆ ಜರ್ನಲ್ ಆಫ್ ಸೋಶಿಯಲ್ ಆ್ಯಂಡ್ ಎಕನಾಮಿಕ್ ಡೆವಲಪ್‌ಮೆಂಟ್ ವರದಿ ಪ್ರಕಾರ ಔಪಚಾರಿಕ ವಲಯದ ಗಾತ್ರ ದಿನೇ ದಿನೇ ಕಡಿಮೆಯಾಗುತ್ತಿದೆ. ಲೇಖಕರ ಅಭಿಪ್ರಾಯ ಸತ್ಯವಾದಲ್ಲಿ ಔಪಚಾರಿಕ ವಲಯದ ಗಾತ್ರವು ದಿನೇ ದಿನೇ ಅಧಿಕವಾಗಬೇಕಿತ್ತು ಎಂಬ ಅಭಿಪ್ರಾಯವೇ ಪ್ರಸ್ತುತವಾಗಿದೆ.

ಮಹಿಳೆಯರ ತಾರತಮ್ಯವನ್ನು ಎಸ್.ಎನ್. ತ್ರಿಪಾಟಿಯವರು ಕೂಡ ಈ ರೀತಿಯಾಗಿಯೇ ವಿವರಿಸಿದ್ದಾರೆ. ತ್ರಿಪಾಟಿಯವರ ಗ್ರಂಥ 'ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್'ನಲ್ಲಿ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಮಹಿಳೆಯು ಪ್ರಮುಖ ಸ್ಥಾನವನ್ನು ಪಡೆದಿದ್ದಾಳೆ ಎಂದು ತಿಳಿಸಿದ್ದಾರೆ. ಮಹಿಳೆಯರನ್ನು ಗೌರವದಿಂದ ಕಾಣುವುದರಿಂದ ಹಾಗೂ ಅವರ ಸ್ಥಿತಿಗತಿ ಸುಧಾರಿಸುವುದರಿಂದ ಒಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸಲು ಸಾಧ್ಯ. ವರ್ಲ್ಡ್ ಬ್ಯಾಂಕ್ ೧೯೮೯ರ ವರದಿಯ ಪ್ರಕಾರ ಶೇ. ೩೫ರಷ್ಟು ಭಾರತೀಯ ಕುಟುಂಬಗಳು ಮಹಿಳೆಯರಿಂದಲೇ ನಡೆಯುತ್ತಿವೆ ಎಂಬ ಮಾಹಿತಿ ಲಭ್ಯವಿದೆ.[೧೦] ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಅಭಿಪ್ರಾಯದ ಪ್ರಕಾರ ೧೫ರಿಂದ ೬೪ ವರ್ಷದ ಜಗತ್ತಿನ ಶೇ. ೪೫ರಷ್ಟು ಮಹಿಳೆಯರು ಆರ್ಥಿಕತೆಗೆ ಪ್ರಮುಖ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಆದರೂ ಎರಡು ರೀತಿಯ ತಾರತಮ್ಯವನ್ನು ಅನುಭವಿಸುತ್ತಿದ್ದಾರೆ. ಮೊದಲನೆಯದಾಗಿ ಮಾರುಕಟ್ಟೆ ಪೂರ್ವ ತಾರತಮ್ಯ, ಎರಡನೆಯದಾಗಿ ವೇತನ ತಾರತಮ್ಯ. ಮೊದಲನೆಯ ತಾರತಮ್ಯದಲ್ಲಿ ಮಹಿಳೆಯನ್ನು ಶಿಕ್ಷಣ, ತರಬೇತಿ, ಅನುಭವ ಮುಂತಾದ ಬಂಡವಾಳ ಅಭಿವೃದ್ಧಿಗೊಳಿಸುವ ಅವಕಾಶಗಳಿಂದ ವಂಚಿತಳನ್ನಾಗಿ ಮಾಡುವುದು. ಎರಡನೆಯದಾಗಿ ಮಹಿಳೆ ಅಬಲೆ ಎನ್ನುವ ಕಾರಣದಿಂದ ವೇತನ ತಾರತಮ್ಯ ಮಾಡುವುದು. ಇತ್ತೀಚಿನ ದಿನಗಳಲ್ಲಿ ಅನೌಪಚಾರಿಕ ವಲಯದಲ್ಲಿ ಹೆಚ್ಚಾಗಿ ಮಹಿಳೆಯರು ಕಂಡುಬರುತ್ತಾರೆ. ಏಕೆಂದರೆ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡಲು ಹೆಚ್ಚಿನ ಶಿಕ್ಷಣ, ತರಬೇತಿ, ಬೇಕಿರುವುದಿಲ್ಲ. ಅಂತಹ ಕೆಲಸಗಳೆಂದರೆ ಮನೆಗೆಲಸ, ಬಟ್ಟೆ ಶುಚಿ ಮಾಡುವುದು, ಮಕ್ಕಳ ಪಾಲನೆ ಇತ್ಯಾದಿ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಮೇಲೆ ತಿಳಿಸಿದ ಲೇಖಕರ ಅಭಿಪ್ರಾಯಗಳನ್ನು ಸಮಗ್ರವಾಗಿ ಬೆಂಬಲಿಸುವಂತೆ ಟಿ.ಎಸ್.ಪಪೋಲಾ, ಅಲಕ್ ಶರ್ಮಾ ಅವರು ಸಂಪಾದಿಸಿರುವ 'ಜೆಂಡರ್ ಅಂಡ್ ಎಂಪ್ಲಾಯ್‌ಮೆಂಟ್ ಇನ್ ಇಂಡಿಯಾ' ಎಂಬ ಗ್ರಂಥದಲ್ಲಿ ಮಹಿಳಾ ದುಡಿಮೆಗಾರರ ಕುರಿತಾಗಿ ವಿವರಿಸುತ್ತಾರೆ. ಉದ್ಯೋಗದಲ್ಲಿ ಮಹಿಳಾ ಸಹಭಾಗಿತ್ವದ ಕೊರತೆ ಹಾಗೂ ಔದ್ಯೋಗಿಕ ರಂಗದಲ್ಲಿ ತಾರತಮ್ಯವನ್ನು ಕುರಿತು ಕಾರಣಗಳನ್ನು ಹುಡುಕಲು ಪ್ರಯತ್ನಿಸಿದ್ದಾರೆ. ಮಹಿಳೆಯರು ತಾವು ದುಡಿಯುವ ಕ್ಷೇತ್ರದಲ್ಲಿ ಕಡಿಮೆ ವೇತನ ಪಡೆಯಲು ಹಾಗೂ ಉನ್ನತ ದರ್ಜೆಯ ಕೆಲಸಕ್ಕೆ ಅನರ್ಹರಾಗಲು ಮೂರು ಕಾರಣಗಳನ್ನು ನೀಡಿದ್ದಾರೆ. ಮೊದಲನೆಯದಾಗಿ ಮಹಿಳೆಯರ ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಲು ಸಮಾಜ ಹಾಗು

ಕೌಟುಂಬಿಕ ಪ್ರಯತ್ನಗಳ ಕೊರತೆ ಇರುವುದು, ಎರಡನೆಯದಾಗಿ ಆರ್ಥಿಕತೆಯಲ್ಲಿ ಹೆಚ್ಚಿನ ರೀತಿಯಲ್ಲಿ ಪಾಲ್ಗೊಳ್ಳಲು ಇರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳದೇ ಇರುವುದು, ಮೂರನೇಯದಾಗಿ ವೃತ್ತರಂಗದ ಪ್ರವೇಶ ಹಾಗೂ ಉದ್ಯೋಗದಲ್ಲಿ ಮೇಲ್ದರ್ಜೆಗೇರಲು ಇರುವ ತಾರತಮ್ಯ ನೀತಿ.[೧೧]

ಮೇಲೆ ಹೇಳಿದ ಮೂರು ಕಾರಣಗಳಿಂದ ಮಹಿಳೆ ಔದ್ಯೋಗಿಕ ರಂಗದಲ್ಲಿ ಪರಿಮಾಣಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ಹಿನ್ನಡೆಯನ್ನು ಕಾಣಬೇಕಾಗಿದೆ. ಅದರೆ ಮೊದಲ ಕಾರಣಕ್ಕೆ ಲೇಖಕರು ಹೆಚ್ಚಿನ ಮಹತ್ವವನ್ನು ಕೊಟ್ಟಿರುವುದಿಲ್ಲ. ಮಹಿಳೆಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಹಣ ತೊಡಗಿಸುವುದರಿಂದ ಹೆಚ್ಚಿನ ಲಾಭ ದೊರೆಯುವುದಿಲ್ಲ ಎಂಬ ಪಾಲಕರ ಚಿಂತನೆಯಿಂದ ಮಹಿಳೆಯರು ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳುತ್ತಾರೆ. ಈ ಕೊರತೆಯಿಂದಲೇ ಮಹಿಳೆಯರಿಗೆ ಔದ್ಯೋಗಿಕ ರಂಗದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗುವುದಿಲ್ಲ, ಆದರೆ ಮಹಿಳೆಯರ ಈ ಪರಿಸ್ಥಿತಿಗೆ ಕಾರ್ಮಿಕ ಮಾರುಕಟ್ಟೆ ಖಂಡಿತಾ ಕಾರಣವಲ್ಲ ಎಂದು ಪುನರುಚ್ಚರಿಸಿದ್ದಾರೆ. ಅಲ್ಲದೇ ತಂತ್ರಜ್ಞಾನದಲ್ಲಿ ಬದಲಾವಣೆಯೂ ಕೂಡ ಅವಿದ್ಯಾವಂತ, ತರಬೇತಿರಹಿತ ಮಹಿಳೆಯರಿಗೆ ಮಾರಕವಾಗಿಬಿಟ್ಟಿತು ಇದಲ್ಲದೇ ಮಹಿಳೆಯರ ದಕ್ಷತೆಯನ್ನು ಗುರುತಿಸಲು ನಿಪುಣ ಸಂಖ್ಯಾಶಾಸ್ತ್ರಜ್ಞರ ಕೊರತೆಯೂ ಒಂದು ಕಾರಣ ಎಂದು ತಿಳಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಮಹಿಳೆಯರಲ್ಲಿ ದಕ್ಷತೆಯನ್ನು ತರುವುದು ಪ್ರಮುಖ ಸಂಗತಿ. ಅದರ ಜೊತೆಗೆ ಸರ್ಕಾರವು ಕೂಡ ಈ ವಿಷಯದಲ್ಲಿ ಕಾಳಜಿ ನೀತಿಯನ್ನು ಅನುಸರಿಸಬೇಕಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಮಹಿಳೆಯರಲ್ಲಿ ಸ್ವಪ್ರಜ್ಞೆಯನ್ನು ಮೂಡಿಸಬೇಕಾದುದು ಬಹುಮುಖ್ಯ ಸಂಗತಿಯಾಗಿದೆ ಎಂಬ ವಿಚಾರಗಳನ್ನು ತಿಳಿಯಪಡಿಸಿದ್ದಾರೆ.

ನಳಿನಿ ವಿಶ್ವನಾಥನ್ ಅವರು ಸಂಪಾದಿಸಿರುವ 'ದಿ ವುಮೆನ್ ಜೆಂಡರ್ ಅಂಡ್ ಡೆವಲಪ್‌ಮೆಂಟ್' ರೀಡರ್ ಕೃತಿಯಲ್ಲಿ ಆರ್ಥಿಕತೆಯಲ್ಲಿ ಮಹಿಳೆಯರ ಸಹಭಾಗಿತ್ವದ ಕುರಿತು ವಿಶ್ಲೇಷಿಸಲಾಗಿದೆ. ಈ ಕುರಿತಾಗಿ ರಚಿತವಾದ ಮೂರು ಸಿದ್ಧಾಂತಗಳ ಮೂಲಕ ಮಹಿಳಾ ಸಬಲೀಕರಣದ ವೇದಿಕೆ ಸಿದ್ಧವಾದ ಕುರುಹುಗಳು ಸ್ಪಷ್ಟವಾಗಿವೆ. ಇದು ಮಹಿಳೆಯರಿಗೆ ಪ್ರಗತಿ ಕಾರ್ಯಗಳನ್ನು ರೂಪಿಸಲು ಸರ್ಕಾರಕ್ಕೆ ವೇದಿಕೆಯಾಗಿದೆ. ೧೯೭೦ರಲ್ಲಿ ಎಸ್ತರ್ ಬೋಸರಪ್ ಅವರ ಕೃತಿ 'ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆ' (WID) ಪ್ರಕಟವಾದ ನಂತರ ಅಮೇರಿಕದ ಉದಾರವಾದಿ ಸ್ತ್ರೀವಾದಿಗಳೂ ಕೂಡ ಇದಕ್ಕೆ ತಮ್ಮ ಧ್ವನಿ ಸೇರಿಸಿದರು. ಈ ಸಿದ್ಧಾಂತವು ಆಧುನೀಕರಣ ಸಿದ್ಧಾಂತವನ್ನೇ ಬೆಂಬಲಿಸುತ್ತದೆ. ಇದರ ಕಾರ್ಯಕ್ರಮಗಳು ಪಾಶ್ಚಾತ್ಯ ಮೌಲ್ಯಗಳನ್ನು ಬೆಂಬಲಿಸುತ್ತಾ ಸಾಮಾಜಿಕ ಬದಲಾವಣೆಯನ್ನು ಗುರಿಯಾಗಿರಿಸಿಕೊಂಡಿವೆ. ಈ ಸಿದ್ಧಾಂತವು ಸಾಂಪ್ರದಾಯಿಕ ಸಮಾಜವನ್ನು ಪುರುಷ ಪ್ರಧಾನ, ಅಧಿಕಾರಯುಕ್ತ ಎಂದೂ, ಆಧುನಿಕ ಸಮಾಜವನ್ನು ಪ್ರಜಾಪ್ರಭುತ್ವವಾದಿ ಹಾಗೂ ಸಮಾನತೆಯ ಪ್ರತಿರೂಪ ಎಂದೂ ಬಿಂಬಿಸಿವೆ. ಆದರೆ ಆಧುನೀಕರಣದ ಫಲಗಳು ಮಹಿಳೆಯರಿಗೆ ತಲುಪುವಲ್ಲಿ ಯಶಸ್ವಿಯಾಗಿರುವುದಿಲ್ಲ. ಹೀಗಾಗಿ ಮಹಿಳೆಯರನ್ನು ಆರ್ಥಿಕತೆಯಲ್ಲಿ ತೊಡಗಿಸಲು ಅಗತ್ಯವಿರುವ ಆಡಳಿತಾತ್ಮಕ ಬದಲಾವಣೆಗಳ ಕುರಿತು ಚರ್ಚಿಸಲಾಗಿದೆ. ಉತ್ಪಾದನಾ ವಲಯಗಳಲ್ಲಿ ಮಹಿಳೆಯ ಸಹಭಾಗಿತ್ವಕ್ಕಿರುವ ಅಡೆತಡೆಗಳನ್ನು ಕಡಿಮೆ ಮಾಡುವ ಬಗ್ಗೆ ವಿವರಣೆ ಇದೆ. ಆದರೆ ಎಸ್ತರ್ ಬೋಸರಪ್ ಅವರ ಕೃತಿಯಲ್ಲಿ ಮಹಿಳೆ, ಅಭಿವೃದ್ಧಿ

ಧೋರಣೆಗಳ ಫಲಾನುಭಾವಿಯಾಗಿರುವುದಿಲ್ಲ ಎಂಬುದರ ವಿವರಣೆ ದೊರೆಯುವುದಿಲ್ಲ. ಕೇವಲ ಉತ್ಪಾದನಾ ಅಂಶಗಳನ್ನು ವಿಶ್ಲೇಷಿಸಲಾಗಿದೆಯೇ ವಿನಃ ಮಹಿಳೆಯ ಬಹುಮುಖ್ಯ ಕರ್ತವ್ಯವಾದ ಸಂತಾನೋತ್ಪತ್ತಿ ಕಾರ್ಯವನ್ನು ನಿರ್ಲಕ್ಷಿಸಿದ್ದಾರೆ ಎಂಬ ಆರೋಪವನ್ನು ಮಾಡಿದ್ದಾರೆ. ಈ ಸಿದ್ಧಾಂತದ ನಂತರ ಬಂದಂತಹ ಸಿದ್ಧಾಂತ 'ಮಹಿಳೆ ಮತ್ತು ಅಭಿವೃದ್ಧಿ' (WAD) ಆಧುನೀಕರಣದ ವಿಮರ್ಶಕರಿಂದ ಹುಟ್ಟಿಕೊಂಡು ಬಂದಂತಹ ಸಿದ್ಧಾಂತ. ಇದರಲ್ಲಿ ಮಹಿಳೆಯನ್ನು ಅಭಿವೃದ್ಧಿ ಪ್ರಕ್ರಿಯೆಯ ಒಂದು ಭಾಗವೇ ಎಂದು ಬಣ್ಣಿಸಲಾಗಿದೆ. ಸಮಾಜದ ಅಥವಾ ಆರ್ಥಿಕ ಪ್ರಗತಿಯಲ್ಲಿ ಮಹಿಳೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದೆ. ಆದರೆ ಈ ಸಿದ್ಧಾಂತದಲ್ಲಿ ಮಹಿಳೆಯ ದಾಸ್ಯ ಅಥವಾ ಶೋಷಣೆಯನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಲಿಂಗಾಧಾರಿತ ತಾರತಮ್ಯದ ಕುರಿತು ಇಲ್ಲಿ ಯಾವುದೇ ವಿಶ್ಲೇಷಣೆ ಇಲ್ಲ. ಹೀಗೆ WID & WAD ಸಿದ್ಧಾಂತಗಳು ವಿಮರ್ಶಕರ ಕೆಂಗಣ್ಣಿಗೆ ಗುರಿಯಾದ ನಂತರ ೧೯೮೦ರಲ್ಲಿ 'ಜೆಂಡರ್ ಅಂಡ್ ಡೆವಲಪ್‌ಮೆಂಟ್' GAD ಸಿದ್ಧಾಂತವನ್ನು ಮಂಡಿಸಲಾಯಿತು.[೨] ಮಹಿಳೆಯ ಶೋಷಣೆ ಕುಟುಂಬದಲ್ಲಿ ಹೇಗೆ ನಡೆಯುತ್ತದೆ ಎಂಬುದಕ್ಕೆ ಹೆಚ್ಚು ಒತ್ತು ನೀಡುತ್ತಾ ಮಹಿಳೆಯರನ್ನು ಸಾಮಾಜಿಕ ಬದಲಾವಣೆಯ ಕಾರ್ಯಕರ್ತೆಗಳು ಎಂದೇ ರೂಪಿಸಿವೆ. ಮಹಿಳೆಯರ ಸಂಘಟನೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದೆ. ಪ್ರಸ್ತುತ ಜಾರಿಯಲ್ಲಿರುವ ಸ್ತ್ರೀಪುರುಷರ ಸ್ಥಾನಮಾನಗಳನ್ನು ಖಂಡಿಸುತ್ತಾ ಸ್ತ್ರೀಯರಿಗೆ ನ್ಯಾಯಯುತವಾದ ಹಕ್ಕುಗಳನ್ನು ನೀಡುವ ಕುರಿತು ಜಾರಿಗೆ ತರಬೇಕಾದ ನಿಯಮಗಳ ವಿಶ್ಲೇಷಣೆ ಇದೆ.

ಇಂದಿರಾಗಾಂಧಿ ಶಾಂತಿ ಪುರಸ್ಕಾರ ಪಡೆದ ಇಳಾಭಟ್ (೨೦೧೦-೧೧) ಅವರು 'ಇನ್‌ವಿಜಿಬಲ್ ಹ್ಯಾಂಡ್ಸ್' ಎಂಬ ಗ್ರಂಥದಲ್ಲಿ ಬರೆದ ಲೇಖನ 'ಇನ್‌ವಿಜಿಬಿಲಿಟಿ ಆಫ್ ಹೋಮ್‌ಬೇಸಡ್ ವರ್ಕ್' ನಲ್ಲಿ ಅಲಹಾಬಾದಿನ ಪೀಸ್‌ರೇಟ್ ವರ್ಕರ್ಸ್ ಕುರಿತು ನಡೆಸಿದ ಅಧ್ಯಯನದ ವಿವರಣೆ ಈ ರೀತಿಯಾಗಿದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಏಶಿಯಾದಲ್ಲಿ ಪೀಸ್‌ರೇಟ್ ಮಹಿಳಾ ದುಡಿಮೆಗಾರರು ಬಹಳ ಶೋಷಣಾಮಯವಾದ ಸನ್ನಿವೇಶದಲ್ಲಿ ದುಡಿಯುತ್ತಿದ್ದಾರೆ. ಅವರು ಸಮಾಜದ ಕಣ್ಣಿಗೆ ಗೋಚರವಾಗುವುದಿಲ್ಲ.[೩] ಅವರು ತಮ್ಮ ಮನೆಯಲ್ಲಿಯೇ ವೈವಿಧ್ಯಮಯ ಕೆಲಸದಲ್ಲಿ ತೊಡಗಿದ್ದರೂ ಕಛೇರಿಯ ದಾಖಲೆಗಳಲ್ಲಿ ದುಡಿಮೆಗಾರರು ಎಂದು ಪರಿಗಣಿಸಲ್ಪಟ್ಟಿರುವುದಿಲ್ಲ. ಇವರಿಗೆ ಗೃಹ ಆಧಾರಿತ ದುಡಿಮೆಗಾರರು ಎಂದು ಕರೆಯುತ್ತಾರೆ. ಇವರಲ್ಲಿ ಎರಡು ವಿಧಗಳಿವೆ. ಮೊದಲನೆಯದಾಗಿ ಒಡೆಯರಿಂದ ಕಚ್ಚಾಮಾಲುಗಳನ್ನು ಪಡೆದು ಸರಕುಗಳನ್ನು ತಯಾರಿಸುವವರು. ಎರಡನೆಯದಾಗಿ ತಾವೇ ಕಚ್ಚಾಮಾಲುಗಳನ್ನು ತಂದು ಸರಕುಗಳನ್ನು ತಯಾರಿಸಿ ಮಾರುವವರು. ಸರಕಿನ ಸಂಖ್ಯೆ, ಗಾತ್ರ ಅಥವಾ ತೂಕದ ಆಧಾರದ ಮೇಲೆ ಒಡೆಯರು ದರವನ್ನು ಕೊಡುತ್ತಾರೆ.

ಬೀಡಿ, ಅಗರಬತ್ತಿ, ಪೇಪರ್‌ಬ್ಯಾಗ್‌ಗಳು, ಸಿದ್ಧ ಉಡುಪುಗಳು, ಜರಿಕೆಲಸ, ಧಾನ್ಯ ಸ್ವಚ್ಛ ಮಾಡುವವರು. ಹಪ್ಪಳ ಉಪ್ಪಿನಕಾಯಿ ಮಾಡುವವರು ಈ ಗುಂಪಿನಲ್ಲಿ ಬರುತ್ತಾರೆ. ಪೀಸ್ ರೇಟ್ ದುಡಿಮೆಯಲ್ಲಿ ಸಾಮಾನ್ಯವಾಗಿ ಮಹಿಳೆಯರೇ ತೊಡಗಿದ್ದು ತಮ್ಮ ಮನೆಗೆಲಸವನ್ನು ತಮ್ಮ ವೃತ್ತಿಯ ಜೊತೆಗೆ ಮಾಡುತ್ತಿರುತ್ತಾರೆ. ಇವರದು ಅತೀ ಕಡಿಮೆ ಫಲ ಕೊಡುವ ದುಡಿಮೆಯಾಗಿರುತ್ತದೆ.

ಅನಕ್ಷರತೆ ಬಾಲಕಾರ್ಮಿಕ ಪದ್ಧತಿ ಸಾಮಾನ್ಯವೆನಿಸಿದೆ. ಸಣ್ಣಮಕ್ಕಳು ಬೀಡಿ ಎಲೆಗಳನ್ನು ತೊಳೆಯುವುದು ಹಾಗೂ ಒಣಗಿಸುವ ಕಾರ್ಯದಲ್ಲಿ ತೊಡಗಿರುತ್ತಾರೆ. ಕೆಲವೊಂದು ಕೆಲಸದಲ್ಲಿ ಮಕ್ಕಳೇ ಪರಿಣಿತರಂತೆ ಕೆಲಸಮಾಡುತ್ತಾರೆ. ಗೃಹ ಆಧಾರಿತ ಚಟುವಟಿಕೆಗಳು ಮನೆಯ ಆವರಣದಲ್ಲಿಯೆ ನಡೆಯುವುದರಿಂದ ಉದ್ಯೋಗದಾತರಿಗೆ ಪ್ರತ್ಯೇಕ ಕಟ್ಟಡದ ವೆಚ್ಚವಿರುವುದಿಲ್ಲ. ದುಡಿಮೆಗಾರರು ತಮ್ಮ ಸಾಂಪ್ರದಾಯಿಕ ಸಲಕರಣೆಗಳಿಂದಲೇ ಕೆಲಸ ಮುಂದುವರೆಸುತ್ತಾರೆ. ಒಂದು ವೇಳೆ ಯಂತ್ರ ಒದಗಿಸಿದರೂ ಅದಕ್ಕೆ ಬಾಡಿಗೆ ವಸೂಲಿ ಮಾಡುತ್ತಾರೆ ಹಾಗೂ ಯಂತ್ರಗಳ ದುರಸ್ತಿಯನ್ನು ಕೆಲಸಗಾರರೇ ಮಾಡಿಸಬೇಕಾಗುತ್ತದೆ. ಸಣ್ಣ ಸಣ್ಣ ಮನೆಗಳಲ್ಲಿಯೇ ಕೆಲಸ ನಡೆಯುವುದರಿಂದ ಬೀಡಿ ಹಾಗೂ ಅಗರ್‌ಬತ್ತಿಯ ಧೂಳು ಕೆಲವರಿಗೆ ಶ್ವಾಸಕೋಶದ ತೊಂದರೆಯನ್ನು ಉಂಟುಮಾಡುತ್ತದೆ. ಆದರೂ ಮಹಿಳೆಯರ ಜೀವನದ ಅನುಕೂಲಕ್ಕೆ ತಕ್ಕಂತೆ ಈ ದುಡಿಮೆ ಇರುವುದರಿಂದ ಮಹಿಳೆಯರು ಈ ಕೆಲಸದಲ್ಲಿ ಅಧಿಕವಾಗಿ ಕಂಡುಬರುತ್ತಾರೆ. ಆದರೆ ಉದ್ಯೋಗದಾತರು ತಮ್ಮ ಅವಶ್ಯಕತೆಗೆ ತಕ್ಕಂತೆ ಇವರನ್ನು ಬಳಸಿಕೊಳ್ಳುತ್ತಾರೆ. ಅನೌಪಚಾರಿಕ ವಲಯದ ದುಡಿಮೆಗಾರರು ಎದುರಿಸುವ ತೊಂದರೆಗಳನ್ನು ಇವರೂ ಎದುರಿಸುತ್ತಾರೆ. ಈ ರೀತಿಯ ಕೆಲಸಗಾರರು ಅಲ್ಲಲ್ಲಿ ಚದುರಿ ಹೋಗಿರುವುದರಿಂದ ಕಾರ್ಮಿಕರ ಸಂಘಗಳ ಲೆಕ್ಕಾಚಾರ ದಲ್ಲಿಯೂ ಸಿಗುವುದಿಲ್ಲ. ಹೀಗೆ ಮಹಿಳೆಯರ ದುಡಿಮೆಯ ಅಗೋಚರತೆಯನ್ನು ಇಳಾಭಟ್ ಅವರು ವಿವರಿಸಿದ್ದಾರೆ. ಆದರೆ ಆರ್ಥಿಕ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ಮಹಿಳೆಯರಿಗೆ ಮನೆಯಿಂದ ಹೊರಗೆ ಬಂದು ದುಡಿಯುವ ವಾತಾವರಣವನ್ನು ಕಲ್ಪಿಸಿಕೊಟ್ಟರೆ ಅದರಿಂದ ಸಿಗುವ ಲಾಭ ಹಾಗೂ ಅನುಕೂಲಗಳ ಬಗ್ಗೆ ವಿವರಣೆಯ ಅಗತ್ಯವಿದೆ. ಹಾಗೂ ಇಳಾಭಟ್ ಅವರ ಲೇಖನದಲ್ಲಿ ಮಕ್ಕಳೂ ಕೂಡ ಮನೆಯವರ ವೃತ್ತಿಯಲ್ಲಿ ಭಾಗಿಯಾಗಿ ಕುಟುಂಬದ ಆದಾಯ ವೃದ್ಧಿಗೆ ಪರೋಕ್ಷವಾಗಿ ಬೆಂಬಲಿಸುತ್ತಾರೆ ಎಂಬುದಾಗಿದೆ. ಆದರೆ ಲೇಖಕರ ಈ ಅಭಿಪ್ರಾಯವು ಮಕ್ಕಳ ಶೈಕ್ಷಣಿಕ ಜೀವನಕ್ಕೆ ಅಥವಾ ಶಿಕ್ಷಣಕ್ಕೆ ಕೊಡಲಿ ಏಟು ಹಾಕುತ್ತದೆ. ಮಕ್ಕಳು ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಇದು ಮಾನವ ಸಂಪನ್ಮೂಲದ ಅದಕ್ಷ ಬಳಕೆ ಎಂಬ ಚರ್ಚೆಗೆ ಗ್ರಾಸವಾಗಿದೆ.

ಝುರೀನಾ ಭಾಟಿಯವರ 'ಎಕನಾಮಿಕ್ ಕಾಂಟ್ರಿಬೂಷನ್ ಆಫ್ ವುಮೆನ್ ಟು ದಿ ಹೌಸ್ ಹೋಲ್ಡ್ ಬಜೆಟ್' ಎಂಬ ಲೇಖನದಲ್ಲಿ ಬೀಡಿ ಕಾರ್ಖಾನೆಯ ಸ್ಥಿತಿ-ಗತಿಗಳ ಅಧ್ಯಯನ ನಡೆಸಿದ್ದಾರೆ. ಮಹಿಳಾ ದುಡಿಮೆಗಾರರ ಅಗೋಚರ ದುಡಿಮೆಯು ಅವರ ಸ್ಥಿತಿಗತಿಗಳನ್ನು ತಿಳಿಯುವಲ್ಲಿ ಅಡ್ಡಿಯಾಗಿದೆ. ಇದಕ್ಕೆ ಮೊದಲ ಕಾರಣವೇನೆಂದರೆ ದುಡಿಮೆಯ ಕುರಿತು ಅರ್ಥಶಾಸ್ತ್ರಜ್ಞರು ಹಾಗೂ ಸಮೀಕ್ಷೆದಾರರು ಕೊಟ್ಟ ವ್ಯಾಖ್ಯೆ. ಎರಡನೆಯದಾಗಿ ಅಸಂಘಟಿತ ವಲಯದ ಹಾಗೂ ಮಹಿಳೆಯರ ಮನೆಗೆಲಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡದಿರುವುದು. ಬೀಡಿ ಕಾರ್ಮಿಕರೂ ಕೂಡ ಅರ್ಥಶಾಸ್ತ್ರಜ್ಞರ, ವ್ಯವಸ್ಥಾಪಕರ ಹಾಗೂ ನೀತಿ ನಿರೂಪಕರ ಗಮನ ಸೆಳೆಯುವಲ್ಲಿ ವಿಫಲರಾಗಿದ್ದಾರೆ. ಆದರೂ ಲಕ್ಷಗಟ್ಟಲೆ ಗ್ರಾಮೀಣ ಹಾಗೂ ನಗರದ ಬಡ ಜನತೆ ಬೀಡಿ ಕಾರ್ಖಾನೆಗಳಿಂದಲೇ ತಮ್ಮ ಜೀವನ ನಡೆಸುತ್ತಿದ್ದಾರೆ. ಅಲಹಾಬಾದಿನ ಬೀಡಿ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರ ಜೀವನದ ಸ್ಥಿತಿಗತಿ ಕುರಿತಾದ ಅಧ್ಯಯನ ಇದಾಗಿದೆ. ೨.೫ ಲಕ್ಷ ಬೀಡಿ ಕಾರ್ಮಿಕರನ್ನು ಹೊಂದಿರುವ ಈ ಭಾಗದಲ್ಲಿ ವಿದೇಶಿ ರಫ್ತು

ವ್ಯವಹಾರ ನಡೆದಿದೆ. ಆದರೂ ಕೆಲಸಗಾರರು ಗುತ್ತಿಗೆದಾರರ ಕರುಣೆಯಿಂದ ಬದುಕುತ್ತಿದ್ದಾರೆ. ಶೇ. ೭೫ರಷ್ಟು ಜನ ಸರಕಾರದ ಬಡತನ ರೇಖೆಗಿಂತ ಕೆಳಗಿದ್ದಾರೆ. ಕೆಲಸದ ಸ್ಥಿತಿಗತಿ ಸುಧಾರಣೆಗೆ ಸರ್ಕಾರ ಮಾಡಿದ ಪ್ರಯತ್ನ ಇನ್ನೂ ಜಾರಿಗೆ ಬಂದಿಲ್ಲ. ಇದರಲ್ಲಿ ಶೇ. ೯೦ರಷ್ಟು ಮಹಿಳೆಯರು ಮನೆಯಲ್ಲಿಯೇ ಬೀಡಿ ಕಟ್ಟುವ ಕೆಲಸದಲ್ಲಿ ತೊಡಗಿದ್ದಾರೆ. ಈ ಅಧ್ಯಯನ ೨೬೪ ಬೀಡಿ ಕಟ್ಟುವ ಮಹಿಳೆಯರ ಕುರಿತಾಗಿದೆ. ಪ್ರಶ್ನಾವಳಿ ಹಾಗೂ ಸಂದರ್ಶನದ ಮೂಲಕ ವಿಷಯ ಸಂಗ್ರಹಿಸಲಾಗಿದೆ. ಪ್ರಥಮ ವರದಿಯ ಪ್ರಕಾರ ಕೇವಲ ಮುಸಲ್ಮಾನ ಹೆಣ್ಣು ಮಕ್ಕಳೇ ಈ ಉದ್ಯಮದಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದಾರೆ. ಏಕೆಂದರೆ ಅವರಿಗೆ ಹೆಚ್ಚಾಗಿ ಹೊರಗೆ ಬರಲು ಸಮಾಜದ ಹಾಗೂ ಸಾಂಸ್ಕೃತಿಕ ಅಡ್ಡಿ ಆತಂಕಗಳು ಇವೆ. ಸಾಮಾಜಿಕ ಕಟ್ಟುಪಾಡುಗಳಿಂದ ಅವರು ಮನೆಯಲ್ಲಿ ಬೀಡಿ ಕಟ್ಟುವ ಕಾಯಕವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಮನೆಗೆಲಸ ಹಾಗೂ ಬೀಡಿಕಟ್ಟುವ ಕೆಲಸವನ್ನು ಸಮನಾಗಿ ನಿಭಾಯಿಸಲು ತಮ್ಮ ಸಮಯವನ್ನು ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂದು ಲೇಖಕರು ತಿಳಿಸಿದ್ದಾರೆ. ಹೀಗೆ ಪ್ರತಿಫಲ ಕೊಡುವ ಆರ್ಥಿಕ ಚಟುವಟಿಕೆಗಳನ್ನು ಅಷ್ಟೇ ದುಡಿಮೆ ಎಂದು ತಿಳಿದಿರುವುದರಿಂದ ಗೃಹ ಚಟುವಟಿಕೆಗಳಿಗೆ ಬೆಲೆ ಇಲ್ಲದಂತಾಗಿದೆ. ಅವುಗಳಿಗೂ ವೇತನವನ್ನು ನಿಗಧಿಪಡಿಸಿದರೆ ಸಮಾಜದಲ್ಲಿ ಮಹಿಳೆಯರು ಎಷ್ಟು ಸಬಲರು ಎಂದು ತೋರಿಸಿಕೊಟ್ಟಂತಾಗುತ್ತದೆ ಎಂದು ಲೇಖಕರ ವಾದವಾಗಿದೆ. ಒಟ್ಟಾರೆಯಾಗಿ ಇಳಾಭಟ್ ಹಾಗೂ ಝುರೀನಾ ಭಾಟಿಯಾರವರು ಗೃಹಆಧಾರಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ಪರವಾಗಿ ತಮ್ಮ ನಿಲುವುಗಳನ್ನು ಮಂಡಿಸುವುದರ ಜೊತೆಗೆ ಗೃಹ ಚಟುವಟಿಕೆಗಳ ಮೌಲ್ಯವನ್ನು ಎತ್ತಿ ಹಿಡಿದಿರುವ ರೀತಿ ಪ್ರಶಂಸಾರ್ಹವಾಗಿದೆ.

ಊರ್ಸುಲಾ ಶರ್ಮಾರವರು ಬರೆದ 'ವುಮೆನ್ಸ್ ವರ್ಕ್‌ಕ್ಲಾಸ್ ಅಂಡ್ ಅರ್ಬನ್ ಹೌಸ್‌ಹೋಲ್ಡ್' ಎನ್ನುವ ಗ್ರಂಥದಲ್ಲಿ ಉತ್ತರ ಭಾರತದ ಅಧ್ಯಯನಕ್ಕೆ ಮಹತ್ವ ಕೊಟ್ಟಿದ್ದಾರೆ. ಅವರ ಅಭಿಪ್ರಾಯದಲ್ಲಿ ಮೂರನೇ ಜಗತ್ತಿನ ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಗಳಿಂದ ಯಾವ ಲಾಭಾಂಶಗಳನ್ನು ಪಡೆಯಲಾಗಲಿಲ್ಲ.[೧೪] ಎಂಬ ಮಾಹಿತಿ ಇದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪುರುಷರಿಗೆ ಲಭಿಸುವ ತರಬೇತಿ, ಉದ್ಯೋಗಾವಕಾಶಗಳು ಮಹಿಳೆಯರಿಗೆ ಲಭ್ಯವಿಲ್ಲ. ಹೆಚ್ಚಿನ ಸನ್ನಿವೇಶಗಳಲ್ಲಿ ಮಹಿಳೆಯರಿಗೆ ತಮ್ಮ ದಕ್ಷತೆಗನುಗುಣವಾದ ಉದ್ಯೋಗಾವಕಾಶಗಳೂ ಲಭಿಸುತ್ತಿಲ್ಲ ಎಂಬ ಅಭಿಪ್ರಾಯವಿದೆ. ಲೇಖಕರು ಒಬ್ಬ ದೌರ್ಭಾಗ್ಯ ಮಹಿಳೆಯ ಉದಾಹರಣೆಯನ್ನು ನೀಡುತ್ತಾ ಹಸಿವೆ ನೀಗಿಸಲು ಮಹಿಳೆಯರು ತಮಗೆ ಸಿಕ್ಕ ಕೆಲಸಗಳನ್ನು ಒಪ್ಪಿಕೊಳ್ಳುತ್ತಾರೆ ಇದು ಅವರ ಆಯ್ಕೆಯಾಗಿರುವುದಿಲ್ಲ ಎಂಬ ವಿಷಾದ ಹೇಳಿಕೆಯನ್ನು ಅವರ ಲೇಖನದಲ್ಲಿ ಕಾಣಬಹುದು.

ರುಕ್ಮಿಣಿ ರಾವ್ ಹಾಗೂ ಸಾಬಾ ಹಸೇನ್‌ರವರು ಗೃಹಆಧಾರಿತ ಚಟುವಟಿಕೆಗಳಲ್ಲಿ ಒಂದಾದ ಸಿದ್ಧ ಉಡುಪು ತಯಾರಿಸುವ ಮಹಿಳೆಯರ ಅಗೋಚರ ದುಡಿಮೆಯ ಚಿತ್ರಣವನ್ನು ನೀಡಿದ್ದಾರೆ. ಸಾಂಪ್ರಾದಾಯಿಕವಾಗಿ ಆಚರಿಸಿಕೊಂಡು ಬಂದ ಕಟ್ಟುಪಾಡುಗಳಿಂದ ಗೃಹಿಣಿಯರು ಹಾಗೂ ಹೆಣ್ಣು ಮಕ್ಕಳು ಮನೆಯ ಹೊರಗಡೆ ದುಡಿಯುವ ಅವಕಾಶಗಳಿಂದ ವಂಚಿತರಾಗಿದ್ದಾರೆ. ಇಂತಹ ಮಹಿಳೆಯರು ತಮ್ಮ ಮನೆಯ ಆರ್ಥಿಕ ಮುಗ್ಗಟ್ಟಿನಿಂದ ಹೊರಬರುವ ದಾರಿಯನ್ನು ನೋಡುತ್ತಿರುತ್ತಾರೆ. ಇವರಿಗೆ

ಗೃಹಆಧಾರಿತ ಚಟುವಟಿಕೆಗಳು ಆಧಾರ ಸ್ತಂಭವಾಗಿವೆ. ಕಾರ್ಖಾನೆಯ ಯಾವ ಸುರಕ್ಷತಾ ಕಾನೂನುಗಳು ಅನ್ವಯವಾಗದೆ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ. ಕಡಿಮೆ ವೇತನವನ್ನು ಒಪ್ಪಿಕೊಂಡೇ ಅವರು ಕೆಲಸಕ್ಕೆ ಬರುತ್ತಾರೆ. ದೆಹಲಿಯಲ್ಲಿ ದುಡಿಯುತ್ತಿರುವ ಮಹಿಳೆಯರ ಸ್ಥಿತಿಗತಿಗಳ ಕುರಿತು ಲೇಖಕರು ಅಧ್ಯಯನ ನಡೆಸಿದ್ದಾರೆ. ಸಿದ್ಧ ಉಡುಪುಗಳ ಸಂಘದ ಅಂದಾಜಿನ ಪ್ರಕಾರ ೨೫,೦೦೦ ಮಹಿಳೆಯರು ಈ ದುಡಿಮೆಯಲ್ಲಿ ತೊಡಗಿದ್ದಾರೆ. ಲೇಖಕರು ತಮ್ಮ ಅಧ್ಯಯನಕ್ಕಾಗಿ ಬೇರೆ ಬೇರೆ ಬಡಾವಣೆಗಳ ೪೮ ಮಹಿಳೆಯರನ್ನು ಸಂದರ್ಶಿಸಿದ್ದಾರೆ. ಈ ಮಹಿಳೆಯರು ತಮ್ಮ ಆರ್ಥಿಕ ದುಃಸ್ಥಿತಿಯಿಂದ ದುಡಿಮೆಗೆ ತೊಡಗಿರುವುದಾಗಿ ಹೇಳಿಕೊಂಡಿದ್ದಾರೆ. ಇಲ್ಲಿ ದುಡಿಯುವ ಮಹಿಳೆಯರ ಸಂಘಟನೆ ಕೊರತೆಯಿಂದಾಗಿ ಕಡಿಮೆ ವೇತನದಲ್ಲಿಯೇ ಇರಬೇಕಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಗುತ್ತಿಗೆದಾರರು, ಮಹಿಳಾ ಕೆಲಸಗಾರರ ನಡುವಿನ ಭಿನ್ನಾಭಿಪ್ರಾಯವನ್ನು ಲಾಭಕ್ಕಾಗಿ ಬಳಸಿಕೊಂಡಿದ್ದಾರೆ.[೧೫] ಹೀಗೆ ಮಹಿಳೆಯರ ನಡುವೆಯೇ ಕೆಲಸಕ್ಕಾಗಿ ಸ್ಪರ್ಧೆಯನ್ನು ಸೃಷ್ಟಿಸಿ ಹೆಚ್ಚಿನ ವೇತನಕ್ಕಾಗಿ ಮಹಿಳೆಯರು ಬೇಡಿಕೆ ವ್ಯಕ್ತಪಡಿಸದಂತೆ ತಡೆಯುತ್ತಾರೆ. ಹೀಗಾಗಿ ಮಹಿಳೆಯರು ತಮ್ಮತಮ್ಮಲ್ಲಿಯೇ ಹೊಂದಾಣಿಕೆಯಿಲ್ಲದೆ ತಮಗೆ ನ್ಯಾಯಯುತವಾಗಿ ಸಿಗಬಹುದಾದ ಅವಕಾಶಗಳಿಂದ ವಂಚಿತರಾಗಿದ್ದಾರೆ ಇದಲ್ಲದೆ ಮನೆಯಲ್ಲಿಯೂ ಕೂಡ ಪುರುಷ ಪ್ರಾಧಾನ್ಯತೆಯನ್ನು ತಾವಾಗಿಯೇ ಒಪ್ಪಿಕೊಂಡಿದ್ದಾರೆ. ತಾವು ಕೂಡ ಆರ್ಥಿಕವಾಗಿ ಸಬಲರಾಗಿದ್ದರು ಮನೆಯ ಯಜಮಾನ ಗಂಡನೇ. ಏಕೆಂದರೆ ಅವನು ಹೊರಗೆ ಹೋಗಿ ದುಡಿಯುತ್ತಾನೆ ಎಂಬುದು ಭಾರತೀಯ ಸಂಪ್ರದಾಯ ಶರಣೆಯ ಅಭಿಪ್ರಾಯವಾಗಿದೆ. ಅದಕ್ಕಾಗಿ ಮಹಿಳೆಯರು ಜಾಗೃತ ಮನಸ್ಕರಾಗಬೇಕು ಇಲ್ಲದಿದ್ದರೆ ಶೋಷಣೆಯನ್ನು ಒಪ್ಪಿಕೊಂಡೇ ಬದುಕಬೇಕಾಗುತ್ತದೆ ಎಂಬ ಸೂಚನೆಯನ್ನು, ಎಚ್ಚರಿಕೆಯನ್ನು ನೀಡಿದ್ದಾರೆ. ಆದರೆ ಮಹಿಳೆಯರು ಪುರುಷ ಪ್ರಾಧಾನ್ಯತೆಯನ್ನು ಒಪ್ಪಿಕೊಂಡಿದ್ದಾರೆ ಎಂಬ ಹೇಳಿಕೆ ಸ್ವಲ್ಪ ಗೊಂದಲಮಯವಾಗಿದೆ. ಸರಕಾರ, ಸಂಘಸಂಸ್ಥೆಗಳು ಹಾಗೂ ಕೌಟುಂಬಿಕ ವ್ಯವಸ್ಥೆಯಲ್ಲಿ ಶತಶತಮಾನಗಳಿಂದ ಸ್ಥಾನವನ್ನು ಪಡೆದುಕೊಂಡು ಬಂದ ಪುರುಷರ ಸ್ಥಿತಿ ಪ್ರಶ್ನಾತೀತವಾಗಿದೆ. ಹೀಗಿರುವಾಗ ಇದು ಒಬ್ಬರು ಮಾಡುವ ಅಥವಾ ಸ್ವಲ್ಪ ಸಮಯದಲ್ಲಿ ಮುಗಿಯುವ ಸಮಸ್ಯೆಯಾಗಿರದೆ ಹಂತಹಂತವಾಗಿ ಪರಿಹಾರ ಕಾಣುವ ಸಮಸ್ಯೆಯಾಗಿರುವುದರಿಂದ ಮಹಿಳೆ ಮಾತ್ರ ಇದಕ್ಕೆ ಕಾರಣಳು ಎಂಬ ತೀರ್ಮಾನ ಅಪ್ರಸ್ತುತವೆನಿಸಿದೆ.

ಶ್ರೀಲತಾ ಭಾಟ್ಲಿವಾಲಾ ಅವರು ಬರೆದ 'ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ' ಪುಸ್ತಕದಲ್ಲಿ ಮಹಿಳೆಯ ಸ್ಥಾನಮಾನಗಳ ಕುರಿತು ಚರ್ಚಿಸಲಾಗಿದೆ. ಶ್ರೀಮತಿ ಭಾಟ್ಲಿವಾಲಾ ರವರು ಜ್ಯೋತಿ ಕಿರಣ್ ಅವರ ಅಭಿಪ್ರಾಯವನ್ನೇ ಸಮ್ಮತಿಸುತ್ತಾರೆ. ಅಲ್ಲದೇ ಮಹಿಳೆಯ ದುಡಿಮೆಯ ಕುರಿತಾಗಿ ಸರಿಯಾದ ಅಂಕಿಅಂಶಗಳ ಅಲಭ್ಯತೆಯಿಂದಾಗಿ ಆರ್ಥಿಕತೆಯಲ್ಲಿ ಮಹಿಳೆಯ ಸ್ಥಾನಮಾನವನ್ನು ಇನ್ನೂ ಗುರುತಿಸಲು ಸಾಧ್ಯವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಮಹಿಳಾ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಮಹಿಳೆಯ ಅಧೀನತೆಯ ಕುರಿತು ವಿಶ್ಲೇಷಣೆಯಿದೆ. ಅದಕ್ಕಾಗಿ ಲಿಂಗಾಧಾರಿತ ಸಮಾನತೆಯ ಬಗ್ಗೆ ಹೋರಾಟ ಸಾಮಾನ್ಯ ವಿಷಯವಾಗಿದೆ. ಸಾಂಸ್ಥಿಕ ಕಾನೂನುಗಳಿಂದ ಪುರುಷರು ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿದ್ದಾರೆ. ಲಿಂಗಾಧಾರಿತ ಅಸಮಾನತೆಗೆ ಮಹಿಳೆ ಬಲಿಯಾಗಿದ್ದಾಳೆ.[೧೬]

ಈ ರೀತಿಯ ವ್ಯವಸ್ಥೆಯಿಂದಾಗಿ ಮಹಿಳೆ ಸಂಪನ್ಮೂಲಗಳ ಮೇಲೆ ಹಿಡಿತವಿಲ್ಲದಂತಾಗಿದ್ದಾಳೆ. ಅವಳ ದುಡಿಮೆಯನ್ನು ಅಪಮೌಲ್ಯಗೊಳಿಸಲಾಗುತ್ತಿದೆ. ಸಮಾಜದಲ್ಲಿ ಪುರುಷರ ದಬ್ಬಾಳಿಕೆಗೆ ಅವಹೇಳನಕ್ಕೆ ಗುರಿಯಾಗಿ ಆತ್ಮವಿಶ್ವಾಸವನ್ನೇ ಕಳೆದುಕೊಂಡು ಮಾನವೀಯ ಮೌಲ್ಯಗಳಿಂದ ವಂಚಿತಳಾಗಿದ್ದಾಳೆ. ಲಿಂಗಾಧಾರಿತ ಅಸಮಾನತೆಯನ್ನು ಹೊಡೆದೋಡಿಸುವುದು ಸುಲಭದ ಕೆಲಸವಲ್ಲ. ಅದಕ್ಕಾಗಿ ಸಾಮಾಜಿಕ ಪರಿವರ್ತನೆ ಆಗಬೇಕಾಗಿದೆ. ಈ ಬದಲಾವಣೆಯಿಂದಾಗಿ ಇದುವರೆಗೂ ಅಧಿಕಾರ, ಸಂಪನ್ಮೂಲಗಳನ್ನು ಹಿಡತದಲ್ಲಿಟ್ಟುಕೊಂಡಿದ್ದ ಪುರಷರ ಸ್ಥಾನಮಾನದಲ್ಲಿ ಬದಲಾವಣೆಯಾಗಿ ಸಂಪನ್ಮೂಲಗಳ ಮರುಹಂಚಿಕೆಯಾಗಬೇಕಾಗುತ್ತದೆ. ಈ ಕೆಲಸವು ಶಾಸನಬದ್ಧವಾಗಿರಬೇಕು. ಅಂದಾಗ ಮಾತ್ರ ಮಹಿಳೆಯ ಸ್ಥಾನಮಾನದಲ್ಲಿ ಬದಲಾವಣೆಯಾಗಲು ಸಾಧ್ಯ.

ಮಹಿಳೆಯರ ಆರ್ಥಿಕ ಸ್ಥಾನಮಾನದಲ್ಲಿ ಬದಲಾವಣೆಯಾದಾಗಲೇ ಅವರ ಸಾಮಾಜಿಕ ಅಧೀನತೆಯು ಕಡಿಮೆಯಾಗುತ್ತದೆ. ಪುರುಷ ಪ್ರಧಾನ ಕುಟುಂಬದಲ್ಲಿ ಮಹಿಳೆ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅಸಾಧ್ಯದ ಮಾತು. ಆದರೆ ಕುಟುಂಬದಲ್ಲಿ ಬಿಕ್ಕಟ್ಟು ತಲೆದೋರಿದಾಗ ಮಹಿಳೆ ಹೊರಗೆ ಬಂದು ದುಡಿದು ಕುಟುಂಬವನ್ನು ಸಲಹಬೇಕಾಗುತ್ತದೆ. ಹೀಗೆ ಬಡ ಮಹಿಳೆಯರು ಮೂರು ರೀತಿಯ ಸಾಂಸಾರಿಕ ಹೊರೆ ಹೊರಬೇಕಾಗುತ್ತದೆ. ಈ ಜವಾಬ್ದಾರಿಗಳೆಲ್ಲ ಅವರು ಆಯ್ಕೆ ಮಾಡಿಕೊಳ್ಳುವಂತಿಲ್ಲ. (ಕುಟುಂಬ ನಿರ್ವಹಣೆ, ಹಿರಿಕಿರಿಯರ ಪೋಷಣೆ, ಮಾನವ ಜನಾಂಗದ ಪುನರುತ್ಪಾದನೆ) ಕೆಲ ಮಹಿಳೆಯರಿಗೆ ಲಿಂಗಾಧಾರಿತ ಸಮಾನತೆ ತಲುಪಬಹುದಾದ ಗುರಿಯಾಗಿದೆಯಾದರೂ ಕುಟುಂಬದಲ್ಲಿ ಪುರುಷ ಪ್ರಧಾನ್ಯತೆ ಇನ್ನು ಮುಂದುವರೆದಿದೆ.

ದುಡಿಯುವ ಮಹಿಳೆಯರ ವೇದಿಕೆಯು ದಕ್ಷಿಣ ಭಾರತದಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. ೮೪ರಷ್ಟು ಮಹಿಳೆಯರು ತಮ್ಮ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಆದರೂ ಅವರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲ. ಗ್ರಾಮೀಣ ಬಡ ಮಹಿಳೆಯರು ಸಾಮಾನ್ಯವಾಗಿ ಕೃಷಿ ಕೆಲಸದಲ್ಲಿ ತೊಡಗಿದ್ದಾರೆ. ಕೃಷಿಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿದ ನಂತರ ನೈಪುಣ್ಯ ಹಾಗೂ ತರಬೇತಿಯ ಕೊರತೆಯಿಂದಾಗಿ ಅಲ್ಲಿಂದಲೂ ಮಹಿಳೆ ಹೊರನೂಕಲ್ಪಟ್ಟಿದ್ದಾಳೆ. ಅಲ್ಲದೇ ಜಾತಿ ತಾರತಮ್ಯವಿರುವ ಸಮಾಜದಲ್ಲಿ ಮಹಿಳೆ ಸುಲಭವಾಗಿ ಶ್ರಮದ ಮಾರುಕಟ್ಟೆ ಪ್ರವೇಶಿಸುವಂತಿಲ್ಲ. ಒಂದು ವೇಳೆ ಪ್ರವೇಶ ಮಾಡಿದ್ದೇ ಆದರೆ ಅದು ಮನೆತನದ ಕಟ್ಟುಪಾಡಿಗೆ, ಸ್ಥಾನಮಾನಕ್ಕೆ ಧಕ್ಕೆ ತರುತ್ತದೆ ಎಂಬ ಭಾವನೆ ಬೇರೂರಿದೆ. ಆದರು ಸಮಯ ಬಂದಾಗ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ತಾಕತ್ತು ಮಹಿಳೆಗಿದೆ. ಆದ್ದರಿಂದ ಮಹಿಳೆಯನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾದಂತಹ ಕೌಟುಂಬಿಕ ಸಂಪನ್ಮೂಲ ಎಂದೇ ಕರೆದಿದ್ದಾರೆ. ಮಹಿಳೆಯರ ಈ ಬಹುಮುಖ ಪ್ರತಿಭೆಯನ್ನು ಗಮನಿಸಿ ಅವರಿಗೆ ಉದ್ಯೋಗ ಸೃಷ್ಟಿ ಹಾಗೂ ಆದಾಯ ಗಳಿಕೆಯಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಆದರೆ ಇದು ತತ್‌ಕ್ಷಣ ಪರಿಹಾರವಾಗುವಂತಹ ಸಮಸ್ಯೆಯಲ್ಲ. ಇದಕ್ಕೆ ಬಹಳ ಸಮಯ ಬೇಕಾಗುತ್ತದೆ. ಆದರೂ ಇದರಿಂದ ಮಹಿಳೆಗೆ ಹಿಂದಿನಿಂದಲೂ ಮುಚ್ಚಿದ ಬಾಗಿಲನ್ನು ತೆರೆದಂತಾಗಿದೆ. ಮಹಿಳೆಗೆ ಸ್ವತಂತ್ರ್ಯ ವ್ಯವಹಾರ ನಡೆಸುವ ಅವಕಾಶ ಒದಗಿಸಿದಂತಾಗಿದೆ ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಭಾರತ ಸರ್ಕಾರದ ಹಣಕಾಸು ಮಂತ್ರಾಲಯ ಹೊರಡಿಸಿರುವ ಎಕನಾಮಿಕ್ ಸರ್ವೆ ೨೦೧೦–೧೧ರಲ್ಲಿ ವರದಿಯಾದಂತೆ ಅಕ್ಟೋಬರ್ ೧, ೨೦೦೭ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಸ್ವಾಸ್ಥಭೀಮಾ ಯೋಜನೆಯ ಮೇರೆಗೆ ಜನವರಿ ೧೧–೨೦೧೧ರ ವರೆಗೆ ೨.೨೬ ಕೋಟಿ ಸ್ಮಾರ್ಟ ಕಾರ್ಡುಗಳನ್ನು ಬಿ.ಪಿ.ಎಲ್. ಕುಟುಂಬಗಳಿಗೆ ವಿತರಿಸಲಾಗಿದೆ. ಹಾಗೂ ೨೦೦೮ರಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯ ಪ್ರಕಾರ ಅಸಂಘಟಿತ ವಲಯದ ಕಾರ್ಮಿಕರಿಗೆ ಆರೋಗ್ಯ ವಿಮೆ, ಜನಶ್ರೀ ಭೀಮಾ ಯೋಜನೆ, ಇಂದಿರಾಗಾಂಧಿ ನ್ಯಾಷನಲ್ ಓಲ್ಡ್ ಏಜ್ ಪೆನ್ಷನ್ ಸ್ಕೀಮ್‌ಗಳನ್ನು ಜಾರಿಗೆ ತರಲಾಗಿದೆ. ಈ ಯೋಜನೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಅರಿವಿನ ಅಗತ್ಯವಿದೆ. ಈ ಯೋಜನೆಗಳ ಮಾಹಿತಿಯನ್ನು ಕಾರ್ಮಿಕರಿಗೆ ತಲುಪಿಸುವ ಅಥವಾ ಮನನ ಮಾಡಿಕೊಡುವ ಮಾಧ್ಯಮಗಳ ಅವಶ್ಯಕತೆ ಎದ್ದು ಕಾಣುತ್ತಿದೆ.

ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೦–೨೦೧೧ರಲ್ಲಿ ವರದಿಯಾದಂತೆ ಕರ್ನಾಟಕವು ಶೇ. ೭೩ರಷ್ಟು ಕಾರ್ಯನಿರತ ಶ್ರಮಬಲವನ್ನು ಹೊಂದಿದೆ. ಗ್ರಾಮೀಣ ವಲಯದಲ್ಲಿ ಶೇ. ೯೨.೩ರಷ್ಟು ಅಸಂಘಟಿತ ವಲಯದ ಗಾತ್ರವಿದ್ದರೆ, ಪಟ್ಟಣ ಪ್ರದೇಶದಲ್ಲಿ ಶೇ.೭೧.೫ ರಷ್ಟಿದೆ. ಅಸಂಘಟಿತ ವಲಯದ ರಾಷ್ಟ್ರೀಯ ಸಮಿತಿಯ ವ್ಯಾಖ್ಯೆಯ ಪ್ರಕಾರ ಕರ್ನಾಟಕದಲ್ಲಿ ಶೇ.೮೭ ರಷ್ಟು ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಅಧಿಕ ಕಾರ್ಮಿಕರು ಅನಕ್ಷರಸ್ಥರು, ಕಡಿಮೆ ಕೌಶಲ್ಯ ಹೊಂದಿದವರು ಹಾಗೂ ಕಡಿಮೆ ಗುಣಮಟ್ಟದ, ಕಡಿಮೆ ಉತ್ಪಾದಕತೆಯ ಕೆಲಸದಲ್ಲಿ ತೊಡಗಿದ್ದು ಅವರ ಕೆಲಸದ ವಾತಾವರಣವು ಸರಿಯಾಗಿರುವುದಿಲ್ಲ ಹಾಗೂ ಯಾವುದೇ ಸಾಮಾಜಿಕ ಭದ್ರತೆ, ಸೌಲಭ್ಯವೂ ಅವರಿಗೆ ಇರುವುದಿಲ್ಲ. ಅಸಂಘಟಿತ ವಲಯದ ಶ್ರಮಿಕರ ಬೃಹತ್ ಗಾತ್ರವನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಅವರ ಕ್ಷೇಮಾಭಿವೃದ್ಧಿಗಾಗಿ ೨೦೦೮ರಲ್ಲಿ ಸಾಮಾಜಿಕ ಭದ್ರತಾ ಕ್ರಮಗಳನ್ನು ಕೈಗೊಂಡಿದೆ. ಅದು ಸದ್ಯ ಕಟ್ಟಡ ನಿರ್ಮಾಣಕಾರರಿಗೆ ಹಾಗೂ ಬೀಡಿ ಕಾರ್ಮಿಕರಿಗೆ ಅನ್ವಯವಾಗುತ್ತದೆ. ಮಹಿಳಾ ಶ್ರಮಿಕರು ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರ ಸರಾಸರಿ ದಿನಗೂಲಿಯು ಅತೀ ಕಡಿಮೆ ಇರುತ್ತದೆ. ಈ ರೀತಿಯ ಲಿಂಗಾಧಾರಿತ ವೇತನ ತಾರತಮ್ಯವು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಅಸ್ತಿತ್ವದಲ್ಲಿದೆ ಎಂಬ ವಿಚಾರವನ್ನು ಬಹಿರಂಗ ಪಡಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೧೯೯೮ರಲ್ಲಿ ಸಲ್ಲಿಸಿದ ಮಹಾಪ್ರಬಂಧ 'ಕರ್ನಾಟಕದ ಬೀಡಿ ಕಾರ್ಮಿಕರು'. ಸುಂದರ್. ಆರ್. ರೋಗಿಯವರು ಡಾ. ಅನಿಲ್.ಜಿ. ಮೂಡಬಿದ್ರಿಯವರ ಮಾರ್ಗದರ್ಶನದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿರುತ್ತಾರೆ. ಬೀಡಿ ಉದ್ಯಮವು ಪ್ರಮುಖವಾಗಿ ಮಹಿಳೆಯರಿಂದ ಮನೆಯಲ್ಲಿಯೇ ನಡೆಯುವ ಕೆಲಸವಾಗಿದೆ ಇದಕ್ಕೆ 'ಘರ್ಕಥಾ' ಎಂದು ಕರೆಯಲಾಗುತ್ತದೆ. ಅನೌಪಚಾರಿಕ ವಲಯದ ಬಹುದೊಡ್ಡ ಕಸುಬು ಇದಾಗಿದೆ. ಇದು ಗೃಹ ಕೈಗಾರಿಕೆಯಾಗಿದೆ. ಕರ್ನಾಟಕದಲ್ಲಿ ೩ ಲಕ್ಷ ಬೀಡಿ ಕಾರ್ಮಿಕರಿದ್ದು, ಭಾರತದ ಬೀಡಿ ಉದ್ಯಮದ ರಾಜಧಾನಿ ಎನಿಸಿದೆ ಎಂದು ತಮ್ಮ ಪ್ರಾಥಮಿಕ ಮತ್ತು ಆನುಷಂಗಿಕ ಸಮೀಕ್ಷೆಯ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ತಿಳಿಸಿದ್ದಾರೆ. ಹುಬ್ಬಳ್ಳಿ ಹಾಗೂ ಧಾರವಾಡದ ೧೦ ಬೀಡಿ ಕೈಗಾರಿಕೆಗಳ ೧೪೦ ಮಹಿಳಾ ಬೀಡಿ ಕಾರ್ಮಿಕರನ್ನು ತಮ್ಮ

ಸಂಶೋಧನೆಗೆ ಬಳಸಿಕೊಂಡಿದ್ದಾರೆ. ಈ ಅಧ್ಯಯನದ ಉದ್ದೇಶ ಬೀಡಿ ಕಾರ್ಮಿಕರ ಸ್ಥಿತಿಗತಿಗಳನ್ನು ತಿಳಿಯುವುದಾಗಿದೆ. ಬೀಡಿ ಕಾರ್ಮಿಕರು ಕೆಲಸ ಮಾಡುವ ಸ್ಥಳ ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳು, ಸ್ತ್ರೀ ಹಾಗೂ ಪುರುಷರ ನಡುವಿನ ಲಿಂಗ ತಾರತಮ್ಯವನ್ನು ವಿವರಿಸಿದ್ದಾರೆ. ಮಹಿಳೆಯರ ಅನಕ್ಷರತೆ, ಬಡತನ ಹಾಗೂ ಮಾರುಕಟ್ಟೆ ಮಾಹಿತಿಯನ್ನು ಪಡೆಯುವಲ್ಲಿ ಇರುವ ಅನಾನುಕೂಲತೆ, ಬಂಡವಾಳದ ಕೊರತೆ ಹಾಗೂ ಬಾಲಕಾರ್ಮಿಕರ ಸಮಸ್ಯೆಗಳನ್ನು, ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಹಿಳಾ ಸಂಘಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದ್ದಾರೆ. ಆದರೆ ಮಹಿಳೆಯರು ಒಗ್ಗಟ್ಟಾಗಿ ಹೇಗೆ ಹೋರಾಡಬಹುದು, ತಮಗಿರುವ ಅನುಕೂಲಗಳನ್ನು ಹೇಗೆ ಯಾವ ಮಾರ್ಗದಿಂದ ಪಡೆಯಬಹುದು, ಎಂಬುದನ್ನು ವಿವರಿಸುವ ಅಗತ್ಯತೆ ಇಲ್ಲಿ ಎದ್ದು ಕಾಣುತ್ತದೆ. ಆದರೂ ಅನೌಪಚಾರಿಕ ವಲಯದ ಅತೀ ದೊಡ್ಡ ಭಾಗವಾದ ಬೀಡಿ ಉದ್ಯಮದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಸ್ಥೂಲವಾಗಿ ಪರಿಚಯಿಸುವ ಪ್ರಬಂಧ ಇದಾಗಿದೆ.

ನೀಲಪ್ಪ. ಬಿ. ಹೊಸಮನಿಯವರು ಅನಿಲ್.ಜಿ. ಮೂಡಬಿದ್ರಿಯವರ ಮಾರ್ಗದರ್ಶನದಲ್ಲಿ ೨೦೦೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ 'ಉತ್ತರ ಕರ್ನಾಟಕದ ಕೈಮಗ್ಗ ನೇಕಾರರು'. ಈ ಪ್ರಬಂಧದಲ್ಲಿ ಲೇಖಕರು ಅನೌಪಚಾರಿಕ ವಲಯದ ಬೃಹತ್ ಉದ್ಯಮಗಳಲ್ಲಿ ಒಂದಾದ ಕೈಮಗ್ಗದ ಕೈಗಾರಿಕೆಗಳ ಬಗ್ಗೆ ತಿಳಿಸುತ್ತಾರೆ. ಭಾರತದ ಕೈಮಗ್ಗದ ಇತಿಹಾಸವನ್ನು ಸ್ಥೂಲವಾಗಿ ಪರಿಚಯಿಸುತ್ತಾ ಇತ್ತೀಚಿನ ದಿನಗಳಲ್ಲಿ ಕೈಮಗ್ಗದ ಉದ್ಯಮದ ಬೇಡಿಕೆ ಕಡಿಮೆಯಾದ ಬಗ್ಗೆ ಮಾಹಿತಿಯಿದೆ. ಬಿಜಾಪುರ ಜಿಲ್ಲೆಯ ಮೂರು ಕೇಂದ್ರಗಳಾದ ಇಳಕಲ್,ನಿಡಗುಂದಿ, ಗೋಲ್ಸಂಗಿ ಪ್ರದೇಶಗಳಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಸಂದರ್ಶನಾರ್ಥಿಗಳ ಮಾಹಿತಿ ಪಡೆಯುವಲ್ಲಿ ಪ್ರಶ್ನಾವಳಿಯನ್ನು ತಯಾರಿಸಿ ನೇಕಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕಸುಬಿನಲ್ಲಿ ಹೆಚ್ಚಾಗಿ ನೇಕಾರ ಕುಟುಂಬಗಳೇ ತೊಡಗಿದ್ದು ಇವರು ಅನಕ್ಷರಸ್ಥರಾಗಿದ್ದಾರೆ. ಮಧ್ಯಸ್ಥಗಾರರ ಹಾವಳಿಯಿಂದಾಗಿ ಇವರ ಲಾಭಾಂಶ ಗೌಣವಾಗಿ ಕೇವಲ ಕನಿಷ್ಠ ಜೀವನ ಮಟ್ಟವನ್ನು ನಡೆಸುತ್ತಿದ್ದಾರೆ ಎಂಬ ಅಂಶವನ್ನು ಬೆಳಕಿಗೆ ತಂದಿದ್ದಾರೆ. ಸರ್ಕಾರವು ನೇಕಾರರ ಸ್ಥಿತಿಗತಿಗಳನ್ನು ಸುಧಾರಿಸಲು ಆಶಾಜ್ಯೋತಿ ಯೋಜನೆ ಹಾಗೂ ಈ ಉದ್ಯಮದಲ್ಲಿ ತೊಡಗಿದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಸೌಲಭ್ಯಗಳನ್ನು ಜಾರಿಗೆ ತಂದರೂ ನೇಕಾರರ ಸ್ಥಿತಿಗತಿಯಲ್ಲಿ ಸುಧಾರಣೆ ಕಂಡುಬಂದಿರುವುದಿಲ್ಲ ಎಂದು ನೌಕರರ ಸ್ಥಿತಿಗತಿ ಸುಧಾರಣೆಗೆ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಆಧುನಿಕ ಯುಗದಲ್ಲಿ ಕೈಮಗ್ಗ ಉದ್ಯಮ ಹಾಗೂ ಅವರ ಬದುಕಿನ ಚಿತ್ರಣ ನೀಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

'ಅನೌಪಚಾರಿಕ ವಲಯದ ಮಹಿಳಾ ಉದ್ಯಮಿಗಳು' ವಿಷಯವಾಗಿ ಆರಿಫಾ ಸುಲ್ತಾನ್. ಎಸ್. ಮಕಾಂದಾರ್‌ರವರು ಎಸ್.ಜಿ. ಪುರೋಹಿತ್‌ರವರ ಮಾರ್ಗದರ್ಶನದಲ್ಲಿ ೨೦೦೭ರಲ್ಲಿ ಸಲ್ಲಿಸಿದ ಮಹಾಪ್ರಬಂಧವಾಗಿದೆ. ಇದರಲ್ಲಿ ಅನೌಪಚಾರಿಕ ವಲಯದ ಅರ್ಥ ಹಾಗೂ ವ್ಯಾಖ್ಯೆಗಳನ್ನು ನೀಡಿರುವುದಲ್ಲದೆ, ಅನೌಪಚಾರಿಕ ವಲಯಕ್ಕೆ ಸೇರಿದ ಉದ್ಯಮಗಳನ್ನು ಅವರ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ಇದರಲ್ಲಿ ಪಿ.ಡಿ ವಶಿಷ್ಠ ಅವರು ಅನೌಪಚಾರಿಕ ವಲಯವನ್ನು 'ಎ ಟೂಲ್ ಫಾರ್

ಪಾವರ್ಟಿ ಇರ್‍ರ್ಯಾಡಿಕೇಷನ್' ಎಂದು ವ್ಯಾಖ್ಯಾನಿಸಿರುವ ಸಂಗತಿ ಗಮನಾರ್ಹವಾಗಿದೆ. ಈ ವ್ಯಾಪ್ತಿಯಡಿ ಹೆಸರಿಸಿರುವ ಕಾರ್ಯಕ್ಷೇತ್ರಗಳೆಂದರೆ ಟೈಲರ್‍ಸ್, ಎಂಬ್ರಾಯಿಡರ್‍ಸ್, ಪಾಪಡ್ ಮತ್ತು ಪಿಕಲ್ ಮೇಕರ್‍ಸ್, ಫುಡ್‌ವೆಂಡರ್‍ಸ್, ಜೆರಾಕ್ಸ್, ಟೈಪ್, ಡಿ.ಟಿ.ಪಿ.ಕೇಂದ್ರದವರು ಐಸ್‌ಕ್ರೀಂ ತಯಾರಿಸುವವರು, ಮಸಾಲ ಸುಪಾರಿ ಮಾರುವವರು, ಹೂಗುಚ್ಛ ತಯಾರಿಸುವವರು ಹೀಗೆ ಹತ್ತು ಹಲವು ಕ್ಷೇತ್ರಗಳನ್ನು ಪರಿಚಯಿಸಿದ್ದಾರೆ. ಒಟ್ಟಾರೆ ೨೫೦ ಸಂದರ್ಶನಾರ್ಥಿಗಳನ್ನು ಸಮೀಕ್ಷೆ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ.

ಇಲ್ಲಿ ಮಹಿಳೆಯರು ಸಂಪಾದನೆಯಲ್ಲಿ ತೊಡಗಿದ್ದು ಆರ್ಥಿಕತೆಗೆ ಹಾಗೂ ಕುಟುಂಬಕ್ಕೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದ್ದರೂ ಅವರ ದುಡಿಮೆಯು ಹೇಗೆ ನಿರ್ಲಕ್ಷ್ಯಕ್ಕೊಳಗಾಗಿದೆ. ವಿಪುಲವಾದ ಕುಶಲತೆ, ಚಾತುರ್ಯವನ್ನು ಹೊಂದಿದ್ದರೂ ಹಣಕಾಸಿನ ಕೊರತೆಯಿಂದ ಇವರ ಉದ್ಯಮ ಕ್ಷೇತ್ರ ಹಿಂದುಳಿದಿದೆ ಎಂಬುದರ ವಿವರಣೆ ಇದೆ. ಕುಟುಂಬದಲ್ಲಿಯೂ ಕೂಡ ಮಹಿಳೆಯರಿಗೆ ಸೂಕ್ತ ಬೆಂಬಲ ಸಿಗುತ್ತಿಲ್ಲ. ಕೇವಲ ಸಾಂದರ್ಭಿಕ ಹಾಗೂ ಪುರುಷರ ದುಡಿಮೆಗೆ ಬೆಂಬಲವಾಗಿ ಇವರ ಶ್ರಮವನ್ನು ಪರಿಗಣಿಸಲಾಗುತ್ತಿದೆ. ಮಾರುಕಟ್ಟೆ ಸಮಸ್ಯೆ ಹಾಗೂ ಕೌಟುಂಬಿಕ ಸಮಸ್ಯೆಗಳಿಂದಾಗಿ ಮಹಿಳೆಯರು ಈ ಕ್ಷೇತ್ರದಲ್ಲಿ ಹಿನ್ನಡೆ ಕಾಣುವಂತಾಗಿದೆ. ಮಹಿಳೆಯರು ಇಲ್ಲಿ ಸಫಲತೆಯನ್ನು ಕಾಣಲು ಇನ್ನು ಹೆಚ್ಚಿನ ಕೌಶಲ್ಯ ಅಗತ್ಯ ಹಾಗೂ ಸರ್ಕಾರದಿಂದ ಬಂಡವಾಳ ಹಾಗೂ ತಾಂತ್ರಿಕತೆಯ ನೆರವನ್ನು ನೀಡಬೇಕಾಗಿದೆ. ಇಲ್ಲಿಯ ಲಿಂಗತಾರತಮ್ಯವನ್ನು ಹೋಗಲಾಡಿಸಲು ಮಹಿಳೆಯರಿಗೆ ಸ್ವಸಹಾಯ ಗುಂಪುಗಳಿಂದ ಅಗತ್ಯ ನೆರವು ಉತ್ತೇಜನ ಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಸಂಘಟಿತ ವಲಯದ ಹೊಸ ಹೊಸ ಕಾರ್ಯಕ್ಷೇತ್ರಗಳನ್ನು ಆರ್ಥಿಕತೆಗೆ ಪರಿಚಯಿಸುವಲ್ಲಿ ಧೀಮಂತಿಕೆ ತೋರಿದ್ದಾರೆ.

'ಮಹಿಳಾ ಉದ್ಯಮಿಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ'ವು ಸ್ವಉದ್ಯೋಗಿ ಮಹಿಳೆಯರ ಬಗ್ಗೆ ರೇಖಾ. ಕೆ. ಜಾಧವ್ ಅವರು ಅನಿಲ್.ಜಿ. ಮೂಡಬಿದ್ರಿಯವರ ಮಾರ್ಗದರ್ಶನದಲ್ಲಿ ೨೦೦೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧವಾಗಿದೆ. ಏನೇ ಸಾಮಾಜಿಕ ಅಡೆತಡೆಗಳಿದ್ದರೂ ಮಹಿಳೆಯರು ಉದ್ಯಮ ಕ್ಷೇತ್ರವನ್ನು ಪ್ರವೇಶಿಸಿ ಪ್ರಗತಿಪರರಾಗಿ ಖ್ಯಾತರಾಗಿದ್ದಾರೆ. ಸ್ವಪ್ರಯತ್ನದಿಂದ ಸಾಮಾಜಿಕ ಏಣಿಶ್ರೇಣಿಯಲ್ಲಿ ಮಹಿಳೆ ಹೇಗೆ ಯಶಸ್ವಿಯಾಗಬಹುದು ಎಂಬುದನ್ನು ವಿವರಿಸುತ್ತಾ ಇದು ಸಾಮಾಜಿಕ ಬದಲಾವಣೆಯ ದ್ಯೋತಕವೆಂಬುದನ್ನು ತಿಳಿಸಿರುತ್ತಾರೆ. ಹೀಗೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಧೃಡಪಡಿಸಿದ್ದಾರೆ.

ಎಸ್. ರಾಮಕೃಷ್ಣ ಮೂರ್ತಿಯವರು, ಎಂ.ಸುಬ್ರಮ್ಮಣ್ಯಯ್ಯ ಅವರ ಮಾರ್ಗದರ್ಶನದಲ್ಲಿ ೧೯೯೬ರಲ್ಲಿ 'ಎಕನಾಮಿಕ್ಸ್ ಆಫ್ ಹ್ಯಾಂಡಿಕ್ರಾಫ್ಟ್ಸ್ ವುಮೆನ್ ಇನ್ ಕನ್ಯಾಲ್ವೇಮನಿ ಡಿಸ್ಟ್ರಿಕ್ಟ್', ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ. ಇದರಲ್ಲಿ ಭಾರತೀಯ ಕುಶಲ ಕಲೆಗಾರಿಕೆಯ ಇತಿಹಾಸ ಹಾಗೂ ಈ ಉದ್ಯಮದಲ್ಲಿ ಮಹಿಳಾ ಕುಶಲ ಕಲೆಗಾರರ ಸಹಭಾಗಿತ್ವ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗಿದೆ. ೩೫೦ ಮಹಿಳಾ ಕುಶಲಕಲೆಗಾರರ ಅಂಕಿಅಂಶಗಳನ್ನು ಸಂಗ್ರಹಿಸಿ ಪ್ರಬಂಧವನ್ನು ಮಂಡಿಸಲಾಗಿದೆ. ಅನೌಪಚಾರಿಕ ವಲಯದ ಪ್ರಮುಖ ಕ್ಷೇತ್ರವನ್ನು ಪರಿಚಯಿಸಿಕೊಡುವ ಪ್ರಯತ್ನ ಇದಾಗಿದೆ.

ಶ್ರೀಮತಿ ವೈಜಂತಿಮಾಲಾ ಕೆ.ರಾವಲೆಯವರು, ಶ್ರೀಯುತ ಟಿ.ಎಸ್. ಮುಂದಿನಮನಿಯವರ ಮಾರ್ಗದರ್ಶನದಲ್ಲಿ ಬರೆದ ಮಹಾಪ್ರಬಂಧ 'ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್ ಇನ್ ಕರ್ನಾಟಕ'– ಎ ಕೇಸ್ ಸ್ಟಡಿ ಆಫ್ ವೆಜಿಟೇಬಲ್ ವೆಂಡರ್ಸ್ ಇನ್ ಹುಬ್ಲಿ ಅಂಡ್ ಧಾರವಾಡ ಸಿಟಿ. ಈ ಪ್ರಬಂಧದಲ್ಲಿ ವೈಜಂತಿಮಾಲಾರವರು ಹುಬ್ಬಳ್ಳಿ ಹಾಗೂ ಧಾರವಾಡ ಅವಳಿ ನಗರಗಳ ತರಕಾರಿ ಮಾರುವ ೧೮೦ ಜನರ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅದರೊಂದಿಗೆ ಅನೌಪಚಾರಿಕ ವಲಯದ ವಿವರಣೆಯಿದೆ. ಹುಬ್ಬಳ್ಳಿ ಹಾಗೂ ಧಾರವಾಡದ ತರಕಾರಿ ಮಾರುವವರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ, ಅವರ ವಸತಿ ಸಮಸ್ಯೆ ಹಾಗೂ ಇನ್ನಿತರ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹಾರ ಸೂಚಿಸಲು ಪ್ರಯತ್ನಿಸಿದ್ದಾರೆ.

ಡಾ. ಪಿ.ತಿಪ್ಪಯ್ಯ (೧೯೯೩) ಅವರು ಡಾ.ಅಬ್ದುಲ್ ಅಜೀಜ್ ಅವರ ಮಾರ್ಗದರ್ಶನದಲ್ಲಿ ಬರೆದ ಮಹಾ ಪ್ರಬಂಧ 'ಇನ್‌ಫಾರ್ಮಲ್ ಸೆಕ್ಟರ್ ಅಂಡ್ ದಿ ಅರ್ಬನ್ ಪೂರ್ ಇನ್ ಎ ಮೆಟ್ರೋ ಪಾಲಿಟನ್ ಏರಿಯಾ' ಎ ಕೇಸ್ ಸ್ಟಡಿ ಆಫ್ ಬೆಂಗಳೂರು ಪ್ರಮುಖವಾದದ್ದು. ಈ ಪ್ರಬಂಧದಲ್ಲಿ ಶ್ರೀಯುತರು ಅನೌಪಚಾರಿಕ ವಲಯದ ಅರ್ಥ, ಪ್ರಾಮುಖ್ಯತೆ, ವ್ಯಾಖ್ಯೆ ಹಾಗೂ ಲಕ್ಷಣಗಳನ್ನು ಕುರಿತಾಗಿ ವಿವರವಾದ ಲೇಖನಗಳನ್ನು ಬರೆದಿದ್ದಾರೆ. ಬೆಂಗಳೂರಿನ ಅನೌಪಚಾರಿಕ ವಲಯದ ಕಾರ್ಮಿಕರ ಜೀವನ ಸ್ಥಿತಿ ಕುರಿತಾದ ಪ್ರಬಂಧ ಇದಾಗಿದೆ.

ಡಾ. ಮೋಹನ್ ಎಸ್.ಕೆ (೨೦೦೭) ಅವರು ಡಾ. ವಿ.ರಾಮೇಗೌಡ ಅವರ ಮಾರ್ಗದರ್ಶನದಲ್ಲಿ ಬರೆದ ಮಹಾಪ್ರಬಂಧ 'ಕರ್ನಾಟಕದ ಹತ್ತಿ ಕೈಮಗ್ಗಗಳಲ್ಲಿ ನೇಯುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು' ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳ ಕ್ಷೇತ್ರಕಾರ್ಯ ಕೈಗೊಂಡು ಹತ್ತಿ ಕೈಮಗ್ಗಗಳಲ್ಲಿ ನೇಯುವ ಮಹಿಳೆಯರ ಜೀವನ ಚಿತ್ರಣವನ್ನು ನೀಡಿರುತ್ತಾರೆ.

ಡಾ. ಎಂ. ಕೃಷ್ಣಯ್ಯನವರು (೧೯೯೪) ಪ್ರೊ. ರಾಧಾಕೃಷ್ಣ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾ ಪ್ರಬಂಧ 'ಕ್ಯಾಜುವೆಲ್, ರೆಗ್ಯುಲರ್ ಅಂಡ್ ಮಾರ್ಜಿನಲ್ ಲೇಬರ್ ಸಿಸ್ಟಮ್ ಇನ್ ಸೆಮಿಅರಿಡ್ ಏರಿಯಾಸ್'– ಎ ಕೇಸ್ ಸ್ಟಡಿ ಆಫ್ ಟೂ ವಿಲೇಜಸ್ ಇನ್ ಆಂಧ್ರಪ್ರದೇಶ. ಈ ಪ್ರಬಂಧದಲ್ಲಿ ಅರೆಶುಷ್ಕ ಪ್ರದೇಶದಲ್ಲಿ ಕೆಲಸಮಾಡುವ ಸಾಂದರ್ಭಿಕ, ಖಾಯಂ ಹಾಗೂ ಸೀಮಾಂತ ಕಾರ್ಮಿಕರ ಜೀವನ ಹಾಗೂ ದುಡಿಮೆಯ ಕುರಿತು ಚಿತ್ರಣವಿದೆ.

೨.೩: ಮನೆಗೆಲಸದ ದುಡಿಮೆಯ ಕುರಿತ ಅಧ್ಯಯನಗಳು

ಮಹಿಳೆಯರು ಮನೆಗೆಲಸದಂತಹ ಕಡಿಮೆ ದರ್ಜೆಯ ಕೆಲಸದಲ್ಲಿ ತೊಡಗಲು ಪ್ರಮುಖ ಕಾರಣ ಶಿಕ್ಷಣದ ಕೊರತೆ ಎಂಬ ವಿಷಯವು ೨೦೧೦–೧೧ರ ಗ್ಲೋಬಲ್ ವೇಜ್ ರಿಪೋರ್ಟ್ ನಲ್ಲಿಯೂ ವರದಿಯಾಗಿದೆ. ಕಡಿಮೆ ವೇತನದ ಕೆಲಸವೆಂದೇ ಹೆಸರಿಸಲಾದ ಮನೆಗೆಲಸದ ದುಡಿಮೆಯಲ್ಲಿ ಶೇ. ೯೦ರಷ್ಟು ಜನ ಮಹಿಳೆಯರಿದ್ದಾರೆ. ಆದರೆ ಇವರನ್ನು ಕೀಳಾಗಿ ಕಾಣುತ್ತಿದ್ದಾರೆ. ಇತ್ತೀಚಿಗೆ ಮನೆಗೆಲಸದವರೂ ಜಾಗೃತರಾಗಿದ್ದಾರೆ. ಬ್ರೆಜಿಲ್‌ನಲ್ಲಿ ಮನೆಗೆಲಸದ ದುಡಿಮೆಗಾರರ ರಾಷ್ಟ್ರ ಸಂಘವನ್ನು ಕಟ್ಟಲಾಗಿದೆ.

ಲ್ಯಾಟಿನ್ ಅಮೇರಿಕಾ ಹಾಗು ಕೆರಿಬಿಯನ್ ರಾಷ್ಟ್ರಗಳಲ್ಲೂ ಮನೆಗೆಲಸದವರು ಸಂಘವನ್ನು ಸ್ಥಾಪಿಸಿದ್ದಾರೆ. ಅಲ್ಲದೇ ಹದಿಮೂರು ರಾಷ್ಟ್ರಗಳು ಇದರ ಸದಸ್ಯತ್ವವನ್ನು ಹೊಂದಿ ಮಾರ್ಚ್ ೩೦ನ್ನು 'ಮನೆಗೆಲಸದ ದಿನಾಚರಣೆ' ಎಂದು ಆಚರಿಸಲಾಗುತ್ತಿದೆ. ತಮ್ಮ ವೇತನವನ್ನು ಹೆಚ್ಚಿಸಲು ಹೋರಾಟ ಮನೋಭಾವವನ್ನು ಹೊಂದಿ ಸಂಘಟನೆಯಾಗುವ ಅವಶ್ಯಕತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮನೆಗೆಲಸದ ಅದೃಶ್ಯ ದುಡಿಮೆಯ ಕುರಿತು ಜೆನೆತ್ ಹೆನ್ಸಾಲ್ ಮೊಮ್ಸೆನ್ (೧೯೯೯) ಅವರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಮನೆಗೆಲಸದ ದುಡಿಮೆಯ ಇತಿಹಾಸವನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಅಂಚಿನ ದುಡಿಮೆಯ, ಕ್ಷೀಣಿಸಿದ ಧ್ವನಿಯ ದುಡಿಮೆಗಾರರ ಕುರಿತು ಜಾಗತಿಕ ಮಟ್ಟದಲ್ಲಿ ಇತ್ತೀಚೆಗೆ ಆಸಕ್ತಿ ಬೆಳೆದು ಬರುತ್ತಿದೆ. ಇವರೆಲ್ಲರಲ್ಲಿ ಅತೀ ಹೆಚ್ಚು ತಿರಸ್ಕರಿಸಲ್ಪಟ್ಟ ದುಡಿಮೆಗಾರರೆಂದರೆ ವಲಸೆ ಬಂದ ಮನೆಗೆಲಸಗಾರರು. ಅದರಲ್ಲೂ ಪ್ರಮುಖವಾಗಿ ಅಧಿಕ ಸಂಖ್ಯೆಯ ಮಹಿಳೆಯರ ಹೆಸರು ಅಂಕಿ ಅಂಶಗಳ ಅಲಭ್ಯತೆಯಿಂದ ದಾಖಲಾಗಿರುವುದಿಲ್ಲ. ಕಾರ್ಮಿಕ ಸಂಘಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಕೂಡ ಮಹಿಳೆಯರ ಸ್ಥಿತಿಗತಿ ಅಧ್ಯಯನದಿಂದ ದೂರ ಉಳಿದಿವೆ ಎಂಬ ವಿಷಯ ತಿಳಿಸಿದ್ದಾರೆ.

ಕೈಗಾರಿಕೀಕರಣ ಹಾಗು ನಗರೀಕರಣದ ಪ್ರಭಾವದಿಂದ ಮನೆಗೆಲಸದ ದುಡಿಮೆಗಾರರಿಗೆ ಪ್ರಚೋದನೆ ದೊರೆತಂತಾಗಿದೆ ಎಂದು ಎಸ್ತರ್ ಬೋಸರಪ್ (೧೯೭೦) ಅವರ ಅನಿಸಿಕೆಯನ್ನು ಉಲ್ಲೇಖಿಸಿದ್ದಾರೆ. ಬೋಸರಪ್ ಅವರ ವಾದದ ಪ್ರಕಾರ ಆರ್ಥಿಕ ಬೆಳವಣಿಗೆಯ ಹಂತದಲ್ಲಿರುವ ದೇಶಗಳ ಪ್ರಮುಖ ಲಕ್ಷಣವೆಂದರೆ ಅಧಿಕ ಸಂಖ್ಯೆಯ ಮಹಿಳೆಯರು ಮನೆಗೆಲಸದ ದುಡಿಮೆಯಲ್ಲಿ ತೊಡಗಿ ವೇತನ ಪಡೆಯುತ್ತಿರುವುದು ಎಂಬುದಾಗಿದೆ.

ಅಲ್ಲದೇ ೧೯ನೇ ಶತಮಾನದಲ್ಲಿ ಕೃಷಿಯ ಕೆಲಸವನ್ನು ಯಾಂತ್ರೀಕರಣಗೊಳಿಸಿದ್ದರಿಂದ ಯುವ ಮಹಿಳೆಯರು ಕೆಲಸ ಕಳೆದುಕೊಂಡು ಪಟ್ಟಣದ ಮಧ್ಯಮ ವರ್ಗದ ಮಹಿಳೆಯರಿಗೆ ಸೇವಕರಾಗಿ ಜೀವನ ನಡೆಸಬೇಕಾಯಿತು. ಸುಮಾರು ಎರಡು ಮಿಲಿಯನ್ ಯೂರೋ ಮಹಿಳೆಯರು ೧೯ನೇ ಶತಮಾನದ ಮಧ್ಯಭಾಗದಲ್ಲಿ ಈ ರೀತಿ ಸೇವಕರಾಗಿ ಮುಂದುವರೆದರು, ಉದ್ಯೋಗಾವಕಾಶಗಳು ಹಾಗು ಸಾಂಸಾರಿಕ ಸಮಸ್ಯೆಗಳು ಒಂಟಿ ಮಹಿಳೆಯರನ್ನು ವಲಸೆ ಹೋಗುವಂತೆ ಪ್ರಚೋದಿಸಿದವು. ಹೀಗೆ ವಲಸೆ ಹೋದ ಚೀನಾ ಮಹಿಳೆಯರು ಕೆಲವೊಮ್ಮೆ ಒಡೆಯರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾದರು ಇನ್ನು ಕೆಲವರು ಒಡೆಯರಿಗೆ ಉಪಪತ್ನಿಯರಾಗಿ ಬಾಳಬೇಕಾಯಿತು. ಈ ಪದ್ಧತಿಗೆ (Mui Tsai System) ಬಡ ಕುಟುಂಬಗಳ ಮಹಿಳೆಯರು ಬಲಿಯಾದರೆಂಬುದನ್ನು ತಿಳಿಸಿದ್ದಾರೆ. ಹೀಗೆ ಜಾಗತಿಕ ಮಟ್ಟದಲ್ಲಿಯೂ ಸಹ ಆರ್ಥಿಕವಾಗಿ ಹಿಂದುಳಿದ ಜನರು ಮನೆಗೆಲಸದಂತಹ ದುಡಿಮೆಯನ್ನರಸಿ ವಲಸೆ ಹೋಗಬೇಕಾದ ಪ್ರಸಂಗವನ್ನು ವಿವರಿಸಿದ್ದಾರೆ.

ಮನೆಗೆಲಸವು ಮಹಿಳೆಯರಿಗಾಗಿಯೇ ಇರುವ ದುಡಿಮೆ ಎಂಬ ಅಭಿಪ್ರಾಯವು 'ನ್ಯಾಷನಲ್ ಕಮಿಷನ್ ಆನ್ ಸೆಲ್ಫ್ ಎಂಪ್ಲಾಯ್ಡ್ ವುಮನ್ ಅಂಡ್ ವುಮೆನ್ ಇನ್ ದಿ ಇನ್‌ಫಾರ್ಮಲ್

ಸೆಕ್ಟರ್(೧೯೮೮) ವರದಿಯಲ್ಲಿಯೂ ವ್ಯಕ್ತವಾಗಿದೆ. ಮನೆಗೆಲಸದ ದುಡಿಮೆಗಾರರು ತಮ್ಮ ಮನೆಯಲ್ಲಿ ಮಾಡುವ ಕೆಲಸಗಳನ್ನು ಬೇರೆಯವರ ಮನೆಯಲ್ಲಿಯೂ ಮಾಡುತ್ತಾರೆ. ೧೯೭೧ರ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ೧.೦೬ ಮಿಲಿಯನ್ ಮನೆಗೆಲಸಗಾರರಿದ್ದಾರೆಂದು ತಿಳಿದು ಬಂದಿದೆ. ಅದರಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಮಹಿಳೆಯರಿದ್ದಾರೆ. ಈ ಕೆಲಸಕ್ಕೆ ಸರ್ಕಾರದ ಶಾಸನಗಳ ಬೆಂಬಲವಿಲ್ಲ ಹಾಗು ಕೆಲಸದ ಲಿಖಿತ ಒಪ್ಪಂದವೂ ಇರುವುದಿಲ್ಲ. ಕೆಲಸಗಾರರನ್ನು ಬೇಕಾದಾಗ ನೇಮಿಸಿಕೊಂಡು ಬೇಡವಾದಾಗ ತೆಗೆದು ಹಾಕಬಹುದಾಗಿದೆ. ಸಾಂಪ್ರದಾಯಿಕವಾದ ಕಾರ್ಮಿಕ ಸಂಘಗಳೂ ಇತ್ತೀಚಿನವರೆಗೂ ಮನೆಗೆಲಸದ ದುಡಿಮೆಗಾರರನ್ನು ಸಂಘಟನೆ ಮಾಡುವ ಜವಾಬ್ದಾರಿಯನ್ನು ತೆಗೆದುಕೊಂಡಿರುವುದಿಲ್ಲ. ಈ ದುಡಿಮೆಗಾರರು ಕಡಿಮೆ ಕೂಲಿಯ ರಜಾ ಸೌಲಭ್ಯವಿಲ್ಲದ, ವೈದ್ಯಕೀಯ ಸೌಲಭ್ಯವಿಲ್ಲದ ಹಾಗೂ ಸೇವಾಭದ್ರತೆ ಇಲ್ಲದ ವಾತಾವರಣದಲ್ಲಿ ದುಡಿಯುತ್ತಿದ್ದಾರೆ ಎಂದು ತಿಳಿಸುತ್ತಾ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಿ ಸಾಮಾಜಿಕ ಭದ್ರತೆಗಳನ್ನು ಜಾರಿಗೆ ತರಲು ಪ್ರತ್ಯೇಕವಾದ ಶಾಸನವನ್ನು ಜಾರಿಗೆ ತರಲು ಶಿಫಾರಸ್ಸು ಮಾಡಿದೆ.

ಮನೆಗೆಲಸದ ದುಡಿಮೆಗಾರರ ಸಮಸ್ಯೆಗಳ ಕುರಿತು ವಿಶ್ಲೇಷಣೆ ನಡೆಸಿದ 'ಇಂಡಿಯನ್ ಜರ್ನಲ್ ಆಫ್ ಜಂಡರ್ ಸ್ಟಡೀಸ್'ನಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗಿದೆ. ಆರ್ಥಿಕತೆಯ ಅತೀ ಕೆಳಹಂತದ ದುಡಿಮೆ ಎನಿಸಿಕೊಂಡ ಮನೆಗೆಲಸದ ಸೇವೆಯ ಬಗ್ಗೆ ಇತ್ತೀಚೆಗೆ ಸಂಶೋಧಕರು ಹೆಚ್ಚಿನ ಆಸಕ್ತಿ ತೋರುತ್ತಿರುವ ಕುರಿತು ವಿಶ್ಲೇಷಿಸಿದ್ದಾರೆ. ಮನೆಗೆಲಸದ ದುಡಿಮೆಗಾರರು ಸಮಾಜದಲ್ಲಿ ಎಷ್ಟರ ಮಟ್ಟಿಗೆ ಅಜ್ಞಾತ ಸ್ಥಿತಿಯಲ್ಲಿದ್ದಾರೆ ಎಂದರೆ, ಅಸ್ತಿತ್ವದಲ್ಲಿರುವ ಕಾರ್ಮಿಕ ಸಂಘಗಳೂ ಕೂಡ ಮನೆಗೆಲಸದ ಸೇವಕರನ್ನು ಕಾರ್ಮಿಕರೆಂದು ಅಥವಾ ದುಡಿಮೆಗಾರರೆಂದು ಪರಿಗಣಿಸಿರುವುದಿಲ್ಲ. ೧೯೫೯ರಲ್ಲಿಯೇ ಡೊಮೆಸ್ಟಿಕ್ ವರ್ಕರ್ಸ್ ಮಸೂದೆಯನ್ನು ರಾಜ್ಯ ಸಭೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮಸೂದೆಯೆಂದು ಮಂಡಿಸಿದರೂ ಅದು ಇದುವರೆಗೆ ಜಾರಿಗೆ ಬಂದಿರುವುದಿಲ್ಲ. ಸ್ತ್ರೀ ಜಾಗೃತಿ ಸಮಿತಿಯವರು ಬೆಂಗಳೂರಿನಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಬೆಂಗಳೂರಿನಲ್ಲಿ ಮನೆಗೆಲಸದ ಮಹಿಳೆಯರು ಕಡಿಮೆ ಕೂಲಿ ಪಡೆಯುತ್ತಿದ್ದಾರೆ. ಒಬ್ಬ ಮನೆಗೆಲಸದ ಸೇವಕ ತನ್ನ ಕುಟುಂಬಕ್ಕೆ ಅವಶ್ಯವಿರುವ ಹಣಕಾಸಿನಲ್ಲಿ ಕಾಲು ಭಾಗ ಮಾತ್ರ ಸಂಪಾದಿಸುತ್ತಿದ್ದಾನೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಷ್ಟ್ರಮಟ್ಟದಲ್ಲಿ ವಿಚಾರಿಸುವುದಾದರೆ ಬುಡಕಟ್ಟು ಜನಾಂಗಕ್ಕೆ ಸೇರಿದ ಅಸಂಖ್ಯಾತ ಮಹಿಳೆಯರು ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ. 'ನ್ಯಾಷನಲ್ ಸ್ಯಾಂಪಲ್ ಸರ್ವೆ'(ಎನ್.ಎಸ್.ಎಸ್) ನಡೆಸಿದ ಸಮೀಕ್ಷೆಯ ಪ್ರಕಾರ ಮನೆಗೆಲಸದ ದುಡಿಮೆಯು ಸ್ತ್ರೀಯರ ದುಡಿಮೆ ಎನಿಸಿಕೊಳ್ಳುತ್ತದೆ. ಏಕೆಂದರೆ ವಲಸೆ ಬಂದ ಮಹಿಳೆಯರು ಮನೆಗೆಲಸದ ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಪುರುಷರಿಗಿಂತ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಮನೆಗೆಲಸದ ಸೇವೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರತಿ ಹತ್ತು ಮನೆಗೆಲಸದ ದುಡಿಮೆಗಾರರಲ್ಲಿ ಒಂಭತ್ತು ಜನ ಮಹಿಳೆಯರಿದ್ದಾರೆ. ಅದು ಕೆಳಸ್ತರದ ಕಡಿಮೆ ಆದಾಯದಿಂದ ಕೂಡಿದ ದುಡಿಮೆಯಾಗಿದ್ದರೂ ಮಹಿಳೆಯರಿಗೆ ಅಗತ್ಯವಾದ ಉದ್ಯೋಗವಾಗಿದೆ ಎಂದು ತಿಳಿಸುತ್ತಾ ಮಹಿಳಾ ಮನೆಗೆಲಸಗಾರರ ಸ್ಥಿತಿಗತಿಗಳ ಸುಧಾರಣೆಯಲ್ಲಿ ಸ್ವಯಂ ಸೇವಾ ಸಂಘಗಳ ಬೆಂಬಲದ ಅಗತ್ಯತೆಯನ್ನು ಎತ್ತಿ ಹಿಡಿದಿದ್ದಾರೆ.

ಅಸಂಘಟಿತ ವಲಯದ ದುಡಿಮೆಗಾರರ ಸಮಸ್ಯೆಗಳ ಅಧ್ಯಯನಕ್ಕಾಗಿ ಸರ್ಕಾರ ಅರ್ಜುನ್‌ಸೇನ್ ಗುಪ್ತ ಅವರ ನೇತೃತ್ವದಲ್ಲಿ ನೇಮಿಸಿದ ಸಮಿತಿಯು ಕೂಡ ಮನೆಗೆಲಸದ ದುಡಿಮೆಗಾರರ ಕುರಿತು ಕಳಕಳಿ ವ್ಯಕ್ತಪಡಿಸಿದೆ. ಮನೆಗೆಲಸದ ದುಡಿಮೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಇವರು ಖಾಸಗಿ ಮನೆಗಳಲ್ಲಿ ಸೇವಕರಾಗಿ ದುಡಿಯುತ್ತಾ ಶೋಷಣೆಗೆ ಗುರಿಯಾಗಿದ್ದಾರೆ. ಇವರಿಗೆ ಶಾಸನಾತ್ಮಕವಾದ ಯಾವ ರಕ್ಷಣೆಯು ಸಿಗುವುದಿಲ್ಲವಾದುದರಿಂದ ಒಡೆಯರಿಂದ ಅನೇಕ ರೀತಿಯ ಹಿಂಸೆಯನ್ನು ಎದುರಿಸುತ್ತಿದ್ದಾರೆ. ದೇಶದ ಬೃಹತ್ ನಗರ ಹಾಗೂ ಪಟ್ಟಣಗಳಲ್ಲಿ ಮನೆಗೆಲಸದ ಮಹಿಳೆಯರಿಗಿರುವ ಬೇಡಿಕೆಯಿಂದಾಗಿ ಬುಡಕಟ್ಟು ಹಾಗು ಗ್ರಾಮಗಳಿಂದ ಮಹಿಳೆಯರು ವಲಸೆ ಬರುತ್ತಿದ್ದಾರೆ. ಅವರಲ್ಲಿ ಅಧಿಕ ಸಂಖ್ಯೆಯ ಮಹಿಳೆಯರು ಬಡ ಕುಟುಂಬಗಳಿಂದ ಬಂದ ಅನಕ್ಷರಸ್ತರಾಗಿದ್ದಾರೆ. ಶಿಕ್ಷಣದ ಹಾಗು ನೈಪುಣ್ಯತೆಯ ಕೊರತೆಯಿಂದ ಸುಲಭವಾಗಿ ಶೋಷಣೆಗೆ ಗುರಿಯಾಗುತ್ತಿದ್ದಾರೆ ಎಂಬುದಾಗಿ ತಿಳಿಸಲಾಗಿದೆ.

ಭಾರತದಲ್ಲಿ ನಾಲ್ಕು ಮಿಲಿಯನ್ ಮನೆಗೆಲಸದ ಮಹಿಳೆಯರಿದ್ದಾರೆಂದು ಅಂದಾಜು ಮಾಡಲಾಗಿದೆ. ಇವರನ್ನು ದುಡಿಮೆಗಾರರೆಂದು ಗುರುತಿಸದೇ ಇರುವುದು ಪ್ರಮುಖ ಸಮಸ್ಯೆಯಾಗಿದೆ. ಮನೆಗೆಲಸದ ಶ್ರಮಿಕರು ಕಾರ್ಮಿಕ ಕಾನೂನುಗಳಿಂದ ಹೊರ ನೂಕಲ್ಪಟ್ಟಿದ್ದಾರೆ. ಅವುಗಳಲ್ಲಿ ಉದ್ಯೋಗ ಸಂಬಂಧಿ ಸವಲತ್ತುಗಳಾದ ಕೆಲಸದ ಅವಧಿ, ಕನಿಷ್ಠ ಕೂಲಿ, ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ ಮುಂತಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆಂದು ತಿಳಿಸುತ್ತಾ, ದುಡಿಮೆಗಾರರ ಸ್ಥಿತಿಗತಿ ಸುಧಾರಣೆಗೆ ಶಿಫಾರಸ್ಸು ಮಾಡಿದೆ.

ಟುವರ್ಡ್ಸ್ ಈಕ್ವಾಲಿಟಿ (೧೯೭೪) ವರದಿಯಲ್ಲಿಯೂ ಮನೆಗೆಲಸದ ದುಡಿಮೆಗಾರರ ಚಿಂತಾಜನಕ ಬದುಕಿನ ಚಿತ್ರಣವನ್ನು ಬಹಿರಂಗ ಪಡಿಸಲಾಗಿದೆ. ಪ್ರಮುಖವಾಗಿ ನಗರಗಳಲ್ಲಿ ಮನೆಗೆಲಸದ ದುಡಿಮೆಗಾರರು ಹೆಚ್ಚಾಗಿ ಕಂಡು ಬರುತ್ತಾರೆ. ಆದರೂ ಅವರನ್ನು ಅಂದಾಜು ಮಾಡುವಲ್ಲಿ ಯಾವ ಪ್ರಯತ್ನಗಳೂ ನಡೆದಿರುವುದಿಲ್ಲ. ಇತ್ತೀಚಿನ ಜೀವನ ನಿರ್ವಹಣೆಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಪಟ್ಟಣಗಳಲ್ಲಿ ಅವರ ಸಂಭಾವನೆಯನ್ನು ಹೆಚ್ಚಿಸಿದರೂ ಅದು ಏರುತ್ತಿರುವ ಬೆಲೆಗೆ ಎಷ್ಟೂ ಸಾಟಿಯಾಗಿರುವುದಿಲ್ಲ. ಇಂತಹ ದುಡಿಮೆಗಾರರು ಕೂಲಿ ಹಾಗು ಅನುಭೋಗದ ಅಂತರವನ್ನು ಕಡಿಮೆ ಮಾಡಲು ಅನೇಕ ಮನೆಗಳಲ್ಲಿ ದುಡಿಯುತ್ತಿದ್ದಾರೆ. ದಿನದ ೧೨ ಘಂಟೆಗಳಿಗೂ ಅಧಿಕ ಸಮಯವನ್ನು ಹೊರಗೆ ದುಡಿಯುವುದರಲ್ಲಿಯೇ ಕಳೆಯುತ್ತಾರೆ. ಆದರೆ ಸಂಸಾರ ನಿರ್ವಹಣೆ ಹಾಗು ಹೊರಗಿನ ದುಡಿಮೆಗಳೆರಡನ್ನು ನಿಭಾಯಿಸಲು ಆಗದೇ ಹೋದಾಗ ತಮ್ಮ ಚಿಕ್ಕ ಮಕ್ಕಳ ಸಹಾಯ ಪಡೆಯುತ್ತಾರೆ. ಹೀಗೆ ಹೆಣ್ಣು ಮಕ್ಕಳು ಎಂಟು-ಒಂಭತ್ತು ವರ್ಷಗಳಿಂದಲೇ ದುಡಿಯಲು ಪ್ರಾರಂಭಿಸುತ್ತಾರೆ. ಸಣ್ಣ ಮಕ್ಕಳನ್ನು ಅಕ್ಕಪಕ್ಕದ ಮನೆಯಲ್ಲಿ ಬಿಟ್ಟು ಹೋಗುತ್ತಾರೆ. ಕೋಲ್ಕತ್ತದ ಕೊಳಗೇರಿಯಲ್ಲಿ ಒಬ್ಬ ಮಹಿಳೆ ತನ್ನ ಮಗುವನ್ನು ಮರಕ್ಕೆ ಕಟ್ಟಿಹಾಕಿದ ದೃಶ್ಯವನ್ನು ಇಲ್ಲಿ ವಿವರಿಸಲಾಗಿದೆ. ಕಂಕುಳಲ್ಲಿ ಮಗುವನ್ನು ಇಟ್ಟುಕೊಂಡು ಕೆಲಸಕ್ಕೆ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಬಡತನ ಅಪೌಷ್ಟಿಕತೆಯಿಂದ ಮಹಿಳೆಯರು ಬಳಲುತ್ತಿದ್ದಾರೆ. ಇಂತಹ ಜನರ ಬದುಕನ್ನು ಹಸನಗೊಳಿಸಲು ಅವರ ಮಕ್ಕಳಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಸಮಿತಿ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಪಾರ್ವತಿ ರಘುರಾಮ್(೧೯೯೯) ಅವರು ಭಾರತದಲ್ಲಿ ಮನೆಗೆಲಸದ ದುಡಿಮೆಯು ಮಹಿಳೆಯರಿಗೆ ಹೊಂದಾಣಿಕೆಯಾಗುವ ಕೆಲಸವಾಗಿದೆ. ಈ ಕೆಲಸಕ್ಕೆ ಹೆಚ್ಚಿನ ಆದಾನಗಳು ಬೇಕಾಗಿರುವುದಿಲ್ಲವಾದುದರಿಂದ ಯಾವ ಶ್ರಮವಿಲ್ಲದೇ ಈ ಕೆಲಸ ಲಭ್ಯವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮನೆಗೆಲಸದ ಮಹಿಳೆಯರ ಸಮಸ್ಯೆಗಳ ವಿಶ್ಲೇಷಣೆ ನಡೆಸಿದ ಜೋಸೆಫ್ ಕ್ಸೇವಿಯರ್(೨೦೦೯) ಅವರ ಅಭಿಪ್ರಾಯದಂತೆ ಗ್ರಾಮಗಳಲ್ಲಿ ಮಹಿಳೆಯರು ಕೃಷಿ ಹಾಗು ಇತರೆ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಪಟ್ಟಣದ ಮಹಿಳೆಯರು ಸಾಮಾನ್ಯವಾಗಿ ಬೇರೆಯವರ ಮನೆಗಳಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದ ಮಹಿಳೆಯರು ಕೃಷಿಯಿಂದ ತಮಗೆ ಯಾವ ರೀತಿಯ ಸಹಾಯ ಸಿಗದೇ ಉದ್ಯೋಗ ವಂಚಿತರಾಗಿ ಉದ್ಯೋಗವನ್ನರಸುತ್ತ ಪಟ್ಟಣಕ್ಕೆ ಬರುತ್ತಾರೆ. ಪಟ್ಟಣದಲ್ಲಿಯೂ ದೈಹಿಕವಾದ ಹಾಗು ಮಾನಸಿಕವಾದ ಕಿರುಕುಳಕ್ಕೆ ಬಲಿಯಾಗುತ್ತಾರೆ. ಅಲ್ಲದೇ ಅತಿಯಾದ ಕೆಲಸದ ಹೊರೆ. ಆಹಾರದ ಕೊರತೆ ಹಾಗು ವೇತನ ಕೊಡುವಲ್ಲಿ ಆಗುವ ವಿಳಂಬ, ಅನವಶ್ಯಕವಾಗಿ ತಪ್ಪಿತಸ್ಥರನ್ನಾಗಿ ಮಾಡುವುದು, ವಿಶ್ರಾಂತಿಯಿಲ್ಲದ ಅವಧಿಗಿಂತ ಹೆಚ್ಚಿನ ದುಡಿಮೆಯು ಮಹಿಳೆಯರನ್ನು ದುರ್ಬಲರನ್ನಾಗಿ ಮಾಡುತ್ತಿದೆ. ಪ್ರಜಾಪ್ರಭುತ್ವ ಸರ್ಕಾರವು ಸಮಾನತೆಯ ಹಕ್ಕನ್ನು ಎಲ್ಲಾ ಜನರಿಗೆ ನೀಡಿದ್ದರೂ ಅದು ಕೆಳವರ್ಗದ ಜನರಿಗೆ ತಲುಪುವಲ್ಲಿ ಅಡೆತಡೆಯಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಜೀವನ ನಿರ್ವಹಣೆಗಾಗಿ ಮನೆಗೆಲಸದಲ್ಲಿ ತೊಡಗಿದ ಮಹಿಳೆಯರು ಹೇಗೆ ಶೋಷಣೆಗೆ ಒಳಗಾಗಿದ್ದಾರೆ ಎಂಬ ವಿಷಯವನ್ನು ಡಾ.ವಿಲಿಯಮ್ ಧರ್ಮರಾಜ್(೨೦೦೯) ಅವರು ಈ ರೀತಿಯಾಗಿ ವಿವರಿಸಿದ್ದಾರೆ. ಲಿಂಗಸಂಬಂಧಿ ತಾರತಮ್ಯವನ್ನೊಳಗೊಂಡ ಸಮಾಜದಲ್ಲಿ ಕೆಲವು ವಿಭಾಗದ ಜನ ದುರದೃಷ್ಟವಶಾತ್ ಕೆಳಮಟ್ಟದ ಸ್ಥಾನಮಾನವನ್ನು ಹೊಂದುವುದು ಸಹಜ. ನಮ್ಮ ಸಂವಿಧಾನವು ಇಂತಹ ಜನರ ಏಳಿಗೆಗಾಗಿಯೇ ಕೆಲವು ಕಾನೂನುಗಳನ್ನು ಜಾರಿಗೆ ತಂದರೂ, ಅದು ಕೆಳವರ್ಗದ ಜನರನ್ನು ತಲುಪಲು ಸಾಧ್ಯವಾಗಿಲ್ಲ. ಅವರು ಜೀವನೋಪಾಯಕ್ಕಾಗಿ ಹೋರಾಟ ಮಾಡುವ ಪರಿಸ್ಥಿತಿ ಎದುರಾಗಿದೆ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಮನೆಗೆಲಸ ಮಾಡುವ ಮಹಿಳೆಯರ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆಯೂ ಇಲ್ಲದೇ ಸಮಾಜದಲ್ಲಿ ಶೋಷಣೆಗೆ ಒಳಗಾದ ದುಡಿಮೆಗಾರರಾಗಿದ್ದಾರೆ. ಮೆನೆಗೆಲಸದ ಮಹಿಳೆಯರು ಸಾಮಾನ್ಯವಾಗಿ ಮಾನವ ಹಕ್ಕುಗಳಿಂದ ವಂಚಿತರಾಗಿರುವುದಲ್ಲದೇ, ಜೀವನದ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಕನಿಷ್ಠ ಜೀವನ ಮಟ್ಟ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ಇಂತಹ ಕೆಲಸದಲ್ಲಿ ತೊಡಗಿರುವ ಜನರು ಹೋರಾಟ ಮನೋಭಾವವನ್ನೇ ಮರೆತವರಾಗಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ.

ಮನೆಗೆಲಸದ ಮಹಿಳೆಯರ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿದ ಸಿದ್ಧಾರ್ಥ ಸರ್ಕಾರ್(೨೦೦೫) ಅವರೂ ಕೂಡ ಮನೆಗೆಲಸದ ಮಹಿಳೆಯರು ಸಮಾಜದಲ್ಲಿ ಅತೀ ಕೆಳವರ್ಗಕ್ಕೆ ಸೇರಿದವರಾಗಿದ್ದಾರೆಂದು ಅಭಿಪ್ರಾಯ ಪಡುತ್ತಾರೆ.

ಮಹಿಳೆಯರು ತಮ್ಮ ಮನೆಯಲ್ಲಿಯೇ ನಿರ್ವಹಿಸುವ ಕೆಲಸವು ದೃಶ್ಯಗೋಚರವಲ್ಲದ ವೇತನ ರಹಿತ ದುಡಿಮೆಯಾಗಿದ್ದು, ಬೇರೆಯವರ ಮನೆಯಲ್ಲಿ ಒಪ್ಪಿಕೊಂಡ ವೇತನಕ್ಕೇ ದುಡಿಯುವುದು ದೃಶ್ಯಗೋಚರ ಹಾಗು ವೇತನಸಹಿತ ದುಡಿಮೆಯಾಗಿದೆ. ಅಮೇರಿಕಾ ರಾಷ್ಟ್ರಗಳ ೧೯೯೧ರ ವರದಿಯ ಪ್ರಕಾರ ಮನೆಗೆಲಸದ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗಲು ಎರಡು ಕಾರಣಗಳಿವೆ. ಏನೆಂದರೆ ಪುರುಷರು ಮನೆಯೊಳಗಿನ ದುಡಿಮೆಯಲ್ಲಿ ಕಡಿಮೆ ವೇಳೆಯನ್ನು ಉಪಯೋಗಿಸುತ್ತಾರೆ. ಇದರಿಂದ ಮನೆಯ ಎಲ್ಲಾ ಜವಾಬ್ದಾರಿಯು ಹೆಣ್ಣು ಮಕ್ಕಳ ಹೆಗಲ ಮೇಲೆಯೇ ಬೀಳುತ್ತದೆ. ಅಲ್ಲದೇ ಮನೆಯೊಡತಿಯರು ಯಾವುದೇ ಉದ್ಯೋಗದಲ್ಲಿ ನಿರತರಾಗಿದ್ದರೆ, ಮನೆಗೆಲಸವನ್ನು ನಿಭಾಯಿಸಲು ಕೂಲಿಯನ್ನು ಕೊಟ್ಟು ಬೇರೆ ಕೆಲಸದವರನ್ನು ನೇಮಿಸಿಕೊಳ್ಳಬೇಕಾಗುತ್ತದೆ,

ಮನೆಗೆಲಸದ ದುಡಿಮೆಯಲ್ಲಿಯೂ ಜಾತಿ ಭೂತವು ಬೆಂಬಿಡದೇ ಕಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಸಾಮಾನ್ಯವಾಗಿ ಕೆಳವರ್ಗದ ಜನರು ಕೌಶಲ್ಯಯುತವಾದ ಕೆಲಸಗಳಿಗೆ ನೇಮಕ ವಾಗುವುದಿಲ್ಲ ಅಲ್ಲದೇ ಮೇಲ್ಜಾತಿಗೆ ಸೇರಿದ ಉದ್ಯೋಗದಾತರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಕೆಲಸಗಾರರನ್ನು ಮನೆಯೊಳಗೆ ಪ್ರವೇಶಿಸಲು ಬಿಡುವುದಿಲ್ಲ ಎಂಬ ವಿಚಾರವನ್ನು ಬಹಿರಂಗ ಪಡಿಸಿದ್ದಾರೆ.

ಮನೆಗೆಲಸದ ಮಹಿಳೆಯರ ಬಗ್ಗೆ ವಿಶೇಷ ಅಧ್ಯಯನವನ್ನು ಕೈಗೊಂಡಿರುವ ವನೀತಾ ಸಿಂಗ್ (೨೦೦೭) ಅವರ ಪ್ರಕಾರ ಮನೆಯೊಡೆಯರು ತಮ್ಮ ದೈನಂದಿನ ಕೆಲಸದ ಹೊರೆಯನ್ನು ಮನೆಗೆಲಸದ ಮಹಿಳೆಯರ ಮೇಲೆ ಹಾಕಿ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ. ಮನೆಗೆಲಸದ ದುಡಿಮೆಯಲ್ಲಿ ಎರಡು ವಿಧಗಳಿವೆ. ಅವು ಯಾವುವೆಂದರೆ ಅರೆಕಾಲಿಕ ಕೆಲಸ ಹಾಗು ಪೂರ್ಣಕಾಲಿಕ ಕೆಲಸ. ಅರೆಕಾಲಿಕ ಕೆಲಸವೆಂದರೆ ಮಹಿಳೆಯರು ನಿಗಧಿತ ಸಮಯದಲ್ಲಿ ಒಪ್ಪಿಕೊಂಡ ಮನೆಯ ಕೆಲಸವನ್ನು ಮುಗಿಸಿ ಮನೆಗೆ ತೆರಳುತ್ತಾರೆ. ಪೂರ್ಣಾವಧಿಯ ಕೆಲಸಗಾರರು ತಮ್ಮ ಮಾಲೀಕರ ಮನೆಯಲ್ಲಿಯೇ ಇದ್ದು ಹಗಲು ರಾತ್ರಿ ಒಡೆಯರು ಹೇಳಿದ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ.

ಮನೆಗೆಲಸದ ದುಡಿಮೆಗಾರರು ಸಾಮಾನ್ಯವಾಗಿ ಹಿಂದುಳಿದ ಜಾತಿ ಹಾಗು ಪಂಗಡಗಳಿಗೆ ಸೇರಿದವರಾಗಿದ್ದಾರೆ. ಕೆಲವೊಮ್ಮೆ ಮನೆ ಮಾಲೀಕರ ಜಾತಿಗೆ ಸೇರಿದ್ದರೂ ಆರ್ಥಿಕವಾಗಿ ಸಬಲರಾಗದ ಕಾರಣ ಮನೆಗೆಲಸದಂತಹ ದುಡಿಮೆಯಲ್ಲಿ ತೊಡಗಿರುತ್ತಾರೆ. ಅಲ್ಲದೇ ಕೌಟುಂಬಿಕ ಪರಿಸ್ಥಿತಿಗಳು ಕೆಲವೊಮ್ಮೆ ಇಂತಹ ಕೆಲಸದಲ್ಲಿ ತೊಡಗಲು ಕಾರಣವಾಗುತ್ತವೆ. ಏಣಿಶ್ರೇಣಿಗಳಿಂದ ಕೂಡಿದ ಸಮಾಜದಲ್ಲಿ ಮಹಿಳೆಯರ ಸ್ಥಿತಿ ತೀರಾ ಕೆಳಮಟ್ಟದ್ದಾಗಿರುತ್ತದೆ. ಈ ಕೆಲಸದಲ್ಲಿ ಮೇಲ್ದರ್ಜೆಗೇರುವ ಅವಕಾಶಗಳಿರುವುದಿಲ್ಲ. ಮನೆಗೆಲಸದ ದುಡಿಮೆಗಾರರು ಎದುರಿಸುತ್ತಿರುವ ಬಡತನಕ್ಕೆ ಪ್ರಮುಖ ಕಾರಣ ಕಡಿಮೆ ಕೂಲಿ. ಈ ಕಾರಣದಿಂದ ದುಡಿಮೆಗಾರರು ಬಡತನದ ವಿಷವರ್ತುಲದಲ್ಲಿ ಸಿಕ್ಕಿ ಹಾಕಿಕೊಂಡು ಸಾಲಗಾರರಾಗ ಬೇಕಾಗುತ್ತದೆ. ಇವರು ಉಳಿತಾಯ ಮಾಡುವ ಸ್ಥಿತಿಯಲ್ಲಿಯೂ ಇರುವುದಿಲ್ಲ.

ಮನೆಗೆಲಸದ ದುಡಿಮೆಗಾರರು ಹೊಸ ಆರ್ಥಿಕ ನೀತಿ (೧೯೯೧) ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮ, ಉದಾರೀಕರಣ ನೀತಿ, ಜಾಗತೀಕರಣ ನೀತಿಯಿಂದ ಫಲಾನುಭವಿಗಳಾಗಿರುವುದಿಲ್ಲ.

ಅಧಿಕ ಸಂಖ್ಯೆಯ ಜನರು ಶ್ರಮದ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದು ತಮ್ಮ ಆಯ್ಕೆಯಿಂದಲ್ಲ. ತಮ್ಮ ಕುಟುಂಬದ ಅವಶ್ಯಕತೆಯಿಂದ ಮಾತ್ರ ಮನೆಗೆಲಸದ ಮಹಿಳೆಯರು ಅಸಂಘಟಿತ ವಲಯದಲ್ಲಿಯೇ ಅತೀ ಕೆಳ ದರ್ಜೆಯ ದುಡಿಮೆಗಾರರಾಗಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಲಿಂಗಾಧಾರಿತ ಶ್ರಮವಿಭಜನೆ ಹಾಗು ಕಾರ್ಮಿಕ ಮಾರುಕಟ್ಟೆಯ ಪ್ರತ್ಯೇಕತೆ, ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಮನೆಗೆಲಸವು ಕಡಿಮೆ ಕೂಲಿಯ ಕೆಲಸವೆಂದೇ ಪರಿಗಣಿಸಲ್ಪಟ್ಟಿದೆ.

ಮನೆಗೆಲಸದ ದುಡಿಮೆಗಾರರಿಗೆ ವೃತ್ತಿಯಲ್ಲಿ ಗೌರವವನ್ನು ತಂದು ಕೊಡಲು ಹಾಗು ಸಂಘಟನೆಯ ಮೂಲಕ ಅವರ ಸ್ಥಾನಮಾನವನ್ನು ಹೆಚ್ಚಿಸಲು ಪರಿಣಾಮಕಾರಿ ಶಾಸನವನ್ನು ಜಾರಿಗೆ ತರುವ ಅಗತ್ಯವಿದೆ. ತನ್ಮೂಲಕ ಮನೆಗೆಲಸದ ದುಡಿಮೆಗಾರರನ್ನು ಉತ್ಪಾದಕ ಶಕ್ತಿ ಎಂದು ಗುರುತಿಸಬಹುದು ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಮೇಲೆ ಹೇಳಿದ ಎಲ್ಲಾ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಅಸಂಘಟಿತ ವಲಯವು ಸರ್ಕಾರದ ಹಾಗೂ ಸಂಘ ಸಂಸ್ಥೆಗಳ ಕೃಪಾಪೋಷಿತ ವಲಯ ಆಗಿರುವುದಿಲ್ಲ. ಆದರು ಸರ್ಕಾರದ ಆದಾಯಕ್ಕೆ ಬಹುಪಾಲು ಕೊಡುಗೆ ಸಲ್ಲಿಸುತ್ತಾ ಭಾರತದ ಬಡವರ್ಗದ ಜನತೆಗೆ ಆಸರೆಯಾಗಿದೆ ಎನ್ನುವುದಂತು ಸತ್ಯಸಂಗತಿಯಾಗಿದೆ. ಈ ವಿಚಾರವಾಗಿ ಅಸಂಘಟಿತ ವಲಯದಲ್ಲಿ ದುಡಿಯುವ ಕೆಲಸಗಾರರಿಗೆ ಸರಿಯಾದ ಪೋಷಣೆ, ರಕ್ಷಣೆ ಅಗತ್ಯದ ಮನಗಂಡ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ ಈ ಯೋಜನೆಗಳು ಅನಕ್ಷರಸ್ಥ ದುಡಿಮೆಗಾರರಿಗೆ ಅರ್ಥವಾಗುವುದು ಕಷ್ಟವಾಗಿದೆ. ಅಲ್ಲದೇ ಮನೆಗೆಲಸದ ದುಡಿಮೆಗಾರರ ಕುರಿತಾಗಿ ಯಾವ ಯೋಜನೆಗಳೂ ರೂಪಿತವಾಗಿರುವುದಿಲ್ಲ. ಈ ಕಾರಣದಿಂದ ಪ್ರಸ್ತುತ ಅಧ್ಯಯನದಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿಗತಿ ಅಧ್ಯಯನಕ್ಕೆ ಮಹತ್ವ ಕೊಡಲಾಗಿದೆ. ಮುಂದಿನ ಅಧ್ಯಾಯದಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬಳ್ಳಾರಿ ಜಿಲ್ಲೆಯ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಆರ್ಥಿಕತೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಸಂತೋಷ ಮರೋತ್ರ ಹಾಗೂ ಮೇರಿಯೋ ಬಿಗ್ಗೇರಿಯವರ 'ಏಶಿಯನ್ ಇನ್‌ಫಾರ್ಮಲ್ ವರ್ಕರ್ಸ್' ಕೃತಿಯ ಲೇಖನ ದಿ ಎಂಪಿರಿಕಲ್ ಕಾಂಟೆಕ್ಸ್ಟ್ ಅಂಡ್ ಥಿಯೊರಿಟಿಕಲ್ ಫ್ರೇಮ್ ವರ್ಕನ ಪು.ಸಂ ೩-ಳನ್ನು ಅಭ್ಯಸಿಸುವುದು.

೨. ಅಸಂಘಟಿತ ವಲಯದ ವೃತ್ತಿಗಳ ಕುರಿತು ವಿಸ್ತೃತವಾದ ಅಧ್ಯಯನಕ್ಕಾಗಿ 'ನ್ಯಾಷನಲ್ ಕಮಿಷನ್ ಆನ್ ಸೆಲ್ಫ್ ಎಂಪ್ಲಾಯಿಡ್ ವುಮೆನ್ ಅಂಡ್ ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್' (ಶ್ರಮಶಕ್ತಿ-೧೯೮೮) ವರದಿಯ 'ಗ್ರಿಂಡ್ ಆಫ್ ವರ್ಕ್' ಅಧ್ಯಾಯವನ್ನು ನೋಡುವುದು.

೩. ಮಹಿಳೆಯರ ದುಡಿಮೆಯು ಕೌಶಲ್ಯರಹಿತವಾದುದೆಂದೂ, ಕೆಳಸ್ತರದ ದುಡಿಮೆಯೆಂದೂ ಪರಿಗಣಿಸಿ ಅವಳ ಕೆಲಸಕ್ಕೆ ಕಡಿಮೆ ವೇತನವನ್ನು ಕೊಡಲಾಗುತ್ತದೆ ಎಂಬ ಸತ್ಯಾಂಶದ ಮೇಲೆ ಬೆಳಕು ಚೆಲ್ಲಿದವರು

ಎಸ್ತರ್ ಬೋಸರಪ್(೨೦೦೮). ಲೇಖಕರ 'ವುಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್' ಗ್ರಂಥದ ಪು.ಸಂ. ೯೫-೯೬ರಲ್ಲಿ ಹೆಚ್ಚಿನ ವಿವರಗಳನ್ನು ಕಾಣಬಹುದು.

೪. ಎಲಿಜಬೆತ್ ಹಿಲ್ (೨೦೧೦)ಅವರು ಔಪಚಾರಿಕ ಹಾಗೂ ಅನೌಪಚಾರಿಕ ವಲಯದ ವ್ಯತ್ಯಾಸಗಳನ್ನು 'ವರ್ಕರ್ ಐಡೆಂಟಿಟಿ ಏಜನ್ಸಿ ಅಂಡ್ ಎಕನಾಮಿಕ್ ಡೆವಲಪ್‌ಮೆಂಟ್' ಕೃತಿಯ ಪು.ಸಂ. ೮ ಹಾಗೂ ೧೩ರಲ್ಲಿ ವಿವರಿಸಿದ್ದಾರೆ.

೫. ಡಾ. ಅನಿತಾ ಆರ್ಯ (೨೦೦೦) ಅವರ 'ಇಂಡಿಯನ್ ವುಮೆನ್' ಕೃತಿಯಲ್ಲಿ ಭಾರತೀಯ ಮಹಿಳೆ ಅಸಂಘಟಿತ ವಲಯದಲ್ಲಿ ಹೇಗೆ ಜೀವನ ಕಂಡುಕೊಂಡಿದ್ದಾಳೆಂಬ ದಾರುಣ ಸತ್ಯದ ಕಲ್ಪನೆ ಸಿಗುತ್ತದೆ (ಪು.ಸಂ. ೧೭೫ರಿಂದ ೨೩೦).

೬. ಕುಟುಂಬದಲ್ಲಿ ಸ್ತ್ರೀಪುರುಷರು ನಿರ್ವಹಿಸಬೇಕಾದ ಜವಾಬ್ದಾರಿಗಳ ಕುರಿತಾಗಿ ವಿವರವಾದ ವಿಶ್ಲೇಷಣೆಯನ್ನು ನೀಡಿದವರು ರಾಮೇಶ್ವರಿ ಪಾಂಡ್ಯ (೨೦೦೮). ಲೇಖಕರ 'ವುಮೆನ್ ಇನ್ ಚೇಂಜಿಂಗ್ ಇಂಡಿಯಾ' ಗ್ರಂಥದ ಪು.ಸಂ ೫೯ ರಿಂದ ೬೨ರಲ್ಲಿ ಹೆಚ್ಚಿನ ವಿವರಗಳನ್ನು ಕಾಣಬಹುದು.

೭. ಆಲ್ವಾ ಮಿರ್ಡಾಲ್ (೧೯೫೬) ಅವರ 'ವುಮೆನ್ಸ್ ಟು ರೋಲ್ಸ್' ಕೃತಿಯಲ್ಲಿ ಮಹಿಳೆಯರ ಔದ್ಯೋಗಿಕ ಸಮಸ್ಯೆಗಳ ಕುರಿತಾಗಿ ವಿವರಣೆ ಇದೆ. (ಪು.ಸಂ. ೯೧ರಿಂದ ೯೪).

೮. ಕುಟುಂಬ ಹಂತದಲ್ಲಿಯೇ ಮಹಿಳಾ ತಾರತಮ್ಯ ಪ್ರಾರಂಭವಾಗುವ ಬಗೆ ಹಾಗೂ ಇದರಿಂದ ಹೆಣ್ಣು ಮಕ್ಕಳ ವೃತ್ತಿ ಜೀವನದ ಮೇಲಾಗುವ ಪರಿಣಾಮವನ್ನು ಅಧ್ಯಯನ ಮಾಡಲು ಮಾರ್ಥಾ ಸಿ. ನುಸ್‌ಬಾಮ್ (೨೦೦೦)ಅವರ ವುಮೆನ್ ಅಂಡ್ ಹ್ಯೂಮನ್ ಡೆವಲಪ್‌ಮೆಂಟ್ ಕೃತಿಯ ಪು.ಸಂ. ೬-೭ರಲ್ಲಿ ನೋಡಬಹುದು.

೯. ಅಸಂಘಟಿತ ವಲಯದ ದುಡಿಮೆಗಾರರು ಸಂಘಟಿತ ವಲಯದ ದುಡಿಮೆಗಾರರಿಗಿಂತ ಹೇಗೆ ವಿಭಿನ್ನವಾಗಿ ಕಾಣಲ್ಪಡುತ್ತಾರೆ ಎಂಬ ವಿಷಯದ ಅಧ್ಯಯನಕ್ಕಾಗಿ ಅಜಿತ್ ಕೆ. ಘೋಶ (೨೦೧೦)ಅವರ ಲೇಖನ 'ದಿ ಇಂಡಿಯನ್ ಜರ್ನಲ್ ಆಫ್ ಲೇಬರ್ ಎಕನಾಮಿಕ್ಸ್'ನ ಪು.ಸಂ. ೫೭೫ನ್ನು ನೋಡುವುದು.

೧೦. ಡಾ. ತ್ರಿಪಾಠಿ ಎಸ್.ಎನ್. (೨೦೦೩)ಅವರು ಭಾರತದಲ್ಲಿ ಹಾಗೂ ವಿಶ್ವದಲ್ಲಿ ಬಹುತೇಕ ಕುಟುಂಬಗಳು ಮಹಿಳೆಯರಿಂದಲೇ ನಡೆಯುತ್ತಿದ್ದಾಗ್ಯೂ ಮಾರುಕಟ್ಟೆಯ ತಾರತಮ್ಯ ಮಹಿಳೆಯ ಉದ್ಯೋಗದ ಮೇಲೆ ಪರಿಣಾಮ ಬೀರುವ ರೀತಿಯನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ. ಲೇಖಕರ ಕೃತಿ 'ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್' ಪು.ಸಂ. ೨-೩ರಲ್ಲಿ ಹೆಚ್ಚಿನ ವಿವರಗಳನ್ನು ನೋಡಬಹುದು.

೧೧. ಮಹಿಳೆಯರು ಔದ್ಯೋಗಿಕ ರಂಗದಲ್ಲಿ ಹಿನ್ನಡೆ ಅನುಭವಿಸಲು ಮೂರು ಕಾರಣಗಳನ್ನು ನೀಡಿ ಓದುಗರ ಗಮನ ಸೆಳೆದಿದ್ದಾರೆ. ಪಮೋಲ ಟಿ.ಎಸ್. ಹಾಗೂ ಅಲಕ್‌ಶರ್ಮಾ(೧೯೯೯)ಅವರ 'ಜಂಡರ್ ಅಂಡ ಎಂಪ್ಲಾಯಿಮೆಂಟ್' ಕೃತಿಯ ಪು.ಸಂ. ೨-೩ರಲ್ಲಿ ಹೆಚ್ಚಿನ ವಿವರಗಳನ್ನು ಗಮನಿಸುವುದು.

೧೨. WID,WAD,GAD ಸಿದ್ಧಾಂತಗಳ ವಿಮರ್ಶಾತ್ಮಕ ಲೇಖನಕ್ಕಾಗಿ ನಳಿನಿ ವಿಶ್ವನಾಥನ್(೧೯೯೭)ಅವರ ಕೃತಿ 'ದಿ ವುಮೆನ್ ಜೆಂಡರ್ ಅಂಡ್ ಡೆವೆಲಪ್‌ಮೆಂಟ್' ಕೃತಿಯ ಪು.ಸಂ. ೧೮ರಿಂದ ೨೩ನ್ನು ನೋಡುವುದು.

೧೩. ಮಹಿಳಾ ದುಡಿಮೆಯ ಅಗೋಚರತೆಯ ಹೆಚ್ಚಿನ ಅಧ್ಯಯನಕ್ಕಾಗಿ ಇಳಾಭಟ್(೧೯೮೭) ಅವರ ಕೃತಿ 'ಇನ್‌ವಿಜಿಬಿಲಿಟಿ ಆಫ್ ಹೋಮ್ ಬೇಸಡ್ ವರ್ಕ' ಲೇಖನದ ಪು.ಸಂ. ೨೯ರಿಂದ ೩೨ನ್ನು ನೋಡುವುದು.

೧೪. ಆರ್ಥಿಕತೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಗಳಿಂದ ಮಹಿಳೆ ಫಲಾನುಭಾವಿಯಾಗದೇ ಇರಲು ಕಾರಣಗಳನ್ನು ನೀಡಿರುತ್ತಾರೆ. ಊರ್ಸುಲಾ ಶರ್ಮಾ(೧೯೮೬)ಅವರ 'ವುಮೆನ್ ವರ್ಕ ಕ್ಲಾಸ್ ಅಂಡ್ ದಿ ಅರ್ಬನ್ ಹೌಸ್ ಹೋಲ್ಡ್' ಕೃತಿಯ ಪು.ಸಂ. ೧೧೯-೧೨೦ರಲ್ಲಿ ಅಗತ್ಯ ಮಾಹಿತಿ ಲಭ್ಯವಿದೆ.

೧೫. ರುಕ್ಮಿಣಿರಾವ್ ಹಾಗೂ ಸಾಬಾ ಹಸೇನ್(೧೯೮೭) ಅವರ ಲೇಖನದಲ್ಲಿ ಮಹಿಳಾ ಕಾರ್ಮಿಕರಲ್ಲಿ ಸಂಘಟನೆ ಕೊರತೆಯು ಮಾಲೀಕರ ಲಾಭಕ್ಕೆ ಹೇಗೆ ದಾರಿ ಮಾಡಿ ಕೊಡುತ್ತದೆ ಎಂಬ ವಿವರಣೆ ಇದೆ. 'ಇನ್‌ವಿಜಿಬಲ್ ಹ್ಯಾಂಡ್ಸ್' ಕೃತಿಯ ಪು.ಸಂ. ೫೭ರಲ್ಲಿ ಹೆಚ್ಚಿನ ಮಾಹಿತಿ ಲಭ್ಯವಿದೆ.

೧೬. ಶ್ರೀಲತಾ ಬಾಟ್ಲಿವಾಲಾ (೧೯೯೮) ಅವರು ಲಿಂಗಾಧಾರಿತ ಅಸಮಾನತೆಗೆ ಮಹಿಳೆ ಬಲಿಪಶುವಾಗಿರುವ ಬಗೆಯನ್ನು ತಮ್ಮ ಕೃತಿ 'ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ' ಪು.ಸಂ. ೧೫ರಲ್ಲಿ ವಿವರಿಸಿದ್ದಾರೆ.

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರ: ಜಿಲ್ಲಾ ಪರಿಚಯ

೩.೧. ಭೌಗೋಳಿಕ ಸನ್ನಿವೇಶ ಮತ್ತು ಪ್ರಾಕೃತಿಕ ಸಂಪತ್ತು

೩.೨. ಆಡಳಿತ ವ್ಯವಸ್ಥೆ

೩.೩. ಬಳ್ಳಾರಿ ಜಿಲ್ಲೆಯ ಜನಸಂಖ್ಯಾ ಮಾಹಿತಿ

೩.೪. ನಗರೀಕರಣದ ಪ್ರಮಾಣ

೩.೫. ಸಾಕ್ಷರತಾ ಪ್ರಮಾಣ

೩.೬. ಜಿಲ್ಲೆಯ ಶೈಕ್ಷಣಿಕ ಪ್ರಗತಿ

೩.೭. ದುಡಿಯುವ ವರ್ಗದ ಲಿಂಗಸಂಬಂಧಿ ಆಯಾಮಗಳು

೩.೮. ಜಿಲ್ಲೆಯ ಆದಾಯದ ಮಾಹಿತಿ

೩.೯. ಅಧ್ಯಯನ ಕ್ಷೇತ್ರ: ಹೊಸಪೇಟೆಯ ಸಂಕ್ಷಿಪ್ತ ಪರಿಚಯ

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರ : ಜಿಲ್ಲಾ ಪರಿಚಯ

ಈಗಾಗಲೇ ಪ್ರಸ್ತಾವನೆ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದಂತೆ ಪ್ರಸ್ತುತ ಅಧ್ಯಯನವು ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಕುರಿತಾಗಿದ್ದು, ಇಲ್ಲಿ ಮಹಿಳೆಯರು ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರಲು ಕಾರಣವಾದ ವಿಷಯಗಳನ್ನು ಪರಿಶೀಲಿಸಲಾಗಿದೆ.

'ಮಹಿಳಾ ಮನೆಗೆಲಸಗಾರರು' ಎಂಬ ವರ್ಗವು ನಗರ/ಪಟ್ಟಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ನಗರೀಕರಣಕ್ಕೂ ಮತ್ತು ಮಹಿಳಾ ಮನೆಗೆಲಸಗಾರರು ಎಂಬ ವರ್ಗ ರೂಪುಗೊಳ್ಳುವುದಕ್ಕೂ ಸಂಬಂಧವಿದೆ. ಗ್ರಾಮಗಳಲ್ಲಿ ಇಂತಹ ದುಡಿಮೆಗಾರರ ವರ್ಗವು ಕಂಡುಬರುವುದಿಲ್ಲ. ನಗರ ಪ್ರದೇಶಗಳಲ್ಲಿ ನೌಕರವರ್ಗ ಕುಟುಂಬಗಳಲ್ಲಿ ಮನೆಗೆಲಸಕ್ಕೆ ಮಹಿಳಾ ದುಡಿಮೆಗಾರರಿಗೆ ಬೇಡಿಕೆ ಇದೆ. ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ದುಡಿಯುವ 'ಕುಟುಂಬಗಳ ಸಂಖ್ಯೆ' ಹೆಚ್ಚಾಗುತ್ತಿರುವುದರಿಂದ ಮಹಿಳಾ ಮನೆಗೆಲಸಗಾರರ ಬೇಡಿಕೆ ಅಧಿಕವಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ನಗರ ವಾಸಿಗಳ ಪ್ರಮಾಣ ೨೦೧೧ರಲ್ಲಿ ಶೇ. ೩೮.೬೭ರಷ್ಟಿತ್ತು. ಆದರೆ ಹೊಸಪೇಟೆ ತಾಲೂಕಿನಲ್ಲಿ ನಗರ ಜನಸಂಖ್ಯಾ ಪ್ರಮಾಣ ಶೇ. ೫೮.೯೨ರಷ್ಟಿದೆ. ಕರ್ನಾಟಕದಲ್ಲಿ ನಗರ ಜನಸಂಖ್ಯೆ ಅತಿ ವೇಗವಾಗಿ ಬೆಳೆಯುತ್ತಿರುವ ತಾಲೂಕು ಎಂದರೆ ಹೊಸಪೇಟೆ ತಾಲೂಕು. ಬಳ್ಳಾರಿ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣ ಜಿಲ್ಲಾ ಸರಾಸರಿಗಿಂತ ಅಧಿಕವಿರುವ ಮೂರು ತಾಲೂಕುಗಳಲ್ಲಿ ಹೊಸಪೇಟೆ ತಾಲೂಕು ಒಂದಾಗಿದೆ.

ಸಾಕ್ಷರತಾ ಪ್ರಮಾಣದ ಏರಿಕೆ, ನಗರೀಕರಣದ ಪ್ರಭಾವ ಹಾಗೂ ವರಮಾನದ ಹೆಚ್ಚಳದಿಂದಾಗಿ ಜಿಲ್ಲೆಯಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಾರೆ. ಆದರೆ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರಗಳ ಒತ್ತಡದಿಂದಾಗಿ ಮಹಿಳೆ ಅಸಂಘಟಿತ ವಲಯಕ್ಕೆ ಸೀಮಿತವಾಗಿದ್ದಾಳೆ.

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮಹಿಳಾ ದುಡಿಮೆಗಾರರ ವರ್ಗ ರೂಪುಗೊಂಡ ಬಗೆಯನ್ನು ವಿವರಿಸುತ್ತಾ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ (ಶೇ. ೯೦ಕ್ಕಿಂತ ಅಧಿಕ) ಅಸಂಘಟಿತ ವಲಯಕ್ಕೆ ಸೀಮಿತವಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಹಾಗೂ ಅಧ್ಯಯನದ ಹಿನ್ನೆಲೆಯಾಗಿ ಜಿಲ್ಲೆಯ ಜನಸಂಖ್ಯೆ, ಸಾಕ್ಷರತಾ ಪ್ರಮಾಣ, ವರಮಾನದ ಬೆಳವಣಿಗೆಯನ್ನು ರಾಜ್ಯದ ಸ್ಥಿತಿಗತಿಗಳೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಮೇಲೆ ಹೇಳಿದ ಅಂಶಗಳ ಆಧಾರದಲ್ಲಿ ಜಿಲ್ಲೆಯಲ್ಲಿ ಅಸಂಘಟಿತ ವಲಯ ಹಾಗೂ ಮನೆಗೆಲಸದ ಮಹಿಳಾ ದುಡಿಮೆಗಾರರ ವರ್ಗ ರೂಪುಗೊಳ್ಳಲು ಕಾರಣವಾದ ಅಂಶಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

೩.೧: ಬಳ್ಳಾರಿಯ ಭೌಗೋಳಿಕ ಸನ್ನಿವೇಶ ಹಾಗೂ ಪ್ರಾಕೃತಿಕ ಸಂಪತ್ತು

ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ ೮೪೫೦ ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿರುತ್ತದೆ. ಹಾಗೂ ಕರ್ನಾಟಕದ ಪೂರ್ವಮಧ್ಯ ಗಡಿಯಲ್ಲಿ ಇದ್ದು, ಉತ್ತರದಲ್ಲಿ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳನ್ನು, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆಯನ್ನು, ಪಶ್ಚಿಮದಲ್ಲಿ ಧಾರವಾಡ, ಹಾವೇರಿ, ಗದಗ ಜಿಲ್ಲೆಗಳನ್ನು, ಆಂಧ್ರಪ್ರದೇಶದ ಅನಂತಪುರ ಹಾಗೂ ಕರ್ನೂಲು ಜಿಲ್ಲೆಗಳನ್ನು ಪೂರ್ವದಲ್ಲಿ ಹೊಂದಿದೆ. ಜಿಲ್ಲೆಯ ಪೂರ್ವಭಾಗದಲ್ಲಿ ದ್ವಿಭಾಷಾ ಸಂಸ್ಕೃತಿ ಜಾರಿಯಲ್ಲಿರುವುದು ಪ್ರಮುಖ ಸಂಗತಿಯಾಗಿದೆ.

ಬಳ್ಳಾರಿ ಜಿಲ್ಲೆಯ ಪ್ರಾಕೃತಿಕ ಸಂಪತ್ತಿನಲ್ಲಿ ಬೆಟ್ಟಗಳ ಶ್ರೇಣಿಗೆ ಸಿಂಹಪಾಲು ಸಂದರೆ, ಉಳಿದಭಾಗ ತುಂಗಭಧ್ರಾ ನದಿಗೆ ಸಂಬಂಧಿಸಿದೆ. ಹೊಸಪೇಟೆ, ಸಂಡೂರು, ತಾರಾನಗರ, ದೇವಗಿರಿ ಪ್ರದೇಶಗಳ ಬೆಟ್ಟಗಳಲ್ಲಿ ಖನಿಜ ನಿಕ್ಷೇಪಗಳಿದ್ದು, ಇದು ಅಂತರಾಷ್ಟ್ರೀಯ ಮಟ್ಟದ ಗುಣಾತ್ಮಕ ಮಾನ್ಯತೆಯನ್ನು ಪಡೆದಿದೆ. ಇನ್ನು ಹಂಪಿಯ ಸುತ್ತಲಿನ ಬೃಹದಾಕಾರದ ಬಂಡೆಗಳ ಬೆಟ್ಟಗಳು ತುಂಗಭದ್ರ ನದಿಯ ಇಕ್ಕೆಲಗಳಲ್ಲಿ ಕಂಗೊಳಿಸುವುದು ಸಹಜ ಸಂಪತ್ತಾಗಿವೆ. ಬೆಟ್ಟಪ್ರದೇಶಗಳ ಗಿರಿ–ಕಂದರಗಳಲ್ಲಿ ವಾಸಿಸುವ ಪ್ರಾಣಿಸಂಪತ್ತು, ಸಂರಕ್ಷಿತ ಕರಡಿಧಾಮ ಇವು ಜೈವಿಕ ಸಂಪತ್ತಿನ ಭಾಗವಾಗಿವೆ. ತುಂಗಭದ್ರಾ ನದಿಯಷ್ಟೇ ಅಲ್ಲದೇ ಹಗರಿ, ಚಿಕ್ಕಹಗರಿ, ಹಗರನೂರಹಳ್ಳ, ಬ್ಯಾಲ ಹುಣಸೇಹಳ್ಳ, ಗೌರೀಪುರಹಳ್ಳ, ನಾರಿಹಳ್ಳ, ಮಾದೀಹಳ್ಳ, ತೆಲಗೀಹಳ್ಳ, ಊರಹಳ್ಳ, ತಿಪ್ಪಾಪುರದಹಳ್ಳ ಮೊದಲಾದವುಗಳಿಂದ ಬಳ್ಳಾರಿಯ ಜಲಸಂಪತ್ತು ಸಮೃದ್ಧಗೊಂಡಿದೆ.

ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯಲ್ಲಿ ಹೇರಳ ಪ್ರಮಾಣದಲ್ಲಿ ದೊರೆಯುವ ಮ್ಯಾಂಗನೀಸ್, ಕಬ್ಬಿಣ ಅದಿರು ನಿಕ್ಷೇಪಗಳ ಉದ್ಯಮವು, ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತಿದ್ದು, ಜನಸಮುದಾಯದ ಆರೋಗ್ಯಕರ ಬದುಕಿನ ನೆಲೆಯಿಂದ ತುಂಬಾ ಆತಂಕಕಾರಿ ವಿಷಯವಾಗಿ ಹಲವಾರು ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ತುಂಗಭದ್ರಾ ಆಣೆಕಟ್ಟಿನ ಜಲವಿದ್ಯುತ್ ಸ್ಥಾವರಗಳು, ಕಾಲುವೆಗಳ ನೀರಾವರಿ ವ್ಯವಸ್ಥೆಯು ರೈತರ ಭೂಮಿಯನ್ನು ಹಸಿರನ್ನಾಗಿಸಿದೆ. ಗಣಿಗಾರಿಕೆ ಹಾಗೂ ನೀರಿನ ಉತ್ಪಾದನೆಗಳು ಜನರಿಗೆ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿವೆಯಾದರೂ ಪರಿಸರ ಮಾಲಿನ್ಯದಂತಹ ಸಮಸ್ಯೆಯನ್ನು ಸೃಷ್ಠಿ ಮಾಡಿ ಜನರ ಆರೋಗ್ಯಕರ ಬದುಕನ್ನು ಹಾಳು ಮಾಡುತ್ತಿವೆ ಎಂಬುದು ಡಾ.ಶಿವಾನಂದ ವಿರಕ್ತಮಠ ಅವರ ಅಭಿಪ್ರಾಯವಾಗಿದೆ.

೩.೨: ಆಡಳಿತ ವ್ಯವಸ್ಥೆ

ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಬಳ್ಳಾರಿಯು ಉತ್ತರ ಕರ್ನಾಟಕದ ಭಾಗಕ್ಕೆ ಸೇರುತ್ತದೆ. ಹಾಗೂ ಹೈದರಾಬಾದ್ ಕರ್ನಾಟಕದ ಒಂದು ಭಾಗವೂ ಆಗಿದೆ. ಗುಲ್ಬರ್ಗ ವಿಭಾಗದ ಆರು ಜಿಲ್ಲೆಗಳಲ್ಲಿ ಬಳ್ಳಾರಿ ಒಂದಾಗಿದೆ. ಆರು ಜಿಲ್ಲೆಗಳು ಯಾವುವೆಂದರೆ ಬಳ್ಳಾರಿ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮತ್ತು ಹೊಸದಾಗಿ ಸೇರ್ಪಡೆಗೊಂಡ ಜಿಲ್ಲೆ ಯಾದಗಿರಿ.

ಆಡಳಿತಾತ್ಮಕ ಅನುಕೂಲಕ್ಕಾಗಿ ಬಳ್ಳಾರಿ ಜಿಲ್ಲೆಯು ಏಳು ತಾಲೂಕುಗಳಾಗಿ ವಿಭಾಗಿಸಲ್ಪಟ್ಟಿದೆ. ಅವುಗಳೆಂದರೆ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು, ಹಡಗಲಿ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ. ಬಳ್ಳಾರಿಯು ಎರಡು ಕಂದಾಯ ಉಪವಿಭಾಗಗಳನ್ನು ಹೊಂದಿದೆ(ಬಳ್ಳಾರಿ ಮತ್ತು ಹೊಸಪೇಟೆ) ಹಾಗೂ ಒಂದು ಲೋಕಸಭಾ ಕ್ಷೇತ್ರವನ್ನು ಹೊಂದಿದೆ. ಬಳ್ಳಾರಿಯು ಒಂಭತ್ತು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಅವು ಯಾವುವೆಂದರೆ, ಬಳ್ಳಾರಿ ನಗರ, ಬಳ್ಳಾರಿ ಗ್ರಾಮಾಂತರ, ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹಡಗಲಿ, ಕೊಟ್ಟೂರು, ಸಿರುಗುಪ್ಪ ಹಾಗೂ ಕುರುಗೋಡು.

ಜಿಲ್ಲೆಯಲ್ಲಿ ಮೂರು ಹಂತದ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಪರಿಷತ್, ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತ್ (೭) ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯಿತಿಗಳು (೧೮೯)ಆಡಳಿತ ನಿರ್ವಹಿಸುತ್ತಿವೆ. ಗ್ರಾಮೀಣ ಭಾಗಕ್ಕೆ ಸೇರಿದ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಸ್ಥಳೀಯ ಸಂಸ್ಥೆಗಳು ನೋಡಿಕೊಂಡು ಹೋಗುತ್ತವೆ. ಜಿಲ್ಲೆಯಲ್ಲಿ ಒಟ್ಟು ೫೫೪ ಗ್ರಾಮಗಳಿವೆ.

೩.೩: ಬಳ್ಳಾರಿ ಜಿಲ್ಲೆಯ ಜನಸಂಖ್ಯಾ ಮಾಹಿತಿ

೨೦೧೧ರ ಜನಗಣತಿಯ ಪ್ರಕಾರ ಬಳ್ಳಾರಿ ಒಟ್ಟು ಜನಸಂಖ್ಯೆ ೨೪೫೨೫೯೫ ಆಗಿದ್ದು, ಇದರಲ್ಲಿ ೧೨೩೬೯೫೪ ಪುರುಷರು ಹಾಗೂ ೧೨೧೫೬೪೧ ಮಹಿಳೆಯರು ಸೇರಿದ್ದಾರೆ. ಬಳ್ಳಾರಿ ನಗರದ ಜನಸಂಖ್ಯೆ: ೯೨೦೨೩೯ ಆಗಿದ್ದು, ಅದರಲ್ಲಿ ೪೬೨೮೬೧ ಪುರುಷರನ್ನು ಹಾಗೂ ೪೫೭೩೭೮ ಮಹಿಳೆಯರನ್ನು ಒಳಗೊಂಡಿದೆ. ಗ್ರಾಮೀಣ ಭಾಗದ ಒಟ್ಟು ಜನಸಂಖ್ಯೆ ೧೫೩೨೩೫೬ ಆಗಿದ್ದು, ಇದರಲ್ಲಿ ೭೭೪೦೯೩ ಪುರುಷರು ಹಾಗೂ ೭೫೮೨೬೩ ಮಹಿಳೆಯರು ಸೇರಿದ್ದಾರೆ. ಗಮನಾರ್ಹ ಸಂಗತಿ ಎಂದರೆ ಜಿಲ್ಲೆಯ ಜನಸಾಂದ್ರತೆಯು ೨೯೦ ಆಗಿದ್ದು, ಇದು ೨೦೦೧ರ ಜನಸಾಂದ್ರತೆ ಗಾತ್ರಕ್ಕಿಂತ ಅಧಿಕವಿರುವುದು ಕಂಡು ಬರುತ್ತದೆ. ಬಳ್ಳಾರಿ ಜಿಲ್ಲೆಯು ಲಿಂಗಾನುಪಾತದಲ್ಲಿಯೂ ಅಂತರವನ್ನು ಕಾಯ್ದುಕೊಂಡು ಬಂದಿದೆ. ೨೦೦೧ರ ಜನಗಣತಿಯ ಪ್ರಕಾರ ಲಿಂಗಾನುಪಾತ ೯೬೯ ಆದರೆ ೨೦೧೧ರ ಜನಗಣತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಲಿಂಗಾನುಪಾತ ೯೮೩ ಆಗಿರುತ್ತದೆ. ದಶಕದ ಜನಸಂಖ್ಯಾ ಬೆಳವಣಿಗೆ ದರವು ೨೦.೯೯ ಆಗಿರುತ್ತದೆ.

ಕೋಷ್ಟಕ ೩.೧ರಲ್ಲಿ ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜನಸಂಖ್ಯೆ ಹಾಗೂ ದಶಕದ ಜನಸಂಖ್ಯೆ ಬೆಳವಣಿಗೆ ದರವನ್ನು ಗಮನಿಸಬಹುದು.

ಕೋಷ್ಟಕ ೩.೧: ಜನಸಂಖ್ಯೆ ಹಾಗೂ ಬೆಳವಣಿಗೆ ದರ

ತಾಲೂಕುಗಳು	ಜನಸಂಖ್ಯೆ (ಜನಸಂಖ್ಯೆ ಶೇಕಡಾವಾರು)		
	೨೦೦೧	೨೦೧೧	೨೦೦೧–೨೦೧೧
ಬಳ್ಳಾರಿ	೬೨೫೪೯೪	೭೭೦೯೨೯	೨೩.೨೫
ಹಡಗಲಿ	೧೬೮೧೧೮	೧೯೫೨೧೯	೧೬.೧೨
ಹಗರಿಬೊಮ್ಮನಹಳ್ಳಿ	೧೫೯೮೮೬	೧೮೮೨೩೮	೧೭.೭೩
ಹೊಸಪೇಟೆ	೩೭೪೯೪೯	೪೫೯೯೯೧	೨೨.೬೮
ಕೂಡ್ಲಿಗಿ	೨೭೨೧೮೩	೩೦೮೯೦೧	೧೩.೪೯
ಸಂಡೂರು	೧೯೧೧೬೬	೨೬೦೨೧೩	೩೬.೧೨
ಸಿರುಗುಪ್ಪ	೨೩೫೩೪೪	೨೬೯೧೦೪	೧೪.೩೪
ಬಳ್ಳಾರಿ ಜಿಲ್ಲೆ	೨೦೨೭೧೪೦	೨೪೫೨೫೯೫	೨೦.೯೯
ಕರ್ನಾಟಕ ರಾಜ್ಯ	೫೨೮೫೦೫೬೨	೬೧೦೯೫೨೯೭	೧೫.೬೦

ಮೂಲ: ೨೦೦೧ ಹಾಗೂ ೨೦೧೧ರ ಜನಗಣತಿ ಮಾಹಿತಿ

ಕೋಷ್ಟಕ ೩.೧ರಲ್ಲಿ ಬಳ್ಳಾರಿ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆ ದರವನ್ನು ಕಾಣಬಹುದು. ಗಮನಿಸಬಹುದಾದ ಅಂಶವೆಂದರೆ ರಾಜ್ಯದ ಜನಸಂಖ್ಯಾ ಬೆಳವಣಿಗೆ ದರಕ್ಕಿಂತ ಬಳ್ಳಾರಿ ಜಿಲ್ಲೆ ಹಾಗೂ ತಾಲೂಕುಗಳ ಜನಸಂಖ್ಯಾ ಬೆಳವಣಿಗೆ ದರ ಅಧಿಕವಿರುವುದು. ಈ ಕಾರಣದಿಂದಾಗಿ ಜಿಲ್ಲೆಯಲ್ಲಿ ಹಾಗೂ ಹೊಸಪೇಟೆ ತಾಲೂಕುಗಳಲ್ಲಿ ನಗರೀಕರಣದ ಲಕ್ಷಣಗಳು ಎದ್ದು ಕಾಣುತ್ತಿವೆ.

೩.೪: ನಗರೀಕರಣದ ಪ್ರಮಾಣ

ದೇಶವೊಂದರ ಗ್ರಾಮೀಣ–ನಗರ ಅನುಪಾತವು ಆ ದೇಶದ ಕೈಗಾರಿಕೀಕರಣ ಮಟ್ಟದ ಸೂಚಿಯಾಗಿರುತ್ತದೆ. ಕೈಗಾರಿಕೆಗಳು ಬೆಳೆದಂತೆ ನಗರ ಭಾಗದ ಜನರ ಸಂಖ್ಯೆಯು ಅಧಿಕವಾಗುತ್ತಾ ಹೋಗುತ್ತದೆ. ಜಿಲ್ಲೆಯಲ್ಲಿ ಸ್ಥಾಪಿತವಾದ ಕಾರ್ಖಾನೆಗಳಲ್ಲಿ ಉದ್ಯೋಗವನ್ನರಸಿ ವಲಸೆ ಬಂದ ಜನರು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಹೀಗೆ ಬಳ್ಳಾರಿ ಜಿಲ್ಲೆಯೂ ನಗರೀಕರಣದ ಪ್ರಭಾವಕ್ಕೊಳಗಾಗಿದೆ.

ಕೋಷ್ಟಕ ೩.೨ರಲ್ಲಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನಸಂಖ್ಯೆ ಹಾಗೂ ೨೦೦೧ ಹಾಗೂ ೨೦೧೧ನೇ ಸಾಲಿನ ಅಂದರೆ ಜಿಲ್ಲೆಯಲ್ಲಿ ದಶಕದ ಜನಸಂಖ್ಯಾ ಬೆಳವಣಿಗೆ ದರವನ್ನು ದಾಖಲಿಸಲಾಗಿದೆ.

ಕೋಷ್ಟಕ ೩.೨: ಗ್ರಾಮೀಣ ನಗರ ಜನಸಂಖ್ಯೆ

ತಾಲೂಕು	ಗ್ರಾಮೀಣ ಜನಸಂಖ್ಯೆ			ನಗರದ ಜನಸಂಖ್ಯೆ		
	೨೦೦೧	೨೦೧೧	ಬೆಳವಣಿಗೆದರ	೨೦೦೧	೨೦೧೧	ಬೆಳವಣಿಗೆದರ
ಬಳ್ಳಾರಿ	೩೦೮೭೨೮	೩೬೦೪೮೪	೧೬.೭೬	೩೧೬೭೬೬	೪೧೦೪೪೫	೨೯.೫೭
ಹಡಗಲಿ	೧೪೪೭೦೪	೧೬೭೨೫೨	೧೫.೫೮	೨೩೪೧೪	೨೭೯೬೭	೧೯.೪೪
ಹೆಚ್.ಬಿ.ಹಳ್ಳಿ	೧೫೯೮೮೬	೧೮೮೨೩೮	೧೭.೭೩	–	–	–
ಹೊಸಪೇಟೆ	೧೫೩೪೯೯	೧೮೮೯೬೫	೨೩.೧೦	೨೨೧೪೫೦	೨೭೧೦೨೬	೨೨.೩೯
ಕೂಡ್ಲಿಗಿ	೨೨೭೬೩೩	೨೫೫೯೩೨	೧೨.೪೩	೪೪೫೫೦	೫೨೯೬೯	೧೮.೯೯
ಸಂಡೂರು	೧೫೬೯೯೮	೧೮೧೦೯೭	೧೫.೩೪	೩೪೧೬೮	೭೯೧೧೬	೧೩೧.೫೫
ಸಿರುಗುಪ್ಪ	೧೬೮೮೪೨	೧೯೦೩೮೮	೧೨.೭೬	೬೬೫೦೨	೭೮೭೧೬	೧೮.೩೬
ಬಳ್ಳಾರಿ ಜಿಲ್ಲೆ	೧೩೨೦೨೯೦	೧೫೩೨೩೫೬	೧೬.೦೬	೭೦೬೮೫೦	೯೨೦೨೩೯	೩೦.೧೮

ಮೂಲ: ೨೦೦೧ ಹಾಗೂ ೨೦೧೧ರ ಜನಗಣತಿ ಮಾಹಿತಿ

ಕೋಷ್ಟಕದಲ್ಲಿ ದಾಖಲಿಸಿದ ಮಾಹಿತಿಯ ಪ್ರಕಾರ ನಗರ ಪ್ರದೇಶಗಳ ಜನಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿದೆ. ಅದರಲ್ಲೂ ಪ್ರಮುಖವಾಗಿ ಬಳ್ಳಾರಿ ತಾಲೂಕು, ಹೊಸಪೇಟೆ ತಾಲೂಕು, ಸಂಡೂರು ಹಾಗೂ ಬಳ್ಳಾರಿ ಜಿಲ್ಲೆಗಳ ನಗರ ಪ್ರದೇಶಗಳ ಜನಸಂಖ್ಯೆ ಹೆಚ್ಚಳ ಅಧಿಕ ಪ್ರಮಾಣದಲ್ಲಿರುವುದು ಗಮನಾರ್ಹ ಸಂಗತಿಯಾಗಿದೆ.

ನಗರ ಪ್ರದೇಶದಲ್ಲಿ ಉದ್ಯೋಗವನ್ನರಸಿ ಬಂದ ಜನರ ಸಂಖ್ಯೆಯು ಅಧಿಕವಾಗಿ ಕಂಡುಬರುತ್ತಿದೆ. ಗ್ರಾಮಗಳಲ್ಲಿಯ ಕೃಷಿಯ ಮೇಲಿನ ಅವಲಂಬನೆ ದಿನೇ ದಿನೇ ಕಡಿಮೆಯಾಗುತ್ತಿರುವುದು ನಗರ ಪ್ರದೇಶಗಳ ವಲಸೆಗೆ ಕಾರಣವಾಗಿದೆ.

ಕೋಷ್ಟಕ ೩.೩: ನಗರೀಕರಣದ ಪ್ರಮಾಣ ೨೦೦೧–೨೦೧೧

ತಾಲೂಕುಗಳು	ಜನಸಂಖ್ಯೆ –೨೦೦೧			ಜನಸಂಖ್ಯೆ –೨೦೧೧		
	ಗ್ರಾಮ	ನಗರ	ಒಟ್ಟು	ಗ್ರಾಮ	ನಗರ	ಒಟ್ಟು
ಬಳ್ಳಾರಿ	೪೯.೩೬	೫೦.೬೪	೧೦೦	೪೬.೭೬	೫೩.೨೪	೧೦೦
ಹಡಗಲಿ	೮೬.೦೭	೧೩.೯೩	೧೦೦	೮೫.೬೭	೧೪.೩೩	೧೦೦
ಹೆಚ್.ಬಿ.ಹಳ್ಳಿ	೧೦೦.೦೦	—	೧೦೦	೧೦೦.೦೦	—	೧೦೦
ಹೊಸಪೇಟೆ	೪೦.೯೪	೫೯.೦೬	೧೦೦	೪೧.೦೮	೫೮.೯೨	೧೦೦
ಕೂಡ್ಲಿಗಿ	೮೩.೬೩	೧೬.೩೭	೧೦೦	೮೨.೮೫	೧೭.೧೫	೧೦೦
ಸಂಡೂರು	೮೨.೧೩	೧೭.೮೭	೧೦೦	೬೯.೬೦	೩೦.೪೦	೧೦೦
ಸಿರುಗುಪ್ಪ	೭೧.೭೪	೨೮.೨೬	೧೦೦	೭೦.೭೫	೨೯.೨೫	೧೦೦
ಬಳ್ಳಾರಿ ಜಿಲ್ಲೆ	೬೫.೧೩	೩೪.೮೭	೧೦೦	೬೨.೪೮	೩೭.೫೨	೧೦೦

ಮೂಲ: ಜನಗಣತಿ ವರದಿ ೨೦೦೧ ಹಾಗೂ ೨೦೧೧.

ಈ ಕೋಷ್ಟಕದಲ್ಲಿ ದಾಖಲಿಸಿದ ಅಂಕಿಅಂಶಗಳನ್ನು ಗಮನಿಸಿದಾಗ ಪ್ರಮುಖವಾಗಿ ಬಳ್ಳಾರಿ ಹೊಸಪೇಟೆ ತಾಲೂಕುಗಳ ನಗರ ಪ್ರದೇಶಗಳ ಜನಸಂಖ್ಯೆ ಅಧಿಕವಿರುವುದು ಕಂಡುಬರುತ್ತದೆ.

ಕೋಷ್ಟಕ ೩.೪ರಲ್ಲಿ ನಗರೀಕರಣದ (೨೦೦೧ ಹಾಗೂ ೨೦೧೧ರ) ಪ್ರಮಾಣವನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕೋಷ್ಟಕ : ೩.೪ ನಗರೀಕರಣದ ತೌಲನಿಕ ಅಧ್ಯಯನ

ತಾಲೂಕುಗಳು	೨೦೦೧	೨೦೧೧
ಬಳ್ಳಾರಿ	೫೦.೬೪	೫೩.೨೪
ಹಡಗಲಿ	೧೩.೯೩	೧೪.೩೩
ಹಗರಿಬೊಮ್ಮನಹಳ್ಳಿ	--	--
ಹೊಸಪೇಟೆ	೫೯.೦೬	೫೮.೯೨
ಕೂಡ್ಲಿಗಿ	೧೬.೩೭	೧೭.೧೫
ಸಂಡೂರು	೧೭.೮೭	೩೦.೪೦
ಸಿರುಗುಪ್ಪ	೨೮.೨೬	೨೯.೨೫
ಬಳ್ಳಾರಿ ಜಿಲ್ಲೆ	೩೪.೮೭	೩೭.೫೨

ಮೂಲ: ಜನಗಣತಿ ವರದಿ ೨೦೦೧-೨೦೧೧

ಜನಸಂಖ್ಯೆ ಹೆಚ್ಚಳದೊಂದಿಗೆ ಸಾಕ್ಷರತಾ ದರದಲ್ಲಿಯೂ ಏರಿಕೆ ಕಂಡು ಬಂದಿರುವುದನ್ನು ಕೋಷ್ಟಕ ೩.೫ರಲ್ಲಿ ದಾಖಲಿಸಲಾಗಿದೆ.

೩.೫: ಸಾಕ್ಷರತಾ ಪ್ರಮಾಣ

ಕೋಷ್ಟಕ ೩.೫ : ಜಿಲ್ಲೆಯ ಸಾಕ್ಷರತಾ ಪ್ರಮಾಣ ೨೦೦೧-೨೦೧೧ (ಲಿಂಗವಾರು ಹಾಗೂ ತಾಲೂಕುವಾರು)

ತಾಲೂಕುಗಳು	೨೦೦೧ರ ಸಾಕ್ಷರತಾ ದರ			೨೦೧೧ರ ಸಾಕ್ಷರತಾ ದರ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಳ್ಳಾರಿ	೭೦.೮೦	೪೮.೨೦	೫೯.೭೦	೭೭.೩೮	೫೯.೭೭	೬೮.೬೧
ಹಡಗಲಿ	೭೨.೧೦	೪೮.೨೦	೬೦.೩೦	೮೦.೩೮	೬೧.೮೬	೭೧.೨೩
ಹಗರಿಬೊಮ್ಮನಹಳ್ಳಿ	೭೧.೮೦	೪೫.೨೦	೫೮.೧೦	೭೯.೪೫	೫೯.೯೦	೬೯.೭೭
ಹೊಸಪೇಟೆ	೭೧.೬೦	೫೦.೦೦	೬೦.೯೧	೭೮.೪೯	೬೧.೯೩	೭೫.೧೬
ಕೂಡ್ಲಿಗಿ	೭೨.೧೦	೪೬.೪೦	೫೯.೫೦	೭೮.೪೮	೫೯.೬೮	೬೯.೨೩
ಸಂಡೂರು	೬೫.೫೦	೪೦.೪೦	೫೩.೩೦	೭೬.೬೩	೫೬.೩೨	೬೬.೮೧
ಸಿರುಗುಪ್ಪ	೫೬.೯೦	೩೦.೩೦	೪೩.೬೦	೬೪.೨೬	೪೨.೪೦	೫೩.೨೬
ಬಳ್ಳಾರಿ ಜಿಲ್ಲೆ	೬೯.೨೦	೪೫.೩೦	೫೭.೪೦	೭೬.೬೪	೫೮.೦೯	೬೭.೪೩
ಕರ್ನಾಟಕ ರಾಜ್ಯ	೭೬.೦೯	೫೬.೮೭	೬೬.೬೪	೮೨.೪೭	೬೮.೦೮	೭೫.೩೬

ಮೂಲ: ೨೦೦೧ ಹಾಗೂ ೨೦೧೧ರ ಜನಗಣತಿ ವರದಿ

ಕೋಷ್ಟಕ ೩.೫ರ ಮಾಹಿತಿಯ ಪ್ರಕಾರ ೨೦೦೧-೨೦೧೧ರ ಪುರುಷ ಹಾಗೂ ಮಹಿಳೆಯರ ಸಾಕ್ಷರತಾ ದರವನ್ನು ಗಮನಿಸಿದಾಗ ದಶಕದ ಅವಧಿಯಲ್ಲಿ ಸಾಕ್ಷರತಾ ಪ್ರಮಾಣ ಅಧಿಕಗೊಂಡಿದೆಯಾದರೂ,

ಪುರುಷರ ಸಾಕ್ಷರತಾ ಪ್ರಮಾಣಕ್ಕೆ ಹೋಲಿಸಿದಾಗ ಮಹಿಳೆಯರ ಸಾಕ್ಷರತಾ ಪ್ರಮಾಣ ಅತಿ ಕಡಿಮೆ ಇರುವುದು ತಿಳಿದು ಬಂದಿದೆ. ಜಿಲ್ಲೆಯ ಸಾಕ್ಷರತಾ ದರವು ರಾಜ್ಯದ ಸಾಕ್ಷರತಾ ದರಕ್ಕಿಂತ ಕಡಿಮೆ ಇರುತ್ತದೆ. ತಾಲೂಕುವಾರು ಸಾಕ್ಷರತಾ ದರವು ಅತಿ ಹೆಚ್ಚು ಹೊಸಪೇಟೆ ತಾಲೂಕಿನದಾದರೆ ಅತೀ ಕಡಿಮೆ ಸಾಕ್ಷರತಾ ದರವು ಸಿರುಗುಪ್ಪದಲ್ಲಿ ಕಂಡು ಬರುತ್ತದೆ. ಮಹಿಳೆಯರ ಸಾಕ್ಷರತಾ ದರವೂ ಕೂಡ ರಾಜ್ಯದ ಮಹಿಳೆಯರ ಸಾಕ್ಷರತಾ ದರಕ್ಕಿಂತ ಅತಿ ಕಡಿಮೆ ಪ್ರಮಾಣದಲ್ಲಿದೆ. ತಾಲೂಕುವಾರು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ಹೊಸಪೇಟೆಯಲ್ಲಿ ಅಧಿಕ ಸಾಕ್ಷರರು ಶೇ. ೬೧.೯೩ ದಾಖಲಾದರೆ, ಹಡಗಲಿಯಲ್ಲಿ ಶೇ. ೬೧.೮೬ ಮಹಿಳಾ ಸಾಕ್ಷರರಿದ್ದಾರೆ.

ಆದರೆ ಮಹಿಳಾ ಹಾಗೂ ಪುರುಷರ ಸಾಕ್ಷರತಾ ಪ್ರಮಾಣ ಹಾಗೂ ಬೆಳವಣಿಗೆಯ ದರವನ್ನು ಗಮನಿಸಿದಾಗ ದಶಕದ ಅವಧಿಯಲ್ಲಿ ಮಹಿಳಾ ಸಾಕ್ಷರತೆಯಲ್ಲಿಯೇ ಅಧಿಕ ಬದಲಾವಣೆ ಕಂಡ ಬರುತ್ತಿದೆ.

ಕೋಷ್ಟಕ ೩.೬ರಲ್ಲಿ ದಶಕದ ಅವಧಿಯಲ್ಲಿ ಪುರುಷ ಹಾಗೂ ಮಹಿಳೆಯರ ಸಾಕ್ಷರತಾ ದರವನ್ನು ಗಮನಿಸಬಹುದು.

ಕೋಷ್ಟಕ ೩.೬: ಸಾಕ್ಷರತಾ ದರ

ಸಾಕ್ಷರತಾ ಗಳಿಕೆ. Gain in Literature

ತಾಲೂಕುಗಳು	ಪುರುಷರು			ಮಹಿಳೆಯರು		
	೨೦೦೧	೨೦೧೧	ಗಳಿಕೆ	೨೦೦೧	೨೦೧೧	ಗಳಿಕೆ
ಬಳ್ಳಾರಿ	೭೦.೮೦	೭೭.೩೮	೬.೫೮	೪೮.೨೦	೫೯.೭೭	೧೧.೫೭
ಹಡಗಲಿ	೭೨.೧೦	೮೦.೩೮	೮.೨೮	೪೮.೨೦	೬೧.೮೬	೧೩.೬೬
ಹಗರಿಬೊಮ್ಮನಹಳ್ಳಿ	೭೧.೮೦	೭೯.೪೫	೭.೫೨	೪೫.೨೦	೫೯.೯೦	೧೪.೭೦
ಹೊಸಪೇಟೆ	೭೧.೬೦	೭೮.೪೯	೬.೮೯	೫೦.೦೦	೬೧.೯೩	೧೧.೯೩
ಕೂಡ್ಲಿಗಿ	೭೨.೧೦	೭೮.೪೮	೬.೩೮	೪೬.೪೦	೫೯.೬೮	೧೩.೨೮
ಸಂಡೂರು	೬೫.೫೦	೭೬.೬೩	೧೧.೧೩	೪೦.೪೦	೫೬.೩೨	೧೫.೯೨
ಸಿರುಗುಪ್ಪ	೫೬.೯೦	೬೪.೨೬	೭.೩೬	೩೦.೩೦	೪೨.೪೦	೧೨.೧೦
ಬಳ್ಳಾರಿ ಜಿಲ್ಲೆ	೬೯.೨೦	೭೬.೬೪	೭.೪೪	೪೫.೩೦	೫೮.೦೯	೧೨.೭೯
ಕರ್ನಾಟಕ ರಾಜ್ಯ	೭೬.೦೯	೮೨.೮೭	೬.೩೮	೫೬.೮೭	೬೮.೦೮	೧೧.೨೧

ಮೂಲ: ಜನಗಣತಿ ವರದಿ ೨೦೦೧ & ೨೦೧೧

ಮಹಿಳೆಯರು ಹೆಚ್ಚು ಹೆಚ್ಚು ಸಾಕ್ಷರರಾಗಿರುವುದು ಕೋಷ್ಟಕದಲ್ಲಿ ದಾಖಲಿಸಿದ ಅಂಕಿ–ಅಂಶಗಳಿಂದ ತಿಳಿದುಬರುತ್ತದೆ. ಗ್ರಾಮೀಣ ನಗರ ಸಾಕ್ಷರತಾ ಪ್ರಮಾಣವನ್ನು ಕೋಷ್ಟಕ ೩.೭ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೩.೭ : ಗ್ರಾಮೀಣ-ನಗರ ಸಾಕ್ಷರತಾ ಪ್ರಮಾಣ ೨೦೦೧-೨೦೧೧

ತಾಲೂಕುಗಳು	ಗ್ರಾಮೀಣ ಸಾಕ್ಷರತೆ			ನಗರ ಸಾಕ್ಷರತೆ		
	೨೦೦೧	೨೦೧೧	ಗಳಿಕೆ	೨೦೦೧	೨೦೧೧	ಗಳಿಕೆ
ಬಳ್ಳಾರಿ ತಾಲೂಕು	೪೪.೯೦	೫೭.೨೮	೧೨.೩೮	೭೩.೬೦	೭೮.೩೮	೪.೭೮
ಹಡಗಲಿ	೫೯.೦೦	೭೦.೨೨	೧೧.೨೨	೬೮.೪೦	೭೭.೧೭	೮.೭೭
ಹಗರಿಬೊಮ್ಮನಹಳ್ಳಿ	೫೮.೧೦	೬೯.೭೭	೧೧.೬೭	—	—	—
ಹೊಸಪೇಟೆ	೪೬.೯೦	೫೯.೭೫	೧೨.೮೫	೭೦.೩೦	೭೭.೨೨	೬.೯೨
ಕೂಡ್ಲಿಗಿ	೫೭.೩೦	೬೬.೮೨	೯.೫೨	೭೦.೮೦	೮೧.೨೧	೧೦.೪೧
ಸಂಡೂರು	೪೮.೬೦	೬೧.೮೮	೧೩.೨೮	೭೪.೩೦	೭೭.೮೪	೩.೫೪
ಸಿರುಗುಪ್ಪ	೪೦.೩೦	೪೯.೯೯	೯.೬೯	೫೧.೭೦	೬೧.೦೭	೯.೩೭
ಬಳ್ಳಾರಿ ಜಿಲ್ಲೆ	೫೦.೩೦	೬೧.೮೧	೧೧.೫೧	೭೦.೨೦	೭೬.೬೩	೬.೪೩

ಮೂಲ: ಜನಗಣತಿ ವರದಿ ೨೦೦೧ ಹಾಗೂ ೨೦೧೧

ಕೋಷ್ಟಕದ ಮಾಹಿತಿಯ ಪ್ರಕಾರ ನಗರದ ಸಾಕ್ಷರತಾ ಪ್ರಮಾಣದಲ್ಲಿಯೂ ಏರಿಕೆ ಕಂಡು ಬಂದಿರುತ್ತದೆ. ನಗರದ ಮಹಿಳೆಯರೂ ಕೂಡ ವಿದ್ಯಾವಂತರಾಗಿ ಉದ್ಯೋಗಸ್ಥರಾಗಿರುವುದರ ಕಾರಣ ದಿಂದಾಗಿ ಮಹಿಳಾ ಮನೆಗೆಲಸದ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗಿದೆ. ಹೀಗೆ ನಗರೀಕರಣ ಹಾಗೂ ಅಧಿಕಗೊಳ್ಳುತ್ತಿರುವ ಸಾಕ್ಷರತಾ ದರದಿಂದಾಗಿ ದುಡಿಮೆಗಾರರ ವರ್ಗ ರೂಪುಗೊಳ್ಳಲು ವೇದಿಕೆ ಒದಗಿಸಿದಂತಾಗಿದೆ.

೩.೬: ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಪ್ರಗತಿ

ಕರ್ನಾಟಕದಲ್ಲಿ ಪ್ರಸ್ತುತ ದಶಕವನ್ನು ರಚನಾತ್ಮಕ ಪ್ರಗತಿಪರ ಅಂದೋಲನ ಕಾಲವೆಂದು ಪರಿಗಣಿಸಬಹುದು. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ಹಾಗೂ ಅಕ್ಷರದಾಸೋಹ, ದಾಖಲಾತಿ ಆಂದೋಲನ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ, ಬೀದಿಯಿಂದ ಶಾಲೆಗೆ, ಬಾ ಬಾಲೆ ಶಾಲೆಗೆ, ಇವೇ ಮುಂತಾದ ಕೆಲವು ರಾಜ್ಯ ಸರ್ಕಾರಗಳ ವಿಶೇಷ ಯೋಜನೆಗಳ ಅಡಿಯಲ್ಲಿ ಜಿಲ್ಲೆಯು ಶೈಕ್ಷಣಿಕವಾಗಿಯೂ ಸಾಕಷ್ಟು ಪ್ರಗತಿ ಸಾಧಿಸುತ್ತಿದೆ. ಬಳ್ಳಾರಿ ಜಿಲ್ಲೆಯ ೨೦೧೧ರ ಶೈಕ್ಷಣಿಕ ವರ್ಷದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮಾಹಿತಿ ಈ ರೀತಿಯಾಗಿದೆ.

ಕೋಷ್ಟಕ ಸಂಖ್ಯೆ ೩.೮: ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು

ಕ್ರ.ಸಂ.	ಪ್ರಾಥಮಿಕ ಶಾಲೆಗಳ ವಿವರ	ಸಂಖ್ಯೆ
೦೧.	ಕಿರಿಯ ಪ್ರಾಥಮಿಕ ಶಾಲೆಗಳು	೫೫೪
೦೨.	ಹಿರಿಯ ಪ್ರಾಥಮಿಕ ಶಾಲೆಗಳು	೩೭೨
೦೩.	ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳು	೩೪೫
೦೪.	ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳು	೯೧
	ಒಟ್ಟು	೧೩೬೨

ಕೋಷ್ಟಕ ಸಂಖ್ಯೆ: ೩.೯ ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆಗಳು

ಕ್ರಸಂ.	ಪ್ರಾಥಮಿಕ ಶಾಲೆಗಳ ವಿವರ	ಸಂಖ್ಯೆ
೦೧	ಅನುದಾನಿತ ಪ್ರಾಥಮಿಕ ಶಾಲೆಗಳು	೫೯
೦೨.	ಅನುದಾನರಹಿತ ಕಿರಿಯಪ್ರಾಥಮಿಕ ಶಾಲೆಗಳು	೨೧೫
೦೩.	ಅನುದಾನರಹಿತ ಹಿರಿಯ ಪ್ರಾಥಮಿಕ ಶಾಲೆಗಳು	೨೨೯
	ಒಟ್ಟು	೫೦೩

ಮೂಲ: ಉಪನಿರ್ದೇಶಕರ ಕಾರ್ಯಾಲಯ ಸಾ.ಶಿ.ಇ. ಬಳ್ಳಾರಿ.

ಕೋಷ್ಟಕ ೩.೮ರ ಹಾಗೂ ೩.೯ರ ಮಾಹಿತಿಯಂತೆ ಜಿಲ್ಲೆಯ ತಾಲೂಕುವಾರು ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ೧೮೬೫ ಆಗಿರುತ್ತದೆ. ೨೦೧೧ರ ಶೈಕ್ಷಣಿಕ ವರ್ಷದ ಮಾಹಿತಿಯಂತೆ ಜಿಲ್ಲೆಯಲ್ಲಿ ಒಟ್ಟು ೧೩೬೨ ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ಇದರಲ್ಲಿ ೫೫೪ ಕಿರಿಯ ಪ್ರಾಥಮಿಕ ಶಾಲೆಗಳೂ, ೩೭ ಹಿರಿಯ ಪ್ರಾಥಮಿಕ ಶಾಲೆಗಳೂ, ೩೪೫ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳೂ ೯೧ ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಿವೆ.

೨೦೧೧ರ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯಲ್ಲಿ ೫೯ ಅನುದಾನಿತ ಪ್ರಾಥಮಿಕ ಶಾಲೆಗಳೂ, ೨೧೫ ಅನುದಾನರಹಿತ ಕಿರಿಯ ಪ್ರಾಥಮಿಕ ಶಾಲೆಗಳೂ ೨೨೯ ಅನುದಾನರಹಿತ ಹಿರಿಯ ಪ್ರಾಥಮಿಕ ಶಾಲೆಗಳು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಗುರಿ ಹೊಂದಿರುತ್ತವೆ.

ಪ್ರೌಢಶಾಲೆಗಳ ವಿವರ :

೨೦೧೧ರ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯಲ್ಲಿ ೧೬೧ ಸರ್ಕಾರಿ ಪ್ರೌಢಶಾಲೆಗಳಿದ್ದು, ಅದರಲ್ಲಿ ೩೭ ಪ್ರೌಢಶಾಲೆಗಳು ನಗರ ಪ್ರದೇಶದಲ್ಲಿದ್ದರೆ, ೧೨೪ ಪ್ರೌಢಶಾಲೆಗಳು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪನೆಗೊಂಡಿವೆ. ಒಟ್ಟು ೭೯ ಅನುದಾನಿತ ಪ್ರೌಢಶಾಲೆಗಳಿದ್ದು, ಅದರಲ್ಲಿ ೩೩ ನಗರ ಪ್ರದೇಶಗಳಲ್ಲಿಯೂ ೪೬ ಗ್ರಾಮೀಣ ಭಾಗದಲ್ಲಿಯೂ ಕಂಡು ಬರುತ್ತವೆ. ಅನುದಾನರಹಿತ ಪ್ರೌಢಶಾಲೆಗಳ ಸಂಖ್ಯೆ ಒಟ್ಟು ೧೭೬ ಆಗಿದ್ದು, ಇದರಲ್ಲಿ ೧೧೩ ನಗರ ಪ್ರದೇಶದಲ್ಲಿಯೂ ೬೩ ಗ್ರಾಮೀಣ ಭಾಗದಲ್ಲಿಯೂ ಸ್ಥಾಪನೆಗೊಂಡಿವೆ. ಒಟ್ಟಾರೆಯಾಗಿ ಜಿಲ್ಲೆಯ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ೪೧೬ ಆಗಿರುತ್ತದೆ.

ಕೋಷ್ಟಕ: ೩.೧೦. ೨೦೧೧ನೇ ಶೈಕ್ಷಣಿಕ ಸಾಲಿನ ಪ.ಪಂಗಡಕ್ಕೆ ಸೇರಿದ ೧ ರಿಂದ ೧೦ನೇ ತರಗತಿಯ ಮಕ್ಕಳ ಸಂಖ್ಯೆ (ತರಗತಿವಾರು ಮತ್ತು ಲಿಂಗವಾರು)

ತರಗತಿ	ಗಂಡು	ಹೆಣ್ಣು	ಒಟ್ಟು
೧	೪೯೧೩	೪೨೫೧	೯೧೬೪
೨	೫೦೨೨	೪೫೮೫	೯೬೦೭
೩	೧೦೪೮೫	೪೩೮೩	೧೪೮೬೮
೪	೩೬೬೫	೪೩೭೮	೮೦೪೩
೫	೪೩೫೯	೪೬೨೧	೮೯೮೦
೬	೪೨೮೫	೩೬೫೧	೭೯೩೬
೭	೬೨೫೪	೫೬೦೨	೧೧೮೫೬
೮	೧೧೮೪	೧೦೫೫	೨೨೩೯
೯	೧೯೫೩	೧೭೪೬	೩೬೯೯
೧೦	೨೬೧೫	೨೨೩೩	೪೮೪೮
ಒಟ್ಟು	೪೪೭೩೫	೩೬೫೦೫	೮೧೨೪೦

ಮೂಲ: ಸಾ.ಶಿ. ಇಲಾಖೆ ಬಳ್ಳಾರಿ.

ಮೇಲಿನ ಕೋಷ್ಟಕದ ಮಾಹಿತಿಯಂತೆ ಒಂದನೇ ತರಗತಿಯಿಂದ ೧೦ನೇ ತರಗತಿಯವರೆಗಿನ ದಾಖಲಾತಿಯಲ್ಲಿ (೪ನೇ ಹಾಗೂ ೫ನೇ ತರಗತಿಯನ್ನು ಹೊರತುಪಡಿಸಿದರೆ) ವಿದ್ಯಾರ್ಥಿನಿಯರ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಗಿಂತ ಬಹಳ ಕಡಿಮೆ ಇರುತ್ತದೆ. ಒಟ್ಟು ೮೧೨೪೦ ಒಟ್ಟು ಪ.ಪಂ. ವಿದ್ಯಾರ್ಥಿಗಳು ದಾಖಲಾಗಿದ್ದು, ಇದರಲ್ಲಿ ೩೬೫೦೫ ವಿದ್ಯಾರ್ಥಿನಿಯರು ೪೪೭೩೫ ವಿದ್ಯಾರ್ಥಿಗಳೂ ಸೇರಿದ್ದಾರೆ.

ಕೋಷ್ಟಕ: ೩.೧೧. ೨೦೧೧ನೇ ಶೈಕ್ಷಣಿಕ ವರ್ಷದ ಪ.ಜಾ.ವಿದ್ಯಾರ್ಥಿಗಳ ಸಂಖ್ಯೆ (ಲಿಂಗವಾರು ಹಾಗೂ ತರಗತಿವಾರು)

ತರಗತಿ	ಗಂಡು	ಹೆಣ್ಣು	ಒಟ್ಟು
೧	೫೮೫೩	೬೪೩೯	೧೨೨೯೨
೨	೬೧೦೬	೭೦೪೫	೧೩೧೫೧
೩	೫೫೪೪	೬೭೬೯	೧೨೩೧೩
೪	೬೬೨೩	೬೮೯೬	೧೩೫೧೯
೫	೬೧೦೮	೬೭೯೧	೧೨೮೯೯
೬	೬೦೩೩	೫೧೮೪	೧೧೨೧೭
೭	೬೯೧೬	೫೭೨೩	೧೨೬೩೯
೮	೨೩೭೦	೨೨೭೮	೪೬೪೮
೯	೨೯೯೩	೨೭೪೭	೫೭೪೦
೧೦	೨೮೯೬	೨೧೪೬	೫೦೪೨
ಒಟ್ಟು	೫೧೪೪೨	೫೨೦೧೮	೧೦೩೪೬೦

ಮೂಲ: ಸಾ.ಶಿ.ಇಲಾಖೆ ಬಳ್ಳಾರಿ.

ಮೇಲಿನ ಕೋಷ್ಟಕದಲ್ಲಿ ದಾಖಲಿಸಿದ ಮಾಹಿತಿಯ ಪ್ರಕಾರ ಒಂದರಿಂದ ಐದನೆಯ ತರಗತಿಯ ವರೆಗಿನ ದಾಖಲಾತಿಯ ಪ್ರಕಾರ ವಿದ್ಯಾರ್ಥಿನಿಯರ ಸಂಖ್ಯೆಯೇ ಅಧಿಕವಿರುವುದು ಕಂಡು ಬಂದಿದೆ. ಆದರೆ ಆರನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ದಾಖಲಾತಿಯಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಕಡಿಮೆ ಇರುವ ಸಂಗತಿ ತಿಳಿದುಬಂದಿದೆ.

ಕೋಷ್ಟಕ: ೩.೧೨. ೨೦೧೧ನೇ ಸಾಲಿನ ಎಲ್ಲಾ ಕೋಮುಗಳ ದಾಖಲಾತಿ ವಿವರ

(ಲಿಂಗವಾರು ಹಾಗೂ ತರಗತಿವಾರು)

ತರಗತಿ	ಗಂಡು	ಹೆಣ್ಣು	ಒಟ್ಟು
೧	೨೮೪೦೪	೨೩೧೬೭	೫೧೫೭೧
೨	೩೦೮೦೪	೨೧೨೮೯	೫೨೦೯೩
೩	೨೭೭೧೮	೨೩೮೦೮	೫೧೫೨೬
೪	೨೬೮೩೨	೨೩೫೧೪	೫೦೩೪೬
೫	೨೮೧೩೫	೨೪೧೮೯	೫೨೩೨೪
೬	೨೪೧೫೩	೨೦೬೫೪	೪೪೮೦೭
೭	೨೭೬೯೮	೨೩೯೪೬	೫೧೬೪೪
೮	೧೩೬೪೪	೧೨೧೭೦	೨೫೮೧೪
೯	೧೭೩೯೨	೧೩೫೨೫	೩೦೯೧೭
೧೦	೧೪೪೨೩	೧೨೨೨೦	೨೬೬೪೩
ಒಟ್ಟು	೨೩೯೨೦೩	೧೯೮೪೮೨	೪೩೭೬೮೫

ಮೂಲ: ಸಾ.ಶಿ.ಇಲಾಖೆ ಬಳ್ಳಾರಿ.

ಕೋಷ್ಟಕ ೩.೧೨ರಲ್ಲಿ ದಾಖಲಿಸಿದ ಮಾಹಿತಿಯ ಪ್ರಕಾರ ೨೦೧೧ನೇ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯಲ್ಲಿ ೧೦ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: ೪೩೭೬೮೫ ಆಗಿದ್ದು, ಇದರಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ: ೧,೯೮,೪೮೨ ಆಗಿರುತ್ತದೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨,೩೯,೨೦೩ ಆಗಿರುತ್ತದೆ.

ಸರ್ಕಾರ ಸ್ತ್ರೀ ಶಿಕ್ಷಣಕ್ಕೆ ಒತ್ತುಕೊಟ್ಟು ಸರ್ವ ಶಿಕ್ಷಣ ಅಭಿಯಾನ, ಮಹಿಳಾ ಸಾಮಖ್ಯದಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದಾಗ್ಯೂ ವಿದ್ಯಾರ್ಥಿನಿಯರ ಸಂಖ್ಯೆ ವಿದ್ಯಾಭ್ಯಾಸದಲ್ಲಿ ಕಡಿಮೆ ಇರುವುದು ಕಂಡು ಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಕುಟುಂಬದ ಪರಿಸರ ಹಾಗೂ ಸಾಮಾಜಿಕ ಪರಿಸರ.

೩.೭ ದುಡಿಯುವ ವರ್ಗದ ಲಿಂಗಸಂಬಂಧಿ ಆಯಾಮಗಳು

ಬಳ್ಳಾರಿ ಜಿಲ್ಲೆಯ ದುಡಿಮೆಗಾರರನ್ನು ಸಾಗುವಳಿದಾರರು, ಕೃಷಿ ಕಾರ್ಮಿಕರು, ಸಣ್ಣಕಾರ್ಮಿಕರು, ಇತರ ಕಾರ್ಮಿಕರು ಎಂದು ವರ್ಗೀಕರಣ ಮಾಡಲಾಗಿದೆ. ಕೋಷ್ಟಕ ೩.೧೩ರಲ್ಲಿ ಬಳ್ಳಾರಿ ಜಿಲ್ಲೆಯ ದುಡಿಮೆಗಾರರ ತಾಲೂಕುವಾರು ವರ್ಗೀಕರಣವನ್ನು ದಾಖಲಿಸಲಾಗಿದೆ.

ಕೋಷ್ಟಕ ೩.೧೩ರ ಮಾಹಿತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ದುಡಿಮೆಗಾರರು ೧೧೧೬೮೮೦ ಆಗಿದ್ದು, ಇದರಲ್ಲಿ ೨೫೮೦೮೦ ಜನ ಸಾಗುವಳಿದಾರರಿದ್ದರೆ, ೪೦೬೯೨ರಷ್ಟು ಜನ ಕೃಷಿಕಾರ್ಮಿಕರಿದ್ದಾರೆ. ಕೋಷ್ಟಕ ೩.೧೪ರಲ್ಲಿ ಕೃಷಿ ಕ್ಷೇತ್ರದಲ್ಲಿ ದುಡಿಯುವ ಶ್ರಮಬಲದ ಮಾಹಿತಿಯನ್ನು ದಾಖಲಿಸಲಾಗಿದೆ.

ಕೋಷ್ಟಕ: ೩.೧೩. ದುಡಿಮೆಗಾರರ ವರ್ಗೀಕರಣ (ತಾಲೂಕುವಾರು)

ತಾಲೂಕುಗಳು	ಒಟ್ಟು ಕಾರ್ಮಿಕರು	ಸಾಗುವಳಿದಾರರು	ಕೃಷಿ ಕಾರ್ಮಿಕರು	ಸಣ್ಣ ಕಾರ್ಮಿಕರು	ಇತರ ಕಾರ್ಮಿಕರು	ಒಟ್ಟು ಕಾರ್ಮಿಕರು
ಬಳ್ಳಾರಿ	೩೩೭೨೭೨	೬೪೯೫೪	೯೩೨೩೮	೭೮೨೬	೧೭೧೨೫೪	೩೩೭೨೭೨
ಹಡಗಲಿ	೯೫೦೯೫	೨೦೫೦೧	೫೨೦೯೯	೨೫೯೫	೧೯೯೦೦	೯೫೦೯೫
ಹಗರಿಬೊಮ್ಮನಹಳ್ಳಿ	೯೪೮೬೨	೨೬೪೧೯	೪೬೯೭೭	೧೭೮೭	೧೯೬೭೯	೯೪೮೬೨
ಹೊಸಪೇಟೆ	೧೮೯೬೮೩	೨೬೬೬೦	೫೭೦೯೩	೩೪೩೫	೧೦೨೪೯೫	೧೮೯೬೮೩
ಕೂಡ್ಲಿಗಿ	೧೫೩೪೬೨	೫೬೫೨೯	೬೧೮೨೯	೩೮೫೦	೩೧೨೫೪	೧೫೩೪೬೨
ಸಂಡೂರು	೧೦೮೬೪೦	೨೬೮೩೯	೨೪೧೨೧	೧೮೭೦	೫೫೮೧೦	೧೦೮೬೪೦
ಸಿರುಗುಪ್ಪ	೧೩೭೮೬೬	೩೬೧೭೮	೭೦೭೩೫	೧೪೬೯	೨೯೪೮೪	೧೩೭೮೬೬
ಬಳ್ಳಾರಿ ಜಿಲ್ಲೆ	೧೧೧೬೮೮೦	೨೫೮೦೮೦	೪೦೬೦೯೨	೨೨೮೩೨	೪೨೯೮೭೬	೧೧೧೬೮೮೦
ಕರ್ನಾಟಕ ರಾಜ್ಯ	೨೭೮೭೨೫೯೭	೬೫೮೦೬೪೯	೭೧೫೫೯೬೩	೯೧೩೨೨೭	೧೩೨೨೨೭೫೮	೨೭೮೭೨೫೯೭

ಮೂಲ: ೨೦೧೧ರ ಜನಗಣತಿ ಮಾಹಿತಿ

ಕೋಷ್ಟಕ ೩.೧೪: ಬಳ್ಳಾರಿ ಜಿಲ್ಲೆಯ ಕೃಷಿಯಲ್ಲಿ ದುಡಿಮೆಗಾರರು (ಲಿಂಗವಾರು)

ತಾಲೂಕುಗಳು	ಒಟ್ಟು ದುಡಿಮೆಗಾರರು			ಕೃಷಿ ಸಾಗುವಳಿದಾರರು			ಕೃಷಿ ಕಾರ್ಮಿಕರು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಳ್ಳಾರಿ	೨೨೦೪೩೧	೧೧೬೮೪೧	೩೩೭೨೭೨	೪೧೫೦೬	೨೩೪೪೮	೬೪೯೫೪	೪೧೭೪೨	೫೧೪೯೬	೯೩೨೩೮
ಹಡಗಲಿ	೫೬೬೬೩	೩೮೪೩೨	೯೫೦೯೫	೧೭೧೩೧	೩೩೭೦	೨೦೫೦೧	೨೩೭೨೭	೨೮೩೭೨	೫೨೦೯೯
ಹಗರಿಬೊಮ್ಮನಹಳ್ಳಿ	೫೪೬೩೩	೪೦೨೨೯	೯೪೮೬೨	೨೦೬೪೨	೫೭೭೭	೨೬೪೧೯	೧೮೨೭೦	೨೮೭೦೭	೪೬೯೭೭
ಹೊಸಪೇಟೆ	೧೨೯೧೭೩	೬೦೫೧೦	೧೮೯೬೮೩	೧೯೦೧೫	೭೬೪೫	೨೬೬೬೦	೨೭೧೮೪	೨೯೯೦೯	೫೭೦೯೩
ಕೂಡ್ಲಿಗಿ	೮೯೯೪೬	೬೩೫೧೬	೧೫೩೪೬೨	೪೦೧೫೫	೧೬೩೭೪	೫೬೫೨೯	೨೪೮೬೧	೩೬೯೬೮	೬೧೮೨೯
ಸಂಡೂರು	೭೫೩೭೫	೩೩೨೬೫	೧೦೮೬೪೦	೧೮೭೬೮	೮೦೭೧	೨೬೮೩೯	೯೮೩೫	೧೪೨೮೬	೨೪೧೨೧
ಸಿರುಗುಪ್ಪ	೭೭೦೩೭	೬೦೮೨೯	೧೩೭೮೬೬	೨೩೫೧೫	೧೨೬೬೩	೩೬೧೭೮	೩೦೩೭೩	೪೦೩೬೨	೭೦೭೩೫
ಬಳ್ಳಾರಿ ಜಿಲ್ಲೆ	೭೦೩೨೫೮	೪೧೩೬೨೨	೧೧೧೬೮೮೦	೨೮೦೭೩೨	೭೭೩೪೮	೨೫೮೦೮೦	೧೭೫೯೯೨	೨೩೦೧೦೦	೪೦೬೦೯೨

ಮೂಲ: ಜನಗಣತಿ ವರದಿ ೨೦೧೧

ಕೋಷ್ಟಕ ೩.೧೫: ಒಟ್ಟು ದುಡಿಮೆಗಾರರಲ್ಲಿ ಸೀಮಾಂತ ದುಡಿಮೆಗಾರರ ಪ್ರಮಾಣ (ಲಿಂಗವಾರು)

ತಾಲೂಕುಗಳು	ಒಟ್ಟು ದುಡಿಮೆಗಾರರು			ಸಾಗುವಳಿ ದಾರರು	ಸೀ.ದು.	ಒಟ್ಟು	ಕೃಷಿ ಕಾರ್ಮಿಕರು		
	ಗಂಡು	ಹೆಣ್ಣು	ಒಟ್ಟು				ಗಂಡು	ಹೆಣ್ಣು	ಒಟ್ಟು
ಬಳ್ಳಾರಿ	೬೫.೩೬	೩೪.೬೪	೧೦೦	೧೯.೨೬	೮೦.೭೪	೧೦೦	೪೪.೭೭	೫೫.೨೩	೧೦೦
ಹಡಗಲಿ	೫೯.೫೯	೪೦.೪೧	೧೦೦	೨೧.೫೬	೭೮.೪೪	೧೦೦	೪೫.೫೪	೫೪.೪೬	೧೦೦
ಹಗರಿಬೊಮ್ಮನಹಳ್ಳಿ	೫೭.೫೯	೪೨.೪೧	೧೦೦	೨೭.೮೫	೭೨.೧೫	೧೦೦	೩೮.೮೯	೬೧.೧೧	೧೦೦
ಹೊಸಪೇಟೆ	೬೮.೦೯	೩೧.೯೧	೧೦೦	೧೪.೦೬	೮೫.೯೪	೧೦೦	೪೭.೬೧	೫೨.೩೯	೧೦೦
ಕೂಡ್ಲಿಗಿ	೫೮.೬೧	೪೧.೩೯	೧೦೦	೩೬.೮೪	೬೩.೧೬	೧೦೦	೪೦.೭೧	೫೯.೨೯	೧೦೦
ಸಂಡೂರು	೬೪.೧೮	೩೫.೮೨	೧೦೦	೨೪.೭೦	೭೫.೩೦	೧೦೦	೪೦.೭೭	೫೯.೨೩	೧೦೦
ಸಿರುಗುಪ್ಪ	೫೫.೮೮	೪೪.೧೨	೧೦೦	೨೬.೨೪	೭೩.೭೬	೧೦೦	೪೭.೯೪	೫೭.೦೬	೧೦೦
ಬಳ್ಳಾರಿ	೬೨.೯೭	೩೭.೦೩	೧೦೦	೨೩.೧೧	೭೬.೮೯	೧೦೦	೪೩.೩೪	೫೬.೬೬	೧೦೦

ಮೂಲ: ಜನಗಣತಿ ವರದಿ ೨೦೧೧

ಕೋಷ್ಟಕದ ಮಾಹಿತಿಯಂತೆ ಕೃಷಿಯಲ್ಲಿ ಮಹಿಳಾ ದುಡಿಮೆಗಾರರೂ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಆದರೆ ಮಹಿಳಾ ಕಾರ್ಮಿಕರ ಶೇಕಡಾವಾರು ಪ್ರಮಾಣವನ್ನು ಕೋಷ್ಟಕ ೩.೧೫ರಲ್ಲಿ ಕಾಣಬಹುದು.

ಕೋಷ್ಟಕದ ಮಾಹಿತಿಯಂತೆ ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಪ್ರಧಾನ ಕಸುಬು ಆಗಿದ್ದು, ಕೃಷಿಯಲ್ಲಿ ಪುರುಷ ಹಾಗೂ ಮಹಿಳಾ ದುಡಿಮೆಗಾರರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಕೃಷಿ ಸಾಗುವಳಿದಾರರ ಪ್ರಮಾಣ ಕೃಷಿ ಕಾರ್ಮಿಕರ ಪ್ರಮಾಣಕ್ಕಿಂತ ಅತೀ ಕಡಿಮೆ ಇರುವುದು ಕಂಡು ಬರುತ್ತದೆ. ಒಟ್ಟು ಸಾಗುವಳಿದಾರರ ಪ್ರಮಾಣವು ಕಡಿಮೆ ಇದ್ದು, ಸೀಮಾಂತ ದುಡಿಮೆಗಾರರ ಪ್ರಮಾಣ ಅತೀ ಹೆಚ್ಚು ದಾಖಲಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಪುರುಷ ಹಾಗೂ ಮಹಿಳಾ ದುಡಿಮೆಗಾರರ ಪ್ರಮಾಣ ಏಕರೂಪವಾಗಿರುವುದಿಲ್ಲ. ಅಂದರೆ ಸಾಗುವಳಿದಾರರಲ್ಲಿ ಪುರುಷರ ಸಂಖ್ಯೆ ಅಧಿಕ ಸಂಖ್ಯೆಯಲ್ಲಿದ್ದರೆ ಮಹಿಳೆಯರ ಸಂಖ್ಯೆ ಅತಿ ಕಡಿಮೆ ಪ್ರಮಾಣದಲ್ಲಿದೆ. ತದ್ವಿರುದ್ಧವಾಗಿ ಕೃಷಿ ಕಾರ್ಮಿಕರಲ್ಲಿ ಪುರುಷರ ಪ್ರಮಾಣ ಕಡಿಮೆ ಇದ್ದು, ಮಹಿಳೆಯರ ಪ್ರಮಾಣ ಅಧಿಕವಾಗಿದೆ. ಅಂದರೆ ಆರ್ಥಿಕತೆಯ ಕೆಳಸ್ತರದ ದುಡಿಮೆಯಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಮಹಿಳಾ ಕೃಷಿ ಕಾರ್ಮಿಕರಿಗೆ ಬೇಡಿಕೆ ಕಡಿಮೆಯಾದಾಗ ಅಥವಾ ಕೃಷಿಯಿಂದ ಬರುವ ವರಮಾನದಿಂದ ಮಹಿಳೆಯರ ಜೀವನೋಪಾಯ ಸಾಗದೇ ಹೋದಾಗ, ಅವರು ಅಧಿಕ ವರಮಾನ /ಕೂಲಿ ಸಿಗುವ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಶಿಕ್ಷಣ ಹಾಗೂ ತರಬೇತಿಯ ಕೊರತೆಯಿಂದ ಅಸಂಘಟಿತ ವಲಯಕ್ಕೆ ಸೀಮಿತವಾಗುತ್ತಾರೆ. ಇಂತಹ ವೃತ್ತಿಗಳಲ್ಲಿ ಮಹಿಳೆಯರಿಗೆ ಯಾವ ರೀತಿಯ ಸೌಲಭ್ಯಗಳೂ ಇರುವುದಿಲ್ಲ. ಅನಿವಾರ್ಯವಾಗಿ ಜೀವನೋಪಾಯಕ್ಕಾಗಿ ಅಸಂಘಟಿತ ವಲಯದ ಕೆಳಸ್ತರದ ದುಡಿಮೆಯಲ್ಲಿ ಬದುಕು ಸಾಗಿಸುತ್ತಿದ್ದಾರೆ.

೩.೮: ಜಿಲ್ಲೆಯ ಆದಾಯದ ಮಾಹಿತಿ

ಆದಾಯವು ಜನರ ಜೀವನ ಮಟ್ಟವನ್ನು ಅಳೆಯುವ ಮಾನದಂಡವಾಗಿದೆ. ೨೧ನೇ ಶತಮಾನದ ಪೂರ್ವಾರ್ಧದಿಂದ ಬಳ್ಳಾರಿ ಜಿಲ್ಲೆಯು ಆದಾಯದ ಹೆಚ್ಚಳವನ್ನು ಕಾಣುತ್ತಾ ಬಂದಿದೆ. ಈ ವಿಷಯವನ್ನು ಅಧ್ಯಾಯದ ಮೊದಲ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ಆದಾಯದ ಹೆಚ್ಚಳವನ್ನು ಈ ಕೋಷ್ಟಕದಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೩.೧೬: ಬಳ್ಳಾರಿ ಜಿಲ್ಲಾ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ವರಮಾನ (ಚಾಲ್ತಿ ಬೆಲೆಗಳಲ್ಲಿ)

ವರ್ಷಗಳು	ಒಟ್ಟು ಆಂತರಿಕ ಉತ್ಪನ್ನ (ಕೋಟಿಗಳಲ್ಲಿ)	ತಲಾ ವರಮಾನ (ರೂಪಾಯಿಗಳಲ್ಲಿ)
೧೯೯೯-೨೦೦೦	೩೫೪೬	೧೭೮೨೨
೨೦೦೧-೨೦೦೨	೩೬೬೩	೧೭೮೯೫
೨೦೦೩-೨೦೦೪	೬೩೩೮	೩೦೨೬೩
೨೦೦೫-೨೦೦೬	೧೦೯೪೦	೫೦೩೫೬
೨೦೦೭-೨೦೦೮	೧೦೪೬೧	೪೭೬೦೭
೨೦೦೯-೨೦೧೦	೧೩೫೨೫	೬೦೨೨೫

ಮೂಲ: (೧) ಕರ್ನಾಟಕ ಸರ್ಕಾರ ಆರ್ಥಿಕ ಸಮೀಕ್ಷೆ: ೨೦೦೩-೦೪, ೨೦೦೫-೦೬, ೨೦೦೭-೦೮, ೨೦೦೯-೧೦. ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

(೨) ಕರ್ನಾಟಕ ಸರ್ಕಾರ ೨೦೧೩. ಬಳ್ಳಾರಿ ಜಿಲ್ಲಾ ಅಂಕಿಅಂಶಗಳ ನೋಟ ೨೦೧೧-೨೦೧೩ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಬಳ್ಳಾರಿ.

ಕೋಷ್ಟಕ ೩.೧೬ರಲ್ಲಿ ದಾಖಲಿಸಿದ ಮಾಹಿತಿಯ ಪ್ರಕಾರ ಜಿಲ್ಲೆಯ ಆದಾಯದ ಜೊತೆ ಜೊತೆಗೆ ಜನರ ತಲಾ ವರಮಾನವೂ ಹೆಚ್ಚಳ ಕಂಡುಕೊಂಡಿದೆ ಎಂಬುದು ಗಮನಿಸಬಹುದಾದ ಸಂಗತಿಯಾಗಿದೆ. ಇದರ ಫಲಶೃತಿಯೇ ಜನರ ಜೀವನ ಮಟ್ಟದಲ್ಲಿ ಹೆಚ್ಚಳ. ಅಧಿಕ ಆದಾಯವುಳ್ಳ ಜನರು ದುಡಿಮೆಯ ಹೊರೆಯನ್ನು ಬಡವರ್ಗದ ಜನರಿಗೆ ವರ್ಗಾವಣೆ ಮಾಡುತ್ತಿದ್ದಾರೆ. ಈ ರೀತಿ ಜಿಲ್ಲೆಯಲ್ಲಿ ದುಡಿಮೆಗಾರರ ವರ್ಗ ರೂಪುಗೊಂಡಿದೆ.

೩.೯: ಅಧ್ಯಯನ ಕ್ಷೇತ್ರ : ಹೊಸಪೇಟೆ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿ ಮುಂದುವರೆದ ತಾಲೂಕು ಎನಿಸಿದ ಹೊಸಪೇಟೆಯ ಭೌಗೋಳಿಕ ವಿಸ್ತೀರ್ಣವು ೯೦೪ ಚ.ಕಿಮೀ ಆಗಿದ್ದು, ಜನಸಂಖ್ಯೆಯು ೪೫೯೯೧ ಆಗಿರುತ್ತದೆ. ಇದರಲ್ಲಿ ೨೨೯೩೩೮ ಪುರುಷರ ಸಂಖ್ಯೆಯಾದರೆ ೨೩೦೬೫೩ ಮಹಿಳೆಯರ ಸಂಖ್ಯೆಯಾಗಿದೆ. ಹೊಸಪೇಟೆಯಲ್ಲಿ ಗ್ರಾಮೀಣ ಭಾಗದ ಜನಸಂಖ್ಯೆಗಿಂತ ನಗರ ಪ್ರದೇಶದ ಜನಸಂಖ್ಯೆ ಅಧಿಕವಾಗಿದೆ. ಗ್ರಾಮೀಣ ಪ್ರದೇಶದ ಒಟ್ಟು ಜನಸಂಖ್ಯೆ ೧೮೮೯೬೫ ಆಗಿದ್ದು, ಇದರಲ್ಲಿ ೯೪೬೭೩ ಪುರುಷರಿದ್ದರೆ, ೯೪೨೯೨ ಮಹಿಳೆಯರಿದ್ದಾರೆ. ನಗರ ಪ್ರದೇಶದ ಜನಸಂಖ್ಯೆ ೨೭೧೦೨೬ ಇದ್ದು, ಇದರಲ್ಲಿ ೧೩೪೬೬೫ ಪುರುಷರು ೧೩೬೩೬೧ ಮಹಿಳೆಯರೂ ಇದ್ದಾರೆ.

ಹೊಸಪೇಟೆಯ ಸಾಕ್ಷರತಾ ದರವು ಶೇ. ೭೫.೧೬ ಇದ್ದು, ಪುರುಷರ ಸಾಕ್ಷರತಾ ದರ ಶೇ. ೭೮.೪೯ ಆಗಿರುತ್ತದೆ. ಮಹಿಳೆಯರ ಸಾಕ್ಷರತಾ ದರವು ಅತೀ ಕಡಿಮೆ ದಾಖಲಾಗಿದ್ದು, ಶೇ ೬೧.೯೩ರಷ್ಟಿದೆ.

ತಾಲೂಕಿನ ಶೈಕ್ಷಣಿಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ ೩೦೭ ಆಗಿದ್ದು, ಇದರಲ್ಲಿ ೧೯೫ ಸರ್ಕಾರಿ ಶಾಲೆಗಳೂ, ೧೭ ಅನುದಾನಿತ ಶಾಲೆಗಳೂ ೯೫ ಅನುದಾನ ರಹಿತ ಶಾಲೆಗಳೂ ಸೇರಿವೆ. ಹೊಸಪೇಟೆಯಲ್ಲಿ ಒಟ್ಟು ೮೩ ಪ್ರೌಢಶಾಲೆಗಳಿದ್ದು, ೨೦೧೧ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ೨೦ ಆಗಿದ್ದರೆ, ೧೦ ಅನುದಾನಿತ ಪ್ರೌಢ ಶಾಲೆಗಳಿವೆ. ೫೩ ಅನುದಾನರಹಿತ ಪ್ರೌಢ ಶಾಲೆಗಳಿವೆ.

ಕೋಷ್ಟಕ : ೩.೧೭. ೨೦೧೧ನೇ ಶೈಕ್ಷಣಿಕ ಸಾಲಿನಲ್ಲಿ ೧ ರಿಂದ ೧೦ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಸಂಖ್ಯೆ (ಲಿಂಗವಾರು)

ತರಗತಿ	ಗಂಡು	ಹೆಣ್ಣು	ಒಟ್ಟು
೦೧	೪೫೯೯	೪೦೮೮	೮೬೮೭
೦೨	೪೮೦೩	೪೫೦೨	೯೩೦೫
೦೩	೪೨೫೭	೪೨೯೭	೮೫೫೪
೦೪	೪೪೫೯	೪೩೨೫	೮೭೮೪
೦೫	೪೬೬೬	೪೬೩೦	೯೨೯೬
೦೬	೪೦೭೪	೩೯೫೮	೮೦೩೨
೦೭	೪೬೭೫	೪೫೯೭	೯೧೯೨
೦೮	೨೭೪೮	೨೨೩೮	೪೯೮೬
೦೯	೩೨೪೬	೨೭೯೨	೬೦೩೮
೧೦	೨೮೬೨	೨೬೮೨	೫೫೪೪
ಒಟ್ಟು	**೪೦೩೮೯**	**೩೮೧೦೯**	**೭೮೪೯೮**

ಮೂಲ: ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಹೊಸಪೇಟೆ.

ಕೋಷ್ಟಕ ೩.೧೭ರಲ್ಲಿ ದಾಖಲಿಸಿರುವ ಮಾಹಿತಿಯಂತೆ ಹೊಸಪೇಟೆಯಲ್ಲಿ ೨೦೧೧ನೇ ಶೈಕ್ಷಣಿಕ ಸಾಲಿನಲ್ಲಿ ೧ರಿಂದ ೧೦ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೭೮೪೯೮ ಆಗಿದ್ದು, ಇದರಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ೩೮೧೦೯ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೪೦೩೮೯ ಆಗಿರುತ್ತದೆ. ಅಂದರೆ ವಿದ್ಯಾರ್ಥಿನಿಯರ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಗಿಂತ ಕಡಿಮೆ ಇರುವುದು ಕಂಡುಬರುತ್ತದೆ. ಅಲ್ಲದೇ ತಾಲೂಕಿನಲ್ಲಿ ಪದವಿಪೂರ್ವ, ಪದವಿ ಹಾಗೂ ವೃತ್ತಿ ಶಿಕ್ಷಣ ಕಾಲೇಜುಗಳಿದ್ದು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು ರೋಗಿಗಳಿಗೆ ಸಕಾಲಕ್ಕೆ ಚಿಕಿತ್ಸಾ ಸೌಲಭ್ಯ ದೊರಕಿಸಿಕೊಡುತ್ತವೆ.

ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿ ಪ್ರಕಾರ ಕರ್ನಾಟಕದ ೧೭೫ ತಾಲೂಕುಗಳ ಪೈಕಿ ಹೊಸಪೇಟೆ ತಾಲೂಕಿಗೆ ೧೯ನೆಯ ಸ್ಥಾನ ಲಭಿಸಿದೆ. ಹಾಗೂ ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ ಪ್ರಥಮ ತಾಲೂಕು ಎಂಬುದು ೨೦೦೧ರ ಜನಗಣತಿಯ ಅಂಕಿ–ಅಂಶಗಳಿಂದ ತಿಳಿದುಬರುತ್ತದೆ.

ಆದರೂ ಜಾತಿ ಹಾಗೂ ವರ್ಗ ಕಾರಣಗಳಿಂದ ಬಡತನದ ರೇಖೆಯ ಕೆಳಗಿರುವ ಮಹಿಳೆಯರಿಗೆ ತೀವ್ರವಾಗಿ ಕಾಡುತ್ತಿರುವುದು ಹಸಿವು, ಬಡತನ, ಅನಕ್ಷರತೆ, ನಿರುದ್ಯೋಗದಂತಹ ಸಮಸ್ಯೆಗಳು ಎಂಬುದು ಡಾ.ಮಲ್ಲಿಕಾ ಘಂಟಿಯವರ ಅಭಿಪ್ರಾಯವಾಗಿದೆ. ಆಧುನಿಕ ಸ್ತ್ರೀವಾದ ಕುಟುಂಬದ ಚೌಕಟ್ಟನ್ನು ಪುರುಷ ಪ್ರಧಾನತೆಯಿಂದ ಬಿಡಿಸಿ, ಸ್ತ್ರೀಯರ ಸುಪರ್ದಿಗೆ ವಹಿಸಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದೆ. ಸಾಂಪ್ರದಾಯಿಕವಾಗಿ ಕುಟುಂಬದ ಯಜಮಾನಗಿರಿ, ಆರ್ಥಿಕ ಸಾಮಾಜಿಕ ಆಗು ಹೋಗುಗಳೆಲ್ಲ ಗಂಡಸಿನದ್ದೆ ಆಗಿದ್ದರೂ ಸರ್ವ ಜವಾಬ್ದಾರಿ ಹೆಣ್ಣಿನ ಹೆಗಲ ಮೇಲಿರುವ ಸತ್ಯಕ್ಕೆ ಜಗತ್ತೆಲ್ಲ ಕುರುಡುತನದಿಂದ ವರ್ತಿಸುತ್ತಿದೆ. ಈ ಪ್ರದೇಶದಲ್ಲಿ ವಿದೇಶಿ, ಸ್ವದೇಶಿ ಬಂಡವಾಳದ ಬೃಹತ್ ಉದ್ಯಮಗಳು ನೆಲೆಯೂರಿವೆ. ಆದರೆ ಯಾವುದೇ ಉದ್ಯಮಗಳಲ್ಲಿ ಮಹಿಳೆಯರನ್ನು ಕಾಣುವುದು ಅಪರೂಪವಾಗಿದೆ. ಇಂತಹ ಉದ್ಯಮಗಳಲ್ಲಿ ಮಹಿಳೆಯರಿಗೆ ನೀಡುವ ಕೆಲಸವಾದರೂ ಎಂತಹವುಗಳೆಂದರೆ ಸ್ವಾಗತಕಾರಿಣಿ ಹಾಗೂ ಲೆಕ್ಕಪತ್ರ ಇಡುವ ಕೆಲಸಗಳು. ಹೀಗೆ ಕೆಳದರ್ಜೆಯ ಉದ್ಯೋಗ ನೀಡುವುದರ ಮುಖಾಂತರ ಮೂಲಭೂತ ವಾದವನ್ನು ಮುಂದುವರೆಸುತ್ತಿವೆ ಎಂಬುದು ಲೇಖಕರ ಮನದಾಳದ ಮಾತಾಗಿದೆ.

ಮಹಿಳೆಯರು ಸಾಮಾನ್ಯವಾಗಿ ನಿರ್ವಹಿಸುತ್ತಿರುವ ಕೆಲಸಗಳಾವುವೆಂದರೆ ಕಟ್ಟಡ ನಿರ್ಮಾಣ, ಕೃಷಿಕಸುಬು, ಮನೆಗೆಲಸ, ಆಹಾರ ತಯಾರಿಕೆ ಮುಂತಾದವು. ಈ ಕೆಲಸಗಳು ಸಾಮಾನ್ಯವಾಗಿ ಮಹಿಳೆಯರಿಗೆ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ನೆರವಾದರೂ ಸಂಪೂರ್ಣ ಸ್ವಾವಲಂಬನೆಯನ್ನು ತಂದು ಕೊಟ್ಟಿರುವುದಿಲ್ಲ. ಮುಖ್ಯವಾಗಿ ಮಹಿಳೆಯರು ನಿರ್ವಹಿಸುತ್ತಿರುವ ಕೆಲಸಗಳನ್ನು ವೃತ್ತಿ ಎಂದು ಪರಿಗಣಿಸುವುದಿಲ್ಲ. ಆದರೆ ಮಹಿಳೆಗೆ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಲು ಇಂತಹ ಕೆಲಸಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ. ಹೀಗೆ ಮನೆಯ ಜವಾಬ್ದಾರಿ ಅಲ್ಲದೇ ಹೊರಗಿನ ದುಡಿಮೆಯಲ್ಲಿಯೂ ತೊಡಗಿ ತನ್ನ ಆರೋಗ್ಯವನ್ನು ನಿರ್ಲಕ್ಷಿಸುತ್ತಿರುವ ಮಹಿಳೆಗೆ ಕುಟುಂಬದ ಬೆಂಬಲದ ಜೊತೆಗೆ ಸಮಾಜದ ಹಾಗೂ ಸರ್ಕಾರದ ನೆರವಿನ ಅಗತ್ಯತೆಯೂ ಇದೆ. ಇಂತಹ ಮಹಿಳೆಯರ ಜೀವನದ ಸ್ಥಿತಿಗತಿಯನ್ನು ಅಧ್ಯಯನ ಮಾಡಿ ಅವರಿಗೆ ಸಿಗಬೇಕಾದ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕಾಗಿರುವುದು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದೆ. ಮುಂದಿನ ಅಧ್ಯಾಯದಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ದಾಖಲಿಸಲಾಗಿದೆ.

ಅಧ್ಯಾಯ ನಾಲ್ಕು

ಮನೆಗೆಲಸದ ಮಹಿಳೆಯರ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

ಸಾಮಾನ್ಯ ಮಾಹಿತಿ

೪.೧. ಮನೆಗೆಲಸದ ಮಹಿಳೆಯರು ಕೆಲಸ ನಿರ್ವಹಿಸುವ ಬಡಾವಣೆಗಳು

೪.೨. ಮನೆಗೆಲಸದ ಮಹಿಳೆಯರ ವಯಸ್ಸು

೪.೩. ಶಿಕ್ಷಣ ಮಟ್ಟ

೪.೪. ಮಾತೃಭಾಷೆ

೪.೫. ವೈವಾಹಿಕ ಸ್ಥಿತಿ

೪.೬. ಕುಟುಂಬ ಸ್ಥಿತಿ

೪.೭. ವಾಸಸ್ಥಳ ಮಾಹಿತಿ ಹಾಗೂ ವಲಸೆ ಬರಲು ಕಾರಣ

ಸಾಮಾಜಿಕ ಮಾಹಿತಿ

೪.೮. ಜಾತಿವಾರು ವಿಂಗಡಣೆ

೪.೯. ಕೌಟುಂಬಿಕ ಹಾಗೂ ಸಾಮಾಜಿಕ ಅರಿವಿನ ಮಾಹಿತಿ

೪.೧೦. ಸಾಮಾಜಿಕ ಸ್ಥಾನಮಾನದ ಮಾಹಿತಿ

೪.೧೧. ಮಕ್ಕಳ ಜವಾಬ್ದಾರಿ

೪.೧೨. ಕುಟುಂಬದಲ್ಲಿ ಶಿಕ್ಷಣದ ಅವಶ್ಯಕತೆ

೪.೧೩. ಕೆಲಸದ ಮನೆಯಲ್ಲಿ ಪ್ರವೇಶ

೪.೧೪. ಮಕ್ಕಳು ಅರ್ಧಕ್ಕೆ ಶಾಲೆ ಬಿಡಲು ಕಾರಣ

ಆರ್ಥಿಕ ಮಾಹಿತಿ

೪.೧೫. ಮನೆಯ ಒಡೆತನ, ಸ್ವರೂಪ ಹಾಗೂ ಮನೆಯ ವಸ್ತುಗಳ ಮಾಹಿತಿ

೪.೧೬. ಕುಟುಂಬದ ಆದಾಯ ಮತ್ತು ವೆಚ್ಚದ ಮಾಹಿತಿ

೪.೧೭. ಮಹಿಳೆಯರ ಉಳಿತಾಯ ಹಾಗೂ ಸಾಲದ ಮಾಹಿತಿ

೪.೧೮. ಸಾಲದ ಸಂಪೂರ್ಣ ಮಾಹಿತಿ

೪.೧೯. ಮನೆಗೆಲಸಗಾರರ ಆಸ್ತಿಯ ಮಾಹಿತಿ

೪.೨೦. ಕೂಲಿಯನ್ನು ನಿರ್ಧರಿಸುವ ಕ್ರಮ

ಅಧ್ಯಾಯ ನಾಲ್ಕು

ಮನೆಗೆಲಸದ ಮಹಿಳೆಯರ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

ಅಸಂಘಟಿತ ವಲಯದ ಅತೀ ಕೆಳವರ್ಗದ ದುಡಿಮೆ ಎನಿಸಿಕೊಂಡಿರುವ ಮನೆಗೆಲಸದ ದುಡಿಮೆಗಾರರ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ದು ಕೊಳ್ಳಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಮಳೆ ಆಧಾರಿತ ಕೃಷಿಯಲ್ಲಿ ಹಿನ್ನಡೆಯಾದ ಕಾರಣ ಸುತ್ತಮುತ್ತಲಿನ ಹಳ್ಳಿಗಳಿಂದ ವಲಸೆ ಬಂದ ಜನ ಹೊಸಪೇಟೆ, ಸಂಡೂರು ಹಾಗೂ ತೋರಣಗಲ್ಲುಗಳಲ್ಲಿ ನೆಲೆಸಿ ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ಹೊಸಪೇಟೆಯ ಸುತ್ತಮುತ್ತ ಸ್ಥಾಪಿತವಾದ ಜಿಂದಾಲ್ ಉಕ್ಕುಸ್ಥಾವರ, ಕಲ್ಯಾಣಿ, ಕಿರ್ಲೋಸ್ಕರ್ ಮುಂತಾದ ಕಾರ್ಖಾನೆಗಳಲ್ಲಿ ದುಡಿಮೆಯನ್ನು ಅರಸಿ ಬೇರೆ ಬೇರೆ ರಾಜ್ಯಗಳಿಂದ ಊರುಗಳಿಂದ ಜನ ವಲಸೆ ಬಂದಿದ್ದಾರೆ. ಕೃಷಿಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಜನ ತೊಡಗಲು ಕೃಷಿ ಕ್ಷೇತ್ರದ ಹಿನ್ನಡೆ ಕಾರಣ ಎನ್ನಬಹುದು.

ಕೈಗಾರಿಕೀಕರಣದಿಂದ ಹಾಗೂ ಗಣಿಗಾರಿಕೆಯಿಂದ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿದೆ. ಶ್ರೀಮಂತ ವರ್ಗದವರಲ್ಲದೇ, ಮಧ್ಯಮ ವರ್ಗದ ಜನರ ತಲಾ ಆದಾಯದಲ್ಲಿ ಏರಿಕೆ ಕಂಡು ಬಂದಿರುವುದರಿಂದ ಜನಜೀವನ ಮಟ್ಟ ಹೆಚ್ಚಾಗಿದೆ. ಇದರಿಂದಾಗಿ ಶ್ರೀಮಂತ ವರ್ಗದ ಜನ ಹಾಗೂ ಮಧ್ಯಮ ವರ್ಗದ ಕುಟುಂಬದ ಹೆಣ್ಣು ಮಕ್ಕಳೂ ತಮ್ಮ ಮನೆಗಳಲ್ಲಿ ಕೆಲಸ ಮಾಡಲು ಬಡವರ್ಗದ ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಸಾಮಾನ್ಯವಾಗಿದೆ. ಗಣಿಗಾರಿಕೆ ಹಾಗೂ ಕೈಗಾರಿಕೀಕರಣದ ಪ್ರಭಾವದಿಂದಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯೂ ಕೂಡ ಆದಾಯ ಹಾಗೂ

ಸಾಕ್ಷರತಾ ಪ್ರಮಾಣದಲ್ಲಿ ಹೆಚ್ಚಳವನ್ನು ಕಂಡಿದೆ. ಇದರಿಂದ ಮನೆಗೆಲಸದ ಮಹಿಳೆಯರಿಗೆ ಬೇಡಿಕೆ ಹೆಚ್ಚಾಗಿದೆ. ಮಧ್ಯಮ ವರ್ಗಕ್ಕೆ ಸೇರಿದ ಮಹಿಳೆಯರು ವಿದ್ಯಾಭ್ಯಾಸ ಪಡೆದು ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಮಹಿಳೆಯರು ತಮ್ಮ ಮನೆಗೆಲಸಕ್ಕೆ ಮಹಿಳೆಯರನ್ನು ನೇಮಿಸಿ ಕೊಂಡಿರುತ್ತಾರೆ. ಈ ರೀತಿ ಮನೆಗೆಲಸಕ್ಕೆ ನೇಮಕವಾಗುವ ಮಹಿಳೆಯರಲ್ಲಿ ಹೊಸಪೇಟೆಯ ಹೆಣ್ಣುಮಕ್ಕಳಲ್ಲದೇ ಬೇರೆ ಬೇರೆ ಊರುಗಳಿಂದ ಬಂದ ಹೆಣ್ಣುಮಕ್ಕಳೂ ಸೇರಿದ್ದಾರೆ. ಹಳ್ಳಿಗಳಿಂದ ನಗರಗಳಿಗೆ ಅನೇಕ ಕಾರಣಗಳಿಂದ ಜನ ವಲಸೆ ಬರುತ್ತಾರೆ. ಈ ರೀತಿಯ ಮಹಿಳೆಯರು ಜೀವನೋಪಾಯಕ್ಕಾಗಿ ಮನೆಗೆಲಸದಂತಹ ಕಡಿಮೆ ಕೂಲಿಯ ಕೆಲಸವನ್ನು ಆಯ್ದುಕೊಂಡು ಜೀವನ ಸಾಗಿಸುತ್ತಿದ್ದಾರೆ. ಹೀಗೆ ಹೊಸಪೇಟೆಯಲ್ಲಿ ಮನೆಗೆಲಸದ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದು ಈ ಕ್ಷೇತ್ರವನ್ನೇ ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಮನೆಗೆಲಸದ ಮಹಿಳೆಯರು ತಮ್ಮ ಜೀವನ ನಿರ್ವಹಣೆಗಾಗಿ ಮೂರು ನಾಲ್ಕು ಮನೆಗಳಲ್ಲಿ ದುಡಿಯುತ್ತಿದ್ದಾರೆ. ಈ ರೀತಿಯ ಮನೆಗೆಲಸದ ಸೇವೆಯಲ್ಲಿ ನಿರತರಾದ ಮಹಿಳೆಯರು ವೃತ್ತಿಯಲ್ಲಿ ಅನೇಕ ರೀತಿಯ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳನ್ನು ಪರಿಹರಿಸುವುದು ಕಷ್ಟದಾಯಕವಾದ ಕೆಲಸವಾಗಿದೆ. ಏಕೆಂದರೆ ಮನೆಗೆಲಸವನ್ನು ಒಂದು ವೃತ್ತಿ ಎಂದು ಪರಿಗಣಿಸಿ ಅದಕ್ಕೆ ಕೊಡಬೇಕಾದ ಯಾವ ಸವಲತ್ತುಗಳನ್ನು ಸರ್ಕಾರ ಮಾಡಿಕೊಟ್ಟಿರುವುದಿಲ್ಲ. ಅಲ್ಲದೇ ಮನೆಗೆಲಸದಲ್ಲಿ ತೊಡಗಿದ ಮಹಿಳೆಯರ ಅಂಕಿ ಅಂಶಗಳು ಕೂಡ ಲಭ್ಯವಿಲ್ಲದೇ ಈ ಸಮಸ್ಯೆ ಇನ್ನೂ ಕಗ್ಗಂಟಾಗಿದೆ. ಅನಕ್ಷರತೆ, ಅಜ್ಞಾನದಲ್ಲಿ ತೊಳಲಾಡುತ್ತಿರುವ ಮಹಿಳೆಯರು ತಮ್ಮ ಮೇಲೆ ನಡೆಯುತ್ತಿರುವ ಶೋಷಣೆಯ ವಿರುದ್ಧ ಹೋರಾಡಲು ಶಕ್ತರಾಗಿಲ್ಲ, ಜೀವನ ನಿರ್ವಹಣೆಗಾಗಿ, ಹೊಟ್ಟೆಪಾಡಿಗಾಗಿ ತಮ್ಮ ಸ್ವಾಭಿಮಾನವನ್ನೇ ಒತ್ತೆ ಇಟ್ಟು ದುಡಿಯುತ್ತಿರುವ ಮಹಿಳೆಯರ ಬದುಕಿನ ಸ್ಥಿತಿಗತಿಯನ್ನು ಅರಿಯುವುದು ಹಾಗೂ ಅವರ ಬದುಕನ್ನು ಹಸನುಗೊಳಿಸಲು ಮಾರ್ಗೋಪಾಯಗಳನ್ನು ಹುಡುಕುವುದು ಅಲ್ಲದೇ ಇವರ ಬದುಕಿನ ಸ್ಥಿತಿಗತಿಗಳನ್ನು ಸರ್ಕಾರದ ಗಮನಕ್ಕೆ ತರುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಕ್ಷೇತ್ರಕಾರ್ಯದ ಸಮಯದಲ್ಲಿ ಮನೆಗೆಲಸಗಾರರ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಬಳಸಿಕೊಂಡಿರುತ್ತೇನೆ. ಪ್ರಶ್ನಾವಳಿಯನ್ನು ಒಟ್ಟು ಆರು ಭಾಗಗಳನ್ನಾಗಿ ವಿಂಗಡಿಸಲಾಗಿದ್ದು ಅದು ಸಾಮಾನ್ಯ ಮಾಹಿತಿ, ಸಾಮಾಜಿಕ ಮಾಹಿತಿ, ಆರ್ಥಿಕ ಮಾಹಿತಿ, ರಾಜಕೀಯ ಮಾಹಿತಿ, ಉದ್ಯೋಗದ ಮಾಹಿತಿ ಹಾಗೂ ಇತರೆ ಮಾಹಿತಿಗಳನ್ನು ಸಂಗ್ರಹಿಸಲು ನೆರವಾಗುತ್ತದೆ. ಸಾಮಾನ್ಯವಾಗಿ ಎರಡು ವಿಧದ ಪ್ರಶ್ನೆಗಳನ್ನು ಪ್ರಶ್ನಾವಳಿಯಲ್ಲಿ ಕಾಣಬಹುದು. ಒಂದು ಮುಕ್ತ ಉತ್ತರಕ್ಕೆ ಅವಕಾಶ ನೀಡುವ ಪ್ರಶ್ನೆಗಳು, ಎರಡು ಮುಕ್ತ ಉತ್ತರಕ್ಕೆ ಅವಕಾಶ ನೀಡದ ಪ್ರಶ್ನೆಗಳು, ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂದರ್ಭಾನುಸಾರ ಈ ಎರಡು ವಿಧದ ಪ್ರಶ್ನೆಗಳನ್ನು ಬಳಸಿಕೊಳ್ಳಲಾಗಿದೆ. ಎರಡನೆಯದಾಗಿ ಸಂದರ್ಶನದ ಮೂಲಕ (ದೂರವಾಣಿ ಮೂಲಕ ಮಾಹಿತಿ ಸಂಗ್ರಹ) ಮಾಹಿತಿಯನ್ನು ಪಡೆದಿರುತ್ತೇನೆ ಹಾಗೂ ಕೆಲವು ಓಣಿಗಳಲ್ಲಿ ಮನೆಗೆಲಸದ ಮಹಿಳೆಯರಿಗೆ ಗುಂಪುಚರ್ಚೆಯನ್ನು ನಡೆಸಿ ಮಹಿಳೆಯರ ಬದುಕಿನ ಸತ್ಯಸಂಗತಿಯನ್ನು ಪಡೆಯಲು ಪ್ರಯತ್ನಿಸಿರುತ್ತೇನೆ. ಇದರಿಂದ ಕೆಲವು

ಮಹಿಳೆಯರು ತಮ್ಮ ವೈಯಕ್ತಿಕ ಬದುಕಿನ ಏಳು-ಬೀಳುಗಳನ್ನು ನೋವುಗಳನ್ನು ಹಂಚಿಕೊಳ್ಳಲು ನೆರವಾಗಿರುತ್ತದೆ. ಪ್ರಶ್ನಾವಳಿಯು ವೈಯಕ್ತಿಕ ಬದುಕಿನ ಚಿತ್ರಣವನ್ನು ನೀಡಿದರೆ ಗುಂಪು ಚರ್ಚೆಯು ಸಾಮೂಹಿಕ ತೀರ್ಮಾನವಾಗಿರುತ್ತದೆ.

೪.೧. ಮನೆಗೆಲಸದ ಮಹಿಳೆಯರು ಕಾರ್ಯನಿರ್ವಹಿಸುವ ಬಡಾವಣೆಗಳು

ಕೈಗಾರಿಕೀಕರಣ ಹಾಗೂ ಗಣಿಗಾರಿಕೆಗಳ ಪ್ರಭಾವದಿಂದಾಗಿ ಬಳ್ಳಾರಿಯ ಪ್ರಮುಖ ತಾಲೂಕುಗಳಲ್ಲಿ ಒಂದೆನಿಸಿದ ಹೊಸಪೇಟೆಯ ಜನರ ಜೀವನ ಮಟ್ಟವೂ ಸುಧಾರಿಸಿದೆ. ಶ್ರೀಮಂತ ಹಾಗೂ ಮಧ್ಯಮ ವರ್ಗದ ಕುಟುಂಬದವರು ಮನೆಗೆಲಸದ ದುಡಿಮೆಗಾರರನ್ನು ನೇಮಿಸಿಕೊಳ್ಳುವುದು ಸಾಮಾನ್ಯ ಸಂಗತಿಯಾಗಿದೆ. ಹೊಸಪೇಟೆಯ ಶ್ರೀಮಂತ ಬಡಾವಣೆಗಳಲ್ಲಿ ಅಧಿಕ ಸಂಖ್ಯೆಯ ಮನೆಗೆಲಸಗಾರರನ್ನು ಕಾಣಬಹುದು. ಹೊಸಪೇಟೆಯ ಶ್ರೀಮಂತ ಬಡಾವಣೆಗಳೆಂದರೆ ಮೃತ್ಯುಂಜಯ ನಗರ, ಬಸವೇಶ್ವರ ನಗರ, ಗಾಂಧಿ ಕಾಲೋನಿ, ನೆಹರೂ ಕಾಲೋನಿ, ರಾಣಿಪೇಟೆ, ಎಂ.ಪಿ.ಪ್ರಕಾಶ ನಗರ, ಪಟೇಲ ನಗರ, ಅಮರಾವತಿ, ಆಕಾಶವಾಣಿ ಸುತ್ತಮುತ್ತಲಿನ ಪ್ರದೇಶ. ತೇರ್ ಬಜಾರ್. ಈ ಪ್ರಮುಖ ಬಡಾವಣೆಗಳಲ್ಲಿ ಕೆಲಸ ಮಾಡುವ ಅಧಿಕ ಸಂಖ್ಯೆಯ ಮನೆಗೆಲಸದ ಮಹಿಳೆಯರು ಇಲ್ಲಿಯೇ ವಾಸಮಾಡದೇ ಸುತ್ತಮುತ್ತಲಿನ ಓಣಿಗಳಿಂದ ಬಂದು ಕೆಲಸ ಮಾಡುತ್ತಾರೆ. ಅವರು ವಾಸಮಾಡುತ್ತಿರುವ ಪ್ರದೇಶಗಳೆಂದರೆ ಚಪ್ಪರದಹಳ್ಳಿ, ಗೌಳೇರಹಟ್ಟಿ, ಖಾಜಾನಗರ, ಚಿತ್ತವಾಡ್ಗಿ, ಬಿ.ಟಿ.ಆರ್.ನಗರ, ಈಶ್ವರ ನಗರ, ದೇವಾಂಗಪೇಟೆ, ತೇರ್‌ಬಜಾರ್, ನಿಶಾನಿಕ್ಯಾಂಪ್, ನೇಕಾರ ಓಣಿ, ತಳವಾರ ಓಣಿ, ಸ್ಟೇಷನ್ ರೋಡ್ ಹತ್ತಿರದ ಕಾಲೋನಿ, ಪರ್‍ಗೇರ ಓಣಿ, ಇಂದ್ರಾನಗರ, ಅನಂತಶಯನಗುಡಿ. ಮಹಿಳಾ ಮನೆಗೆಲಸಗಾರರು ತಮಗೆ ಹತ್ತಿರದ ಹಾಗೂ ಅನುಕೂಲಕರವಾದ ಬಡಾವಣೆಗಳಿಗೆ ತೆರಳಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಧಿಕ ಸಂಖ್ಯೆಯ ಮನೆಗೆಲಸಗಾರರು ಅಮರಾವತಿ, ರಾಣಿಪೇಟೆ ಹಾಗೂ ಇಂದ್ರಾ ನಗರಗಳಲ್ಲಿ ವಾಸ ಮಾಡುತ್ತಿದ್ದಾರೆ. ಕ್ಷೇತ್ರಕಾರ್ಯದ ಸಮಯದಲ್ಲಿ ಎಲ್ಲಾ ಬಡಾವಣೆಗಳಿಗೂ ಪ್ರಾತಿನಿಧ್ಯ ನೀಡಲಾಗಿದೆ.

ಕೋಷ್ಟಕ ೪.೧ರಲ್ಲಿ ಹೊಸಪೇಟೆಯಲ್ಲಿ ಮನೆಗೆಲಸದ ದುಡಿಮೆಗಾರರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರ ಬಡಾವಣೆವಾರು ಸಂಖ್ಯೆಯನ್ನು ನಮೂದಿಸಲಾಗಿದೆ.

ಕೋಷ್ಟಕ ೪.೧: ಬಡಾವಣೆಗಳ ಮಾಹಿತಿ

ಕ್ರಸಂ.	ಬಡಾವಣೆಗಳ ಹೆಸರು	ಕೆಲಸಗಾರರ ಸಂಖ್ಯೆ
೦೧.	ಮೃತ್ಯುಂಜಯ ನಗರ	೪೦
೦೨.	ಬಸವೇಶ್ವರ ನಗರ	೩೫
೦೩.	ರಾಣಿಪೇಟೆ	೩೦
೦೪.	ಅಮರಾವತಿ	೩೦
೦೫.	ಗಾಂಧಿ ಕಾಲೋನಿ	೨೫
೦೬.	ನೆಹರೂ ಕಾಲೋನಿ	೨೫

೦೭.	ಪಟೇಲ ನಗರ	೨೫
೦೮.	ಎಂ.ಪಿ.ಪ್ರಕಾಶ ನಗರ	೧೫
೦೯.	ಆಕಾಶವಾಣಿ ಸುತ್ತಲಿನ ಪ್ರದೇಶ	೧೫
೧೦.	ತೇರಬಜಾರ	೧೦
	ಒಟ್ಟು	೨೫೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧ರಲ್ಲಿಯ ಮಾಹಿತಿಯಂತೆ ಹೊಸಪೇಟೆಯ ಪ್ರಮುಖ ಬಡಾವಣೆಗಳಲ್ಲಿ ಕೆಲಸ ಮಾಡುವ ಮಹಿಳಾ ಮನೆಗೆಲಸಗಾರರ ಸಂಖ್ಯೆಯನ್ನು ಗಮನಿಸಿದಾಗ ಶ್ರೀಮಂತ ಬಡಾವಣೆಗಳೆನಿಸಿದ ಮೃತ್ಯುಂಜಯ ನಗರ ಹಾಗೂ ಬಸವೇಶ್ವರ ನಗರಗಳಲ್ಲಿ ಅಧಿಕ ಸಂಖ್ಯೆಯ ಮನೆಗೆಲಸಗಾರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲ ಬಡಾವಣೆಗಳಲ್ಲಿ ಕೆಲಸ ಮಾಡುವ ಮಹಿಳೆಯರೂ ಕ್ಷೇತ್ರಕಾರ್ಯದ ಸಮಯದಲ್ಲಿ ತಮ್ಮ ಜೀವನದ ಹಾಗೂ ಕೆಲಸದ ಸ್ಥಿತಿಗತಿಗಳನ್ನು ಬಿಚ್ಚುಮನಸ್ಸಿನಿಂದ ವಿವರಿಸಿದ್ದಾರೆ.

ಪ್ರಸ್ತುತ ಅಧ್ಯಾಯದಲ್ಲಿ ಮನೆಗೆಲಸದ ಮಹಿಳೆಯರ ಸಾಮಾನ್ಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಧ್ಯಯನದ ಸೈದ್ಧಾಂತಿಕ ನೆಲೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯ ಸ್ಥಿತಿಗತಿಯ ಅಧ್ಯಯನಕ್ಕಾಗಿ ಮನೆಗೆಲಸದ ಮಹಿಳೆಯರ ವಯಸ್ಸು, ವಿದ್ಯಾರ್ಹತೆ, ಮಾತೃಭಾಷೆ, ವೈವಾಹಿಕ ಸ್ಥಿತಿ, ವಾಸಸ್ಥಾನ ಮುಂತಾದ ವಿಷಯಗಳ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಇದೇ ರೀತಿಯಾಗಿ ಸಾಮಾಜಿಕ ಸ್ಥಿತಿಗತಿಯ ವಿಶ್ಲೇಷಣೆಯು ಜಾತಿ, ಕೌಟುಂಬಿಕ ಸ್ಥಿತಿ, ಸಾಮಾಜಿಕ ಕಟ್ಟುಪಾಡುಗಳು, ಜಾತಿ ಸಮಸ್ಯೆ, ಮಕ್ಕಳ ಜವಾಬ್ದಾರಿ, ಶಿಕ್ಷಣದ ಪ್ರಾಮುಖ್ಯತೆ ಮುಂತಾದ ಮಾಹಿತಿಗಳ ಮೂಲಕ ನಡೆಯುತ್ತದೆ. ಅಲ್ಲದೇ ಮನೆಯ ಒಡೆತನ, ಕುಟುಂಬದ ಆದಾಯ-ಖರ್ಚು, ಉಳಿತಾಯ–ಸಾಲ, ಮನೆ ಜವಾಬ್ದಾರಿ ಮುಂತಾದ ಮಾಹಿತಿಗಳು ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುವಲ್ಲಿ ನೆರವಾಗುತ್ತವೆ.

ಸಾಮಾನ್ಯ ಭಾಷೆಯಲ್ಲಿ ದುಡಿಮೆ ಎಂದರೆ ಕಾರ್ಮಿಕನು ಮಾಡುವ ಯಾವುದೇ ದೈಹಿಕ ಅಥವಾ ಮಾನಸಿಕ ಕೆಲಸವಾಗಿರುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ ದುಡಿಮೆ ಎಂದರೆ ಆದಾಯವನ್ನು ಗಳಿಸುವ ಉದ್ದೇಶದಿಂದ ಒಬ್ಬ ವ್ಯಕ್ತಿಯು ಮಾಡುವ ದೈಹಿಕ ಅಥವಾ ಮಾನಸಿಕ ಕೆಲಸವಾಗಿರುತ್ತದೆ. ಶ್ರೀಮತಿ ಜ್ಯೋತಿಕಿರಣ್ ಅವರು ಬರೆದ 'ವುಮೆನ್ ಲೇಬರ್ ಫೋರ್ಸ್ ಅಂಡ್ ನ್ಯಾಷನಲ್ ಪ್ರಾಡಕ್ಟ್' ಎಂಬ ಗ್ರಂಥದಲ್ಲಿ ೧೯೮೧ರ ಸಮೀಕ್ಷೆಯ ಪ್ರಕಾರ ದುಡಿಮೆಯನ್ನು ಈ ರೀತಿಯಾಗಿ ವ್ಯಾಖ್ಯಾನಿಸಿರುವ ಮಾಹಿತಿ ಲಭ್ಯವಾಗಿದೆ. ದುಡಿಮೆ ಎಂದರೆ ಯಾವುದೋ ಆರ್ಥಿಕ ಉತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗುವುದು. ಒಬ್ಬ ಮಹಿಳೆ ತನ್ನ ಸಾಂಸಾರಿಕ ಜವಾಬ್ದಾರಿಗಳನ್ನು ನಿರ್ವಹಿಸುವುದಲ್ಲದೇ ಕೂಲಿಗಾಗಿ ಮನೆಸೇವಕರಾಗಿ ದುಡಿಯುವುದು, ಕಟ್ಟಿಗೆ ಸಂಗ್ರಹಿಸುವುದು ಹಾಗೂ ಪ್ರಾಣಿಗಳಿಗೆ ಹುಲ್ಲು ತರುವುದು ದುಡಿಮೆಯೆಂದು ಪರಿಗಣಿಸಲ್ಪಟ್ಟಿದೆ.[೧] ಲಿಂಗಾಧಾರಿತ ಶ್ರಮವಿಭಜನೆಯಲ್ಲಿ ಕೆಲವು ಚಟುವಟಿಕೆಗಳು ಮಹಿಳೆಯರಿಗೆಂದೇ ಮೀಸಲಿರಿಸಲ್ಪಟ್ಟಿವೆ. ಮಹಿಳೆಯರು ಮಾಡುವಂತಹ ಉತ್ಪಾದಕ ಚಟುವಟಿಕೆಗಳನ್ನು

ಕುಟುಂಬದ ಕೆಲಸಗಳ ಜೊತೆಗೆ ಸೇರಿಸಿಕೊಳ್ಳುವುದರಿಂದ ಆರ್ಥಿಕ ಲೆಕ್ಕಾಚಾರದಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ. ಏಕೆಂದರೆ ಪುರುಷ ಅಥವಾ ಮಹಿಳೆ ಕೇವಲ ತನ್ನ ಕುಟುಂಬದ ಕೆಲಸವನ್ನು ನಿರ್ವಹಿಸುವುದು ದುಡಿಮೆ ಎನಿಸಿಕೊಳ್ಳುವುದಿಲ್ಲ. ಹೀಗೆ ಮಹಿಳೆಯ ದುಡಿಮೆಯು ಅಗೋಚರವೆನಿಸಿದೆ ಎಂಬ ದುಡಿಮೆಯ ಕುರಿತ ವ್ಯಾಖ್ಯಾನವಿದೆ. ಸಾಮಾನ್ಯವಾದ ಹಾಗೂ ಸಾರ್ವಜನಿಕವಾದ ಹೊರಗಿನ ದುಡಿಮೆಯಲ್ಲಿ ಪ್ರಮುಖವಾಗಿ ಎರಡು ವಲಯಗಳನ್ನು ಕಾಣುತ್ತೇವೆ. ಒಂದನೇಯದಾಗಿ ಸಂಘಟಿತ ವಲಯ, ಎರಡನೆಯದಾಗಿ ಅಸಂಘಟಿತ ವಲಯ. ಅಧಿಕ ಸಂಖ್ಯೆಯ ಮಹಿಳೆಯರು ಸಾಮಾನ್ಯವಾಗಿ ಎರಡನೆಯ ವಲಯದಲ್ಲಿ ದುಡಿಯುತ್ತಿದ್ದಾರೆ.

ಸಾಮಾನ್ಯ ಮಾಹಿತಿ :

ಅಸಂಘಟಿತ ವಲಯದ ಕೆಳಸ್ತರದಲ್ಲಿ ದುಡಿಯುತ್ತಿರುವ ಮನೆಗೆಲಸದ ದುಡಿಮೆಗಾರರ ಮಾಹಿತಿಯನ್ನು ಕ್ಷೇತ್ರ ಕಾರ್ಯದ ಮೂಲಕ ಪಡೆಯಲಾಗಿದೆ. ಹೊಸಪೇಟೆಯ ವ್ಯಾಪ್ತಿಗೆ ಬರುವ ಎಲ್ಲಾ ಬಡಾವಣೆಗಳಲ್ಲಿ ಕೆಲಸ ಮಾಡುವ ಕೆಲಸಗಾರರನ್ನು ಭೇಟಿಯಾಗಿ ಮಾದರಿ ಪ್ರಶ್ನಾವಳಿಗೆ ಉತ್ತರವನ್ನು ಪಡೆಯಲಾಗಿದೆ. ಹೊಸಪೇಟೆಯ ಪ್ರಮುಖ ಬಡಾವಣೆಗಳಲ್ಲಿ ಕೆಲಸ ಮಾಡುವ ೨೫೦ ಮನೆಗೆಲಸದ ದುಡಿಮೆಗಾರರನ್ನು ಸಮೀಕ್ಷೆಗೆ ಒಳಪಡಿಸಿ ಅವರು ನೀಡಿರುವ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಲಾದ ದತ್ತಾಂಶಗಳ ಪ್ರಕಾರ ಈ ನಿರ್ಧಾರಕ್ಕೆ ಬರಲಾಗಿದೆ.

೪.೨: ವಯಸ್ಸು : ಮನೆಗೆಲಸದ ಮಹಿಳೆಯರ ವಯಸ್ಸಿನ ಮಾಹಿತಿ

ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸಲು ಮೊದಲನೆಯದಾಗಿ ಮಹಿಳೆಯರ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಮಹಿಳೆಯರು ಸಾಮಾನ್ಯವಾಗಿ ಯಾವ ವಯಸ್ಸಿನಿಂದ ಹೊರಗಿನ ದುಡಿಮೆಯಲ್ಲಿ ತೊಡಗಲು ಶಕ್ತರಾಗುತ್ತಾರೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ೧೫ನೇ ವಯಸ್ಸಿನಿಂದ ಗರಿಷ್ಠ ೭೫ ವರ್ಷದೊಳಗಿನ ನಾಲ್ಕು ವರ್ಗಗಳನ್ನು ಮಾಡಿ ಅಂತಿಮ ಫಲಿತವನ್ನು ದಾಖಲಿಸಲಾಗಿದೆ. ಕೋಷ್ಟಕ ೪.೨ರಲ್ಲಿ ಮನೆಗೆಲಸದ ದುಡಿಮೆಗಾರರ ವಯಸ್ಸಿನ ಮಾಹಿತಿಯನ್ನು ನೀಡಲಾಗಿದೆ.

ಕೋಷ್ಟಕ ೪.೨: ವಯಸ್ಸಿನ ಮಾಹಿತಿ

ಕ್ರಸಂ.	ವಯಸ್ಸಿನ ವರ್ಗೀಕರಣ	ಒಟ್ಟು	ಶೇಕಡ
೧	೧೫ ರಿಂದ ೨೦ ವರ್ಷಗಳು	೨೧.೦೦	೮.೪೦
೨	೨೦ ರಿಂದ ೪೦ ವರ್ಷಗಳು	೧೪೪.೦೦	೫೭.೬೦
೩	೪೦ ರಿಂದ ೬೦ ವರ್ಷಗಳು	೮೦.೦೦	೩೨.೦೦
೪	೬೦ ರಿಂದ ೭೫ ವರ್ಷಗಳು	೫.೦೦	೨.೦೦
	ಒಟ್ಟು	೨೫೦.೦೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೨ರಲ್ಲಿ ನಮೂದಿಸಲಾದ ಅಂಕಿ ಅಂಶಗಳ ಪ್ರಕಾರ ೧೫ರಿಂದ ೨೦ ವರ್ಷದೊಳಗಿನ ೨೧ ಹೆಣ್ಣುಮಕ್ಕಳು, ೨೦ರಿಂದ ೪೦ ವರ್ಷದೊಳಗಿನ ೧೪೪ ಮಹಿಳೆಯರು, ೪೦ರಿಂದ ೬೦

ವರ್ಷದೊಳಗಿನ ೮೦ ಮಹಿಳೆಯರು ೬೦ರಿಂದ ೭೫ ವರ್ಷದೊಳಗಿನ ೦೫ ಮಹಿಳೆಯರು ಮನೆಗೆಲಸದ ಸೇವೆಯಲ್ಲಿ ನಿರತರಾಗಿದ್ದಾರೆ.

ಹೆಣ್ಣು ಮಕ್ಕಳು ತಮ್ಮ ಅತೀ ಚಿಕ್ಕ ವಯಸ್ಸಿನಲ್ಲಿಯೇ ಮನೆಗೆಲಸದಲ್ಲಿ ತೊಡಗಲು ಅನೇಕ ಕಾರಣಗಳನ್ನು ನೀಡಲಾಗಿದೆ. ಮೊದಲನೆಯದಾಗಿ ಈ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹಲವಾರು ಕಾರಣಗಳಿಂದ ಅರ್ಧಕ್ಕೇ ನಿಂತಿರುತ್ತದೆ. ಎರಡನೆಯದಾಗಿ ತಮ್ಮ ಮನೆಯಲ್ಲಿ ತಾಯಿಯೂ ಕೂಡ ಮನೆಗೆಲಸದ ವೃತ್ತಿಯನ್ನೇ ಅವಲಂಬಿಸಿರುವುದು, ಇಂತಹ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸ ನಿಲ್ಲಿಸಿದ ಹೆಣ್ಣುಮಕ್ಕಳು ಸ್ವಯಂಪ್ರೇರಣೆಯಿಂದ ತಮ್ಮ ತಾಯಂದಿರ ಜೊತೆ ಕೆಲಸಕ್ಕೆ ಹೋಗುವುದು, ಮೂರನೆಯದಾಗಿ ಕುಟುಂಬಕ್ಕೆ ತಂದೆ ತಾಯಿಗಳ ಆಸರೆ ಇಲ್ಲದೇ ಮನೆ ಜವಾಬ್ದಾರಿಯನ್ನು ನಿಭಾಯಿಸಲು ಈ ಕೆಲಸದಲ್ಲಿ ತೊಡಗಿಕೊಂಡಿರುವುದು. ಈ ವಿಷಯವು ಸ್ವಂತ ಮಹಿಳೆಯರೇ ಕ್ಷೇತ್ರಕಾರ್ಯದಲ್ಲಿ ತಿಳಿಸಿರುವುದಾಗಿದೆ. ಶ್ರೀಮತಿ ಅನಿತಾ ಆರ್ಯ (೨೦೦೦) ಅವರು ತಮ್ಮ ಗ್ರಂಥ 'ಭಾರತೀಯ ಮಹಿಳೆ' ಯಲ್ಲಿಯೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವ ಮಹಿಳೆಯರು ತಮ್ಮ ಸಂಸಾರದ ಖರ್ಚನ್ನು ನಿಭಾಯಿಸಲು ೪-೫ ಮನೆಗಳ ಕೆಲಸದಲ್ಲಿ ನಿರತರಾಗುತ್ತಾರೆ. ಇದರ ಜೊತೆ ತಮ್ಮ ಮನೆಯ ಕೆಲಸವನ್ನು ಅವರು ನಿರ್ಲಕ್ಷಿಸುವಂತಿಲ್ಲ. ಈ ಬಗೆಯ ಇಬ್ಬಗೆಯ ಹೊರೆಯನ್ನು ನಿಭಾಯಿಸಲು ಸಾಧ್ಯವಾಗದೇ ಹೋದಾಗ ತಮ್ಮ ಜೊತೆ ಎಳೆ ಹೆಣ್ಣುಮಕ್ಕಳನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಆದರೆ ಗಂಡು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ. ಹೀಗೆ ಲಿಂಗ ತಾರತಮ್ಯ ಕುಟುಂಬ ಹಂತದಲ್ಲಿಯೇ ಪ್ರಾರಂಭವಾಗುತ್ತದೆ. ಈ ಕಾರಣಕ್ಕಾಗಿಯೇ ೧೫ ರಿಂದ ೨೦ ವಯೋಮಾನದ ಶೇ.೮.೪ ರಷ್ಟು ಹೆಣ್ಣುಮಕ್ಕಳ ದುಡಿಮೆ ಮನೆಗೆಲಸದ ದುಡಿಮೆಯಾಗಿದೆ. ಇದರಿಂದ ಕುಟುಂಬದ ಆರ್ಥಿಕ ಹೊರೆ ಸ್ವಲ್ಪಮಟ್ಟಿಗೆ ಕಡಿಮೆಯಾದಂತೆ ಎನಿಸಿದರೂ ಅದು ಸಮುದಾಯದ ಹಾಗೂ ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ಕೆಟ್ಟ ಬೆಳವಣಿಗೆಯೆಂದೇ ಹೇಳಬಹುದು. ಇದನ್ನು ಮಾನವ ಸಂಪನ್ಮೂಲದ ಅದಕ್ಷ ಬಳಕೆ ಎಂದೇ ಪರಿಗಣಿಸಲಾಗಿದೆ. ಆದರೆ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಡ ಜನತೆ ತಮ್ಮ ಮನೆಯ ಜವಾಬ್ದಾರಿಗಳನ್ನು ನಿಭಾಯಿಸಲು ಇಂತಹ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸುವುದು ಸಾಮಾನ್ಯ ಸಂಗತಿಯಾಗಿದೆ.

ತಾಯಿಯು ತನ್ನ ಜೊತೆ ಮಗಳನ್ನು ಕರೆದುಕೊಂಡು ಹೋಗುವುದರಿಂದ ವಿದ್ಯಾಭ್ಯಾಸ ಕುಂಠಿತ ವಾಗುವುದರ ಜೊತೆಗೆ ಆ ವಿದ್ಯಾರ್ಥಿನಿ ಓದಿನಲ್ಲಿ ಆಸಕ್ತಿ ಕಳೆದುಕೊಂಡು ತಾನೂ ಕೂಡ ಕೊನೆಯವರೆಗೂ ಈ ಉದ್ಯೋಗದಲ್ಲಿಯೇ ಮುಂದುವರೆಯಬೇಕಾಗುತ್ತದೆ. ತನ್ನ ಕುಟುಂಬದ ಬಡತನದ ಕಾರಣಕ್ಕಾಗಿ ಮಕ್ಕಳನ್ನು ದುಡಿಮೆಗೆ ಆಹ್ವಾನಿಸುವುದರಿಂದ ಬಡತನದ ವರ್ಗಾವಣೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತಾ ಹೋಗುತ್ತದೆ. ಜೋಸೆಫ್ ಕ್ಸೇವಿಯರ್ (೨೦೦೯) ಅವರೂ ಕೂಡ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮನೆಗೆಲಸದ ಮಹಿಳೆಯರು ಸಾಮಾನ್ಯವಾಗಿ ಮಾನವ ಹಕ್ಕುಗಳಿಂದ ವಂಚಿತರಾಗುವುದಲ್ಲದೇ ಜೀವನದ ಮೂಲಭೂತ ಅವಶ್ಯಕತೆಗಳಾದ ಆರೋಗ್ಯ, ಶಿಕ್ಷಣ, ಕನಿಷ್ಠ ಜೀವನಮಟ್ಟ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಜೀವನ

ನಿರ್ವಹಣೆಗಾಗಿ ಇಂತಹ ಕೆಲಸದಲ್ಲಿ ತೊಡಗಿರುವ ಜನರು ಹೋರಾಟ ಮನೋಭಾವವನ್ನೇ ಮರೆತವರಾಗಿದ್ದಾರೆ. ಪ್ರಜಾಪ್ರಭುತ್ವ ಸರ್ಕಾರವು ಸಮಾನತೆಯ ಹಕ್ಕನ್ನು ಎಲ್ಲ ವರ್ಗದ ಜನರಿಗೆ ನೀಡಿದ್ದರೂ ಅದು ಕೆಳವರ್ಗದ ಜನರಿಗೆ ತಲುಪುವಲ್ಲಿ ಅಡೆತಡೆಯಾಗಿದೆ.

ಮನೆಗೆಲಸದ ದುಡಿಮೆಯಲ್ಲಿ ಅಧಿಕ ಸಂಖ್ಯೆಯಲ್ಲಿ ತೊಡಗಿರುವವರು ಎಂದರೆ ೨೦ ರಿಂದ ೪೦ ವರ್ಷದೊಳಗಿನ ಮಹಿಳೆಯರು ಈ ವಯೋಮಾನದ ಶೇ. ೫೭.೬ರಷ್ಟು ಮಹಿಳೆಯರು ಮನೆಗೆಲಸದಲ್ಲಿ ನಿಯುಕ್ತರಾಗಿದ್ದಾರೆ. ಈ ಅವಧಿಯು ಮಹಿಳೆಯರಿಗೆ ಪರ್ವಕಾಲವೆಂದೇ ಹೇಳಬಹುದು. ಹೆಣ್ಣುಮಕ್ಕಳು ಸಾಮಾನ್ಯವಾಗಿ ಮದುವೆಯಾಗಿ ಸಂತಾನೋತ್ಪತ್ತಿ ಕಾರ್ಯದಲ್ಲಿ ನಿರತರಾಗುವ ಹಾಗೂ ಮಕ್ಕಳ ಪೋಷಣೆಯ ಜೊತೆಗೆ ಮನೆಯ ಹಿರಿಯ ವ್ಯಕ್ತಿಗಳನ್ನು ಸಲಹುವ ಜವಾಬ್ದಾರಿ ನಿರ್ವಹಿಸುವುದಾಗಿರುತ್ತದೆ. ಕುಟುಂಬವು ಅಕಸ್ಮಾತಾಗಿ ಅವಘಡಕ್ಕೆ ತುತ್ತಾದಾಗ ಬೇರೆ ಮಾರ್ಗವಿಲ್ಲದೇ, ತನಗೆ ಅಭ್ಯಾಸವಿರುವ, ತನ್ನ ಸಾಮರ್ಥ್ಯಕ್ಕೆ ತಕ್ಕ ಕೆಲಸವನ್ನು ಅರಸಿ ಹೋಗಬೇಕಾಗುತ್ತದೆ. ಈಗಾಗಲೇ ವಿಶ್ಲೇಷಿಸಿದ ಹಾಗೆ ಒಂದು ವೇಳೆ ಮಹಿಳೆಯು ಅವಿದ್ಯಾವಂತಳಾಗಿದ್ದರೆ ಕಡಿಮೆ ಕೂಲಿಯ ಮನೆಗೆಲಸವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕೇವಲ ಒಂದು ಮನೆಯ ಕೆಲಸದಿಂದ ಗೃಹ ನಿರ್ವಹಣೆ ನಡೆಯದೇ ಹೋದಾಗ ಅನೇಕ ಮನೆಯ ಕೆಲಸವನ್ನು ಒಪ್ಪಿಕೊಳ್ಳುತ್ತಾಳೆ. ಇದರಿಂದ ದೈಹಿಕವಾದ ಹಾಗೂ ಮಾನಸಿಕವಾದ ಹೊರೆ ಹೆಚ್ಚಾಗಿ ಮಹಿಳೆ ವಿಚಲಿತಳಾಗುತ್ತಾಳೆ. ಹೊರಗಿನ ವೇತನಸಹಿತ ದುಡಿಮೆಯಲ್ಲಿ ನಿರತಳಾದ ಮಹಿಳೆಗೆ ಮನೆಯ ಜವಾಬ್ದಾರಿಗಳಿಂದ ವಿನಾಯಿತಿ ಏನೂ ದೊರೆಯುವುದಿಲ್ಲ. ಅದರ ಜೊತೆಗೆ ಕೆಲವು ಮಹಿಳೆಯರು ಸಮುದಾಯಿಕ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡಿರುತ್ತಾರೆ. ಹೀಗೆ ಹಲವು ಜವಾಬ್ದಾರಿಗಳಿಂದ ಮಹಿಳೆ ಜರ್ಜರಿತಳಾಗಿದ್ದಾಳೆ. ಅದೂ ಅಲ್ಲದೇ ತನ್ನ ದುಡಿಮೆಗೆ ತಕ್ಕಂತೆ ಕೂಲಿಯೂ ಸಹ ಸಿಗದೇ ಹೋದಾಗ ಭ್ರಮನಿರಶನಳಾಗುವ ಮಹಿಳೆ ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾಳೆ. ಇದರ ಪರಿಣಾಮ ತನ್ನ ಕುಟುಂಬದ ಮೇಲಾಗುತ್ತದೆ. ಮಹಿಳೆ ತನ್ನ ಮಕ್ಕಳ ಆರೋಗ್ಯ ಹಾಗೂ ಶಿಕ್ಷಣದ ಕಡೆ ಗಮನಹರಿಸಲಾರದೇ ಹೋದಾಗ ಮಗುವಿನ ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆ ಕುಂಠಿತವಾಗುತ್ತದೆ. ಮನೆಯ ಹಿರಿಯರ ಆರೈಕೆಯೂ ಸಮರ್ಪಕವಾಗುವುದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳೆ ತನ್ನ ಕುಟುಂಬವನ್ನೇ ನಿರ್ಲಕ್ಷಿಸಿದಂತಾಗುತ್ತದೆ.

ಈ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಾ ಶ್ರೀಮತಿ ಹೆಚ್.ಎಂ. ಹೇಮಲತಾ (೨೦೦೬) ಅವರು ಈ ರೀತಿಯಾಗಿ ಹೇಳಿದ್ದಾರೆ. ಈ ವಯೋಮಾನದ ಮಹಿಳೆಯರು ಸಾಮಾನ್ಯವಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸದಲ್ಲಿ ತೊಡಗುತ್ತಾರೆ.[೨] ಆದರೂ ಆರ್ಥಿಕತೆಯಲ್ಲಿ ಅನೇಕ ರೀತಿಯ ಶೋಷಣೆಗೆ ಒಳಗಾಗುತ್ತಾಳೆ. ನೈಲಾ ಕಬೀರ್ (೧೯೯೫) ಅವರೂ ಕೂಡ ಮಹಿಳೆಯರ ಟ್ರಿಪಲ್‌ರೋಲ್ಸ್ (ಉತ್ಪಾದನಾ ಕಾರ್ಯ, ಸಂತಾನೋತ್ಪತ್ತಿ ಕಾರ್ಯ ಹಾಗೂ ಸಮುದಾಯಿಕವಾದ ಜವಾಬ್ದಾರಿಗಳು) ಮೂರನೇ ಜಗತ್ತಿನಲ್ಲಿ ಹೇಗೆ ರೂಢಿಯಲ್ಲಿವೆ ಎಂಬುದನ್ನು ವಿವರಿಸಿದ್ದಾರೆ. ಮಹಿಳೆ ಈ ಮೂರು ಕೆಲಸದಲ್ಲಿ ಏಕರೂಪವಾಗಿ ತೊಡಗಿಸಿಕೊಂಡಾಗ್ಯೂ ಅವಳ ದುಡಿಮೆ ಅಪಮೌಲ್ಯಕ್ಕೊಳಗಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಪುರುಷನ ಉತ್ಪಾದಕ ಕೆಲಸವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಮಹಿಳೆಯ

ಜವಾಬ್ದಾರಿಗಳನ್ನು ಕಡೆಗಣಿಸುತ್ತಿದ್ದಾರೆ. ಹೀಗೆ ಮಹಿಳೆ ಎಲ್ಲ ಕಡೆಯೂ ಲಿಂಗತಾರತಮ್ಯವನ್ನು ಎದುರಿಸಬೇಕಾಗಿದೆ.

ಮನೆಗೆಲಸದ ದುಡಿಮೆಯಲ್ಲಿ ನಲವತ್ತು ವರ್ಷ ಮೇಲ್ಪಟ್ಟ ಮಹಿಳೆಯರೂ ತೊಡಗಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಶೇ. ೩೨ ರಷ್ಟು ಮಹಿಳೆಯರು ೪೦ ರಿಂದ ೬೦ ವರ್ಷ ವಯೋಮಾನದವರಾಗಿದ್ದಾರೆ. ಹಾಗೂ ಶೇ. ೨ರಷ್ಟು ಮಹಿಳೆಯರು ೬೦ರಿಂದ ೭೫ರ ವಯಸ್ಸಿನವರಾಗಿದ್ದಾರೆ. ಬಡತನ, ಅನಕ್ಷರತೆಯು ಈ ವೃತ್ತಿಯಲ್ಲಿ ತೊಡಗಲು ಪ್ರಮುಖ ಕಾರಣವಾದರೆ, ಸಂಸಾರದಲ್ಲಿ ಉದ್ಭವಿಸುವ ಅಹಿತಕರ ಘಟನೆಗಳೂ ಮಹಿಳೆಯು ಈ ವೃತ್ತಿಯಲ್ಲಿ ಮುಂದುವರೆಯಲು ಕಾರಣ ಎನ್ನಬಹುದು. ಕುಟುಂಬದಲ್ಲಿ ಅನ್ಯೋನ್ಯತೆ ಇಲ್ಲದೇ ಹೋದಾಗ ಮಹಿಳೆ ತನ್ನ ಕಾಲ ಮೇಲೆ ತಾನು ನಿಲ್ಲಲು, ಅಂದರೆ ತನ್ನ ಖರ್ಚು ವೆಚ್ಚಗಳನ್ನು ನಿಭಾಯಿಸಲು ಇಂತಹ ಕಡಿಮೆ ಕೂಲಿಯ ಕೆಲಸವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಸಂಘಟಿತ ವಲಯದ ಕುರಿತು ಅನೇಕ ಗ್ರಂಥಗಳನ್ನು ಬರೆದ ಜೆನ್‌ಬ್ರೆಮೆನ್ (೧೯೯೪) ಅವರು ಕೂಡ ಇದೇ ಅಭಿಪ್ರಾಯಕ್ಕೆ ಬಂದಿದ್ದಾರೆ. ಅನೌಪಚಾರಿಕ ವಲಯದಲ್ಲಿ ದುಡಿಯುವ ಮಹಿಳೆಯರಲ್ಲಿ ಅಧಿಕ ಸಂಖ್ಯೆಯವರು ವೃದ್ಧರೂ, ಅಂಗವಿಕಲರೂ ಆಗಿರುತ್ತಾರೆ.[೩] ಸರ್ಕಾರ ನಿಗಧಿಪಡಿಸಿದ ಕನಿಷ್ಟವೇತನ ಕಾನೂನು ಮನೆಗೆಲಸದ ದುಡಿಮೆಗೆ ಅನ್ವಯವಾಗದ ಕಾರಣ ಕಡಿಮೆ ಕೂಲಿಯನ್ನು ಒಪ್ಪಿಕೊಂಡೇ ಜೀವನ ಸಾಗಿಸುತ್ತಿದ್ದಾರೆ. ಇಂತಹ ಮಹಿಳೆಯರಿಗೆ ಸರ್ಕಾರವು ಸಾಮಾಜಿಕ ಭದ್ರತೆ ಕಾಯಿದೆಯನ್ವಯ ವೃತ್ತಿ ಸುರಕ್ಷತೆ ಹಾಗೂ ಪಿಂಚಣಿ ಯೋಜನೆಯನ್ನು ಒದಗಿಸಿಕೊಡಬೇಕಾದುದು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದೆ.

೪.೩: ಮನೆಗೆಲಸದ ಮಹಿಳೆಯರ ಶಿಕ್ಷಣ ಮಟ್ಟ

ಮನೆಗೆಲಸದ ಮಹಿಳೆಯರ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸುವ ಸೂಚಿಯಾಗಿ ಮಹಿಳೆಯರ ಶಿಕ್ಷಣ ಮಟ್ಟವನ್ನು ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಶಿಕ್ಷಣವು, ಪಶುಪ್ರವೃತ್ತಿಯ ಮಾನವನನ್ನು ನಾಗರೀಕತೆಯತ್ತ ಕೊಂಡೊಯ್ಯುತ್ತದೆ, ಶಿಕ್ಷಣದಿಂದ ಜ್ಞಾನವೃದ್ಧಿಯಾಗುತ್ತದೆ ಎಂಬ ಅಂಶಗಳು ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ಆ ಶಿಕ್ಷಣವನ್ನೇ ಮನುಷ್ಯ ಕಡೆಗಣಿಸಿದಾಗ ಖಂಡಿತವಾಗಿಯೂ ನಾಗರಿಕ ಪ್ರಪಂಚದ ಅವಕಾಶಗಳಿಂದ ವಂಚಿತರಾಗಬೇಕಾಗುತ್ತದೆ. ಇದೇ ಪರಿಸ್ಥಿತಿಯು ಅಸಂಘಟಿತ ವಲಯದಲ್ಲಿ ದುಡಿಯುವ ಶೇ. ೯೦ಕ್ಕೂ ಅಧಿಕ ಮಹಿಳೆಯರಿಗೆ ಎದುರಾಗಿದೆ. ಹೆಣ್ಣು ಮಕ್ಕಳು ಅನಕ್ಷರಸ್ಥರಾಗಲು ಅನೇಕ ಕಾರಣಗಳನ್ನು ಹೆಸರಿಸಬಹುದು. ಅದರಲ್ಲಿ ಪ್ರಮುಖವಾಗಿ ಹೆಸರಿಸಬಹುದಾದ ಕಾರಣ ಎಂದರೆ ಲಿಂಗ ತಾರತಮ್ಯ ನಂತರ ಕುಟುಂಬದ ಆರ್ಥಿಕ ಮುಗ್ಗಟ್ಟು, ಇವುಗಳ ಅಧ್ಯಯನವೂ ಕೂಡ ಕ್ಷೇತ್ರ ಕಾರ್ಯದ ಅಂಕಿ ಅಂಶಗಳಿಂದ ಸಾಧ್ಯವಾಗುತ್ತದೆ. ಕೋಷ್ಟಕ ೪.೩ರಲ್ಲಿ ಮನೆಗೆಲಸದ ಮಹಿಳೆಯರ ಶಿಕ್ಷಣ ಮಟ್ಟವನ್ನು ಗಮನಿಸಬಹುದು.

ಕೋಷ್ಟಕ ೪.೩: ಮನೆಗೆಲಸದ ಮಹಿಳೆಯರ ಶಿಕ್ಷಣ ಮಟ್ಟ

ಕ್ರಸಂ	ಮಹಿಳೆಯರ ಶಿಕ್ಷಣ ಮಟ್ಟ	ಒಟ್ಟು	ಶೇಕಡ
೦೧	ಅನಕ್ಷರಸ್ಥರು	೧೬೪	೬೫.೬೦
೦೨	ಪ್ರಾಥಮಿಕ ಹಂತದ ಶಿಕ್ಷಣ	೬೦	೨೪.೦೦
೦೩.	ಮಾಧ್ಯಮಿಕ ಹಂತದ ಶಿಕ್ಷಣ	೨೨	೮.೮೦
೦೪	ಪ.ಪೂ/ವೃತ್ತಿ ತರಬೇತಿ	೦೪	೧.೬೦
	ಒಟ್ಟು	೨೫೦	೧೦೦%

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ: ೪.೩ರಲ್ಲಿ ನಮೂದಿಸಲಾದ ಅಂಕಿ ಅಂಶಗಳ ಪ್ರಕಾರ ಮನೆಗೆಲಸದ ಮಹಿಳೆಯರಲ್ಲಿ ಅನಕ್ಷರಸ್ಥರು ಅಂದರೆ ಶಾಲೆಯ ಹೊಸ್ತಿಲನ್ನೇ ತುಳಿಯದ ಹೆಣ್ಣುಮಕ್ಕಳು ೧೬೪ರಷ್ಟು ಇದ್ದರೆ, ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲಿರುವ ೬೦ ಮಹಿಳೆಯರಿದ್ದಾರೆ. ಪ್ರೌಢಶಾಲಾ ಹಂತದವರೆಗೆ ತಲುಪಿದ ಮತ್ತು ಈ ಶಿಕ್ಷಣವನ್ನು ಪೂರೈಸಿದ ೨೨ ಮಹಿಳೆಯರಿದ್ದಾರೆ. ಆಶ್ಚರ್ಯಕರ ಸಂಗತಿ ಎಂದರೆ ಕಾಲೇಜಿನ ಮೆಟ್ಟಿಲನ್ನು ಹತ್ತಿದ ಅಥವಾ ಪದವಿಪೂರ್ವ(ಪಿ.ಯು.ಸಿ) ಶಿಕ್ಷಣವನ್ನು ಮುಗಿಸಿದ ೦೪ ಮಹಿಳೆಯರಿದ್ದಾರೆ.

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಮನೆಗೆಲಸದ ವೃತ್ತಿಯಲ್ಲಿ ಅಧಿಕ ಸಂಖ್ಯೆಯಲ್ಲಿರುವವರು ಎಂದರೆ ಶಿಕ್ಷಣ ಕ್ಷೇತ್ರದಿಂದ ದೂರವಾದ ಅನಕ್ಷರಸ್ಥ ಮಹಿಳೆಯರು. ಈಗಾಗಲೇ ವಿಶ್ಲೇಷಿಸಿದ ಮಾಹಿತಿಗಳ ಪ್ರಕಾರ ಇಷ್ಟೊಂದು ದೊಡ್ಡ ಪ್ರಮಾಣದ ಮಹಿಳೆಯರು ಅಸಂಘಟಿತ ವಲಯದಲ್ಲಿರಲು ಪ್ರಮುಖ ಕಾರಣವೆಂದರೆ, ಅಸಂಘಟಿತ ವಲಯವು ಅನಕ್ಷರಸ್ಥ, ತರಬೇತಿ ಇಲ್ಲದ ಕೌಶಲ್ಯರಹಿತ ಮಹಿಳೆಯರಿಗೆ ಕಾಯ್ದಿರಿಸಿದ ಕ್ಷೇತ್ರವಾಗಿರುವುದು. ಅದರಂತೆಯೇ ಮನೆಗೆಲಸದ ದುಡಿಮೆಯನ್ನು ನಿರ್ವಹಿಸಲು ಶಿಕ್ಷಣದ ಅವಶ್ಯಕತೆ ಇರುವುದಿಲ್ಲ. ಯಾವ ತರಬೇತಿಯೂ ಬೇಕಾಗಿರುವುದಿಲ್ಲ. ಮಹಿಳೆಯರು ತಾವು ಮನೆಯಲ್ಲಿ ಮಾಡುವ ಕೆಲಸವನ್ನೇ ಬೇರೆಯವರ ಮನೆಯಲ್ಲಿ ವೇತನಕ್ಕಾಗಿ ಮಾಡುತ್ತಾರೆ. ಇಲ್ಲಿ ಈ ವಿಷಯ ಪ್ರಮುಖವಾಗಿರದೇ, ಶಿಕ್ಷಣವಿಲ್ಲದ ಮಹಿಳೆ ತನ್ನ ಮಕ್ಕಳಿಗೆ ಹೇಗೆ ಮಾರ್ಗದರ್ಶಕಳಾಗುತ್ತಾಳೆ? ಭಾವೀ ಸಂತತಿಯನ್ನು ಯಾವ ರೀತಿ ಬೆಳೆಸುತ್ತಾಳೆ ಎಂಬುದೇ ಪ್ರಶ್ನೆಯಾಗಿದೆ. ಮಗುವಿನ ಲಾಲನೆ ಪಾಲನೆಗೆ ಹಾಗೂ ಮಗುವನ್ನು ಸಮಾಜದಲ್ಲಿ ಉತ್ತಮ ನಾಗರಿಕನನ್ನಾಗಿ ಮಾಡಲು ಇತ್ತೀಚಿನ ದಿನಗಳಲ್ಲಿ ಕನಿಷ್ಠ ವಿದ್ಯಾರ್ಹತೆ ಬೇಕೇ ಬೇಕಾಗುತ್ತದೆ. ಹೀಗೆ ಅನಕ್ಷರಸ್ಥ ಮಹಿಳೆಯರು ಅಧಿಕ ಸಂಭಾವನೆ ಸಿಗುವ, ಸುರಕ್ಷಿತ ಸ್ಥಳದಲ್ಲಿ ಕೆಲಸ ಮಾಡುವ ಔಪಚಾರಿಕ ವಲಯದ ಕೆಲಸಗಳಿಂದ ವಂಚಿತಳಾಗುತ್ತಾಳೆ.

ಮಹಿಳೆಯರು ದುಡಿಮೆಯಲ್ಲದೇ ಇನ್ನಿತರ ಸಾಂಸಾರಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದುದರಿಂದ ಅರೆಕಾಲಿಕವಾದ ಮನೆಗೆಲಸವನ್ನೇ ಆಯ್ದುಕೊಳ್ಳುತ್ತಾಳೆ. ಶ್ರೀಮತಿ ಪಾರ್ವತಿ ರಘುರಾಮ್ (೧೯೯೯)

ಅವರೂ ಕೂಡ ಈ ವಾದವನ್ನೇ ಬೆಂಬಲಿಸುತ್ತಾರೆ. ಮನೆಗೆಲಸದ ದುಡಿಮೆಗೆ ಹೆಚ್ಚಿನ ಕೌಶಲ್ಯಗಳು (ಶಿಕ್ಷಣ, ತರಬೇತಿ, ಕೌಶಲ್ಯ) ಬೇಕಾಗಿರುವುದಿಲ್ಲವಾದ್ದರಿಂದ ಯಾವ ಹೆಚ್ಚಿನ ಶ್ರಮವಿಲ್ಲದೆ ಈ ಕೆಲಸ ಲಭ್ಯವಾಗುತ್ತದೆ.[೪] ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಲು ಮಹಿಳೆಯರ ಪೋಷಕರೇ ಕಾರಣ ಎನ್ನುವ ಅಭಿಪ್ರಾಯವು 'ಇಂಡಿಯನ್ ಲೇಬರ್ ಪ್ರಾಬ್ಲಮ್' ಗ್ರಂಥದ ಕರ್ತೃಗಳಾದ ಎ.ಸಿ.ಪಂಥ್ (೧೯೮೫) ಅವರದಾಗಿದೆ. ಮಗು ಹುಟ್ಟಿದ ತಕ್ಷಣ ಹೆಣ್ಣುಮಗು ಎಂಬ ಕಾರಣಕ್ಕಾಗಿ ಆ ಮಗುವಿನ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸುವುದಿಲ್ಲ, ಅಲ್ಲದೇ ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆಯನ್ನು ಗೃಹಿಣಿ ಸ್ಥಾನದಲ್ಲಿ ನೋಡುವ ಅಭ್ಯಾಸ ಬೆಳೆದು ಬಂದಿದೆಯೇ ವಿನಃ ಅಧಿಕಾರಿ ಸ್ಥಾನದಲ್ಲಿ ನೋಡಲು ಪುರುಷ ಪ್ರಧಾನ ಸಮಾಜ ಹಿಂದೇಟು ಹಾಕುತ್ತದೆ. ಏನೇ ಆದರೂ ಸಕಲ ಜವಾಬ್ದಾರಿಯನ್ನು ನಿರ್ವಹಿಸಿ ಅಚಲಳಾಗಿ ನಿಂತರೂ ಸಮಾಜದಲ್ಲಿ ಅವಕೃಪೆಗೆ ಗುರಿಯಾಗಬೇಕಾಗಿರುವುದು ಮಹಿಳೆಯೇ ಎಂಬ ಅಭಿಪ್ರಾಯ ಸತ್ಯವಾಗಿದೆ. ಹೀಗೆ ಶೇ. ೬೫.೬ರಷ್ಟು ಮಹಿಳೆಯರು ಮನೆಗೆಲಸದ ದುಡಿಮೆಯಲ್ಲಿ ತಮ್ಮನ್ನು ಅನಿವಾರ್ಯವಾಗಿ ತೊಡಗಿಸಿಕೊಳ್ಳಬೇಕಾಗಿದೆ.

ಸುಮಾರು ೬೦ ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದಾರೆ ಅವರಲ್ಲಿ ಕೆಲವರು ಕೇವಲ ಸಹಿ ಮಾಡುತ್ತಾರೆ ಆದರೆ ಓದು ಬರಹವನ್ನು ಮರೆತಿದ್ದಾರೆ, ಇನ್ನು ಕೆಲವರು ತಕ್ಕಮಟ್ಟಿಗೆ ಓದು ಬರಹ ಬಲ್ಲವರಾಗಿದ್ದಾರೆ. ಆದರೂ ದಿನದ ಹೆಚ್ಚು ಸಮಯ ಬಿಡುವಿಲ್ಲದೇ ದುಡಿಯುವುದರಿಂದ ಓದಲು ಬರೆಯಲು ಸಮಯದ ಅಭಾವವಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಆದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜ್ಞಾವಂತ ಜಾಣ ಪ್ರಜೆಗಳ ಅಗತ್ಯವಿರುವುದರಿಂದ ಶೇ. ೨೮ರಷ್ಟಾದರೂ ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲಿದ್ದಾರೆ ಎಂಬುದು ಉತ್ತಮ ಅಭಿಪ್ರಾಯವನ್ನೇ ಕೊಡುತ್ತದೆ. ಶಿಕ್ಷಿತ ಮಹಿಳೆಯರು ಉತ್ತಮ ಉದ್ಯೋಗವನ್ನು ಪಡೆಯುವ ಅವಕಾಶವನ್ನು ಕಳೆದುಕೊಂಡರೂ, ತಮ್ಮ ಮೇಲಾಗುವ ಶೋಷಣೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಇನ್ನು ಶೇ. ೮.೮ರಷ್ಟು ಮಹಿಳೆಯರು ಪ್ರೌಢಶಾಲಾ ಮಟ್ಟವನ್ನು ತಲುಪಿರುತ್ತಾರೆ. ಇದರಲ್ಲಿ ಕೆಲವರು ೧೦ನೇ ತರಗತಿಯನ್ನು ಪಾಸಾಗಿರುತ್ತಾರೆ. ಇನ್ನು ಕೆಲವರು ಪ್ರೌಢಶಾಲೆ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿರುತ್ತಾರೆ. ಇದಕ್ಕೂ ಪ್ರಮುಖ ಕಾರಣವೆಂದರೆ ಕುಟುಂಬದ ಆರ್ಥಿಕ ಮುಗ್ಗಟ್ಟು, ಹಣದ ಅಡಚಣೆ ಮನೆಯಲ್ಲಿ ಸಂಭವಿಸಿದಾಗ ಅಥವಾ ಮನೆಯಲ್ಲಿ ತಂದೆ ತಾಯಿಗಳು ಅನಾರೋಗ್ಯಕ್ಕೆ ತುತ್ತಾದಾಗ ಹೆಣ್ಣುಮಕ್ಕಳೇ ಮುಂದಾಗಿ ದುಡಿಮೆಯಲ್ಲಿ ತೊಡಗಿಕೊಳ್ಳುತ್ತಾರೆ. ಇಂತಹ ಸಮಯದಲ್ಲಿಯೂ ಕೂಡ ಲಿಂಗ ತಾರತಮ್ಯದ ಕರಿನೆರಳು ಮಹಿಳೆಯರನ್ನು ಹಿಂಬಾಲಿಸುತ್ತದೆ. ತಂದೆ ತಾಯಿಗಳು ಸಾಮಾನ್ಯವಾಗಿ ಗಂಡು ಮಕ್ಕಳನ್ನು ಓದು ಬಿಡಿಸಲು ಹಿಂದೇಟು ಹಾಕುತ್ತಾರೆ. ಆಗ ಹೆಣ್ಣುಮಕ್ಕಳು ಅನಿವಾರ್ಯವಾಗಿ ಓದನ್ನು ಅರ್ಧಕ್ಕೆ ನಿಲ್ಲಿಸ ಬೇಕಾಗುತ್ತದೆ. ಕನಿಷ್ಠ ಪ್ರೌಢಶಾಲಾ ಶಿಕ್ಷಣ ಇಲ್ಲದ ಮಹಿಳೆಯರಿಗೆ ಹೆಚ್ಚಿಗೆ ಸಂಭಾವನೆ ನೀಡುವ, ಖಾಯಂ ಕೆಲಸಗಳು ಲಭ್ಯವಾಗುವುದಿಲ್ಲ. ಅಲ್ಲದೇ ಬೇರೆ ಕೆಲಸವನ್ನು ಸೇರಲು ವೃತ್ತಿ ಕೌಶಲ್ಯತೆಯೂ ಇರುವುದಿಲ್ಲ, ಹೀಗಾಗಿ ಇದಾವ ನೈಪುಣ್ಯತೆಯನ್ನು ಅಪೇಕ್ಷಿಸದ ಮನೆಗೆಲಸವು ಮಹಿಳೆಯರಿಗೆ ಲಭ್ಯವಾಗುತ್ತದೆ.

ಆದರೆ ಪಿ.ಯು.ಸಿ ಹಂತವನ್ನು ಮುಗಿಸಿದ ಹಾಗೂ ವೃತ್ತಿ ಶಿಕ್ಷಣ ತರಬೇತಿಯನ್ನು ಪಡೆಯುತ್ತಿರುವ ಹೆಣ್ಣುಮಕ್ಕಳೂ ಕೂಡ ಮನೆಗೆಲಸದಲ್ಲಿ ನಿರತರಾಗಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಬೆಳೆದ ಹೆಣ್ಣುಮಕ್ಕಳನ್ನು ದೂರದ ಸ್ಥಳಗಳಿಗೆ ಕಳಿಸಲು ಒಪ್ಪದ ಪಾಲಕರು ತಮ್ಮ ಮಕ್ಕಳನ್ನು ಇಂತಹ ಕೆಲಸಕ್ಕೆ ಕಳಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ವಿದ್ಯಾವಂತ ಯುವತಿಯರು ತಮ್ಮ ಜೀವನದಲ್ಲಿ ಅಹಿತಕರ ಘಟನೆಗಳನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಾಗ, ಈ ವೃತ್ತಿಯನ್ನು ಅರಸಿ ಬರುತ್ತಾರೆ. ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಹತೆ ಇದ್ದರೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹಾಗೂ ಬಡ ರಾಷ್ಟ್ರಗಳಲ್ಲಿ ಮಹಿಳೆ ಉತ್ತಮ ಕೆಲಸಕ್ಕಾಗಿ ಪುರುಷರೊಂದಿಗೆ ಸ್ಪರ್ಧಿಗಿಳಿಯಲು ಸಾಧ್ಯವಿಲ್ಲ. ಲಿಂಗಭೇದವನ್ನೊಳಗೊಂಡ ಸಮಾಜದಲ್ಲಿ ಕೆಲವು ಜನ ದುರದೃಷ್ಟವಶಾತ್ ಕೆಳಮಟ್ಟದ ಸ್ಥಾನಮಾನವನ್ನು ಹೊಂದುವುದು ಸಹಜ ಎಂಬ ಅಂಶವನ್ನು ಬಿ.ವಿಲಿಯಂ ಧರ್ಮರಾಜ (೨೦೦೯) ಅವರು ಒತ್ತಿ ಹೇಳಿದ್ದಾರೆ.

೪.೪: ಮಾತೃಭಾಷೆ

ನಮ್ಮ ನೆರೆ ಹೊರೆಯವರೊಡನೆ ವ್ಯವಹರಿಸಲು ವಿಚಾರ ವಿನಿಯಮ ಮಾಡಲು ಭಾಷೆ ಒಂದು ಶ್ರೇಷ್ಠ ಸಾಧನವಾಗಿದೆ. ಕರ್ನಾಟಕದಲ್ಲಿ ಕನ್ನಡ ಪ್ರಾಂತೀಯ ಭಾಷೆಯಾಗಿದೆ. ಆದರೂ ಅನ್ಯ ಭಾಷೆಗಳಿಗೆ ನಮ್ಮ ರಾಜ್ಯದಲ್ಲಿ ಮನ್ನಣೆ ದೊರೆಯುತ್ತಲೇ ಬಂದಿದೆ. ನಾಡಿನ ಗಡಿಯ ಭಾಗಗಳನ್ನು ದ್ವಿ ಭಾಷಾ ಪ್ರದೇಶಗಳೆನ್ನುತ್ತಾರೆ. ಕನ್ನಡನಾಡಿನ ನೆರೆಯ ನಾಡುಗಳಾಗಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳಿವೆ, ಈ ಗಡಿ ಭಾಗಗಳಲ್ಲಿ ವಾಸ ಮಾಡುವವರು ಎರಡೆರೆಡು ಭಾಷೆಗಳಲ್ಲಿ ವ್ಯವಹರಿಸ ಬೇಕಾಗುತ್ತದೆ. ಅಷ್ಟೇ ಅಲ್ಲದೇ ಕರ್ನಾಟಕಕ್ಕೆ ಉದ್ಯೋಗವನ್ನರಸಿ ಬೇರೆ ರಾಜ್ಯಗಳಿಂದ ವಲಸೆ ಬಂದ ಜನರೂ ಇಲ್ಲಿಯೇ ನೆಲೆಸಿ ಕನ್ನಡಿಗರೇ ಆದರೂ ತಮ್ಮ ಪ್ರಾಂತೀಯ ಭಾಷೆಯನ್ನು ಮರೆತಿಲ್ಲ, ಹೀಗೆ ಕನ್ನಡ ನೆಲದಲ್ಲಿ ಅನ್ಯ ಭಾಷಿಗರೂ ಕೂಡ ನೆಲೆಸಿ ಜೀವನ ನಡೆಸುತ್ತಿದ್ದಾರೆ. ಮನೆಗೆಲಸದ ಮಹಿಳೆಯ ರಲ್ಲಿಯೂ ಕೂಡ ಬೇರೆ ಬೇರೆ ಭಾಷೆಗಳನ್ನಾಡುವ ಜನ ಕಂಡು ಬರುತ್ತಾರೆ. ಈ ಮೊದಲೇ ತಿಳಿಸಿದ ಹಾಗೆ ಬಳ್ಳಾರಿ ಜಿಲ್ಲೆಯೂ ಆಂಧ್ರದ ಗಡಿಭಾಗದಲ್ಲಿ ಕಂಡುಬರುವುದರಿಂದ ತೆಲುಗು ಮಾತನಾಡುವ ಜನರ ಸಂಪರ್ಕವನ್ನು ಹೊಂದಿದೆ. ಬಳ್ಳಾರಿಯ ಪ್ರಸಿದ್ಧ ತಾಲೂಕುಗಳಲ್ಲಿ ಒಂದಾದ ಹೊಸಪೇಟೆಯಲ್ಲಿಯೂ ಕೂಡ ಅನ್ಯ ಭಾಷೆಗಳನ್ನಾಡುವ ಜನ ಅಧಿಕ ಸಂಖ್ಯೆಯಲ್ಲಿ ಸಿಗುತ್ತಾರೆ. ಈ ರೀತಿಯ ವೈವಿಧ್ಯಮಯ ಭಾಷೆ ಹಾಗೂ ಸಂಸ್ಕೃತಿಯ ಜನರು ಒಟ್ಟಾಗಿ ಜೀವನ ನಡೆಸುತ್ತಿದ್ದಾರೆ. ಇದರಿಂದ ಭಾಷಾ ಸಮಸ್ಯೆ ಜನರಲ್ಲಿ ಎದ್ದು ಕಾಣುವುದಿಲ್ಲ. ಕೋಷ್ಟಕ ೪.೪ರಲ್ಲಿ ಮನೆಗೆಲಸದ ಮಾಡುವ ಮಹಿಳೆಯರಲ್ಲಿ ಅನ್ಯ ಭಾಷಿಗರು ಹಾಗೂ ಕನ್ನಡ ಭಾಷಿಗರ ಸಂಖ್ಯೆಯನ್ನು ಕಾಣಬಹುದು.

ಕೋಷ್ಟಕ ೪.೪: ಹೊಸಪೇಟೆಯ ಮನೆಗೆಲಸದ ಮಹಿಳೆಯರ ಮಾತೃಭಾಷೆ

ಕ್ರಸಂ.	ಮಹಿಳೆಯರ ಮಾತೃಭಾಷೆ	ಒಟ್ಟು	ಶೇಕಡ
೦೧	ಕನ್ನಡ	೧೫೬	೬೨.೪೦
೦೨	ಹಿಂದಿ	೦೦	೦೦
೦೩.	ಉರ್ದು	೨೬	೧೦.೪೦
೦೪	ತೆಲುಗು	೫೭	೨೨.೮೦
೦೫.	ಮರಾಠಿ	೦೧	೦.೪೦
೦೬	ಲಂಬಾಣಿ	೦೫	೨.೦೦
೦೭	ತಮಿಳು	೦೫	೨.೦೦
	ಒಟ್ಟು	೨೫೦	೧೦೦%

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೪ರ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಕನ್ನಡ ಮಾತನಾಡುವವರು ೧೫೬ ಜನ ಇದ್ದರೆ, ಹಿಂದಿ ಮಾತನಾಡುವವರು ಸಮೀಕ್ಷೆಯಲ್ಲಿ ಕಂಡು ಬಂದಿರುವುದಿಲ್ಲ. ಉರ್ದು ಮಾತನಾಡುವ ೨೬ ಮಹಿಳೆಯರೂ, ತೆಲುಗು ಮಾತನಾಡುವ ೫೭ ಮಹಿಳೆಯರೂ ಇದ್ದಾರೆ. ಅಲ್ಲದೇ ಒಬ್ಬ ಮರಾಠಿ ಮಾತನಾಡುವ ಮಹಿಳೆಯನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ಗುರುತಿಸಲಾಯಿತು. ಲಂಬಾಣಿ ಹಾಗೂ ತಮಿಳು ಮಾತನಾಡುವ ತಲಾ ಐದೈದು ಮಹಿಳೆಯರು ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ.

ಸಮೀಕ್ಷೆಗೊಳಪಡಿಸಲಾದ ೨೫೦ ಮನೆಗೆಲಸದ ಮಹಿಳೆಯರಲ್ಲಿ ಅಧಿಕ ಸಂಖ್ಯೆಯ ಅಂದರೆ ಶೇ. ೬೨.೪ರಷ್ಟು ಮಹಿಳೆಯರು ಕನ್ನಡ ಭಾಷಿಗರಾಗಿದ್ದಾರೆ. ಕನ್ನಡ ಇವರ ಮಾತೃಭಾಷೆಯಾದರೂ ಇತರ ಭಾಷೆಗಳ ಪರಿಚಯವನ್ನು ಹೊಂದಿದ್ದಾರೆ. ಕನ್ನಡ ಭಾಷೆಯ ನಂತರ ಅಧಿಕ ಸಂಖ್ಯೆಯ ಮಹಿಳೆಯರು ಅಂದರೆ ಶೇ. ೨೨.೮ರಷ್ಟು ಮಹಿಳೆಯರು ತೆಲುಗು ಭಾಷೆಯನ್ನು ಮಾತನಾಡುವವರಾಗಿದ್ದಾರೆ. ಇದಕ್ಕೆ ಕಾರಣ ಬಳ್ಳಾರಿ ಆಂಧ್ರದ ಗಡಿಭಾಗದಲ್ಲಿ ಬಂದಿರುವುದರಿಂದ ಹಾಗೂ ಆಂಧ್ರದ ಜನ ಕರ್ನಾಟಕಕ್ಕೆ ಉದ್ಯೋಗವನ್ನರಸಿ ಬಂದಿರುವುದರಿಂದ. ಮುಸ್ಲಿಂ ಮಹಿಳೆಯರೂ ಕೂಡ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ. ನಮ್ಮ ಕ್ಷೇತ್ರಕಾರ್ಯದಲ್ಲಿ ಶೇ. ೧೦.೪ರಷ್ಟು ಮಹಿಳೆಯರು ಉರ್ದು ಮಾತನಾಡುವವರು, ಶೇ. ೨ರಷ್ಟು ಲಂಬಾಣಿ ಹಾಗೂ ತಮಿಳು ಮಾತನಾಡುವ ಮಹಿಳೆಯರಿದ್ದರೆ, ಶೇ ೦.೪ರಷ್ಟು ಮರಾಠಿ ಭಾಷಿಗರು ಈ ಕೆಲಸದಲ್ಲಿ ನಿರತರಾಗಿದ್ದಾರೆ. ಈ ರೀತಿ ಏಳು ಭಾಷೆಗಳನ್ನಾಡುವ ಮಹಿಳೆಯರು ಮನೆಗೆಲಸವನ್ನು ತಮ್ಮ ಪ್ರಮುಖ ವೃತ್ತಿಯನ್ನಾಗಿ ಮಾಡಿಕೊಂಡಿದ್ದನ್ನು ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಯಿತು.

೪.೫ ವೈವಾಹಿಕ ಸ್ಥಿತಿ

ಭಾರತದಲ್ಲಿ ವಿವಾಹ ಸಾರ್ವತ್ರಿಕವಾಗಿದೆ. ವಿವಾಹ ಎಂದಾಕ್ಷಣ ಮಹಿಳೆಯರು ಪತಿಯ ಸಂಪಾದನೆಯಲ್ಲೇ ಬದುಕುತ್ತಾರೆ. ಇವರಿಗೆ ಹೊರಗಿನ ದುಡಿಮೆಯ ಅವಶ್ಯಕತೆ ಇರುವುದಿಲ್ಲ ಎಂದೇನೂ ಅರ್ಥವಲ್ಲ. ವಿವಾಹಿತ ಮಹಿಳೆಯರೂ ಕೂಡ ತಮ್ಮ ಕುಟುಂಬ ಸಂಕಷ್ಟದಲ್ಲಿ ಸಿಲುಕಿದಾಗ ಉದ್ಯೋಗವನ್ನು ಹುಡುಕಿಕೊಂಡು ಬರುತ್ತಾರೆ. ಉದ್ಯೋಗದಲ್ಲಿ ತೊಡಗಿದವರು, ಮನೆಯಿಂದ ಹೊರಗೆ ಬಂದು ದುಡಿಯುವವರು ಎಂದಾಕ್ಷಣ ಮಹಿಳೆಯರ ಗೌರವಕ್ಕೆ ಸ್ಥಾನಮಾನಕ್ಕೆ ಚ್ಯುತಿ ಏನೂ ಬರುವುದಿಲ್ಲ. ಬದಲಾಗಿ ಮಹಿಳೆ ಸಬಲಳಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಸದೃಢ ಜೀವನ ನಡೆಸುವ ಅರ್ಹತೆ ಪಡೆಯುತ್ತಾಳೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ವಿವಾಹಿತರೂ, ಅವಿವಾಹಿತರೂ, ವಿಧವೆಯರೂ ಹಾಗೂ ಪರಿತ್ಯಕ್ತೆಯರ ಸಂಖ್ಯೆಯನ್ನು ಕೋಷ್ಟಕ ೪.೫ರಲ್ಲಿ ಕಾಣಬಹುದು.

ಕೋಷ್ಟಕ ೪.೫: ಮನೆಗೆಲಸದ ಮಹಿಳೆಯರ ವೈವಾಹಿಕ ಸ್ಥಿತಿ

ಕ್ರಸಂ.	ಮಹಿಳೆಯರ ವೈವಾಹಿಕ ಸ್ಥಿತಿ	ಒಟ್ಟು	ಶೇಕಡ
೦೧.	ವಿವಾಹಿತ ಮಹಿಳೆಯರು	೧೪೧	೫೬.೪೦
೦೨.	ಅವಿವಾಹಿತ ಮಹಿಳೆಯರು	೩೫	೧೪.೦೦
೦೩.	ವಿಧವೆಯರು	೫೫	೨೨.೦೦
೦೪.	ಪರಿತ್ಯಕ್ತೆಯರು	೧೯	೭.೬೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೫ರಲ್ಲಿ ತಿಳಿಸಿರುವ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಅಧಿಕ ಸಂಖ್ಯೆಯ ವಿವಾಹಿತ ಮಹಿಳೆಯರು ಕಾಣುತ್ತಾರೆ. ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳೆಯರಲ್ಲಿ ೧೪೧ ಮಹಿಳೆಯರು ವಿವಾಹಿತರಾಗಿರುತ್ತಾರೆ. ಮಹಿಳೆಯರ ವಯೋಮಾನದ ವಿಶ್ಲೇಷಣೆಯಲ್ಲಿಯೂ ಶೇ. ೫೭.೬ರಷ್ಟು ಮಹಿಳೆಯರು ೨೦ ರಿಂದ ೪೦ ವರ್ಷದ ವಯೋಮಾನದವರಾಗಿದ್ದಾರೆ. ವಿವಾಹಿತ ಮಹಿಳೆಯರು ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಹೊರಗಿನ ಕೆಲಸ ಹಾಗೂ ಮನೆಯ ಕೆಲಸ ಹೀಗೆ ಇಬ್ಬಗೆಯ ಹೊರೆಯನ್ನು ನಿಭಾಯಿಸುವುದು ಮಹಿಳೆಗೆ ಕಷ್ಟದಾಯಕವೆಂದೇ ಹೇಳಬಹುದು. ಈ ಕಾರಣದಿಂದಲೇ ಮಹಿಳೆ ತನ್ನ ಕುಟುಂಬವನ್ನು ನಿರ್ಲಕ್ಷಿಸುತ್ತಾಳೆ. ಇದರ ಪರಿಣಾಮ ಆಕೆಯ ಮಕ್ಕಳ ಮೇಲಾಗುತ್ತದೆ. ಆದರೂ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಹಾಗೂ ತನ್ನ ಪತಿಗೆ ಬೆಂಬಲವಾಗಿ ನಿಲ್ಲಲು ಮಹಿಳೆ ಹೊರಗಿನ ದುಡಿಮೆಯಲ್ಲಿ ತೊಡಗಬೇಕಾಗುತ್ತದೆ. ದುರದೃಷ್ಟವಶಾತ್ ಅಧಿಕ ಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಉತ್ತಮ ಉದ್ಯೋಗವು ಅವಳಿಗೆ ಮರೀಚಿಕೆಯಾಗಿರುವುದು ಸಾಮಾನ್ಯ ಸಂಗತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಡಿಮೆ ವೇತನದ

ಕೆಲಸವೇ ಮಹಿಳೆಗೆ ಸಿಗುತ್ತದೆ. ಆದರೆ ಮಹಿಳೆಯರು ತಮ್ಮ ಕೌಟುಂಬಿಕ ಸ್ಥಿತಿಗತಿಗಳಿಗನುಗುಣವಾಗಿ ತಮ್ಮ ಮನೆಯ ಹತ್ತಿರದಲ್ಲಿಯೇ ಇರುವ ಮನೆಯ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ರೀತಿಯ ಇಬ್ಬಗೆಯ ಹೊರೆಯನ್ನು ಭಾರತೀಯ ಮಹಿಳೆ ಸವಾಲಾಗಿಯೇ ಸ್ವೀಕರಿಸಿದ್ದಾಳೆ. ವಿವಾಹಿತ ಉದ್ಯೋಗಸ್ಥ ಮಹಿಳೆಯರಿಗೆ ಉದ್ಯೋಗದ ಸ್ಥಳದಲ್ಲಿ ಅನೇಕ ರೀತಿಯ ಅನುಕೂಲಗಳನ್ನು ಮಾಡಿಕೊಡಬೇಕೆಂದು ಕಾನೂನುಗಳು ರೂಪಿತವಾಗಿದ್ದರೂ, ಈ ರೀತಿಯ ಕಾನೂನುಗಳನ್ನು ಅಸಂಘಟಿತ ವಲಯಕ್ಕೆ ಅಳವಡಿಸಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ವಿವಿಧ ಕಾರಣಗಳನ್ನು ಇಲ್ಲಿ ಹೆಸರಿಸಬಹುದು. ಒಂದನೇಯದಾಗಿ ಮಹಿಳೆಯರಿಗೆ ಈ ಕಾನೂನುಗಳು ಅಸ್ತಿತ್ವದಲ್ಲಿರುವ ಅರಿವಿರುವುದಿಲ್ಲ, ಎರಡನೇಯದಾಗಿ ಒಡೆಯರು ಈ ಕಾನೂನುಗಳನ್ನು ಜಾರಿಗೆ ತರಲು ಹಿಂದೇಟು ಹಾಕುತ್ತಾರೆ. ದುಡಿಮೆಗಾರರು ತಮಗೆ ನ್ಯಾಯವಾಗಿ ಬರಬೇಕಾದ ಸವಲತ್ತುಗಳನ್ನು ಕೇಳಲು ಕೂಡ ಹಿಂಜರಿಯುತ್ತಾರೆ. ಏಕೆಂದರೆ ಈ ಕಾರಣದಿಂದ ತಾವು ಉದ್ಯೋಗ ವಂಚಿತರಾಗ ಬಹುದೆಂಬ ಭಯ ಅವರನ್ನು ಕಾಡುತ್ತದೆ. ಏಕೆಂದರೆ ಅನೌಪಚಾರಿಕ ವಲಯದ ದುಡಿಮೆಯು ಯಾವುದೇ ಶಾಸನಾತ್ಮಕವಾದ ಹಾಗೂ ಕಾರ್ಮಿಕ ಸಂಘಟನೆಗಳ ಬೆಂಬಲವನ್ನು ಪಡೆದಿರುವುದಿಲ್ಲ. ಹೀಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ನೀತಿನಿರೂಪಕರಿಗೂ ಅಸಂಘಟಿತ ವಲಯದ ದುಡಿಮೆಯು ಒಂದು ಸಮಸ್ಯೆಯಾಗಿದೆ ಎಂದು ಶ್ರೀಮತಿ ನಿರ್ಮಲಾ ಬ್ಯಾನರ್ಜಿ (೧೯೮೫) ಯವರು ಹೇಳಿದ್ದಾರೆ.

ಮನೆಗೆಲಸದ ದುಡಿಮೆಯಲ್ಲಿ ಶೇ. ೧೪ರಷ್ಟು ಅವಿವಾಹಿತ ಮಹಿಳೆಯರಿದ್ದಾರೆ. ಸಾಮಾನ್ಯವಾಗಿ ಪ್ರಮುಖ ಕಂಪನಿಗಳ ಉದ್ಯೋಗಗಳು ಅವಿವಾಹಿತ ಮಹಿಳೆಯರ ಪಾಲಾಗುತ್ತಿವೆ. ಏಕೆಂದರೆ ವಿವಾಹಿತ ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಂಡರೆ ಅವರಿಗೆ ಹೆಚ್ಚಿನ ರಿಯಾಯಿತಿಗಳನ್ನು ಕೊಡಬೇಕಾಗುತ್ತದೆ. (ಹೆರಿಗೆ ಭತ್ಯೆ, ಹೆರಿಗೆ ರಜೆ ಇತ್ಯಾದಿ) ಇಂತಹ ಮಹಿಳೆಯರಿಗೆ ತಮ್ಮ ಕೆಲಸದಲ್ಲಿ ತನ್ಮಯತೆ ಕಡಿಮೆ ಇರುತ್ತದೆ ಎಂಬ ಕಾರಣಗಳನ್ನು ಮಾಲೀಕರು ಕೊಡುತ್ತಾರೆ. ಈ ಕಾರಣಕ್ಕಾಗಿ ಅನೇಕ ಮಹಿಳೆಯರು ತಮ್ಮ ವಿವಾಹದ ವಯಸ್ಸನ್ನು ಮುಂದೂಡುತ್ತಾರೆ, ಆದರೆ ಭಾರತದಂತಹ ಸಂಪ್ರದಾಯಸ್ಥ ಸಮಾಜದಲ್ಲಿ ಅವಿವಾಹಿತ ಮಹಿಳೆಯರು ಮನೆಯಿಂದ ಹೊರಗೆ ಬಂದು ದುಡಿಯುವುದು ಎಂದರೆ ಪ್ರವಾಹದ ವಿರುದ್ಧ ಈಜಿದಂತೆಯೇ ಎನಿಸುತ್ತದೆ. ಆದರೂ ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಿದಾಗ ಹೆಣ್ಣುಮಕ್ಕಳು ಅನಿವಾರ್ಯವಾಗಿ ಇಂತಹ ಕೆಲಸಗಳಲ್ಲಿ ತೊಡಗಬೇಕಾಗುತ್ತದೆ. ಅವಿವಾಹಿತ ಮಹಿಳೆಯರನ್ನು ಅತೀ ದೂರದ ಸ್ಥಳಗಳಿಗೆ ಕಳಿಸುವುದಿಲ್ಲ, ಸಮಯ ಪಾಲನೆ ಮಾಡಬೇಕಾಗುತ್ತದೆ. ಹೀಗೆ ಹತ್ತು ಹಲವು ನಿರ್ಬಂಧಗಳನ್ನು ಎದುರಿಸುತ್ತಾ ದುಡಿಮೆಯಲ್ಲಿ ತೊಡಗಿದ್ದಾರೆ. ಹೊರಗಿನ ದುಡಿಮೆಯಲ್ಲಿಯೂ ಹೆಣ್ಣು ಮಕ್ಕಳು ಅನೇಕ ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಇಷ್ಟೆಲ್ಲಾ ಅನಾನುಕೂಲಗಳನ್ನು ಎದುರಿಸಿದರೂ ಕೂಡ ಮನೆಗೆಲಸದಂತಹ ದುಡಿಮೆಯಲ್ಲಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾಳೆ. ಇಂತಹ ಸಮಸ್ಯೆಗಳು ಮಹಿಳೆಗೆ ಎದುರಾಗುತ್ತಿರುವುದು ಲಿಂಗತಾರತಮ್ಯದ ಕಾರಣದಿಂದಲೇ ಎಂದು ಹೇಳಬಹುದು. ಹೆಣ್ಣು ಮಗುವಿಗೂ ಕೂಡ ವಿದ್ಯಾಭ್ಯಾಸ ಸರಿಯಾದ ರೀತಿಯಲ್ಲಿ ನಡೆದರೆ ಅವಳು ಸಂಘಟಿತ ವಲಯದಲ್ಲಿ

ವೃತ್ತಿಗಾಗಿ ಪೈಪೋಟಿ ನಡೆಸಬಹುದು. ಹಾಗೂ ಮಹಿಳೆಯ ಚಲನೆಯ ಮೇಲಿನ ನಿರ್ಬಂಧವಿಲ್ಲದಿದ್ದರೆ ದೂರದ ಸ್ಥಳಗಳಿಗೆ ತೆರಳಿ ಉದ್ಯೋಗ ನಿರತರಾಗಿ ಅಧಿಕ ಸಂಭಾವನೆ ಸಿಗುವ ಕೆಲಸವನ್ನು ಪಡೆಯಬಹುದು. ಆದರೆ ಮಹಿಳೆಗೆ ಈ ಯಾವ ಅಂಶಗಳ ಬೆಂಬಲವಿಲ್ಲದೇ ತಮ್ಮ ಮನೆಯ ಪರಿಸ್ಥಿತಿಗೆ ಹೊಂದಾಣಿಕೆಯಾಗುವ ಕೆಲಸದಲ್ಲಿ ತೊಡಗಿದ್ದಾರೆ.

ವೈಧವ್ಯ ಎನ್ನುವುದು ಭಾರತೀಯ ಮಹಿಳೆಯರಿಗೆ ಶಾಪವೆಂದೇ ಹೇಳಬಹುದು. ಹೊಸಪೇಟೆಯ ಮನೆಗೆಲಸದ ದುಡಿಮೆಗಾರರಲ್ಲಿ ಶೇ. ೨೨ರಷ್ಟು ಮಹಿಳೆಯರು ವಿಧವೆಯರಿರುವುದು ಕ್ಷೇತ್ರಕಾರ್ಯದಿಂದ ಸಾಬೀತಾಗಿದೆ. ಭಾರತದಂತಹ ರಾಷ್ಟ್ರದಲ್ಲಿ ಬಡತನದ ಕರಿನೆರಳು ಮಹಿಳೆಯರನ್ನು ಎಷ್ಟರ ಮಟ್ಟಿಗೆ ಬಾಧಿಸುತ್ತದೆ ಎಂದರೆ ಕೆಳವರ್ಗದ ಮಹಿಳೆಯರು ವಿವಾಹಿತರಾಗಲೀ, ಅವಿವಾಹಿತರಿರಲಿ, ವಿಧವೆಯರಿರಲಿ, ಪರಿತ್ಯಕ್ತೆಯರಿರಲಿ ದುಡಿಮೆ ಅವರಿಗೆ ಅನಿವಾರ್ಯವಾಗಿದೆ. ಆದರೂ ಕೂಡ ಇವರ ದುಡಿಮೆಯು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಸೇರುತ್ತಿಲ್ಲವಾದ್ದರಿಂದ ಮಹಿಳಾ ಉದ್ಯೋಗ ಭಾಗವಹಿಸುವಿಕೆ ದರದಲ್ಲಿ ಇಳಿಕೆ ಕಂಡುಬರುತ್ತಿದೆ. ಮನೆಗೆಲಸವನ್ನು ಕೂಡ ದುಡಿಮೆ ಎಂದು ಪರಿಗಣಿಸಿಲ್ಲವಾದ್ದರಿಂದ ಮಹಿಳೆಯರ ದುಡಿಮೆಗೆ ಬೆಲೆ ಇಲ್ಲದಂತಾಗಿದೆ. ಅವರಿಗೆ ನ್ಯಾಯವಾಗಿ ಸಿಗಬಹುದಾದ ಸಾಮಾಜಿಕ ಭದ್ರತೆ ಕ್ರಮಗಳಾಗಲೀ, ಉದ್ಯೋಗದ ಸ್ಥಳದಲ್ಲಿ ರಕ್ಷಣೆಯಾಗಲೀ ದೊರೆಯುತ್ತಿಲ್ಲ. ವಿಧವೆಯರಿಗೆ ಸರ್ಕಾರ ವಿಧವಾ ವೇತನವಾಗಿ ಮಾಸಿಕ ಪಿಂಚಣಿ (೫೦೦ ರೂ) ಕೊಡುತ್ತಿದೆಯಾದರೂ ಅದು ಇಂದಿನ ಬೆಲೆ ಏರಿಕೆಗೆ ಯಾವ ರೀತಿಯಲ್ಲೂ ಸಮನಾಗಿರುವುದಿಲ್ಲ, ಅನಕ್ಷರತೆಯ ಕಾರಣದಿಂದಾಗಿ ಕೆಳಮಟ್ಟದ ಉದ್ಯೋಗಕ್ಕೆ ಮಾತ್ರ ಸೀಮಿತವಾಗಿ ಅಲ್ಲಿಯೂ ಕೂಡ ಅನೇಕ ರೀತಿಯ ಶೋಷಣೆಯನ್ನು ಎದುರಿಸುತ್ತಾ ಜೀವಿಸುತ್ತಿದ್ದಾಳೆ. ಒಟ್ಟಾರೆಯಾಗಿ ವಿಧವಾ ಮಹಿಳೆಯರು ಆರ್ಥಿಕವಾಗಿ ಸಬಲರಾದರೂ ಅದು ಅವರಿಗೆ ಸಮಾಜದಲ್ಲಿ ಸ್ವಾತಂತ್ರ್ಯ ಸಮಾನತೆಯನ್ನೇನೂ ತಂದುಕೊಟ್ಟಿರುವುದಿಲ್ಲ. ಅದಕ್ಕಾಗಿ ನಮ್ಮ ನಮೂನೆಯಲ್ಲಿರುವ ವಿಧವಾ ಸ್ತ್ರೀಯರ ಅಭಿಪ್ರಾಯವೇನೆಂದರೆ ಸರ್ಕಾರ ಕೊಡುತ್ತಿರುವ ಮಾಶಾಸನವನ್ನಾದರೂ ಹೆಚ್ಚಿಸಬೇಕು ಎಂಬುದಾಗಿದೆ. ಇದರಿಂದ ತಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪವಾದರೂ ಸುಧಾರಿಸಬಹುದೆಂಬ ಆಶಾಭಾವನೆಯನ್ನು ಹೊಂದಿದ್ದಾರೆ. ೧೯೭೫ರ 'ಟುವರ್ಡ್ಸ್ ಈಕ್ವಾಲಿಟಿ' ವರದಿಯಲ್ಲಿ ಕೂಡ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಅಧಿಕವಾಗಿದೆ ಎಂದು ತಿಳಿದು ಬಂದಿದೆ. ಆದರೆ ದುರದೃಷ್ಟವಶಾತ್ ಇದರ ಪ್ರಮಾಣವನ್ನು ಅಳೆಯಲು ಸರಿಯಾದ ಅಂಕಿಅಂಶಗಳು ಲಭ್ಯವಿಲ್ಲ. ಸಮಾಜ ಕಲ್ಯಾಣ ಇಲಾಖೆ ವರದಿ ಪ್ರಕಾರ ಪ್ರತಿವರ್ಷ ಒಂದು ಲಕ್ಷ ವಿಧವೆಯರು (೨೦ ರಿಂದ ೪೪ ವರ್ಷದೊಳಗಿನ) ದಿಕ್ಕಿಲ್ಲದವರಾಗುತ್ತಿದ್ದಾರೆ ಎಂಬ ವಿಷಯವು ತಿಳಿದು ಬಂದಿದೆ.

ಹೊಸಪೇಟೆಯ ಮನೆಗೆಲಸದ ದುಡಿಮೆಗಾರರಲ್ಲಿ ೧೯ ಮಹಿಳೆಯರು ಅಂದರೆ ಶೇ.೭.೬ ರಷ್ಟು ಮಹಿಳೆಯರು ಪರಿತ್ಯಕ್ತೆಯರಾಗಿದ್ದಾರೆ. ಇಂತಹ ಮಹಿಳೆಯರಿಗೆ ಇತ್ತ ಕೌಟುಂಬಿಕ ನೆಮ್ಮದಿಯೂ ಇರುವುದಿಲ್ಲ. ಅತ್ತ ಉದ್ಯೋಗ ಭದ್ರತೆಯೂ ಇರುವುದಿಲ್ಲ. ಸಮಾಜದಲ್ಲಿಯೂ ಕೂಡ ಜನರ ವಕ್ರದೃಷ್ಟಿಯನ್ನೆದುರಿಸುತ್ತಾ ಬಾಳಬೇಕಾಗುತ್ತದೆ. ಭಾರತೀಯ ಸಮಾಜದಲ್ಲಿ ಪುರುಷ ಪ್ರಾಧಾನ್ಯತೆ ಎಷ್ಟರ ಮಟ್ಟಿಗೆ ಗಟ್ಟಿಗೊಂಡಿದೆ ಎಂದರೆ ಕುಟುಂಬದಲ್ಲಿ ಆಗಲೀ ಪತಿಪತ್ನಿಯರ ಮಧ್ಯದಲ್ಲಾಗಲೀ ಭಿನ್ನಾಭಿಪ್ರಾಯ

ತಲೆದೋರಿತು ಎಂದರೇ ಸಮಾಜ ಕೈಮಾಡಿ ತೋರಿಸುವುದು ಮಹಿಳೆಯ ಕಡೆಗೇ. ಇಂತಹ ಮೂಲಭೂತ ವಾದವನ್ನು ದೂರಮಾಡಲು ಸಾಧ್ಯವಿರುವುದು ಶಿಕ್ಷಣದಿಂದ ಮಾತ್ರ ಎಂಬುದು ಮಹಿಳೆಯರಿಗೂ ಮನವರಿಕೆಯಾಗಿದೆ. ಒಂಟಿ ಹಾಗೂ ಗಂಡಬಿಟ್ಟವಳು (ಪರಿತ್ಯಕ್ತೆ) ಅಥವಾ ಗಂಡನಿಂದ ದೂರವಾದವಳು ಎಂಬ ಕಳಂಕ ಅಂಟಿಸಿಕೊಂಡ ಮಹಿಳೆ, ಮನೆ ಹಾಗೂ ಮಕ್ಕಳ ಜವಾಬ್ದಾರಿಯನ್ನು ನಿಭಾಯಿಸುತ್ತಾ ಹೊರಗಿನ ದುಡಿಮೆಯಲ್ಲಿ ತೊಡಗುವುದು ಎಂದರೆ ಅಸಾಧ್ಯದ ಮಾತೇ, ಆದರೂ ಭಾರತೀಯ ಮಹಿಳೆ ಇಂತಹ ಅಸಾಧ್ಯವನ್ನು ಸಾಧ್ಯಮಾಡಿ ತೋರಿಸಿದ್ದಾಳೆ. ಹೀಗೆ ಕುಟುಂಬದಲ್ಲಿ ಹಾಗೂ ಆರ್ಥಿಕತೆಯಲ್ಲಿ ಮಹಿಳೆಯು 'ಸಮತೋಲನ ಶಕ್ತಿಯಾಗಿ' ಕೆಲಸ ನಿರ್ವಹಿಸುತ್ತಿದ್ದಾಳೆ ಎಂಬ ಅಭಿಪ್ರಾಯವನ್ನು ಎ.ಸಿ.ಪಂಥ್ (೧೯೮೫) ಅವರು ವ್ಯಕ್ತಪಡಿಸಿದ್ದಾರೆ. ಇಂತಹ ಮಹಿಳೆಯರಿಗೆ ಸರ್ಕಾರ ಹಾಗೂ ಸಮಾಜ ಕೇವಲ ಅನುಕಂಪವನ್ನು ವ್ಯಕ್ತಪಡಿಸಿದರೆ ಸಾಕಾಗದು. ಅವರಿಗಾಗಿ ಪ್ರತ್ಯೇಕವಾದ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೆ 'ಯತ್ರ ನಾರ್ಯಸ್ತು ಪೂಜಿತಃ ತತ್ರ ರಮಂತೇ ದೇವತಃ' ಎಂಬ ಶ್ಲೋಕಕ್ಕೆ ಸ್ವಲ್ಪವಾದರೂ ಗೌರವ ಸಲ್ಲಿಸಿದಂತಾಗುತ್ತದೆ.

೪.೬: ಕುಟುಂಬ ಸ್ಥಿತಿ

ಕುಟುಂಬವು ಸಮಾಜದ ಚಿಕ್ಕ ಘಟಕವಾಗಿದೆ. ಕುಟುಂಬ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಎರಡು ರೀತಿಯ ವರ್ಗೀಕರಣ ಮಾಡಲಾಗಿದೆ. ವಿಭಕ್ತ ಹಾಗೂ ಅವಿಭಕ್ತ. ಸಾಂಪ್ರದಾಯಿಕವಾಗಿ ಸಾಮಾನ್ಯವಾಗಿ ಹಿಂದಿನಿಂದಲೂ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಕುಟುಂಬ ವ್ಯವಸ್ಥೆ ಎಂದರೆ ಅವಿಭಕ್ತ ಕುಟುಂಬ. ಅವಿಭಕ್ತ ಕುಟುಂಬವು ಕನಿಷ್ಠ ಮೂರು ಪೀಳಿಗೆಗಳ, (ತಂದೆ, ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು) ಒಂದು ಚಿಕ್ಕ ಸಮಾವೇಶದಂತಿರುವುದು, ಅವಿಭಕ್ತ ಕುಟುಂಬಗಳಲ್ಲಿ ಹಿರಿಯರಿಗೆ ಹೆಚ್ಚಿನ ಗೌರವವಿರುತ್ತದೆ. ಕುಟುಂಬದ ಹಿರಿಯರ ಮೇಲೆ ಎಲ್ಲಾ ಜವಾಬ್ದಾರಿಕೆ ಇರುತ್ತದೆ. ಕುಟುಂಬದ ಹಿರಿಯ ಪುರುಷನೇ ಮಹಿಳೆಯರ ಮೇಲೆ ಹಿಡಿತವನ್ನು ಸಾಧಿಸಿರುತ್ತಾನೆ. ಕುಟುಂಬದ ಹಿರಿಯರ ಪರವಾನಿಗೆ ಪ್ರತೀ ಕೆಲಸಕ್ಕೆ ಅವಶ್ಯವಾಗಿರುತ್ತದೆ. ಅವಿಭಕ್ತ ಕುಟುಂಬದ ಮನೆಯ ವ್ಯವಹಾರದಲ್ಲಿ ಮನೆಯ ಮುಖ್ಯಸ್ಥನ ನಿರ್ಧಾರವೇ ಅಂತಿಮವಾಗಿರುತ್ತದೆ. ಅವಿಭಕ್ತ ಕುಟುಂಬದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡವರಿಗೆ ರಕ್ಷಣೆ ದೊರೆಯುತ್ತದೆ. ಆದರೆ ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ವಾತಂತ್ರ್ಯವಿರದೇ ಪುರುಷ ಪ್ರಧಾನ ಕುಟುಂಬ ವಾಗಿರುತ್ತದೆ. ಕುಟುಂಬದಲ್ಲಿ ಎಲ್ಲರೂ ಸಾಮಾನ್ಯವಾಗಿ ದುಡಿಮೆಯಲ್ಲಿ ತೊಡಗಿರುತ್ತಾರೆ. ಆದರೂ ಮರೆಮಾಚಿದ ನಿರುದ್ಯೋಗ ಅಸ್ತಿತ್ವದಲ್ಲಿರುತ್ತದೆ.

ಅವಿಭಕ್ತ ಕುಟುಂಬಗಳು ವಿಭಜಿಸಿ ವಿಭಕ್ತ ಕುಟುಂಬಗಳಾಗಿ ಮಾರ್ಪಡುತ್ತವೆ. ಚಿಕ್ಕ ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದ್ದು ಆಧುನಿಕತೆಯ ಗಾಳಿ ಸೋಕಿರುತ್ತದೆ ಎನ್ನಬಹುದು. ಹೊಸಪೇಟೆಯ ಒಟ್ಟು ಜನಸಂಖ್ಯೆ (೨೦೦೧ರ ಜನಗಣತಿ ಪ್ರಕಾರ) ೧,೬೪,೨೪೦ ಆಗಿದ್ದು ಇಲ್ಲಿ ೩೧.೯೪೯ ಕುಟುಂಬ ಘಟಕಗಳಿವೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೧೪೩ ಮಹಿಳೆಯರು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದಾರೆ. ಇನ್ನು ೧೦೭ ಮಹಿಳೆಯರು ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುತ್ತಾರೆ. ಅಂದರೆ ಅವಿಭಕ್ತ ಕುಟುಂಬಗಳ ಸಂಖ್ಯೆ ಕ್ರಮೇಣ ಕಡಿಮೆ ಆಗುತ್ತಿದ್ದು ವಿಭಕ್ತ

ಕುಟುಂಬಗಳ ಸಂಖ್ಯೆ ಅಧಿಕವಿರುವುದು ಕಂಡುಬರುತ್ತದೆ. ಕೋಷ್ಟಕ ೪.೬ರಲ್ಲಿ ಹೊಸಪೇಟೆಯ ಮನೆಗೆಲಸದ ಮಹಿಳೆಯರ ಕುಟುಂಬ ಸ್ಥಿತಿಯನ್ನು ಗಮನಿಸಬಹುದು.

ಕೋಷ್ಟಕ ೪.೬ : ಮನೆಗೆಲಸದ ಮಹಿಳೆಯರ ಕುಟುಂಬ ಸ್ಥಿತಿ

ಕ್ರಸಂ	ಮನೆಗೆಲಸದ ಮಹಿಳೆಯರ ಕುಟುಂಬದ ಸ್ಥಿತಿ	ಒಟ್ಟು	ಶೇಕಡಾ
೦೧	ಅವಿಭಕ್ತ ಕುಟುಂಬಗಳು	೧೦೭	೪೨.೮೦
೦೨.	ವಿಭಕ್ತ ಕುಟುಂಬಗಳು	೧೪೩	೫೭.೨೦
	ಒಟ್ಟು	**೨೫೦**	**೧೦೦.೦೦**

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೬ರ ಮಾಹಿತಿಯಂತೆ ಸಮೀಕ್ಷೆಗೊಳಪಡಿಸಲಾದ ೨೫೦ ಕುಟುಂಬಗಳಲ್ಲಿ ೧೦೭ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿದ್ದು, ಇಲ್ಲಿ ಸದಸ್ಯರ ಸಂಖ್ಯೆ ಅಧಿಕವಾಗಿದೆ. ೧೪೩ ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು, ಈ ಕುಟುಂಬದಲ್ಲಿ ಗಂಡ, ಹೆಂಡತಿ, ಮಕ್ಕಳು ಒಟ್ಟಾರೆಯಾಗಿ ನಾಲ್ಕೈದು ಜನ ವಾಸಮಾಡುತ್ತಿರುವ ವಿಷಯ ತಿಳಿದು ಬಂದಿದೆ. ಅವಿಭಕ್ತ ಕುಟುಂಬದ ವ್ಯವಸ್ಥೆಯು ಭಾರತೀಯ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯನ್ನು ಪ್ರತಿಬಿಂಬಿಸಿದರೆ, ವಿಭಕ್ತ ಕುಟುಂಬ ವ್ಯವಸ್ಥೆಯು ಆಧುನಿಕತೆಯ ಸಂಕೇತವಾಗಿದೆ.

೪.೭: ಮನೆಗೆಲಸದ ಮಹಿಳೆಯರ ವಾಸಸ್ಥಾನ

ಹೊಸಪೇಟೆಯ ಮನೆಗೆಲಸದ ದುಡಿಮೆಗಾರರಲ್ಲಿ ಕೆಲವರು ಅಂದರೆ ಅಧಿಕ ಸಂಖ್ಯೆಯ ಮಹಿಳೆಯರು ಹೊಸಪೇಟೆಯ ನಿವಾಸಿಗಳೇ ಆಗಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ. ಅಧಿಕ ಸಂಖ್ಯೆಯ ಮಹಿಳೆಯರು ಸ್ವಂತ ಸ್ಥಳವನ್ನೇ ತಮ್ಮ ದುಡಿಮೆಯ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲು ಹಲವಾರು ಕಾರಣಗಳಿವೆ. ನಮ್ಮ ಸಾಂಪ್ರದಾಯಿಕ ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗಿದ್ದಷ್ಟು ಸ್ವಾತಂತ್ರ್ಯ ಮಹಿಳೆಯರಿಗಿರುವುದಿಲ್ಲ. ಅಲ್ಲದೇ ಮಹಿಳೆಯನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ನೋಡುವುದರಿಂದ ಗೌರವವೂ ಕಡಿಮೆ. ಕುಟುಂಬದಲ್ಲಿ ಲಿಂಗತಾರತಮ್ಯದ ಕಾರಣದಿಂದ ಗಂಡುಮಕ್ಕಳಿಗೆ ಸಿಕ್ಕಷ್ಟು ವಿದ್ಯಾಭ್ಯಾಸದ ಅವಕಾಶಗಳು ಹೆಣ್ಣುಮಕ್ಕಳಿಗೆ ಲಭಿಸಲು ಸಾಧ್ಯವಿಲ್ಲ. ಅಲ್ಲದೇ ಗಂಡು ಮಕ್ಕಳನ್ನು ಬೇರೆ ಊರಿಗೆ ಕಳಿಸಿದಷ್ಟು ಸುಲಭವಾಗಿ ಹೆಣ್ಣುಮಕ್ಕಳನ್ನು ಕಳಿಸುವುದಿಲ್ಲ. ಹೀಗೆ ಶಿಕ್ಷಣದ ಕೊರತೆ ಹಾಗೂ ಚಲನೆಯ ಮೇಲಿನ ನಿರ್ಬಂಧಗಳಿಂದಾಗಿ ಹೆಣ್ಣುಮಕ್ಕಳು ತಮ್ಮ ಮನೆಗೆ ಹತ್ತಿರದಲ್ಲೇ ಇರುವ ಉದ್ಯೋಗವನ್ನರಸಿ ಹೋಗುತ್ತಾರೆ. ಇವರಿಗೆ ವೃತ್ತಿ ನೈಪುಣ್ಯತೆ ಇರದ ಕಾರಣ ಉತ್ತಮ ಉದ್ಯೋಗಾವಕಾಶಗಳೂ ಇರುವುದಿಲ್ಲ, ಆದುದರಿಂದ ತನ್ನ ಸಾಮರ್ಥ್ಯಕ್ಕನುಗುಣವಾದ ವೃತ್ತಿಯನ್ನು ಮಹಿಳೆ ಆಯ್ಕೆ ಮಾಡಿಕೊಳ್ಳುತ್ತಾಳೆ. ಅದು ಕಡಿಮೆ ಕೂಲಿಯ, ಯಾವ ರಕ್ಷಣೆಯೂ ಇಲ್ಲದ ಮನೆಗೆಲಸದಂಥ ದುಡಿಮೆಯಾಗಿರುತ್ತದೆ. ಹೀಗೆ ಅಸಂಘಟಿತ ವಲಯದಲ್ಲಿ ಅದರಲ್ಲೂ ಪ್ರಮುಖವಾಗಿ

ಹೆಣ್ಣುಮಕ್ಕಳು ತಾವು ವಾಸಿಸುವ ಸ್ಥಳದಲ್ಲಿಯೇ ಕಾರ್ಯ ನಿರತರಾಗುವುದರಿಂದ ಹಾಗೂ ಇಂತಹ ಕೆಲಸವನ್ನೇ ಅಪೇಕ್ಷೆ ಪಡುವುದರಿಂದ ಅವರ ಶ್ರಮಕ್ಕೆ ಕಡಿಮೆ ಬೆಲೆಯನ್ನು ಕಟ್ಟಲಾಗುತ್ತದೆ. ಇದೇ ಅಭಿಪ್ರಾಯವನ್ನು ಶ್ರೀಮತಿ ಹೆಚ್.ಎಂ.ಹೇಮಲತಾ (೨೦೦೬) ಅವರು ವ್ಯಕ್ತಪಡಿಸಿರುತ್ತಾರೆ. ಹೆಣ್ಣುಮಕ್ಕಳು ತಾವು ವಾಸಿಸುವ ಸ್ಥಳದಲ್ಲಿ ಸಿಗುವಂತಹ ಕಡಿಮೆ ಕೂಲಿ, ಕಡಿಮೆ ಕೌಶಲ್ಯ ಅಪೇಕ್ಷಿಸುವ ಆದರೆ ನಿರಂತರ ದುಡಿಮೆ ನಿರೀಕ್ಷಿಸುವ ಕೆಲಸದಲ್ಲಿ ತೊಡಗುತ್ತಾರೆ. ಹೀಗೆ ಹೊಸಪೇಟೆಯ ಅಧಿಕ ಸಂಖ್ಯೆಯ ಮಹಿಳಾ ದುಡಿಮೆಗಾರರು ಫ್ಲೆಕ್ಸಿಬಲ್ (Flexible) ಗುಣವುಳ್ಳ ಕೆಲಸದಲ್ಲಿ ತೊಡಗಿದ್ದಾರೆ.

ಅಧಿಕ ಸಂಖ್ಯೆಯ ಮಹಿಳೆಯರು ಮೇಲೆ ತಿಳಿಸಿದ ಕಾರಣಗಳಿಂದಾಗಿ ತಮ್ಮ ಅನುಕೂಲಕ್ಕೆ ತಕ್ಕಂತಹ ಕೆಲಸದಲ್ಲಿ ತೊಡಗಿದರೆ ಇನ್ನು ೪೫ ಮಹಿಳೆಯರು ಬೇರೆ ಬೇರೆ ಕಡೆಗಳಿಂದ ವಲಸೆ ಬಂದವರಾಗಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ನಿರುದ್ಯೋಗ ಸಮಸ್ಯೆ. ತಮ್ಮ ಊರುಗಳಲ್ಲಿ ಉದ್ಯೋಗ ಸಿಗದೇ ಬಡತನ ಸ್ಥಿತಿಯನ್ನು ಎದುರಿಸುತ್ತಿರುವ ಜನ ಜೀವನೋಪಾಯಕ್ಕಾಗಿ ವಲಸೆ ಬರುತ್ತಾರೆ. ಅದೂ ಅಲ್ಲದೆ ಕೈಗಾರಿಕೀಕರಣ ಹಾಗೂ ಗಣಿಗಾರಿಕೆಯಿಂದ ಹೊಸಪೇಟೆಯಲ್ಲಿ ಉದ್ಯೋಗ ಅವಕಾಶಗಳು ಹೆಚ್ಚಾಗಿ ಅನೇಕ ಜನ ಹೊಸಪೇಟೆಯ ಕಡೆ ವಲಸೆ ಬರುತ್ತಿದ್ದಾರೆ. ಕೃಷಿಯಲ್ಲಿ ಹಿನ್ನಡೆ ಉಂಟಾಗಿದ್ದರಿಂದ ಹಳ್ಳಿಯ ಜನ ಅಧಿಕ ಸಂಖ್ಯೆಯಲ್ಲಿ ಉದ್ಯೋಗವನ್ನರಸಿ ಬರುತ್ತಿದ್ದಾರೆ. ಈ ರೀತಿ ಉದ್ಯೋಗವನ್ನರಸಿ ಬಂದ ಕೆಲ ಜನರಿಗೆ ಅದೃಷ್ಟದ ಬಾಗಿಲು ತೆರೆದಿದೆ. ಇನ್ನು ಕೆಲವರಿಗೆ ಬದುಕು ಕಷ್ಟವಾಗಿದೆ. ಅಂತಹ ಜನ ಜೀವನೋಪಾಯಕ್ಕಾಗಿ ಮನೆಗೆಲಸದಂತಹ ಕಡಿಮೆ ಕೂಲಿಯ ಕೆಲಸವನ್ನು ಆಯ್ದುಕೊಂಡು ಜೀವನ ನಡೆಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಜೀವನ ನಿರ್ವಹಣೆಗೆ ಕೆಲಸ ಸಿಗದೇ ಹೋದಾಗ ಮಹಿಳೆಯರು ಪಟ್ಟಣಕ್ಕೆ ಬರುತ್ತಾರೆ. ಪಟ್ಟಣದ ಮಧ್ಯಮ ವರ್ಗದ ಮಹಿಳೆಯರು ತಮಗೆ ದೊರಕಿದ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ವಿದ್ಯಾವಂತರಾಗಿ ಉದ್ಯೋಗದಲ್ಲಿ ತೊಡಗಿದ್ದಾರೆ. ಇಂತಹ ಮಹಿಳೆಯರಿಗೆ ಮನೆಗೆಲಸದ ಒತ್ತಡ ಜಾಸ್ತಿಯಾದಾಗ ಈ ಹೊರೆಯನ್ನು ನಿಭಾಯಿಸಲು ಬಡಮಹಿಳೆಯರ ಮೊರೆ ಹೋಗುತ್ತಾರೆ ಅಲ್ಲದೇ ಶ್ರೀಮಂತ ವರ್ಗದವರು ಸಮಾಜದಲ್ಲಿ ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಲು ಮನೆಗೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳುತ್ತಾರೆ. ಈ ಕಾರಣಗಳಿಂದಾಗಿ ಮನೆಗೆಲಸದ ಮಹಿಳೆಯರಿಗೆ ಬೇಡಿಕೆ ಹೆಚ್ಚಾದಂತೆಲ್ಲ ಗ್ರಾಮಗಳಿಂದ ಬಡ ಜನರು ವಲಸೆ ಬರುತ್ತಿದ್ದಾರೆ.

ಬಿ. ವಿಲಿಯಂ ಧರ್ಮರಾಜ್ (೨೦೦೯) ಅವರೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮನೆಗೆಲಸದಂತಹ ಕೆಲಸಗಳಿಗೆ ಹೆಚ್ಚಿದ ಬೇಡಿಕೆಯಿಂದಾಗಿ ಗ್ರಾಮದ ಮಹಿಳೆಯರು ಕಡಿಮೆ ಆದಾಯದ, ಋತುಮಾನ ಆಧಾರಿತ ಉದ್ಯೋಗವನ್ನು ಬಿಟ್ಟು ಪಟ್ಟಣಕ್ಕೆ ಧಾವಿಸುತ್ತಾರೆ. ಇನ್ನು ಹೊಸಪೇಟೆಯ ಸುಪ್ರಸಿದ್ಧ ತುಂಗಭದ್ರಾ ಆಣೆಕಟ್ಟು (T.B.Dam) ಕಟ್ಟುವಾಗ ಅನೇಕ ಜನ ಆಂಧ್ರ ಹಾಗೂ ತಮಿಳುನಾಡಿನಿಂದ ಕುಟುಂಬ ಸಮೇತ ಕರ್ನಾಟಕದ ಹೊಸಪೇಟೆಗೆ ಬಂದು ನೆಲೆಸಿದ್ದರಿಂದ ಅವರು ಹೊಸಪೇಟೆಯವರೇ ಆಗಿದ್ದಾರೆ. ಇವರಲ್ಲಿ ಕೆಲವರು ಮನೆಗೆಲಸದ ದುಡಿಮೆಯಲ್ಲಿ ತೊಡಗಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ

ತಮ್ಮ ಸ್ವಂತ ಸ್ಥಳಗಳಿಗೆ ಹೋಗಿ ಬರುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಕೋಷ್ಟಕ ೪.೭ರಲ್ಲಿ ಹೊಸಪೇಟೆಯ ಮನೆಗೆಲಸದ ಮಹಿಳೆಯರ ವಾಸಸ್ಥಳದ ಮಾಹಿತಿ ಇದೆ.

ಕೋಷ್ಟಕ ೪.೭: ಮಹಿಳೆಯರ ವಾಸಸ್ಥಳದ ಮಾಹಿತಿ

ಕ್ರಸಂ.	ವಾಸಸ್ಥಳ ಮಾಹಿತಿ	ಒಟ್ಟು	ಶೇಕಡ
೦೧	ಸ್ವಂತ ಊರಿನವರು	೨೦೫	೮೨
೦೨	ವಲಸೆ ಬಂದವರು	೪೫	೧೮
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ.

ಕೋಷ್ಟಕ ೪.೭ರ ಮಾಹಿತಿಯಂತೆ ಸಮೀಕ್ಷೆಗೊಳಗಾದ ೨೫೦ ಮನೆಗೆಲಸದ ಮಹಿಳೆಯರಲ್ಲಿ ೨೦೫ ಮಹಿಳೆಯರು ಇದೇ ಊರಿನ (ಹೊಸಪೇಟೆಯ) ನಿವಾಸಿಗಳಾಗಿದ್ದು ಸುಮಾರು ೪೫ ಮಹಿಳೆಯರು ಬೇರೆ ಊರಿನಿಂದ, ಬೇರೆ ಬೇರೆ ಜಿಲ್ಲೆ, ಹಾಗೂ ರಾಜ್ಯಗಳಿಂದ ಬಂದವರಾಗಿದ್ದಾರೆ. ಈ ರೀತಿ ಬೇರೆ ಊರಿನಿಂದ ಬಂದು ಇಲ್ಲಿ ಉದ್ಯೋಗದಲ್ಲಿ ತೊಡಗಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಕ್ಷೇತ್ರ ಕಾರ್ಯದ ಸಮಯದಲ್ಲಿ ಶೇ. ೮೨ರಷ್ಟು ಮಹಿಳೆಯರ ವಾಸಸ್ಥಾನ ಹೊಸಪೇಟೆ ಎಂದು ದಾಖಲಾಗಿರುತ್ತದೆ. ಉಳಿದ ಶೇ. ೧೮ರಷ್ಟು ಮಹಿಳೆಯರು ವಲಸೆ ಬಂದವರಾಗಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಬೇರೆಯವರ ಮನೆಯ ಕೆಲಸವು ಮಹಿಳೆಯರು ತಾವಾಗಿ ಆಯ್ಕೆ ಮಾಡಿಕೊಂಡು ಬಂದ ಕೆಲಸವಾಗಿರುವುದಿಲ್ಲ. ಏಕೆಂದರೆ ಕಡಿಮೆ ಕೂಲಿಯ, ಕೆಳದರ್ಜೆಯ ಕೆಲಸವನ್ನು ಯಾರೂ ಆಪೇಕ್ಷಿಪಡುವುದಿಲ್ಲ. ಹೆಚ್ಚಿನ ಮಹಿಳೆಯರು ಅನಕ್ಷರಸ್ಥರಾದ್ದರಿಂದ, ಕೌಶಲ್ಯ ರಹಿತರಾದ್ದರಿಂದ ಸಂಘಟಿತ ವಲಯದ ಕೆಲಸಕ್ಕೆ ಅನರ್ಹರಾದ್ದರಿಂದ ಅಸಂಘಟಿತ ವಲಯದ ಕೆಲಸವನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅದೂ ಅಲ್ಲದೇ ಜನರ ಬಡತನದ ಸ್ಥಿತಿ ಹಾಗೂ ಕೌಟುಂಬಿಕ ಪರಿಸ್ಥಿತಿಗಳು ಮಹಿಳೆಯರನ್ನು ಇಂತಹದೇ ಕೆಲಸದಲ್ಲಿ ನೆಲೆಯೂರುವಂತೆ ಮಾಡುತ್ತದೆ.

ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನ :

ಮಾನವ ಸಮಾಜ ಜೀವಿಯಾಗಿದ್ದು, ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಮನೆಗೆಲಸದ ಮಹಿಳೆಯರ ಜಾತಿ, ಕೌಟುಂಬಿಕ ಸಂಬಂಧ, ಸಾಮಾಜಿಕ ಕಟ್ಟುಪಾಡುಗಳ ಸಮಸ್ಯೆ, ಶಿಕ್ಷಣದ ಪ್ರಾಮುಖ್ಯತೆ, ಜಾತಿಸಮಸ್ಯೆ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಅನ್ಯಾಯದ ವಿರುದ್ಧ ಪ್ರತಿಭಟನೆ ಮಕ್ಕಳ ಜವಾಬ್ದಾರಿ, ಕೆಲಸದ ಮನೆಯಲ್ಲಿ ಪ್ರವೇಶ ಹಾಗೂ ಮಕ್ಕಳು ಶಾಲೆ ಬಿಡಲು ಕಾರಣವಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ದಾಖಲಾದ ಮಾಹಿತಿಗಳ ಆಧಾರದ ಮೇಲೆ ಮಹಿಳೆಯರು ಸಮಾಜದಲ್ಲಿ ಹೊಂದಿರುವ ಸ್ಥಾನಮಾನದ ವಿಶ್ಲೇಷಣೆ ಮಾಡಲಾಗಿದೆ.

೪.೮. ಮನೆಗೆಲಸದ ಮಹಿಳೆಯರ ಜಾತಿವಾರು ವಿಂಗಡಣೆ

ಮನೆಗೆಲಸದ ಮಹಿಳೆಯರ ಜಾತಿವಾರು ವರ್ಗೀಕರಣವನ್ನು ಮಾಡಲಾಗಿದ್ದು ಅದರಲ್ಲಿ ಎಲ್ಲಾ ಜಾತಿಯ ಮಹಿಳೆಯರಿಗೂ ಪ್ರಾತಿನಿಧ್ಯ ನೀಡಲಾಗಿದೆ. ಜಾತಿವಾರು ವರ್ಗೀಕರಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದ ಮಹಿಳೆಯರ ಸಂಖ್ಯೆಯನ್ನು ಕೋಷ್ಟಕ ೪.೮ರಲ್ಲಿ ದಾಖಲಿಸಲಾಗಿದೆ.


ಕೋಷ್ಟಕ ೪.೮: ಮನೆಗೆಲಸದ ಮಹಿಳೆಯರ ಜಾತಿವಾರು ವಿಂಗಡನೆ

ಒಟ್ಟು	ಮನೆಗೆಲಸದ ಮಹಿಳೆಯರ ಜಾತಿವಾರು ವಿಂಗಡನೆ	ಒಟ್ಟು	ಶೇಕಡ
೦೧	ಪರಿಶಿಷ್ಟ ಜಾತಿಯ ಮಹಿಳೆಯರು	೬೦	೨೪.೦೦
೦೨	ಪರಿಶಿಷ್ಟ ಪಂಗಡದ ಮಹಿಳೆಯರು	೬೨	೨೪.೮೦
೦೩	ಹಿಂದುಳಿದ ವರ್ಗದ ಮಹಿಳೆಯರು	೧೧೩	೪೫.೨೦
೦೪	ಸಾಮಾನ್ಯ ವರ್ಗದ ಮಹಿಳೆಯರು	೧೫	೬.೦೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೮ರ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಶೇ. ೨೪ರಷ್ಟು ಅಂದರೆ ೬೦ ಮಹಿಳೆಯರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ೬೨ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ಆದರೆ ಅತೀ ಹೆಚ್ಚಿನ ಮಹಿಳೆಯರು ಹಿಂದುಳಿದ ವರ್ಗದವರಾಗಿದ್ದಾರೆ. ಸಾಮಾನ್ಯ ವರ್ಗಕ್ಕೆ ಸೇರಿದ ೧೫ ಮಹಿಳೆಯರು ಮನೆಗೆಲಸದಲ್ಲಿ ನಿರತರಾಗಿದ್ದಾರೆ. ಅಧಿಕ ಸಂಖ್ಯೆಯ ಅಂದರೆ ಶೇಕಡ ೯೪ರಷ್ಟು ಮಹಿಳೆಯರು (ಪ.ಜಾ, ಪ.ಪಂ, ಹಿಂ.ವ) ಸಮಾಜದ ಅತೀ ಕೆಳಸ್ತರದ ದುಡಿಮೆಯಲ್ಲಿ ತೊಡಗಿರುವುದು ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ದತ್ತಾಂಶಗಳಿಂದ ದೃಢಪಟ್ಟಿರುವ ಸಂಗತಿಯಾಗಿದೆ. ಅಲ್ಲದೇ ಕೇವಲ ಶೇಕಡ ೬ರಷ್ಟು ಮಹಿಳೆಯರು ಸಾಮಾನ್ಯ ವರ್ಗದವರಾಗಿರುವುದು ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಅಸ್ತಿತ್ವದಲ್ಲಿರುವುದಕ್ಕೆ ಸಾಕ್ಷಿಯಾಗಿದೆ. ಕೆಳ ಸಮುದಾಯಕ್ಕೆ ಸೇರಿದ ಅಧಿಕ ಸಂಖ್ಯೆಯ ಮಹಿಳೆಯರು ಮನೆಗೆಲಸದಂತಹ ಕೆಳಸ್ತರದ ದುಡಿಮೆಯಲ್ಲಿ ತೊಡಗಲು ಕಾರಣವನ್ನು ಇಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಹಿಂದಿನ ಕಾಲದಿಂದಲೂ ಇಂತಹ ಜನರನ್ನು ಶಿಕ್ಷಣ ವಂಚಿತರನ್ನಾಗಿ ಮಾಡಿದುದೇ ಇದಕ್ಕೆ ಪ್ರಮುಖ ಕಾರಣ ಎಂಬ ಸಾಮಾನ್ಯ ತೀರ್ಮಾನಕ್ಕೆ ಬರಲಾಗಿದೆ.

ಮನೆಗೆಲಸದ ಮಹಿಳೆಯರ ಜಾತಿವಾರು ವರ್ಗೀಕರಣವನ್ನು ಬಿಂಬಿಸುವ ಸ್ತಂಭ ರೇಖಾಚಿತ್ರ



ಮೇಲಿನ ರೇಖಾಚಿತ್ರದಲ್ಲಿ ತೋರ್ಪಡಿಸಿದಂತೆ ox ಅಕ್ಷದಲ್ಲಿ ಸಮೀಕ್ಷೆಗೊಳಪಟ್ಟು ವರ್ಗೀಕರಣಗೊಂಡ ಜಾತಿಗಳನ್ನು ಹಾಗೂ oy ಅಕ್ಷದಲ್ಲಿ ಮಹಿಳೆಯರ ಶೇಕಡವಾರು ಪ್ರಮಾಣವನ್ನು ತೋರಿಸಲಾಗಿದೆ. ಚಿತ್ರದಲ್ಲಿ ಬಿಂಬಿಸಿರುವಂತೆ ಸಮೀಕ್ಷೆಗೊಳಪಟ್ಟ ೨೫೦ ಮಹಿಳೆಯರಲ್ಲಿ ೬೦ ಮಹಿಳೆಯರು ಅಂದರೆ ಶೇ. ೨೪ರಷ್ಟು ಮಹಿಳೆಯರು ಪರಿಶಿಷ್ಟ ಜಾತಿಯವರಾಗಿದ್ದಾರೆ. ಹಾಗೂ ೬೨ ಅಂದರೆ ಶೇ. ೨೪.೮ರಷ್ಟು ಮಹಿಳೆಯರು ಪರಿಶಿಷ್ಟ ಪಂಗಡದವರಾಗಿದ್ದಾರೆ. ಆದರೆ ಅತೀ ಹೆಚ್ಚಿನ ಮಹಿಳೆಯರು ಅಂದರೆ ಶೇ. ೪೫.೨ರಷ್ಟು ಮಹಿಳೆಯರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ಸಾಮಾನ್ಯ ವರ್ಗದ ಮಹಿಳೆಯರ ಸಂಖ್ಯೆ ೧೫ ಅಂದರೆ ಶೇ. ೬ರಷ್ಟು ಮಹಿಳೆಯರು ಮನೆಗೆಲಸದಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅಧ್ಯಯನವು ಹೊಸಪೇಟೆಯ ಎಲ್ಲಾ ಬಡಾವಣೆಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಜಾತಿಯ ಮಹಿಳೆಯರನ್ನು ಒಳಗೊಂಡಿರುತ್ತದೆ.

೪.೯: ಕೌಟುಂಬಿಕ ಹಾಗೂ ಸಾಮಾಜಿಕ ಅರಿವಿನ ಮಾಹಿತಿ

ಮನೆಗೆಲಸದ ಮಹಿಳೆಯರ ಕೌಟುಂಬಿಕ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ವಿಶ್ಲೇಷಣೆಗೊಳಪಡಿಸುವುದಕ್ಕಾಗಿ ಅವರ ವೈಯಕ್ತಿಕ ಬದುಕಿಗೆ ಸಂಬಂಧಪಟ್ಟಂತೆ ವಿಚಾರಿಸಿದಾಗ ೨೧೨ ಮಹಿಳೆಯರು ತಮ್ಮ ಕುಟುಂಬದ ಜೊತೆ, ನೆರೆಯವರ ಜೊತೆ, ಮನೆ ಮಾಲೀಕರ ಜೊತೆ ಉತ್ತಮ ಸಂಬಂಧವನ್ನು ಹೊಂದಿರುವ ಸಂಗತಿ ತಿಳಿದು ಬಂದಿದೆ. ನಮ್ಮ ಅಧ್ಯಯನಗಳನ್ನು ಪರಿಶೀಲಿಸಿದಾಗ ಅಧಿಕ ಸಂಖ್ಯೆಯ ಮಹಿಳೆಯರು ತಮ್ಮ ಕುಟುಂಬಕ್ಕೆ ಆರ್ಥಿಕವಾಗಿ ಬೆಂಬಲ ನೀಡಲು ದುಡಿಮೆಯಲ್ಲಿ ನಿರತರಾಗಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿದೆ. ಮಹಿಳೆಯರು ಕುಟುಂಬದಲ್ಲಿ ಹಿರಿಯರ ಜೊತೆ (ಅತ್ತೆ, ಮಾವ, ತಂದೆ, ತಾಯಿ) ಹಾಗೂ ಗಂಡನ ಜೊತೆ ಉತ್ತಮ ಸಂಬಂಧವನ್ನು ಹೊಂದಿದವರಾಗಿರುತ್ತಾರೆ. ಕುಟುಂಬದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿದಾಗ ಅಥವಾ ಕುಟುಂಬದ ಸದಸ್ಯರು ಅನಾರೋಗ್ಯ ಪೀಡಿತರಾದಾಗ ದುಡಿಮೆಯ ರಂಗವನ್ನು ಪ್ರವೇಶಿಸುತ್ತಾರೆ. ಆದರೆ ಇಷ್ಟು ಒಳ್ಳೆಯ ಮನೋಭಾವನೆಯಿಂದ ದುಡಿಯಲು ಬಂದ ಮಹಿಳೆ ಶಿಕ್ಷಣ ಹಾಗೂ ನೈಪುಣ್ಯತೆಯಿಂದ ವಂಚಿತಳಾಗಿರುತ್ತಾಳೆ. ಈ ಕಾರಣಕ್ಕಾಗಿ

ಅವಳು ಅಸಂಘಟಿತ ವಲಯದ ದುಡಿಮೆಗೆ ಸೀಮಿತಳಾಗುತ್ತಾಳೆ. ಮಹಿಳೆ ಕುಟುಂಬದ ಹಿತಕ್ಕಾಗಿ ತನ್ನೆಲ್ಲಾ ಆಸೆ ಆಕಾಂಕ್ಷೆಗಳನ್ನು ತ್ಯಾಗ ಮಾಡಿ ಕುಟುಂಬಕ್ಕಾಗಿ ದುಡಿಯುತ್ತಾಳೆ. ದುಡಿಮೆಯಿಂದ ಆರ್ಥಿಕವಾಗಿ ಸ್ವಾತಂತ್ರ್ಯವನ್ನೇನೋ ಹೊಂದುತ್ತಾಳೆ. ಆದರೆ ಅವಳನ್ನು ಕುಟಂಬದ ಯಜಮಾನಿಯಾಗಿ ಗೌರವಿಸುತ್ತಿಲ್ಲ. ಏಕೆಂದರೆ ನಮ್ಮದು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿದ್ದು, ಕುಟುಂಬದ ಯಜಮಾನ ಯಾವುದೇ ಸಂಪಾದನೆಯಲ್ಲಿ ತೊಡಗದೇ ಇದ್ದರೂ ಅತನಿಗೆ ಹೆಚ್ಚಿನ ಮನ್ನಣೆ ಕುಟುಂಬದಲ್ಲಿ ದೊರೆಯುತ್ತಿದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರ ಮನೆಯಲ್ಲಿಯೂ ಕೂಡ ಕುಟುಂಬದ ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳುವವನು ಮನೆಯ ಯಜಮಾನನೇ ಆಗಿರುತ್ತಾನೆ. ಏನೇ ಆದರೂ ಇಬ್ಬಗೆಯ ಹೊರೆಯನ್ನು ನಿಭಾಯಿಸುವ ಮಹಿಳೆಯರು ಕುಟುಂಬದಲ್ಲಿ ತಕ್ಕಮಟ್ಟಿಗೆ ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಏನೆಲ್ಲಾ ಸಮಸ್ಯೆಗಳು ಎದುರಾದರೂ ತನ್ನನ್ನು ಅಗೌರವದಿಂದ ಕಂಡರೂ ತಾನು ಮಾತ್ರ ಎಲ್ಲರೊಂದಿಗೆ ಸಹಕಾರಿಯಾಗಿ ಬಾಳುತ್ತಿದ್ದಾಳೆ.

ಆದರೆ ೩೮ ಮಹಿಳೆಯರ ಕೌಟುಂಬಿಕ ಸಂಬಂಧ ಉತ್ತಮವಾಗಿಲ್ಲವೆಂಬ ಅಂಶ ಬೆಳಕಿಗೆ ಬಂದಿದೆ. ಕೌಟುಂಬಿಕ ಸಂಬಂಧ ಹದಗೆಡಲು ಕಾರಣಗಳನ್ನು ಮಹಿಳೆಯರು ಹೇಳಿಕೊಂಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ತಮ್ಮ ಪತಿರಾಯರ ದುರಭ್ಯಾಸಗಳು, ಎರಡನೆಯದಾಗಿ ತಮ್ಮ ಬೆವರಿನ ಫಲವಾಗಿ ವಿದ್ಯಾವಂತರಾಗಿ ಆರ್ಥಿಕವಾಗಿ ಸಬಲರಾದ ಮಕ್ಕಳು ತಮ್ಮಿಂದ ದೂರವಾಗಿರುವುದು. ಮೂರನೆಯದಾಗಿ ಗಂಡನಿಂದ ದೂರವಾದವರು. ಸಾಮಾನ್ಯ ಮಾಹಿತಿಯ ವಿಶ್ಲೇಷಣೆಯಲ್ಲಿ ಬಹಿರಂಗಗೊಂಡ ಮಾಹಿತಿಯ ಪ್ರಕಾರ ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳೆಯರಲ್ಲಿ ೧೯ ಮಹಿಳೆಯರು ತಮ್ಮ ಪತಿಯಿಂದ ದೂರವಾದವರಾಗಿದ್ದಾರೆ. ಇದರಲ್ಲಿ ಅನೇಕ ಪುರುಷರು ಬೇರೆ ವಿವಾಹವಾಗಿ ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದರೆ. ಗಂಡನಿಂದ ದೂರವಾದ ಮಹಿಳೆ ಮಾತ್ರ ಸಂಸಾರದ ಹೊರೆಯನ್ನು ಹೊತ್ತು ಸಮಾಜ ದಲ್ಲಿ ಕಳಂಕಿತ ಮಹಿಳೆಯಾಗಿ ಜೀವನ ಸಾಗಿಸುತ್ತಿದ್ದಾಳೆ. ಇದು ಗೌರವಸ್ಥ ಭಾರತೀಯ ಮಹಿಳೆಯರ ಶೋಕ ಗೀತೆಯಾಗಿದೆ. ಇಂತಹ ಮಹಿಳೆಯರ ಬದುಕನ್ನು ಹಸನುಗೊಳಿಸಲು ಸರ್ಕಾರ ಯಾವ ಯೋಜನೆ ಗಳನ್ನು ರೂಪಿಸಿರುವುದಿಲ್ಲ. ಒಂದು ವೇಳೆ ಕಾನೂನುಗಳು ರಚಿಸಲ್ಪಟ್ಟರೂ ಮಹಿಳೆಯರು ತಮ್ಮ ವೈಯಕ್ತಿಕ ವಿಷಯವನ್ನು ಬಹಿರಂಗಪಡಿಸಲು ಹಿಂದೇಟು ಹಾಕುತ್ತಾ ಕುಟುಂಬದ ಗೌರವವನ್ನು ಕಾಪಾಡಲಿಕ್ಕಾಗಿ ಸೆಣಸಾಡುತ್ತಾಳೆ. ಹೀಗೆ ಕುಟುಂಬದಲ್ಲಿ ಗೌರವವನ್ನು ಕಾಪಾಡಲಿಕ್ಕಾಗಿ ಮೂಕ ವೇದನೆಯನ್ನು ಅನುಭವಿಸುತ್ತಾ ಹೊಟ್ಟೆಪಾಡಿಗಾಗಿ, ತನ್ನ ಅನುಕೂಲಕ್ಕಾಗಿ ಯೋಗ್ಯತೆಗೆ ತಕ್ಕಂತಹ ವೃತ್ತಿಯಲ್ಲಿ ನಿರತಳಾಗಿದ್ದಾಳೆ. ಬಾಹ್ಯ ಪ್ರಪಂಚದ ಶೋಷಣೆಯನ್ನು ಎದುರಿಸುತ್ತಾ ಜೀವನ ಸಾಗಿಸುತ್ತಿದ್ದಾಳೆ.

ವೃತ್ತಿಯಲ್ಲಿ ಸಾಮಾಜಿಕ ಕಟ್ಟುಪಾಡುಗಳ ತೊಡಕು :

ಸಾಮಾಜಿಕ ಕಟ್ಟುಪಾಡುಗಳಲ್ಲಿ ಪ್ರಮುಖವಾದವುಗಳೆಂದರೆ ಧಾರ್ಮಿಕ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು, ಸಾಂಸ್ಕೃತಿಕ ಮೌಲ್ಯಗಳು, ಅದರ ಜೊತೆಗೆ ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಲಿಂಗ ಭೇದ ಹಾಗೂ ಜಾತಿಭೇದ. ಲಿಂಗಭೇದವು ಸ್ತ್ರೀಪುರುಷರಲ್ಲಿ ಅಸಮಾನತೆಯನ್ನು ತಂದೊಡ್ಡಿದರೆ, ಜಾತಿ ಭೇದವು ಇಡೀ ಸಮಾಜದ ಸ್ವಾಸ್ಥವನ್ನೇ ಬುಡಮೇಲು ಮಾಡುತ್ತದೆ. ಇವೆಲ್ಲದರ ಜೊತೆಗೆ

ವರ್ಗಭೇದ. ವರ್ಗಭೇದವು ಮೇಲುಕೀಳೆಂಬ ಭಾವನೆಯನ್ನು ಹುಟ್ಟು ಹಾಕಿ ಮನುಷ್ಯನನ್ನು ಸ್ವಾರ್ಥಿಯನ್ನಾಗಿ ಮಾಡುವುದರ ಜೊತೆಗೆ ಸಮಾಜಬಾಹಿರ ಚಟುವಟಿಕೆಗಳಿಗೂ ಪ್ರೇರೇಪಿಸುತ್ತದೆ. ಇಂತಹ ಸಾಮಾಜಿಕ ಕಟ್ಟುಪಾಡುಗಳೆಂಬ ವಿಷವರ್ತುಲದಲ್ಲಿ ಭಾರತೀಯ ಮಹಿಳೆ ಬಂಧಿತಳಾಗಿ ಹೊರಬರುವ ಮಾರ್ಗಕ್ಕಾಗಿ ಶತಪ್ರಯತ್ನ ಮಾಡುತ್ತಿದ್ದಾಳೆ. ಅದರೆ ಶತಶತಮಾನಗಳಿಂದ ಭಾರತದ ನೆಲದಲ್ಲಿ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತಲೇ ಬಂದಿದೆ. ಧರ್ಮ ಸಂಪ್ರದಾಯಗಳ ಹೆಸರಿನಲ್ಲಿ ಮಹಿಳೆಯ ಚಲನವಲನಗಳ ಮೇಲೆ ನಿರ್ಬಂಧ ವಿಧಿಸುತ್ತಾರೆ.

ಮನುಷ್ಯ ಹುಟ್ಟುವಾಗ ಸ್ವತಂತ್ರ್ಯನಾಗಿಯೇ ಹುಟ್ಟುತ್ತಾನೆ. ಆದರೆ ಸಮಾಜದಲ್ಲಿ ಎಲ್ಲೆಲ್ಲೂ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾನೆ ಎಂಬ ರೂಸೋ(೧೭೧೨) ಅವರ ಹೇಳಿಕೆ ಅಕ್ಷರಶಃ ಭಾರತದ ಮಹಿಳೆಗೆ ಒಪ್ಪುತ್ತದೆ. ಏಕೆಂದರೆ ಹುಟ್ಟಿನಿಂದಲೇ ಮಹಿಳೆಗೆ ಲಿಂಗಭೇದದ ನೋವು ಬಾಧಿಸುತ್ತದೆ. ಹೆಣ್ಣುಮಗು ಹುಟ್ಟಿತು ಎಂದಾಕ್ಷಣ ಮನೆಯ ಸದಸ್ಯರ ಮುಖ ಛಾಯೆಯೇ ಬದಲಾಗಿ ಹೋಗುತ್ತದೆ. ಏಕೆಂದರೆ ಭಾರತೀಯ ಸಮಾಜ ಮಹಿಳೆಯನ್ನು ಅಷ್ಟೊಂದು ಕೀಳಾಗಿ ಕಾಣುತ್ತಿದೆ. ಹೆಣ್ಣು ಮಗು ಅಂದರೆ ಮನೆಗೆ ಆರ್ಥಿಕ ಹೊರೆ ಎಂದೇ ಭಾವಿಸಲಾಗುತ್ತದೆ. ಮುಂದೆ ಎದುರಿಸಬಹುದಾದ ತಾಪತ್ರಯಗಳನ್ನು ನಿವಾರಿಸಿಕೊಳ್ಳಬೇಕೆಂದು ಹೆಣ್ಣು ಭ್ರೂಣದ ಹತ್ಯೆಯೂ ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಭ್ರೂಣಹತ್ಯೆ ನಿಷೇಧ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದರ ಮೂಲಕ ಈ ಸಮಸ್ಯೆಗೆ ಸ್ವಲ್ಪ ತಡೆಯೊಡ್ಡಿದಂತಾಗಿದೆ. ಆದರೂ ಹೆತ್ತ ತಾಯಿಯೇ ಸಾರ್ವಜನಿಕ ತೊಟ್ಟಿಯಲ್ಲಿ ತನ್ನ ಹಸುಗೂಸನ್ನು ಎಸೆಯುವುದರ ಮೂಲಕ ಭಾರತೀಯ ಸಮಾಜದ ಕರಾಳರೂಪದ ದರ್ಶನ ಮಾಡಿಕೊಟ್ಟಂತಾಗಿದೆ. ಕುಟುಂಬ ಹಂತದಲ್ಲಿಯೇ ಮಹಿಳೆಗೆ ತಾರತಮ್ಯದ ಅರಿವು ಆಗುತ್ತದೆ. ಮನೆಯಲ್ಲಿ ಹೆಣ್ಣು ಮಗುವನ್ನು ನೋಡಿಕೊಳ್ಳುವ ರೀತಿಯೇ ಬೇರೆ, ಗಂಡು ಮಗುವನ್ನು ನೋಡಿಕೊಳ್ಳುವ ರೀತಿಯೇ ಬೇರೆ. ಹೆಣ್ಣು ಮಗುವಿಗೆ ವಿದ್ಯಾಭ್ಯಾಸ ಕೊಡಿಸಿ ಉನ್ನತ ವ್ಯಾಸಂಗವನ್ನು ಮಾಡಿಸಿದರೆ ಅದು ಆರ್ಥಿಕ ಹೊರೆಯಾಗುತ್ತದೆ. ಹೆಣ್ಣು ಯಾವಾಗಲೂ ಕೊಟ್ಟ ಮನೆಗೆ ಹೋಗುವವಳು ಎಂದು ಸ್ತ್ರೀಯರ ಶಿಕ್ಷಣವನ್ನು ಮೊಟಕುಗೊಳಿಸುವ ಪಾಲಕರಿಗೇನೂ ನಮ್ಮ ಸಮಾಜದಲ್ಲಿ ಕೊರತೆ ಇಲ್ಲ. ಇದು ಕುಟುಂಬ ಹಂತದಲ್ಲಿ ವಾಸ್ತವ ಸಂಗತಿ ಎನಿಸಿದರೂ ರಾಷ್ಟ್ರಕ್ಕೆ ಮಾತ್ರ ಈ ನಿರ್ಧಾರದಿಂದ ತುಂಬಲಾಗದ ನಷ್ಟವಾಗುತ್ತದೆ ಎಂಬುದನ್ನು ಮಾತ್ರ ಜನ ಜಾಗೃತಿಯ ಮೂಲಕ ತಿಳಿಯಪಡಿಸಬಹುದು. ಪ್ರಜಾಪ್ರಭುತ್ವ ಸರ್ಕಾರಕ್ಕೆ ಲಿಂಗಭೇದವಿಲ್ಲದೇ ಪ್ರತಿಯೊಬ್ಬ ಪ್ರಜೆಯೂ ಸಾಕ್ಷರರಾಗುವ ಅಗತ್ಯವಿದೆ. ಹೆಣ್ಣುಮಕ್ಕಳನ್ನು ಕೀಳಾಗಿ ಕಂಡು ಗಂಡುಮಗುವಿಗೆ ಒಲವನ್ನು ತೋರಿದ್ದರಿಂದಲೇ ಭಾರತದ ಲಿಂಗಾನುಪಾತ (ಸಾವಿರ ಪುರಷರಿಗೆ ಇರುವ ಒಟ್ಟು ಮಹಿಳೆಯರ ಸಂಖ್ಯೆ) ೨೦೦೧ರ ಜನಗಣತಿಯ ಪ್ರಕಾರ ೯೩೩ ಆಗಿದೆ. ಹೆಣ್ಣುಮಕ್ಕಳನ್ನು ಅತಿಯಾಗಿ ಬಾಧಿಸುತ್ತಿರುವ ಇನ್ನೊಂದು ಸಮಸ್ಯೆ ಎಂದರೆ ವರದಕ್ಷಿಣೆ. ವರದಕ್ಷಿಣೆ ಎಂಬ ಭೂತವು ಕೇವಲ ಬಡಕುಟುಂಬಗಳಲ್ಲಿ ಅಷ್ಟೇ ಅಲ್ಲದೆ, ಶ್ರೀಮಂತ ಕುಟುಂಬಗಳನ್ನು ಕೂಡ ಬಾಧಿಸುತ್ತದೆ. ಹೀಗೆ ಹೆಣ್ಣು ಜೀವಗಳನ್ನೇ ಬಲಿತೆಗೆದುಕೊಳ್ಳುವಷ್ಟು ಪ್ರಬಲವಾದ ಆಚರಣೆಗಳು ಭಾರತೀಯ ಸಮಾಜದಲ್ಲಿ ಬೇರೂರಿವೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರನ್ನು ಇಂತಹ ಸಾಮಾಜಿಕ ಕಟ್ಟುಪಾಡುಗಳು ಬಾಧಿಸುತ್ತಿವೆ. ಮಹಿಳೆಯರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟು ಮಾಡಿ ಮಹಿಳೆ ಬದುಕುವ ಹಕ್ಕನ್ನೇ ಕಸಿದುಕೊಂಡಿವೆ ಎನ್ನಬಹುದು. ಸಮೀಕ್ಷೆಗೊಳಗಾದ ಎಲ್ಲಾ (೨೫೦) ಮಹಿಳೆಯರೂ ವೃತ್ತಿಜೀವನದಲ್ಲಿ ಹಾಗೂ ವೈಯಕ್ತಿಕ ಜೀವನದಲ್ಲಿ ಸಮಾಜದ ನಿರ್ಬಂಧಕ್ಕೊಳಪಟ್ಟಿರುತ್ತಾರೆ. ಏಕೆಂದರೆ ಸಾಮಾನ್ಯವಾಗಿ ಮನೆಗೆಲಸದ ಮಹಿಳೆಯರು ಬಡ ಕುಟುಂಬದವರಾಗಿರುತ್ತಾರೆ. ಇಂತಹ ಕೆಳದರ್ಜೆಯ ಕೆಲಸದಲ್ಲಿ ತೊಡಗಲು ಅವರ ಬಡತನವೇ ಕಾರಣವಾಗಿರುತ್ತದೆ. ಬಡತನ ಮಹಿಳೆಯರನ್ನು ಸಜೀವವಾಗಿ ದಹಿಸುತ್ತಿದೆ ಎನ್ನಬಹುದು. ಬಡತನಕ್ಕೂ, ಸಾಮಾಜಿಕ ಪಿಡುಗುಗಳಿಗೂ ಅವಿನಾಭಾವ ಸಂಬಂಧವಿದೆ. ಭಾರತದ ಆರ್ಥಿಕ ಪ್ರಗತಿಗೆ ಮಹಿಳೆಯ ಕೊಡುಗೆ ಅಧಿಕವಾಗಿದ್ದರೂ ಅವಳನ್ನು ಪುರುಷರಂತೆ ಗೌರವದಿಂದ ನೋಡಿಕೊಳ್ಳುತ್ತಿಲ್ಲ. ಹೀಗೆ ಲಿಂಗ ಭೇದ, ವರ್ಗ ಭೇದವಲ್ಲದೇ, ಜಾತಿ ಸಮಸ್ಯೆಯೂ ಕೂಡ ಮಹಿಳೆಯರ ವೃತ್ತಿಜೀವನಕ್ಕೆ ಅಡ್ಡಿಯನ್ನುಂಟು ಮಾಡಿದೆ.

ಇಂತಹ ಸಾಮಾಜಿಕ ಕಟ್ಟುಪಾಡುಗಳ ಮಧ್ಯೆಯೂ ಮಹಿಳೆ ದುಡಿಯುವ ಕ್ಷೇತ್ರ ಪ್ರವೇಶಿಸುತ್ತಾಳೆ. ದುರದೃಷ್ಟವಶಾತ್ ಅವಳಿಗೆ ಈ ಕ್ಷೇತ್ರದಲ್ಲಿ ಉತ್ತಮ ಕೆಲಸ ಸಿಗದೇ ಹೋಗುತ್ತದೆ. ಏಕೆಂದರೆ ಲಿಂಗತಾರತಮ್ಯದಿಂದ ಕುಟುಂಬ ಹಂತದಲ್ಲಿಯೇ ಅವಳು ಶೈಕ್ಷಣಿಕ ಹಕ್ಕಿನಿಂದ ವಂಚಿತಳಾಗಿರುತ್ತಾಳೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ಶೇ. ೬೫.೬ ರಷ್ಟು ಮಹಿಳೆಯರು ಅವಿದ್ಯಾವಂತರಾಗಿದ್ದಾರೆ. ಎಂಬುದು ಕ್ಷೇತ್ರ ಕಾರ್ಯದಿಂದ ಧೃಡಪಟ್ಟಿದೆ. ಶಿಕ್ಷಣವು ಉತ್ತಮ ಜೀವನಕ್ಕೆ ರಹದಾರಿಯಾಗಿದೆ. ಶಿಕ್ಷಣ ಹಾಗೂ ತರಬೇತಿಯಿಲ್ಲದೇ ಸಂಘಟಿತ ವಲಯದ ವೃತ್ತಿಯಲ್ಲಿ ಉದ್ಯೋಗ ನಿರೀಕ್ಷಿಸುವುದು ಕಷ್ಟವಾಗುತ್ತದೆ. ಅದಕ್ಕಾಗಿ ಮಹಿಳೆಯರು ಅಸಂಘಟಿತ ವಲಯದ ಕೆಲಸದಲ್ಲಿಯೇ ನೆಲೆಕಂಡುಕೊಳ್ಳ ಬೇಕಾಗುತ್ತದೆ. ದುಡಿಮೆ ಮಹಿಳೆಗೆ ಅನಿವಾರ್ಯವಾಗಿದೆ. ಇಲ್ಲದಿದ್ದರೆ ತನ್ನ ಸಂಸಾರ ಉಪವಾಸ ಸಾಯಬೇಕಾಗುತ್ತದೆ ಎನ್ನುವ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಮಹಿಳೆ ತನಗೆ ಬೇಕಾದ ಕೆಲಸವನ್ನು ಸ್ವತಂತ್ರವಾಗಿ ಆಯ್ದುಕೊಳ್ಳುವಂತಿಲ್ಲ. ಅತೀ ದೂರದ ಸ್ಥಳಗಳಿಗೆ ಮಹಿಳೆಯನ್ನು ಕಳಿಸಲು ಕುಟುಂಬದ ಹಿರಿಯರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಹೀಗಾಗಿ ಮಹಿಳೆ ತಮ್ಮ ಮನೆಗೆ ಹತ್ತಿರವೇ ಇರುವ ದುಡಿಯುವ ಅವಕಾಶಗಳನ್ನು ಎದುರು ನೋಡಬೇಕಾಗುತ್ತದೆ. ಮನೆಯ ಕಟ್ಟಪ್ಪಣೆಗಳಿಗೆ ಒಳಗಾಗಿ ವೃತ್ತಿಯನ್ನು ಆಪೇಕ್ಷಿಸುವ ಮಹಿಳೆ ಕಡಿಮೆ ಕೂಲಿಯ ಹಾಗೂ ದೈಹಿಕ ಶ್ರಮವನ್ನು ನಿರೀಕ್ಷಿಸುವ ಕೆಲಸದಲ್ಲಿ ತೊಡಗುತ್ತಾಳೆ. ವೃತ್ತಿರಂಗದಲ್ಲಿಯೂ ಅನೇಕ ರೀತಿಯ ಶೋಷಣೆಯನ್ನು ಎದುರಿಸುತ್ತಿದ್ದಾಳೆ. ಆದರೆ ಅದನ್ನು ಪ್ರತಿಭಟಿಸುವ ಧೈರ್ಯ ಅವಳಲ್ಲಿಲ್ಲ. ಒಂದು ವೇಳೆ ಪ್ರತಿಭಟಿಸಿದ್ದೇ ಆದರೆ ದುಡಿಯುವ ಅವಕಾಶದಿಂದಲೂ ವಂಚಿತಳಾಗುತ್ತಾಳೆ.

ಹೀಗೆ ಕುಟುಂಬಕ್ಕೆ ಹಾಗೂ ಆರ್ಥಿಕತೆಗೆ ಮಹಿಳೆಯ ಕೊಡುಗೆ ಅಧಿಕವಾಗಿದ್ದರೂ, ಮಹಿಳೆ ಮಾತ್ರ ತನ್ನ ದುಡಿಮೆಯ ಮೇಲಾಗಲೀ, ಸಂಪಾದನೆಯ ಮೇಲಾಗಲಿ ಯಾವ ರೀತಿಯ ಹಕ್ಕನ್ನು ಸಾಧಿಸುವಂತಿಲ್ಲ. ಅದು ಪುರುಷನಿಗೆ ಮಾತ್ರ ಪ್ರಾಪ್ತಿಯಾಗಿರುವ ಹಕ್ಕಾಗಿದೆ. ಹೀಗೆ ಮಹಿಳೆಯನ್ನು ವಿಶ್ವದಲ್ಲಿಯೇ ಬಹಿಷ್ಕರಿಸಲ್ಪಟ್ಟ ದೊಡ್ಡ ಕಾರ್ಮಿಕರ ಪಡೆ ಎಂದು ೧೯೯೫ರ ಮಾನವ ಅಭಿವೃದ್ಧಿ

ವರದಿಯಲ್ಲಿ ಉಲ್ಲೇಖಿಸಿರುವುದನ್ನು ರಾಂ ನರೇಶ್ ಠಾಕೂರ್ (೨೦೦೧)ರವರು ತಮ್ಮ ಲೇಖನದಲ್ಲಿ ತಿಳಿಸಿರುತ್ತಾರೆ. ಕುಟುಂಬದಲ್ಲಿ ವೇತನರಹಿತ ದುಡಿಮೆಗಾರಳಾಗಿ, ವೃತಿಯಲ್ಲಿ ವೇತನಸಹಿತ ದುಡಿಮೆಗಾರಳಾಗಿ ದುಡಿದರೂ ಮಹಿಳೆಗೆ ಸಮಾಜದಲ್ಲಿ ಪುರುಷನ ಸ್ಥಾನಮಾನ ಸಿಗುತ್ತಿಲ್ಲ. ಕೆಲವು ಸಂಸ್ಥೆಗಳಂತೂ ಮಹಿಳೆಯರಿಗೆ ಉದ್ಯೋಗ ಕೊಡಲು ಹಿಂದೇಟು ಹಾಕುತ್ತಿವೆ.

ವರ್ಗತಾರತಮ್ಯದ ವಿಷಯಕ್ಕೆ ಬಂದರೆ ಮಹಿಳೆ ಮೇಲು ಕೀಳೆಂಬ ಭೇದ ಭಾವವನ್ನು ಸಮಾಜದಲ್ಲಿ ಎದುರಿಸುತ್ತಿದ್ದಾಳೆ. ಬಡವರ್ಗದ ಮಹಿಳೆಯರು ಅಜ್ಞಾನ ಅಂಧಕಾರಗಳ ಸಂಕೋಲೆಯಲ್ಲಿ ಬಂಧಿಸಿರುತ್ತಾರೆ. ಇಂತಹ ಕುಟುಂಬದ ಹಿರಿಯರು ಹೆಣ್ಣುಮಕ್ಕಳನ್ನು ಹೊರಗಡೆ ಕಳುಹಿಸುವುದೇ ತಪ್ಪು, ಅವರೆಂದಿಗೂ ನಾಲ್ಕು ಗೋಡೆಗಳ ಮಧ್ಯೆಯೇ ಬದುಕಬೇಕು ಎಂಬ ದುರಾಲೋಚನೆಯವರಾಗಿ ಹೆಣ್ಣುಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಹಿಂದೇಟು ಹಾಕುತ್ತಾರೆ. ಇದಕ್ಕೆ ವಿರುದ್ಧವಾದ ಸನ್ನಿವೇಶ ಅಂದರೆ ಮೇಲ್ವರ್ಗದ ಮಹಿಳೆಯರನ್ನು ಉದ್ಯೋಗದಲ್ಲಿ ತೊಡಗಿಸುವುದು ತಮ್ಮ ಮನೆತನದ ಘನತೆಗೆ ಕುಂದು ಎಂದು ಹಿರಿಯರು ಭಾವಿಸುತ್ತಾರೆ. ಹೀಗೆ ತಕ್ಕಮಟ್ಟಿನ ವಿದ್ಯಾಭ್ಯಾಸವನ್ನು ಪಡೆದರೂ ಕೇವಲ ಗೃಹಿಣಿಯಾಗಿ ಜೀವನ ಸಾಗಿಸಬೇಕಾಗಿದೆ. ವರ್ಗತಾರತಮ್ಯದಲ್ಲಿ ಶ್ರೀಮಂತ ವರ್ಗದವರಿಗಿಂತ ಬಡವರ್ಗದ ಮಹಿಳೆಯರು ಸಂಕಷ್ಟವನ್ನೆದುರಿಸಬೇಕಾಗಿದೆ.

ಇನ್ನು ಜಾತಿತಾರತಮ್ಯದ ವಿಷಯಕ್ಕೆ ಬಂದರೆ ಭಾರತವು ಜಾತ್ಯಾತೀತ ರಾಷ್ಟ್ರವಾಗಿದ್ದು ಅನೇಕ ಜಾತಿಯ ಧರ್ಮದ ಜನರು ಇಲ್ಲಿ ನೆಲೆಸಿದ್ದಾರೆ. ಕೆಲವು ಸಮುದಾಯಗಳ ಜನರು ತಮ್ಮ ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗಡೆ ಕಳಿಸುವುದು ಧರ್ಮಬಾಹಿರ ಎಂಬ ತಪ್ಪು ಕಲ್ಪನೆಯನ್ನೇ ಹೊಂದಿದ್ದಾರೆ. ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಮಹಿಳೆ ಹೊರಗಡೆ ದುಡಿಯಲು ಬಂದರೆ ಅನೇಕ ಕಟ್ಟುಪ್ಪಾಣೆ ಗೊಳಗಾಗುತ್ತಾಳೆ. ತನ್ನ ಸ್ವ ಇಚ್ಛೆಯಿಂದ ಯಾವ ನಿರ್ಧಾರವನ್ನು ಕೈಗೊಳ್ಳುವ ಹಾಗಿಲ್ಲ. ಸಮಾಜದ ಹಾಗೂ ಕುಟುಂಬದ ಎಲ್ಲ ರೀತಿಯ ನಿಬಂಧನೆಗಳನ್ನು ಪೂರೈಸಿ ಹೊರಗಡೆ ದುಡಿಯಲು ಬಂದರೆ ಅದು ತೀರಾ ಕೆಳದರ್ಜೆಯ, ಕಡಿಮೆ ಕೂಲಿಯ ಕೆಲಸವಾಗಿದ್ದು, ಈ ಕೆಲಸವನ್ನು ಉಳಿಸಿಕೊಳ್ಳಲು ಕೂಡ ಮಹಿಳೆಯರು ಜೀವನ ಪರ್ಯಂತ ಹೋರಾಟ ಮಾಡಬೇಕಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ವೃತ್ತಿ ಜೀವನ ಎಂದರೆ ಮಹಿಳೆಗೆ ತೂಗುಕತ್ತಿಯಾಗಿದೆ ಎಂದೇ ಹೇಳಬಹುದು. ಸಮಾಜದ ಅನಿಷ್ಠ ಪದ್ಧತಿಗಳು ಮಹಿಳೆಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವಳ ವೃತ್ತಿ ಜೀವನಕ್ಕೆ ತೊಡಕನ್ನುಂಟು ಮಾಡಿವೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ರಾತ್ರಿ ತಡವಾಗಿ ಮನೆಗೆ ಬರುವುದು, ದೂರದ ಮನೆಗಳ ಕೆಲಸವನ್ನು ಒಪ್ಪಿಕೊಳ್ಳುವುದು ಎಂದರೆ ಹಿಂದೇಟು ಹಾಕುತ್ತಾರೆ. ಸಮಾಜದ ವಕ್ರದೃಷ್ಟಿ ಒಂದು ಕಡೆಯಾದರೆ ಮನೆಯ ಜವಾಬ್ದಾರಿ ಇನ್ನೊಂದು ಕಡೆ. ಈ ರೀತಿಯ ಇಬ್ಬಗೆಯ ತೊಳಲಾಟದಲ್ಲಿ ಮಹಿಳೆಯರು ಜರ್ಜರಿತವಾಗಿದ್ದಾರೆಂದೇ ಹೇಳಬಹುದು. ಧಾರ್ಮಿಕ ನಂಬುಗೆಗಳು, ಸಂಪ್ರದಾಯಗಳು, ಸಾಂಸ್ಕೃತಿಕ ಮೌಲ್ಯಗಳು, ಸಾಮಾಜಿಕ ಸಂಸ್ಥೆಗಳು, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಇರುವ ಅಡೆತಡೆಗಳಾಗಿವೆ.[೫] ಇದರಿಂದ

ಮಹಿಳೆಯರ ಉದ್ಯೋಗ ಭಾಗವಹಿಸುವಿಕೆ ದರದಲ್ಲಿಯೂ ಇಳಿಕೆ (ಶೇ.೨೨.೭) ಕಂಡುಬರುತ್ತಿದೆ ಎಂದು ಡಿ.ಬಿ. ಕೃಷ್ಣಕುಮಾರಿ ಹಾಗೂ ಡಿ.ವಿ. ರಾಮಣ್ಣ (೨೦೦೧) ಅವರ ಹೇಳಿಕೆಯು ಗಮನಾರ್ಹವಾಗಿದೆ. ಮಹಿಳೆ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕಬೇಕೆಂದರೆ ಸಮಾಜದಲ್ಲಿ ಪರಿವರ್ತನೆ ಆಗಬೇಕು. ಈ ರೀತಿಯ ಪರಿವರ್ತನೆ ಶಿಕ್ಷಣದಿಂದ ಮಾತ್ರ ಸಾಧ್ಯ. ಶಿಕ್ಷಣವು ಸಾಮಾಜಿಕ ಜಾಡ್ಯಗಳನ್ನು ಹೊಡೆದೋಡಿಸಲು ಇರುವ ಏಕೈಕ ಪರಿಹಾರ ಮಾರ್ಗವಾಗಿದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣದಿಂದ ಮಾತ್ರ ಪರಿಹಾರ ಸಿಗುತ್ತದೆ ಎಂದು ಧೃಢನಿಶ್ಚಯಕ್ಕೆ ಬಂದಿದ್ದು, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ನಿರ್ಧಾರಕ್ಕೆ ಬಂದಿದ್ದಾರೆ. ತಾವು ಕೂಡ ವಿದ್ಯಾವಂತರಾಗಿದ್ದರೆ ಈ ರೀತಿಯ ಬೇರೆಯವರ ಮನೆಯ ಕೆಲಸದಿಂದ ವಿನಾಯಿತಿ ಪಡೆದು ಉನ್ನತ ಹುದ್ದೆಯನ್ನು ಪಡೆಯಬಹುದಿತ್ತು ಎಂಬುದು ಮಹಿಳೆಯರ ಮನದಾಳದ ಮಾತಾಗಿದೆ. ತಮ್ಮ ಮುಂದಿನ ಸಂತತಿಯನ್ನಾದರೂ ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ಮಹಿಳೆಯರ ಅಪೇಕ್ಷೆಯಾಗಿದೆ.

ಸ್ತ್ರೀಯರಿಗೆ ಶಿಕ್ಷಣದ ಅಗತ್ಯತೆ :

ಭಾರತದಲ್ಲಿ ಶಿಕ್ಷಣದ ಬಾಗಿಲು ಎಲ್ಲರಿಗೂ ತೆರೆಯಲ್ಪಟ್ಟಿದೆ. ಪ್ರಪಂಚದಲ್ಲಿಯೇ ವಿಸ್ತೃತವಾದ ಶಿಕ್ಷಣ ನೀತಿಯನ್ನು ಭಾರತ ಹೊಂದಿದೆ. ಶಿಕ್ಷಣ ಕ್ಷೇತ್ರದ ಮೇಲಿನ ಹೂಡಿಕೆಯು ಆರ್ಥಿಕ ಬೆಳವಣಿಗೆಯ ದರವನ್ನು ತೀವ್ರಗೊಳಿಸುತ್ತದೆ. ಮಾನವಶಕ್ತಿಯ ಪರಿಣಾಮಕಾರಿ ಬಳಕೆ ಶಿಕ್ಷಣ ಹಾಗೂ ತರಬೇತಿಯ ಮೇಲೆ ಅವಲಂಬಿತವಾಗಿದೆ. ಈ ಎಲ್ಲಾ ಕಾರಣಗಳಿಂದ ಶಿಕ್ಷಣ ಮೂಲಸೌಕರ್ಯ ಎಂದು ಪರಿಗಣಿಸ ಲಾಗಿದೆ. ಶ್ರಮ ಶಕ್ತಿಯ ಉತ್ಪಾದಕತೆಯನ್ನು ವೃದ್ಧಿಗೊಳಿಸುವುದು ಶಿಕ್ಷಣ, ಸಾಮಾಜಿಕ ಬದಲಾವಣೆ ಹಾಗೂ ಆರ್ಥಿಕ ಪ್ರಗತಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯಿಂದ ಸಾಧ್ಯ. ಸಾಮಾಜಿಕ, ರಾಜಕೀಯ, ಆರ್ಥಿಕ, ನೈತಿಕ ಮುಂತಾದ ಕ್ಷೇತ್ರಗಳ ಜ್ಞಾನ ಸಂಪಾದನೆಯಾಗುವುದು ಶಿಕ್ಷಣದಿಂದ. ಸಾಮಾಜಿಕ ಮೌಢ್ಯಗಳ ಮೂಲೋಚ್ಚಾಟನೆ ಶಿಕ್ಷಣದಿಂದ ಸಾಧ್ಯವಾಗುತ್ತದೆ. ಶೋಷಣೆಯ ವಿರುದ್ಧ ಹೋರಾಡುವ ಮನೋಭಾವ, ಶಕ್ತಿ ಶಿಕ್ಷಣದಿಂದ ಪ್ರಾಪ್ತವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶಿಕ್ಷಣ ತಜ್ಞರಾದ ಹೆಚ್. ನರಸಿಂಹಯ್ಯನವರು 'ಶಿಕ್ಷಣ ರಕ್ಷಣಾ ಸನ್ನದ್ಧತೆಯಷ್ಟೇ' ಮುಖ್ಯ ಎಂಬ ಹೇಳಿಕೆ ನೀಡಿರುತ್ತಾರೆ. ಕಳೆದ ಐದು ವರ್ಷಗಳಿಂದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. ೧೦ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ೪೩,೮೨೫ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ.

ಆದರೂ ಶಿಕ್ಷಣದ ಸೌಲಭ್ಯಗಳನ್ನು ಸ್ತ್ರೀಯರು ಸದುಪಯೋಗಪಡಿಸಿಕೊಂಡಿರುವುದಿಲ್ಲ. ೨೦೦೧ರ ಜನಗಣತಿಯ ಪ್ರಕಾರ ಪುರುಷರ ಸಾಕ್ಷರತಾ ದರ ಶೇ. ೭೫.೮೫ ಆದರೆ ಸ್ತ್ರೀಯರ ಸಾಕ್ಷರತಾ ದರವು ಶೇ. ೫೪.೧೬ ಆಗಿರುತ್ತದೆ. ಸ್ತ್ರೀಯರ ಸಾಕ್ಷರತಾ ದರದಲ್ಲಿ ಇಳಿಕೆ ಕಂಡು ಬರುತ್ತಿರುವುದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ಅದರಲ್ಲಿ ಪ್ರಮುಖವಾಗಿ ಪ್ರಾಚೀನ ಕಾಲದಿಂದಲೂ ನಡೆದು ಬಂದ ಲಿಂಗತಾರತಮ್ಯ, ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ತನ್ನ ಅನುಕೂಲಕ್ಕೆ ತಕ್ಕಂತೆ ನಿಯಮಾವಳಿಗಳನ್ನು ರೂಪಿಸಿದ್ದಾನೆ. ಇದರ ಪ್ರಕಾರ ಸ್ತ್ರೀಯರಿಗೆ ಶಿಕ್ಷಣದ ಅವಕಾಶಗಳನ್ನು ನಿರಾಕರಿಸಲಾಗಿದ್ದು ಅವಳನ್ನು

ಕೇವಲ ಅಡುಗೆ ಮನೆಗೆ ಸೀಮಿತಗೊಳಿಸಿ ಹೆರಿಗೆ ಯಂತ್ರವನ್ನಾಗಿ ಮಾಡಲಾಗಿದೆ. ಆದರೆ ನಾಗರೀಕತೆ ಎನ್ನುವುದು ನಿಂತ ನೀರಲ್ಲ. ಸಮಾಜದಲ್ಲಿ ಬದಲಾವಣೆ ಆದಂತೆ ಸ್ತ್ರೀಯರಿಗೂ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಲಿಂಗಭೇದ, ವರ್ಗಭೇದ, ಜಾತಿಭೇದವಿಲ್ಲದೇ ಶಿಕ್ಷಣ ಪ್ರಸಾರ ಕಾರ್ಯ ನಡೆದಿದೆ. ಆದರೆ ಭಾರತದಂತಹ ಸಾಂಪ್ರದಾಯಿಕ ಸಮಾಜದಲ್ಲಿ ಕಂದಾಚಾರಗಳು, ಮೂಢನಂಬಿಕೆಗಳು ಎಷ್ಟು ಪ್ರಬಲವಾಗಿ ಬೇರೂರಿವೆ ಎಂದರೆ ಅವುಗಳ ಮೂಲೋತ್ಪಾಟನೆಗೆ ಇನ್ನು ಎಷ್ಟು ಶತಮಾನಗಳು ಕಾಯಬೇಕಾಗುವುದೋ, ಪುರುಷ ಪ್ರಾಧಾನ್ಯತೆಯುಳ್ಳ ಸಾಮಾಜಿಕ ವ್ಯವಸ್ಥೆ ಎಂದರೆ ಸ್ತ್ರೀಯರ ದಮನವೇ ಎಂದರ್ಥ ನೀಡುತ್ತದೆ. ಸರ್ಕಾರದ ಹಾಗೂ ಸಂವಿಧಾನಾತ್ಮಕ ನೀತಿ ನಿಯಮಾವಳಿಗಳಿಂದಾಗಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಶಿಕ್ಷಣವು ಸ್ತ್ರೀಯರ ವ್ಯಕ್ತಿತ್ವ ವಿಕಸನಕ್ಕೆ, ಸರ್ವಾಂಗೀಣ ಪ್ರಗತಿಗೆ ಅತ್ಯಧಿಕವಾಗಿ ಕೊಡುಗೆ ಸಲ್ಲಿಸುತ್ತದೆ. ಸ್ತ್ರೀಯರೂ ಕೂಡ ಶಿಕ್ಷಣದ ಅವಶ್ಯಕತೆಗಳನ್ನು ಮನಗಂಡಿದ್ದಾರೆ. ಏಕೆಂದರೆ ಶತಶತಮಾನಗಳಿಂದ ಪುರುಷನ ಅಧೀನಳಾಗಿ ಬದುಕಿ ಈಗ ಬಂಧನದಿಂದ ಮುಕ್ತಿಗಾಗಿ ಹಾತೊರೆಯುತ್ತಿದ್ದಾಳೆ. ಶಿಕ್ಷಣದಿಂದ ವಂಚಿತರಾದ ಮಹಿಳೆಯರು ಅನುಭವಿಸುವ ಯಾತನೆ ಶೋಷಣೆಯನ್ನು ಕಂಡು ತಾವು ಇದರಿಂದ ಪಾರಾಗುವ ಮಾರ್ಗವನ್ನು ಹುಡುಕುತ್ತಿದ್ದಾರೆ. ಶಿಕ್ಷಿತ ಮಹಿಳೆಯರು ಸಮಾಜದಲ್ಲಿ ಹಾಗೂ ಆರ್ಥಿಕತೆಯಲ್ಲಿ ಹೊಂದುವ ಗೌರವ ಹಾಗು ಸ್ವಾತಂತ್ರವನ್ನು ಅನುಭವಿಸುವ ಇಚ್ಛೆ ಎಲ್ಲ ಮಹಿಳೆಯರದಾಗಿದೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ಸ್ತ್ರೀಯರಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು ಮನಗಂಡಿದ್ದಾರೆ. ತಾವು ವಿದ್ಯಾವಂತರಾಗದೇ ಇರುವುದು ಇಂತಹ ಕೆಳದರ್ಜೆಯ ವೃತ್ತಿಯಲ್ಲಿ ತೊಡಗಲು ಕಾರಣ, ಅದಕ್ಕಾಗಿ ೨೫೦ ಮಹಿಳೆಯರೂ ಸ್ತ್ರೀಯರಿಗೆ ಶಿಕ್ಷಣದ ಅಗತ್ಯತೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೋಷ್ಟಕದಲ್ಲಿ ಮಹಿಳೆಯರ ಕುಟುಂಬದ ಹಾಗೂ ಸಾಮಾಜಿಕ ಅರಿವಿನ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಹಿಳೆಯರ ಕೌಟುಂಬಿಕ ಸಂಬಂಧದ ಮಾಹಿತಿ ಹಾಗೂ ಮಹಿಳೆಯರು ವೃತ್ತಿಯಲ್ಲಿ ಅನುಭವಿಸುವ ಸಾಮಾಜಿಕ ಕಟ್ಟುಪಾಡುಗಳ ಮಾಹಿತಿ ಹಾಗು ಸ್ತ್ರೀಯರಿಗೆ ಶಿಕ್ಷಣದ ಅಗತ್ಯತೆ ಕುರಿತ ಮಾಹಿತಿಗಳನ್ನು ಸಂಗ್ರಹಿಸುವ ಮೂಲಕ ಭಾರತದ ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನದ ಕುರಿತು ವಿಶ್ಲೇಷಿಸಲಾಗಿದೆ. ಈ ಮಾಹಿತಿಗಳ ವಿಚಾರವಾಗಿ ಹೊಸಪೇಟೆಯ ಮಹಿಳೆಯರ ಪ್ರತಿಕ್ರಿಯೆಯನ್ನು ಕೋಷ್ಟಕ ೪.೯ರಲ್ಲಿ ಕಾಣಬಹುದು.

ಕೋಷ್ಟಕ ೪.೯: ಕೌಟುಂಬಿಕ ಹಾಗೂ ಸಾಮಾಜಿಕ ಅರಿವಿನ ಮಾಹಿತಿ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡ
೧	ಕೌಟುಂಬಿಕ ಸಂಬಂಧ		
	ಚೆನ್ನಾಗಿದೆ	೨೧೨.೦೦	೮೪.೮೦
	ಚೆನ್ನಾಗಿಲ್ಲ	೩೮.೦೦	೧೫.೨೦
	ಒಟ್ಟು	೨೫೦.೦೦	೧೦೦.೦೦
೨	ವೃತ್ತಿಯಲ್ಲಿ ಸಾಂಪ್ರದಾಯಿಕ ಕಟ್ಟುಪಾಡುಗಳ ತೊಡಕು		
	ಇದೆ	೨೫೦.೦೦	೧೦೦.೦೦
	ಇಲ್ಲ	೦.೦೦	೦.೦೦
	ಒಟ್ಟು	೨೫೦.೦೦	೧೦೦.೦೦
೩	ಸ್ತ್ರೀಯರಿಗೆ ಶಿಕ್ಷಣದ ಅವಶ್ಯಕತೆ		
	ಇದೆ	೨೫೦.೦೦	೧೦೦.೦೦
	ಇಲ್ಲ	೦.೦೦	೦.೦೦
	ಒಟ್ಟು	೨೫೦.೦೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೯ರಲ್ಲಿ ನಮೂದಿಸಿರುವ ಮಾಹಿತಿಯಂತೆ ಮಹಿಳಾ ಮನೆಗೆಲಸಗಾರರು ತಮ್ಮ ಕೌಟುಂಬಿಕ ಸಂಬಂಧಗಳ ಬಗ್ಗೆ ವಿವರಣೆ ನೀಡಿರುತ್ತಾರೆ. ಕೌಟುಂಬಿಕ ಮಾಹಿತಿಯಲ್ಲಿ ಗಂಡ ಹೆಂಡಿರ ನಡುವಿನ ಸಂಬಂಧವಲ್ಲದೇ, ಮಕ್ಕಳ ಜೊತೆಗಿನ ಸಂಬಂಧ, ತವರು ಮನೆಯವರೊಂದಿಗಿನ ಸಂಬಂಧ, ಅತ್ತೆ ಮಾವನವರೊಂದಿಗಿನ ಸಂಬಂಧ, ನೆರೆಮನೆಯವರ ಜೊತೆ ಹಾಗೂ ಮನೆ ಮಾಲೀಕರ ಜೊತೆಗಿನ ಸಂಬಂಧವನ್ನು ಪ್ರಶ್ನಿಸಲಾಯಿತು. ವಿವಾಹಿತ ಸ್ತ್ರೀಯರಿಗೆ ಪತಿಯೊಂದಿಗಿನ ಹಾಗೂ ಅತ್ತೆ ಮಾವಂದಿರ ಜೊತೆಗಿನ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ. ಅವಿವಾಹಿತ ಸ್ತ್ರೀಯರು ತಮ್ಮ ಅಣ್ಣ, ತಮ್ಮ, ಅಕ್ಕ ತಂಗಿಯರ ಜೊತೆಗಿನ ಸಂಬಂಧವನ್ನು ಕುರಿತು ಪ್ರತಿಕ್ರಿಯಿಸಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ಶೇ. ೮೪.೮ರಷ್ಟು ಮಹಿಳೆಯರು ಉತ್ತಮ ಕೌಟುಂಬಿಕ ಸಂಬಂಧವನ್ನು ಹೊಂದಿರುತ್ತಾರೆ. ಇನ್ನು ಶೇ. ೧೫.೨ರಷ್ಟು ಮಹಿಳೆಯರು ಉತ್ತಮ ಕೌಟುಂಬಿಕ ಸಂಬಂಧವನ್ನು ಹೊಂದಿರುವುದಿಲ್ಲ. ಮಹಿಳೆಯರು ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು ದುಡಿಯುತ್ತಿದ್ದಾರೆ. ಒಟ್ಟಾರೆಯಾಗಿ ಮಹಿಳೆಯ ವೇತನ ಸಹಿತ ಹಾಗೂ ವೇತನ ರಹಿತ ದುಡಿಮೆಗೆ ಸಮಾಜದಲ್ಲಿ ಮನ್ನಣೆ ದೊರೆಯದೇ, ಆರ್ಥಿಕತೆಯಲ್ಲಿ ಕೇವಲ ಅಂಚಿನ ಉತ್ಪಾದಕಳಾಗಿರುತ್ತಾಳೆ. ಏಕೆಂದರೆ ಮಹಿಳೆಯ ದುಡಿಮೆಯು ಸರ್ಕಾರಿ ಲೆಕ್ಕಾಚಾರದಲ್ಲಿ ಸೇರಿರುವುದಿಲ್ಲ. ಹೀಗೆ ಮಹಿಳೆಯ ದುಡಿಮೆ ಅಪಮೌಲ್ಯಕ್ಕೊಳಪಟ್ಟಿರುತ್ತದೆ. ಮಹಿಳಾ ಮನೆಗೆಲಸಗಾರರ ನೋಂದಣಿ ಮಾಡಿಸಿಕೊಳ್ಳುವುದರ ಮೂಲಕ ಈ ಸಮಸ್ಯೆ ಪರಿಹಾರ ಕಾಣಬಹುದು. ಇದಕ್ಕೆ ಪ್ರಮುಖ ಪರಿಹಾರವೆಂದರೆ ಮನೆಯ ಪ್ರಗತಿ ಏಳಿಗೆಗಾಗಿ ದುಡಿಯುವ ಮಹಿಳೆಯರಿಗೆ ಮೊಟ್ಟಮೊದಲು ಮನೆಯ ಸದಸ್ಯರಿಂದಲೇ ಬೆಂಬಲ ಸಹಕಾರದ ಅಗತ್ಯವಿದೆ.

ಸ್ತ್ರೀಯರು ದುಡಿಮೆಯಲ್ಲಿ ತೊಡಗುವುದಕ್ಕೂ ಹತ್ತು ಹಲವು ನಿರ್ಬಂಧಗಳಿರುವುದನ್ನು ಮಹಿಳೆಯರು ವ್ಯಕ್ತಪಡಿಸಿದ್ದಾರೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರ ಸ್ಥಾನಮಾನದಲ್ಲೇನೂ, ಅಷ್ಟೊಂದು ಸುಧಾರಣೆಯಾಗಿರುವುದಿಲ್ಲ. ಕುಟುಂಬಕ್ಕಾಗಿ ದುಡಿಯುವುದು ಅನಿವಾರ್ಯವಾದರೂ ಕುಟುಂಬದ ಸದಸ್ಯರ ಹಾಗೂ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಮನೆತನದ ಹತ್ತುಹಲವು ಕಟ್ಟುಪ್ಪಣೆಗಳನ್ನು ಪಾಲಿಸಬೇಕಾಗುತ್ತದೆ. ಮೇಲಿನ ಕೋಷ್ಟಕದಲ್ಲಿ ದಾಖಲಿಸಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಹೊಸಪೇಟೆಯ ಎಲ್ಲಾ ಮಹಿಳೆಯರೂ ತಾವು ವೃತ್ತಿಯಲ್ಲಿ ಸಾಮಾಜಿಕ ಕಟ್ಟುಪಾಡುಗಳನ್ನು ಎದುರಿಸುತ್ತಿದ್ದೇವೆ. ಎಂದು ಪ್ರತಿಕ್ರಿಯಿಸುವುದರ ಮೂಲಕ ಮತ್ತೊಮ್ಮೆ ಭಾರತೀಯ ಸಮಾಜ ಕಂದಾಚಾರಗಳಿಂದ, ಮೂಢನಂಬಿಕೆಗಳಿಂದ, ಧಾರ್ಮಿಕ ನಂಬಿಕೆಗಳಿಂದ ಹೊರಬಂದಿರುವುದಿಲ್ಲ ಎಂದೇ ಸಾಬೀತಾಗಿರುತ್ತದೆ. ಆದರೆ ಸಮಾಜದಲ್ಲಿ ಎಷ್ಟೇ ಅನಿಷ್ಠ ಜಾಡ್ಯಗಳಿದ್ದರೂ ಅದರ ಪರಿಣಾಮವನ್ನು ಎದುರಿಸಬೇಕಾಗಿರುವುದು ಮಹಿಳೆಯರೇ. ಇದು ಅವಳ ವೃತ್ತಿ ಜೀವನಕ್ಕೆ ತೊಡಕನ್ನುಂಟು ಮಾಡುತ್ತಿದೆ. ಸ್ತ್ರೀಯರು ವಿದ್ಯಾವಂತ ರಾಗುವುದರ ಮೂಲಕ ಇಂತಹ ಸಮಸ್ಯೆಗಳು ಪರಿಹಾರ ಕಾಣಬಹುದಾಗಿದೆ.

೪.೧೦: ಸಾಮಾಜಿಕ ಸ್ಥಾನಮಾನದ ಮಾಹಿತಿ

ಮಹಿಳೆಯರು ಸಮಾಜದಲ್ಲಿ ಹೊಂದಿರುವ ಸ್ಥಾನಮಾನದ ಮಾಹಿತಿಯನ್ನು ಪಡೆಯಲು ಈ ಮೂರು ಸೂಚಿಗಳನ್ನು ಬಳಸಿಕೊಳ್ಳಲಾಗಿದೆ. ಅದರಲ್ಲಿ ಮೊದಲನೆಯದಾಗಿ ಮಹಿಳೆಯರು ವೃತ್ತಿಯಲ್ಲಿ ಎದುರಿಸುತ್ತಿರುವ ಜಾತಿ ಸಮಸ್ಯೆ, ಎರಡನೆಯದಾಗಿ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಮೂರನೆಯದಾಗಿ ಅನ್ಯಾಯದ ವಿರುದ್ಧ ಪ್ರತಿಭಟನೆ ನಡೆಸಿದ ಮಾಹಿತಿ. ಈ ಮೂರು ಮಾಹಿತಿಗಳನ್ನು ವಿಶ್ಲೇಷಿಸುವುದರ ಮೂಲಕ ಮಹಿಳೆಯರು ಸಮಾಜದಲ್ಲಿ ಹೊಂದಿರುವ ಸ್ಥಾನಮಾನದ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ.

ವೃತ್ತಿಯಲ್ಲಿ ಜಾತಿ ತೊಡಕು :

ಭಾರತ ಜಾತ್ಯಾತೀತ ರಾಷ್ಟ್ರ ಎಂದು ಸಂವಿಧಾನಾತ್ಮಕವಾಗಿ ಘೋಷಣೆಯಾದರೂ ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಎಷ್ಟೊಂದು ಪ್ರಬಲವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರೆ ಇದು ರಾಷ್ಟ್ರದ ಅಭಿವೃದ್ಧಿಗೆ ತೊಡಕನ್ನುಂಟು ಮಾಡುತ್ತಿದೆ. ಜಾತಿ ಪದ್ಧತಿ ಭಾರತೀಯ ಸಮಾಜಕ್ಕೆ ಅಂಟಿದ ಕಳಂಕವಾಗಿದೆ. ಜಾತಿ ವ್ಯವಸ್ಥೆಯು ಭಾರತದಲ್ಲಿ ಮಾತ್ರ ಕಾಣಬಹುದಾದಂತಹ ವಿಶಿಷ್ಠ ರೂಪದ ಸ್ತರವ್ಯವಸ್ಥೆಯಾಗಿದ್ದು ಇಡೀ ಜಗತ್ತಿನಲ್ಲಿ ಅದಕ್ಕೆ ಎಲ್ಲಾ ದೃಷ್ಟಿಯಿಂದಲೂ ಸರಿಗಟ್ಟುವ ಪರ್ಯಾಯ ವ್ಯವಸ್ಥೆ ಎಂಬುದಿಲ್ಲ. ಪ್ರಾಚೀನ ಕಾಲದಿಂದಲೇ ಬೆಳೆಯುತ್ತ ಹೋದ ಜಾತಿ ವ್ಯವಸ್ಥೆಯು ಆಧುನಿಕ ಪರಿಣಾಮಗಳನ್ನು ಪಾಶ್ಚಾತ್ಯ ಸಂಸ್ಕೃತಿಯ ದಾಳಿಗಳನ್ನು ಸಮರ್ಥವಾಗಿ ಎದುರಿಸುತ್ತ, ಹೊಂದಾಣಿಕೆ ಮಾಡಿಕೊಳ್ಳುತ್ತ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಜಾತಿ ಎಂಬ ಮಲಿನ ನೀರಿನಲ್ಲಿ ಪ್ರತಿಯೊಬ್ಬ ಭಾರತೀಯನೂ ಮೀನಿನಂತೆ ಬದುಕುತ್ತಿರುವುದು ಸಾಮಾಜಿಕ ಸತ್ಯ ಎಂಬ ಅಂಶವನ್ನು ಲಕ್ಷ್ಮೀಪತಿ ಕೋಲಾರ (೨೦೦೨ ಪು.ಸಂ:೧೮೭) ತಿಳಿಸಿದ್ದಾರೆ.

ನಗರೀಕರಣ, ಕೈಗಾರಿಕೀಕರಣ ಹಾಗೂ ಆಧುನೀಕರಣದ ಪ್ರಖರತೆ ಹೆಚ್ಚುತ್ತಾ ಹೋದಂತೆ ಜಾತಿಯ ಬೇರುಗಳು ದುರ್ಬಲಗೊಳ್ಳುತ್ತಾ ಹೋಗುತ್ತವೆಂಬ ಸಾಮಾನ್ಯ ನಿರೀಕ್ಷೆ ಈಗ ಸುಳ್ಳಾಗಿದೆ. ಇಂತಹ

ಪರಿಸ್ಥಿತಿಗಳಲ್ಲಿ ಜಾತಿ ವ್ಯವಸ್ಥೆಯು ನಶಿಸದೇ ಹೊಸ ಹೊಸ ಪಾತ್ರಗಳನ್ನು ತಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಸಾಮಾಜಿಕ ಸ್ತರವಿನ್ಯಾಸದ ಒಂದು ರೂಪವಾಗಿರುವ ಜಾತಿ ಪದ್ಧತಿಯು ತನ್ನೆಲ್ಲಾ ವೈಶಿಷ್ಟಗಳೊಂದಿಗೆ ಭಾರತಕ್ಕೆ ಮಾತ್ರ ಸೀಮಿತವಾಗಿರುವುದು ವಿಶಿಷ್ಟವಾಗಿದೆ. ೪೦೦೦ಕ್ಕೂ ಅಧಿಕ ಜಾತಿ ಉಪಜಾತಿಗಳನ್ನು ಅವುಗಳ ಎಲ್ಲಾ ವಿಶಿಷ್ಟತೆಗಳೊಂದಿಗೆ ಹೊಂದಿರುವ ಭಾರತವು ಜಾತಿ ಪದ್ಧತಿಯ ಏಕಮಾತ್ರ ನಾಡಾಗಿದೆ. ಹಿಂದೂ ಸಮಾಜವು ಅನೇಕ ಜಾತಿಗಳನ್ನು ಹೊಂದಿದೆ. ಜಾತಿಗಳು ತಮ್ಮದೇ ಆದ ನಿಶ್ಚಿತ ಜೀವನ ಮತ್ತು ಸಂಸ್ಕೃತಿಯನ್ನು ಹೊಂದಿವೆ. ಒಬ್ಬನ ಅರ್ಹತೆ, ಪ್ರತಿಭೆ, ಸಾಮಾರ್ಥ್ಯ ಮತ್ತು ಸಾಧನೆಗಳಿಗಿಂತಲೂ ಆತನ ಹುಟ್ಟಿನಿಂದಲೇ ಜಾತಿ ಸದಸ್ಯತ್ವವು ನಿರ್ಧರಿತವಾಗುತ್ತದೆ. ಜಾತಿಯು ಸಾಮಾಜಿಕ ಸ್ತರವಿನ್ಯಾಸದ ಒಂದು ರೂಪವಾಗಿದ್ದು, ಏಣಿಶ್ರೇಣಿಗಳಿಂದ ಕೂಡಿದ ವ್ಯವಸ್ಥೆಯಾಗಿದೆ. ಮೇಲುಕೀಳು, ಶ್ರೇಷ್ಠ–ಕನಿಷ್ಠ ಅಥವಾ ಪವಿತ್ರ ಅಪವಿತ್ರ ಎಂಬ ಭಾವನೆಯ ಮೇಲೆ ಜಾತಿ ವ್ಯವಸ್ಥೆ ರೂಪಿತವಾಗಿದೆ.

ಮಾನವನ ಚರಿತ್ರೆಯೇ ವರ್ಗಹೋರಾಟ ಎಂಬ ಮಾತು ಚಾರಿತ್ರಿಕ ಸತ್ಯವಾದರೂ ಅಸ್ಪೃಶ್ಯರ ಪಾಲಿಗೆ ಅಪವಾದವಾಗಿ ಇಂಡಿಯಾದ ಸ್ಥಿತಿಯಲ್ಲಿ ವಿಶೇಷವಾದ ಪರಿಣಾಮವನ್ನು ಕೊಟ್ಟಿತು. ವರ್ಣಾಶ್ರಮ ಧರ್ಮವನ್ನು ಜಾರಿಗೆ ತಂದ ನಮ್ಮ ದೇಶದಲ್ಲಿ ನಾಲ್ಕು ವರ್ಗಗಳಾಗಿ ಸಮಾಜವನ್ನು ವಿಂಗಡಿಸಿದರೂ ಇದನ್ನು ಮೀರಿದ ಒಂದು ಜನಾಂಗ ಸೃಷ್ಟಿಯಾಯಿತು. ಆ ವರ್ಗ ಪಂಚಮರು ಅಥವಾ ಅಸ್ಪೃಶ್ಯರು ಎಂದು ಕರೆಯಲ್ಪಟ್ಟಿದ್ದಾರೆ ಎಂದು ಎಲ್. ಹನುಮಂತಯ್ಯನವರು (೨೦೦೨ ಪು.ಸಂ.೧೭೧) ಅಭಿಪ್ರಾಯ ಪಡುತ್ತಾರೆ. ಭಾರತೀಯ ಸಮಾಜದಲ್ಲಿ ಬ್ರಾಹ್ಮಣರು ಮೇಲಿನ ಸ್ಥಾನದಲ್ಲಿದ್ದರೆ ದಲಿತರು (ಅಸ್ಪೃಶ್ಯರೆನಿಸಿ ಕೊಂಡವರು) ಸಮಾಜದ ಕೆಳಸ್ತರದಲ್ಲಿದ್ದಾರೆ ಎಂದು ವಿ.ಕೆ.ಸಿಂಗ್ (೨೦೧೦ ಪು.ಸಂ.೯) ಅವರು ತಿಳಿಸಿರುತ್ತಾರೆ. ಭಾರತೀಯ ಸಮಾಜದಲ್ಲಿ ಶತಶತಮಾನಗಳಿಂದ ಶ್ರೇಷ್ಠರೆಂದು ಗುರುತಿಸಿಕೊಂಡವರು ಕೆಳಜಾತಿಯವರನ್ನು ತುಚ್ಛವಾಗಿ ಕಾಣುತ್ತಾ ಶೋಷಿಸುತ್ತಾ ಬಂದಿರುವುದು ಸಾಮಾನ್ಯವಾಗಿದೆ.

ಮನೆಗೆಲಸದ ದುಡಿಮೆಯಲ್ಲಿಯೂ ಜಾತಿಭೂತವು ಬೆಂಬಿಡದೇ ಕಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ. ವನಿತಾಸಿಂಗ್ (೨೦೦೭) ಅವರು ತಮ್ಮ 'ವುಮೆನ್ ಡೊಮೆಸ್ಟಿಕ್ ವರ್ಕರ್ಸ್ ವಿಥಿನ್ ಹೌಸ್ ಹೋಲ್ಡ್,' ಕೃತಿಯಲ್ಲಿ ಮಹಿಳಾ ಮನೆಗೆಲಸಗಾರರ ಬಗ್ಗೆ ವಿಶೇಷ ಅಧ್ಯಯನ ಕೈಗೊಂಡಿದ್ದಾರೆ. ಮನೆಗೆಲಸದ ದುಡಿಮೆಗಾರರು ಸಾಮಾನ್ಯವಾಗಿ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ಮಹಿಳೆಯರಾಗಿರುತ್ತಾರೆ.[೬] ಕೆಲವೊಮ್ಮೆ ಮನೆಯೊಡತಿಯರ ಜಾತಿಗೆ ಸೇರಿದವ ರಾಗಿದ್ದರೂ ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ಮನೆಗೆಲಸಕ್ಕೆ ನಿಯುಕ್ತರಾಗಿರುತ್ತಾರೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಪರಿಶಿಷ್ಟ ವರ್ಗಕ್ಕೆ ಜಾತಿಗೆ ಸೇರಿದವರೂ ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದವರೂ ಇದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೧೫೦ ಮಹಿಳೆಯರು ತಾವು ನಿರ್ವಹಿಸುತ್ತಿರುವ ವೃತ್ತಿ(ಮನೆಗೆಲಸ)ಯಲ್ಲಿ ಜಾತಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ತಾವು ಎದುರಿಸುತ್ತಿರುವ ಸಮಸ್ಯೆ ಎಂಥಹದು ಎಂದು ವೈಯಕ್ತಿಕವಾಗಿ ವಿಚಾರಿಸಿದಾಗ

ಅಭಿಪ್ರಾಯವನ್ನು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಮೇಲ್ಜಾತಿಯವರ ಮನೆಯಲ್ಲಿ ಕೆಲಸ ಮಾಡುವಾಗ ಅಡುಗೆ ಮನೆ ಹಾಗೂ ದೇವರ ಮನೆಯೊಳಗೆ ಪ್ರವೇಶಿಸಲು ಅವಕಾಶ ಮಾಡಿಕೊಡುತ್ತಿಲ್ಲ. ಪಾತ್ರೆ ಹಾಗು ಬಟ್ಟೆ ಸ್ವಚ್ಛಗೊಳಿಸುವ ಕೆಲಸವನ್ನು ಮಹಿಳೆಯರು ಹೊರಗಿನಿಂದಲೇ ಮಾಡಬೇಕಾಗಿದೆ. ಮಾನವ ಜನಾಂಗ ಒಂದೇ ಆದರೂ ಜಾತಿ, ವರ್ಗ, ಲಿಂಗ ಭೇದವನ್ನೊಳಗೊಂಡ ಸಮಾಜದಲ್ಲಿ ಮನುಷ್ಯ ಮನುಷ್ಯನಿಂದಲೇ ಶೋಷಿತರಾಗುವುದು ಅವಹೇಳನಕಾರಿ ಪದ್ಧತಿ. ಅದರಲ್ಲೂ ಬೇರೆಯವರ ಮನೆಯ ಕೆಲಸ ಮಾಡಿ ಬದುಕುವ ಜನರು ವೃತ್ತಿಯಲ್ಲಿ ಸಮಸ್ಯೆಗಳನ್ನು ಎದುರಿಸುವುದು ಎಂದರೆ ಯಾವ ಸಮಾಜಕ್ಕೂ ಗೌರವ ತರುವುದಿಲ್ಲ.

ಆದರೆ ಬದಲಾಗುತ್ತಿರುವ ಸಮಾಜದಲ್ಲಿ ಅನೇಕ ಜನ ವಿಶಾಲ ಮನೋಭಾವವುಳ್ಳವರೂ ಇದ್ದಾರೆ ಎಂಬುದಕ್ಕೆ ಸಾಕ್ಷಿ ಎನ್ನುವಂತೆ ಸಮೀಕ್ಷೆಗೊಳಗೊಂಡ ೨೫೦ ಮಹಿಳೆಯರಲ್ಲಿ ಸುಮಾರು ೧೦೦ ಮಹಿಳೆಯರು ವೃತ್ತಿಯಲ್ಲಿ ಯಾವ ಸಮಸ್ಯೆಯನ್ನು (ಜಾತಿ ಕುರಿತಂತೆ) ಎದುರಿಸುತ್ತಿಲ್ಲ. ಮೇಲ್ವರ್ಗಕ್ಕೆ ಸೇರಿದ ಕೆಲವು ಮನೆ ಮಾಲೀಕರು ತಮ್ಮ ಮನೆಯ ಎಲ್ಲ ಕೊಠಡಿಗಳಿಗೆ ಮನೆಗೆಲಸದವರಿಗೆ ಪ್ರವೇಶ ನೀಡಿರುತ್ತಾರೆ ಹಾಗೂ ಗೌರವದಿಂದ ಕಾಣುತ್ತಿದ್ದಾರೆ. ಸ್ವಜಾತಿಯವರ ಮನೆಯಲ್ಲಿ ಕೆಲಸ ನಿರ್ವಹಿಸುವಾಗ ಯಾವುದೇ ಅಭ್ಯಂತರವಿಲ್ಲದೇ ಮನೆಯ ಎಲ್ಲ ಕೋಣೆಗಳನ್ನೂ ಪ್ರವೇಶ ಸಿಗುತ್ತಿದೆ. ಮಾಲಿಕರ ಮನೆಯಲ್ಲಿ ಯಾವ ಭೇದ ಭಾವವಿಲ್ಲದೇ ಬೆರೆಯುತ್ತಾರೆ. ಆದರೆ ಬಡತನ ಪರಿಸ್ಥಿತಿ ಸಾಮಾಜಿಕ ವ್ಯವಸ್ಥೆಗಳು ಮಹಿಳೆಯರನ್ನು ಈ ವೃತ್ತಿಯಲ್ಲಿ ತೊಡಗುವಂತೆ ಮಾಡಿದೆ. ಇದೇ ರೀತಿಯ ಅಭಿಪ್ರಾಯವನ್ನು ಶ್ರೀಲತಾ ಭಾಟ್ಲಿವಾಲಾ (೧೯೯೮) ಅವರೂ ವ್ಯಕ್ತಪಡಿಸಿದ್ದಾರೆ. ಜಾತಿ ತಾರತಮ್ಯವಿರುವ ಸಮಾಜದಲ್ಲಿ ಮಹಿಳೆ ಸುಲಭವಾಗಿ ಶ್ರಮದ ಮಾರುಕಟ್ಟೆ ಪ್ರವೇಶಿಸುವಂತಿಲ್ಲ, ಒಂದು ವೇಳೆ ಪ್ರವೇಶಿಸಿದ್ದೇ ಆದರೆ ಅದು ಮನೆತನದ ಕಟ್ಟುಪಾಡಿಗೆ, ಸ್ಥಾನಮಾನಕ್ಕೇ ಧಕ್ಕೆ ತರುತ್ತದೆ ಎಂಬ ಭಾವನೆ ಬೇರೂರಿದೆ. ಆದರೂ ಸಮಯ ಬಂದಾಗ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ತಾಕತ್ತು ಮಹಿಳೆಗಿದೆ.

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ :

ಸ್ತ್ರೀಯರು ಹೊಂದಿರುವ ಸ್ಥಾನಮಾನವೆಂಬುದು ಯಾವುದೇ ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರೀಕತೆಯನ್ನು ಮುನ್ನಡೆಸುವ ಅಳೆಯುವ ಮಾನದಂಡವಿದ್ದಂತೆ. ಸ್ತ್ರೀಯರನ್ನು ಗೌರವಿಸದ ಮತ್ತು ಅವರಿಗೆ ಅರ್ಹವಾದ ಅಂತಸ್ತು ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜವು ಎಂದಿಗೂ ಪ್ರಗತಿ ಸಾಧಿಸಲಾರದು ಎಂದು ಸ್ವಾಮಿ ವಿವೇಕಾನಂದರು ಹೇಳಿಕೆ ನೀಡಿರುತ್ತಾರೆ.

ಭಾರತದ ಮಾನದ ಸಂಪನ್ಮೂಲದ ಅರ್ಧದಷ್ಟಿರುವ ಮಹಿಳೆಯರ ಜೀವನ ಗೊಂದಲದ ಗೂಡಾಗಿದೆ. ಶತಶತಮಾನಗಳಿಂದಲೂ ದಾಸ್ಯವನ್ನೇ ಅನುಭವಿಸಿಕೊಂಡು ಬಂದ ಮಹಿಳೆಯರಿಗೆ ಆಧುನಿಕ ಯುಗದಲ್ಲಿ ಉತ್ತಮ ಸ್ಥಾನವನ್ನೇನೋ ನೀಡಲಾಗಿದೆ. ಆರ್ಥಿಕತೆಯ ವೈವಿಧ್ಯಮಯ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ ಸಾಮರ್ಥ್ಯ ಹಾಗು ಸಾಧನೆಗಳನ್ನು ಪ್ರಕಟಪಡಿಸುತ್ತಾ ಮುಂದೆ ಸಾಗುತ್ತಿದ್ದಾರೆ ಎಂದ ಮಾತ್ರಕ್ಕೆ ಅವರು ಸಮಸ್ಯೆಗಳಿಂದ ಮುಕ್ತರು ಎನ್ನುವಂತಿಲ್ಲ, ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಈ ಎಲ್ಲಾ ಸಮಸ್ಯೆಗಳಲ್ಲಿ ಲಿಂಗತಾರತಮ್ಯ ಪ್ರಧಾನವಾಗಿದ್ದು.

ಲಿಂಗತಾರತಮ್ಯ ಎಂದರೆ ಒಂದು ಲಿಂಗಕ್ಕಿಂತ ಇನ್ನೊಂದು ಲಿಂಗಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು. ಪ್ರಾಚೀನ ಕಾಲದಿಂದಲೂ ನಾಲ್ಕು ಗೋಡೆಗಳ ಮಧ್ಯ ದುಡಿದು ಉತ್ತಮ ಗೃಹಿಣಿಯ ಪಟ್ಟವೇರಿ ತಕ್ಕಮಟ್ಟಿಗೆ ವಿಶ್ರಾಂತಿ ಪಡೆಯುತ್ತಿದ್ದ ಮಹಿಳೆಗೆ ಇಂದು ವಿಶ್ರಾಂತಿ ಎನ್ನುವುದು ಮರೀಚಿಕೆಯಾಗಿದೆ. ದುಡಿಯುವ ಯಂತ್ರವಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ಮಹಿಳೆಯರು ಬದಲಾವಣೆಗೆ ಪರಿಪೂರ್ಣವಾಗಿ ಹೊಂದಿಕೊಳ್ಳದೇ ತಡವರಿಸುತ್ತಿದ್ದಾರೆ. ಸಮಾಜ ಪ್ರಾರಂಭವಾದಾಗಿನಿಂದಲೂ ಮಹಿಳೆಯು ಪುರುಷನ ಗುಲಾಮಳು ಎಂಬ ಭಾವನೆ ಬೆಳೆದದ್ದು ಬುದ್ಧಿಗೇಡಿತನ ಎಂದು ಫೆಡ್ರಿಕ್ ಏಂಗೆಲ್ಸ್ ಹೇಳಿರುವ ಹೇಳಿಕೆ ನಿಜವಾಗಲೂ ಅರ್ಥಪೂರ್ಣವಾದದ್ದು, ಸ್ತ್ರೀಪುರುಷರ ನಡುವಿನ ಅಸಮಾನತೆ ಆದಿ ಸಮಾಜದ್ದಲ್ಲ. ಆದರೆ ನಾಗರೀಕತೆ ಬೆಳೆದಂತೆಲ್ಲ ಮಹಿಳೆ ಪುರುಷನ ಗುಲಾಮಳಾದದ್ದು ಚಾರಿತ್ರಿಕ ಸತ್ಯ. ಮಾನವ ಸಂಪನ್ಮೂಲದ ಅರ್ಧಭಾಗವನ್ನು ಶೋಷಣೆ ಮಾಡುತ್ತಾ ಗೃಹಬಂಧನದಲ್ಲಿರಿಸಿರುವ ಪುರುಷರು ಇಡೀ ಸಮಾಜವನ್ನು ರೂಪಿಸಲಾರರು. ಮಹಿಳೆಯರು ಸಂಪೂರ್ಣ ಸಮಾನತೆಯನ್ನು ಸಾಧಿಸಿದಾಗ ಮಾತ್ರ ನಿಜವಾದ ಸಮಾನತೆಯ ಸಮಾಜ ರೂಪುಗೊಳ್ಳಲು ಸಾಧ್ಯವಿದೆ ಎಂದು ಡಾ. ಬಿ.ಹೆಚ್. ಅಂಜಿನಪ್ಪ (೨೦೦೬) ಅವರು ಅಭಿಪ್ರಾಯ ಪಡುತ್ತಾರೆ. ಮನುಷ್ಯನ ಉತ್ಪಾದಕಳು ಮಹಿಳೆಯೇ ಆಗಿದ್ದರೂ ಅವಳ ಕೈಯಲ್ಲಿಯೇ ಬರಲಿರುವ ಜನಾಂಗಗಳ ಭವಿಷ್ಯವಿದ್ದರೂ ಮಾನವ ಇತಿಹಾಸದಲ್ಲಿ ಮಹಿಳೆ ಅನುಭವಿಸುತ್ತಿರುವ ಸ್ವಾತಂತ್ರ್ಯದ ಪ್ರಮಾಣ ಎಷ್ಟು ಎಂದು ಲೆಕ್ಕಹಾಕಿದರೆ ಅವಳ ಗುಲಾಮಗಿರಿಯೇ ಎದ್ದು ಕಾಣುತ್ತದೆ. ಶರೀರ ದುರ್ಬಲತೆಯು ಮಹಿಳೆಯರ ಅಧೀನಕ್ಕೆ ಕಾರಣವಾಗಿದೆ ಮಾತ್ರವಲ್ಲ, ಜೀವಶಾಸ್ತ್ರೀಯ ಕ್ರಿಯೆಯಾದ ತಾಯ್ತನ ಕೂಡ ಆಕೆಯು ಪುರುಷನನ್ನು ಅವಲಂಬಿಸುವಂತೆ ಮಾಡಿದೆ ಎಂಬ ಅಭಿಪ್ರಾಯವನ್ನು ಡಾ. ಹಾಲತಿ ಸೋಮಶೇಖರ್ (೨೦೦೭) ಅವರು ವ್ಯಕ್ತಪಡಿಸಿದ್ದಾರೆ. ಸ್ತ್ರೀಸ್ಥಾನಮಾನವು ಪುರುಷ ಪ್ರಧಾನ ಸಮಾಜದಲ್ಲಿ ಕುಂಠಿತಗೊಂಡಿದೆ. ಇದು ಅಸಮತೋಲನ ಬೆಳವಣಿಗೆಯಾಗಿದೆ.

ಮಹಿಳೆಯರಿಲ್ಲದೇ ಪುರುಷನ ಜೀವನ ಅಪೂರ್ಣ ಎಂಬ ನಿಲುವನ್ನು ಪ್ರೊ. ರಾಮ್‌ನರೇಶ್ ಠಾಕೂರ್ (೨೦೦೧)ರವರು ವ್ಯಕ್ತಪಡಿಸಿದ್ದಾರೆ. ಮಹಿಳೆಯರು ಕುಟುಂಬಕ್ಕಾಗಿ, ಸಮಾಜಕ್ಕಾಗಿ, ರಾಷ್ಟ್ರಕ್ಕಾಗಿ ಸಲ್ಲಿಸುವ ಸೇವೆಯನ್ನು ಗಮನಿಸಿ ಅವಳನ್ನು 'ವಿಶ್ವಮಾತೆ' ಎಂದು ಕರೆದಿದ್ದಾರೆ. ಆದರೆ ಉದ್ಯೋಗ ಮತ್ತು ಆದಾಯದ ವಿಷಯಕ್ಕೆ ಬಂದಾಗ ಮಹಿಳೆಯನ್ನು ಪುರುಷನ ಸಮಾನ ಕಾಣಲಾಗುತ್ತಿಲ್ಲ. ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯನ್ನು ಅಂಚಿನ ಉತ್ಪಾದಕಳೆಂದು ಕಡೆಗಣಿಸಿದೆ. ಕಾರ್ಮಿಕ ಮಾರುಕಟ್ಟೆಯ ಲಿಂಗಭೇದ ನೀತಿಯಿಂದಾಗಿ ಮಹಿಳೆಯರಿಗೆ ನ್ಯಾಯ ಸಿಗದಂತಾಗಿದೆ. ಮಹಿಳೆಯರನ್ನು ಅಬಲೆಯರೆಂದು ಪರಿಗಣಿಸಿ ಕೇವಲ ಶ್ರಮಸಾಂದ್ರ ನೈಪುಣ್ಯರಹಿತ ಕೆಲಸದಲ್ಲಿ ತೊಡಗಿಸಲಾಗುತ್ತದೆ. ಈ ಕ್ಷೇತ್ರವೂ ಅಸಂಘಟಿತ ಕ್ಷೇತ್ರವಾಗಿದ್ದು ಕಡಿಮೆ ವೇತನದ ಕೆಲಸದಿಂದ ಕೂಡಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಪುರುಷ ಕಾರ್ಮಿಕರು ಬಂಡವಾಳ ಸಾಂದ್ರ, ನೈಪುಣ್ಯಯುತವಾದ ಸಂಘಟಿತ ವಲಯಗಳಲ್ಲಿ ತೊಡಗಿರುವುದ ರಿಂದ ಸೇವಾ ಭದ್ರತೆಯನ್ನು ಹಾಗೂ ಹೆಚ್ಚಿನ ವೇತನವನ್ನು ಒಳಗೊಂಡ ಕಾನೂನಿನ ರಕ್ಷಣೆಯನ್ನು ಹೊಂದಿದ ಉದ್ಯೋಗದಲ್ಲಿ ತೊಡಗಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳಾ ಕಾರ್ಮಿಕರ ಸ್ಥಿತಿಗತಿ ಇನ್ನೂ ಶೋಚನೀಯವಾಗಿದೆ.

ಸ್ತ್ರೀ ಮನೆಯ ಹೊರಗಡೆ ಕೆಲಸ ಮಾಡಲಿ ಮಾಡದಿರಲಿ ಮನೆಯ ಕೆಲಸ ಅವಳ ಪಾಲಿಗೆ ಮೀಸಲು, ಮನೆಯ ಹೊರಗಡೆ ದುಡಿಯುವ ಮಹಿಳೆ ಇಬ್ಬಗೆಯ ಹೊರೆಯನ್ನು ಹೊತ್ತಿದ್ದಾಳೆ. ಜೀವನವಿಡೀ ತನ್ನ ಕುಟುಂಬಕ್ಕಾಗಿ ದುಡಿಯುತ್ತಾ ಬಂದಿರುವ ಮಹಿಳೆಯು ತನ್ನ ಬದುಕನ್ನು ರೂಪಿಸಲು ಹೊರಟಾಗ ತಾನು ಮಾಡಬಾರದ ತಪ್ಪನ್ನು ಮಾಡುತ್ತಿದ್ದೇನೆ ಎಂಬ ತಪ್ಪಿತಸ್ಥ ಭಾವನೆಯನ್ನು ಅವಳಲ್ಲಿ ತರಿಸಿ, ತನ್ನ ಜೀವನದ ಏಕೈಕ ಗುರಿ ಪತಿ ಮತ್ತು ಮಕ್ಕಳ ಸೇವೆ ಹಾಗೂ ಕುಟುಂಬ ನಿರ್ವಹಣೆ ಎಂದು ಅವಳು ಕೂಡ ಒಪ್ಪಿಕೊಳ್ಳಬೇಕಾದಂತಹ ಪರಿಸ್ಥಿತಿಗೆ ಕುಟುಂಬ ಓರ್ವ ಸ್ತ್ರೀಯನ್ನು ತಂದಿಡಬಹುದು.[೬] ಕುಟುಂಬದ ಅಸಡ್ಡೆ, ನಿರುತ್ತೇಜನ ಮತ್ತು ಅಸಹಕಾರಿ ಭಾವನೆಗಳಿಂದಾಗಿ ಅನೇಕ ಮಂದಿ ಮಹಿಳೆಯರು ವೃತ್ತಿಯಲ್ಲಿ ಬಡ್ತಿ ಅಥವಾ ವರ್ಗಾವಣೆಯನ್ನು ತಿರಸ್ಕರಿಸುವುದು ಅಥವಾ ಕೆಲಸವನ್ನು ಬಿಟ್ಟು ಗಂಡನನ್ನು ಹಿಂಬಾಲಿಸುವುದು ಸರ್ವೇಸಾಮಾನ್ಯ ಎಂಬ ಸಾಮಾಜಿಕ ವ್ಯವಸ್ಥೆಯನ್ನು ಡಾ.ಆರ್. ಇಂದಿರಾ (೨೦೦೨) ಅವರು ಚಿತ್ರಿಸಿದ್ದಾರೆ.

ಏಣಿಶ್ರೇಣಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗಾಧಾರಿತ ಅಸಮಾನತೆಯನ್ನು ಕೆ. ಶಿವಚಿತ್ತಪ್ಪ ಹಾಗೂ ಎಂ. ಚೌಡೇಗೌಡರು (೨೦೦೫) ಬಹಳ ವಿಶ್ಲೇಷಣಾತ್ಮಕವಾಗಿ ಪ್ರಚುರಪಡಿಸಿದ್ದಾರೆ. ವರ್ಗ ಅಸಮಾನತೆಯಿಂದ ಕೂಡಿದ ಸಾಮಾಜಿಕ ಸ್ತರವಿನ್ಯಾಸದಲ್ಲಿ ಮಹಿಳಾ ಶೋಷಣೆಯು ಯಾವುದೇ ಒಬ್ಬ ವ್ಯಕ್ತಿಯ ಉದ್ದೇಶಿತ ಕ್ರಿಯೆಯಾಗಿರದೇ ಬಂಡವಾಳಶಾಹಿ ವ್ಯವಸ್ಥೆಯ ದ್ಯೋತಕವಾದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಚನೆಗಳಿಂದ ಸೃಷ್ಟಿಯಾದಂತಹ ಒಂದು ವ್ಯವಸ್ಥೆ ಎಂಬ ಕಾರ್ಲ್‌ಮಾರ್ಕ್ಸ ರವರ ವಿಚಾರವನ್ನು ತಿಳಿಸುತ್ತಾರೆ. ಸಮಾಜದಲ್ಲಿ ಉತ್ಪಾದನಾ ಮೂಲಾಂಶಗಳೆಲ್ಲವನ್ನೂ ತನ್ನ ವಶದಲ್ಲಿ ಇರಿಸಿಕೊಂಡಿರುವ ಕೆಲವೇ ಜನರಿಂದ ಬಹುಸಂಖ್ಯಾತರನ್ನು ಶೋಷಣೆಗೆ ಒಳಪಡಿಸುತ್ತಿರುವ ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜದ ತತ್ವವನ್ನು ಆಧರಿಸಿದ ಸಾಮಾಜಿಕ ವ್ಯವಸ್ಥೆ ಜಾರಿಗೆ ಬಂದಾಗ ಮಾತ್ರ ಮಹಿಳಾ ಶೋಷಣೆ ಅಂತ್ಯಗೊಂಡು, ಲಿಂಗ ಅಸಮಾನತೆ ಹೋಗಲಾಡಿಸಿ ಲಿಂಗ ಸಮಾನತೆಯು ಸ್ಥಾಪನೆಯಾಗುವುದೆಂದು ವಾದಿಸುತ್ತಾರೆ. ಉತ್ಪಾದನಾ ಮೂಲಾಂಶಗಳ ಮೇಲೆ ಪುರುಷನ ರೀತಿಯೇ ಮಹಿಳೆಯರಿಗೂ ಸಮಾನ ಅಧಿಕಾರ ದೊರೆತಾಗ ಮಾತ್ರ ಮಹಿಳೆಯರ ಆರ್ಥಿಕ ಪರಾವಲಂಬತನ ದೂರವಾಗಿ ಅವರು ಪುರುಷರಿಗೆ ಸಮಾನರೆಂದು ಪರಿಗಣಿಸಲ್ಪಡುತ್ತಾರೆ.

ಹೊಸಪೇಟೆಯ ಮಹಿಳಾ ಮನೆಗೆಲಸಗಾರರೂ ಕೂಡ ತಮ್ಮ ಸಾಮಾಜಿಕ ಸ್ಥಾನಮಾನದ ಬಗ್ಗೆ ವಿವರಣೆ ನೀಡಿರುತ್ತಾರೆ. ಸಮೀಕ್ಷೆಗೊಳಗಾದ ಎಲ್ಲಾ (೨೫೦) ಮಹಿಳೆಯರು ಸಮಾಜದಲ್ಲಿ ಪುರುಷರಿಗಿಂತ ಕೀಳಾಗಿ ಕಾಣಲ್ಪಡುತ್ತಿದ್ದಾರೆ. ಅವರಿಗೆ ಪುರುಷರ ಸಮಾನ ಕೂಲಿ ಕೊಡುತ್ತಿಲ್ಲ. ಮನೆಯಲ್ಲಿಯೂ ಕೂಡ ಪ್ರಮುಖ ನಿರ್ಧಾರವನ್ನು(ಮಕ್ಕಳ ಓದು, ಮದುವೆ, ಹಣಕಾಸಿನ ವ್ಯವಹಾರ) ತೆಗೆದುಕೊಳ್ಳುವಾಗ ಮಹಿಳೆಯರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಮಹಿಳೆಯರನ್ನು ಸಮಾಜದಲ್ಲಿ ಕೆಳದರ್ಜೆಯ ಪ್ರಜೆಯನ್ನಾಗಿ ನಡೆಸಿಕೊಳ್ಳಲು ಕಾರಣ ಏನೆಂಬುದನ್ನು ರಾಮ್ ನರೇಶ್ ಠಾಕೂರ್ (೨೦೦೧)ರವರು ತಮ್ಮ ಲೇಖನದಲ್ಲಿ ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಮಹಿಳೆಯರು ನಿರಂತರವಾಗಿ ಅಂಚಿನ ಉತ್ಪಾದಕರಾಗಿದ್ದಾರೆ. ಇದಕ್ಕೆ ಮಹಿಳೆಯು ಅನಕ್ಷರಸ್ಥೆಯೂ

ಮತ್ತು ವೃತ್ತಿಕೌಶಲ್ಯರಹಿತೆಯೂ ಆಗಿರುವುದು ಕಾರಣವಾಗಿದೆ. ಮಹಿಳೆಯು ಸಂಪೂರ್ಣವಾಗಿ ಸಂಪನ್ಮೂಲಗಳ ಮೇಲೆ ಮಾಲೀಕತ್ವ ಸಾಧಿಸಿದರೆ ಆಗ ಆಕೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಪಾಲ್ಗೊಳ್ಳುವುದು ಸಾಧ್ಯ. ಮಹಿಳೆಯರು ಆರ್ಥಿಕ ಅಭಿವೃದ್ಧಿಯಲ್ಲಿ ಪೂರ್ಣಪ್ರಮಾಣದಲ್ಲಿ ಪಾಲ್ಗೊಳ್ಳಲು ಹಾಗೂ ಅದರಿಂದ ಲಾಭಗಳನ್ನು ಪಡೆಯಲು ಸಾಮಾಜಿಕ ಸಾಂಸ್ಕೃತಿಕ ತಾರತಮ್ಯಗಳು ಮತ್ತು ಅಡ್ಡಿ ಆತಂಕಗಳೇ ಕಾರಣವಾಗಿವೆ. ಭಾರತೀಯ ಸಮಾಜದಲ್ಲಿ ಸ್ತ್ರೀಯರನ್ನು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಅಥವಾ ಕುಟುಂಬದ ಒಬ್ಬ ಸದಸ್ಯೆಯಾಗಿ ಮಾತ್ರ ಗುರುತಿಸಲಾಗುತ್ತಿದೆಯೇ ವಿನಃ ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಅಲ್ಲ. ಅಂತಹ ಗುರುತಿಸುವಿಕೆಗೆ ಹಲವು ಮಹಿಳೆಯರು ಮಾತ್ರ ಮಾನಸಿಕವಾಗಿ ಪಕ್ವವಾಗಿದ್ದು ಇನ್ನೂ ಹಲವಾರು ಮಹಿಳೆಯರು ಸಿದ್ಧವಿರುವುದಿಲ್ಲ. ಇದಕ್ಕೆ ಪ್ರಮುಖ ಕಾರಣ ಬಡತನ ಹಾಗೂ ಅನಕ್ಷರತೆ.

ಅನ್ಯಾಯದ ವಿರುದ್ಧ ಪ್ರತಿಭಟನೆ :

ಭಾರತದ ಎಲ್ಲಾ ಪ್ರಜೆಗಳಿಗೆ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಆದರೆ ಮಹಿಳೆಯರ ವಿಷಯ ಬಂದಾಗ ಮಾತ್ರ ಈ ಹಕ್ಕುಗಳನ್ನು ಎಷ್ಟರ ಮಟ್ಟಿಗೆ ಜಾರಿಗೊಳಿಸಲಾಗಿದೆ ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ. ಭಾರತೀಯ ಮಹಿಳೆ ಅನ್ಯಾಯ, ಅತ್ಯಾಚಾರ, ಅಸಮಾನತೆ ಎಂಬ ವಿಷ ವರ್ತುಲದಲ್ಲಿ ಸಿಕ್ಕಿಹಾಕಿಕೊಂಡು ಹೊರಬರಲಾರದಷ್ಟು ದುರ್ಬಲಳಾಗಿದ್ದಾಳೆ. ಈ ಎಲ್ಲ ಸಮಸ್ಯೆಗಳಿಗೆ ಕಾರಣ ನಮ್ಮ ಸಂಪ್ರದಾಯ ಸಮಾಜ. ಡಿ.ಬಿ.ಕೃಷ್ಣಕುಮಾರಿ ಹಾಗೂ ಡಿ.ವಿ ರಾಮಣ್ಣನವರು (೨೦೦೧) ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿ ಮೂಲಭೂತ ಹಕ್ಕುಗಳ ಮೂಲಕ ಲಿಂಗ ಸಮಾನತೆಯನ್ನು ಜೀವನದ ಎಲ್ಲಾ ಸ್ತರಗಳಲ್ಲೂ ಒಪ್ಪಿಕೊಳ್ಳಲಾಗಿದೆ. ಭಾರತದ ಸಂವಿಧಾನವೂ ಕೂಡ ಉದ್ಯೋಗ ಕ್ಷೇತ್ರದಲ್ಲಿ ಸಮಾನ ಅವಕಾಶಗಳನ್ನು ನೀಡಿರುವುದಲ್ಲದೇ ಈ ಸಮಾನ ಹಕ್ಕುಗಳನ್ನು ಸಂರಕ್ಷಿಸಬೇಕೆಂದು ನಿರ್ದೇಶನ ನೀಡಿದೆ. ಸರ್ಕಾರದ ಈ ಎಲ್ಲಾ ಕ್ರಮಗಳ ಹೊರತಾಗಿಯೂ ಮಹಿಳೆಯರ ಸ್ಥಿತಿಗತಿಯು ಪುರುಷರಿಗಿಂತ ತುಂಬಾ ಕೆಳಮಟ್ಟದ್ದಾಗಿರುವುದು ತುಂಬಾ ವಿಷಾದಕರ ಸಂಗತಿಯಾಗಿದೆ. ಏಕೆಂದರೆ ಮಹಿಳೆಯರು ಕಷ್ಟಪಟ್ಟು ಗರಿಷ್ಠ ಅವಧಿಗಳವರೆಗೆ ದುಡಿದರೂ ಗಳಿಸುವುದು ಕನಿಷ್ಠ ಕೂಲಿಯನ್ನು. ಏನೆಲ್ಲಾ ಜವಾಬ್ದಾರಿಗಳನ್ನು ಹೊತ್ತಿದ್ದರೂ ಅವಳ ಸ್ಥಾನಮಾನದಲ್ಲಿ ಏನೂ ಸುಧಾರಣೆ ಇಲ್ಲ, ಪಿತೃಪ್ರಧಾನ ಕುಟುಂಬ, ಹಿಂದುಳಿದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಕಾರಣದಿಂದಾಗಿ ಕಡಿಮೆ ವೇತನದ ಅಸಂಘಟಿತ ವಲಯದಲ್ಲಿ ನೆಲೆಯೂರಿದ್ದಾಳೆ. ಮಹಿಳೆಯರು ಐದುವರ್ಷದ ಚಿಕ್ಕ ಹುಡುಗಿಯಾದಾಗಿನಿಂದಲೂ ತಾಯಿಯಾಗಿ, ಹಸುಗೂಸುಗಳನ್ನು ಸಂರಕ್ಷಿಸುವುದು, ಕಟ್ಟಿಗೆ ಸಂಗ್ರಹಿಸುವುದು, ನೀರು ತರುವಂತಹ ಗುರುತರ ಕಾರ್ಯಗಳನ್ನು ನಿರ್ವಹಿಸುತ್ತಾಳೆ. ವಿವಾಹದ ನಂತರವೂ ಗೃಹಕಾರ್ಯಗಳನ್ನು ನಿರ್ವಹಿಸುತ್ತಾ ಹೊರಗೆ ದುಡಿದು ಕುಟುಂಬವನ್ನು ಸಲಹುತ್ತಾಳೆ. ದುಡಿಮೆಯು ಅವಳ ಜೀವನದ ದಿನನಿತ್ಯದ ಚಟುವಟಿಕೆಗಳ ಒಂದು ಭಾಗವಾಗಿದೆ ಅಷ್ಟೆ ವೇತನರಹಿತವಾದ ವೇತನಸಹಿತವಾದ ಇಷ್ಟೆಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರೂ ಅವಳ ಸಮಗ್ರ ದುಡಿಮೆಯನ್ನು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ. ಆದ್ದರಿಂದ ಮಹಿಳೆಯರ ವೇತನರಹಿತ

ದುಡಿಮೆಯ ಅಂಕಿಅಂಶಗಳು ನಮಗೆ ಲಭ್ಯವಾಗುವುದಿಲ್ಲ. ಕೌಟುಂಬಿಕ ಜವಾಬ್ದಾರಿಗಳನ್ನು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಉತ್ಪಾದಕ ಕಾರ್ಯವೆಂದು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಮಹಿಳೆಯರು ಅನುಭವಿಸುತ್ತಿರುವ ಬಡತನವು ಅವರು ಆರಿಸಿಕೊಳ್ಳುವ ಕೆಲಸದ ಮೇಲೆ ಗಾಢಪರಿಣಾಮ ಬೀರುತ್ತದೆ. ಈ ಕಾರಣದಿಂದಾಗಿ ಹೆಚ್ಚಿನ ಮಹಿಳೆಯರು ಕಡಿಮೆ ಆದಾಯದ ಹಾಗೂ ಅಸುರಕ್ಷಿತವಾದ ಕೆಲಸದಲ್ಲಿ ತೊಡಗುವಂತೆ ಮಾಡುತ್ತದೆ ಎಂದು ಸಿ. ಮುತ್ತುರಾಜ್ (೨೦೦೧) ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ದೇಶದ ಆರ್ಥಿಕತೆಗೆ ಹಾಗು ಸಾಮಾಜಿಕ ಜೀವನಕ್ಕೆ ಪ್ರಮುಖ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆಂಬ ವಿಪ್ಲಾ ಛೋಪ್ರಾ (೨೦೦೧) ಅವರ ಹೇಳಿಕೆ ಸ್ತುತ್ಯಾರ್ಹವಾಗಿದೆ. ಹಿಂದಿನ ಕಾಲದಲ್ಲಿ ಮಹಿಳೆಯರನ್ನು ಕಾರ್ಮಿಕರ ಶಕ್ತಿಯ ಪ್ರಮುಖ ಭಾಗವಾಗಿ ತಿಳಿದಿರಲಿಲ್ಲ. ಆದರೆ ಆರ್ಥಿಕತೆಯಲ್ಲಿ ಯಂತ್ರಗಳ ಪರಿಚಯ ದೊಂದಿಗೆ ಮಹಿಳೆಯರೂ ಕೂಡ ಕಾರ್ಮಿಕರ ಮಾರುಕಟ್ಟೆಯನ್ನು ಪ್ರವೇಶಿಸಿದರು. ಮಹಿಳೆಯರ ಆರ್ಥಿಕ ಸ್ಥಿತಿಗತಿಗಳು ಅವಳು ಆಧುನಿಕ ಯುಗದಲ್ಲಿ ಉದ್ಯೋಗಕ್ಕಾಗಿ ಪರಿತಪಿಸುವಂತೆ ಮಾಡಿವೆ. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದಾಗ ಮಹಿಳಾ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತದೆ. ಬೇಡಿಕೆ ಕಡಿಮೆಯಾದಾಗ ತಕ್ಷಣ ಅವರನ್ನು ಕೆಲಸದಿಂದ ತೆಗೆದುಹಾಕಲಾಗುತ್ತದೆ. ಹೀಗಾಗಿ ಮಹಿಳಾ ಕಾರ್ಮಿಕ ಶಕ್ತಿಯನ್ನು 'ರಿಜರ್ವ್ ಆರ್ಮಿ' ಎಂದು ಕರೆದಿದ್ದಾರೆ. ಹೀಗೆ ನಿರಂತರ ಆದಾಯ ತಂದು ಕೊಡದ ಉದ್ಯೋಗದಲ್ಲಿ ತೊಡಗಿ ಒಂದು ರೀತಿಯ ಅನ್ಯಾಯವನ್ನು ಶೋಷಣೆಯನ್ನು ಎದುರಿಸುತ್ತಿದ್ದಾಳೆ.

ಮಹಿಳೆಯರು ಆರ್ಥಿಕ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರೂ ಅಭಿವೃದ್ಧಿಯ ಫಲವು ಪುರುಷರಿಗೆ ಲಭ್ಯವಾಗುವಂತೆ ಸ್ತ್ರೀಯರಿಗೆ ಲಭ್ಯವಾಗುವುದಿಲ್ಲವೆಂದು ಸುಭಾಶಿನಿ ಮಹಾಪಾತ್ರ (೨೦೦೨ ಪು.ಸಂ೫೫) ಅವರ ಅನಿಸಿಕೆಯಾಗಿದೆ. ಮಹಿಳೆ ಸಾಮಾನ್ಯವಾಗಿ ಎರಡು ಕಾರಣಗಳಿಂದ ಉದ್ಯೋಗ ವಂಚಿತಳಾಗುತ್ತಾಳೆ. ಮೊದಲನೆಯದಾಗಿ ಸಾಮಾಜಿಕ ಕಟ್ಟುಪಾಡುಗಳು ಹಾಗೂ ಸಾಂಪ್ರದಾಯಿಕ ಮೌಲ್ಯಗಳು ಅವಳನ್ನು ಬಾಹ್ಯ ಪ್ರಪಂಚದಿಂದ ದೂರವಿಡುತ್ತವೆ. ಎರಡನೆಯದಾಗಿ ಔದ್ಯೋಗಿಕ ಕ್ಷೇತ್ರವನ್ನು ಯಾಂತ್ರೀಕರಣಗೊಳಿಸಿರುವುದರಿಂದ ಮೊದಲಿನಿಂದ ನಿರ್ವಹಿಸಿಕೊಂಡು ಬಂದ ನೈಪುಣ್ಯರಹಿತ ದುಡಿಮೆ ಅವಳನ್ನು ಉದ್ಯೋಗ ವಂಚಿತಳನ್ನಾಗಿಸುತ್ತದೆ. ಮಹಿಳೆಯರು ಶಿಕ್ಷಣ ಹಾಗೂ ವೃತ್ತಿನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಈ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಹೊಡೆದೋಡಿಸಬಹುದಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಅನ್ಯಾಯದ ವಿರುದ್ಧ ಪ್ರತಿಭಟನೆ ನಡೆಸಿದ ಕುರಿತು ಮಹಿಳೆಯರನ್ನು ವಿಚಾರಿಸಲಾಗಿ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ. ಅಸಮಾನತೆ ಎಂಬ ಸಾಮಾಜಿಕ ಪಿಡುಗು ಕುಟುಂಬ ಹಂತದಿಂದಲೇ ಉದ್ಭವಿಸುತ್ತದೆ ಎಂಬುದು ಮಹಿಳೆಯರಿಗೆ ಮನವರಿಕೆಯಾಗಿದೆ. ಗಂಡುಮಕ್ಕಳಿಗೆ ಕೊಡುವ ಪ್ರಾಧಾನ್ಯತೆ ಯನ್ನು ಹೆಣ್ಣುಮಕ್ಕಳಿಗೂ ಕೊಟ್ಟರೆ ಮಹಿಳೆಯರೂ ಕೂಡ ಪುರುಷರಂತೆ ಸಂಘಟಿತ ವಲಯದ ಉದ್ಯೋಗದಲ್ಲಿ ತೊಡಗಬಹುದು. ಇಲ್ಲದಿದ್ದರೆ ಅಸಂಘಟಿತ ವಲಯದ ಕಡಿಮೆ ಕೂಲಿ ಕೊಡುವ ಕೆಲಸಗಳಲ್ಲೇ ಮುಂದುವರೆಯಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಕುಟುಂಬ ಹಂತದಲ್ಲೇ ಬೆಳೆದು

ಬಂದ ಮೇಲುಕೀಳೆಂಬ ಭಾವನೆ ಸಮಾಜದಲ್ಲಿ ಸ್ತ್ರೀಪುರುಷರ ಸ್ಥಾನಮಾನವನ್ನು ನಿರ್ಧರಿಸಲು ದಾರಿಮಾಡಿ ಕೊಡುತ್ತದೆ. ಹೆಣ್ಣುಮಕ್ಕಳು ಕೀಳೆಂಬ ಭಾವನೆ ಅಧಿಕವಾಗುತ್ತಾ ಹೋದಂತೆ ಅವರನ್ನು ಅನೇಕ ಸಾಮಾಜಿಕ ಪಿಡುಗುಗಳು ಬಾಧಿಸಲಾರಂಭಿಸಿವೆ. ಪುರುಷರು ಸ್ತ್ರೀಯರನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಇದು ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳನ್ನು ಹುಟ್ಟು ಹಾಕುತ್ತದೆ. ವರದಕ್ಷಿಣೆ ಹೆಸರಿನಲ್ಲಿ ವಿವಾಹಿತ ಸ್ತ್ರೀಯರನ್ನು ಅಮಾನುಷವಾಗಿ ಹಿಂಸಿಸಲಾಗುತ್ತದೆ. ಹಾಗೂ ಅವರನ್ನು ಕ್ರೌರ್ಯಕ್ಕೆ ದೌರ್ಜನ್ಯಕ್ಕೆ ಹಾಗೂ ಕೆಲವೊಮ್ಮೆ ಕೊಲೆಗೂ ದಾರಿಮಾಡಿಕೊಡುತ್ತದೆ. ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನಕ್ಕೆ ಧಕ್ಕೆ ತಂದಿದ್ದು, ಅವರ ಸ್ಥಾನಮಾನವನ್ನು ಕುಗ್ಗಿಸಿವೆ, ವರದಕ್ಷಿಣೆಯಂತಹ ದುಷ್ಟ ಆಚರಣೆಯನ್ನು ತೊಡೆದು ಹಾಕಲು ೧೯೬೧ರಲ್ಲಿಯೇ 'ವರದಕ್ಷಿಣೆ ನಿಷೇಧ' ಕಾನೂನು ಜಾರಿಗೆ ಬಂದಿದ್ದು ೧೯೮೬ರ ಜೂನ್ ತಿಂಗಳಲ್ಲಿ ಅದಕ್ಕೆ ತಿದ್ದುಪಡಿ ತಂದು ಅದನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ಅವಿದ್ಯಾವಂತ ಸ್ತ್ರೀಯರು ವರದಕ್ಷಿಣೆ ಪದ್ಧತಿಗೆ ಬಲಿಯಾಗುತ್ತಿರುವುದು ಸಾಮಾನ್ಯ ಸಂಗತಿಯಾಗಿರುವುದಲ್ಲದೇ, ವರದಕ್ಷಿಣೆ ಪಿಡುಗಿಗೆ ವಿದ್ಯಾವಂತ ವೃತ್ತಿನಿರತ ಮಹಿಳೆಯರೂ ಕೂಡ ಬಲಿಯಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಏನೇ ಕಾನೂನುಗಳು ಜಾರಿಯಲ್ಲಿದ್ದರೂ ಕಾನೂನಿನ ನೆರಳಿನಲ್ಲಿಯೇ ಈ ಆಚರಣೆ ವಿಜೃಂಭಿಸುತ್ತಿರುವುದು ದುರಂತದ ವಿಷಯವಾಗಿದೆ. ಕೋಷ್ಟಕ ೪.೧೦ರಲ್ಲಿ ಮನೆಗೆಲಸದ ಮಹಿಳೆಯರ ಸಾಮಾಜಿಕ ಸ್ಥಾನಮಾನದ ಮಾಹಿತಿ ದಾಖಲಾಗಿರುತ್ತದೆ.

ಕೋಷ್ಟಕ ೪.೧೦: ಮಹಿಳೆಯರ ಸಾಮಾಜಿಕ ಸ್ಥಾನಮಾನದ ಮಾಹಿತಿ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡ
೧	ವೃತ್ತಿಯಲ್ಲಿ ಜಾತಿ ಸಮಸ್ಯೆ		
	ಇದೆ	೧೫೦	೬೦
	ಇಲ್ಲ	೧೦೦	೪೦
	ಒಟ್ಟು	೨೫೦	೧೦೦
೨	ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ		
	ಚೆನ್ನಾಗಿದೆ	೦	೦
	ಚೆನ್ನಾಗಿಲ್ಲ	೨೫೦	೧೦೦
	ಒಟ್ಟು	೨೫೦	೧೦೦
೩	ಅನ್ಯಾಯದ ವಿರುದ್ಧ ಪ್ರತಿಭಟನೆ		
	ನಡೆದಿದೆ	೦	೦
	ನಡೆದಿಲ್ಲ	೨೫೦	೧೦೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೦ರಲ್ಲಿ ತಿಳಿಸಿರುವ ಮಾಹಿತಿಯಂತೆ ಸಮೀಕ್ಷೆಗೊಳಗಾದ ೨೫೦ ಮನೆಗೆಲಸದ ಮಹಿಳೆಯರಲ್ಲಿ ಶೇ. ೬೦ರಷ್ಟು ಮಹಿಳೆಯರು ತಾವು ವೃತ್ತಿಯಲ್ಲಿ ಜಾತಿ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ ಎಂದು ಪ್ರತಿಕ್ರಿಯಿಸಿದರೆ ಶೇ. ೪೦ರಷ್ಟು ಮಹಿಳೆಯರು ತಾವು ತಮ್ಮ ವೃತ್ತಿಯಲ್ಲಿ ಯಾವುದೇ ರೀತಿಯ

ಜಾತಿ ಸಮಸ್ಯೆಯನ್ನು ಎದುರಿಸುತ್ತಿಲ್ಲ ಎಂದೇ ಉತ್ತರಿಸಿದ್ದಾರೆ. ಅಂದರೆ ಸಮಸ್ಯೆ ಎದುರಿಸುತ್ತಿರುವ ಮಹಿಳೆಯರ ಸಂಖ್ಯೆಯೇ ಅಧಿಕವಿದ್ದು, ಇದು ಸಮಾಜದ ಅಸಮಾನತೆಯ, ಶೋಷಣೆಯ ಪ್ರತಿರೂಪವಾಗಿದೆ. ಸಮಾಜದಲ್ಲಿ ಮಹಿಳೆಯರು ತಮ್ಮ ಸ್ಥಾನಮಾನ ಚೆನ್ನಾಗಿಲ್ಲವೆಂದೇ ಪ್ರತಿಕ್ರಿಯಿಸಿರುತ್ತಾರೆ. ಇದರಂತೆಯೇ ಮಹಿಳೆಯರು ಎದುರಿಸುತ್ತಿರುವ ತಾರತಮ್ಯ (ಲಿಂಗ ತಾರತಮ್ಯ ವೇತನ, ತಾರತಮ್ಯ, ಉದ್ಯೋಗದ ತಾರತಮ್ಯ)ದ ವಿರುದ್ಧ ಪ್ರತಿಭಟನೆ ನಡೆದಿರುವುದಿಲ್ಲ ಎಂಬುದಾಗಿ ಮಾಹಿತಿ ನೀಡಿರುತ್ತಾರೆ.

ಮಹಿಳೆಯರು ತಮ್ಮ ಮೇಲೆ ನಡೆಯುವ ದೌರ್ಜನ್ಯ ಅನ್ಯಾಯ, ಅತ್ಯಾಚಾರಗಳನ್ನು ಶೋಷಣೆಯನ್ನು ಸಹಿಸಿಕೊಂಡು ಜೀವನ ಮಾಡುತ್ತಿರುವುದಕ್ಕೆ ಕಾರಣವೇನು? ಅನ್ಯಾಯದ ವಿರುದ್ಧ ಧ್ವನಿ ಎತ್ತಬಹುದಾದ ಹಕ್ಕು ಮಹಿಳೆಗಿದ್ದರೂ ಅದನ್ನು ಮಹಿಳೆ ಸದುಪಯೋಗಪಡಿಸಿಕೊಳ್ಳದೇ ಇರಲು ಕಾರಣ ಮಹಿಳೆಯೇ ಅಥವಾ ಸಾಮಾಜಿಕ ಸನ್ನಿವೇಶವೇ? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾಗುತ್ತದೆ. ಏಕೆಂದರೆ ಮಹಿಳೆಗಿಂತ ಸಾಮಾಜಿಕ ಸನ್ನಿವೇಶಗಳೇ ಮಹಿಳೆಯನ್ನು ಈ ದುಃಸ್ಥಿತಿಗೆ ತಂದು ನಿಲ್ಲಿಸುತ್ತವೆ. ಹುಟ್ಟಿನಿಂದ ಯಾವ ಮಹಿಳೆಯೂ ದುರ್ಬಲಳಲ್ಲ, ಅಬಲೆಯಲ್ಲ. ಆದರೆ ಭಾರತದಂತಹ ಸನ್ನಿವೇಶದಲ್ಲಿ ಮಹಿಳೆಯನ್ನು ಅನ್ಯಾಯದ ವಿರುದ್ಧ ಪ್ರತಿಭಟಿಸದಂತೆ ಕಟ್ಟಿಹಾಕಿರುವ ಸನ್ನಿವೇಶಗಳೇ ಹೆಚ್ಚಾಗಿವೆ. ಮೊದಲನೆಯದಾಗಿ ಕುಟುಂಬ ಹಂತದಲ್ಲಿ (ತಂದೆ, ತಾಯಿ, ಅತ್ತೆ, ಮಾವ, ಗಂಡ) ನಡೆಯುವ ಶೋಷಣೆಯನ್ನು ಮಹಿಳೆ ಕುಟುಂಬದ ಗೌರವವನ್ನು ಕಾಪಾಡುವುದಕ್ಕಾಗಿ ಸಹಸಿಕೊಂಡು ಹೋಗುತ್ತಾಳೆ. ಇದು ಭಾರತೀಯ ಸ್ತ್ರೀಯರ ಜನ್ಮಕ್ಕೆ ಅಂಟಿಕೊಂಡು ಬಂದ ಸ್ವಭಾವ. ಈ ರೀತಿಯ ಅನ್ಯಾಯಕ್ಕೆ ಶೋಷಣೆಗೆ ತಾನೇ ಬಲಿಯಾದರೂ ಕೂಡ ಪ್ರತಿಭಟನಾ ಹಾದಿಯನ್ನು ಮಾತ್ರ ತುಳಿಯುವುದಿಲ್ಲ. ಹುಟ್ಟಿದಾಗಿನಿಂದ ಹೆಣ್ಣುಮಕ್ಕಳಿಗೆ, ನೀನು ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಹೆಸರನ್ನು ತರಬೇಕು ಎಂಬ ಭಾವನೆಯನ್ನೇ ಬಲಗೊಳಿಸುವ ಸನ್ನಿವೇಶವನ್ನು ಸೃಷ್ಟಿಮಾಡಿ ಮಹಿಳೆ ಈ ನಿಟ್ಟಿನಲ್ಲಿಯೇ ಬದುಕಬೇಕೆಂದು, ಮನೆತನದ ಗೌರವವನ್ನು ಕಾಪಾಡುವ ಹೊಣೆ ನಿನ್ನದೆಂದೂ ವಾಗ್ದಂಡನೆ ವಿಧಿಸಿರುತ್ತಾರೆ. ಇಂತಹ ವಾತಾವರಣವು ಮಹಿಳೆಯರ ಆತ್ಮವಿಶ್ವಾಸವು ಕಡಿಮೆಯಾಗಲು ಕಾರಣವಾಗುತ್ತದೆ.

ಭಾರತ ಸರ್ಕಾರ ೧೯೪೮ರಲ್ಲಿಯೇ ಕನಿಷ್ಠ ಕೂಲಿ ಕಾಯಿದೆಯನ್ನು ಜಾರಿಗೆ ತಂದರೂ ಅದು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಶೇ. ೯೦ಕ್ಕಿಂತಲೂ ಅಧಿಕ ಮಹಿಳೆಯರಿಗೆ ಇನ್ನೂ ತಲುಪಿರುವುದಿಲ್ಲ. ಮಹಿಳೆಯರ ಅನಕ್ಷರತೆ ಹಾಗೂ ಕೌಶಲ್ಯರಹಿತತೆಯ ಕಾರಣಗಳನ್ನು ಹೇಳುತ್ತಾ ಪುರುಷರಿಗಿಂತ ಕಡಿಮೆ ಕೂಲಿ ಕೊಡಲಾಗುತ್ತದೆ. ಒಂದೇ ರೀತಿಯ ಉದ್ಯೋಗದಲ್ಲಿ ಪುರುಷ ಹಾಗೂ ಮಹಿಳೆ ತೊಡಗಿದ್ದರೂ ಅವರಿಗೆ ಬೇರೆ ಬೇರೆ ವೇತನವೇ ನಿಗಧಿಯಾಗಿರುತ್ತದೆ. ಈ ತಾರತಮ್ಯದ ವಿರುದ್ಧ ಮಹಿಳೆಯರು ಧ್ವನಿ ಎತ್ತುವ ಹಾಗಿಲ್ಲ, ಗ್ಲೋಬಲ್ ವೇಜ್ ರಿಪೋರ್ಟ್ ೨೦೧೦-೧೧ರ ವರದಿಯಂತೆ ಮಹಿಳೆಯರ ಬಗೆಗಿನ ಕೀಳುರಮೆಯು ಕಡಿಮೆ ವೇತನದ ದುಡಿಮೆಯಲ್ಲಿ ಮಹಿಳೆಯರನ್ನು ನೇಮಿಸಿಕೊಳ್ಳಲು ಕಾರಣ ಎಂಬುದಾಗಿದೆ. ಮನೆಗೆಲಸದ ಮಹಿಳೆಯರೂ ಕೂಡ ಕಡಿಮೆ ಕೂಲಿಗೆ ಅಧಿಕ ಅವಧಿಗಳವರೆಗೆ ದುಡಿಯಬೇಕಾಗಿದೆ. ಆದರೂ ಮಹಿಳೆಯರು ಈ ತಾರತಮ್ಯವನ್ನು ಪ್ರತಿಭಟಿಸದೇ ತಮ್ಮ ದುಡಿಮೆಯಲ್ಲಿ ಮುಂದುವರೆಯಲು ಕಾರಣ ಆರ್ಥಿಕ ಮುಗ್ಗಟ್ಟು, ಮಹಿಳೆಯರು ಸಾಮಾನ್ಯವಾಗಿ

ದುಡಿಮೆಗೆ ತೊಡುಗುವುದು ಮನೆಯಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದ ಸಮಯದಲ್ಲಿ. ಅಂತಹ ಸನ್ನಿವೇಶದಲ್ಲಿ ತನ್ನ ಯೋಗ್ಯತೆಗೆ ತಕ್ಕಂತಹ ಕೆಲಸದಲ್ಲಿ ತೊಡಗುತ್ತಾಳೆ. ಆದರೆ ಅಂತಹ ವೃತ್ತಿಗಳಲ್ಲಿ ಅಸಮಾನತೆ ಶೋಷಣೆಯನ್ನು ಎದುರಿಸಬೇಕಾಗಿ ಬಂದಾಗ ಅದನ್ನು ಮೌನವಾಗಿ ಸಹಿಸುತ್ತಾಳೆಯೇ ಹೊರತು ಪ್ರತಿಭಟಿಸುವುದಿಲ್ಲ. ಏಕೆಂದರೆ ಒಂದೆಡೆ ತನ್ನ ವೃತ್ತಿಯನ್ನು ಕಳೆದುಕೊಳ್ಳಬಹುದೆಂಬ ಭಯ, ಇನ್ನೊಂದೆಡೆ ಕಾನೂನಿನ ಬಗ್ಗೆ ಇರುವ ಅಜ್ಞಾನ. ಹೀಗೆ ಭಾರತೀಯ ಮಹಿಳೆಯರು ತಮ್ಮ ಮೇಲಾಗುವ ಎಲ್ಲ ರೀತಿಯ ಶೋಷಣೆಯನ್ನು ಸಹಿಸುತ್ತಲೇ ಬಂದಿದ್ದಾರೆ. ಪ್ರತಿಭಟನೆ ನಡೆಸುವ ಶಕ್ತಿ ಅವಳಲ್ಲಿ ಕುಗ್ಗಿ ಹೋಗಿದೆ ಎನ್ನಬಹುದು.

ಔದ್ಯೋಗಿಕ ತಾರತಮ್ಯ ಎಂದರೆ ಒಂದೇ ಕೆಲಸದ ಸ್ಥಳದಲ್ಲಿ ನಡೆಯುವ ತಾರತಮ್ಯ ಭಾರತೀಯ ಸಮಾಜದಲ್ಲಿ ಲಿಂಗಾಧಾರಿತ ಶ್ರಮವಿಭಜನೆಯಿಂದಾಗಿ ಪುರುಷ ಹಾಗೂ ಮಹಿಳೆಯರು ಮಾಡುವ ಕೆಲಸಗಳು ನಿರ್ಧಾರವಾಗಿ ಬಿಟ್ಟಿದೆ. ಉದಾ: ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಪುರುಷರು ತೊಡಗಿದ್ದರೆ ಅದಕ್ಕೆ ಸಹಾಯಕರಾಗಿ ಮಹಿಳೆಯರು (ಕಲ್ಲನ್ನು, ಇಟ್ಟಿಗೆಗಳನ್ನು ಎತ್ತಿಕೊಡುವ) ಕೆಲಸ ನಿರ್ವಹಿಸುತ್ತಾರೆ. ಹೀಗೆ ಅವರು ನಿರ್ವಹಿಸುವ ಕೆಲಸದ ಮೇಲೆ ಕೂಲಿ ಪಡೆಯುತ್ತಾರೆ. ಕೆಲವು ವೇಳೆ ಮಹಿಳೆಯರು, ಪುರುಷರು ನಿರ್ವಹಿಸುವ ಕೆಲಸವನ್ನು ಮಾಡಲು ಅರ್ಹರಿದ್ದರೂ ಆ ಕೆಲಸವು ಪುರುಷರಿಗಾಗಿಯೇ ಮೀಸಲಾಗಿರುತ್ತದೆಯೇ ಹೊರತು ಮಹಿಳೆಯರಿಗೆ ಸಿಗುವುದಿಲ್ಲ. ಈ ರೀತಿಯ ತಾರತಮ್ಯ ಅರ್ಥಿಕತೆಯ ಪ್ರತಿರಂಗದಲ್ಲಿಯೂ ತಲೆ ಎತ್ತಿದರೂ ಮಹಿಳೆ ಪ್ರತಿಭಟನೆಯ ಹಾದಿಯನ್ನು ತುಳಿಯುವುದಿಲ್ಲ.

ಭಾರತದ ಸಂವಿಧಾನವು ತನ್ನ ಮುನ್ನುಡಿಯಲ್ಲಿಯೇ ಭಾರತದ ಎಲ್ಲ ಪ್ರಜೆಗಳಿಗೂ ಯಾವುದೇ ಪಕ್ಷಪಾತ ಮಾಡದೇ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ಕಲ್ಪಿಸಿಕೊಡುವುದೆಂದೂ ಎಲ್ಲರಿಗೂ ಸಮಾನವಾಗಿ ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ ನ್ಯಾಯವನ್ನು ನೀಡುವುದೆಂದೂ ಭರವಸೆ ನೀಡಿದೆ. ಸಂವಿಧಾನದ ೧೫,೧೬,೧೭,೧೮ ಮತ್ತು ೪೬ನೇ ವಿಧಿಗಳ ಪ್ರಕಾರ ಧರ್ಮ, ಜಾತಿ, ಹುಟ್ಟು, ಲಿಂಗ ಮುಂತಾದ ಆಧಾರದ ಮೇಲೆ ಪ್ರಜೆಗಳಲ್ಲಿ ಭೇದ ಕಲ್ಪಿಸುವುದಿಲ್ಲವೆಂದು ಹೇಳಲಾಗಿದೆ. ಆದರೆ ಮಹಿಳಾ ಶ್ರಮಿಕರು ಪರಿಸ್ಥಿತಿಯ ಕೈಗೊಂಬೆಗಳಾಗಿ ಅನ್ಯಾಯ ಅತ್ಯಾಚಾರವನ್ನು ಪ್ರತಿಭಟಿಸಲಾರದಂತಹ ಸಾಮಾಜಿಕ ಒತ್ತಡದಲ್ಲಿ ಸಿಲುಕಿದ್ದಾರೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಎದುರಿಸಿ ನಿಲ್ಲುವ ಅಥವಾ ಪ್ರತಿಭಟಿಸುವ ಹಾದಿಯನ್ನು ಇನ್ನೂ ತುಳಿದಿಲ್ಲ. ಇದಕ್ಕೆ ಪ್ರಪ್ರಥಮ ಕಾರಣ ವೇನೆಂದರೆ ಒಗ್ಗಟ್ಟಿನ ಕೊರತೆ. ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಿಭಾಯಿಸಿ ಮನೆಯ ಜವಾಬ್ದಾರಿಯನ್ನು ನಿಭಾಯಿಸುವುದರಲ್ಲಿಯೇ ದಿನದ ಪೂರ್ತಿ ಸಮಯ (೨೪ ಗಂಟೆಗಳು) ಮುಗಿದು ಹೋಗುತ್ತದೆ. ಇನ್ನು ಎಲ್ಲಾ ಮನೆಗೆಲಸಗಾರರಿಗೂ ತಮ್ಮ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಬಿಡುವೇ ಇರುವುದಿಲ್ಲ. ವಾರದ ಎಲ್ಲ ದಿನಗಳೂ ಕೆಲಸ ನಿರ್ವಹಿಸಬೇಕಾಗಿರುವುದರಿಂದ ತಮ್ಮ ಬೇಕು ಬೇಡಗಳ ಬಗ್ಗೆ ಕುಳಿತು ಸಮಾಲೋಚನೆ ಮಾಡಲು ಸಾಧ್ಯವಾಗಿರುವುದಿಲ್ಲ. ಪ್ರತಿಭಟನೆಯಿಂದ ಮಾತ್ರ ಯಾವುದಾದರೂ ಸಮಸ್ಯೆ ಇತ್ಯರ್ಥವಾಗಲು ಸಾಧ್ಯ. ಇನ್ನು ತಮ್ಮ ವೃತ್ತಿ ಸುರಕ್ಷತೆಯ ಕುರಿತಾಗಿ ಇರುವ ಕಾನೂನುಗಳು

ಮಹಿಳೆಯರಿಗೆ ತಿಳಿಯದೇ ಇರುವುದು. ಒಂದು ವೇಳೆ ಕಾನೂನುಗಳ ಅರಿವಿದ್ದರೂ ಅದನ್ನು ಮಾಲೀಕರಿಂದ ಕೇಳಿ ಪಡೆಯುವಲ್ಲಿ ಇರುವ ಭಯ. ಹೀಗೆ ಸಮಸ್ಯೆಗಳ ಸರಮಾಲೆಯಲ್ಲಿ ಮನೆಗೆಲಸದ ಮಹಿಳೆಯರು ಜೀವನ ನೂಕುತ್ತಿದ್ದಾರೆ.

೪.೧೧ ಮಕ್ಕಳ ಜವಾಬ್ದಾರಿ

ಕಳೆದ ಐದು ದಶಕಗಳ ಸಾಕ್ಷರತಾ ದರವನ್ನು ಗಮನಿಸಿದರೆ ಭಾರತದಲ್ಲಿ ಮಹಿಳೆಯರ ಸಾಕ್ಷರತಾ ದರವು ಪುರುಷರಿಗಿಂತ ಅತೀ ಕಡಿಮೆ ಇರುವುದು ತಿಳಿದು ಬರುತ್ತದೆ. ೨೦೦೧ರ ಜನಗಣತಿಯ ಪ್ರಕಾರ ಭಾರತದ ಮಹಿಳಾ ಸಾಕ್ಷರರ ಪ್ರಮಾಣ ಶೇ. ೫೪.೧೬ ಆಗಿದ್ದಿತು. ಈ ರೀತಿಯ ಮಹಿಳಾ ಸಾಕ್ಷರತಾ ದರದಲ್ಲಿ ಇಳಿಕೆ ಕಂಡುಬರುತ್ತಿರುವುದು ಕೇವಲ ರಾಷ್ಟ್ರಮಟ್ಟದಲ್ಲಿ ಅಷ್ಟೇ ಅಲ್ಲ. ರಾಜ್ಯ ಮಟ್ಟದಲ್ಲೂ, ಜಿಲ್ಲಾ ಮಟ್ಟದಲ್ಲೂ ಹಾಗೂ ತಾಲೂಕು ಮಟ್ಟದಲ್ಲಿಯೂ ಮಹಿಳಾ ಸಾಕ್ಷರತಾ ದರವು ಅತೀ ಕಡಿಮೆ ಇರುವುದು ಕಂಡು ಬಂದಿದೆ. ಮಹಿಳೆಯರು ಇಷ್ಟು ಕಡಿಮೆ ಪ್ರಮಾಣದಲ್ಲಿ ಸಾಕ್ಷರರಾಗಲು ಕಾರಣ ಕೌಟುಂಬಿಕ ವ್ಯವಸ್ಥೆ ಹಾಗೂ ಸಾಮಾಜಿಕ ಪರಿಸರ ಎನ್ನಬಹುದು. ಆದರೆ ಇದರ ಪರಿಣಾಮ ಮಾತ್ರ ಬಹಳ ಗಂಭೀರವಾಗಿರುತ್ತದೆ. 'ಸಾಕ್ಷರನಾರಿ ಪ್ರಗತಿಗೆ ದಾರಿ' ಎನ್ನುವ ಘೋಷಣೆ ಪ್ರಚಲಿತದಲ್ಲಿದ್ದರೂ, ಸ್ತ್ರೀಯರಿಗೆ ಶಿಕ್ಷಣದ ಬಾಗಿಲುಗಳು ಮುಕ್ತವಾಗಿ ತೆರೆದಿದ್ದರೂ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಮಾತ್ರ ಪುರುಷರಿಗೆ ಹೋಲಿಸಿದರೆ ಹೆಚ್ಚಳ ಕಂಡಿರುವುದಿಲ್ಲ. ಹೀಗೆ ಶಿಕ್ಷಣ ಪಡೆಯದ ಮಹಿಳೆಯರು ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಅನರ್ಹರಾಗುತ್ತಾರೆ. ದುಡಿಮೆಯಲ್ಲಿ ತೊಡಗಲು ಅಸಂಘಟಿತ ವಲಯದ ಉದ್ಯೋಗ ಮಾತ್ರ ಸಿಗುತ್ತದೆ. ಏಕೆಂದರೆ ಅಸಂಘಟಿತ ವಲಯದ ಕೆಲಸಗಳಿಗೆ ಶೈಕ್ಷಣಿಕ ಅರ್ಹತೆ, ಹೆಚ್ಚಿನ ತರಬೇತಿ ಯಾವುದರ ಅವಶ್ಯಕತೆ ಇರುವುದಿಲ್ಲ. ಅದಕ್ಕೆ ತಕ್ಕಂತೆ ಕಡಿಮೆ ಕೂಲಿ, ಸುರಕ್ಷಿತವಲ್ಲದ ಹಾಗೂ ಖಾಯಂ ಇಲ್ಲದ ಕೆಲಸ ಲಭ್ಯವಾಗುತ್ತದೆ. ಅಸಂಘಟಿತ ವಲಯದ ದುಡಿಮೆಯಲ್ಲಿ ಮಹಿಳೆಯರು ದಿನವಿಡೀ ಕೆಲಸದಲ್ಲಿ ತೊಡಗಿದರೂ ಅವರಿಗೆ ಸಂಸಾರ ಸಾಗಿಸುವಷ್ಟು ಕೂಲಿ ದೊರೆಯುವುದಿಲ್ಲ. ಹೀಗೆ ಹೆಚ್ಚಿನ ಅವಧಿಗಳವರೆಗೆ ದುಡಿಯುವುದರಿಂದ ಕುಟುಂಬವನ್ನು ನಿರ್ಲಕ್ಷಿಸುತ್ತಾಳೆ.

ಮಹಿಳೆಯರು ತಮ್ಮ ಮಾಲೀಕರನ್ನು ಮೆಚ್ಚಿಸಲಿಕ್ಕಾಗಿ ರಾತ್ರಿಯವರೆಗೆ ದುಡಿಯಬೇಕಾಗುತ್ತದೆ. ಆದರೆ ಮನೆಯ ಕೆಲಸದಿಂದೇನೂ ವಿನಾಯಿತಿ ದೊರೆಯುವುದಿಲ್ಲ. ಹೀಗೆ ಭಾರತೀಯ ಮಹಿಳೆ ಇಬ್ಬಗೆಯ ಹೊರೆಯನ್ನು ನಿಭಾಯಿಸಲೇಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ಆದರೆ ಪುರುಷ ಕೇವಲ ಹೊರಗೆ ಹೋಗಿ ದುಡಿದರೆ ಸಾಕು ಮನೆಯೊಳಗಿನ ಕೆಲಸದಿಂದ ವಿನಾಯಿತಿ ದೊರೆಯುತ್ತದೆ. ಇದೇ ರೀತಿ ಮಕ್ಕಳ ಪೋಷಣೆಯ ಹೊರೆಯನ್ನು ಮಹಿಳೆಯೊಬ್ಬಳೇ ಹೊತ್ತಿರುತ್ತಾಳೆ. ಮಹಿಳೆ ನಿರ್ವಹಿಸುವ ಈ ದುಡಿಮೆಗೆ ಸಂಗೋಪನಾ ದುಡಿಮೆ ಎನ್ನುವರು. ಡಾ.ಟಿ.ಆರ್. ಚಂದ್ರಶೇಖರ್ (೨೦೦೬) ಅವರು ಮಹಿಳೆ ನಿರ್ವಹಿಸುತ್ತಿರುವ ಚಟುವಟಿಕೆಗಳನ್ನು ಸಾಮಾನ್ಯವಾಗಿ ಜೈವಿಕವೆಂದೂ, ಸಂಗೋಪನೆಯೆಂದೂ ಮತ್ತು ಅದು ನೈಸರ್ಗಿಕವೆಂದು, ಸಮಾಜ ಪರಿಭಾವಿಸುವ ವಿಷಯವನ್ನು ತಿಳಿಸುತ್ತಾರೆ. ಅವರ ಚಟುವಟಿಕೆಗಳು ಮನೆಯೊಳಗೆ ಖಾಸಗಿ ಪ್ರಪಂಚಕ್ಕೆ ಸೇರಿದ್ದಾವೆಂದು ತಿಳಿಯಲಾಗಿದೆ. ಅವುಗಳಿಗೆ

ಮಾರುಕಟ್ಟೆ ಮೌಲ್ಯವಿಲ್ಲ. ಅವುಗಳಿಗೆ ಮಾರುಕಟ್ಟೆಯೇ ಇಲ್ಲ. ಅವು ಕ್ರಯರಹಿತ ದುಡಿಮೆಯಾಗಿವೆ. ಮಹಿಳೆಯನ್ನು ಕೇವಲ ಗೃಹಿಣಿಯೆಂದು ಪರಿಭಾವಿಸಿಕೊಳ್ಳಲಾಗಿದೆ ಎಂದು ದುಡಿಮೆಯ ಕುರಿತು ವಿಶ್ಲೇಷಿಸಿದ್ದಾರೆ. ಮಹಿಳೆಯರು ತಾಯಿ ಹಾಗೂ ಗೃಹಿಣಿಯ ಪಾತ್ರವನ್ನು ನಿಭಾಯಿಸುತ್ತಾ ಹೊರಗಿನ ಹಣ ಸಂಪಾದಿಸುವ ಕೆಲಸದಲ್ಲಿ ತೊಡಗುವುದರಿಂದ ದುಡಿಮೆಯ ಹೊರೆ ಅಧಿಕವಾಗುತ್ತದೆ. ಅದೂ ಅಲ್ಲದೇ ಅಂತಹ ಕೆಲಸಗಳು ಸುರಕ್ಷಿತ ಸ್ಥಿತಿಯಲ್ಲಿರುವುದಿಲ್ಲ. ಇದೇ ಅಭಿಪ್ರಾಯವು ೧೯೭೪ರ 'ಟುವರ್ಡ್ಸ್ ಈಕ್ವಾಲಿಟಿ' ವರದಿಯಲ್ಲಿಯೂ ವ್ಯಕ್ತವಾಗಿದೆ. ಅಸಂಘಟಿತ ವಲಯಕ್ಕೆ ಸೇರಿದ ಮನೆಗೆಲಸದ ದುಡಿಮೆಗಾರರ ಚಿಂತಾಜನಕ ಬದುಕಿನ ಚಿತ್ರಣವನ್ನು ನೀಡಲಾಗಿದೆ. ಮನೆಗೆಲಸದ ದುಡಿಮೆಗಾರರು ಅಡುಗೆ, ಸ್ವಚ್ಛತೆ, ಬಟ್ಟೆ ಒಗೆಯುವುದು, ಮಕ್ಕಳನ್ನು ನೋಡಿಕೊಳ್ಳುವುದು, ಮುಂತಾದ ಕೆಲಸವನ್ನು ಮಾಡಬೇಕಾಗುತ್ತದೆ. ಪ್ರಮುಖವಾಗಿ ನಗರಗಳಲ್ಲಿ ಮನೆಗೆಲಸದ ದುಡಿಮೆಗಾರರು ಹೆಚ್ಚಾಗಿ ಕಂಡುಬರುತ್ತಾರೆ. ಆದರೂ ಅವರನ್ನು ಅಂದಾಜು ಮಾಡುವಲ್ಲಿ ಯಾವ ಪ್ರಯತ್ನಗಳೂ ನಡೆದಿಲ್ಲ. ಅವರು ಯಾವ ಕಾನೂನಿನ ರಕ್ಷಣೆಯಿಲ್ಲದೇ, ಕೆಲಸದ ಸುರಕ್ಷತೆ ಇಲ್ಲದೇ ದುಡಿಯುತ್ತಿದ್ದಾರೆ. ಶೋಷಣೆಯಿಂದ ಕೂಡಿದ ಬದುಕು ಇವರದಾಗಿದೆ. ಇತ್ತೀಚಿನ ಜೀವನ ನಿರ್ವಹಣೆಯನ್ನು ಗಮನದಲ್ಲಿಟ್ಟುಕೊಂಡು, ಕೆಲವು ಪಟ್ಟಣಗಳಲ್ಲಿ ಅವರ ಸಂಭಾವನೆಯನ್ನು ಹೆಚ್ಚಿಸಿದರೂ ಅದು ಏರುತ್ತಿರುವ ಬೆಲೆಗೆ ಎಷ್ಟೂ ಸಾಟಿಯಾಗುವುದಿಲ್ಲ. ಖಾಯಂ ಆಗಿ ಮನೆಯಲ್ಲೇ ಇರಲು ನೇಮಕವಾದ ಕೆಲಸಗಾರರಿಗೆ ವಸತಿ ಸೌಲಭ್ಯ ಇದ್ದರೂ ಅದು ಅವರಿಗೆ ಸಾಕಾಗದಷ್ಟು ಇರುತ್ತದೆ. ಅವರಿಗೆ ನಿಗಧಿತ ಕೆಲಸದ ಅವಧಿ ಇರುವುದಿಲ್ಲ. ಅರೆಕಾಲಿಕ ಉದ್ಯೋಗಿಗಳಿಗೆ ವಸತಿ ಸೌಲಭ್ಯ ಇರುವುದಿಲ್ಲ. ಊಟದ ವ್ಯವಸ್ಥೆ ಇರುವುದಿಲ್ಲ. ಅವರ ಕಡಿಮೆ ವೇತನವು ಶ್ರಮಿಕರ ಮೂಲಭೂತ ಅವಶ್ಯಕತೆಗಳನ್ನು ನೆರವೇರಿಸಲು ಕೂಡ ಸಾಕಾಗುವುದಿಲ್ಲ. ಇಂತಹ ದುಡಿಮೆಗಾರರು ಕೂಲಿ ಹಾಗೂ ಅನುಭೋಗದ ಅಂತರವನ್ನು ಕಡಿಮೆ ಮಾಡಲು ಅನೇಕ ಮನೆಗಳಲ್ಲಿ ದುಡಿಯುತ್ತಾರೆ. ದಿನದ ೧೨ ಗಂಟೆಗಳಿಗೂ ಅಧಿಕ ಸಮಯವನ್ನು ಹೊರಗೆ ದುಡಿಯುವುದರಲ್ಲಿಯೇ ಕಳೆಯುತ್ತಾರೆ. ಈ ರೀತಿ ಕಲ್ಕತ್ತದ ಕೊಳಗೇರಿಗಳಲ್ಲಿ ವಾಸಿಸುವ ಮಹಿಳೆಯರನ್ನು ಸಂಪರ್ಕಿಸಿದಾಗ, ಅನೇಕ ಮಹಿಳೆಯರು ತಮ್ಮ ಕುಟುಂಬವನ್ನು ನಿರ್ವಹಣೆ ಮಾಡುವ ಹೊಣೆ ಹೊತ್ತಿದ್ದರು. ಕೆಲಸ ಮುಗಿಸಲು ತಮ್ಮ ಚಿಕ್ಕಮಕ್ಕಳ ಸಹಾಯ ಪಡೆದಿರುತ್ತಾರೆ. ಹೀಗೆ ಹೆಣ್ಣುಮಕ್ಕಳು ೮-೯ ವರ್ಷಗಳಿಂದಲೇ ದುಡಿಯಲು ಪ್ರಾರಂಭಿಸುತ್ತಾರೆ. ತಾಯಂದಿರು ಹಸುಗೂಸನ್ನು ಅಕ್ಕಪಕ್ಕದ ಮನೆಯಲ್ಲಿ ಬಿಟ್ಟು ಬರುತ್ತಾರೆ. ಕೆಲವು ಕಡೆ ಮಗುವನ್ನು ಮರಕ್ಕೆ ಕಟ್ಟಿ ಬಂದ ದೃಶ್ಯವನ್ನು ಇಲ್ಲಿ ವಿವರಿಸುತ್ತಾರೆ. ಕಂಕುಳಲ್ಲಿ ಮಗುವನ್ನು ಇಟ್ಟುಕೊಂಡು ಬರುವುದು ಸಾಮಾನ್ಯವಾಗಿದೆ. ಗಂಡುಮಕ್ಕಳ ಮೇಲಿನ ಒಲವಿನಿಂದ ಅವರನ್ನು ಶಾಲೆಗೆ ಕಳಿಸುತ್ತಾರೆ. ಆದರೆ ಅವರು ಕ್ರಮವಾಗಿ ಶಾಲೆಗೆ ಹಾಜರಾದ ಬಗ್ಗೆ ಯಾವ ನಂಬುಗೆಯೂ ಇರುವುದಿಲ್ಲ ಎಂಬುದಾಗಿ ತಿಳಿಸುತ್ತಾ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಶೇ. ೯೪ರಷ್ಟು ಮಹಿಳೆಯರು ತಮ್ಮ ಕುಟುಂಬವನ್ನು ಹೇಗೆ ನಿರ್ಲಕ್ಷಿಸುತ್ತಾರೆ ಎಂಬ ಮಾಹಿತಿ ಸಂಗ್ರಹಿಸಿದ್ದಾರೆ.

ಕೋಷ್ಟಕ ೪.೧೧ರಲ್ಲಿ ಮನೆಗೆಲಸದ ಮಹಿಳೆಯರು ವೃತ್ತಿ ನಿರತರಾದಾಗ ತಮ್ಮ ಮಕ್ಕಳನ್ನು ಯಾರ ಹತ್ತಿರ ಬಿಟ್ಟು ಹೋಗುತ್ತಾರೆ ಎಂಬ ಮಾಹಿತಿಯನ್ನು ದಾಖಲಿಸಲಾಗಿದೆ. ಲಭ್ಯ ಮಾಹಿತಿಯ ಪ್ರಕಾರ ಒಟ್ಟು ೭೬ ಮಹಿಳೆಯರು ಸಣ್ಣಮಕ್ಕಳ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ.

ಕೋಷ್ಟಕ ೪.೧೧: ಮನೆ ಮಕ್ಕಳ ಜವಾಬ್ದಾರಿ ಮಾಹಿತಿ

ಕ್ರ.ಸಂ.	ಮನೆ ಮಕ್ಕಳ ಜವಾಬ್ದಾರಿ	ಒಟ್ಟು	ಶೇಕಡ
೧	ಅಕ್ಕಪಕ್ಕದವರು (ನೆರೆಹೊರೆಯವರು)	೪೩.೦೦	೫೬.೫೮
೨	ಸಂಬಂಧಿಗಳು	೩೦.೦೦	೩೯.೪೭
೩	ಜೊತೆಗೆ ಕರೆದೊಯ್ಯುವುದು	೩.೦೦	೩.೯೫
	ಒಟ್ಟು	೭೬.೦೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೧ರಲ್ಲಿ ದಾಖಲಾದ ಮಾಹಿತಿಯಂತೆ ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳೆಯರಲ್ಲಿ ಸುಮಾರು ೭೬ ಮಹಿಳೆಯರು ಚಿಕ್ಕಮಕ್ಕಳನ್ನು ಸಲಹುತ್ತಿದ್ದಾರೆ. ಹೊರಗಿನ ದುಡಿಮೆಯಲ್ಲಿ ನಿರತರಾಗಿರುವುದರಿಂದ ಮಕ್ಕಳ ಪೋಷಣೆ ಕಷ್ಟವಾಗಿದೆ. ಆದರೆ ಕೆಲಸವನ್ನು ನಿರ್ಲಕ್ಷಿಸುವಂತಿಲ್ಲ. ಹೊರಗೆ ಹೋಗಿ ದುಡಿಯದೇ ಹೋದರೆ ಮನೆ ನಡೆಯುವುದೇ ದುರ್ಲಭವಾಗುತ್ತದೆ. ಒಂದು ಕಡೆ ಹಸುಗೂಸಿನ ಜವಾಬ್ದಾರಿ, ಇನ್ನೊಂದು ಕಡೆ ಹಣಕಾಸಿನ ತೊಂದರೆ. ಇಂತಹ ಪರಿಸ್ಥಿತಿಯಲ್ಲಿ ಸಣ್ಣಮಗುವನ್ನು ಯಾರ ಜವಾಬ್ದಾರಿಗಾದರೂ ಒಪ್ಪಿಸಿ ಕೆಲಸಕ್ಕೆ ಹೋಗುವ ರೂಢಿ ಇದೆ. ಮಹಿಳೆಯರು ಅಧಿಕವಾಗಿ ಕೆಲಸ ನಿರ್ವಹಿಸುತ್ತಿರುವುದು ಅಸಂಘಟಿತ ವಲಯವೇ ಆಗಿರುವುದರಿಂದ ಹೆರಿಗೆ ಭತ್ಯೆ, ಹೆರಿಗೆ ರಜೆ ಇದಾವುದರ ಸೌಲಭ್ಯವಿಲ್ಲ. ಈ ಕಾರಣಗಳಿಂದಾಗಿ ಮಗುವನ್ನು ಬಿಟ್ಟು ಅಥವಾ ಜೊತೆಗೇ ಕರೆದುಕೊಂಡು ಕೆಲಸದಲ್ಲಿ ತೊಡಗುತ್ತಾಳೆ. ಅವಿಭಕ್ತ ಕುಟುಂಬವಾದರೆ ಎಳೆಯ ಮಕ್ಕಳಿಗೆ ಹಿರಿಯರಿಂದ ರಕ್ಷಣೆ ದೊರೆಯುತ್ತದೆ. ವಿಭಕ್ತ ಕುಟುಂಬದಲ್ಲಿ ಗಂಡ ಹೆಂಡತಿ ಇಬ್ಬರೂ ಉದರ ಪೋಷಣೆಗಾಗಿ ದುಡಿಮೆಯಲ್ಲಿ ತೊಡಗಿರುವುದರಿಂದ ಮಕ್ಕಳ ಪೋಷಣೆ ಕಷ್ಟವಾಗುತ್ತದೆ. ಇಂತಹ ಸ್ತ್ರೀಯರು ಅಕ್ಕಪಕ್ಕದ ಜನರ ಜೊತೆ ಉತ್ತಮ ಸಂಬಂಧವನ್ನು ಉಳಿಸಿಕೊಂಡು ಬಂದಿರುತ್ತಾರೆ. ಸಂದಿಗ್ಧ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ನೆರೆಹೊರೆಯ ಜನರಿಗೆ ಒಪ್ಪಿಸಿ ಕೆಲಸಕ್ಕೆ ತೆರಳುತ್ತಾರೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಸುಮಾರು ೪೩ ಮಹಿಳೆಯರು ತಮ್ಮ ಹಸುಗೂಸುಗಳನ್ನು ಅಕ್ಕಪಕ್ಕದ ಮನೆಗಳಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಇನ್ನು ೩೦ ಮಹಿಳೆಯರು ತಮ್ಮ ಸಂಬಂಧಿಗಳ ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದಾರೆ. ನೆರೆಹೊರೆಯವರ ಹಾಗು ಸಂಬಂಧಿಗಳ ಮನೆಯಲ್ಲಿ ಬಿಡಲು ಇಷ್ಟವಿರದ ಅಥವಾ ಈ ಅನುಕೂಲತೆ ಲಭ್ಯವಾಗದ ಮಹಿಳೆಯರು ತಮ್ಮ ಮಕ್ಕಳನ್ನು ಜೊತೆಗೇ ಕರೆದುಕೊಂಡು ಹೋಗುತ್ತಿದ್ದಾರೆ. ಸಮೀಕ್ಷೆಗೊಳಗಾದ ಮಹಿಳೆಯರಲ್ಲಿ ೩ ಮಹಿಳೆಯರು ಈ ರೀತಿ ಪ್ರತಿಕ್ರಿಯೆ ನೀಡಿರುತ್ತಾರೆ. ಹೀಗೆ ಮಕ್ಕಳ ಪೋಷಣೆ ಕೇವಲ ಮಹಿಳೆಯರದಾಗಿದ್ದು ಪುರುಷರು ಇದರ ಬಗ್ಗೆ ಲಕ್ಷವಹಿಸುವುದಿಲ್ಲ. ಆದರೆ ಮಕ್ಕಳನ್ನು ಪೋಷಣೆ ಮಾಡುವ ಹಾಗು ಮನೆಯ

ಜವಾಬ್ದಾರಿ ನಿರ್ವಹಿಸುವ ಕೆಲಸದಲ್ಲಿ ಸಮಾನ ಅವಕಾಶ ಇರಬೇಕು ಎಂದು ೧೯೯೪ರಲ್ಲಿ ಜನಸಂಖ್ಯೆ ಹಾಗೂ ಅಭಿವೃದ್ಧಿಯ ಕುರಿತು ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ರಾಮೇಶ್ವರಿ ಪಾಂಡ್ಯ(೨೦೦೮) ಅವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಹೀಗೆ ಕುಟುಂಬವನ್ನು ಸಲಹುವ ಜವಾಬ್ದಾರಿಯ ಜೊತೆಗೆ ಹಣಕಾಸಿನ ತೊಂದರೆಯನ್ನು ಕಡಿಮೆ ಮಾಡುವ ಸಲುವಾಗಿ ಪತಿಯ ದುಡಿಮೆಗೆ ಬೆಂಬಲವಾಗಿ ದುಡಿಯಲು ತೆರಳುವ ಮಹಿಳೆಯರು ಇಬ್ಬಗೆಯ ಹೊರೆಯನ್ನು ನಿಭಾಯಿಸಬೇಕಾಗುತ್ತದೆ. ಆದರೂ ಅವಳ ದುಡಿಮೆಗೆ ಯಾವ ಗೌರವವೂ ಇರುವುದಿಲ್ಲ.

೪.೧೨: ಕುಟುಂಬದಲ್ಲಿ ಶಿಕ್ಷಣದ ಅವಶ್ಯಕತೆ

'ಶಿಕ್ಷಣವು ಉತ್ತಮ ಜೀವನಕ್ಕೆ ರಹದಾರಿ ಇದ್ದಂತೆ' ಜ್ಞಾನಾಭಿವೃದ್ಧಿಯ ಜೊತೆಗೆ ಮನುಷ್ಯನ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಮಾರ್ಗವಾಗಿದೆ. ಶಿಕ್ಷಣವು ನಿರುದ್ಯೋಗವನ್ನು ಹೊಡೆದೋಡಿಸುವ ಪ್ರಮುಖ ಅಸ್ತ್ರವೆಂದೇ ಪರಿಗಣಿಸಲ್ಪಟ್ಟಿದೆ. ಶಿಕ್ಷಣ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಕಾರಣವಾದ್ದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೆ ಒಂದು ಸಮಾಜದ ಒಟ್ಟು ಜನರ ಜ್ಞಾನ, ಕೌಶಲ, ಶಕ್ತಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಸಾಧನ, ಆರ್ಥಿಕ ಬೆಳವಣಿಗೆಗೆ ಸಹಾಯಕ ಸಾಧನ. ಶಿಕ್ಷಣ ಹಾಗೂ ಆರ್ಥಿಕ ಬೆಳವಣಿಗೆ ಒಟ್ಟೊಟ್ಟಿಗೆ ಸಮಾನಾಂತರವಾಗಿ ಸಾಗಬೇಕು. ಆರ್ಥಿಕ ಅಭಿವೃದ್ಧಿ, ಸಮಾಜದಲ್ಲಿ ಮಾನವ ಸಂಪನ್ಮೂಲಗಳನ್ನು ಅವಲಂಬಿಸಿದೆ ಎಂದು ಪ್ರೊ. ವಿ.ಎಲ್. ನರಸಿಂಹಾಚಾರ್ (೧೯೯೨ ಪು.ಸಂ.೧೮೬) ಅವರು ಅಭಿಪ್ರಾಯ ಪಡುತ್ತಾರೆ. ಬಹುಕಾಲದವರೆಗೆ ಶಿಕ್ಷಣದ ಧ್ಯೇಯ ಜ್ಞಾನ ಪ್ರಸಾರ, ಜ್ಞಾನಾರ್ಜನೆ ಎಂಬ ಭಾವನೆ ಹೊಂದಿತ್ತು. ಇತ್ತೀಚೆಗೆ ಶಿಕ್ಷಣ ಕೇವಲ ಜ್ಞಾನಕ್ಕಾಗಿ ಅಲ್ಲದೇ ಪರಿಪೂರ್ಣ ಮಾನವನ ವಿಕಾಸಕ್ಕೆ ಎಂಬ ಅಭಿಪ್ರಾಯ, ನೂತನ ದೃಷ್ಟಿ ಏರ್ಪಟ್ಟು ಶಿಕ್ಷಣ ಸಚಿವಾಲಯ ೧೯೮೮ ರಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬ ಪ್ರತ್ಯೇಕ ಶಾಖೆ ತೆರೆದಿದೆ.

ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡು ಭಾರತ ಸರ್ಕಾರ ೧೧ನೇ ಪಂಚವಾರ್ಷಿಕ ಯೋಜನೆ ಯಲ್ಲಿಯೂ ಕೂಡ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಿತ್ತು (ಶೇ. ೬೫ ರಿಂದ ೭೫ಕ್ಕೆ). ಭಾರತ ಒಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿರುವುದರಿಂದ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಸಾಕ್ಷರರಾಗಿರುವಂತೆ ನೋಡಿಕೊಳ್ಳುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಆದರೆ ಭಾರತದಲ್ಲಿ ಜನಸಂಖ್ಯಾ ಗಾತ್ರ ಅಧಿಕವಿರುವ ಕಾರಣದಿಂದ ಅನೇಕ ಸಮಸ್ಯೆಗಳು ತಲೆದೋರುತ್ತಾ ಅಭಿವೃದ್ಧಿ ಯೋಜನೆಗಳನ್ನು ಬುಡಮೇಲು ಮಾಡುತ್ತಿವೆ. ಬಡತನ, ನಿರುದ್ಯೋಗ, ಅನಕ್ಷರತೆಯಂತಹ ಸಮಸ್ಯೆಗಳು ಒಂದಕ್ಕೊಂದು ಬೆಸೆದುಕೊಂಡು ಆರ್ಥಿಕತೆ, ಅಭಿವೃದ್ಧಿ ಪಥದತ್ತ ಸಾಗುವಲ್ಲಿ ಅಡ್ಡಿಯನ್ನುಂಟು ಮಾಡುತ್ತವೆ. ೧೯೯೯-೨೦೦೦ನೇ ವರ್ಷದ ಅಂದಾಜಿನಂತೆ ಭಾರತದಲ್ಲಿ ಶೇ. ೨೬.೧ರಷ್ಟು ಜನ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ಬಡತನವು ಅನಕ್ಷರತೆ ನಿರುದ್ಯೋಗಗಳಂತಹ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ಭಾರತ ವಿಪುಲವಾಗಿ ಸಂಪನ್ಮೂಲಗಳನ್ನು (ನೈಸರ್ಗಿಕ ಹಾಗೂ ಮಾನವ) ಹೊಂದಿದೆಯಾದರೂ

ಅವುಗಳ ಸದ್ಬಳಕೆ ಮಾತ್ರ ಸಮರ್ಪಕವಾದ ರೀತಿಯಲ್ಲಿ ಆಗುತ್ತಿಲ್ಲ, ನೈಸರ್ಗಿಕ ಸಂಪತ್ತಿನ ಬಳಕೆಗೆ ಶ್ರಮ ಅತ್ಯಗತ್ಯ ಶ್ರಮವು ದೈಹಿಕ ಅಥವಾ ಮಾನಸಿಕ ಶ್ರಮ ಆಗಿರಬಹುದು. ಶ್ರಮವು ಒಂದು ಉತ್ಪಾದನಾಂಗವಾಗಿ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆಡಂಸ್ಮಿತ್ ತನ್ನ 'ರಾಷ್ಟ್ರಗಳ ಸಂಪತ್ತು' ಪುಸ್ತಕ ದಲ್ಲಿ ಶ್ರಮವು ರಾಷ್ಟ್ರದ ಸಂಪತ್ತಿನ ನಿರ್ಧಾರಕ ಅಂಶ ಎಂದಿದ್ದಾರೆ. ಶಿಕ್ಷಣ, ಆರೋಗ್ಯ ಸೌಲಭ್ಯವನ್ನು ನಾವು ಕಡೆಗಣಿಸಿದ್ದರಿಂದ ದೇಶ ದು:ಸ್ಥಿತಿಯಲ್ಲಿದೆ. ಮೂಲಭೂತ ಆರೋಗ್ಯ ಸೌಲಭ್ಯ ಮತ್ತು ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕವಾಗಬೇಕು. ಇದರಿಂದ ಜನಪದದ ಕಾರ್ಯಸಾಮರ್ಥ್ಯ ವರ್ಧಿಸಬೇಕು. ಜೀವನಮಟ್ಟ ಏರಬೇಕು ಎಂಬುದು ಪ್ರೊ. ಅಮರ್ತ್ಯಸೇನ್ ಅವರ ಕರೆಯಾಗಿದ್ದಿತು. (ಶಿಕ್ಷಣ ಸಂಚಯ ಜೀವನ ದರ್ಶನ ಪು.ಸಂ.೫೩) ಶ್ರಮಶಕ್ತಿಯನ್ನು ಶಿಕ್ಷಣ ಆರೋಗ್ಯ ಮುಂತಾದ ಸೂಚಿಗಳ ಆಧಾರದ ಮೇಲೆ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಬಳಸಿಕೊಳ್ಳಲಾಗುತ್ತದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು ಮನಗಂಡಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರೂ ತಮ್ಮ ಮಕ್ಕಳಿಗೆ ಲಿಂಗಭೇದವಿಲ್ಲದೇ ಶಿಕ್ಷಣ ಕೊಡಿಸುವುದಾಗಿ ತಿಳಿಸಿರುತ್ತಾರೆ. ಕೋಷ್ಟಕ ೪.೧೨ರಲ್ಲಿ ಕುಟುಂಬದಲ್ಲಿ ಶಿಕ್ಷಣದ ಮಹತ್ವವನ್ನು ಕುರಿತು ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಲಾಗಿದೆ.

ಕೋಷ್ಟಕ ೪.೧೨ ಎ : ಕುಟುಂಬದಲ್ಲಿ ಶಿಕ್ಷಣದ ಮಹತ್ವ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡಾ
೧	**ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ**		
	ಇದೆ	೨೫೦	೧೦೦
	ಇಲ್ಲ	೦	೦
	ಒಟ್ಟು	**೨೫೦**	**೧೦೦**
೨	**ಶಿಕ್ಷಣದ ಪ್ರಾಮುಖ್ಯತೆ ಇರುವ ಮಗು**		
	ಗಂಡು	೦	೦
	ಹೆಣ್ಣು	೦	೦
	ಇಬ್ಬರೂ	೨೫೦	೧೦೦
	ಒಟ್ಟು	**೨೫೦**	**೧೦೦**

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೨ರಲ್ಲಿ ದಾಖಲಾದ ಮಾಹಿತಿಯ ಪ್ರಕಾರ ಹೊಸಪೇಟೆಯ ಮನೆಗೆಲಸದ ದುಡಿಮೆಗಾರರು ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡಿದ್ದಾರೆ. ಏಕೆಂದರೆ ಶೇ. ೬೫.೬ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಅನಕ್ಷರತೆ ಸಮಾಜದಲ್ಲಿ ಶೋಷಣೆಗೆ ಹೇಗೆ ದಾರಿಮಾಡಿಕೊಡುತ್ತದೆ. ಶೋಷಣೆಯಿಂದ ಮುಕ್ತರಾಗುವ ಮಾರ್ಗವೆಂದರೆ ಶಿಕ್ಷಣ ಎಂದು ಉತ್ತರಿಸುವ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಗುರಿ ಹೊಂದಿದವರಾಗಿದ್ದಾರೆ. ಅವಿದ್ಯಾವಂತರಾದ ಕಾರಣದಿಂದಲೇ ತಾವು ಸಮಾಜದ ಅತೀ ಕೆಳಸ್ತರದ ಮನೆಗೆಲಸದ ದುಡಿಮೆಯಲ್ಲಿ ತೊಡಗಬೇಕಾಗಿದೆ. ಅಕ್ಷರಜ್ಞಾನ ಹಾಗೂ ವೃತ್ತಿ ಕೌಶಲ್ಯವಿದ್ದರೆ ತಾವು ಕೂಡ ಉತ್ತಮ ಉದ್ಯೋಗದಲ್ಲಿ ಇರಬಹುದಿತ್ತು ಎಂಬ ಅಭಿಪ್ರಾಯವನ್ನು ಹಂಚಿಕೊಂಡಿರುತ್ತಾರೆ. ಇದೇ ಅಭಿಪ್ರಾಯವನ್ನು ಗ್ಲೋಬಲ್ ವೇಜ್ ರಿಪೋರ್ಟ್ ೨೦೧೦-೧೧ರಲ್ಲಿಯೂ

ಕಾಣಬಹುದು. ಮಹಿಳೆಯರಿಗೆ ಕಡಿಮೆ ಕೂಲಿ ಸಿಗಲು ಕಾರಣ ಶಿಕ್ಷಣ ಎಂದು ಗುರುತಿಸಲಾಗಿದೆ. ಶಿಕ್ಷಣದ ಕೊರತೆಯು ಮಹಿಳೆಯರನ್ನು ನೈಪುಣ್ಯರಹಿತರನ್ನಾಗಿ ಮಾಡುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಶಿಕ್ಷಣದಿಂದ ವಂಚಿತರಾದವರು ಕಡಿಮೆ ಗುಣಮಟ್ಟದ ಕೆಲಸದಲ್ಲಿ ತೊಡಗಬೇಕಾಗುತ್ತದೆ. ಇದೇ ಅಭಿಪ್ರಾಯವನ್ನು ಶ್ರೀಯುತ ಫಜಲ್ ಅಹ್ಮದ್ (೧೯೯೯) ಅವರೂ ಕೂಡ ವ್ಯಕ್ತಪಡಿಸಿದ್ದಾರೆ. ಸಂಘಟಿತ ವಲಯವು ಸ್ವಲ್ಪಮಟ್ಟಿನ ವಿದ್ಯಾಭ್ಯಾಸವನ್ನು ಕಾರ್ಮಿಕರಿಂದ ನಿರೀಕ್ಷಿಸುತ್ತದೆ. ಕಡಿಮೆ ವಿದ್ಯಾರ್ಹತೆ ಉಳ್ಳವರು ಹಾಗೂ ಅನಕ್ಷರಸ್ಥರಿಗೆ ಔಪಚಾರಿಕ ವಲಯಕ್ಕೆ ಪ್ರವೇಶವಿಲ್ಲ. ಹಾಗಾಗಿ ಸಾಮಾನ್ಯ ವರ್ಗದವರಿಗೆ ಔಪಚಾರಿಕ ವಲಯದ ಕೆಲಸಗಳು ಸಿಗುವುದಿಲ್ಲ. ಆದರೆ ಅಸಂಘಟಿತ ವಲಯದಲ್ಲಿ ಈ ರೀತಿಯ ಯಾವುದೇ ಶೈಕ್ಷಣಿಕ ಕಟ್ಟಪ್ಪಣೆಗಳಿರುವುದಿಲ್ಲ. ಅಲ್ಲಿಯ ಕಾರ್ಮಿಕರು ಅನಕ್ಷರಸ್ಥರೂ ಹಾಗೂ ತಕ್ಕಮಟ್ಟಿಗೆ ಅಕ್ಷರ ಜ್ಞಾನವುಳ್ಳವರೂ ಆಗಿರುತ್ತಾರೆ. ಅದಕ್ಕಾಗಿ ಅವರು ಔಪಚಾರಿಕ ವಲಯದ ಉದ್ಯೋಗಕ್ಕೆ ಇರುವ ಪೈಪೋಟಿಯನ್ನು ಎದುರಿಸಲಾಗದೇ ಅನೌಪಚಾರಿಕ ವಲಯದಲ್ಲಿ ಕೇಂದ್ರೀಕೃತವಾಗಿದ್ದಾರೆ' ಎಂಬ ಅಭಿಪ್ರಾಯವನ್ನು ಕಾಣುತ್ತೇವೆ.

ಜೆನ್‌ಬ್ರೆಮೆನ್ (೧೯೯೯) ಅವರೂ ಕೂಡ ತಮ್ಮ ಕೃತಿಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಕುರಿತು ವಿಶ್ಲೇಷಿಸುತ್ತಾ ಹಾಮ್‌ಸ್ಟಾಂಮ್ (೧೯೮೪) ಅವರ ಹೇಳಿಕೆಯನ್ನು ಉಲ್ಲೇಖಿಸಿರುತ್ತಾರೆ. ಭಾರತೀಯ ಸಮಾಜವನ್ನು ಒಂದು ದೊಡ್ಡ ಪರ್ವತ ಎಂದು ಭಾವಿಸಿದರೆ ಅತೀ ಶ್ರೀಮಂತರು, ನುರಿತ ಕಾರ್ಮಿಕರು ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ತೊಡಗಿ ಉತ್ತಮ ವೇತನವನ್ನು ಪಡೆಯುತ್ತಾ ಪರ್ವತದ ತುದಿಯಲ್ಲಿ ಇರುವವರು. ಆದರೆ ಪರ್ವತದ ಕಡಿದಾದ ಪ್ರದೇಶಗಳಲ್ಲಿ ಸಣ್ಣಸಣ್ಣ ಕೈಗಾರಿಕೆಗಳಲ್ಲಿ, ವೃತ್ತಿಗಳಲ್ಲಿ ಸಾಂದರ್ಭಿಕ ದುಡಿಮೆಗಾರರು ಸುರಕ್ಷಿತವಲ್ಲದ ವೃತ್ತಿಯಲ್ಲಿ ಅತೀ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ ಎಂಬ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ವೃತ್ತಿಗಳ ಕುರಿತು ಮಾರ್ಮಿಕವಾಗಿ ವಿವರಣೆ ನೀಡಿದ್ದಾರೆ.

ಟುವರ್ಡ್ಸ್ ಈಕ್ವಾಲಿಟಿ (೧೯೭೪) ವರದಿಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. ೧೯೭೧ರ ಸಮೀಕ್ಷೆಯ ಅಂದಾಜಿನ ಪ್ರಕಾರ ಶೇ. ೮೨.೧ರಷ್ಟು ಗ್ರಾಮೀಣ ಮಹಿಳೆಯರು ಅನಕ್ಷರಸ್ಥರಾಗಿದ್ದು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಅರ್ಥಮಾಡಿಕೊಳ್ಳಲಾರದಷ್ಟು ಅಶಕ್ತರಾಗಿದ್ದಾರೆ.' ಈ ನ್ಯೂನ್ಯತೆಯಿಂದಲೇ ಮಹಿಳೆಯರು ತಮ್ಮ ಚೌಕಾಶಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬುದಾಗಿದೆ. ಈ ಎಲ್ಲಾ ಅಂಶಗಳೂ ಮಹಿಳೆಯರ ಅನುಭವಕ್ಕೆ ಬಂದಿರುವುದರಿಂದ ತಮ್ಮ ಮಕ್ಕಳನ್ನಾದರೂ ವಿದ್ಯಾವಂತರನ್ನಾಗಿ ಮಾಡಿ ತಾವು ಅನುಭವಿಸುತ್ತಿರುವ ಯಾತನೆ, ಶೋಷಣೆಯಿಂದ ತಮ್ಮ ಮಕ್ಕಳನ್ನು ಮುಕ್ತರನ್ನಾಗಿ ಮಾಡಬೇಕೆಂಬ ಉದ್ದೇಶ ಹೊಂದಿದವರಾಗಿದ್ದಾರೆ.

ಶಿಕ್ಷಣದ ಪ್ರಾಮುಖ್ಯತೆ ಇರುವ ಮಗು

ಶೋಷಣೆಯನ್ನು ಹೊಡೆದೋಡಿಸುವ, ನಿಗ್ರಹಿಸುವ ಏಕೈಕ ಅಸ್ತ್ರ ಎಂದರೆ ಶಿಕ್ಷಣ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಶಿಕ್ಷಣಕ್ಕೆ ಒಟ್ಟು ದೇಶೀಯ ಉತ್ಪನ್ನದಲ್ಲಿ (GDP) ಶೇ. ೬ರಷ್ಟು ಮೀಸಲಿಡುವ ಗುರಿ ಹೊಂದಿತ್ತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ೧೩೩

ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಯಿತು. ಅದರಂತೆಯೇ ೯ ಹಾಗೂ ೧೦ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಅನುಕ್ರಮವಾಗಿ ೨೪,೯೦೮ ಕೋಟಿ ರೂಪಾಯಿ ಹಾಗೂ ೪೩,೮೨೫ ಕೋಟಿ ರೂಪಾಯಿಗಳನ್ನು ವ್ಯಯಮಾಡಲಾಗಿದೆ. ಸರ್ಕಾರದ ಈ ಎಲ್ಲಾ ಪ್ರಯತ್ನಗಳ ಫಲವಾಗಿ ೧೯೫೧ರಲ್ಲಿ ಕೇವಲ ಶೇ. ೧೮.೩೩ರಷ್ಟಿದ್ದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ. ೬೫.೩೮ರಷ್ಟನ್ನು ತಲುಪಿದೆ. ಆದರೆ ಪುರುಷ ಸಾಕ್ಷರತಾ ದರಕ್ಕೆ ಹೋಲಿಸಿದಾಗ ಮಹಿಳಾ ಸಾಕ್ಷರತಾ ದರವು ಅತೀ ಕಡಿಮೆ ಇರುವುದು ತಿಳಿದುಬಂದಿದೆ. ೧೯೫೧ರಿಂದ ೨೦೦೧ ರವರೆಗಿನ ಮಹಿಳಾ ಸಾಕ್ಷರತೆಯನ್ನು ಗಮನಿಸಿದಾಗ ಮಹಿಳಾ ಸಾಕ್ಷರತಾ ದರದಲ್ಲಿ ಸತತವಾದ ಇಳಿಕೆ ಕಂಡು ಬಂದಿರುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ಐದು ದಶಕಗಳ ಸಾಕ್ಷರತಾ ದರವನ್ನು ಕಾಣಬಹುದು.

ಕೋಷ್ಟಕ ೪.೧೨ ಬಿ: ಭಾರತದ ಸಾಕ್ಷರತಾ ದರ: ೧೯೫೧ರಿಂದ ೨೦೦೧ (ಶೇಕಡವಾರು)

ವರ್ಷ	ವಯೋಮಾನ	ಒಟ್ಟು ಸಾಕ್ಷರತೆ	ಪುರುಷರು	ಮಹಿಳೆಯರು
೧೯೫೧	ಐದು ವರ್ಷ ಮೇಲ್ಪಟ್ಟವರು	೧೮.೩೩	೨೭.೧೬	೮.೮೬
೧೯೬೧	ಐದು ವರ್ಷ ಮೇಲ್ಪಟ್ಟವರು	೨೮.೩೦	೪೦.೪೦	೧೫.೩೪
೧೯೭೧	ಐದು ವರ್ಷ ಮೇಲ್ಪಟ್ಟವರು	೩೪.೪೫	೪೫.೯೫	೨೧.೯೭
೧೯೮೧	೭ ವರ್ಷ ಮೇಲ್ಪಟ್ಟವರು	೪೩.೫೭	೫೬.೩೭	೨೯.೭೫
೧೯೯೧	೭ ವರ್ಷ ಮೇಲ್ಪಟ್ಟವರು	೫೨.೨೧	೬೩.೮೬	೩೯.೪೫
೨೦೦೧	೭ ವರ್ಷ ಮೇಲ್ಪಟ್ಟವರು	೬೫.೩೮	೭೫.೮೫	೫೪.೧೬

ಮೂಲ: ಎಕನಾಮಿಕ್ ಸರ್ವೇ ೨೦೦೪-೦೫ ಸೆನ್ಸಸ್ ಆಫ್ ಇಂಡಿಯಾ ೨೦೦೧

ಮಹಿಳೆಯರ ಸಾಕ್ಷರತಾ ದರವು ಪುರುಷರ ಸಾಕ್ಷರತಾ ದರಕ್ಕೆ ಹೋಲಿಸಿದಾಗ ಅತೀ ಕಡಿಮೆ ಇರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಹಾಗಾದರೆ ಮಹಿಳೆಯರ ಸಾಕ್ಷರತಾ ದರದಲ್ಲಿ ಇಳಿಕೆ ಕಂಡುಬರಲು ಕಾರಣವೇನು? ಸರ್ಕಾರ ಮಹಿಳೆಯರ ಶಿಕ್ಷಣಕ್ಕಾಗಿಯೇ ಸರ್ವಶಿಕ್ಷಣ ಅಭಿಯಾನ ಹಾಗೂ ಮಹಿಳಾ ಸಾಮಖ್ಯದಂತಹ ಯೋಜನೆಗಳನ್ನು ಜಾರಿಗೆ ತಂದರೂ ಈ ಸಮಸ್ಯೆ ಪರಿಹಾರ ಕಾಣಲಿಲ್ಲವೇಕೆ? ಇದಕ್ಕೆ ಹೊಣೆ ಯಾರು? ಎಂಬ ಪ್ರಶ್ನೆ ಉದ್ಭವಿಸಿದಾಗ ಭಾರತದ ಕುಟುಂಬ ವ್ಯವಸ್ಥೆಯೇ ಇದಕ್ಕೆ ಕಾರಣ ಎಂದು ತತ್‌ಕ್ಷಣ ಉತ್ತರಿಸಬಹುದು.

ಭಾರತೀಯ ಸಮಾಜದಲ್ಲಿ ಕುಟುಂಬವು ಅತ್ಯಂತ ಮೂಲಭೂತವೂ ಚಿಕ್ಕದೂ ಆದಂಥ, ಸಾಮಾಜಿಕ ಸಂಸ್ಥೆ, ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬ ವ್ಯವಸ್ಥೆಯ ಒಳಗೇ ಜನಿಸುತ್ತಾನೆ. ವ್ಯಕ್ತಿಗೆ ದೊರೆಯುವ ಪ್ರಪ್ರಥಮ ಸಾಮಾಜಿಕ ಪರಿಸರ ಕುಟುಂಬದ್ದೇ ಆಗಿದ್ದು, ಆತ ಅಥವಾ ಆಕೆಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಕುಟುಂಬ ಪ್ರಥಮ ಪಾತ್ರವನ್ನು ವಹಿಸುತ್ತದೆ. ಕುಟುಂಬ ಸಮಾಜದ ಆಧಾರ ಸ್ತಂಭದಂತಿದ್ದು, ಆಯಾ ಕಾಲದಲ್ಲಿ ಆಯಾ ಸಮಾಜದಲ್ಲಿ ಸಂಸ್ಕೃತಿಯನ್ನು ತನ್ನ ಸದಸ್ಯರಿಗೆ ಪರಿಚಯಿಸುವಂಥ ಒಂದು ಸಾಮಾಜಿಕ ಸಂಸ್ಥೆ, ಈ ಸಾಮಾಜಿಕ ಸಂಸ್ಥೆಯಲ್ಲಿಯೇ ಗಂಡು ಹೆಣ್ಣುಗಳು ತಮ್ಮ ಪಾತ್ರಗಳು, ಜವಾಬ್ದಾರಿಗಳು ಹಾಗೂ ಭವಿಷ್ಯದ ಅವಕಾಶಗಳನ್ನು ಕುರಿತು ಅರಿವನ್ನು ಮೂಡಿಸಿ ಕೊಳ್ಳುವುದು. ಕುಟುಂಬ ವ್ಯಕ್ತಿಯ ಸಾಮಾಜೀಕರಣದ ಅತ್ಯಂತ ಮುಖ್ಯವಾದ ಸಾಧನವಾಗಿದೆ. ಅದರಲ್ಲೂ

ವಿಶೇಷವಾಗಿ ಸ್ತ್ರೀಪುರುಷರ ಪಾತ್ರಗಳನ್ನು ಕುರಿತ ಶಿಕ್ಷಣದ ಪ್ರಾರಂಭ ಕುಟುಂಬದಲ್ಲಿಯೇ ಆಗುತ್ತದೆ. ಬಹುತೇಕ ಕುಟುಂಬಗಳಲ್ಲಿ ಇಂದಿಗೂ ಹೆಣ್ಣು ಮತ್ತು ಗಂಡು ಮಕ್ಕಳಿಗೆ ವಿಭಿನ್ನವಾದ ರೀತಿಯಲ್ಲಿ ಜೀವನವನ್ನು ನಡೆಸಲು ಅಥವಾ ಎದುರಿಸಲು ತರಬೇತಿಯನ್ನು ನೀಡಲಾಗುತ್ತದೆ.

ಸಾಮಾನ್ಯವಾಗಿ ಹೆಣ್ಣುಮಗು ಗಂಡುಮಗು ಎನ್ನುವ ಭೇದ-ಭಾವ ಸೃಷ್ಟಿಯಾಗುವುದು ಕುಟುಂಬ ದಲ್ಲಿಯೇ. ಮಗು ಹುಟ್ಟುವ ಮೊದಲೇ ಪ್ರಾರಂಭವಾಗುವ ಗಂಡು ಸಂತಾನವನ್ನು ಕುರಿತ ಒಲವುಗಳು ಬಹುತೇಕ ಕುಟುಂಬಗಳಲ್ಲಿ ಪ್ರತ್ಯಕ್ಷವಾಗಿಯೇ ವ್ಯಕ್ತವಾಗಲಾರಂಭಿಸುತ್ತದೆ. ಹೆಣ್ಣು ಮತ್ತು ಗಂಡು ಮಕ್ಕಳನ್ನು ಭಿನ್ನವಾದ ರೀತಿಯಲ್ಲಿ ಜೀವನವನ್ನು ಎದುರಿಸಲು ತಯಾರಿಸುವುದು, ಹೆಣ್ಣಿನ ಗುರಿಗಳೇ ಬೇರೆ, ಗಂಡಿನ ಗುರಿಗಳೇ ಬೇರೆ ಎಂಬ ಭಾವನೆಗಳನ್ನು ಬಿತ್ತುವುದು, ಹೆಣ್ಣು ಮತ್ತು ಗಂಡುಮಕ್ಕಳಿಗೆ ಬೇರೆಬೇರೆ ಜವಾಬ್ದಾರಿಗಳನ್ನು ಹಂಚುವುದು ಇವೇ ಮುಂತಾದ ಪ್ರವೃತ್ತಿಗಳು ಲಿಂಗ ವ್ಯವಸ್ಥೆಯನ್ನು ಆಧರಿಸಿದ ಸಮಾಜೀಕರಣಕ್ಕೆ ಉದಾಹರಣೆಗಳಾಗಿವೆ. ಹೆಣ್ಣು ಕಡಿಮೆ ಗಂಡು ಶ್ರೇಷ್ಠ ಎನ್ನುವ ಭಾವನೆಯನ್ನು ಕುಟುಂಬ ಪರಿಸರದಲ್ಲಿ ಬಿತ್ತುವ ಮೂಲಕ ಈ ಬಗೆಯ ಲಿಂಗಾಧಾರಿತ ಸಮಾಜೀಕರಣ ಆ ಕುಟುಂಬದ ಲಿಂಗ ಅಸಮಾನತೆಯ ತತ್ವವನ್ನು ಆಧರಿಸಿ ಬದುಕಿಗೆ ಸಿದ್ಧಗೊಳಿಸುತ್ತದೆ ಎಂದು ಡಾ. ಆರ್. ಇಂದಿರಾ (೨೦೦೨) ಅವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗಿ ಹೆಣ್ಣು ಮತ್ತು ಗಂಡು ಮಗುವಿಗೆ ಶಿಕ್ಷಣ ಪ್ರಾಪ್ತವಾಗುತ್ತದೆ. ಮೇಲಿನ ಅಂಶಗಳನ್ವಯ ಹೆಣ್ಣು ಕೀಳು ಎಂದು ಆ ಮಗುವಿಗೆ ಹೆಚ್ಚಿನ ಶಿಕ್ಷಣ ಕೊಡಿಸಲು ಪಾಲಕರು ಹಿಂದೇಟು ಹಾಕುತ್ತಾರೆ ಇದಕ್ಕೆ ವ್ಯತಿರಿಕ್ತವಾಗಿ ಗಂಡು ಮಗು ಕುಟುಂಬದ ರಕ್ಷಕ, ಮುಂದಿನ ಪೀಳಿಗೆಯ ಉದ್ಧಾರಕ ಎಂದೆಲ್ಲಾ ಸಂಬೋಧಿಸುತ್ತಾ ಉತ್ತಮ ವಿದ್ಯಾಭ್ಯಾಸ ಹಾಗೂ ತರಬೇತಿಗಳನ್ನು ಕೊಡಿಸುವಲ್ಲಿ ಮುಂದಾಗುತ್ತಾರೆ.

ಆದರೆ ವೇದಗಳ ಕಾಲದಲ್ಲಿಯೂ ಕೂಡ ಸ್ತ್ರೀಯರಿಗೆ ಶಿಕ್ಷಣದ ಅವಕಾಶ ಇದ್ದಿತು. ಅನಂತರದ ಮಧ್ಯಕಾಲೀನ ಭಾರತದಲ್ಲಿ ಸ್ತ್ರೀಯರ ಅಕ್ಷರಭ್ಯಾಸಕ್ಕೆ ಅವಕಾಶವಿಲ್ಲದಂತಾಯಿತು. ಆನಂತರದ ಬ್ರಿಟಿಷರ ಆಡಳಿತ ಕಾಲದಲ್ಲಿ ಮಹಿಳಾ ಶಿಕ್ಷಣದಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಕಾಣಲು ಸಾಧ್ಯವಾಯಿತು. ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಡಾಲ್ ಹೌಸಿ ಕೂಡ ಹೆಣ್ಣುಮಕ್ಕಳ ಶಿಕ್ಷಣಕ್ಕೆ ತನ್ನ ಬೆಂಬಲ ಸೂಚಿಸಿದ್ದನು. ೧೮೮೨ರ 'ಹಂಟರ್' ಶಿಕ್ಷಣ ಆಯೋಗವೂ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿತು. ಸ್ವಾತಂತ್ರ್ಯ ನಂತರ ಮಹಿಳಾ ಶಿಕ್ಷಣದಲ್ಲಿ ಭಾರೀ ಸುಧಾರಣೆಯಾಗಿದೆ.

ಈ ಎಲ್ಲ ಪ್ರಯತ್ನಗಳ ಫಲವಾಗಿ ಭಾರತದಲ್ಲಿ ಮಹಿಳಾ ಸಾಕ್ಷರತಾ ದರದಲ್ಲಿ ಕ್ರಮೇಣ ಏರಿಕೆ ಕಂಡುಬಂದಿರುತ್ತದೆ. ಐದು ದಶಕಗಳ ಮಹಿಳಾ ಸಾಕ್ಷರತಾ ದರವನ್ನು ಗಮನಿಸಿದಾಗ ಸಾಕ್ಷರತಾ ದರದಲ್ಲಿ ಕ್ರಮೇಣ ಏರಿಕೆ ಕಂಡು ಬರುತ್ತದೆ. ಭಾರತದಂತಹ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆ ನಾಲ್ಕು ಗೋಡೆಗಳ ಆಚೆಗೆ ಬಂದು ಸಮಾಜದ ಮುಖ್ಯವಾಹಿನಿಯಲ್ಲಿ ಪುರುಷರೊಟ್ಟಿಗೆ ಬೆರೆತು ವ್ಯವಹರಿಸುತ್ತಿದ್ದಾಳೆ ಎಂಬುದು ಸಂತೋಷದ ಸಂಗತಿಯೇ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ಮಕ್ಕಳ ಶಿಕ್ಷಣದ ಕುರಿತು ಸಕಾರಾತ್ಮಕ ಭಾವನೆಯನ್ನೇ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಸಮೀಕ್ಷೆಗೊಳಗಾದ ಎಲ್ಲಾ ೨೫೦ ಮಹಿಳೆಯರೂ ಗಂಡು ಮತ್ತು ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ತಾರತಮ್ಯ ಮಾಡುವುದಿಲ್ಲವೆಂದೂ, ಇಬ್ಬರಿಗೂ ಸಮಾನ ಅವಕಾಶವನ್ನೂ ಮಾಡಿಕೊಡುತ್ತೇವೆಂದೂ ಉತ್ತರಿಸಿದ್ದಾರೆ. ಇದು ಹೆಣ್ಣು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯೆಂದೇ ಹೇಳಬಹುದು. ಆದರೆ ಈ ಪ್ರಕ್ರಿಯೆ ಜಾರಿಯಲ್ಲಿ ಬರಲು ಕಾಲಾವಕಾಶ ಬೇಕಾಗುತ್ತದೆ. ನಮ್ಮ ಸಮಾಜದ ರೂಢಿ ಸಂಪ್ರದಾಯಗಳನ್ನು ಮೀರಿನಿಂತು ಬದಲಾವಣೆ ತರಬೇಕು ಎಂಬುದು ಸ್ವಲ್ಪ ಕಷ್ಟವಾಗಬಹುದು. ಶತಶತಮಾನಗಳಿಂದ ಆಚರಿಸಿಕೊಂಡು ಬಂದ ಕೌಟುಂಬಿಕ ಆಚರಣೆಗಳಲ್ಲಿ ಬದಲಾವಣೆ ತರುವುದು ಹಾಗೂ ಹಿರಿಯರ ಆಚಾರ ವಿಚಾರ ಮನೋಭಾವನೆಯಲ್ಲಿ ಮಾರ್ಪಾಟನ್ನು ನಿರೀಕ್ಷಿಸುವುದು ಸವಾಲಿನ ವಿಷಯವೇ. ಆದರೂ ರಾಷ್ಟ್ರದ ಹಿತದೃಷ್ಟಿಯಿಂದ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬರುವಲ್ಲಿ ಎಲ್ಲ ಮಕ್ಕಳನ್ನೂ ಸಮಾನ ದೃಷ್ಟಿಯಿಂದ ನೋಡಬೇಕಾಗಿರುವುದು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದೆ. ಇದರಿಂದ ಸ್ತ್ರೀಯರಿಗೆ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ನೈತಿಕ ಪ್ರೇರಣೆ ಒದಗಿಸಿದಂತಾಗುತ್ತದೆ.

೪.೧೩: ಕೆಲಸದ ಮನೆಯಲ್ಲಿ ಪ್ರವೇಶ

ಜಗತ್ತಿನ ಯಾವುದೇ ಸಮಾಜದಲ್ಲಾದರೂ ಅಲ್ಲಿನ ಎಲ್ಲಾ ಸದಸ್ಯರು ಸರಿಸಮಾನವಾಗಿರಲು ಸಾಧ್ಯವಿಲ್ಲ. ಅವರು ಪರಸ್ಪರ ಭಿನ್ನವಾಗಿದ್ದಾರೆ. ಅವರಲ್ಲಿ ಕಾಣಬರುವ ಭಿನ್ನತೆಯಿಂದಾಗಿ ಅವರಿಗೆ ಬೇರೆ ಬೇರೆ ಸಾಮಾಜಿಕ ಪಾತ್ರ ಹಾಗೂ ಅಂತಸ್ತುಗಳನ್ನು ನೀಡಲಾಗಿದೆ. ಅದರಂತೆ ಅಸಮಾನತೆಯು ಭಾರತೀಯ ಸಮಾಜದ ಪ್ರಮುಖ ಲಕ್ಷಣವಾಗಿದೆ. ಅಸಮಾನತೆಯನ್ನು ಪ್ರಾಚೀನ ಭಾರತದಲ್ಲಷ್ಟೇ ಅಲ್ಲದೇ ಆಧುನಿಕ ಭಾರತದಲ್ಲಿಯೂ ಕಾಣಬಹುದು. ಅಸಮಾನತೆಯು ಭಾರತದ ಪ್ರಜಾಪ್ರಭುತ್ವವು ಎದುರಿಸುತ್ತಿರುವ ದೊಡ್ಡ ಸವಾಲಾಗಿದೆ. ಭಾರತ ಸರ್ಕಾರವು ಅಸಮಾನತೆಯನ್ನು ನಿವಾರಿಸಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಆದರೂ ಈ ಪ್ರಯತ್ನಗಳು ಯಶಸ್ವಿಯಾಗಿಲ್ಲ ಎಂಬುದು ವಿಷಾದನೀಯ ಸಂಗತಿ. ನಮ್ಮ ದೇಶದಲ್ಲಿ ಜಾತಿ, ಮತ, ಲಿಂಗ, ಮುಂತಾದ ವಿಷಯಗಳಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಆದರೆ ಜಾತಿ ಮತ್ತು ಲಿಂಗಾಧಾರಿತ ಅಸಮಾನತೆಯು ಎಲ್ಲಾ ಅಸಮಾನತೆಗಳಿಗಿಂತಲೂ ಪ್ರಮುಖವಾದದ್ದು.

ಜಾತಿ ಆಧಾರಿತ ಅಸಮಾನತೆಯು ನಮ್ಮ ದೇಶಕ್ಕೆ ಹೊಸತೇನಲ್ಲ. ಈ ಅಸಮಾನತೆಯ ಮೂಲವನ್ನು ಪ್ರಾಚೀನ ಭಾರತದಲ್ಲಿ ಅಚರಣೆಯಲ್ಲಿದ್ದ ವರ್ಣಾಶ್ರಮ ವ್ಯವಸ್ಥೆಯಲ್ಲಿ ಕಾಣಬಹುದು. ಪ್ರಾಚೀನ ಭಾರತದಲ್ಲಿ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರ ಎಂದು ನಾಲ್ಕು ವರ್ಣಗಳಾಗಿ ವಿಂಗಡಿಸಲಾಗಿತ್ತು. ಆರಂಭದಲ್ಲಿ ವೃತ್ತಿ ಆಧಾರಿತವಾಗಿದ್ದ ವರ್ಣಾಶ್ರಮ ವ್ಯವಸ್ಥೆಯು ಕ್ರಮೇಣ ಜಾತಿಪದ್ಧತಿಯಾಗಿ ಪರಿವರ್ತನೆಯಾಯಿತು. ಪರಿಣಾಮವಾಗಿ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುವ ಪ್ರವೃತ್ತಿ ಬೆಳೆದುಬಂದಿತು. ಈ ನಾಲ್ಕು ವರ್ಣಗಳು ಸಮಾನ ಸಾಮಾಜಿಕ ಸ್ಥಾನಮಾನಗಳನ್ನು ಹೊಂದಿರಲಿಲ್ಲ. ಬ್ರಾಹ್ಮಣರು ಅತ್ಯಂತ ಉನ್ನತ ಸ್ಥಾನಮಾನ ಹೊಂದಿದ್ದರೆ ಶೂದ್ರರು ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಸ್ತರದಲ್ಲಿದ್ದರು. ಶೂದ್ರರು ಮೇಲಿನ ಮೂರು ವರ್ಣಗಳಿಗೆ ಸೇವೆ ಸಲ್ಲಿಸಬೇಕಾಗಿತ್ತು. ಇವರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು.

ವರ್ಣಗಳು ಕ್ರಮೇಣ ಕೆಲವು ಜಾತಿಗಳಾಗಿ ಕವಲೊಡೆದವು. ಪರಿಣಾಮವಾಗಿ ಭಾರತದಲ್ಲಿ ಇಂದು ಸಾವಿರಾರು ಜಾತಿಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಜಾತಿಗಳನ್ನು ಮೇಲ್ಜಾತಿಗಳು ಕೆಳಜಾತಿಗಳೆಂದು ವರ್ಗೀಕರಣ ಮಾಡಲಾಗಿದೆ. ಮೇಲ್ಜಾತಿಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸವಲತ್ತುಗಳನ್ನು ಸಂಪೂರ್ಣವಾಗಿ ತಮ್ಮದಾಗಿಸಿಕೊಂಡಿವೆ. ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆ ಇಂದಿಗೂ ಆಚರಣೆಯಲ್ಲಿದೆ. ಕೆಳಸ್ತರದ ಜನರ ಇಂದಿನ ದೈನಾವಸ್ಥೆಗೆ ಐತಿಹಾಸಿಕವಾಗಿ ವರ್ಣವ್ಯವಸ್ಥೆಯೊಂದೇ ಕಾರಣವೆನ್ನಬೇಕು. ಈ ವರ್ಣವ್ಯವಸ್ಥೆಯ ಪ್ರಕಾರ ಅವರಿಗೆ ಆಸ್ತಿಯ ಹಕ್ಕಿನೊಂದಿಗೆ ವಿದ್ಯೆಯ ಹಕ್ಕು ನಿರಾಕರಿಸಲ್ಪಟ್ಟಿತು. ಆಸ್ತಿಯ ಮತ್ತು ವಿದ್ಯೆಯ ಹಕ್ಕುಗಳಿಲ್ಲದೇ ಸವರ್ಣೀಯರ ಗುಲಾಮರಾಗಿ, ಜೀತದವರಾಗಿ ಬದುಕಬೇಕಾಯಿತು. ಜಾತಿ ಶ್ರೇಣಿಯಲ್ಲಿ ಬಡ್ತಿ ಪಡೆಯಲು ಈ ಎರಡರಲ್ಲಿ ಒಂದಾದರೂ ಅರ್ಹತೆಯಿರಬೇಕಾಗಿತ್ತು ಎಂದು ಆರ್ಕೆ ಮಣಿಪಾಲ್ (೨೦೦೨ ಪು.ಸಂಖ್ಯೆ: ೧೦೪) ಅಭಿಪ್ರಾಯ ಪಟ್ಟಿರುತ್ತಾರೆ.

ಅಸ್ಪೃಶ್ಯತೆಯನ್ನು ಒಂದು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿದ್ದರೂ ಅದು ಆಚರಣೆಯಲ್ಲಿರುವುದು ಒಂದು ದುರಂತವೇ ಸರಿ. ಹಿಂದೂ ಸಮಾಜದಲ್ಲಿ ಬಹುಕಾಲದಿಂದಲೂ ಜಾತಿಯ ಆಧಾರದ ಮೇಲೆ ಉದ್ಯೋಗಗಳಿದ್ದುದು ಕಂಡುಬರುತ್ತದೆ. ಇವೆಲ್ಲವೂ ವಂಶಪಾರಂಪರ್ಯವಾಗಿ ಬಂದ ಕಸುಬುಗಳೇ ಆಗಿದ್ದವು. ಜಾತ್ಯಾಧಾರಿತ ಹಿಂದೂ ಸಮಾಜದಲ್ಲಿ ಉದ್ಯೋಗಗಳಲ್ಲಿಯೂ ಏಣಿಶ್ರೇಣಿಗಳಿದ್ದವು. ಪ್ರತಿಯೊಂದು ಜಾತಿಯೂ ಕೂಡ ತನ್ನ ಗೌರವಕ್ಕೆ ಕುಂದು ತರಬಹುದಾದ ಉದ್ಯೋಗಗಳನ್ನು ತನ್ನ ಸದಸ್ಯರು ಕೈಕೊಳ್ಳದಂತೆ ನೋಡಿಕೊಳ್ಳುವ ಕ್ರಮವಿತ್ತು. ಈಗಲೂ ಕೂಡ ಅನೇಕ ಕಸುಬುಗಳು ಜಾತಿಪದ್ಧತಿಗೆ ಅಂಟಿಕೊಂಡಿದ್ದು ವಂಶಪಾರಂಪರ್ಯವಾಗಿ ಎಂಬಂತೆ ನಡೆದುಬಂದಿದೆ.

ಆದರೆ ಭಾರತವು ರಾಜಕೀಯವಾಗಿ ಸ್ವತಂತ್ರ್ಯ ದೇಶವಾಗುತ್ತಿದ್ದಂತೆ ದೇಶಾದ್ಯಂತ ಹಲವು ಕ್ಷೇತ್ರಗಳಲ್ಲಿ ಪರಿವರ್ತನೆಗಳುಂಟಾದಂತೆ, ಜಾತಿ ವ್ಯವಸ್ಥೆಯಲ್ಲಿಯೂ ಪರಿವರ್ತನೆಗಳು ಸಂಭವಿಸಿದವು. ಜಾತಿ ವ್ಯವಸ್ಥೆಯಿಂದಾಗಿ ಹುಟ್ಟಿಕೊಂಡಿದ್ದ ಮೇಲ್ಜಾತಿಗಳ ವಿಶೇಷ ಸವಲತ್ತು ಸೌಲಭ್ಯಗಳು ಮತ್ತು ಕೆಳಜಾತಿಯ ಅನರ್ಹತೆಗಳು ಈಗ ಮಾಯಾವಾಗಿವೆ. ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ ನಿಯಮಗಳ ೧೭ನೇ ವಿಧಿಮೂಲಕ ತೊಡೆದುಹಾಕಲಾಗಿದೆ. ಈಗ ಅದೊಂದು ಶಿಕ್ಷಾರ್ಹ ಅಪರಾಧವಾಗಿದೆ. 'ಸ್ಪರ್ಶ ಮತ್ತು ಅಸ್ಪೃಶ್ಯ' ಎಂಬ ವ್ಯತ್ಯಾಸ ಈಗ ಮೊದಲಿನಷ್ಟು ಪ್ರಖರವಾಗಿಲ್ಲ, ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ(೧೯೫೫)ಯು ೧೯೭೬ರಲ್ಲಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂಬುದಾಗಿ ಮಾರ್ಪಾಡು ಗೊಂಡಿರುವುದಲ್ಲದೇ ಅಸ್ಪೃಶ್ಯತೆಯ ಆಚರಣೆಯನ್ನು ಕಾನೂನಿನ ಮೂಲಕ ತೊಡೆದು ಹಾಕಿದೆ. ಹಾಗೂ ಅದರ ಆಚರಣೆಯನ್ನು ದಂಡಾರ್ಹ ಅಪರಾಧವಾಗಿ ಮಾಡಿದೆ. ೧೯೯೦ರ ದಶಕದಲ್ಲಿ ಜಾರಿಗೆ ಬಂದಂತಹ ಹೊಸ ಆರ್ಥಿಕ ನೀತಿಯ ಫಲವಾಗಿ ಜಾರಿಯಲ್ಲಿರುವ ಆರ್ಥಿಕ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ಪ್ರಕ್ರಿಯೆಗಳಿಂದಾಗಿ ಜಾತಿ ಕಟ್ಟುಪಾಡುಗಳು ಸ್ವಲ್ಪ ಸಡಿಲಗೊಂಡಿವೆ ಎಂದೇ ಹೇಳಬಹುದು. ಶಿಕ್ಷಣ ಕ್ಷೇತ್ರದಲ್ಲಾದ ಸುಧಾರಣೆಗಳು ಜಾತೀಯತೆಯ ಬೇರುಗಳು ಹಿಂದೂ ಸಮಾಜದಲ್ಲಿ ಸಡಿಲಗೊಳ್ಳಲು ಪ್ರೇರಣೆಯಾದವು. ಸ್ವತಂತ್ರ ಭಾರತವು ಜಾತಿ, ಮತ, ಪಂಥ ಬೇಧವಿಲ್ಲದೇ ಎಲ್ಲರಿಗೂ ಸಮಾನವಾದ, ಸಾಮಾಜಿಕವಾದ ಆರ್ಥಿಕ ಹಾಗೂ ರಾಜಕೀಯ ಅವಕಾಶಗಳನ್ನು ನೀಡುವ

ಸಂಕಲ್ಪ ಮಾಡಿದುದು ಅಸಮಾನತೆಯ ತತ್ವದ ಮೇಲೆ ನಿಂತಿರುವ ಜಾತಿ ವ್ಯವಸ್ಥೆಗೆ ಬಲವಾದ ಹೊಡೆತ ನೀಡಿದಂತಾಯಿತು.

ಸರ್ಕಾರದ, ಸಂಘಸಂಸ್ಥೆಗಳ ಈ ಎಲ್ಲಾ ಪ್ರಯತ್ನಗಳ ಫಲವಾಗಿ ಜಾತಿವ್ಯವಸ್ಥೆ ಅಥವಾ ಆಚರಣೆಗಳಲ್ಲಿ ತಕ್ಕಮಟ್ಟಿಗೆ ಬದಲಾವಣೆ ಬಂದಿದೆಯಾದರೂ ಭಾರತೀಯ ಸಂಪ್ರದಾಯಸ್ಥ ಸಮಾಜದಲ್ಲಿ ಇನ್ನೂ ಜಾತೀಯ ಬೇರುಗಳು ಚಿಗುರಲು ಪ್ರಯತ್ನಿಸುತ್ತಲೇ ಇವೆ. ಏಕೆಂದರೆ ಜಾತಿ, ವರ್ಗಭೇದಗಳು ಸಮಾಜದಲ್ಲಿ ಎಷ್ಟೊಂದು ರೂಢಿಯಲ್ಲಿವೆ ಎಂದರೆ ಸಂವಿಧಾನಾತ್ಮಕವಾಗಿ ಜಾರಿಗೆ ಬಂದಿರುವ ಕಾನೂನುಗಳಿಗೂ ಕೂಡ ಮಣಿಯದೇ ಅಚಲವಾಗಿ ನಿಂತಿವೆ. ಇದರ ಪ್ರತಿಫಲವಾಗಿಯೇ ಸಮಾಜದಲ್ಲಿ ಮೇಲುಕೀಳು ಎಂಬ ಅಸಮಾನತೆ ತಾಂಡವವಾಡುತ್ತಿದೆ. ಉಳ್ಳವರು ಎನಿಸಿಕೊಂಡಿರುವವರು ತಮಗಿಂತ ಕೆಳವರ್ಗದವರ ಮೇಲೆ ನಡೆಸುವ ದೌರ್ಜನ್ಯ, ಅನಾದರ ಮುಂದುವರೆದು ಸಮಾಜದ ಸ್ವಾಸ್ಥವನ್ನು ಕೆಡಿಸುವುದಲ್ಲದೇ ಆರ್ಥಿಕ ಪ್ರಗತಿಗೆ ಮಾರಕವಾಗಿವೆ. ಸುಶಿಕ್ಷಿತರೂ ವಿದ್ಯಾವಂತರೂ ಸಮಾಜದಲ್ಲಿ ಗೌರವವನ್ನು ಪಡೆದವರಾಗಿದ್ದಾರೆ. ಶೈಕ್ಷಣಿಕ ಅರ್ಹತೆ ಔದ್ಯೋಗಿಕ ತರಬೇತಿ ಹೊಂದಿ ವೃತ್ತಿ ಕೌಶಲ್ಯ ಹೊಂದಿದವರು ಆರ್ಥಿಕತೆಯ ಸಂಘಟಿತ ವಲಯದಲ್ಲಿ ನೆಲೆಯೂರಿ ಸರ್ಕಾರದ ಸಕಲ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಜಾತಿ, ವರ್ಗ, ಲಿಂಗತಾರಮ್ಯಗಳಿಗೆ ಗುರಿಯಾಗಿ ಅಶಿಕ್ಷಿತರು, ವೃತ್ತಿ ತರಬೇತಿ ರಹಿತರೂ ಅರ್ಥವ್ಯವಸ್ಥೆಯ ಅಸಂಘಟಿತ ವಲಯದ ಉದ್ಯೋಗಕ್ಕಾಗಿ ಪರಿತಪಿಸುತ್ತಿದ್ದಾರೆ. ಈ ವ್ಯವಸ್ಥೆ ಅಧಿಕವಾಗಿ ಬಾಧಿಸುತ್ತಿರುವುದು ಮಹಿಳೆಯರನ್ನು. ಮಹಿಳೆಯರು ಅಸಂಘಟಿತ ವಲಯದ ರಕ್ಷಣೆ ಇಲ್ಲದ ಕಡಿಮೆ ಕೂಲಿಯ ಕೆಲಸದಲ್ಲಿ ಶೋಷಣಾತ್ಮಕವಾದ ಬದುಕನ್ನು ಸಾಗಿಸುತ್ತಿದ್ದಾರೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ಜಾತಿ ಭೇದ, ಲಿಂಗ ಭೇದ ಹಾಗೂ ವರ್ಗಭೇದಗಳ ತಾರತಮ್ಯಯುತವಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಡತನದ ಕಾರಣದಿಂದಾಗಿ ಈ ತಾರತಮ್ಯವನ್ನು ವಿರೋಧಿಸುವ ಶಕ್ತಿಯನ್ನು, ಧ್ವನಿಯನ್ನು ಅವರು ಕಳೆದುಕೊಂಡಿದ್ದಾರೆ. ತಮ್ಮನ್ನು ಕೀಳಾಗಿ ಕಾಣುತ್ತಿದ್ದಾರೆ ಎಂಬ ಕಲ್ಪನೆ, ಅನುಭವ ಅವರಿಗಿದೆ. ಆದರೂ ಪರಿಸ್ಥಿತಿಯ ಶಿಶುಗಳಾಗಿ ಪ್ರತಿಭಟನೆ ಮಾಡಲಾರದಂತಹ ಸ್ಥಿತಿಗೆ ತಲುಪಿದ್ದಾರೆ. ಮನೆಗೆಲಸದ ಮಹಿಳೆಯರ ದುಡಿಮೆ ತಮಗೆ ಅನಿವಾರ್ಯ-ಇಲ್ಲದಿದ್ದರೆ ತಮ್ಮ ಬದುಕೇ ಶೋಚನೀಯವಾಗುತ್ತದೆ ಎಂದು ಹೇಳುವ ಮನೆಮಾಲೀಕರೂ ಕೂಡ ಕೆಲಸದವರನ್ನು ಮನುಷ್ಯರ ಸಮಾನವಾಗಿ ಕಾಣುತ್ತಿಲ್ಲ. ಅವರನ್ನು ಮನೆಯೊಳಗೆ ಬಿಟ್ಟುಕೊಳ್ಳದೇ ದೂರವಿರಿಸಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೧೫೦ ಮಹಿಳೆಯರು ತಮಗೆ ಮನೆಯ ಎಲ್ಲ ಕೋಣೆಗಳಿಗೆ (ದೇವರಮನೆ,ಅಡುಗೆ ಮನೆ) ಪ್ರವೇಶವಿಲ್ಲ. ಬಟ್ಟೆ ಪಾತ್ರೆಗಳನ್ನು ಹೊರಗಡೆಯೇ ಸ್ವಚ್ಛ ಮಾಡಬೇಕು ಎಂದಿದ್ದಾರೆ. ಅಂದರೆ ಜಾತಿ ವ್ಯವಸ್ಥೆಯನ್ನು ನಮ್ಮ ಸಮಾಜದಲ್ಲಿ ಎಷ್ಟರಮಟ್ಟಿಗೆ ಪಾಲಿಸುತ್ತಿದ್ದೇವೆ ಎಂಬುದಕ್ಕೆ ಈ ಪ್ರತಿಕ್ರಿಯೆ ಉದಾಹರಣೆಯಾಗಿದೆ. ಈ ಯಾವ ಅಸಮಾನತೆಯನ್ನು ಲೆಕ್ಕಿಸದೇ ಮಹಿಳೆಯರು ಉದ್ಯೋಗ ನಿರತರಾಗಿದ್ದಾರೆ ಎಂದರೆ ಅದು ಮಹಿಳೆಯರ ಸಂಕಷ್ಟದ ಮಟ್ಟವನ್ನು ತೋರಿಸುತ್ತದೆ. ಈ ವ್ಯವಸ್ಥೆಯನ್ನು ಧಿಕ್ಕರಿಸಿದರೆ ತಾವು ಉದ್ಯೋಗ ವಂಚಿತರಾಗಬಹುದೆಂಬ ಭಯ ಅವರನ್ನು ಕಾಡುತ್ತಿದೆ. ಇದರಿಂದ ತಮ್ಮ ದುಡಿಮೆ ಕಡಿಮೆಯಾಗಿ ಕುಟುಂಬ ನಿರ್ವಹಣೆ ಕಷ್ಟವಾಗಬಹುದು ಎಂದು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಮೌನವಾಗಿ ಸಹಿಸಿಕೊಂಡಿದ್ದಾಳೆ.

ಮನೆಗೆಲಸದ ದುಡಿಮೆಗಾರರಲ್ಲಿ ಶೇಕಡ ೪೦ರಷ್ಟು ಮಹಿಳೆಯರಿಗೆ ಕೆಲಸದ ಮನೆಯಲ್ಲಿ ಪ್ರವೇಶವಿದೆ. ಕೆಲವು ಮೇಲ್ಜಾತಿಯ ಮಹಿಳೆಯರು ಮನೆಯ ಎಲ್ಲಾ ಕೋಣೆಗಳಿಗೆ ಪ್ರವೇಶ ನೀಡುತ್ತಿದ್ದಾರೆ. ಇದಕ್ಕೆ ಅವರ ವಿಶಾಲ ಮನೋಭಾವ ಕಾರಣವಿರಬಹುದು ಅಥವಾ ಅನಿವಾರ್ಯ ಕಾರಣಗಳೂ ಇರಬಹುದು. ಅಲ್ಲದೇ ಮನೆಯ ಅಡುಗೆ ಕೆಲಸಗಳಿಗೆ(ಭಕ್ರಿ ಮಾಡುವುದು, ಅಡುಗೆ ತಿಂಡಿ ತಯಾರಿಸುವುದು, ಇತರೆ) ನಿಯುಕ್ತರಾದ ಬ್ರಾಹ್ಮಣ ಅಥವಾ ಲಿಂಗಾಯಿತ ಮಹಿಳೆಯರಿಗೆ ಸ್ವಜಾತೀಯ ಮನೆಗಳಲ್ಲಿ ಮನೆಯ ಎಲ್ಲಾ ಕಡೆ ಪ್ರವೇಶವಿದೆ. ಸ್ವಜಾತಿಯವರಾದರೂ ಮೇಲು ಕೀಳೆಂಬ ಭಾವನೆಯಿಂದಾಗಿ ಒಬ್ಬರು ಮಾಲೀಕರು, ಒಬ್ಬರು ಸೇವಕರು, ಹೀಗೆ ಸಮಾಜದಲ್ಲಿ ತಾರತಮ್ಯ ನೀತಿಯು ಸದ್ದಿಲ್ಲದೇ ಕೆಲಸ ಮಾಡುತ್ತಿದೆ. ಕೋಷ್ಟಕ ೪.೧೩ರಲ್ಲಿ ಮನೆಗೆಲಸದ ಮಹಿಳೆಯರ ಕೆಲಸದ ಮನೆಯಲ್ಲಿ ಪ್ರವೇಶದ ಕುರಿತು ನೀಡಿರುವ ಮಾಹಿತಿ ದಾಖಲಾಗಿರುತ್ತದೆ.

ಕೋಷ್ಟಕ ೪.೧೩: ಕೆಲಸದ ಮನೆಯಲ್ಲಿ ಪ್ರವೇಶ

ಕ್ರ.ಸಂ.	ಕೆಲಸದ ಮನೆಯಲ್ಲಿ ಪ್ರವೇಶ	ಒಟ್ಟು	ಶೇಕಡಾವಾರು
೧	ಇದೆ	೧೦೦	೪೦
೨	ಇಲ್ಲ	೧೫೦	೬೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೩ರ ಮಾಹಿತಿಯ ಪ್ರಕಾರ ಮನೆಗೆಲಸದ ಮಹಿಳೆಯರಲ್ಲಿ ಶೇ. ೪೦ರಷ್ಟು ಮಹಿಳೆಯರು ಜಾತಿ ತಾರತಮ್ಯವನ್ನು ಎದುರಿಸುತ್ತಿಲ್ಲ. ಆದರೆ ಅಧಿಕ ಸಂಖ್ಯೆಯ ಮಹಿಳೆಯರು (ಶೇ.೬೦) ಈ ತಾರತಮ್ಯಕ್ಕೆ ಬಲಿಯಾಗಿದ್ದಾರೆ. ಇದರಿಂದ ಭಾರತೀಯ ಸಮಾಜದಲ್ಲಿ ಜಾತಿವ್ಯವಸ್ಥೆಯ ಅಟ್ಟಹಾಸ ಎಷ್ಟೆಂಬುದು ಮನವರಿಕೆಯಾಗುತ್ತದೆ. ಮಧ್ಯಮ ವರ್ಗದ ಹಾಗೂ ಶ್ರೀಮಂತ ಮನೆಯ ಮಹಿಳೆಯರು ತಮ್ಮ ಮನೆತನದ ಗೌರವದ, ಪ್ರತಿಷ್ಠೆಯ ಪ್ರತೀಕವಾಗಿ ದುಡಿಮೆಗಾರರನ್ನು ನೇಮಿಸಿಕೊಳ್ಳುತ್ತಾರೆ. ಇದರಲ್ಲಿ ಹೊರಗಿನ ದುಡಿಮೆಯಲ್ಲಿ ನಿರತರಾದ ಮಹಿಳೆಯರು ತಮ್ಮ ಮನೆಯ ಕೆಲಸ ನಿರ್ವಹಿಸಲಾಗದೇ (ಇಬ್ಬಗೆಯ ಹೊರೆ) ಮಹಿಳಾ ದುಡಿಮೆಗಾರರನ್ನು ನೇಮಿಸಿಕೊಳ್ಳುತ್ತಾರೆ. ಆದರೆ ಮನೆಗೆಲಸದ ದುಡಿಮೆಯಲ್ಲಿಯೂ ಜಾತಿಭೂತ ಬೆಂಬಿಡದೇ ಕಾಡುತ್ತಿದೆ ಎಂದು ವನಿತಾಸಿಂಗ್ (೨೦೦೭) ಅಭಿಪ್ರಾಯ ಪಡುತ್ತಾರೆ. ಸಮಾನತೆಯ, ಮಾನವೀಯತೆಯ ತತ್ವವನ್ನು ಗಾಳಿಗೆ ತೂರಿ ಜಾತಿ ವರ್ಗಗಳೆಂಬ ತಾರತಮ್ಯ ಭಾರತೀಯ ಸಮಾಜದಲ್ಲಿ ಅಟ್ಟಹಾಸ ಮೆರೆದಿದೆ.

೪.೧೪: ಮಕ್ಕಳು ಅರ್ಧಕ್ಕೆ ಶಾಲೆ ಬಿಡಲು ಕಾರಣವಾದ ಮಾಹಿತಿ

ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಒಂದು ಸಾಧನ. ಅಭಿವೃದ್ಧಿಯ ಒಂದು ಅತ್ಯಮೂಲ್ಯ ಮಂತ್ರ, ಶಿಕ್ಷಣ ಜನರ ಬುದ್ಧಿಕೌಶಲ ಮತ್ತು ನೈಪುಣ್ಯತೆಯನ್ನು ಸುಧಾರಿಸುವುದರ ಮೂಲಕ ಕಾರ್ಯ ದಕ್ಷತೆಯನ್ನು ಹೆಚ್ಚಿಸುತ್ತದೆ. ಶಿಕ್ಷಣವು ನೈತಿಕ ಮೌಲ್ಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣವು ವ್ಯಕ್ತಿತ್ವ ವಿಕಸನದ ರಹದಾಗಿ ಇದ್ದಂತೆ. ಜನರಿಗೆ ಬದುಕುವ ದಾರಿ ಮತ್ತು ವಿಧಾನವನ್ನು

ಕಲಿಸುತ್ತದೆ. ಶಿಕ್ಷಣವು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಶಿಕ್ಷಣವು ಜನರನ್ನು ಶೋಷಣೆಯ ವಿರುದ್ಧ ಹೋರಾಡಲು ತಿಳಿವು ನೀಡುತ್ತದೆ. ಶಿಕ್ಷಿತ ಜನರು ಹೆಚ್ಚು ಪ್ರಜ್ಞಾವಂತರಾಗಿರುವುದರಿಂದ ಅಷ್ಟು ಸುಲಭವಾಗಿ ಬಲಿಪಶುಗಳಾಗುವುದಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಶೀಲ ಭಾರತದಲ್ಲಿ ಶಿಕ್ಷಣದ ಪ್ರಗತಿಗೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಡಲಾಗಿದೆ.

ಸ್ವಾತಂತ್ರ್ಯನಂತರ ಸರ್ಕಾರವು ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಗಮನ ಹರಿಸಲು ಪ್ರಯತ್ನಿಸಿತು. ಇದರಿಂದಾಗಿ ಕಳೆದ ಐದೂವರೆ ದಶಕಗಳಾವಧಿಯಲ್ಲಿ ದೇಶದ ಉದ್ದಗಲದಲ್ಲಿ ಶಿಕ್ಷಣಕ್ಷೇತ್ರ ವ್ಯಾಪಕವಾಗಿ ವಿಸ್ತರಣೆ ಕಂಡಿದೆ. ಶಿಕ್ಷಣದ ಹೆಬ್ಬಾಗಿಲನ್ನು ಎಲ್ಲ ಹಂತಗಳಲ್ಲಿ ಎಲ್ಲ ಜನರಿಗೆ ಮುಕ್ತವಾಗಿಡಲಾಗಿದೆ. ಈ ಎಲ್ಲಾ ಪ್ರಯತ್ನಗಳ ಫಲವಾಗಿ ಭಾರತದ ಸಾಕ್ಷರತಾ ಪ್ರಮಾಣವು ೧೯೫೧ರಲ್ಲಿ ಶೇ. ೧೮.೩೩ರಷ್ಟಿದ್ದರೆ ೨೦೦೧ರ ಸಮಯಕ್ಕೆ ಶೇ. ೬೫.೩೮ಕ್ಕೆ ಏರಿಕೆ ಕಂಡಿರುತ್ತದೆ. ಆದರೆ ಮಹಿಳಾ ಸಾಕ್ಷರತಾ ದರವು ಪುರುಷರ ಸಾಕ್ಷರತಾ ದರಕ್ಕೆ ಹೋಲಿಸಿದಾಗ ಅತೀ ಕಡಿಮೆ ಇರುವುದನ್ನು ಗಮನಿಸಬಹುದು. ಶಿಕ್ಷಣದ ಕೊರತೆಯಿಂದಾಗಿ ಮಹಿಳೆಯರು ಸಾಮಾಜಿಕವಾಗಿ ಆರ್ಥಿಕವಾಗಿ ತುಳಿತಕ್ಕೊಳಪಟ್ಟಿರುತ್ತಾರೆ. ಎಲ್ಲ ಶೋಷಣೆಗಳಿಗೂ ಬಲಿಯಾಗಿ ಬಡತನದ ವಿಷ ವರ್ತುಲದಲ್ಲಿ ಬಂಧಿಯಾಗಿರುತ್ತಾರೆ. ತಮ್ಮ ಕುಟುಂಬವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತು ಅಸಂಘಟಿತ ವಲಯದ ಕೆಲಸದಲ್ಲಿ ತೊಡಗಿ ಜೀವನ ನಡೆಸುತ್ತಿದ್ದಾರೆ. ಹೀಗೆ ಶೆ. ೯೦ಕ್ಕಿಂತ ಅಧಿಕ ಮಹಿಳೆಯರು ಅಸಂಘಟಿತ ವಲಯದ ಉದ್ಯೋಗದಲ್ಲಿ ಕೇಂದ್ರೀಕೃತವಾಗಿದ್ದಾರೆ. ಮಹಿಳೆಯರು ಜೀವನದ ಕನಿಷ್ಠ ಸೌಲಭ್ಯಗಳಿಗಾಗಿ ಪರಿತಪಿಸುವಂತೆ ಆಗಿದೆ. ಕೌಟುಂಬಿಕ ಸಮಸ್ಯೆಗಳು ಪರಿಹಾರವಾಗದೇ ಹಣದ ಅಡಚಣೆಯಿಂದಾಗಿ ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ತಮ್ಮ ಜೊತೆ ತಮ್ಮ ಎಳೆಯ ಮಕ್ಕಳನ್ನು ಕರೆದೊಯ್ಯುತ್ತಾರೆ.

ಸಮೀಕ್ಷೆಗೊಳಗಾದ ಸುಮಾರು ೨೫೦ ಮಹಿಳೆಯರಲ್ಲಿ ೯೬ ಮಹಿಳೆಯರ ಮಕ್ಕಳು ವಿದ್ಯಾವಂತ ರಾಗಿರುವುದಿಲ್ಲ. ಮಹಿಳೆಯರು ಕಷ್ಟಪಟ್ಟು ಶಾಲೆಗೆ ಕಳಿಸಿದರೂ ಅವರು ಅರ್ಧಕ್ಕೆ ಶಾಲೆಬಿಟ್ಟು ಸಣ್ಣ ಪುಟ್ಟ ಉದ್ಯೋಗದಲ್ಲಿ ತೊಡಗಿದ್ದಾರೆ. ಕೋಷ್ಟಕ ೪.೧೪ರಲ್ಲಿ ಮಕ್ಕಳು ಶಾಲೆಬಿಡಲು ಕಾರಣವಾದ ಅಂಶಗಳನ್ನು ನಮೂದಿಸಲಾಗಿದೆ.

ಕೋಷ್ಟಕ ೪.೧೪ : ಮಕ್ಕಳು ಅರ್ಧಕ್ಕೆ ಶಾಲೆ ಬಿಡಲು ಕಾರಣ

ಕ್ರ.ಸಂ.	ಮಕ್ಕಳು ಅರ್ಧಕ್ಕೆ ಶಾಲೆ ಬಿಡಲು ಕಾರಣ	ಒಟ್ಟು	ಶೇಕಡಾವಾರು
೧	ಆರ್ಥಿಕ ಮುಗ್ಗಟ್ಟಿನ ಕಾರಣ	೮೫	೮೮.೫೪
೨	ಅನಾರೋಗ್ಯದ ಕಾರಣ	೨	೨.೦೮
೩	ಇತರೆ ಕಾರಣ	೯	೯.೩೮
	ಒಟ್ಟು	೯೬	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೪ರಲ್ಲಿ ದಾಖಲಿಸಲಾದ ಮಾಹಿತಿಗಳ ಪ್ರಕಾರ ಮನೆಗೆಲಸದ ಮಹಿಳೆಯರು ಶಿಕ್ಷಣದ ಬಗ್ಗೆ ಒಳ್ಳೆಯ ಭಾವನೆಯುಳ್ಳವರಾಗಿದ್ದಾರೆ. ಮಕ್ಕಳಿಗೂ ಕೂಡ ಶಿಕ್ಷಣದ ಅವಶ್ಯಕತೆ ಇದೆ.

ಅದರಲ್ಲೂ ಗಂಡು ಮತ್ತು ಹೆಣ್ಣು ಇಬ್ಬರಿಗೂ ಸಮಾನವಾಗಿ ಶಿಕ್ಷಣವನ್ನು ಕೊಡಿಸಬೇಕು ಎಂಬ ವಿಚಾರ ವ್ಯಕ್ತಪಡಿಸಿದ್ದಾರೆ. ಆದರೆ ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೯೬ ಮಹಿಳೆಯರ ಮಕ್ಕಳು ಅರ್ಧಕ್ಕೆ ಶಾಲೆ ಬಿಟ್ಟಿರುತ್ತಾರೆ. ಶಾಲೆ ಬಿಟ್ಟ ಮಕ್ಕಳಲ್ಲಿ ಕೆಲವರು ವ್ಯಾಪಾರದಲ್ಲಿ ನಿರತರಾಗಿದ್ದಾರೆ. ಇನ್ನು ಕೆಲವರು ಬಾಲಕಾರ್ಮಿಕರಾಗಿ ಹೊಟೆಲ್, ಗ್ಯಾರೇಜ್‌ನಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಇನ್ನು ಕೆಲವರು ತಂದೆ ತಾಯಿಗಳ ಉದ್ಯೋಗವನ್ನು ಮುಂದುವರೆಸಿದ್ದಾರೆ. ಹೆಣ್ಣು ಮಕ್ಕಳು ಸಾಮಾನ್ಯವಾಗಿ ತಾಯಿಯ ಜೊತೆಗೇ ಮನೆಗೆಲಸದ ಸೇವೆಯಲ್ಲಿ ನಿರತರಾಗಿದ್ದಾರೆ. ಇಂತಹ ಮಹಿಳೆಯರಿಗೆ ಮಕ್ಕಳ ಶಿಕ್ಷಣದ ಮಹತ್ವ ತಿಳಿದಿದೆಯಾದರೂ ಅನಿವಾರ್ಯ ಕಾರಣಗಳಿಂದಾಗಿ ಶಾಲೆಯನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ.

ಮನೆಗೆಲಸದ ಮಹಿಳೆಯರಲ್ಲಿ ೮೫ ಮಹಿಳೆಯರ ಮಕ್ಕಳು ಆರ್ಥಿಕ ಮುಗ್ಗಟ್ಟಿನಿಂದಾಗಿ ಶಾಲೆಯನ್ನು ಅರ್ಧಕ್ಕೆ ನಿಲ್ಲಿಸುವ ಪರಿಸ್ಥಿತಿ ಎದುರಾಗಿದೆ. ಮನೆಯ ಆರ್ಥಿಕ ಮುಗ್ಗಟ್ಟು ಉಲ್ಬಣಗೊಂಡಾಗ ಮಕ್ಕಳನ್ನು ದುಡಿಮೆಗೆ ಕಳಿಸುತ್ತಾರೆ. ಇನ್ನು ಕೆಲವರು ಹಣಕಾಸನ್ನು ಆಪೇಕ್ಷಿಸುವ ಕೋರ್ಸ್‌ಗಳಿಗೆ ಕಳಿಸಲು ಆಗದೇ ಶಾಲೆಯನ್ನು ಬಿಡಿಸಿರುತ್ತಾರೆ. ಡಾ. ಅನಿತಾ ಆರ್ಯ (೨೦೦೦) ಅವರು 'ಭಾರತೀಯ ಮಹಿಳೆ' ಎಂಬ ಗ್ರಂಥದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮನೆಗೆಲಸದ ಮಹಿಳೆಯರು ತಮ್ಮ ಮನೆಯ ಖರ್ಚನ್ನು ಭರಿಸಲು ಸುಮಾರು ೪–೫ ಮನೆಗಳನ್ನು ಒಪ್ಪಿಕೊಂಡಿರುತ್ತಾರೆ. ತಮ್ಮ ಮನೆಯ ಕೆಲಸದ ಜೊತೆಗೆ ಹೊರಗಿನ ದುಡಿಮೆಯನ್ನು ನಿರ್ವಹಿಸುವುದು ಕಷ್ಟದಾಯಕವಾದಾಗ ತಮ್ಮ ಜೊತೆ ಎಳೆಯ ಹೆಣ್ಣು ಮಕ್ಕಳನ್ನು ಕೆಲಸಕ್ಕೆ ಕರೆದೊಯ್ಯುತಾರೆ. ಹೀಗೆ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಅರ್ಧಕ್ಕೆ ಮೊಟಕುಗೊಳ್ಳುತ್ತದೆ. ಆದರೆ ಗಂಡು ಮಕ್ಕಳನ್ನು ಮಾತ್ರ ಶಾಲೆಗೆ ಕಳಿಸುತ್ತಾರೆ. ಮೇಲ್ವಿಚಾರಣೆಯ ಕೊರತೆಯಿಂದಾಗಿ ಹೆಣ್ಣು ಹಾಗೂ ಗಂಡು ಎರಡೂ ಮಕ್ಕಳೂ ವಿದ್ಯಾಭ್ಯಾಸ ವಂಚಿತರಾಗುತ್ತಾರೆ. ದಿನದಲ್ಲಿ ೧೨ರಿಂದ ೧೬ ಗಂಟೆಗಳ ಕಾಲ ಹೊರಗಿನ ದುಡಿಮೆಯಲ್ಲೇ ನಿರತರಾಗಿ ಮಕ್ಕಳನ್ನು ನಿರ್ಲಕ್ಷಿಸುತ್ತಾರೆ. ಶಿಕ್ಷಣವಂಚಿತರಾದ ಮಕ್ಕಳು ಬಾಲ ಕಾರ್ಮಿಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಹೀಗೆ ಭಾರತೀಯ ಸಮಾಜದಲ್ಲಿ ಬಾಲ ಕಾರ್ಮಿಕರ ಸಮಸ್ಯೆ ದಿನೇದಿನೇ ಹೆಚ್ಚುತ್ತಾ ಬಂದಿದೆ. ಜಗತ್ತಿನ ಬಹುತೇಕ ದೇಶಗಳಲ್ಲಿ ಕಾಣಬರುವಂತೆ ಭಾರತ ದೇಶದಲ್ಲಿಯೂ ಆರ್ಥಿಕ ದುರವಸ್ಥೆಯಿಂದಾಗಿಯೇ, ಗಣನೀಯ ಸಂಖ್ಯೆಯ ಅಪ್ರಾಪ್ತ ವಯಸ್ಸಿನ (೧೪ ವಯಸ್ಸಿನ ಒಳಗಿನ) ಮಕ್ಕಳು ಆರ್ಥಿಕ ಉತ್ಪಾದನಾ ಕಾರ್ಯದಲ್ಲಿ ಭಾಗವಹಿಸಬೇಕಾದ ಅನಿವಾರ್ಯತೆ ಒದಗಿದೆ. ಮಕ್ಕಳನ್ನು ದುಡಿಮೆಗೆ ಬಳಸುವುದು ಉದ್ಯೋಗದಾತರಿಗೆ ಅಧಿಕ ಲಾಭದಾಯಕವಾಗಿದ್ದರೆ, ಇತ್ತ ಕುಟುಂಬದ ಆದಾಯವನ್ನು ಹೆಚ್ಚಿಸುವುದಕ್ಕಾಗಿ ಅಂತಹ ಮಕ್ಕಳನ್ನು ದುಡಿಮೆಗೆ ನೂಕುವಂತಹ ಆರ್ಥಿಕ ದುರವಸ್ಥೆ ಕುಟುಂಬದ ಹಿರಿಯರದಾಗಿರುತ್ತದೆ. ಭಾರತದಲ್ಲಿ ಬಾಲಕಾರ್ಮಿಕರ ಪ್ರಸಂಗಗಳು ಅತಿಯಾಗಿವೆ. ಏಶಿಯಾದಲ್ಲಿ ಕೆಲಸಮಾಡುವ ಬಾಲಕಾರ್ಮಿಕರಲ್ಲಿ ೧/೩ ಭಾಗ ಭಾರತವೊಂದರಲ್ಲೇ ಇದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ಒಟ್ಟು ೨೫.೫ ಕೋಟಿ ಮಕ್ಕಳಲ್ಲಿ ೫ರಿಂದ ೧೪ ವಯಸ್ಸಿನ ಗುಂಪಿನ ೧.೨೫ ಕೋಟಿ ಮಕ್ಕಳು ಬಾಲ ಕಾರ್ಮಿಕರಾಗಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ತೀರಾ ಬಡತನ ಮತ್ತು ಕನಿಷ್ಠ ಆದಾಯವು ಬಡ ಕುಟುಂಬಗಳು ಶಾಲಾ ಶಿಕ್ಷಣ ಪಡೆಯಬೇಕಾದ ಮತ್ತು ಎಳೆಯ ವಯಸ್ಸಿನಲ್ಲಿ ಸಂತೋಷದಿಂದ ಆಟವಾಡಬೇಕಾದ

ತಮ್ಮ ಮಕ್ಕಳನ್ನು ದುಡಿಮೆಗೆ ಬಲವಂತವಾಗಿ ತಳ್ಳಲು ಕಾರಣವಾಗುತ್ತದೆ. ಭಾರೀ ಸಂಖ್ಯೆಯ ಬಾಲ ಕಾರ್ಮಿಕರು ಬೀಡಿ ಕಾರ್ಖಾನೆಗಳಲ್ಲಿ ಟೀ ಅಂಗಡಿಗಳಲ್ಲಿ, ಗ್ಯಾರೇಜ್‌ಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ಬಾಲ ಕಾರ್ಮಿಕರ ಪದ್ಧತಿಯನ್ನು ರಾಷ್ಟ್ರೀಯ ಅವಮಾನ ಎಂದು ಪರಿಗಣಿಸಲಾಗಿದೆ. ಸಂವಿಧಾನದ ೧೪ನೇ ವಿಧಿಯು ೧೪ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಯಾವುದೇ ಸಂಸ್ಥೆಗಳು, ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ದುಡಿಯಲು ನೇಮಿಸಿಕೊಳ್ಳಬಾರದು ಎಂದು ಹೇಳಿದೆ. ಬಾಲ ಕಾರ್ಮಿಕರ ನಿಷೇಧ ಕಾನೂನು ೧೯೮೬ರಲ್ಲಿಯೇ ಜಾರಿಗೆ ಬಂದಿದ್ದರೂ ಈ ಪದ್ಧತಿ ಕಾನೂನಿನ ಕಣ್ಣುತಪ್ಪಿಸಿ ಅವ್ಯಾಹತವಾಗಿ ಮುಂದುವರೆದು ಬಂದಿದೆ. ಇದಕ್ಕೆ ಪ್ರಮುಖ ಕಾರಣ ಕಡುಬಡತನ. ೨೦೦೧ರ ಜನಗಣತಿಯ ಪ್ರಕಾರ ಶೇ. ೨೬ಕ್ಕಿಂತ ಅಧಿಕ ಜನರು ಬಡತನ ರೇಖೆಗಿಂತ ಕೆಳಗೆ ಜೀವಿಸಿದ್ದಾರೆ. ಕುಟುಂಬವು ಸಾಲದ ಸುಳಿಯಲ್ಲಿ ಸಿಲುಕಿದಾಗ, ಆರ್ಥಿಕವಾಗಿ ನಿರ್ಗತಿಕರಾದಾಗ ಅಥವಾ ಕುಟುಂಬದ ಹಿರಿಯರು ರೋಗರುಜಿನಗಳಿಗೆ ತುತ್ತಾಗಿ ಮನೆಯಲ್ಲಿ ದುಡಿಯಲಾರದವರಾದಾಗ ಚಿಕ್ಕಮಕ್ಕಳು ಕುಟುಂಬದ ಆದಾಯವನ್ನು ಕಿಂಚಿತ್ತಾದರೂ ಹೆಚ್ಚಿಸಲು ಅನಿವಾರ್ಯವಾಗಿ ದುಡಿಯ ಬೇಕಾಗುತ್ತದೆ. ಶಿಕ್ಷಣವಂಚಿತರಾದ ಮಕ್ಕಳು ಅನ್ಯಮಾರ್ಗವಿಲ್ಲದೇ ಅಸಂಘಟಿತ ವಲಯದಲ್ಲಿ ತಮ್ಮ ಬದುಕನ್ನು ಕಂಡುಕೊಂಡಿದ್ದಾರೆ.

ಮಕ್ಕಳು ಶಾಲೆಯನ್ನು ಅರ್ಧಕ್ಕೆ ನಿಲ್ಲಿಸಲು ಅನಾರೋಗ್ಯ ಕೂಡ ಕಾರಣವಾಗಿದೆ ಎಂದು ಕೆಲವು ಹೆಣ್ಣು ಮಕ್ಕಳು ನೋವನ್ನು ಹಂಚಿಕೊಂಡಿದ್ದಾರೆ. ೯೬ ಮಹಿಳೆಯರಲ್ಲಿ ಇಬ್ಬರು ಹೆಣ್ಣುಮಕ್ಕಳು ತಮ್ಮ ಮಕ್ಕಳು ಅನಾರೋಗ್ಯದ ಕಾರಣ ಶಾಲೆಗೆ ಹೋಗುತ್ತಿಲ್ಲ ಎಂದು ತಿಳಿಸಿರುತ್ತಾರೆ. ಒಬ್ಬ ವಿಧವಾ ಮಹಿಳೆ ತಲೆಗೆ ತಾಗುವಂತಹ, ಕನಿಷ್ಠ ಮೂಲ ಸೌಕರ್ಯಗಳೂ ಇಲ್ಲದಂತಹ ಮನೆಯಲ್ಲಿ ವಾಸವಾಗಿದ್ದಾರೆ. ಕ್ಷೇತ್ರ ಕಾರ್ಯದ ಸಮಯದಲ್ಲಿ ತನ್ನ ದು:ಖವನ್ನು ತೋಡಿಕೊಂಡಿದ್ದಾಳೆ. ಹುಟ್ಟಿದಾಗ ಚೆನ್ನಾಗಿಯೇ ಇದ್ದ ಮಕ್ಕಳು ಬ್ರೇನ್ ಫೀವರ್(ಮೆದುಳು ಜ್ವರ) ಕಾಯಿಲೆಗೆ ತುತ್ತಾಗಿ ಬುದ್ಧಿಮಾಂಧ್ಯರಾಗಿದ್ದಾರೆ. ಅವರನ್ನು ಚಿಕಿತ್ಸೆಗೆ ಒಳಪಡಿಸಲು ಆ ಮಹಿಳೆಗೆ ಹಣಕಾಸಿನ ಅಡಚಣೆ ಇದೆ. ಹೀಗೆ ಒಂಟಿ ಮಹಿಳೆ ತನ್ನ ಇಬ್ಬರು ಮಕ್ಕಳನ್ನು ಸಾಕಲಿಕ್ಕಾಗಿ ಮನೆಗೆಲಸದ ದುಡಿಮೆಯಲ್ಲಿ ನಿರತಳಾಗಿದ್ದಾಳೆ. ಹೀಗೆ ಅನಾರೋಗ್ಯಕ್ಕೆ ತುತ್ತಾದ ಮಕ್ಕಳು ಶಾಲೆಯನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದಾರೆ. ಬಡತನವು ಸಮಾಜದಲ್ಲಿ ಎಲ್ಲ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ. ಅಪೌಷ್ಠಿಕ ಆಹಾರ ಸೇವನೆಯಿಂದಾಗಿ ಮಕ್ಕಳಿಗೆ ಅನಾರೋಗ್ಯ ಸಮಸ್ಯೆ ಉದ್ಭವವಾಗುತ್ತದೆ. ಆದರೆ ದಿನದ ಎರಡು ಹೊತ್ತಿನ ಊಟಕ್ಕೂ ಪರದಾಡುವ ಮಹಿಳೆಯರು ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸುವುದು ಕಷ್ಟದ ಮಾತಾಗಿದೆ.

ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಲು ಇನ್ನೂ ಅನೇಕ ಕಾರಣಗಳನ್ನು ಮಹಿಳೆಯರು ನೀಡಿರುತ್ತಾರೆ. ಅದರಲ್ಲಿ ಮೊದಲನೆಯದಾಗಿ ಕೌಟುಂಬಿಕ ಕಲಹ. ಮನೆಯಲ್ಲಿ ವಾಸಿಸುವ ಸದಸ್ಯರುಗಳಲ್ಲಿ ಸಾಮರಸ್ಯವಿಲ್ಲದೇ ಹೋದಾಗ ನಿರಂತರ ಜಗಳದಲ್ಲೇ ದಿನವನ್ನು ನೂಕಬೇಕಾಗುತ್ತದೆ. ಇದರಿಂದ ಮಕ್ಕಳು, ಮನೆಯ ಕಲುಷಿತ ವಾತಾವರಣವನ್ನು ನೋಡಿ ಬೇಸತ್ತು ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಎರಡನೆಯದಾಗಿ ತಂದೆಯ ದುಃಶ್ಚಟಗಳನ್ನು ನೋಡಿ ಮಕ್ಕಳೂ ಕೂಡ ದಾರಿ ತಪ್ಪುತ್ತಿದ್ದಾರೆ. ಎಳೆಯ ವಯಸ್ಸಿನಲ್ಲಿಯೇ

ಬೀಡಿ, ಸಿಗರೇಟು ಸೇದುವ, ಗುಟಕಾ ಹಾಕುವ ದುರಭ್ಯಾಸಗಳನ್ನು ಬೆಳೆಸಿಕೊಳ್ಳುತ್ತಾರೆ. ಹೀಗೆ ಕೌಟುಂಬಿಕ ಕಲಹಗಳೂ ಕೂಡ ಮಕ್ಕಳು ಓದಿನಲ್ಲಿ ನಿರಾಸಕ್ತಿ ಹೊಂದಿ ಓದನ್ನು ಅರ್ಧಕ್ಕೇ ನಿಲ್ಲಿಸಲಿಕ್ಕೆ ಕಾರಣವಾಗುತ್ತದೆ. ಹಣಕಾಸಿನ ತೊಂದರೆ ಹಾಗೂ ಅನಾರೋಗ್ಯವನ್ನು ಹೊರತುಪಡಿಸಿ ಇತರೆ ಕಾರಣಗಳಿಂದ (ಕೌಟುಂಬಿಕ ಕಲಹ,ದುರಭ್ಯಾಸ, ಓದಿನಲ್ಲಿ ನಿರಾಸಕ್ತಿ) ಶೇ. ೯.೩೭ರಷ್ಟು ಮಕ್ಕಳು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ಇದರಲ್ಲಿ ಶೇ. ೫೦ರಷ್ಟು ಮಕ್ಕಳು ಚಿಕ್ಕಪುಟ್ಟ ಉದ್ಯೋಗಗಳಲ್ಲಿ ನಿರತರಾಗಿ ಮನೆಯ ಹಿರಿಯರ ದುಡಿಮೆಗೆ ಬೆಂಬಲವಾಗಿ ನಿಂತರೆ ಇನ್ನು ಶೇ. ೫೦ರಷ್ಟು ಮಕ್ಕಳು ದುರಭ್ಯಾಸಗಳ ದಾಸರಾಗಿ ದೇಶಕ್ಕೂ ಮನೆಗೂ ಕಂಟಕಪ್ರಾಯರಾಗಿದ್ದಾರೆ. ಅದಕ್ಕೆ ಭಾರತದಲ್ಲಿ ಅವಲಂಬನ ಅನುಪಾತ ಅಧಿಕ ಪ್ರಮಾಣದಲ್ಲಿರುತ್ತದೆ.

ಸರ್ಕಾರವು ಸಾಕ್ಷರತಾ ಕಾರ್ಯಕ್ರಮ, ವಯಸ್ಕರ ಶಿಕ್ಷಣದಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದರೂ, ಅದರ ಸದುಪಯೋಗವನ್ನು ಪಡೆದುಕೊಳ್ಳುವಲ್ಲಿ ಜನತೆ ವಿಫಲವಾಗಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಮಾಡಿ, ಬಿಸಿಯೂಟದ ಯೋಜನೆಗೆ ಕೋಟಿಗಟ್ಟಲೆ ಹಣವನ್ನು ವ್ಯಯಮಾಡಿ ವಿದ್ಯಾರ್ಥಿಗಳನ್ನು ಶಾಲೆಗೆ ಆಕರ್ಷಿಸಲು ಪ್ರಯತ್ನಿಸಿದ ಫಲವಾಗಿ ಹಾಜರಾತಿಯಲ್ಲಿ ಏರಿಕೆ ಕಂಡು ಬಂದಿದೆಯಾದರೂ ಸಂಪೂರ್ಣವಾಗಿ ಸಾಕ್ಷರತೆ ಸಾಧಿಸಲು ಸಾಧ್ಯವಾಗಿರುವುದಿಲ್ಲ.

ಮಾಹಿತಿಯ ವಿಶ್ಲೇಷಣೆಗಾಗಿ ಮಹಿಳೆಯರ ಸಾಮಾಜಿಕ ಒಡನಾಟಗಳ ಕುರಿತು ಸವಿವರವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ಅವ್ಯಾಹತವಾಗಿ ನಡೆದಿವೆಯಾದರೂ, ಈ ಗುರಿ ಈಡೇರಬೇಕಾದರೆ ಭಾರತೀಯ ಸಮಾಜ ಇನ್ನೂ ಪಕ್ವವಾಗಬೇಕಾಗಿದೆ. ಈ ನಿಟ್ಟಿನಲ್ಲಿ ವಿಚಾರಿಸಿದಾಗ ನಮ್ಮ ಸಾಂಪ್ರದಾಯಿಕ ಸಮಾಜ ಹಾಗೂ ಆಧುನಿಕ ಸಮಾಜಕ್ಕೂ ಅನೇಕ ರೀತಿಯ ಅಂತರ ಕಂಡುಬರುತ್ತಿದೆ. ಅನೇಕ ಮಹಿಳೆಯರು ಆಧುನಿಕ ಸಮಾಜದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಆದರೆ ಇದು ಎಲ್ಲ ಮಹಿಳೆಯರಿಗೂ ಸಾಧ್ಯವಾಗಿರುವುದಿಲ್ಲ. ಸಾಮಾಜಿಕ ಬದಲಾವಣೆ ಎಂದರೆ ಅದು ಎಲ್ಲರ ಒಳಿತಿಗಾಗಿ ಎಲ್ಲರನ್ನು ಒಳಗೊಳ್ಳುವ ಬದಲಾವಣೆಯಾಗಬೇಕಾಗಿದೆ. ಏಕೆಂದರೆ ಮಹಿಳೆಯರು ಎಲ್ಲ ವರ್ಗದ, ಜಾತಿಯ ಜನರ ಜೊತೆ ಸಾಮರಸ್ಯದಿಂದ ಬದುಕು ಸಾಗಿಸುತ್ತಿದ್ದಾರೆ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ತಮ್ಮ ಹಬ್ಬಗಳನ್ನು ಆಚರಿಸುವುದಲ್ಲದೇ ಬೇರೆ ಧರ್ಮದ ಹಬ್ಬಗಳನ್ನು (ಉದಾ: ಹಿಂದೂಗಳು ಮುಸಲ್ಮಾನರ ಹಬ್ಬಗಳು, ಕ್ರಿಶ್ಚಿಯನ್ನರ ಹಬ್ಬಗಳು, ಮುಸಲ್ಮಾನರು ಜಾತ್ರೆ ತೇರುಗಳಲ್ಲಿ ಪಾಲ್ಗೊಳ್ಳುವುದು ಇತ್ಯಾದಿ) ಆಚರಿಸುವುದರ ಮೂಲಕ ಕೋಮು ಸೌಹಾರ್ದವನ್ನು ಮೆರೆದಿದ್ದಾರೆ. ಅಕ್ಕಪಕ್ಕದಲ್ಲಿ ವಾಸಿಸುವ ಅನ್ಯ ಜಾತೀಯರ ಜೊತೆ ಸ್ನೇಹದಿಂದಿದ್ದಾರೆ. ಆದರೆ ತಲೆತಲಾಂತರದಿಂದ ಜಾರಿಯಲ್ಲಿ ಬಂದ ಆಚರಣೆಗಳಲ್ಲಿ ಮಾತ್ರ ಸುಧಾರಣೆಯಾಗಬೇಕಾಗಿದೆ. ಮಹಿಳೆಯರನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗುವುದರಿಂದ ಮಾತ್ರ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಸುಧಾರಣೆ ಕಾಣಬಹುದಾಗಿದೆ.

ಆರ್ಥಿಕ ಮಾಹಿತಿ :

ಅಸಂಘಟಿತ ವಲಯದಲ್ಲಿ ಅತೀ ಕೆಳಸ್ತರದ ದುಡಿಮೆ ಎನಿಸಿದ ಮನೆಗೆಲಸದ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಿಸಲು ಮನೆಯ ಒಡೆತನ, ಮನೆಯ ಸ್ವರೂಪ ಹಾಗೂ ಮನೆಯಲ್ಲಿ ಉಪಯೋಗಿಸುವ ವಸ್ತುಗಳ ಮಾಹಿತಿಯನ್ನು ಪಡೆಯಲಾಯಿತು. ಮಹಿಳೆಯರ ಹಣಕಾಸಿನ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ಮಹಿಳೆಯರ ಮನೆಯ ಆದಾಯ, ಕೌಟುಂಬಿಕ ವೆಚ್ಚ, ಸಾಲದ ವಿವರ ಉಳಿತಾಯದ ವಿವರಗಳನ್ನು ಪಡೆಯುವುದರ ಜೊತೆಗೆ ಸ್ವಂತ ಜಮೀನನ್ನು ಹೊಂದಿದ ಬಗ್ಗೆ ವಿವರವನ್ನು ಸಂಗ್ರಹಿಸಲಾಯಿತು. ಅದೆಲ್ಲದರ ಜೊತೆ ಕೂಲಿ ನಿರ್ಧರಿಸುವುದರ ಕ್ರಮದ ಕುರಿತಾಗಿ ಮಾಹಿತಿ ಸಂಗ್ರಹಿಸಲಾಯಿತು.

೪.೧೫ : ಮಹಿಳೆಯರ ವಾಸದ ಮನೆಯ ಮಾಹಿತಿ

ಅಸಂಘಟಿತ ವಲಯದಲ್ಲಿ ಅಧಿಕ ಸಂಖ್ಯೆಯ ಮಹಿಳೆಯರು ಕೇಂದ್ರೀಕೃತವಾಗಿರಲು ಪ್ರಮುಖ ಕಾರಣ ಎಂದರೆ ಜನಸಂಖ್ಯಾಸ್ಫೋಟ. ಅಭಿವೃದ್ಧಿಶೀಲ ದೇಶವಾದ ಭಾರತವು ಜನಸಂಖ್ಯಾ ಸ್ಫೋಟದಂತಹ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದೆ. ೨೦೦೧ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ೧೦೨.೮ ಕೋಟಿ ಇದ್ದು, ಅದು ವಾರ್ಷಿಕ ಸರಾಸರಿ ೧.೯೩ರ ದರದಲ್ಲಿ ಏರುತ್ತಿದೆ. ಜನಸಂಖ್ಯಾ ಏರಿಕೆಯು ಶಿಕ್ಷಣ,ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಸಾರಿಗೆ ಸಂಪರ್ಕ ಮುಂತಾದ ಸಾಮಾಜಿಕ ಮೂಲೋತ್ಪಾದಕಗಳ ಮೇಲೆ ವಿಪರೀತ ಒತ್ತಡವನ್ನು ಹೇರುತ್ತದೆ. ಇದರಿಂದಾಗಿ ಸರ್ಕಾರ ಈ ಎಲ್ಲ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಅಧಿಕ ಸಾಮಾಜಿಕ ವೆಚ್ಚ ಮಾಡಲೇಬೇಕಾಗಿ ಬಂದಿದೆ. ನಿರುದ್ಯೋಗಿಗಳ ಸಹಾಯಾರ್ಥವಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಬಡತನ ನಿರ್ಮೂಲನ ಮತ್ತು ಉದ್ಯೋಗ ನಿರ್ಮಾಣದಂತಹ ಕಾರ್ಯಕ್ರಮಗಳು ಹಲವಾರು ವರ್ಷಗಳಿಂದ ಜಾರಿಯಲ್ಲಿವೆ.

೨೦೦೧ರಲ್ಲಿ ಜಾರಿಗೊಳಿಸಲಾದ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿ ಪ್ರಾಥಮಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ, ಗ್ರಾಮೀಣ ವಸತಿ, ಗ್ರಾಮೀಣ ಕುಡಿಯುವ ನೀರು ಪೌಷ್ಠಿಕಾಂಶದಂತಹ ಕನಿಷ್ಠ ಸೇವೆಗಳನ್ನು ಒದಗಿಸಲು ಯೋಜನೆಯನ್ನು ಸಿದ್ಧಪಡಿಸಲಾಯಿತು. ಗ್ರಾಮೀಣ ವಸತಿ ಯೋಜನೆಗಳಲ್ಲಿ ಒಂದಾದ 'ಇಂದಿರಾ ಆವಾಸ್'ಯೋಜನೆಯು ಬಡ ಪರಿಶಿಷ್ಟಜಾತಿ, ಪಂಗಡ, ಬಿಡುಗಡೆಗೊಳಿಸಲಾದ ಜೀತದಾಳುಗಳು, ಮತ್ತು ಗ್ರಾಮೀಣ ಭಾಗದಲ್ಲಿ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಇತರೆ ಬಡವರಿಗೆ ಉಚಿತವಾಗಿ ಮನೆಗಳನ್ನು ನಿರ್ಮಿಸಿಕೊಡುವ ಗುರಿ ಹೊಂದಿತ್ತು. ಅಲ್ಲದೆ ೨೦೦೧ರ ಡಿಸೆಂಬರ್ ತಿಂಗಳಲ್ಲಿ ಜಾರಿಗೊಳಿಸಲಾದ 'ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ ನಗರ ಭಾಗದಲ್ಲಿ ಸರಿಯಾದ ವಸತಿ ಇಲ್ಲದೆ ಕೊಳಗೇರಿಯಲ್ಲಿ ವಾಸಿಸುತ್ತಿರುವ ಬಡತನ ರೇಖೆಯ ಕೆಳಗಿರುವ ಜನರ ಸ್ಥಿತಿಗತಿಗಳನ್ನು ಸುಧಾರಿಸುವ ಗುರಿ ಹೊಂದಿದೆ. ಹಾಗೂ ವಸತಿ ಘಟಕಗಳನ್ನು ಶೌಚಾಲಯಗಳನ್ನು ನಿರ್ಮಿಸಿಕೊಡುವ ಗುರಿ ಹೊಂದಿದೆ. ಸರ್ಕಾರದ ಈ ಯೋಜನೆಗಳು ಜನಸಾಮಾನ್ಯರಿಗೆ ತಲುಪಿ ಸ್ವಲ್ಪಮಟ್ಟಿಗಾದರೂ ವಸತಿ ಸಮಸ್ಯೆ ಪರಿಹಾರ ಕಂಡಂತಾಗಿದೆ.

ಮನೆಯ ಒಡೆತನ :

ಸರ್ಕಾರದ ಈ ಎಲ್ಲಾ ಯೋಜನೆಗಳ ಫಲಾನುಭವಿಗಳಾಗಿರುವುದು ನೆಮ್ಮದಿಯ ವಿಷಯವಾಗಿದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಿಸಲು ಸ್ವಂತಮನೆ ಹೊಂದಿರುವವರು, ಬಾಡಿಗೆ ಮನೆಯಲ್ಲಿ ವಾಸಮಾಡುವವರು ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ವಾಸಿಸುವವರು ಮತ್ತು ಇತರೆ (ಸಂಬಂಧಿಗಳ ಮನೆಯಲ್ಲಿ, ಸ್ನೇಹಿತರ ಮನೆಯಲ್ಲಿ, ಪರಿಚಯಸ್ಥರ ಮನೆಯಲ್ಲಿ) ಮನೆಗಳಲ್ಲಿ ವಾಸ ಮಾಡುವವರನ್ನು ಸಮೀಕ್ಷೆಗೆ ಒಳಪಡಿಸಲಾಯಿತು. ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳಾ ಮನೆಗೆಲಸದ ದುಡಿಮೆಗಾರರಲ್ಲಿ ೧೭೮ ಮಹಿಳೆಯರು ಸ್ವಂತ ಮನೆಯಲ್ಲಿ (ಜನತಾ ಮನೆ) ವಾಸವಾಗಿರುತ್ತಾರೆ. ಇನ್ನು ೬೬ ಮಹಿಳೆಯರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಕೇವಲ ಒಬ್ಬರು ಮಾತ್ರ ಸಾರ್ವಜನಿಕವಾಗಿ ನಿರ್ಮಾಣಗೊಂಡ ವಸತಿಗೃಹದಲ್ಲಿ ನೆಲೆಸಿರುವುದಾಗಿ ತಿಳಿಸಿರುತ್ತಾರೆ. ಐವರು ಮಹಿಳೆಯರು ಮಾತ್ರ ಇತ್ತೀಚೆಗೆ ಹೊಸಪೇಟೆಗೆ ಬಂದವರಾಗಿದ್ದು ಅವರು ತಾತ್ಕಾಲಿಕವಾಗಿ, ಸಂಬಂಧಿಗಳ ಮನೆಯಲ್ಲಿಯೂ, ಸ್ನೇಹಿತರ, ಪರಿಚಯಸ್ಥರ ಮನೆಯಲ್ಲಿಯೂ ತಂಗಿರುತ್ತಾರೆ.

ಮನೆಯ ಸ್ವರೂಪ :

ಮನೆಯ ಸ್ವರೂಪದ ವಿಷಯವಾಗಿ ಹೇಳುವುದಾದರೆ ಸುಮಾರು ೨೦೨ ಮಹಿಳೆಯರು ಕಚ್ಚಾ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಕಚ್ಚಾ ಮನೆಯು ಸಿಮೆಂಟಿನ ಶೀಟಿನ ಸೂರನ್ನು ಹೊಂದಿದ್ದು ಕೇವಲ ಎರಡು ರೂಮುಗಳಿದ್ದು ಅದರಲ್ಲೆ ಮನೆಯ ಜನರೆಲ್ಲ ವಾಸ ಮಾಡಬೇಕಾಗಿದೆ. ಗಂಡುಮಕ್ಕಳು ಬೇಸಿಗೆ ದಿನಗಳಲ್ಲಿ ಹೊರಗಡೆ ಮಲಗಲು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮಹಿಳೆಯರಿಗೆ ಪ್ರತ್ಯೇಕ ಕೊಠಡಿಗಳಿರುವುದಿಲ್ಲ. ಬಾಣಂತಿಯರು, ಅನಾರೋಗ್ಯದಿಂದ ಬಳಲುವವರು, ವಯೋವೃದ್ಧರೂ ಕೂಡ ಈ ಮನೆಯಲ್ಲಿಯೇ ವಾಸಮಾಡುವ ಪರಿಸ್ಥಿತಿ ಒದಗಿಬಂದಿದೆ. ಬೇಸಿಗೆ ಕಾಲವನ್ನು ಮಾತ್ರ ಕೊಂಚ ನಿರಾಯಾಸವಾಗಿ ಕಳೆಯುವ ಜನರು ಮಳೆಗಾಲ ಹಾಗೂ ಚಳಿಗಾಲದಲ್ಲಿ ಬಹಳ ತೊಂದರೆಗೀಡಾಗುತ್ತಿದ್ದಾರೆ. ಏಕೆಂದರೆ ಬಹಳ ಹಿಂದೆ ಕಟ್ಟಿಸಿದ ಮನೆಗಳು ಈಗಾಗಲೇ ರಿಪೇರಿಗೆ ಬಂದಿದ್ದು, ಸಿಮೆಂಟಿನ ಶೀಟಿನಲ್ಲಿ ರಂಧ್ರಗಳಾಗಿ ಮಳೆ ಬಂದಾಗ ನೀರೆಲ್ಲ ಒಳಗೆ ಬರುತ್ತದೆ. ನಮ್ಮ ಮನೆಗಳನ್ನು ರಿಪೇರಿ ಮಾಡಿಕೊಟ್ಟರೆ ಉಪಕಾರವಾಗುತ್ತದೆ ಎಂದು ಮಹಿಳೆಯರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಹೀಗೆ ಕಚ್ಚಾ ಮನೆಗಳಲ್ಲಿ ವಾಸ ಮಾಡುತ್ತಿರುವ ೨೦೨ ಮನೆಗೆಲಸದ ಕುಟುಂಬಗಳು ಬೇಸಿಗೆಯಲ್ಲಿ ಬಿಸಿಲಿನ ಪ್ರಖರತೆಯಿಂದ ಬಳಲಿದರೆ, ಮಳೆಗಾಲ ಹಾಗೂ ಚಳಿಗಾಲದಲ್ಲಿ ಚಳಿ ಹಾಗೂ ಮಳೆಯ ಬಾಧೆಗೆ ಒಳಗಾಗುತ್ತಾರೆ. ಆದರೂ ತಮ್ಮ ಸ್ವಂತ ಸೂರಿನಲ್ಲಿ ಬದುಕುತ್ತಿದ್ದೇವೆ ಎಂಬ ನೆಮ್ಮದಿಯನ್ನು ಹೊಂದಿದವ ರಾಗಿದ್ದಾರೆ. ಆದರೆ ಕುಟುಂಬದ ಸದಸ್ಯರಿಗೆ ಸಾಕಾಗುವಂತಹ ಮನೆಯನ್ನು ಕಟ್ಟಿಸಲಿಕ್ಕಾಗಲೀ, ಮನೆಯ ದುರಸ್ತಿ ಕಾರ್ಯ ಮಾಡಲಿಕ್ಕಾಗಲೀ ಅವರಲ್ಲಿ ಹಣ ಇರುವುದಿಲ್ಲ. ಏಕೆಂದರೆ ಅವರ ದುಡಿಮೆ ಕೇವಲ ಹೊಟ್ಟೆ ಬಟ್ಟೆಗೆ ಮಾತ್ರ ಸಾಕಾಗುತ್ತಿದ್ದು ಮಿಕ್ಕೆಲ್ಲ ಅನುಕೂಲತೆಗಳನ್ನು ಮಾಡಿಕೊಡಲು ಸರ್ಕಾರದ ಸಹಾಯ ಹಸ್ತಕ್ಕಾಗಿ ಎದುರು ನೋಡುತ್ತಿದ್ದಾರೆ.

ಸುಮಾರು ೨೯ ಮನೆಗೆಲಸದ ಮಹಿಳೆಯರ ಕುಟುಂಬಗಳು ಗುಡಿಸಲುಗಳಲ್ಲಿ ವಾಸವಾಗಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿದು ಬಂದ ಸಂಗತಿಯಾಗಿದೆ. ಗುಡಿಸಲು ವಾಸ ಜನರಿಗೆ ಜೀವನದಲ್ಲಿ ಜಿಗುಪ್ಸೆಯನ್ನು ತಂದಿದೆಯಾದರೂ ಬದುಕುವ ಅನಿವಾರ್ಯತೆಯಿಂದ ದಿನ ನೂಕುತ್ತಿದ್ದಾರೆ. ರಭಸವಾಗಿ ಬೀಸುವ ಗಾಳಿ, ಮಳೆಯಿಂದಾಗಿ ಚಪ್ಪರ ಹಾರಿ ಹೋಗುವುದು, ನೀರಿನಲ್ಲಿ ಕೊಚ್ಚಿಹೋಗುವುದೂ ಸಾಮಾನ್ಯವಾಗಿ ಬಿಟ್ಟಿದೆ. ಇಂತಹ ಸಂದರ್ಭಗಳಲ್ಲಿ ಪರಿಚಯಸ್ಥರ ಮನೆಗಳಲ್ಲಿ ವಾಸ ಮಾಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಅಸಂಘಟಿತ ವಲಯಕ್ಕೆ ಸೆರಿದ ಮಹಿಳಾ ಮನೆಗೆಲಸಗಾರರು ದಿನವಿಡೀ ಕಷ್ಟಪಟ್ಟು ದುಡಿದರೂ ನೆಮ್ಮದಿಯಿಂದ ರಾತ್ರಿಯನ್ನು ಕಳೆಯುವ ಭಾಗ್ಯವನ್ನು ಪಡೆದಿರುವುದಿಲ್ಲ. ತಮ್ಮ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರದ ಹಾಗೂ ಚುನಾಯಿತ ಪ್ರತಿನಿಧಿಗಳ ಸಹಾಯಕ್ಕಾಗಿ ಪರಿತಪಿಸುತ್ತಿದ್ದಾರೆ.

ಕೇವಲ ೧೯ ಮಹಿಳೆಯರು ಪಕ್ಕಾ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಪಕ್ಕಾಮನೆ ಎಂದಾಕ್ಷಣ ಮಹಿಳೆಯರು ವೈಭೋಗದ ಜೀವನ ನಡೆಸುತ್ತಿದ್ದಾರೆ ಎಂದರ್ಥವೇನಲ್ಲ, ಆದರೆ ಮಳೆ ಚಳಿಗಳಿಂದ ರಕ್ಷಿಸಿಕೊಳ್ಳುವಂತಹ ಕಟ್ಟಡಗಳಲ್ಲಿ ವಾಸವಾಗಿದ್ದಾರೆ. ಅತೀ ಮಳೆ ಹಾಗೂ ಗಾಳಿಗೆ ತಮ್ಮ ಸೂರು ಹಾರಿಹೋಗುವ ಭಯಮಾತ್ರ ಅವರಿಗಿಲ್ಲ,

ಮನೆಯಲ್ಲಿ ಉಪಯೋಗಿಸುವ ವಸ್ತುಗಳು:

ಮನೆಯಲ್ಲಿ ಗೃಹಬಳಕೆಯ ವಸ್ತುಗಳು ಜನರ ಜೀವನಮಟ್ಟದ ಸೂಚಕವಾಗಿದೆ. ಅದರಂತೆಯೇ ೨೧೪ ಮಹಿಳೆಯರು ಮನೆಯಲ್ಲಿ ಕೇವಲ ಜೀವನಾವಶ್ಯಕ ವಸ್ತುಗಳನ್ನು ಹೊಂದಿದವರಾಗಿರುತ್ತಾರೆ. ಅವರು ಸೈಕಲ್ಲನ್ನು ಹೊರತುಪಡಿಸಿ ದ್ವಿಚಕ್ರ ವಾಹನವನ್ನು ಸಹ ಹೊಂದಿರುವುದಿಲ್ಲ. ಇಂಡಾಲಿಯಮ್ ಪಾತ್ರೆಗಳಲ್ಲಿ ಕಟ್ಟಿಗೆಯ ಒಲೆಯ ಮೇಲೆ ಅಡುಗೆ ಮಾಡುತ್ತಾರೆ. ಆದರೆ ದೂರದರ್ಶನವನ್ನು ಮಾತ್ರ ಇಂದು ಜನತೆ ದಿನಬಳಕೆಯ ಅತ್ಯವಶ್ಯಕ ಸರಕುಗಳ ಪಟ್ಟಿಗೆ ಸೇರಿಸಿಕೊಂಡಿದ್ದಾರೆ. ಆದರೆ ದೂರದರ್ಶನದಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದ ಮಾಹಿತಿಗಳ ಕುರಿತು ವೀಕ್ಷಿಸದೇ ಕೇವಲ ಮನೋರಂಜನಾತ್ಮಕ ಕಾರ್ಯಕ್ರಮಗಳನ್ನು ಮಾತ್ರ ವೀಕ್ಷಿಸುತ್ತಾರೆ. ದಿನವಿಡೀ ದುಡಿದು ಬಳಲಿದ ದೇಹಕ್ಕೆ ದೂರದರ್ಶನದ ಕಾರ್ಯಕ್ರಮಗಳಿಂದ ಸ್ವಲ್ಪ ಮನೋರಂಜನೆ ದೊರೆಯುತ್ತದೆ. ಸುಮಾರು ೩೦ರಷ್ಟು ಕುಟುಂಬಗಳು ಹಿತದಾಯಕ ಸರಕುಗಳನ್ನು ಮನೆಯಲ್ಲಿ ಹೊಂದಿದ್ದಾರೆ. ಅದರಲ್ಲಿ ಮುಖ್ಯವಾಗಿ ಗ್ಯಾಸ್, ಫ್ಯಾನ್, ಬಣ್ಣದ ದೂರದರ್ಶನ ಹಾಗೂ ಕುಕ್ಕರ್ ಮುಖ್ಯವಾಗಿದೆ. ಈ ವಸ್ತುಗಳನ್ನು ಪ್ರತೀ ತಿಂಗಳ ದುಡಿಮೆಯಲ್ಲಿ ಉಳಿತಾಯ ಮಾಡಿ ಖರೀದಿಸಿರುತ್ತಾರೆ.

ಆದರೆ ಐಶಾರಾಮಿ ವಸ್ತುಗಳನ್ನು (ಕಾರು, ಬಹುಮಹಡಿ ಕಟ್ಟಡ) ಮಾತ್ರ ಯಾವ ಮನೆಗೆಲಸಗಾರರೂ ಹೊಂದಿರುವುದಿಲ್ಲ. ಮಹಿಳೆಯರ ದುಡಿಮೆ ಹೊಟ್ಟೆಬಟ್ಟೆಗೆ ಮಾತ್ರ ಸಾಕಾಗುತ್ತದೆ. ದಿನಬಳಕೆಯ ವಸ್ತುಗಳನ್ನು ಹೊರತುಪಡಿಸಿ ಇನ್ನಿತರ ಸಾಮಗ್ರಿಗಳನ್ನು ಖರೀದಿಸಲು ಮಹಿಳೆಯರಿಗೆ ಸಾಧ್ಯವಾಗುತ್ತಿಲ್ಲ. ಹೀಗೆ ಹೊಸಪೇಟೆಯ ಮನೆಗೆಲಸದ ಮಹಿಳೆಯರ ಸ್ಥಿತಿಯಾಗಿದೆ. ಕೋಷ್ಟಕ ೪.೧೫ರಲ್ಲಿ ಮಹಿಳೆಯರ ಮನೆಯ ಒಡೆತನ, ಸ್ವರೂಪ ಹಾಗೂ ಬಳಕೆಯ ವಸ್ತುಗಳ ಮಾಹಿತಿಯನ್ನು ಕಾಣಬಹುದು.

ಕೋಷ್ಟಕ ೪.೧೫: ಮನೆಯ ಒಡೆತನ, ಸ್ವರೂಪ ಹಾಗೂ ವಸ್ತುಗಳ ಮಾಹಿತಿ

ಕ್ರ.ಸಂ	ವಿವರಗಳು	ಒಟ್ಟು	ಶೇಕಡಾ
೧	**ಮನೆಯ ಒಡೆತನ**		
	ಸ್ವಂತಮನೆ	೧೭೮	೭೧.೨೦
	ಬಾಡಿಗೆ ಮನೆ	೬೬	೨೬.೪೦
	ಸಾರ್ವಜನಿಕ ಮನೆ	೧	೦.೪೦
	ಇತರೆ	೫	೨.೦೦
	ಒಟ್ಟು	೨೫೦	೧೦೦.೦೦
೨	**ಮನೆಯ ಸ್ವರೂಪ**		
	ಕಚ್ಚಾಮನೆ	೨೦೨	೮೦.೮೦
	ಗುಡಿಸಲು	೨೯	೧೧.೬೦
	ಪಕ್ಕಾಮನೆ	೧೯	೭.೬೦
	ಒಟ್ಟು	೨೫೦	೧೦೦.೦೦
೩	**ಮನೆಯ ವಸ್ತುಗಳು**		
	ಅವಶ್ಯಕ ವಸ್ತುಗಳು	೨೧೪	೮೫.೬೦
	ಹಿತದಾಯಕ ವಸ್ತುಗಳು	೩೬	೧೪.೪೦
	ಐಶಾರಾಮಿ ವಸ್ತುಗಳು	೦	೦.೦೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೫ರ ಮಾಹಿತಿ (ದತ್ತಾಂಶಗಳ) ಪ್ರಕಾರ ಹೊಸಪೇಟೆಯಲ್ಲಿ ಸ್ವಂತಮನೆಯನ್ನು ಹೊಂದಿದವರ ಸಂಖ್ಯೆ ಅಧಿಕವಾಗಿದೆ. ಆದರೆ ಅವು ಕಚ್ಚಾ ಮನೆಗಳಾಗಿದ್ದು, ವಾಸ ಬಹಳ ಕಷ್ಟವಾಗಿದೆ. ಇನ್ನು ಹೊಸಪೇಟೆಯಲ್ಲಿ ಕೈಗಾರೀಕಿಕರಣದ ಪ್ರಭಾವದಿಂದ ಜನರು ವಲಸೆ ಬರುತ್ತಿದ್ದು, ಮನೆಗಳ ಬಾಡಿಗೆ ಗಗನಕ್ಕೇರಿದೆ. ಬಾಡಿಗೆ ಮನೆಯಲ್ಲಿ ವಾಸ ಮಾಡುವವರ ಜೀವನವೂ ಕಷ್ಟವಾಗಿದೆ. ತಮ್ಮ ಸಣ್ಣ ಆದಾಯದಲ್ಲಿ ಹೆಚ್ಚಿನ ಬಾಡಿಗೆ ಕೊಡಲಾರದೇ ಬಾಡಿಗೆದಾರರು ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಹೀಗೆ ಮೂಲಭೂತ ಅವಶ್ಯಕತೆಯಾದ ಮನೆಯ ಸಮಸ್ಯೆ ಮಹಿಳೆಯರನ್ನು ಕಾಡುತ್ತಿದೆ. ಇನ್ನು ಗುಡಿಸಲುಗಳಲ್ಲಿ ವಾಸಮಾಡುವ ಮಹಿಳೆಯರ ಬದುಕು ಬೀದಿಪಾಲಾಗಿದೆ. ಮನೆಯಲ್ಲಿ ಬಳಸುವ ವಸ್ತುಗಳ ವಿಷಯಕ್ಕೆ ಬಂದಾಗ ಅವಶ್ಯಕ ವಸ್ತುಗಳನ್ನು ಹೊಂದಿದ ಕುಟುಂಬಗಳು ಅಧಿಕ ಸಂಖ್ಯೆಯಲ್ಲಿವೆ. ತಮ್ಮ ದಿನಬಳಕೆಗಾಗಿ ಸೈಕಲ್ಲನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಪತಿಯ ಆದಾಯ ಕೊಂಚ ಅಧಿಕವಿರುವ ಕುಟುಂಬದ ಮಹಿಳೆಯರು ಬಣ್ಣದ ಟಿ.ವಿ. ಹಾಗು ಕುಕ್ಕರ್‌ಗಳನ್ನು ಮನೆಯಲ್ಲಿ ಬಳಸುತ್ತಿದ್ದಾರೆ.

ಮಹಿಳೆಯರು ಸಾಮಾನ್ಯವಾಗಿ ಉತ್ತಮ ಜೀವನ ನಡೆಸುವ ಆಕಾಂಕ್ಷೆ ಹೊಂದಿದವರಾಗಿದ್ದರೂ ಕುಟುಂಬದ ಆದಾಯ ಖರ್ಚುಗಳು ಸರಿಸಮವಾಗಿದ್ದಾಗ ಇತರೆ ಚಟುವಟಿಕೆಗಳಿಗೆ ಆಸ್ಪದ ಇರುವುದಿಲ್ಲ. ಕೇವಲ ಜೀವನೋಪಯೋಗಿ ವಸ್ತುಗಳ ಖರೀದಿ ಮಾಡಿ ಕಾರ್ಮಿಕರಾಗಿಯೇ ಜೀವನ ನಡೆಸುತ್ತಿದ್ದಾರೆ. ಆದಾಯ ಕಡಿಮೆಯಾಗಿ ಖರ್ಚು ಹೆಚ್ಚಾದಾಗ ಮಾತ್ರ ಸಂಕಷ್ಟ ಎದುರಿಸುತ್ತಿದ್ದಾರೆ.

೪.೧೬: ಕುಟುಂಬದ ಆದಾಯ ಮತ್ತು ವೆಚ್ಚದ ಮಾಹಿತಿ

ಆದಾಯ ಎಂದರೆ ವ್ಯಕ್ತಿಯು ತಾನು ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಪಡೆಯುವ ವೇತನ ಎನ್ನಬಹುದು. ಇದೇ ರೀತಿಯಾಗಿ ವೇತನ ಪಾವತಿಗಾಗಿ ಮಾಡುವ ದೈಹಿಕ ಅಥವಾ ಮಾನಸಿಕವಾದ ಕೆಲಸ ಶ್ರಮ ಎನ್ನಬಹುದು. ಸಾಮಾನ್ಯವಾಗಿ ಶ್ರಮಿಕರು ತಮ್ಮ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ವ್ಯಯ ಮಾಡಿ ಪಡೆಯುವುದು ಆದಾಯ ಎನಿಸಿಕೊಳ್ಳುತ್ತದೆ. ಇದು ಒಬ್ಬ ವ್ಯಕ್ತಿಯದಾಗಿದ್ದರೆ ವೈಯಕ್ತಿಕ ಆದಾಯವೆಂತಲೂ, ಕುಟುಂಬದ ಎಲ್ಲ ಸದಸ್ಯರ ಆದಾಯವಾಗಿದ್ದರೆ ಕೌಟುಂಬಿಕ ಆದಾಯವೆಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಶೈಕ್ಷಣಿಕ ಅರ್ಹತೆ ಹೊಂದಿದ ನೈಪುಣ್ಯತೆಯನ್ನು ಪಡೆದುಕೊಂಡ ಶ್ರಮಿಕರು ಉತ್ತಮ ಆದಾಯವನ್ನು ತಂದುಕೊಡುವ ಉದ್ಯೋಗಗಳಲ್ಲಿ ತೊಡಗಿದರೆ, ಅನಕ್ಷರಸ್ಥರೂ, ವೃತ್ತಿ ನೈಪುಣ್ಯತೆ ಹೊಂದದವರೂ ಕಡಿಮೆ ಆದಾಯವನ್ನು ತರುವ ಕೆಲಸಗಳಲ್ಲಿ ತೊಡಗಿದ್ದಾರೆ.

ಜೆನ್‌ಬ್ರೆಮೆನ್ (೧೯೯೯) ಅವರ ಗ್ರಂಥ 'ದಿ ಲೇಬರಿಂಗ್ ಪೂರ್ ಇನ್ ಇಂಡಿಯಾ'ದಲ್ಲಿ ಲೇಖಕರು ಮಾರುಕಟ್ಟೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಅಸ್ತಿತ್ವವನ್ನು ಕುರಿತು ವಿವರಣೆ ನೀಡಿದ್ದಾರೆ. ಔಪಚಾರಿಕ ವಲಯವು ಸರ್ಕಾರದ ಬಹುಶಿಸ್ತೀಯ ಚೌಕಟ್ಟಿಗೊಳಪಟ್ಟು ಹತ್ತು ಹಲವು ನಿಯಂತ್ರಣಗಳಿಂದ ಸುತ್ತುವರೆದಿದೆ. ಅನೌಪಚಾರಿಕ ವಲಯವು ಈ ಎಲ್ಲ ನಿರ್ಬಂಧಗಳಿಂದ ಹೊರಗುಳಿದಿದೆ. ಅದಕ್ಕಾಗಿಯೇ ೧೯೭೧ರಲ್ಲಿ ಕೀತ್‌ಹಾರ್ಟ್ ಅವರು ಈ ವಲಯವನ್ನು 'ಅನೌಪಚಾರಿಕ ವಲಯ' ಎಂದು ಕರೆದರು. ಔಪಚಾರಿಕ ವಲಯದ ಕಾರ್ಮಿಕರು ತಮ್ಮ ದುಡಿಮೆಯ ಸ್ಥಳದಲ್ಲಿ ಉತ್ತಮ ವಾತಾವರಣವನ್ನು ಹೊಂದಿರುತ್ತಾರೆ. ಅಲ್ಲದೇ ಗುಣಮಟ್ಟದ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ಆದರೆ ಅನೌಪಚಾರಿಕ ವಲಯದ ಕಾರ್ಮಿಕರು ಸರ್ಕಾರದ ಯಾವ ಕೃಪಕಟಾಕ್ಷವು ಇಲ್ಲದೇ ಬೆಂಬಲವಿಲ್ಲದೇ ದುಡಿಮೆಯಲ್ಲಿ ನಿರತರಾಗಿರುತ್ತಾರೆ. ಈ ವಲಯವು ಬೃಹತ್ ಪ್ರಮಾಣದಲ್ಲಿ ಬೆಳೆದಿರುವುದರಿಂದ ಸರ್ಕಾರದ ನಿಯಂತ್ರಣಕ್ಕೆ ಸಿಗುವುದಿಲ್ಲ.

ಇಪ್ಪತ್ತನೇ ಶತಮಾನದ ಮಧ್ಯ ಭಾಗದಲ್ಲಿ ಹಳ್ಳಿಯನ್ನು ತೊರೆದು ಪಟ್ಟಣಕ್ಕೆ ವಲಸೆ ಬಂದ ಜನ ಅದೃಷ್ಟವಂತರಾಗಿದ್ದರು. ಏಕೆಂದರೆ ಔಪಚಾರಿಕ ವಲಯದಲ್ಲಿ ಅವರಿಗೆ ಕೆಲಸ ಸಿಗದೇ ಹೋದರೂ ಅನೌಪಚಾರಿಕ ವಲಯದಲ್ಲಿ ನೆಲೆಯನ್ನು ಕಂಡುಕೊಂಡರು. ಕಾಲಕ್ರಮೇಣ ತಮ್ಮ ವೃತ್ತಿಯಲ್ಲಿ ನೈಪುಣ್ಯತೆ ಯನ್ನು ಹೆಚ್ಚಿಸಿಕೊಂಡರಲ್ಲದೇ, ವೃತ್ತಿಯಲ್ಲಿ ಮೇಲ್ದರ್ಜೆಗೇರಲು ಪ್ರಯತ್ನಿಸಿದರು. ಇದು ಅವರಲ್ಲಿ ಮೂಡಿಬಂದ ಹೋರಾಟ ಮನೋಭಾವವನ್ನು ಹಾಗೂ ಚೌಕಾಶಿ ಶಕ್ತಿಯನ್ನು ತೋರ್ಪಡಿಸುತ್ತದೆ. ಸಂಘಟಿತ ವಲಯದ ಕಾರ್ಮಿಕರಿಗೆ ನಿಗಧಿಪಡಿಸಿದ ಕನಿಷ್ಠ ವಿದ್ಯಾರ್ಹತೆ ಮಟ್ಟವನ್ನು ಅನೌಪಚಾರಿಕ ವಲಯದ ಕಾರ್ಮಿಕರು ತಲುಪದೇ ಇರುವುದು ಅವರ ಸ್ಥಿತಿಗತಿಗೆ ಕಾರಣವಾಗಿದೆ. ಇಲ್ಲಿನ ಕಾರ್ಮಿಕರು ಕೇವಲ ಅನುಭವದ ಮೂಲಕ ಉತ್ಪಾದನೆಯಲ್ಲಿ ನೈಪುಣ್ಯತೆಯನ್ನು ಪಡೆಯಬೇಕು. ಈ ನ್ಯೂನ್ಯತೆಯೇ ಕಾರ್ಮಿಕರನ್ನು ಕಡಿಮೆ ವೇತನ ಪಡೆಯುವ ಅಸಂಘಟಿತ ವಲಯಕ್ಕೆ ತಳ್ಳುತ್ತದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಅಧಿಕ ಮಹಿಳೆಯರು ಅಸಂಘಟಿತ ವಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ (ಶೇ. ೯೦ಕ್ಕಿಂತ ಅಧಿಕ). ಮಹಿಳೆಯರು ತಮ್ಮ ಕುಟುಂಬವನ್ನು ಸಲಹಲು ಉದ್ಯೋಗದಲ್ಲಿ ತೊಡಗುತ್ತಾರೆ. ಆದರೆ ಔಪಚಾರಿಕ ವಲಯವು ಅಪೇಕ್ಷಿಸುವ ವಿದ್ಯಾರ್ಹತೆಯನ್ನು ಕುಶಲತೆಯನ್ನು ಅಧಿಕ ಸಂಖ್ಯೆಯ ಮಹಿಳೆಯರು ಪಡೆದಿರುವುದಿಲ್ಲವಾದ್ದರಿಂದ ಕಡಿಮೆ ಕೂಲಿ ಹಾಗೂ ವೃತ್ತಿ ಸುರಕ್ಷತೆ ಇಲ್ಲದ ಅಸಂಘಟಿತ ವಲಯದ ಕೆಲಸವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಆರ್ಥಿಕತೆಯಲ್ಲಿ ಕೈಗಾರಿಕೀಕರಣ ಹಾಗೂ ಆಧುನೀಕರಣವನ್ನು ಅಳವಡಿಸಿಕೊಂಡ ಫಲವಾಗಿ ಗ್ರಾಮಗಳಲ್ಲಿ ಅನೇಕ ಮಹಿಳೆಯರಿಗೆ ತಮ್ಮ ಸಾಂಪ್ರದಾಯಿಕ ವೃತ್ತಿಯಲ್ಲಿ ಹಿನ್ನಡೆಯಾಯಿತು. ಅಲ್ಲದೇ ಕೃಷಿಯಿಂದಲೂ ಅವರು ಹೊರದೂಡಲ್ಪಟ್ಟರು. ಹೀಗೆ ಅನೇಕ ಮಹಿಳೆಯರು ಉದ್ಯೋಗವನ್ನರಸಿ ಪಟ್ಟಣಕ್ಕೆ ಬಂದು ಪಟ್ಟಣದಲ್ಲಿ ಸಿಗುವ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿದ್ದಾರೆ. ಇತ್ತೀಚೆಗೆ ಶ್ರೀಮಂತ ಹಾಗೂ ಮಧ್ಯಮ ವರ್ಗದ ಮಹಿಳೆಯರು ಮನೆಗೆಲಸದ ದುಡಿಮೆಗಾರರನ್ನು ನೇಮಿಸಿಕೊಳ್ಳುವುದು ಸಾಮಾನ್ಯವಾಗಿದೆ. ಹೊಸಪೇಟೆಯಲ್ಲಿಯೂ ಕೂಡ ಕಾರ್ಖಾನೆಗಳು ಸ್ಥಾಪಿತವಾದ್ದರಿಂದ ಹಾಗೂ ಗಣಿಗಾರಿಕೆಯಿಂದ ಜನರ ಜೀವನಮಟ್ಟದಲ್ಲಿ ಸುಧಾರಣೆಯಾಗಿರುವುದರಿಂದ ತಮ್ಮ ಮನೆಯ ಕೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಂಡಿದ್ದಾರೆ. ಮಹಿಳಾ ಮನೆಗೆಲಸಗಾರರು ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ನಿವಾರಿಸಲು ಹಾಗೂ ತಮ್ಮ ಪತಿಯ ಆದಾಯಕ್ಕೆ ಬೆಂಬಲವಾಗಿ ನಿಲ್ಲಲು ಈ ದುಡಿಮೆಯನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಒಂದು ಮನೆಯ ಕೆಲಸದಿಂದ ಮನೆಯ ಹಣಕಾಸಿನ ಸಮಸ್ಯೆ ಪರಿಹಾರ ಕಾಣದಾದಾಗ ಅನೇಕ ಮನೆಗಳ ಕೆಲಸವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಮಹಿಳೆಯರ ಕೌಟುಂಬಿಕ ಆದಾಯ ಮತ್ತು ವೆಚ್ಚಗಳ ಮಾಹಿತಿಯನ್ನು ಸಂಗ್ರಹಿಸಲಾಯಿತು. ಕೋಷ್ಟಕ ೪.೧೬ರಲ್ಲಿ ಮಹಿಳೆಯರ ಮಾಸಿಕ ಆದಾಯ ಹಾಗೂ ವೆಚ್ಚದ ಮಾಹಿತಿಯನ್ನು ನಮೂದಿಸಲಾಗಿದೆ.

ಕೋಷ್ಟಕ ೪.೧೬: ಮಹಿಳೆಯರ ಆದಾಯ ಮತ್ತು ವೆಚ್ಚದ ಮಾಹಿತಿ

ಕ್ರಸಂ.	ವಿವರಣೆ	ಒಟ್ಟು ಕುಟುಂಬಗಳು	ಶೇಕಡ
೧	**ಕುಟುಂಬದ ಆದಾಯ**		
	೫೦೦ ರಿಂದ ೧೦೦೦ ರೂಪಾಯಿಗಳು	೧೪	೫.೬೦೦
	೧೦೦೦ ರಿಂದ ೨೦೦೦ ರೂಪಾಯಿಗಳು	೫೧	೨೦.೪೦೦
	೨೦೦೦ ರಿಂದ ೩೦೦೦ ರೂಪಾಯಿಗಳು	೫೯	೨೩.೬೦೦
	೩೦೦೦ ಕ್ಕೂ ಅಧಿಕ	೧೨೬	೫೦.೪೦೦
	ಒಟ್ಟು	೨೫೦	೧೦೦.೦೦೦
೨	**ಕುಟುಂಬದ ಖರ್ಚು**		
	೫೦೦ ರಿಂದ ೧೦೦೦ ರೂಪಾಯಿಗಳು	೧೫	೬.೦೦೦
	೧೦೦೦ ರಿಂದ ೨೦೦೦ ರೂಪಾಯಿಗಳು	೭೦	೨೮.೦೦೦
	೨೦೦೦ ರಿಂದ ೩೦೦೦ ರೂಪಾಯಿಗಳು	೮೬	೩೪.೦೪೦
	೩೦೦೦ ಕ್ಕೂ ಅಧಿಕ	೭೯	೩೧.೦೬೦
	ಒಟ್ಟು	೨೫೦	೧೦೦.೦೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ


ಕೋಷ್ಟಕ ೪.೧೬ರಲ್ಲಿ ದಾಖಲಿಸಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೫೦೦ ರಿಂದ ೧೦೦೦ ರೂ. ಕೌಟುಂಬಿಕ ಆದಾಯವನ್ನು ಪಡೆಯುವ ಸುಮಾರು ೧೪ ಕುಟುಂಬಗಳಿವೆ. ಈ ಆದಾಯ ಮಟ್ಟವು ಬಹಳ ಕಡಿಮೆಯಾಗಿದ್ದು ಕಾರಣವನ್ನು ಕೇಳಿದಾಗ ಮಹಿಳೆಯರು ಒಬ್ಬಂಟಿಯಾಗಿ ಜೀವನ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಇದರಲ್ಲಿ ವಿಧವೆಯರೂ, ಪರಿತ್ಯಕ್ತೆಯರೂ ಹಾಗೂ ಮಕ್ಕಳಿಂದ ದೂರವಾದವರೂ ಇದ್ದಾರೆ. ಇನ್ನು ೧೦೦೦ರಿಂದ ೨೦೦೦ ಮಾಸಿಕ ಆದಾಯವನ್ನು ಪಡೆಯುವ ೫೧ ಕುಟುಂಬಗಳಿವೆ. ಅಲ್ಲದೇ ಕೌಟುಂಬಿಕ ಆದಾಯ ೨೦೦೦ರಿಂದ ೩೦೦೦ ದವರೆಗೆ ಇರುವ ೫೯ ಕುಟುಂಬದವರಿದ್ದಾರೆ. ೩೦೦೦ ರೂಪಾಯಿಗಳಿಗೂ ಅಧಿಕ ಆದಾಯವನ್ನು ಪಡೆಯುವ ಸುಮಾರು ೧೭೯ ಕಟುಂಬಗಳಿವೆ. ಕುಟುಂಬದ ಆದಾಯವು ಮನೆಗೆಲಸದ ಮಹಿಳೆಯರ ಆದಾಯದ ಜೊತೆ, ಆಕೆಯ ಗಂಡನ, ಮಕ್ಕಳ ಹಾಗೂ ಕುಟುಂಬದ ಸದಸ್ಯರ ಆದಾಯವನ್ನು ಒಳಗೊಂಡಿರುತ್ತದೆ. ಇದರಲ್ಲಿ ಮಹಿಳೆ ಪಡೆಯುವ ಇತರೇ ಆದಾಯವೂ (ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ ಹಾಗೂ ಇತರೆ ಉದ್ಯೋಗಗಳಿಂದ ಪಡೆಯುವ ಆದಾಯ) ಸೇರಿದೆ. ಒಟ್ಟಾರೆಯಾಗಿ ೩೦೦೦ ರೂ.ಗಳಿಗಿಂತ ಅಧಿಕ ಆದಾಯವನ್ನು ಪಡೆಯುವ ಕುಟುಂಬಗಳು ಅಧಿಕ ಸಂಖ್ಯೆಯಲ್ಲಿವೆ. ಇದಕ್ಕೆ ಕಾರಣ ಕುಟುಂಬದಲ್ಲಿ ದುಡಿಯುವ ವ್ಯಕ್ತಿಗಳು ಅಧಿಕ ಸಂಖ್ಯೆಯಲ್ಲಿರುವುದು ಗಮನಕ್ಕೆ ಬಂದಿರುತ್ತದೆ.

ಮಹಿಳೆಯರ ಕೌಟುಂಬಿಕ ಖರ್ಚಿನ ವಿವರವು ಈ ಅಂಶಗಳನ್ನೊಳಗೊಂಡಿರುತ್ತದೆ. ಮಕ್ಕಳ ಶಿಕ್ಷಣ, ವೈದ್ಯಕೀಯ ಖರ್ಚು, ಬಟ್ಟೆ, ರೇಷನ್ ಮನೋರಂಜನೆ ಹಾಗೂ ಇತರೆ ಖರ್ಚುಗಳನ್ನೊಳ ಗೊಂಡಿರುತ್ತದೆ. ಸರ್ಕಾರಿ ಶಾಲೆಗೆ ಮಕ್ಕಳನ್ನು ಕಳಿಸುತ್ತಿರುವ ಮಹಿಳೆಯರು ಮಕ್ಕಳ ಖರ್ಚನ್ನು ಅಷ್ಟಾಗಿ ದಾಖಲಿಸಿರುವುದಿಲ್ಲ. ಹಾಗೂ ನ್ಯಾಯಬೆಲೆ ಅಂಗಡಿಗಳಲ್ಲಿ ರೇಷನ್ ತರುವ ಮಹಿಳೆಯರ ಮಾಸಿಕ ಖರ್ಚು ಕಡಿಮೆ ಇರುವುದಾಗಿ ತಿಳಿದುಬಂದಿದೆ. ಆದರೆ ಖಾಸಗಿ ಶಾಲೆಗೆ ಮಕ್ಕಳನ್ನು ಕಳಿಸುವವರ ಮಕ್ಕಳ ಶಿಕ್ಷಣದ ಖರ್ಚು ಅಧಿಕವಾಗಿರುತ್ತದೆ. ಅದರಂತೆಯೇ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವವರ ವೈದ್ಯಕೀಯ ಖರ್ಚಿನ ಪ್ರಮಾಣ ಕಡಿಮೆ ಇರುತ್ತದೆ. ಆದರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುವ ಮಹಿಳೆಯರ ಮಾಸಿಕ ವೈದ್ಯಕೀಯ ಖರ್ಚು ಅಧಿಕವಿರುವುದಾಗಿ ತಿಳಿದುಬಂದಿದೆ. ಅಧಿಕ ಸಂಖ್ಯೆಯ ಮಹಿಳೆಯರು ಮನೋರಂಜನೆಗಾಗಿ ಖರ್ಚು ಮಾಡುತ್ತಿಲ್ಲ. ಕೆಲವು ಮಹಿಳೆಯರು ಚಹಾವನ್ನು ಹೋಟೆಲ್‌ನಿಂದ ತರಿಸುತ್ತಾರೆ. ಅದಕ್ಕಾಗಿ ಬೇಕಾಗುವ ಹಾಲನ್ನು ಖರೀದಿಸುವುದಿಲ್ಲ. ತರಕಾರಿಯ ಬೆಲೆ ಗಗನಕ್ಕೇರಿರುವುದರಿಂದ ತರಕಾರಿ ಕೊಳ್ಳುವವರ ಸಂಖ್ಯೆಯೂ ಕಡಿಮೆ ಇರುತ್ತದೆ. ಹೀಗೆ ತಮ್ಮ ಕುಟುಂಬದ ಆದಾಯ ಎಷ್ಟಿದೆ ಎಂಬುದನ್ನು ಗಮನಿಸಿ ಹಿತಮಿತವಾಗಿ ಖರ್ಚನ್ನು ಮಾಡುವವರಾಗಿದ್ದಾರೆ.

ಕೋಷ್ಟಕ ೪.೧೬ರಲ್ಲಿ ದಾಖಲಿಸಿರುವ ಅಂಕಿಅಂಶಗಳನ್ನು ಗಮನಿಸಿದಾಗ ಮಾಸಿಕ ಖರ್ಚು ೫೦೦ರಿಂದ ೧೦೦೦ ರೂ. ಇರುವ ೧೫ ಕುಟುಂಬಗಳಿವೆ. ೧೦೦೦ ರೂ.ಯಿಂದ ೨೦೦೦ ರೂ. ಖರ್ಚನ್ನು ಮಾಡುವ ೭೦ ಕುಟುಂಬ ಘಟಕಗಳಿವೆ ೨೦೦೦ ದಿಂದ ೩೦೦೦ ರೂ.ಗಳ ವರೆಗೆ ಖರ್ಚನ್ನು

ಹೊಂದಿದ ೮೬ ಕುಟುಂಬಗಳಿವೆ. ಹಾಗೂ ೩೦೦೦ಕ್ಕು ಅಧಿಕ ಕೌಟುಂಬಿಕ ಖರ್ಚನ್ನು ಹೊಂದಿದ ೭೯ ಕುಟುಂಬಗಳಿವೆ. ಸಣ್ಣ ಕುಟುಂಬಗಳಲ್ಲಿ ಸಾಮಾನ್ಯವಾಗಿ ಖರ್ಚಿನ ಪ್ರಮಾಣ ಕಡಿಮೆ ಇರುತ್ತದೆ. ದೊಡ್ಡ ಕುಟುಂಬದಲ್ಲಿ ಮಾಸಿಕ ಖರ್ಚು ಅಧಿಕವಿರುತ್ತದೆ. ಇನ್ನು ಕೌಟುಂಬಿಕ ಆದಾಯ ಕಡಿಮೆ ಇದ್ದು ವೆಚ್ಚ ಅಧಿಕವಿರುವ ಮನೆಗೆಲಸದ ಮಹಿಳೆಯರನ್ನು ಕುಟುಂಬದ ವೆಚ್ಚವನ್ನು ನಿರ್ವಹಿಸುವ ಬಗೆಯನ್ನು ವಿಚಾರಿಸಲಾಯಿತು. ಅವರು ಬಿ.ಪಿ.ಎಲ್ ಕಾರ್ಡನ್ನು ಹೊಂದಿದವರಾಗಿದ್ದು ನ್ಯಾಯಬೆಲೆ ಅಂಗಡಿಗಳಲ್ಲಿ ಸಿಗುವ ಗೋಧಿ, ಅಕ್ಕಿ, ಸಕ್ಕರೆ ಸೀಮೆಎಣ್ಣೆ ಹಾಗೂ ಪಾಮ್ ಆಯಿಲ್ ಮುಂತಾದ ಜೀವನಾವಶ್ಯಕ ಸಾಮಾಗ್ರಿಗಳನ್ನು ಕನಿಷ್ಠ ಬೆಲೆಯಲ್ಲಿ ತಂದು ಜೀವನ ನಡೆಸುತ್ತಿದ್ದಾರೆ. ಹೆಚ್ಚಿನ ಖರ್ಚಿಗೆ ತಮ್ಮ ದುಡಿಮೆಯ ಹಣವನ್ನು ಉಪಯೋಗಿಸುತ್ತಿದ್ದಾರೆ. ಆದಾಯ ಅಧಿಕವಿದ್ದರೂ ಸಂಕಷ್ಟಗಳನ್ನೆ ದುರಿಸುತ್ತಿರುವ ಮಹಿಳೆಯರು ತಮ್ಮ ಸ್ಥಿತಿಗೆ ತಮ್ಮ ಪತಿಯ ದುರಭ್ಯಾಸಗಳೇ ಕಾರಣ ಎಂದು ಉತ್ತರಿಸಿದ್ದಾರೆ. ಇಂತಹ ಮಹಿಳೆಯರು ಮನೆಯ ಖರ್ಚನ್ನು ನಿಭಾಯಿಸಲು ಹೂ ಕಟ್ಟುವಂತಹ ಉಪ ಕಸುಬುಗಳಲ್ಲಿ ತೊಡಗಿದ್ದಾರೆ. ಹಾಗೂ ಕೆಲವು ಮಹಿಳೆಯರು ಬಟ್ಟೆ ಹೊಲಿಯುವುದನ್ನು ಕರಗತ ಮಾಡಿಕೊಂಡಿದ್ದಾರೆ. ಹೀಗೆ ತಮ್ಮ ದುಡಿಮೆಯಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಕೆಳಗಿನ ರೇಖಾಚಿತ್ರದಲ್ಲಿ ಮನೆಗೆಲಸದ ಮಹಿಳೆಯರ ಆದಾಯ - ಖರ್ಚುಗಳ ವ್ಯತ್ಯಾಸವನ್ನು ತಿಳಿಯಬಹುದು.

ದ್ವಿಸ್ತಂಭ ರೇಖಾಚಿತ್ರ: ಮನೆಗೆಲಸದ ಮಹಿಳೆಯರ ಆದಾಯ - ಖರ್ಚುಗಳ ವ್ಯತ್ಯಾಸ ವಿವರ



ಮೇಲಿನ ದ್ವಿಸ್ತಂಭ ರೇಖಾಚಿತ್ರದಲ್ಲಿ ತೋರಿಸಿದಂತೆ ox ಅಕ್ಷದಲ್ಲಿ ಕುಟುಂಬಗಳ ಮಾಸಿಕ ಆದಾಯ ಮಟ್ಟವನ್ನು oy ಅಕ್ಷದಲ್ಲಿ ಕುಟುಂಬಗಳ ಸಂಖ್ಯೆಯನ್ನು ಕೊಡಲಾಗಿದೆ. ೫೦೦ರಿಂದ ೧೦೦೦ ರೂ. ಆದಾಯವನ್ನು ಪಡೆದ ಕುಟುಂಬಗಳು ೧೪ ಇದ್ದರೆ, ಇಷ್ಟೇ ಪ್ರಮಾಣದ ವೆಚ್ಚವನ್ನು ಮಾಡುವ ೧೫ ಕುಟುಂಬಗಳು ೧೫ ಕುಟುಂಬ ಘಟಕಗಳಿವೆ. ಮಾಸಿಕ ೧೦೦೦ ರೂ.ಗಳಿಂದ ೨೦೦೦ ರೂ.ಗಳ ಆದಾಯವನ್ನು ಹೊಂದಿದ ೫೧ ಕುಟುಂಬಗಳಿದ್ದರೆ. ಇಷ್ಟೇ ಪ್ರಮಾಣದ ವೆಚ್ಚವನ್ನು ಮಾಡುವ ೭೦ ಕುಟುಂಬಗಳಿವೆ. ೨೦೦೦ ರೂಗಳಿಂದ ೩೦೦೦ ರೂ. ಮಾಸಿಕ ಆದಾಯವನ್ನು ಹೊಂದಿದ ೫೯

ಕುಟುಂಬ ಘಟಕಗಳಿದ್ದರೆ, ಇದೇ ಮಟ್ಟದ ಖರ್ಚನ್ನು ಹೊಂದಿದ ೮೬ ಕುಟುಂಬಗಳು ಇವೆ.ಮೂರು ಸಾವಿರಕ್ಕೂ ಅಧಿಕ ಆದಾಯವನ್ನು ಹೊಂದಿದ ೧೨೯ ಕುಟುಂಬಗಳು ಇದ್ದರೆ, ಇದೇ ಪ್ರಮಾಣದ ವೆಚ್ಚವನ್ನು ಹೊಂದಿದ ೭೯ ಕುಟುಂಬ ಘಟಕಗಳಿರುವುದು ಸಮೀಕ್ಷೆಯ ಸಮಯದಲ್ಲಿ ತಿಳಿದು ಬಂದಿರುವ ಮಾಹಿತಿಯಾಗಿದೆ.

೪.೧೬: ಮನೆಗೆಲಸದ ದುಡಿಮೆಗಾರರ ಉಳಿತಾಯ ಹಾಗೂ ಸಾಲದ ಮಾಹಿತಿ

ಮಹಿಳೆಯರು ಆರ್ಥಿಕವಾಗಿ ಯಾವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ? ತಮ್ಮ ಉದ್ಯೋಗದಲ್ಲಿ ಅವರು ನೆಮ್ಮದಿಯನ್ನು ಹೊಂದಿರುವರೋ ಹೇಗೆ? ಎಂಬುದನ್ನು ಅಧ್ಯಯನ ಮಾಡುವುದಕ್ಕಾಗಿ ಮಹಿಳಾ ಮನೆಗೆಲಸಗಾರರ ಉಳಿತಾಯ ಹಾಗೂ ಸಾಲದ ಕುರಿತಾದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಉಳಿತಾಯದ ಮಾಹಿತಿಗಾಗಿ ಮಹಿಳೆಯರಿಗೂ ಉಳಿತಾಯದ ಹವ್ಯಾಸ ಇರುವುದೋ ಇಲ್ಲವೋ? ಇದ್ದರೆ ಯಾವ ರೀತಿಯಲ್ಲಿ ಉಳಿತಾಯ ಮಾಡುತ್ತಿರುವಿರಿ ಎಂದು ಪ್ರಶ್ನಿಸಿದಾಗ ಮಹಿಳೆಯರು ತಮ್ಮ ಹಣವನ್ನು ಚೀಟಿ, ಎಲ್.ಐ.ಸಿ. ಬ್ಯಾಂಕ್, ಪಿಗ್ಮಿ ಹಾಗೂ ಅಂಚೆ ಕಛೇರಿಗಳ ಉಳಿತಾಯ ಖಾತೆಯಲ್ಲಿ ತೊಡಗಿಸಿರುವುದಾಗಿ ತಿಳಿಸಿರುತ್ತಾರೆ.

ಕೆಲವು ಮಹಿಳೆಯರಿಗೆ ಉಳಿತಾಯದ ಹವ್ಯಾಸ ಇರುವುದಾಗಿ ತಿಳಿದು ಬಂದಿದೆ. ಉಳಿತಾಯ ಎಂದರೆ ಅನುಭೋಗದ ಮೇಲೆ ವ್ಯಯ ಮಾಡಿಲ್ಲದ ಆದಾಯದ ಒಂದು ಭಾಗ. ಅಂದರೆ ಅನುಭೋಗ ಕ್ಕಿಂತಲೂ ಅಧಿಕವಿರುವ ಆದಾಯ ಉಳಿತಾಯವಾಗಿರುತ್ತದೆ. ಉಳಿತಾಯವು, ಉಳಿತಾಯ ಮಾಡುವ ಮನಸ್ಸು ಮತ್ತು ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಜನರ ಆದಾಯವು ಹೆಚ್ಚಿದಾಗ ಅವರ ಉಳಿತಾಯದ ಸಾಮರ್ಥ್ಯ ಹೆಚ್ಚುತ್ತದೆ. ಕೆಲವರು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಉಳಿತಾಯ ಮಾಡಿದರೆ, ಇನ್ನು ಕೆಲವರು ಭವಿಷ್ಯದಲ್ಲಿ ಎದುರಾಗಬಹುದಾದ ಅನಿಶ್ಚಿತತೆಗಳನ್ನು ಎದುರಿಸಲು ಉಳಿತಾಯ ಮಾಡುತ್ತಾರೆ. ಇನ್ನು ಕೆಲವರು ಕೌಟುಂಬಿಕ ಪ್ರೇಮದಿಂದ ಉಳಿತಾಯದ ಹವ್ಯಾಸ ಬೆಳೆಸಿಕೊಂಡಿರುತ್ತಾರೆ. ಒಟ್ಟಿನಲ್ಲಿ ಉಳಿತಾಯ ಎಂದರೆ ಸದ್ಯದ ಅನುಭೋಗದ ತ್ಯಾಗ ಎಂದೇ ಹೇಳಬಹುದು.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ಅನುಭೋಗಕ್ಕಾಗಿ ಮಿಕ್ಕಿದ ಹಣವನ್ನು ಉಳಿತಾಯ ಮಾಡುವ ಹವ್ಯಾಸವುಳ್ಳವರಾಗಿದ್ದಾರೆ. ತಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ಮದುವೆಯ ಖರ್ಚಿಗಾಗಿ ಹಣವನ್ನು ಉಳಿತಾಯ ಮಾಡಿದ್ದಾರೆ. ತಮ್ಮ ಹಣಕ್ಕೆ ಸರಳ ಬಡ್ಡಿಯನ್ನು ಪಡೆಯುತ್ತಿದ್ದಾರೆ. ಆದರೆ ಬಡ್ಡಿಯಾಸೆಯಿಂದ ಉಳಿತಾಯ ಮಾಡುವಷ್ಟು ಹಣ ತಮ್ಮಲ್ಲಿರದ ಕಾರಣ ಕೇವಲ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಉಳಿತಾಯ ಮಾಡುತ್ತಿದ್ದಾರೆ. ಕೆಲವು ಮಹಿಳೆಯರು ಅಗ್ರಿಗೋಲ್ಡನಲ್ಲಿ ಹಣ ತೊಡಗಿಸಿರುತ್ತಾರೆ. ಇನ್ನು ಕೆಲವರು ಹತ್ತಿರದ ಮನೆಗಳಲ್ಲಿ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಚೀಟಿಯನ್ನು ಕಟ್ಟುತ್ತಿದ್ದಾರೆ. ಕೆಲಮಟ್ಟಿನ ವಿದ್ಯಾಭ್ಯಾಸ ಮಾಡಿದವರು ಬ್ಯಾಂಕ್ ಹಾಗೂ ಎಲ್.ಐ.ಸಿ ಆಫೀಸ್‌ನ ಉಳಿತಾಯ ಖಾತೆಯಲ್ಲಿ ಹಣ ತೊಡಗಿಸಿರುತ್ತಾರೆ. ಹೀಗೆ ಅಸಂಘಟಿತ ವಲಯದ ದುಡಿಮೆಗಾರರೂ ಕೂಡ ತಮ್ಮ ಕಡಿಮೆ ಆದಾಯವನ್ನೇ ಉಳಿತಾಯ ಮಾಡುತ್ತಿದ್ದಾರೆ. ಪ್ರಿಯಾಂಕ ಶರ್ಮಾ (೨೦೦೮) ಅವರ ಅಭಿಪ್ರಾಯದಲ್ಲಿ ಶೇ. ೮೫ರಷ್ಟು ಉಳಿತಾಯವು ಅಸಂಘಟಿತ ವಲಯದಿಂದ ಬರುತ್ತದೆ ಎಂಬುದಾಗಿದೆ.

ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ಕೇವಲ ೮೯ ಮಹಿಳೆಯರು ಉಳಿತಾಯದ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಇನ್ನು ೧೬೧ ಮಹಿಳೆಯರ ದುಡಿಮೆ ಹಣ ಕೇವಲ ದಿನದ ಖರ್ಚಿಗೆ ಸಾಕಾಗುತ್ತಿದ್ದು ಉಳಿತಾಯ ಮಾಡಲಿಕ್ಕೆ ಹಣ ಇರುವುದಿಲ್ಲ. ಏನೇ ಆದರೂ ಹೊಟ್ಟೆಪಾಡಿಗಾಗಿ ಕೆಳದರ್ಜೆಯ ದುಡಿಮೆಯಲ್ಲಿ ತೊಡಗಿದ ಮಹಿಳೆಯರೂ ಕೂಡ ಉಳಿತಾಯದ ಹವ್ಯಾಸ ಬೆಳೆಸಿಕೊಂಡಿರುವುದು ಉತ್ತಮ ಬೆಳವಣಿಗೆ ಎಂದೇ ಹೇಳಬಹುದು.

ಆರ್ಥಿಕ ಸ್ಥಿತಿಗತಿಯ ವಿಶ್ಲೇಷಣೆಗಾಗಿ ಮಹಿಳೆಯರು ಮಾಡಿದ ಸಾಲದ ಮಾಹಿತಿಯನ್ನು ಪಡೆಯಲಾಯಿತು. ಸಾಲವನ್ನು ಪಡೆದಿರುವರೋ ಇಲ್ಲವೋ, ಸಾಲ ಪಡೆದಿದ್ದರೆ ಎಷ್ಟು ಬಡ್ಡಿಯನ್ನು ಕಟ್ಟುತ್ತಿದ್ದಾರೆ? ಸಾಲ ಮಾಡಲು ಕಾರಣವೇನು? ಹಾಗೂ ಯಾವ ಮೂಲದಿಂದ ಸಾಲ ಪಡೆದಿದ್ದಾರೆ? ಸಾಲವನ್ನು ಹಿಂತಿರುಗಿಸುವ ಬಗೆ ಹೇಗೆ? ಎಂದು ಪ್ರಶ್ನಿಸುವುದರ ಮೂಲಕ ಮಹಿಳೆಯರ ಜೀವನ ಮಟ್ಟವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೯೩ ಮಹಿಳೆಯರು ವಿವಿಧ ಕಾರಣಗಳಿಂದಾಗಿ ಸಾಲ ಪಡೆದಿರುತ್ತಾರೆ. ಉಳಿದ ೧೫೭ ಮಹಿಳೆಯರು ಯಾವ ರೀತಿಯ ಸಾಲವನ್ನು ಪಡೆದಿರುವುದಿಲ್ಲ. ಮನೆಯ ಅಗತ್ಯತೆಗಳಿಗೆ ಹಣದ ಅವಶ್ಯಕತೆ ಇದ್ದರು ಅಧಿಕ ಬಡ್ಡಿ ದರದ ಭಯದಿಂದ ಸಾಲ ಮಾಡಿರುವುದಿಲ್ಲ. ಹೀಗೆ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರು ಹಣಕಾಸಿನ ತೊಂದರೆಯನ್ನು ಎದುರಿಸುತ್ತಿದ್ದಾರೆ. ಇವರು ಸಾಲ ಪಡೆಯಲು ಖಾತ್ರಿಯ ಅವಶ್ಯಕತೆ ಇರುವ ಕಾರಣ ಬ್ಯಾಂಕು ಮುಂತಾದ ಹಣಕಾಸು ಸಂಸ್ಥೆಗಳು ಸಾಲ ನೀಡಲು ಹಿಂದೇಟು ಹಾಕುತ್ತಿವೆ. ಜೆನ್ ಬ್ರೆಮೆನ್ (೧೯೯೯) ಅವರು ತಮ್ಮ ಕೃತಿ 'ದಿ ವರ್ಲ್ಡ್ ಆಫ್ ಇಂಡಿಯನ್ ಇಂಡಸ್ಟ್ರಿಯಲ್ ಲೇಬರ್' ನಲ್ಲಿ ಇದೇ ರೀತಿ ಅಭಿಪ್ರಾಯ ಪಡುತ್ತಾರೆ. ಭಾರತದ ಆರ್ಥಿಕತೆಯಲ್ಲಿ ಕೈಗಾರಿಕೀಕರಣ ಎಂದರೆ ಉತ್ಪಾದನೆಯಲ್ಲಿ ಆಧುನೀಕರಣ ಹಾಗೂ ಕಾರ್ಮಿಕರಿಗೆ ಸ್ವಾತಂತ್ರ್ಯ ಎಂದು ಭಾವಿಸಲಾಗಿದ್ದಿತು. ಆದರೆ ಈ ಘಟನೆ ಸಂಭವಿಸಲಿಲ್ಲ. ಇದರ ಬದಲಾಗಿ ಕಾರ್ಮಿಕರನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಕಟ್ಟಿ ಹಾಕಲಾಯಿತು. ದುಡಿಮೆಗಾರರು ಸಾಲ ಬಾಧೆಯಿಂದ ನರಳಬೇಕಾಯಿತು ಎಂದು ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಿಂದ ನಗರಕ್ಕೆ ವಲಸೆ ಬರುವ ಜನರೂ ಕೂಡ ತಮ್ಮ ಗ್ರಾಮಗಳಲ್ಲಿ ಬದುಕು ಕಷ್ಟವಾಗಿ ಸಾಲ ಬಾಧೆಯನ್ನು ತಾಳಲಾರದೇ ಪಟ್ಟಣಗಳಿಗೆ ಉದ್ಯೋಗವನ್ನರಸಿ ಬರುತ್ತಾರೆ.[೧೦] ಇದೇ ಅಭಿಪ್ರಾಯವನ್ನು ಪದ್ಮಿನಿಸೆನ್ ಗುಪ್ತಾ (೧೯೬೦) ಅವರು ವುಮೆನ್ ವರ್ಕರ್ಸ್ ಆಫ್ ಇಂಡಿಯಾ ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ. ಕೈಗಾರಿಕಾ ನಗರಗಳಿಗೆ ಹಳ್ಳಿಗಳಿಂದ ಕೆಲಸವನ್ನರಸಿ ವಲಸೆ ಬಂದ ದುಡಿಮೆಗಾರರ ಬದುಕಿನ ಚಿತ್ರಣವನ್ನು ಲೇಖಕರು ನೀಡುತ್ತಾರೆ. ಬಾಂಬೆ ಹಾಗೂ ಕಲ್ಕತ್ತದಂತಹ ನಗರಗಳಿಗೆ ಮದ್ರಾಸ್, ಮಥುರಾ, ಕಾನ್ಪುರ, ನಾಗಪುರದಂತಹ ಪ್ರದೇಶಗಳಿಂದ ಜನ ವಲಸೆ ಬರುತ್ತಾರೆ. ಇಂತಹ ಜನ ವರ್ಷದ ಬಹುಭಾಗ ನಗರಗಳಲ್ಲಿ ದುಡಿದರೂ ಕೂಡ ಕೊನೆಗೆ ಹಳ್ಳಿಗಳಿಗೆ ಹಿಂತಿರುತ್ತಾರೆ. ಇದೇ ಪಾಶ್ಚಿಮಾತ್ಯ ದೇಶಗಳಿಗೂ ಭಾರತಕ್ಕೂ ಇರುವ ವ್ಯತ್ಯಾಸ. ಪಾಶ್ಚಿಮಾತ್ಯ ದೇಶಗಳಲ್ಲಿ ವಲಸೆ ಬಂದ ಜನ ನಗರದ ಕೆಲಸಗಳಲ್ಲಿ ತೊಡಗಿ ಅಲ್ಲಿಯೇ ಖಾಯಂ ಆಗಿ ನೆಲೆಯೂರಿ

ಬಿಡುತ್ತಾರೆ. ಆದರೆ ಭಾರತದಲ್ಲಿ ಜನ ತಮ್ಮ ಸ್ವಂತ ಸ್ಥಳಗಳನ್ನು ಮಾತ್ರ ಮರೆಯುವುದಿಲ್ಲ. ಕಾರ್ಮಿಕರು ಕೆಲವು ಪ್ರಮುಖ ಸನ್ನಿವೇಶಗಳಲ್ಲಿ ಮಾತ್ರ ತಮ್ಮ ಹಳ್ಳಿಗಳಿಗೆ ಹೋಗುತ್ತಾರೆ. ಇನ್ನುಳಿದ ದಿನಗಳಲ್ಲಿ ಹಣವನ್ನು ಅಲ್ಲಿಗೇ ಕಳಿಸುತ್ತಾರೆ. ಆದರೆ ಹಳ್ಳಿಗಳ ಸೆಳೆತ ಮಹಿಳೆಯರಿಗೆ ಬಹಳವಿರುತ್ತದೆ. ಮಹಿಳೆಯರು ತಮ್ಮ ಸಂಪ್ರಾದಾಯಿಕ ಕಟ್ಟುಪಾಡುಗಳನ್ನು ಮೀರಿ ಇಂತಹ ಪಟ್ಟಣಗಳಿಗೆ ದುಡಿಯಲು ಬರಲು ಕಾರಣ ಅವರ ಹಣಕಾಸಿನ ಮುಗ್ಗಟ್ಟು, ಹಳ್ಳಿಗಳ ಬಡತನದ ಜೀವನದಿಂದ ಜನ ಬೇಸತ್ತಿರುತ್ತಾರೆ. ಇಂತಹ ಹಸಿದ ನಿರುದ್ಯೋಗಿ ಜನರಿಗೆ ಭೂಮಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಭೂಮಿಯ ಮೇಲಿನ ಒತ್ತಡವು ಜನರನ್ನು ಬೇರೆ ಉದ್ಯೋಗವನ್ನರಸುವಂತೆ ಮಾಡುತ್ತದೆ.

ಭೂರಹಿತ ಕಾರ್ಮಿಕರು ಋತುಮಾನಗಳಲ್ಲಿ ಅಲ್ಪ ಸ್ವಲ್ಪ ಗಳಿಸಿಕೊಂಡರೂ ಕೆಲಸವಿಲ್ಲದ ಸಮಯದಲ್ಲಿ ಹಸಿವಿನಿಂದ ಕಂಗಾಲಾಗಬೇಕಾಗುತ್ತದೆ. ಹಳ್ಳಿಯ ಕುಶಲಕರ್ಮಿಗಳು ಕೈಗಾರಿಕೆಗಳ ಬೆಳವಣಿಗೆಯಿಂದ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಎಲ್ಲ ರೀತಿಯ ಜನ ಜೀವನೋಪಾಯ ಕ್ಕಾಗಿ ಸಾಲವನ್ನು ಮಾಡಿ ಸಾಲ ತೀರಿಸಲು ತಮ್ಮ ಒಡೆತನಕ್ಕೆ ಸೇರಿದ ಆಸ್ತಿ ಪಾಸ್ತಿಗಳನ್ನೆಲ್ಲ ಕಳೆದು ಕೊಂಡು ಪಟ್ಟಣಕ್ಕೆ ಧಾವಿಸುತ್ತಾರೆ. ಆದರೆ ಇಂತಹ ಜನರು ಶೈಕ್ಷಣಿಕವಾಗಿ ಹಿಂದುಳಿದ ಕಾರಣ, ವೃತ್ತಿ ನೈಪುಣ್ಯತೆ ಇಲ್ಲದ ಕಾರಣ ನಗರದ ಔಪಚಾರಿಕ ವಲಯದ ಕೆಲಸಗಳನ್ನು ಪಡೆಯಲು ಆಗದೇ ಅನೌಪಚಾರಿಕ ವಲಯದ ಕೆಲಸಗಳಲ್ಲಿ ತೊಡಗಿದ್ದಾರೆ. ಅನೌಪಚಾರಿಕ ವಲಯದ ಕೆಲಸಗಳಲ್ಲಿ ಕಡಿಮೆ ಕೂಲಿಯ ಪರಿಣಾಮವಾಗಿ ಹಾಗೂ ವೃತ್ತಿ ಸುರಕ್ಷತೆ ಇಲ್ಲದ ಕಾರಣದಿಂದಾಗಿ ಸಂಸಾರ ನಿಭಾಯಿಸುವುದು ಕಷ್ಟವಾಗಿ ಮತ್ತೆ ಸಾಲದ ಸುಳಿಗೇ ಸಿಲುಕಬೇಕಾಗುತ್ತದೆ. ಕೋಷ್ಟಕ ೪.೧೭ರಲ್ಲಿ ಮನೆಗೆಲಸದ ಮಹಿಳೆಯರ ಉಳಿತಾಯದ ವಿವರ ಹಾಗೂ ಸಾಲದ ಮಾಹಿತಿಯನ್ನು ನೋಡಬಹುದಾಗಿದೆ.

ಕೋಷ್ಟಕ ೪.೧೭: ಮಹಿಳೆಯರ ಉಳಿತಾಯ ಹಾಗೂ ಸಾಲದ ಮಾಹಿತಿ

ಕ್ರಸಂ	ವಿವರಣೆ	ಒಟ್ಟು	ಶೇಕಡ
೧	ಉಳಿತಾಯದ ವಿವರ		
	ಉಳಿತಾಯ ಇದೆ	೮೯	೩೫.೬೦
	ಉಳಿತಾಯ ಇಲ್ಲ	೧೬೧	೬೪.೪೦
	ಒಟ್ಟು	೨೫೦	೧೦೦.೦೦
೨	ಸಾಲದ ಮಾಹಿತಿ		
	ಸಾಲ ಮಾಡಿದ್ದೇವೆ	೯೩	೩೭.೨೦
	ಸಾಲ ಮಾಡಿರುವುದಿಲ್ಲ	೧೫೭	೬೨.೮೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೭ರಲ್ಲಿ ತಿಳಿಸಿದ ಮಾಹಿತಿಯಂತೆ ಸಮೀಕ್ಷೆಗೊಳಪಡಿಸಿದ ೨೫೦ ಮಹಿಳೆಯರಲ್ಲಿ ಶೇ. ೩೫.೬ರಷ್ಟು ಮಹಿಳೆಯರು ಉಳಿತಾಯ ಮಾಡುತ್ತಿದ್ದಾರೆ. ಆದರೆ ೬೪.೪ರಷ್ಟು ಮಹಿಳೆಯರು ಉಳಿತಾಯ ಮಾಡುತ್ತಿಲ್ಲ. ವ್ಯಕ್ತಿಯ ಆರ್ಥಿಕ ಸ್ಥಿತಿಗತಿಗಳ ವಿಚಾರವು ಉಳಿತಾಯದಿಂದ ಮಾತ್ರ

ತಿಳಿದು ಬರಲು ಸಾಧ್ಯವಿಲ್ಲದ ಕಾರಣ ಮಹಿಳೆಯರ ಸಾಲದ ಮಾಹಿತಿ ಸಂಗ್ರಹಿಸಲಾಗಿದೆ. ಮಹಿಳೆಯರು ನೀಡಿದ ಮಾಹಿತಿ ಪ್ರಕಾರ ಶೇ. ೩೭.೨೮ರಷ್ಟು ಮಹಿಳೆಯರು ಸಾಲವನ್ನು ವಿವಿಧ ಕಾರಣಗಳಿಂದಾಗಿ ಪಡೆದಿರುತ್ತಾರೆ. ಆದರೆ ಶೇ. ೬೨.೮ರಷ್ಟು ಮಹಿಳೆಯರು ಸಾಲ ಪಡೆದಿರುವುದಿಲ್ಲ.

೪.೧೮: ಮಹಿಳೆಯರ ಸಾಲದ ಸಂಪೂರ್ಣ ಮಾಹಿತಿ

ಮಹಿಳೆಯರು ತಮ್ಮ ಕುಟುಂಬದ ಆದಾಯ ಜೀವನ ನಿರ್ವಹಣೆಗೆ ಸಾಕಾಗದೇ ಹೋದಾಗ ಸಾಲ ಪಡೆದಿದ್ದಾರೆ. ಸಾಲವನ್ನು ಪಡೆದ ೯೩ ಮಹಿಳೆಯರ ಸಾಲದ ಮೂಲ, ಸಾಲವನ್ನು ಪಡೆಯಲು ಕಾರಣ ಹಾಗೂ ಸಾಲದ ಮೇಲೆ ವಿಧಿಸುವ ಬಡ್ಡಿ ದರಗಳ ಮಾಹಿತಿಯನ್ನು ಕೋಷ್ಟಕ ೪.೧೮ರಲ್ಲಿ ಕಾಣಬಹುದು.

ಕೋಷ್ಟಕ ೪.೧೮: ಸಾಲದ ಸಂಪೂರ್ಣ ಮಾಹಿತಿ

ಕ್ರಸಂ	ವಿವರಣೆ	ಒಟ್ಟು	ಶೇಕಡ
೧	**ಸಾಲದ ಮೂಲ**		
	ಸಂಘಸಂಸ್ಥೆಗಳಿಂದ ಸಾಲ	೪೩	೪೬.೨೪
	ಬ್ಯಾಂಕುಗಳ ಸಾಲ	೮	೮.೬೦
	ಮನೆ ಮಾಲೀಕರಿಂದ ಸಾಲ	೨೭	೨೯.೦೩
	ಪರಿಚಯಸ್ಥರಿಂದ ಸಾಲ	೧೫	೧೬.೧೩
	ಒಟ್ಟು	೯೩	೧೦೦.೦೦
೨	**ಸಾಲದ ಕಾರಣ**		
	ಮದುವೆಗಾಗಿ ಸಾಲ	೨೩	೨೪.೭೩
	ಅನಾರೋಗ್ಯಕ್ಕಾಗಿ ಸಾಲ	೨೨	೨೩.೬೫
	ಗೃಹನಿರ್ಮಾಣ/ದುರಸ್ಥಿ	೧೬	೧೭.೨೦
	ಆರ್ಥಿಕ ಮುಗ್ಗಟ್ಟು/ಮಕ್ಕಳ ಓದು	೩೨	೩೪.೪೨
	ಒಟ್ಟು	೯೩	೧೦೦.೦೦
೩	**ಬಡ್ಡಿದರ**		
	ಶೂನ್ಯಮಟ್ಟ	೧೪	೧೫.೦೫
	ಶೇ. ೦ ಯಿಂದ ೧೫	೩೪	೩೬.೫೬
	ಶೇ. ೧೫ಕ್ಕು ಅಧಿಕ ಬಡ್ಡಿದರ	೪೫	೪೮.೩೯
	ಒಟ್ಟು	೯೩	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೮ರಲ್ಲಿ ಮನೆಗೆಲಸದ ಮಹಿಳೆಯರು ಸಾಲ ಪಡೆಯಲು ಕಾರಣ ಸಾಲದ ಮೂಲಗಳ ವಿವರ ಹಾಗೂ ಸಾಲದ ಮೇಲಿನ ಬಡ್ಡಿ ದರಗಳ ಮಾಹಿತಿ ಈ ರೀತಿಯಾಗಿರುತ್ತದೆ.

ಸಾಲದ ಮೂಲ :

ಹೊಸಪೇಟೆಯಲ್ಲಿ ಹಣಕಾಸಿನ ನೆರವನ್ನು ಕಡಿಮೆ ಬಡ್ಡಿದರದಲ್ಲಿ ನೀಡುವ ವಿವಿಧ ಹಣಕಾಸು ಸಂಘಟನೆಗಳು ಅಸ್ತಿತ್ವದಲ್ಲಿದ್ದು ಮಹಿಳೆಯರಿಗೆ ಹಣಕಾಸಿನ ನೆರವನ್ನು ನೀಡುತ್ತಿವೆ. ಅಂತಹ ಸಂಘಟನೆಗಳಲ್ಲಿ

ಪ್ರಮುಖವಾದವುಗಳೆಂದರೆ ಸ್ತ್ರೀಶಕ್ತಿ ಸಂಘ, ಅಂಭಾಭವಾನಿ, ಸಂಘ, ಎಸ್.ಕೆ.ಎಸ್. ಫೈನಾನ್ಸ್ ಇತ್ಯಾದಿ, ಮಹಿಳೆಯರ ಸಾಂದರ್ಭಿಕ ಅಗತ್ಯತೆಗಳಿಗೆ ಮುಂಗಡವಾಗಿ ಶೇ. ೧೨ ಅಥವಾ ೧೫ರ ಬಡ್ಡಿ ದರದಲ್ಲಿ ಹಣವನ್ನು ಸಾಲ ರೂಪದಲ್ಲಿ ನೀಡುತ್ತಿವೆ. ಹಾಗು ಮಾಸಿಕ ಕಂತುಗಳ ಮೂಲಕ ಬಡ್ಡಿಯನ್ನು ಒಳಗೊಂಡಂತೆ ಅಸಲನ್ನು ವಸೂಲಿ ಮಾಡುತ್ತವೆ. ಈ ಉದ್ದೇಶಕ್ಕಾಗಿಯೇ ಸಂಘಗಳ ಕಾರ್ಯಕರ್ತರು ಪ್ರತ್ಯೇಕ ಖಾತೆಯನ್ನು ತೆರೆದು ಪ್ರತಿ ಮಹಿಳೆಯರ ಹೆಸರಿನಿಂದಲೂ ಒಂದು ಪುಸ್ತಕವನ್ನು ಇಟ್ಟಿರುತ್ತಾರೆ. ತಿಂಗಳಿಗೆ ಜಮಾ ಆದ ಹಣದ ಹಾಗೂ ಇನ್ನೂ ಬರಬೇಕಾದ ಹಣಕಾಸಿನ ಲೆಕ್ಕ ಆ ಪುಸ್ತಕದಲ್ಲಿರುತ್ತದೆ. ಆದರೆ ಮನೆಗೆಲಸದ ಮಹಿಳೆಯರು ಅವಿದ್ಯಾವಂತರಾದ ಕಾರಣ ಲೆಕ್ಕ ಪುಸ್ತಕದಲ್ಲಿರುವ ವಿವರಗಳು ತಿಳಿದಿರುವುದಿಲ್ಲ. ಕ್ಷೇತ್ರಕಾರ್ಯದ ಸಮಯದಲ್ಲಿ ಮಹಿಳೆಯರು ತಮ್ಮ ಸಾಲದ ಪುಸ್ತಕಗಳನ್ನು ತೋರಿಸಿದ್ದಾರೆ. ಇನ್ನು ಕೆಲವು ಮಹಿಳೆಯರು ಪುಸ್ತಕಗಳನ್ನು ಸಂಬಂಧಿಗಳ ಮನೆಯಲ್ಲೂ, ಇನ್ನು ಕೆಲವರು ಸುರಕ್ಷತೆಯ ದೃಷ್ಟಿಯಿಂದ ಕಾರ್ಯಕರ್ತರ ಜವಾಬ್ದಾರಿಗೇ ಒಪ್ಪಿಸಿರುತ್ತಾರೆ. ಇದು ಮಹಿಳೆಯರ ಮುಗ್ಧತೆಯ ಪ್ರತಿರೂಪವಾಗಿದೆ. ಒಟ್ಟಾರೆಯಾಗಿ ಹಣಕಾಸಿನ ಸಂಘಗಳು ಮನೆಗೆಲಸದ ಮಹಿಳೆಯರಿಗೆ ಸಾಂದರ್ಭಿಕ ನೆರವನ್ನು ನೀಡುತ್ತಿವೆ. ಈ ರೀತಿಯ ಸಹಾಯವನ್ನು ಶೇ.೪೬.೨೩ ರಷ್ಟು ಮಹಿಳೆಯರು ಪಡೆದಿರುತ್ತಾರೆ.

ತಮಗೆ ಬೇಕಾದ ಹಣಕಾಸಿನ ನೆರವನ್ನು ಶೇ. ೮.೬ರಷ್ಟು ಮಹಿಳೆಯರು ಬ್ಯಾಂಕಿನಿಂದ ಪಡೆದಿದ್ದಾರೆ. ಇನ್ನು ಶೇಕಡ ೨೯.೦೩ರಷ್ಟು ಮಹಿಳೆಯರು ತಾವು ಕೆಲಸ ಮಾಡುವ ಮನೆಗಳ ಮಾಲೀಕರಿಂದ ಸಾಲವನ್ನು ಪಡೆದಿದ್ದಾರೆ. ಈ ಸಾಲವನ್ನು ಮನೆಯೊಡೆಯರು ವಿಶ್ವಾಸದ ಮೇಲೆ ಕೊಟ್ಟಿರುತ್ತಾರೆ. ಶೇ. ೧೬.೧೨ರಷ್ಟು ಮಹಿಳೆಯರು ತಮಗೆ ಬೇಕಾದ ಹಣಕಾಸಿನ ನೆರವನ್ನು ಪರಿಚಯಸ್ಥರಿಂದ ಪಡೆದಿರುತ್ತಾರೆ. ಒಟ್ಟಾರೆಯಾಗಿ ಮಹಿಳೆಯರಿಗೆ ಹಣಕಾಸಿನ ಅವಶ್ಯಕತೆಯಿದ್ದಾಗ ನೆರವಿಗಾಗಿ ಈ ಎಲ್ಲಾ ಮೂಲಗಳನ್ನು ಆಶ್ರಯಿಸಿದ್ದಾರೆ.

ಸಾಲದ ಕಾರಣ :

ಮನೆಗೆಲಸದ ಮಹಿಳೆಯರು ವಿವಿಧ ಕಾರಣಗಳಿಂದಾಗಿ ಸಾಲದ ಹೊರೆಯನ್ನು ಹೊತ್ತಿರುತ್ತಾರೆ. ಅದರಲ್ಲಿ ಪ್ರಮುಖ ಕಾರಣಗಳೆಂದರೆ ಮದುವೆ, ಅನಾರೋಗ್ಯ, ಗೃಹನಿರ್ಮಾಣ ಅಥವಾ ದುರಸ್ತಿ, ಆರ್ಥಿಕ ಮುಗ್ಗಟ್ಟು, ಮಕ್ಕಳ ಓದು ಮುಂತಾದವು. ಮಹಿಳೆಯರ ದುಡಿಮೆಯು ಕೇವಲ ಕುಟುಂಬ ನಿರ್ವಹಣೆಗೆ ಸಾಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮದುವೆ, ಮುಂಜಿ, ಉಪನಯನ, ಮುಂತಾದ ಸಾಂಪ್ರದಾಯಿಕವಾದ ಶುಭಕಾರ್ಯಗಳನ್ನು ನಡೆಸಲು ಸಾಲಗಾರರಾಗಬೇಕಾಗುತ್ತದೆ. ಇದು ಮಹಿಳೆಯರ ಪಾಲಿಗೆ ಅನುತ್ಪಾದಕ ಹೊರೆ ಎನಿಸಿದರೂ ಭಾರತದಂತಹ ಸಾಂಪ್ರದಾಯಿಕವಾದ ಸಮಾಜದಲ್ಲಿ ಇಂತಹ ಆಚರಣೆಗಳನ್ನು ನಡೆಸಬೇಕಾದದ್ದು ಅನಿವಾರ್ಯವಾಗಿ, ಬಡವರೂ ಕೂಡ ಈ ಆಚರಣೆಗಳನ್ನು ಕೈಲಾದಷ್ಟರ ಮಟ್ಟಿಗೆ ಮಾಡಲೇಬೇಕಾಗಿ ಬರುತ್ತದೆ. ಕೆಲವರ ಸಾಲದ ಮೊತ್ತವು ಒಂದು ಲಕ್ಷಕ್ಕೂ ಅಧಿಕವಾಗಿ ಇದ್ದು ಸಾಲವನ್ನು ತೀರಿಸಲು ಜೀವನಪೂರ್ತಿ ದುಡಿಯಬೇಕಾದ ಪರಿಸ್ಥಿತಿ ಒದಗಿ ಬಂದಿದೆ.

ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಹಾಗೂ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಾರೆ. ಅಲ್ಲದೇ ಅವರು ವಾಸ ಮಾಡುವ ಮನೆಗಳು ಸಾಮಾನ್ಯವಾಗಿ ಕೊಳೆಗೇರಿಗಳಾಗಿದ್ದು ಅನಾರೋಗ್ಯಕ್ಕೆ ದಾರಿಮಾಡಿಕೊಡುತ್ತವೆ. ಉತ್ತಮ ಪರಿಸರದಲ್ಲಿ ವಾಸಮಾಡಲು ಹಾಗೂ ಪೌಷ್ಟಿಕ ಆಹಾರ ಸೇವಿಸಲು ಅವರಿಗೆ ಹಣಕಾಸಿನ ತೊಂದರೆ ಕಾಡುತ್ತಿದೆ. ಇದರ ಪರಿಣಾಮವಾಗಿ ಮನೆಗೆಲಸದ ಮಹಿಳೆಯರು ಮತ್ತು ಕುಟುಂಬ ವರ್ಗದವರು ಆಗಿಂದಾಗ್ಗೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ೧೯೭೪ರ ಟುವರ್ಡ್ಸ್ ಈಕ್ವಾಲಿಟಿ ವರದಿಯಲ್ಲಿಯೂ ಕೂಡ ಇದೇ ಅಭಿಪ್ರಾಯ ವ್ಯಕ್ತವಾಗಿದೆ. ಆರ್ಥಿಕತೆಯನ್ನು ಆಧುನೀಕರಣಗೊಳಿಸುವ ಧಾವಂತದಲ್ಲಿ ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬಂದಿದ್ದ ಉದ್ಯಮಗಳು ಆಧುನಿಕ ಉದ್ಯಮಗಳಿಗೆ ಜಾಗಮಾಡಿಕೊಟ್ಟವು. ಇದರಿಂದ ಅಶಕ್ತ ವಲಯಗಳ ಶೋಷಣೆಯ ಪ್ರಮಾಣ ಇನ್ನೂ ಹೆಚ್ಚಾಯಿತೆಂದೇ ಹೇಳಬಹುದು. ವೇತನರಹಿತ ಮಹಿಳಾ ಕಾರ್ಮಿಕರ ಸಂಖ್ಯೆಯು ಪುರುಷ ಕಾರ್ಮಿಕರಿಗಿಂತ ಅಧಿಕವಾಗಿದ್ದು ಇದು ಸಮಾಜದಲ್ಲಿ ಪ್ರತ್ಯೇಕ ಪಡೆಯನ್ನೇ ನಿರ್ಮಿಸಿದೆ. ಕಡಿಮೆ ಪ್ರಮಾಣದ ಶ್ರಮದ ಬಳಕೆ ಹಾಗೂ ಋತುಮಾನಸಂಬಂಧಿ ನಿರುದ್ಯೋಗದ ಕಾರಣಗಳಿಂದಾಗಿ ಗ್ರಾಮವಾಸಿಗಳ ಬಡತನ ಅಧಿಕವಾಗುತ್ತಿದೆ. ಇದರಿಂದ ಕಾರ್ಮಿಕರು ಜೀವನೋಪಾಯಕ್ಕಾಗಿ ಕಡಿಮೆ ಉತ್ಪಾದಕತೆಯ ಕೆಲಸವನ್ನರಸಿ ಹೋಗುತ್ತಿದ್ದಾರೆ. ಮಹಿಳೆಯರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳೆಂದರೆ ಉದ್ಯೋಗಾವಕಾಶಗಳ ಕೊರತೆ, ನೈಪುಣ್ಯರಹಿತತೆ ಹಾಗೂ ಅನಕ್ಷರತೆ, ಶ್ರಮದ ಚಲನೆಯ ಮೇಲಿನ ನಿರ್ಬಂಧ. ಇದರಿಂದ ಮಹಿಳಾ ಕಾರ್ಮಿಕರು ಉತ್ಪಾದನಾ ಸಂಪನ್ಮೂಲದ ಮೇಲಿನ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಾರೆ. ಇದರ ಪರಿಣಾಮ ಆದಾಯ ಮತ್ತು ಅನುಭೋಗದ ನಡುವಿನ ಅಂತರ.

ಮೇಲೆ ಹೇಳಿದ ಕಾರಣಗಳಿಂದಾಗಿ ಮಹಿಳೆಯರು ಸಮಾಜದಲ್ಲಿ ಕನಿಷ್ಠ ಜೀವನವನ್ನು ಸಾಗಿಸಲೂ ಸಾಧ್ಯವಿಲ್ಲದೇ ಸಾಲಗಾರರಾಗಿ ಬದುಕುತ್ತಿದ್ದಾರೆ. ತಮ್ಮ ಚೌಕಾಶಿ ಶಕ್ತಿಯನ್ನು ಕಳೆದುಕೊಂಡ ದಿವಾಳಿ ಬದುಕು ಇವರದಾಗಿದೆ. ಈ ಕಾರಣದಿಂದಲೇ ಮಹಿಳಾ ಹಾಗೂ ಪುರುಷ ಕಾರ್ಮಿಕರ ನಡುವೆ ವೇತನ ತಾರತಮ್ಯ ಸಾಮಾನ್ಯವಾಗಿದೆ. ಇದರ ಜೊತೆಗೆ ಮಹಿಳೆಯರು ಹಿಂದಿನಿಂದಲೂ ಮಾಡುತ್ತಿದ್ದ ಕೆಲಸಗಳಿಗೆ ಕಡಿಮೆಕೂಲಿ ನಿಗಧಿಯಾಗಿಬಿಟ್ಟಿದೆ. ಕಡಿಮೆ ಕೂಲಿಯ ಕಾರಣದಿಂದಾಗಿ ಪೌಷ್ಟಿಕ ಆಹಾರ ಸೇವನೆ ಸಾಧ್ಯವಾಗದೇ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಹೀಗೆ ಕಲ್ಕತ್ತದ ಕೊಳಚೆ ಪ್ರದೇಶಗಳಲ್ಲಿ ಬದುಕುವ ಮಹಿಳೆಯರ ಬದುಕಿನ ಚಿತ್ರಣವನ್ನು ನೀಡಿರುತ್ತಾರೆ. ಮಹಿಳೆಯರು ಅನಾರೋಗ್ಯಕ್ಕೆ ತುತ್ತಾದಾಗ ಸಾಲ ಮಾಡಬೇಕಾಗಿ ಬರುತ್ತದೆ ಅಥವಾ ಮನೆಯ ಸದಸ್ಯರು ಅನಾರೋಗ್ಯ ಪೀಡಿತರಾದಾಗ ಸಾಲಮಾಡಬೇಕಾಗಿ ಬರುತ್ತದೆ. ಅದೂ ಅಲ್ಲದೇ ಮಹಿಳೆಯರೂ ಕೂಡ ತಮ್ಮ ಕುಟುಂಬ ನಿರ್ವಹಣೆಯ ಧಾವಂತದಲ್ಲಿ ನಿರಂತರವಾದ ಕೆಲಸಗಳಲ್ಲಿ ತೊಡಗುವುದರಿಂದ ಅನಾರೋಗ್ಯಕ್ಕೆ ತುತ್ತಾಗಿ ಚಿಕಿತ್ಸೆಗಾಗಿ ಸಾಲ ಮಾಡುತ್ತಿದ್ದಾರೆ.

ಇತ್ತೀಚಿನ ವರದಿಗಳ ಪ್ರಕಾರ ಮನೆಗೆಲಸದ ಮಹಿಳೆಯರಿಗೆ ಆರೋಗ್ಯ ವಿಮಾ ಯೋಜನೆ ಜಾರಿಗೆ ಬಂದಿದೆ ಎಂದರೂ ಅದು ಮನೆಗೆಲಸದ ಮಹಿಳೆಯರನ್ನು ತಲುಪುವಲ್ಲಿ ವಿಫಲವಾಗಿದೆ ಎಂದೇ

ಹೇಳಬಹುದು. ಹೊಸಪೇಟೆ ಮನೆಗೆಲಸದ ಮಹಿಳೆಯರಲ್ಲಿ ಶೇ. ೨೩.೬೫ರಷ್ಟು ಮಹಿಳೆಯರು ಅನಾರೋಗ್ಯದ ಕಾರಣ ಸಾಲ ಮಾಡಿರುವುದಾಗಿ ಕ್ಷೇತ್ರ ಕಾರ್ಯದ ಸಮಯದಲ್ಲಿ ತಿಳಿಸಿರುತ್ತಾರೆ. ಸಣ್ಣಪುಟ್ಟ ಖಾಯಿಲೆಗಳಿಗೆ ಮಹಿಳೆಯರು ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಾರೆ. ಆದರೆ ಗುಣಪಡಿಸಲಾಗದ ಅಪಾಯಕಾರಿ ಖಾಯಿಲೆಗಳಿಗೆ (ಬ್ರೇನ್ ಟ್ಯೂಮರ್, ಕ್ಯಾನ್ಸರ್, ಗರ್ಭಕೋಶದ ಕಾಯಿಲೆಗಳು ಇತ್ಯಾದಿ)ಚಿಕಿತ್ಸೆ ಪಡೆಯಲು ತಮ್ಮ ವೇತನ ಸಾಕಾಗದೇ ಹೋದಾಗ ಸಾಲದ ಹೊರೆ ಹೊರಬೇಕಾಗುತ್ತದೆ.

ಜನರಿಗೆ ವಾಸ ಮಾಡಲು ಸುರಕ್ಷಿತ ಮನೆಯ ಅಗತ್ಯತೆ ಇರುತ್ತದೆ. ಆದರೆ ಹೊಸಪೇಟೆಯ ಮಹಿಳಾ ಮನೆಗೆಲಸಗಾರರಲ್ಲಿ ಶೇ. ೮೦.೮ರಷ್ಟು ಮಹಿಳೆಯರು ಕಚ್ಚಾ ಮನೆಯಲ್ಲೂ, ಶೇ. ೧೧.೬ರಷ್ಟು ಮಹಿಳೆಯರು ಗುಡಿಸಲುಗಳಲ್ಲೂ ವಾಸ ಮಾಡುತ್ತಿದ್ದಾರೆ. ಇಂತಹ ಮನೆಗಳಲ್ಲಿ ಗಾಳಿ, ಮಳೆಯಿಂದ ರಕ್ಷಣೆ ಸಿಗುತ್ತಿಲ್ಲವಾದ್ದರಿಂದ ಆಗಿಂದಾಗ್ಗೆ ಮನೆಗಳ ದುರಸ್ತಿ (ಒಡೆದ ಸಿಮೆಂಟ ಶೀಟ್‌ಗಳನ್ನು ಬದಲಿಸುವುದು, ಗುಡಿಸಲಿನ ಚಪ್ಪರ ಬದಲಿಸುವುದು ಇತ್ಯಾದಿ) ಕಾರ್ಯದಲ್ಲಿ ತೊಡಗುವುದು ಸಾಮಾನ್ಯವಾಗಿ ದುರಸ್ತಿ ಕಾರ್ಯಕ್ಕೆ ಹಣದ ಕೊರತೆ ಉಂಟಾದಾಗ ಅವರು ಸಾಲ ಮಾಡುತ್ತಿದ್ದಾರೆ. ಹೀಗೆ ಮಹಿಳಾ ಮನೆಗೆಲಸಗಾರರು ಗೃಹನಿರ್ಮಾಣ ಹಾಗೂ ದುರಸ್ತಿ ಉದ್ದೇಶಗಳಿಗಾಗಿ ಸಾಲ ಮಾಡಿದ್ದಾರೆ.

ಅವಿಭಕ್ತ ಕುಟುಂಬಗಳಲ್ಲಿ ಹಾಗೂ ಅವಲಂಬಿತ ಸದಸ್ಯರು (ಮಕ್ಕಳು ಹಾಗೂ ವಯೋವೃದ್ಧರು) ಅಧಿಕ ಇರುವ ಕುಟುಂಬಗಳಲ್ಲಿ ಕುಟುಂಬದ ವೆಚ್ಚ ವರಮಾನಕ್ಕಿಂತಲೂ ಅಧಿಕವಾದಾಗ ಸಾಲ ಮಾಡಬೇಕಾಗುತ್ತದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಎಲ್ಲ ಪಾಲಕರೂ ಶಿಕ್ಷಣದ ಮಹತ್ವವನ್ನು ಅರಿತವರಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ಹೆಚ್ಚಾಗಿದ್ದರಿಂದಲೂ ತಾಂತ್ರಿಕ ಶಿಕ್ಷಣದ ಜನಪ್ರಿಯತೆಯಿಂದಾಗಿ ಜನರು ತಮ್ಮ ಮಕ್ಕಳಿಗೆ ಅಧಿಕ ಹಣತೆತ್ತು ಉತ್ತಮ ವಿದ್ಯಾಭ್ಯಾಸ ಕೊಡಿಸಲು ಮುಂದಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಾಲ ಮಾಡಿಯಾದರೂ ಮಕ್ಕಳನ್ನು ಓದಿಸಲು ಮುಂದಾಗಿ ಹೆಚ್ಚಿನ ಮಹಿಳೆಯರು ಸಾಲಗಾರರಾಗಿದ್ದಾರೆ. ಹೀಗೆ ಶೇ. ೩೪.೪೦ರಷ್ಟು ಮಹಿಳೆಯರು ತಮ್ಮ ಕುಟುಂಬದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡಿದ್ದೇವೆಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ಸಾಲವು ಮನುಷ್ಯನನ್ನು ಜೀವಂತವಾಗಿ ಕೊಲ್ಲುತ್ತಿದೆಯಾದರೂ ಅನಿವಾರ್ಯ ಸಂದರ್ಭಗಳಲ್ಲಿ ಮಹಿಳೆಯರು ಸಾಲ ಮಾಡಲು ಮುಂದಾಗುತ್ತಾರೆ. ಇದು ತಮ್ಮ ಕುಟುಂಬದ ಗೌರವದ ಪ್ರಶ್ನೆಯಾಗಿದೆ. ಅದಕ್ಕಾಗಿ ಸಾಲಮಾಡಿದ್ದೇವೆ. ಇಲ್ಲದಿದ್ದರೆ ನಮಗೆ ಬೇರೆ ಮಾರ್ಗವೇ ಇಲ್ಲ ಇದನ್ನು ನಾವೇ ದುಡಿದು ತೀರಿಸುತ್ತೇವೆ ಎಂದು ಪ್ರತಿಕ್ರಿಯಿಸಿದ್ದಾರೆ. ಇಂತಹ ಮಹಿಳೆಯರಿಗೆ ಸರ್ಕಾರವು ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ ಒದಗಿಸಿಕೊಡುವುದೊಂದೇ ಪರಿಹಾರವಾಗಿದೆ. ಆದರೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರದ ಈ ಯಾವ ಸೌಲಭ್ಯಗಳು ಇರದೇ ಇರುವುದು ಶೋಚನೀಯ ಸಂಗತಿಯಾಗಿದೆ. ಮಹಿಳೆಯರು ವಿವಿಧ ಕಾರಣಗಳಿಂದಾಗಿ ಮಾಡಿದ ಸಾಲವನ್ನು ತೀರಿಸಲಿಕ್ಕಾಗಿ ಮನೆಗೆಲಸದ ದುಡಿಮೆಯಲ್ಲಿ ತೊಡಗಿದ್ದಾರೆ.

ಬಡ್ಡಿದರ :

ಮಹಿಳೆಯರು ಅನಿವಾರ್ಯ ಕಾರಣಗಳಿಂದಾಗಿ ಸಾಲದ ಬಾಧೆಗೆ ಒಳಗಾದಾಗ ಅಸಲು ಹಣವನ್ನು ಹಿಂತಿರುಗಿಸುವುದರ ಜೊತೆಗೆ ಬಡ್ಡಿ ದರವನ್ನು ಕೊಡಬೇಕಾಗುತ್ತದೆ. ಸಾಮಾನ್ಯ ಭಾಷೆಯಲ್ಲಿ ಬಡ್ಡಿ ಎಂದರೆ ಸಾಲಗಾರನು ಬಂಡವಾಳದ ಒಡೆಯನಿಗೆ ಕೊಡುವ ಪ್ರತಿಫಲವಾಗಿರುತ್ತದೆ ಹಾಗೂ ಇದನ್ನು ವರ್ಷ ಪ್ರತಿಶತ ದರದಲ್ಲಿ ವ್ಯಕ್ತಪಡಿಸಲಾಗುತ್ತದೆ. ಈ ರೀತಿಯಾಗಿ ಸಾಲವನ್ನು ಪಡೆದ ಮಹಿಳೆಯರು ಎಷ್ಟು ಬಡ್ಡಿಯನ್ನು ಕಟ್ಟುತ್ತಿದ್ದಾರೆ. ಇದು ಅವರ ಜೀವನಶೈಲಿಯ ಮೇಲೆ ಯಾವ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ, ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಸುಮಾರು ೧೪ ಮಹಿಳೆಯರು ಯಾವ ಬಡ್ಡಿಯೂ ಇಲ್ಲದೇ ಸಾಲವನ್ನು ಪಡೆದವರಾಗಿದ್ದಾರೆ. ಇದಕ್ಕೆ ಕಾರಣ ಅವರು ಸಮಾಜದಲ್ಲಿ ಬೆಳೆಸಿಕೊಂಡು ಬಂದ ಪ್ರೀತಿ ವಿಶ್ವಾಸದ ಪ್ರತೀಕವಾಗಿರುತ್ತದೆ. ವಿಶ್ವಾಸದ ಆಧಾರದ ಮೇಲೆ ತಮ್ಮ ಸಂಬಂಧಿಗಳಲ್ಲಿ, ಸ್ನೇಹಿತರಲ್ಲಿ ಅಥವಾ ಮನೆಯೊಡೆಯರಲ್ಲಿ ಹಣವನ್ನು ಬಡ್ಡಿ ಇಲ್ಲದೇ ಪಡೆದಿರುತ್ತಾರೆ. ಇನ್ನು ೩೪ ಮಹಿಳೆಯರು ಶೇ. ೧೫ರಷ್ಟು ಬಡ್ಡಿದರದಲ್ಲಿ ಸಾಲ ಪಡೆದಿದ್ದಾರೆ. ಇನ್ನು ೪೫ ಮಹಿಳೆಯರು ಶೇ. ೧೫ಕ್ಕಿಂತಲೂ ಅಧಿಕ ಬಡ್ಡಿಯನ್ನು ಪಾವತಿಸಬೇಕಾಗಿದೆ ಅಸಂಘಟಿತ ವಲಯಕ್ಕೆ ಸೇರಿದ ಮಹಿಳೆಯರು ಅಧಿಕ ಬಡ್ಡಿ ದರವನ್ನು ಪಾವತಿಸಲು ಕಾರಣವೇನೆಂದರೆ ಇವರಿಗೆ ಸಹಾಯ ನೀಡಲು ಸರ್ಕಾರದ ಯಾವ ವ್ಯವಸ್ಥೆಯೂ ಇರುವುದಿಲ್ಲ. ಅಲ್ಲದೇ ಅಸ್ತಿತ್ವದಲ್ಲಿರುವ ಸಂಘ ಸಂಸ್ಥೆಗಳು ಕಡಿಮೆ ಪ್ರಮಾಣದ ಹಣಕಾಸಿನ ಅಗತ್ಯತೆಗಳಿಗೆ ಸಹಾಯ ಮಾಡುತ್ತವೆ. ಬ್ಯಾಂಕುಗಳು ಇಂತಹ ಬಡ ಜನರಿಗೆ ಸಾಲಮಂಜೂರು ಮಾಡಲು ಹಿಂದೇಟು ಹಾಕುತ್ತವೆ. ಈ ಕಾರಣಗಳಿಂದಾಗಿ ಅಧಿಕ ಬಡ್ಡಿಯನ್ನು ವಿಧಿಸುವ ದೇಶೀಯ ಅಥವಾ ಸ್ಥಳೀಯ ಲೇವಾದೇವಿಗಾರರ ಹತ್ತಿರ ಸಾಲವನ್ನು ಪಡೆಯುತ್ತಾರೆ. ಇದು ಜನರ ಸಂಕಷ್ಟಗಳಿಗೆ ಅನಿವಾರ್ಯವಾದ ಮಾರ್ಗೋಪಾಯವಾಗಿರುತ್ತದೆ.

ಇದೇ ಅಭಿಪ್ರಾಯವನ್ನು ಜೆನ್ ಬ್ರೆಮೆನ್ (೧೯೯೬) ಅವರೂ ವ್ಯಕ್ತಪಡಿಸಿದ್ದಾರೆ. ಸಂಘಟಿತ ವಲಯದ ದುಡಿಮೆಗಾರರ ಪರಿಸ್ಥಿತಿಗಿಂತ ವಿರುದ್ಧ ಪರಿಸ್ಥಿತಿ ಅಸಂಘಟಿತ ವಲಯದ ದುಡಿಮೆಗಾರರದ್ದಾಗಿದೆ. ಲೇಖಕರ ಅಭಿಪ್ರಾಯದ ಪ್ರಕಾರ ಅಸಂಘಟಿತ ವಲಯದ ಪ್ರಮುಖ ಲಕ್ಷಣ ಎಂದರೆ ಸರ್ಕಾರದಿಂದ ಬೆಂಬಲ ಹಾಗೂ ಮಾನ್ಯತೆ ಪಡೆಯದ ಒಂದು ಉತ್ಪಾದನಾ ಘಟಕವಾಗಿದೆ ಎಂಬುದು. ಆದರೆ ಆರ್ಥಿಕ ಅಭಿವೃದ್ಧಿಗೆ ಪರೋಕ್ಷವಾಗಿ ಸಹಾಯ ಮಾಡುತ್ತಾ ರಾಷ್ಟ್ರದ ಅಭಿವೃದ್ಧಿಗೆ ಸಹಾಯವಾಗುವ ಅಸಂಘಟಿತ ವಲಯದ ಶ್ರೇಯೋಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಅಸಂಘಟಿತ ವಲಯದ ಕಾರ್ಮಿಕರ ಜೀವನವನ್ನು ಕಲ್ಯಾಣಮಯವನ್ನಾಗಿ ಮಾಡಿದಂತೆ ಆಗುತ್ತದೆ. ಈ ರೀತಿಯ ಅನುಕೂಲವಿಲ್ಲದೇ ಸಾಲ ಮಾಡಿ ಅಧಿಕ ಬಡ್ಡಿ ಕೊಡುತ್ತಿರುವ ಮಹಿಳೆಯರು ಜೀವನ ಪೂರ್ತಿ ಸಾಲ ತೀರಿಸಲಿಕ್ಕಾಗಿಯೇ ದುಡಿಯಬೇಕಾಗಿದೆ.

೪.೧೯: ಮನೆಗೆಲಸಗಾರರ ಆಸ್ತಿಯ ಮಾಹಿತಿ

ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರು ಸಾಮಾನ್ಯವಾಗಿ ಗ್ರಾಮಗಳಲ್ಲಿ ಜೀವನ ದುರ್ಭರವಾಗಿ, ಸಂಕಷ್ಟಕ್ಕೊಳಗಾದಾಗ ಜೀವನೋಪಾಯಕ್ಕಾಗಿ ನಗರಕ್ಕೆ ವಲಸೆ ಬರುತ್ತಾರೆ. ಗ್ರಾಮಗಳಲ್ಲಿ

ಕೃಷಿಯಿಂದ ಬರುವ ಆದಾಯ ಕಡಿಮೆಯಾಗಿ ಸಣ್ಣ ಹಿಡುವಳಿದಾರರೂ ಕೂಡ ಭೂಮಾಲೀಕರಿಗೆ ತಮ್ಮ ಭೂಮಿಯನ್ನು ಒಪ್ಪಿಸಿ ಕೃಷಿ ಕಾರ್ಮಿಕರಾಗಬೇಕಾಗಿದೆ. ಅದರಲ್ಲೂ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರಿಂದ ಮಹಿಳೆಯರು ನಿರ್ವಹಿಸುತ್ತಿದ್ದ ಕೆಲಸ ಕಾರ್ಯಗಳೂ ಪುರುಷರ ಪಾಲಾದವು.[೧೧] ಮಹಿಳೆಯರಿಗೆ ಯಂತ್ರಗಳನ್ನು ನಿಭಾಯಿಸುವ ನೈಪುಣ್ಯತೆ ಹಾಗೂ ತರಬೇತಿ ಇಲ್ಲದಿರುವುದೇ ಇದಕ್ಕೆ ಕಾರಣ ಎಂದು ಸುಭಾಶಿನಿ ಮಹಾಪಾತ್ರ (೨೦೦೬) ಅವರು ಅಭಿಪ್ರಾಯಪಡುತ್ತಾರೆ. ಹೀಗೆ ಭೂಮಿಯ ಮೇಲಿನ ಹಿಡಿತವನ್ನು ಕಳೆದುಕೊಂಡ ಮಹಿಳೆಯರು ಉದ್ಯೋಗಕ್ಕೆ ಪಟ್ಟಣಕ್ಕೆ ಬಂದು, ಅನೌಪಚಾರಿಕ ವಲಯದ ಕಡಿಮೆ ಕೂಲಿ ಹಾಗೂ ಸುರಕ್ಷಿತವಲ್ಲದ ಕೆಲಸಗಳಲ್ಲಿ ತೊಡಗಿದ್ದಾರೆ. ಕೇವಲ ತಮ್ಮ ದುಡಿಮೆಯೇ ಅವರ ಜೀವನಾಧಾರವಾಗಿರುತ್ತದೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಕೇವಲ ಆರು ಜನ ಮಾತ್ರ ಸ್ವಂತ ಜಮೀನನ್ನು ಹೊಂದಿದವರಾಗಿದ್ದು ಉಳಿದ ೨೪೪ ಮಹಿಳೆಯರು ಯಾವ ಆಸ್ತಿಯನ್ನು ಹೊಂದಿರುವುದಿಲ್ಲ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಕೋಷ್ಟಕ ೪.೧೯: ಸ್ವಂತ ಜಮೀನಿನ ಮಾಹಿತಿ

ಕ್ರಸಂ.	ವಿವರಣೆ	ಒಟ್ಟು	ಶೇಕಡ
೧	ಸ್ವಂತ ಜಮೀನು		
	ಇದೆ	೬	೨.೪
	ಇಲ್ಲ	೨೪೪	೯೭.೬
	ಒಟ್ಟು	೨೫೦	೧೦೦
೨	ಮಹಿಳೆಯರ ಸಂಬಳದ ಮೇಲೆ ಅವಲಂಬನೆ		
	ಇದೆ	೨೫೦	೧೦೦
	ಇಲ್ಲ	೦	೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೧೯ರಲ್ಲಿ ತೋರಿಸಿದಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ಕೇವಲ ತಮ್ಮ ಕೆಲಸದ ಮೇಲೆಯೇ ಅವಲಂಬನೆ ಹೊಂದಿದವರಾಗಿದ್ದು ಸ್ವಂತ ಜಮೀನನ್ನು ಹೊಂದಿರುವು ದಿಲ್ಲ. ಇದೇ ಅಭಿಪ್ರಾಯವು ೧೯೮೮ರ ನ್ಯಾಷನಲ್ ಕಮೀಷನ್ ಆನ್ ಸೆಲ್ಫ್ ಎಂಪ್ಲಾಯಿಡ್ ವುಮೆನ್ ಅಂಡ್ ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್ (ಶ್ರಮಶಕ್ತಿ) ವರದಿಯಲ್ಲಿಯೂ ವ್ಯಕ್ತವಾಗಿರುತ್ತದೆ. ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರು ಯಾವ ಸ್ವಂತ ಆಸ್ತಿಯನ್ನು ಹೊಂದಿರುವುದಿಲ್ಲ. ಒಂದು ವೇಳೆ ಹೊಂದಿದ್ದರೂ ಕುಟುಂಬ ಹಂತದಲ್ಲಿ ಅವಳಿಗೆ ಆಸ್ತಿಯ ಒಡೆತನ ಇರುವುದಿಲ್ಲ. ಈ ರೀತಿಯ ಒಡೆತನ ಮಹಿಳೆಯರಿಗೆ ಇದ್ದದ್ದೇ ಆದರೆ ಮಹಿಳೆಯರೂ ಕೂಡ ಉದ್ಯೋಗ ಕ್ಷೇತ್ರಕ್ಕೆ ಅವಶ್ಯವಿರುವ ವಿದ್ಯಾಭ್ಯಾಸ, ಕೌಶಲ್ಯವನ್ನು ಪಡೆಯುತ್ತಿದ್ದರು ಎಂದು ವರದಿ ಮಾಡಿದೆ.

ಮಹಿಳೆಯರ ಸಂಬಳದ ಮೇಲಿನ ಅವಲಂಬನೆ :

ಮಹಿಳೆಯರು ಸಾಮಾನ್ಯವಾಗಿ ಕುಟುಂಬದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿದಾಗ ಮಾತ್ರ ದುಡಿಮೆಯ ರಂಗಕ್ಕೆ ಇಳಿಯುತ್ತಾರೆ. ಮಹಿಳೆಯರು ಸಾಮಾನ್ಯವಾಗಿ ಮನೆಯಲ್ಲಿ ಕೂಲಿ ರಹಿತ ದುಡಿಮೆಗಾರರಾಗಿ ಸೇವೆ ಸಲ್ಲಿಸುತ್ತಾರೆ. ಈ ದುಡಿಮೆಗೆ ಯಾವ ಕೂಲಿಯೂ ನಿಗಧಿಯಾಗಿರುವುದಿಲ್ಲ. ಅಲ್ಲದೇ ಮನೆಯ ಹಾಗೂ ಸಮಾಜದ ಕಟ್ಟುಪಾಡುಗಳಿಂದ ಮಹಿಳೆಯ ಚಲನೆಯ ಮೇಲಿನ ನಿರ್ಬಂಧವೇರ್ಪಟ್ಟು ಹೊರಗಿನ ದುಡಿಮೆಗೆ ಪ್ರವೇಶವಿರುವುದಿಲ್ಲ. ಆದರೆ ಕುಟುಂಬದಲ್ಲಿ ಅಕಸ್ಮಾತ್ತಾಗಿ ಅವಘಡಗಳು ಸಂಭವಿಸಿದಾಗ (ಕುಟುಂಬದ ಯಜಮಾನನ ಸಾವು, ಅನಾರೋಗ್ಯ, ಆರ್ಥಿಕ ಮುಗ್ಗಟ್ಟು) ಮಹಿಳೆ ಹೊರಗೆ ಬಂದ ದುಡಿದು ಸಂಪಾದಿಸಬೇಕಾಗುತ್ತದೆ. ಈ ರೀತಿ ಮಹಿಳೆ ಕೂಲಿ ರಹಿತ ಹಾಗೂ ಕೂಲಿ ಸಹಿತ ದುಡಿಮೆಯಲ್ಲಿ ತೊಡಗಬೇಕಾಗುತ್ತದೆ. ಇದೇ ಅಭಿಪ್ರಾಯವನ್ನು ಡಾ. ಟಿ.ಆರ್.ಚಂದ್ರಶೇಖರ ಅವರೂ ವ್ಯಕ್ತಪಡಿಸಿದ್ದಾರೆ. ಮಹಿಳೆಯರು ಬೆವರುಬಸಿದು (ಉತ್ಪಾದನಾ ದುಡಿಮೆ) ಕಣ್ಣೀರು ಹಾಕಿ (ಕೌಟುಂಬಿಕ ದುಡಿಮೆ) ರಕ್ತ ಸುರಿಸಿ (ಸಂತಾನೋತ್ಪತ್ತಿ ದುಡಿಮೆ) ದುಡಿಯುತ್ತಿದ್ದಾಳೆ. ಈ ರೀತಿಯಾಗಿ ವಾಸ್ತವವಾಗಿ ಮಹಿಳೆಯರು ಮೂರು ಬಗೆಯ ದುಡಿಮೆಯನ್ನು ದುಡಿಯುತ್ತಿದ್ದಾರೆ. ಈ ಮೂರು ಬಗೆಯ ದುಡಿಮೆಯ ಪೈಕಿ ಪುರುಷರು ಕೇವಲ ಮೊದಲನೆಯ ಬಗೆಯನ್ನು ಮತ್ತು ಸ್ವಲ್ಪಮಟ್ಟಿಗೆ ಎರಡನೆಯ ಬಗೆಯನ್ನು ನಿರ್ವಹಿಸುತ್ತಾರೆ. ಮೂರು ಬಗೆಯ ದುಡಿಮೆಯನ್ನು ಮಹಿಳೆಯರು ನಿರ್ವಹಿಸುತ್ತಿರುವುದರಿಂದ ದುಡಿಮೆಯ ಭಾರ ಅವರ ಮೇಲೆ ಅಧಿಕವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಕುಟುಂಬದ ಸಕಲ ಜವಾಬ್ದಾರಿಗಳೂ ಮಹಿಳೆಯರವೇ ಆಗಿದ್ದು ಇದರ ಸಾಧಕ ಬಾಧಕಗಳನ್ನು ಮಹಿಳೆಯರೇ ಹೊರಬೇಕಾಗುತ್ತದೆ.

ಹೊಸಪೇಟೆಯ ಮಹಿಳಾ ಮನೆಗೆಲಸಗಾರರಲ್ಲಿ ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳೆಯರ ಕುಟುಂಬಗಳೂ ಮಹಿಳೆಯರ ಸಂಬಳದ ಮೇಲೆಯೇ ಅವಲಂಬಿತವಾಗಿದೆ. ಒಂದು ವೇಳೆ ತಮ್ಮ ದುಡಿಮೆಯ ಹಣ ಸಾಕಾಗದೇ ಹೋದಾಗ ಸಾಲ ಮಾಡಿಯಾದರೂ ಕುಟುಂಬ ನಿರ್ವಹಿಸುತ್ತಾರೆ. ಹೀಗೆ ೯೩ ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಗೆ ಸಾಲ ಮಾಡಿರುವುದಾಗಿ ತಿಳಿಸಿರುತ್ತಾರೆ. ತಮ್ಮ ಮನೆಗೆಲಸವನ್ನು ಮಾಡಿ ಉಳಿದ ಸಮಯದಲ್ಲಿ ಉಪ ಕಸುಬುಗಳನ್ನು ಮಾಡುತ್ತಾರೆ. ಉದಾ: ಬಟ್ಟೆ ಹೊಲಿಯುವುದು, ಹೂ ಕಟ್ಟುವುದು,ಬತ್ತಿ ಮಾಡುವುದು. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳೆಯರು ಕುಟುಂಬದ ಸಮಸ್ತ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ. ಮೊದಲು ಪುರುಷನ ಅಥವಾ ಪತಿಯ ದುಡಿಮೆಗೆ ಬೆಂಬಲವಾಗಿ ದುಡಿಯುವ ಕ್ಷೇತ್ರಕ್ಕಿಳಿದ ಮಹಿಳೆ ಕ್ರಮೇಣವಾಗಿ ಪೂರ್ಣ ಪ್ರಮಾಣದ ದುಡಿಮೆಗಾರಳಾಗಿ ರೂಪುಗೊಂಡಿದ್ದಾಳೆ.

೪.೨೦: ಕೂಲಿಯನ್ನು ನಿರ್ಧರಿಸುವ ಕ್ರಮ

ಮಹಿಳೆಯರು ತಮ್ಮ ಶ್ರಮಕ್ಕೆ ಕೂಲಿಯನ್ನು ಪಡೆಯುತ್ತಾರೆ. ಆದರೆ ಕೂಲಿಯನ್ನು ನಿರ್ಧರಿಸುವ ಕ್ರಮ ಯಾವುದು ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಎಲ್ಲಾ ೨೫೦ ಮಹಿಳೆಯರೂ ಮನೆಯ ಜನರನ್ನು ಲೆಕ್ಕದಲ್ಲಿಟ್ಟುಕೊಂಡು ಕೂಲಿ ನಿರ್ಧರಿಸುತ್ತಿದ್ದಾರೆ. ಸಾಮಾನ್ಯವಾಗಿ ಮಹಿಳೆಯರು ತಮ್ಮ

ಮನೆಯಲ್ಲಿ ನಿರ್ವಹಿಸುವ ಕೆಲಸಗಳನ್ನೇ ತಾವು ಒಪ್ಪಿಕೊಂಡ (ಮನೆಮಾಲೀಕರ) ಮನೆಯಲ್ಲಿಯೂ ಮಾಡುತ್ತಿದ್ದಾರೆ. ಉದಾ: ಕಸಗುಡಿಸಿ ನೆಲಸಾರಿಸುವುದು, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು, ಅಡುಗೆ ಮಾಡುವುದು ಇತ್ಯಾದಿ. ಆದರೆ ಅಡುಗೆ ಮಾಡುವುದನ್ನು ಹೊರತುಪಡಿಸಿ ಬೇರೆಲ್ಲಾ ಕೆಲಸಗಳು ಒಂದೇ ರೀತಿಯಾಗಿದೆ. ಕೆಲವು ಮನೆ ಮಾಲೀಕರು ಮಾತ್ರ ಎಲ್ಲಾ ಕೆಲಸಗಳನ್ನು ಮನೆಗೆಲಸದ ದುಡಿಮೆಗಾರರಿಗೆ ಒಪ್ಪಿಸದೇ ಕೇವಲ ತಮಗೆ ಆಗದ ಕೆಲಸಗಳನ್ನು ಮನೆಗೆಲಸದವರಿಂದ ಮಾಡಿಸಿಕೊಳ್ಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಕಡಿಮೆ ಕೂಲಿ ನಿಗಧಿಯಾಗುತ್ತದೆ. ಯಾವುದೇ ಕೆಲಸವನ್ನು ಮಹಿಳೆಯರು ಮಾಡಲಿ, ಮೊದಲು ಮನೆಯಲ್ಲಿ ಇರುವ ಸದಸ್ಯರ ಲೆಕ್ಕವನ್ನು ತೆಗೆದುಕೊಳ್ಳುತ್ತಾರೆ. ಚಿಕ್ಕ ಕುಟುಂಬವಾಗಿದ್ದರೆ ಬಟ್ಟೆ, ಪಾತ್ರೆ ಕಡಿಮೆ ಇರುತ್ತದೆ. ವಾಸಿಸುವ ಮನೆಯೂ ಚಿಕ್ಕದಾಗಿರುವ ಸಾಧ್ಯತೆಗಳೇ ಹೆಚ್ಚಿದ್ದು, ಕೆಲಸ ಕಡಿಮೆಯಾಗಿರುತ್ತದೆ.

ಆದರೆ ಮನೆಯಲ್ಲಿ ವಾಸಿಸುವ ಸದಸ್ಯರ ಸಂಖ್ಯೆ ಜಾಸ್ತಿಯಾಗಿದ್ದು, ಬಟ್ಟೆ ಪಾತ್ರೆ ಜಾಸ್ತಿ ಇರುವುದರ ಜೊತೆಗೆ ಮನೆಯೂ ಕೂಡ ದೊಡ್ಡದಾಗಿ ಸ್ವಚ್ಛಗೊಳಿಸುವ ಕೆಲಸ ಹೆಚ್ಚಾಗಿರುತ್ತದೆ. ಅಂತಹ ಸಮಯದಲ್ಲಿ ಕೂಲಿಯನ್ನು ಅಥವಾ ಮಾಸಿಕ ಸಂಭಾವನೆಯನ್ನು ಹೆಚ್ಚಿಗೆ ಕೇಳಲಾಗುತ್ತದೆ. ಕಾರ್ಮಿಕರ ಇಲಾಖೆ ಮನೆಗೆಲಸದ ದುಡಿಮೆಗಾರರಿಗೆ ನಿಗಧಿಪಡಿಸಿದ ವೇತನವೂ ಕೂಡ ಮನೆಯ ಸದಸ್ಯರನ್ನು ಗಮನದಲ್ಲಿಟ್ಟು ಕೊಂಡೇ ಮಾಡಿದ್ದು, ಆ ಶಾಸನವು ಜಾರಿಗೆ ಬರಲು ಇರುವ ಅಡೆತಡೆಗಳು ನಿವಾರಣೆಯಾದಾಗ ಮಾತ್ರ ಮನೆಗೆಲಸದ ಮಹಿಳೆಯರ ಬದುಕು ಹಸನಾಗಬಲ್ಲದು. ಇಲ್ಲದಿದ್ದರೆ ಮನೆಮಾಲೀಕರ ಕೃಪಕಟಾಕ್ಷದಿಂದ ಜೀವನ ನೂಕಬೇಕಾಗುತ್ತದೆ. ಕೋಷ್ಟಕ ೪.೨೦ರಲ್ಲಿ ಮನೆಗೆಲಸದ ಕೂಲಿ ನಿರ್ಧರಿಸುವ ಮಾಹಿತಿ ಲಭ್ಯವಾಗಿದೆ.

ಕೋಷ್ಟಕ ೪.೨೦: ಮಹಿಳೆಯರ ಕೂಲಿ ನಿರ್ಧರಿಸುವ ಕ್ರಮ

ಕ್ರ.ಸಂ.	ಮಹಿಳೆಯರ ಕೂಲಿ ನಿರ್ಧರಿಸುವ ಕ್ರಮ	ಒಟ್ಟು	ಶೇಕಡ
೧	ಮನೆಯ ಜನರ ಲೆಕ್ಕ	೨೫೦	೧೦೦
೨	ಮನೆ ಕೆಲಸದ ಲೆಕ್ಕ	೦	೦
೩	ಎರಡೂ	೦	೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೪.೨೦ರಲ್ಲಿ ವ್ಯಕ್ತವಾದ ಮಾಹಿತಿಯಂತೆ ಮನೆಗೆಲಸಕ್ಕೆ ಕೂಲಿಯನ್ನು ನಿರ್ಧರಿಸುವಾಗ ಮನೆಯ ಜನರನ್ನೇ ಲೆಕ್ಕಕ್ಕೆ ತೆಗೆದುಕೊಳ್ಳುವ ಪದ್ಧತಿ ಹೊಸಪೇಟೆಯಲ್ಲಿ ಜಾರಿಯಲ್ಲಿದೆ. ಮನೆಗೆ ಅತಿಥಿಗಳು ಆಗಮಿಸಿದಾಗ ಮಾತ್ರ ದಿನಗೂಲಿಯಂತೆ ಲೆಕ್ಕಹಾಕಿ ಹೆಚ್ಚಿನ ಸಂಭಾವನೆಯನ್ನು ಪಡೆಯುತ್ತಿದ್ದಾರೆ.

ಮನೆಗೆಲಸದ ಮಹಿಳಾ ದುಡಿಮೆಗಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಿದಾಗ ಕಂಡುಬಂದ ಅಂಶವೆಂದರೆ ಮಹಿಳೆಯರಿಗೆ ಸಮಾಜದಲ್ಲಿ ಪುರುಷರಂತೆ ಸ್ಥಾನಮಾನಗಳು ಸಿಗುತ್ತಿಲ್ಲ. ಪುರುಷ ಪ್ರಾಧಾನ್ಯತೆಯೇ ಇಲ್ಲಿಯೂ ಕೂಡ ಮುಂದುವರೆದು ಮಹಿಳೆಯರು ಪುರುಷನ ಅಧೀನಳೆಂಬ

ಭಾವನೆ ಬಲವಾಗಿ ಬೇರೂರಿದೆ. ಈ ಅಭಿಪ್ರಾಯವೇ ಮಹಿಳೆಯರ ದುಡಿಮೆಯ ಕ್ಷೇತ್ರದಲ್ಲೂ ಮುಂದುವರೆದು ಸ್ತ್ರೀಯರಿಗೆ ಅಸಮಾನ ಅವಕಾಶಗಳು ಲಭ್ಯವಾಗಿವೆಯೇ ಹೊರತು ಅವರ ದುಡಿಮೆಗೆ ತಕ್ಕ ಪ್ರತಿಫಲ ದೊರಕುತ್ತಿಲ್ಲ. ಅಲ್ಲದೇ ಅನಕ್ಷರತೆ ಮಹಿಳೆಯರಿಗೆ ಶಾಪವಾಗಿ ಕಾಡುತ್ತಿದೆ. ಇದರ ಪರಿಣಾಮವನ್ನು ಮಹಿಳೆಯರು ದುಡಿಮೆಯ ಕ್ಷೇತ್ರದಲ್ಲೂ ಎದುರಿಸುತ್ತಿದ್ದಾರೆ.

ಅನಕ್ಷರಸ್ಥ ಮಹಿಳೆಯರು ತಮ್ಮ ಶೋಷಣಾಯುಕ್ತ ಜೀವನದಿಂದ ಮುಕ್ತಿಗಾಗಿ ಹಾತೊರೆಯುತ್ತಿದ್ದಾರೆ. ಅಂದರೆ ಶಿಕ್ಷಣದ ಮಹತ್ವವನ್ನು ಮನಗಂಡಿದ್ದಾರೆ. ಶಿಕ್ಷಣದಿಂದ ಮಾತ್ರ ಇಂತಹ ಬದುಕು ಹಸನಾಗಲು ಸಾಧ್ಯ ಎಂಬುದು ಮಹಿಳೆಯರ ಗಮನಕ್ಕೆ ಬಂದಿದೆ. ಇಂತಹ ಮನೋಭಾವ ಸಾಮಾಜಿಕ ಬದಲಾವಣೆಗೆ ನಾಂದಿಯಾಗಬಹುದು. ಆರ್ಥಿಕ ಕ್ಷೇತ್ರದಲ್ಲಿ ಮಹಿಳೆ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿದ್ದಾಳೆ. ಇದರಿಂದ ಹೊರಬರಲು ಹಗಲಿರುಳು ಶ್ರಮಿಸಿದರೂ ಬಡತನದ ವಿಷವರ್ತುಲದಿಂದ ಪಾರಾಗಲು ಸಾಧ್ಯವಾಗುತ್ತಿಲ್ಲ. ಸೀಮಾಂತ ದುಡಿಮೆಗಾರಳಾಗಿ ಕಡಿಮೆ ಆದಾಯ ಹಾಗೂ ವೃತ್ತಿಸುರಕ್ಷತೆಯಿಲ್ಲದ ದುಡಿಮೆಯಲ್ಲಿ ಜೀವನ ಸಾಗಿಸುತ್ತಿದ್ದಾಳೆ. ಸರ್ಕಾರದ ಸಹಾಯ ಹಸ್ತಕ್ಕಾಗಿ ಕಾದು ಕುಳಿತಿರುವ ಮಹಿಳೆಯರು ರಾಜಕೀಯ ಪ್ರಜ್ಞೆಯುಳ್ಳವರಾಗಿದ್ದಾರೆ ಎಂಬ ಮಾಹಿತಿಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಲ್ಲದೇ ದುಡಿಯುವ ರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ.

ಕೊನೆ ಟಿಪ್ಪಣಿಗಳು

೧. ದುಡಿಮೆಯ ಕುರಿತು ವಿವಿಧ ದೃಷ್ಟಿಕೋನಗಳನ್ನು ಜ್ಯೋತಿ ಕಿರಣ್ (೧೯೯೪) ಅವರು ವ್ಯಕ್ತಪಡಿಸಿರುವುದನ್ನು ಲೇಖಕರ ಕೃತಿ 'ವುಮೆನ್ ಲೇಬರ್ ಫೋರ್ಸ್ ಅಂಡ್ ನ್ಯಾಷನಲ್ ಪ್ರಾಡಕ್ಟ್' ನ ಪು.ಸಂ. ೫೯–೬೦ರಲ್ಲಿ ನೋಡುವುದು.

೨. ಫ್ಲೆಕ್ಸಿಬಿಲಿಟಿ ಅಥವಾ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸ ಎಂಬ ಪದವು ೧೯೯೧ರ ಜಾಗತೀಕರಣದ ನಂತರ ಬಳಕೆಗೆ ಬಂದಿದೆ. ಮಹಿಳೆಯರು ಇಬ್ಬಗೆಯ ಹೊರೆಯನ್ನು ನಿಭಾಯಿಸಬೇಕಾಗಿರುವುದರಿಂದ ತಮಗೆ ಹೊಂದಾಣಿಕೆಯಾಗುವ ಕೆಲಸದಲ್ಲಿ ತೊಡಗುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಪದ ಪ್ರಯೋಗ ಮಾಡಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಹೇಮಲತಾ.ಹೆಚ್.ಎಂ. (೨೦೦೬) ಅವರ ಮಹಿಳಾ ಅಧ್ಯಯನ ಪು.ಸಂ ೪೮ ನ್ನು ನೋಡುವುದು.

೩. ಜೆನ್‌ಬ್ರೆಮೆನ್ (೧೯೯೪) ಅವರು ಅಸಂಘಟಿತ ವಲಯದಲ್ಲಿ ಮಹಿಳೆಯರಲ್ಲದೇ ವೃದ್ಧರೂ, ಅಂಗವಿಕಲರೂ ದುಡಿಯುತ್ತಿದ್ದಾರೆ ಎಂಬ ವಿಷಯವನ್ನು ಬಹಿರಂಗ ಪಡಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಲೇಖಕರ 'ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್' ಕೃತಿಯ ಪು.ಸಂ.೧೦ ನ್ನು ನೋಡುವುದು.

೪. ಪಾರ್ವತಿ ರಘುರಾಮ್(೧೯೯೯) ಅವರ ಲೇಖನ 'ಇಂಟರ್ ಲಿಂಕಿಂಗ್ ಪ್ರಾಜೆಕ್ಟರೀಸ್'ನಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರ ನೇಮಕ ಹಾಗೂ ವಸತಿ ಸಮಸ್ಯೆಗಳ ಕುರಿತಾಗಿ ಮಾಹಿತಿ ಲಭ್ಯವಿದೆ. ಅಗತ್ಯ ಮಹಿತಿ ಪಡೆಯಲು ಜೆನೆತ್ ಹೆನ್ಸಾಲ್ ಮೋಮ್ಸೆನ್ ಅವರು ಸಂಪಾದಿಸಿದ 'ಮೈಗ್ರೇಷನ್ ಅಂಡ್ ಡೊಮೆಸ್ಟಿಕ್ ವರ್ಕ ಇನ್ ಇಂಡಿಯ' ಕೃತಿಯ ಪು.ಸಂ. ೨೧೬–೨೧೭ ನ್ನು ನೋಡುವುದು.

೫. ಮಹಿಳೆ ಮಾರುಕಟ್ಟೆಯನ್ನು ಪ್ರವೇಶಿಸಲು ಇರುವ ಅಡೆತಡೆಗಳ ಕುರಿತು ಕೃಷ್ಣಕುಮಾರಿ.ಡಿ.ಬಿ.ಹಾಗೂ ರಾಮಣ್ಣ ಡಿ.ವಿ. (೨೦೦೦) ಅವರ 'ಎಂಪ್ಲಾಯ್‌ಮೆಂಟ್ ಫಾರ್ ಜೆಂಡರ್ ಈಕ್ವಾಲಿಟಿ–ಪಾಲಿಸೀ ಇಂಟರ್‌ವೆನ್ಷನ್ಸ್' ಲೇಖನದ ಪು.ಸಂ. ೬೭ನ್ನು ನೋಡುವುದು. ಮೂಲ ಕೃತಿ ಎಸ್.ಮೂರ್ತಿಯವರ 'ವುಮೆನ್ ಅಂಡ್ ಎಂಪ್ಲಾಯ್‌ಮೆಂಟ್'.

೬. ಮನೆಗೆಲಸದ ಮಹಿಳಾ ದುಡಿಮೆಗಾರರನ್ನು ಸಾಮಾಜಿಕ ಕಟ್ಟುಪಾಡುಗಳು ಹೇಗೆ ಬಾಧಿಸುತ್ತಿವೆ ಎಂಬ ವಿಷಯದ ವಿವರವಾದ ಅಧ್ಯಯನಕ್ಕೆ ವನಿತಾಸಿಂಗ್(೨೦೦೭) ಅವರ ಕೃತಿ 'ವುಮೆನ್ ಡೊಮೆಸ್ಟಿಕ್ಸ್ : ವರ್ಕರ್ಸ್ ವಿಥಿನ್ ಹೌಸ್ ಹೋಲ್ಡ್' ಪು.ಸಂ. ೧೮–೧೯ನ್ನು ನೋಡುವುದು.

೭. ದುಡಿಯುವ ಮಹಿಳೆ ಪುರುಷನಿಗೆ ಹೇಗೆ ಅಧೀನವಾಗಿ ಬಾಳಬೇಕಾದ ಪರಿಸ್ಥಿತಿ ಇದೆ ಎಂಬುದನ್ನು ವಿವರಿಸಿದ್ದಾರೆ. ಲೇಖಕರು ಇಂದಿರಾ ಆರ್. (೨೦೦೨) ಕೃತಿ: ಮಹಿಳೆ, ಸಮಾಜ ಮತ್ತು ಸಂಸ್ಕೃತಿ. (ಪು.ಸಂ. ೫೨).

೮. ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅನೌಪಚಾರಿಕ ವಲಯಕ್ಕೆ ಬರಲು ಕಾರಣವಾದ ಅಂಶಗಳನ್ನು ಫಜಲ್ ಅಹ್ಮದ್(೧೯೯೯)ಅವರು ತಮ್ಮ ಕೃತಿ 'ಲೇಬರ್ ಇನ್ ಇನ್‌ಫಾರ್ಮಲ್ ಸೆಕ್ಟರ್'ನಲ್ಲಿ ವಿವರಿಸಿದ್ದಾರೆ. ಪು.ಸಂ. (೫–೬).

೯. ಟುವರ್ಡ್ಸ್ ಈಕ್ವಾಲಿಟಿ (೧೯೭೫) ವರದಿಯಲ್ಲಿ ಗ್ರಾಮೀಣ ಮಹಿಳೆಯರು ಹೆಚ್ಚಾಗಿ ಅನಕ್ಷರಸ್ತರಾಗಿರುವುದರಿಂದ ಹೆಚ್ಚಿನ ವೇತನ ತಾರತಮ್ಯ ಎದುರಿಸಬೇಕಾಗಿದೆ ಎಂಬ ವಿವರ ಲಭ್ಯವಿದೆ. ಅಗತ್ಯ ಮಾಹಿತಿಗಾಗಿ ವರದಿಯ ಪು.ಸಂ. ೧೬೫ನ್ನು ಅಭ್ಯಶಿಸುವುದು.

೧೦. ಪದ್ಮಿನಿ ಸೇನ್ ಗುಪ್ತ (೧೯೬೦) ಕೃಷಿಯ ಮೇಲಿನ ಒತ್ತಡವು ಮಹಿಳೆಯರು ನಗರಕ್ಕೆ ವಲಸೆ ಬರಲು ಪ್ರಮುಖ ಕಾರಣ ಎಂಬ ವಿಚಾರವನ್ನು ಲೇಖಕರು ತಮ್ಮ ಗ್ರಂಥ 'ವುಮೆನ್ ವರ್ಕರ್ಸ್ ಆಫ್ ಇಂಡಿಯಾ' ಕೃತಿಯ ಪು.ಸಂ. ೧೯–೨೦ರಲ್ಲಿ ವಿವರಿಸಿದ್ದಾರೆ.

೧೧. ಸುಭಾಷಿನಿ ಮಹಾಪಾತ್ರ (೨೦೦೬) ಅವರ 'ವುಮೆನ್ ಇನ್ ಲೇಬರ್ ಫೋರ್ಸ್' ಕೃತಿಯಲ್ಲಿ ಕೃಷಿಯಲ್ಲಿ ಆಧುನೀಕರಣದ ಪ್ರಯೋಗದಿಂದ ಮಹಿಳಾ ಉದ್ಯೋಗಿಗಳ ಮೇಲಾದ ಪರಿಣಾಮವನ್ನು ಕುರಿತ ವಿಶ್ಲೇಷಣೆ ಲಭ್ಯವಿದೆ. (ಪು.ಸಂ. ೨೬).

ಅಧ್ಯಾಯ ಐದು

ಮಹಿಳೆಯರ ರಾಜಕೀಯ ಪ್ರಜ್ಞೆ ಹಾಗೂ ಔದ್ಯೋಗಿಕ ಸ್ಥಿತಿಗತಿಗಳು

೫.೧. ರಾಜಕೀಯ ಮಾಹಿತಿ
ಔದ್ಯೋಗಿಕ ಮಾಹಿತಿ

೫.೨. ವೃತ್ತಿ ನಿರತ ವರ್ಷಗಳು

೫.೩. ಕೆಲಸದ ಮನೆಗಳ ಸಂಖ್ಯೆ ಹಾಗೂ ಕೆಲಸದ ಅವಧಿ

೫.೪. ಮನೆಗೆಲಸದ ಆಯ್ಕೆಗೆ ಕಾರಣ

೫.೫. ಮಾಲೀಕರ ಮನೆಯಲ್ಲಿ ನಿರ್ವಹಿಸುವ ಕೆಲಸಗಳು ಹಾಗೂ ಕೆಲಸದ ಮನೆಯ ದೂರ

೫.೬. ಮನೆಗೆಲಸದ ದುಡಿಮೆಗೆ ತರಬೇತಿಯ ಅವಶ್ಯಕತೆ

೫.೭. ವೃತ್ತಿಯಿಂದ ಆರೋಗ್ಯದ ಮೇಲಾಗುವ ಪರಿಣಾಮ

೫.೮. ಬೇರೆ ಕೆಲಸದಲ್ಲಿ ಆಸಕ್ತಿ

೫.೯. ಕೂಲಿಯಲ್ಲದೇ ಇತರೆ ಸೌಲಭ್ಯ

೫.೧೦. ಮಹಿಳೆಯರ ಕಾನೂನು ಪ್ರಜ್ಞೆ

೫.೧೧. ಇತರೆ ಮಾಹಿತಿ

ಅಧ್ಯಾಯ ಐದು

ಮಹಿಳೆಯರ ರಾಜಕೀಯ ಪ್ರಜ್ಞೆ ಹಾಗೂ ಔದ್ಯೋಗಿಕ ಸ್ಥಿತಿಗತಿಗಳ ಅಧ್ಯಯನ

ಪ್ರಸ್ತುತ ಅಧ್ಯಾಯದಲ್ಲಿ ಮಹಿಳೆಯರಿಗಿರುವ ರಾಜಕೀಯ ಪ್ರಜ್ಞೆ ಹಾಗೂ ಔದ್ಯೋಗಿಕ ಕ್ಷೇತ್ರದ ಸ್ಥಿತಿಗತಿಗಳನ್ನರಿಯಲು ಪ್ರಯತ್ನಿಸಲಾಗಿದೆ. ಈ ಉದ್ದೇಶಕ್ಕಾಗಿ ಮಹಿಳೆಯರು ಚುನಾವಣಾ ಗುರುತಿನ ಚೀಟಿ ಹೊಂದಿರುವರೋ ಇಲ್ಲವೋ, ಚುನಾವಣೆಯಲ್ಲಿ ಮತದಾನ ಮಾಡಿದ ವಿವರ, ಚುನಾಯಿತ ಪ್ರತಿನಿಧಿಗಳಿಂದ ಆದ ಜನೋಪಯೋಗಿ ಕಾರ್ಯಗಳ ಬಗ್ಗೆ ಮಾಹಿತಿ ಪಡೆಯಲಾಯಿತು. ಮಹಿಳೆಯರು ಒದಗಿಸಿದ ಮಾಹಿತಿಯ ಪ್ರಕಾರ ಚುನಾವಣೆಯಲ್ಲಿ ಮಹಿಳೆಯರಿಗೆ ಆಸಕ್ತಿ ಇದೆ ಎನ್ನುವ ಸಂಗತಿ ಅರಿವಾಗಿದೆ. ಗುರುತಿನ ಚೀಟಿ ಹೊಂದದೇ ಇರುವವರು ಗುರುತಿನ ಚೀಟಿಯನ್ನು ಪಡೆಯಲು ತೋರಿಸಿರುವ ಆಸಕ್ತಿ ಪ್ರಜಾಪ್ರಭುತ್ವದ ಯಶಸ್ಸಿನ ಸಂಕೇತ ಎಂದೇ ಭಾವಿಸಲಾಗಿದೆ. ಮಹಿಳೆಯರಿಗೆ ಚುನಾವಣೆಯಲ್ಲಿ ಭಾಗವಹಿಸಲು ವಿಶೇಷ ಆಸಕ್ತಿ ಇದೆ. ಆದರೆ ಇತ್ತೀಚಿನ ಸರ್ಕಾರಗಳು ಬೆಲೆ ಏರಿಕೆ ತಡೆಗಟ್ಟುವಲ್ಲಿ ವಿಫಲವಾಗಿರುವುದು ಬಡಮಹಿಳೆಯರಿಗೆ ಸ್ವಲ್ಪ ಆತಂಕ ಮೂಡಿಸಿದೆ.

ಮಹಿಳೆಯರ ಔದ್ಯೋಗಿಕ ಕ್ಷೇತ್ರದ ವಿಸ್ತೃತ ವಿವರಗಳನ್ನು ಸಂಗ್ರಹ ಮಾಡಲು ಪ್ರಶ್ನಾವಳಿಯನ್ನು ತಯಾರಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೇ ಮಹಿಳೆಯರು ಕೆಲಸ ಮಾಡುತ್ತಿರುವ ಸ್ಥಳಗಳಿಗೆ ಭೇಟಿಕೊಟ್ಟು ನಿಜಸ್ಥಿತಿಯನ್ನು ಅವಲೋಕಿಸಲಾಗಿದೆ. ಮಹಿಳೆಯರು ಎಷ್ಟು ವರ್ಷಗಳಿಂದ ಈ ಕೆಲಸದಲ್ಲಿ ತೊಡಗಿದ್ದಾರೆ. ಪ್ರತಿ ಮಹಿಳೆ ಎಷ್ಟು ಮನೆಗಳಲ್ಲಿ ಕೆಲಸ ಮಾಡುತ್ತಿದ್ದಾಳೆ ಹಾಗೂ ಒಂದು ಮನೆಯಲ್ಲಿ ಎಷ್ಟು ಗಂಟೆ ಕೆಲಸಮಾಡುತ್ತಾಳೆ ಎಂಬ ವಿಷಯವನ್ನು ಸಂಗ್ರಹಿಸಿ ಮಹಿಳೆಯರಿಗೆ ಮನೆಗೆಲಸದ ವೃತ್ತಿಯ ಅವಶ್ಯಕತೆ ಎಷ್ಟಿದೆ ಹಾಗೂ ಹೆಚ್ಚಿನ ಮನೆಗಳಲ್ಲಿ ಕೆಲಸ ಮಾಡುವುದರ ಕಾರಣ ಹಾಗೂ ಪರಿಣಾಮಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಅಲ್ಲದೇ ಮಹಿಳೆಯರು ಮನೆಗೆಲಸದಂತಹ ಕೆಳದರ್ಜೆಯ ಕೆಲಸವನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಾದ ಅಂಶಗಳನ್ನು ಕೇಳಿ ಪಡೆಯಲಾಯಿತು. ಮಹಿಳೆಯರು ದಿನನಿತ್ಯ ನಿರ್ವಹಿಸುವ ಕೆಲಸಗಳು, ಕೆಲಸದ ಮನೆಯ ದೂರ, ಮಹಿಳೆಯರಿಗಿರುವ ರಜಾ ಸೌಲಭ್ಯ,

ಕೆಲಸದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಮಾಹಿತಿಯನ್ನು ಸಂಗ್ರಹಿಸುವುದರ ಮೂಲಕ ಮಹಿಳೆಯರು ವೃತ್ತಿಯಲ್ಲಿ ಹೊಂದಿರುವ ಆದರ ಅನಾದರಗಳ ಕುರಿತು ವಿಶ್ಲೇಷಿಸಲಾಗಿದೆ. ಮನೆಗೆಲಸದಿಂದ ಮಹಿಳೆಯರು ಪಡೆಯುವ ಇತರೆ ಸೌಲಭ್ಯಗಳು, ವೃತ್ತಿಯಲ್ಲಿ ಅವರಿಗಿರುವ ಆಸಕ್ತಿ ಬೇರೆ ಕೆಲಸ ಸೇರಲು ಇರುವ ಅವಶ್ಯಕತೆಗಳ ಮಾಹಿತಿ ಪಡೆಯುವುದರ ಮೂಲಕ ಮನೆಗೆಲಸದ ವೃತ್ತಿ ಮಹಿಳೆಯರನ್ನು ಯಾವ ಸ್ಥಿತಿಗೆ ತಂದಿರಿಸಿದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಇತರೆ ಮಾಹಿತಿಯಲ್ಲಿ ಮನೆಗೆಲಸದ ಮಹಿಳೆಯರು ಸರ್ಕಾರದಿಂದ ಯಾವ ಯಾವ ಸವಲತ್ತುಗಳನ್ನು ಪಡೆದಿದ್ದಾರೆ. ಮಹಿಳೆಯರ ಸ್ಥಿತಿಗತಿ ಸುಧಾರಣೆಯಲ್ಲಿ ಒಗ್ಗಟ್ಟಿನ ಅವಶ್ಯಕತೆ ಹಾಗೂ ಕಾರ್ಮಿಕ ಸಂಘಗಳ ನೆರವಿನ ಅಗತ್ಯತೆ ಕುರಿತ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ಮಹಿಳೆಯರು ಅನಿವಾರ್ಯವಾಗಿ ದುಡಿಯಲು ಈ ವೃತ್ತಿಯಲ್ಲಿ ತೊಡಗಿರುವ ಅಂಶ ಬೆಳಕಿಗೆ ಬಂದಿದೆ.

೫.೧. ರಾಜಕೀಯ ಮಾಹಿತಿ

ಮನೆಗೆಲಸದ ಮಹಿಳೆಯರು ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ಯಾವ ರೀತಿಯಲ್ಲಿ ತೊಡಗಿಸಿಕೊಂಡಿದ್ದಾರೆ, ರಾಜಕೀಯ ಕ್ಷೇತ್ರದ ಬಗ್ಗೆ ಅವರಿಗಿರುವ ಆಸಕ್ತಿ ಹಾಗೂ ಮಹಿಳೆಯರ ರಾಜಕೀಯ ಪ್ರಜ್ಞೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಕಾರಣಕ್ಕಾಗಿ ಪ್ರತಿ ಮಹಿಳೆಯರು ಹೊಂದಿರುವ ಮತದಾನದ ಗುರುತಿನ ಚೀಟಿಯ ಮಾಹಿತಿಯನ್ನು ಪಡೆಯಲಾಗಿದೆ.

ಮತದಾನದ ಗುರುತಿನ ಚೀಟಿಯ ಬಳಕೆಯನ್ನು ಭಾರತ ಸರ್ಕಾರ ೧೯೯೩ರಲ್ಲಿ ಟಿ.ಎನ್. ಶೇಷನ್‌ರವರು ಚುನಾವಣಾ ಆಯೋಗದ ಮುಖ್ಯಸ್ಥರಾಗಿದ್ದಾಗ ಜಾರಿಗೆ ತರಲಾಯಿತು. ಈ ಚೀಟಿಯು ಮಹಿಳೆಯರ ಭಾವಚಿತ್ರ, ವಿಳಾಸ ಹಾಗೂ ಇತರೆ ವಿವರಗಳನ್ನೊಳಗೊಂಡಿರುತ್ತದೆ. ಟಿ.ಎನ್. ಶೇಷನ್ ಅವರ ಸಮಯದಲ್ಲಿ ಮತದಾನದ ಸಮಯದಲ್ಲಿ ಗುರುತಿನ ಚೀಟಿಯನ್ನು ತೋರಿಸುವುದು ಕಡ್ಡಾಯವಾಗಿತ್ತು. ಆದರೆ ಶೇಷನ್‌ರವರ ಉತ್ತರಾಧಿಕಾರಿಯಾದ ಎಂ.ಎಸ್.ಗಿಲ್‌ರವರು ಮತದಾನದ ಸಂದರ್ಭದಲ್ಲಿ ಗುರುತಿನ ಚೀಟಿಯನ್ನು ಹಾಜರುಪಡಿಸುವುದನ್ನು ಕಡ್ಡಾಯಗೊಳಿಸುವ ನಿಯಮವನ್ನು ಸಡಿಲಿಸಿದರು. ಗುರುತಿನ ಚೀಟಿಯ ಬದಲಿಗೆ ಪಡಿತರ ಚೀಟಿ, ಗ್ಯಾಸ್‌ಬಿಲ್ ಮುಂತಾದ ದಾಖಲೆಗಳನ್ನು ಒದಗಿಸಲು ಅವಕಾಶ ನೀಡಿದರು. ನಿಜವಾದ ಮತದಾರ ಮತದಾನದ ಹಕ್ಕಿನಿಂದ ವಂಚಿತರಾಗುವುದನ್ನು ತಪ್ಪಿಸುವುದು ಈ ನಿಯಮ ಸಡಿಲಿಕೆಯ ಉದ್ದೇಶವಾಗಿತ್ತು. ಗುರುತಿನ ಚೀಟಿಯ ಬಳಕೆಯಿಂದ ನಕಲಿ ಮತದಾನವನ್ನು ತಡೆಗಟ್ಟಿ ನಿಜವಾದ ಮತದಾರನಿಗೆ ಮತದಾನದಲ್ಲಿ ಭಾಗವಹಿಸಲು ಅವಕಾಶ ನೀಡಬಹುದು. ಹೀಗೆ ಗುರುತಿನ ಚೀಟಿಯನ್ನು ಮನೆಗೆಲಸಗಾರರು ಹೊಂದಿರುವ ಕುರಿತು ಮಾಹಿತಿ ಪಡೆಯಲಾಯಿತು.

ಸಮೀಕ್ಷೆಗೊಳಗಾದ ೨೫೦ ಮನೆಗೆಲಸದ ಮಹಿಳೆಯರಲ್ಲಿ ೧೮೮ ಮಹಿಳೆಯರು ಮತದಾನದ ಗುರುತಿನ ಚೀಟಿಯನ್ನು ಹೊಂದಿರುತ್ತಾರೆ. ಇನ್ನುಳಿದ ೬೨ ಜನರಲ್ಲಿ ಗುರುತಿನ ಚೀಟಿ ಇರುವುದಿಲ್ಲ. ಅವರು ಮಾಡಿಸಲಿಕ್ಕೆ ಕೊಟ್ಟಿರುವುದಾಗಿಯೂ ಇನ್ನು ವಿತರಣೆಯಲ್ಲಿ ವಿಳಂಬವಾಗಿದೆ ಎಂತಲೂ ವಿವರಣೆ ನೀಡಿರುತ್ತಾರೆ. ಕೆಲವು ಮತದಾರರು (ಗುರುತಿನ ಚೀಟಿಯನ್ನು ಹೊಂದದವರು) ತಮ್ಮ

ಅಸಹಾಯಕತೆಯನ್ನು ವಿವರಿಸಿದರು. ಅವರಿಗೆ ಗುರುತಿನ ಚೀಟಿಯ ಮಹತ್ವವನ್ನು ತಿಳಿಸುತ್ತಾ, ಅದನ್ನು ಮಾಡಿಸುವ ನಿಯಮಗಳನ್ನು ತಿಳಿಸಲಾಗಿದೆ. ಒಟ್ಟಾರೆಯಾಗಿ ಅವಿದ್ಯಾವಂತ ಮಹಿಳೆಯರೂ ಗುರುತಿನ ಚೀಟಿಯ ಬಗ್ಗೆ ತಳೆದಿರುವ ಆಸಕ್ತಿ ಅಚ್ಚರಿಯನ್ನೇ ತಂದಿದೆ ಎನ್ನಬಹುದು.

ಮತದಾನ ಮಾಡಿರುವ ವಿವರ :

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯು ಇಂದು ವಿಶ್ವದ ಎಲ್ಲಾ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಆಚರಣೆಯಲ್ಲಿದೆ. ಜಾತಿ, ಮತ, ಬಣ್ಣ, ಲಿಂಗ, ಹುಟ್ಟು, ಧರ್ಮ, ಸಾಮಾಜಿಕ ಸ್ಥಾನಮಾನ ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೇ ಒಂದು ರಾಷ್ಟ್ರದ ಎಲ್ಲ ವಯಸ್ಕ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡುವ ಚುನಾವಣಾ ಪದ್ಧತಿ, ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ. ಭಾರತದಲ್ಲಿ ೧೮ ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಪ್ರಜೆಗಳು ಮತದಾನದ ಹಕ್ಕನ್ನು ಹೊಂದಿದ್ದಾರೆ. ಅಂದರೆ ಮಹಿಳೆಯರೂ ಕೂಡ ಲಿಂಗಭೇದವಿಲ್ಲದೇ ಮತದಾನದಲ್ಲಿ ತಮ್ಮ ಹಕ್ಕನ್ನು ಚಲಾವಣೆ ಮಾಡಿ ಅರ್ಹ ಅಭ್ಯರ್ಥಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವಲ್ಲಿ ಪ್ರಮುಖ ಪಾತ್ರವಹಿಸಬಹುದು.

ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನದ ಕುರಿತು ಗಾಢಚಿಂತನೆ ನಡೆಯಿತು. ಅದರಲ್ಲೂ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವುದರಿಂದ ಕೆಲವು ದುಷ್ಪರಿಣಾಮಗಳಾಗುತ್ತವೆ. ಇದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತದೆ. ಕುಟುಂಬದ ನೆಮ್ಮದಿ ಹಾಳಾಗುತ್ತದೆ ಎಂಬುದು ಹಲವಾರು ಚಿಂತಕರ ಅಭಿಪ್ರಾಯವಾಗಿದ್ದಿತು. ಆದರೆ ಸಂವಿಧಾನದ ೩೨೬ನೇ ವಿಧಿಯನ್ವಯ ಯಾವ ತಾರತಮ್ಯವಿಲ್ಲದೇ, ೧೮ ವರ್ಷ ಮೇಲ್ಪಟ್ಟ ಸ್ತ್ರೀಪುರುಷರು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸಬಹುದಾಗಿದೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ರಾಜಕೀಯ ಪ್ರತಿನಿಧಿಯನ್ನು ಆರಿಸುವಲ್ಲಿ ಆಸಕ್ತಿ ಹೊಂದಿದವರಾಗಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೧೮೮ ಮಹಿಳೆಯರು ಮತದಾನದಲ್ಲಿ ಭಾಗಿಯಾಗಿರುತ್ತಾರೆ. ಆದರೆ ಚುನಾವಣಾ ಗುರುತಿನ ಚೀಟಿಯನ್ನು ಹೊಂದದ ೬೨ ಮಹಿಳೆಯರು ತಮಗೆ ಬಂದ ಸಂವಿಧಾನಾತ್ಮಕ ಹಕ್ಕಿನಿಂದ ವಂಚಿತರಾಗಿದ್ದಾರೆಂದೇ ಹೇಳಬಹುದು. ಸಂಬಂಧಪಟ್ಟ ಇಲಾಖೆಗಳು ಮಹಿಳೆಯರ ಗುರುತಿನ ಚೀಟಿಯನ್ನು ಮಾಡಿಕೊಡುವಲ್ಲಿ ಆಸಕ್ತಿ ತೋರಿಸಿ ಮತದಾನ ಮಾಡಲು ಅವಕಾಶ ಮಾಡಿಕೊಡಬೇಕಾಗಿದೆ.

ಚುನಾವಣಾ ಪ್ರತಿನಿಧಿಗಳ ಸಹಾಯ :

ಹೊಸಪೇಟೆಯ ಮನೆಗೆಲಸದ ಮಹಿಳೆಯರು ತಾವು ಆರಿಸಿ ಕಳಿಸಿದ ಪ್ರತಿನಿಧಿಗಳಿಂದ ಸಹಾಯವನ್ನು ನಿರೀಕ್ಷಿಸುತ್ತಿದ್ದಾರೆ. ಆದರೆ ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೫೦ ಮಹಿಳೆಯರು ಮಾತ್ರ ಚುನಾಯಿತ ಪ್ರತಿನಿಧಿಗಳಿಂದ ಸಹಾಯ ಪಡೆದಿರುತ್ತಾರೆ. ಆದರೆ ೨೦೦ ಮಹಿಳೆಯರಿಗೆ ಚುನಾವಣಾ ಪ್ರತಿನಿಧಿಗಳಿಂದ ಯಾವ ಸಹಾಯವೂ ದೊರೆತಿಲ್ಲ. ಈ ವಿಷಯವು ಮಹಿಳೆಯರ ಬೇಸರಕ್ಕೆ ಕಾರಣವಾಗಿದೆ. ಪ್ರಜಾಪ್ರಭುತ್ವ ಸರ್ಕಾರದಲ್ಲಿ ಪ್ರಜೆಗಳೇ ಪ್ರಭುಗಳು. ಇವರ ಹಿತಾಸಕ್ತಿಯನ್ನು ನೋಡಿಕೊಳ್ಳುವುದು ಚುನಾಯಿತ ಪ್ರತಿನಿಧಿಗಳ ಆದ್ಯ ಕರ್ತವ್ಯವಾಗಿದೆ.

ಚುನಾವಣಾ ಅಕ್ರಮ :

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಲ್ಲಿ ಜಾತಿ, ಮತ, ವರ್ಗ ಹಾಗೂ ಲಿಂಗ ಭೇದವಿಲ್ಲದೇ, ೧೮ ವರ್ಷ ಮೇಲ್ಪಟ್ಟ ಸ್ತ್ರೀಪುರುಷರೆಲ್ಲರೂ ಮತದಾನ ಮಾಡಬಹುದಾಗಿದೆ. ಈ ಪದ್ಧತಿಯು ಹಲವಾರು ದೋಷಗಳನ್ನು ಹೊಂದಿರುವುದರಿಂದ ಚುನಾವಣೆಯಲ್ಲಿ ಅಕ್ರಮಗಳು ಸಾಮಾನ್ಯವಾಗಿವೆ. ಎಲ್ಲ ವಯಸ್ಕ ಮತದಾರರಿಗೂ ಮತದಾನದ ಹಕ್ಕನ್ನು ನೀಡಿರುವುದರಿಂದ ಅನಕ್ಷರಸ್ಥರೇ ಹೆಚ್ಚಾಗಿರುವ ಭಾರತದಲ್ಲಿ ಅಸಮರ್ಥರು ಹಾಗೂ ಅಜ್ಞಾನಿಗಳು ಜನ ಪ್ರತಿನಿಧಿಗಳಾಗಬಹುದು. ಅನಕ್ಷರಸ್ಥರೂ ಅಜ್ಞಾನಿಗಳು ಅದ ಬಹುತೇಕ ಮತದಾರರಿಗೆ ತಮ್ಮ ಹಕ್ಕಿನ ಪ್ರಾಮುಖ್ಯತೆಯ ಅರಿವೇ ಇರುವುದಿಲ್ಲ. ಇಂತಹ ಮತದಾರರು ತಮ್ಮ ಹಕ್ಕನ್ನು ಕೆಲವು ಆಮಿಷಗಳಿಗೆ ಮಾರಿಕೊಳ್ಳುತ್ತಾರೆ ಎಂಬ ವಾದವಿದೆ. ಅದೇ ರೀತಿಯಾಗಿ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೧೩೧ ಮಹಿಳೆಯರು ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಆದರೆ ಉಳಿದ ೧೧೯ ಮಹಿಳೆಯರು ತಾವು ಯಾವುದೇ ಆಮಿಷಕ್ಕೆ ಒಳಗಾಗಿರುವುದಿಲ್ಲ ಎಂಬುದರ ಮೂಲಕ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಪಾವಿತ್ರ್ಯತೆಯನ್ನು ಎತ್ತಿ ಹಿಡಿದಿದ್ದಾರೆ ಎಂದು ಹೇಳಬಹುದು.

ಕೋಷ್ಟಕ ೫.೧: ಮನೆಗೆಲಸದ ಮಹಿಳೆಯರ ರಾಜಕೀಯ ಪ್ರಜ್ಞೆಯ ಮಾಹಿತಿ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡ
೧	ಚುನಾವಣಾ ಗುರುತಿನ ಚೀಟಿ		
	ಇದೆ	೧೮೮	೭೫.೨೦
	ಇಲ್ಲ	೬೨	೨೪.೮೦
	ಒಟ್ಟು	೨೫೦	೧೦೦.೦೦
೨	ಮತದಾನಮಾಡಿರುವಿರಾ?		
	ಹೌದು	೧೮೮	೭೫.೨೦
	ಇಲ್ಲ	೬೨	೨೪.೮೦
	ಒಟ್ಟು	೨೫೦	೧೦೦.೦೦
೩	ಚುನಾವಣಾ ಪ್ರತಿನಿಧಿಗಳ ಸಹಾಯ		
	ದೊರೆತಿದೆ	೫೦	೨೦.೦೦
	ದೊರೆತಿಲ್ಲ	೨೦೦	೮೦.೦೦
	ಒಟ್ಟು	೨೫೦	೧೦೦.೦೦
೪	ಚುನಾವಣೆಯಲ್ಲಿ ಅಕ್ರಮ		
	ನಡೆದಿದೆ	೧೩೧	೫೨.೪೦
	ನಡೆದಿಲ್ಲ	೧೧೯	೪೭.೬೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೧ನ್ನು ಗಮನಿಸಿದಾಗ ಅಧಿಕ ಸಂಖ್ಯೆಯ ಮಹಿಳಾ ಮನೆಗೆಲಸಗಾರರು ರಾಜಕೀಯ ಪ್ರಜ್ಞೆಯನ್ನು ಹೊಂದಿರುತ್ತಾರೆ. ಹಾಗೂ ಚುನಾವಣೆಯಲ್ಲಿ ಭಾಗವಹಿಸಿ ಅರ್ಹ ಪ್ರತಿನಿಧಿಯನ್ನು

ಆರಿಸಲು ಆಸಕ್ತಿ ಹೊಂದಿದವರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಧಿಕಾರಕ್ಕೆ ಬಂದ ಯಾವ ರಾಜಕೀಯ ಪಕ್ಷಗಳೂ ಬಡವರ ಪರವಾಗಿಲ್ಲ, ನಮ್ಮ ಕನಿಷ್ಠ ದುಡಿಮೆಯಿಂದ ಇಂದಿನ ಬೆಲೆಯೇರಿಕೆ ಸಂದರ್ಭದಲ್ಲಿ ಜೀವನ ನಿರ್ವಹಣೆ ದುರ್ಭರವಾಗಿದೆ. ಮುಂದಿನ ಚುನಾವಣೆಯಲ್ಲಿ ನಮ್ಮ ಹಿತಾಸಕ್ತಿಯನ್ನು ಕಾಪಾಡುವ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆಂಬ ನಿರ್ಧಾರದ ಮಾತುಗಳನ್ನು ಎಲ್ಲ ಮನೆಗೆಲಸದ ಮಹಿಳೆಯರೂ ತಿಳಿಸಿದ್ದಾರೆ.

ಔದ್ಯೋಗಿಕ ಮಾಹಿತಿ :

ಅಸಂಘಟಿತ ವಲಯದಲ್ಲಿ ಶೇ. ೯೦ಕ್ಕಿಂತ ಅಧಿಕ ಸಂಖ್ಯೆಯ ಮಹಿಳೆಯರು ದುಡಿಯುತ್ತಿದ್ದಾರೆ. ಸಿದ್ಧಾರ್ಥ ಸರ್ಕಾರ್ (೨೦೦೫) ಅವರು ಅನೌಪಚಾರಿಕ ವಲಯದ ಕೆಲಸಗಳನ್ನು ಈ ರೀತಿಯಾಗಿ ವರ್ಗೀಕರಿಸಿದ್ದಾರೆ. ಮೊದಲನೆಯದಾಗಿ ಹೋಮ್‌ಬೇಸಡ್ ವರ್ಕರ್ಸ್, ಎರಡನೆಯದಾಗಿ ಸೆಲ್ಫ್ ಎಂಪ್ಲಾಯಿಡ್ ಅಂಡ್ ಓನ್ ಅಕೌಂಟ್ ವರ್ಕರ್ಸ್, ಮೂರನೆಯದಾಗಿ ಪೀಸ್‌ವೇಜ್ ವರ್ಕರ್ಸ್, ನಾಲ್ಕನೆಯದಾಗಿ ಟೈಮ್ ವೇಜ್ ವರ್ಕರ್ಸ್.

ಟೈಮ್‌ವೇಜ್ ವರ್ಕರ್ಸ್ ವರ್ಗಕ್ಕೆ ಸೇರಿದ ಕೆಲಸಗಾರರು ತಮ್ಮ ಶ್ರಮವನ್ನು ಕಡಿಮೆ ಕೂಲಿಗೆ ಕ್ರಯಮಾಡುತ್ತಾರೆ. ಆ ವರ್ಗದ ನೌಕರರು ಖಾಯಂ ಉದ್ಯೋಗಿಗಳಾಗಿರುವುದಿಲ್ಲ, ಹಾಗೂ ಅನಾನುಕೂಲಕರ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಅವರು ಜೀವನೋಪಾಯಕ್ಕಾಗಿ ತಮ್ಮ ಶ್ರಮವನ್ನು ನಂಬಿಕೊಂಡಿರುತ್ತಾರೆ. ತೋಟದ ಕೆಲಸಗಾರರು, ಸ್ವಚ್ಛತೆ ಕಾಪಾಡುವವರು, ಕಸಗುಡಿಸುವವರು, ಕಟ್ಟಡ ನಿರ್ಮಾಣ ಮಾಡುವವರು. ಇಟ್ಟಿಗೆ ಮಾಡುವವರು, ಮನೆಗೆಲಸದವರು ಈ ವರ್ಗಕ್ಕೆ ಸೇರಿದವರಾಗಿದ್ದಾರೆ ಎಂದು ಅಭಿಪ್ರಾಯ ಪಡುತ್ತಾರೆ.

ಮನೆಗೆಲಸದ ದುಡಿಮೆಯಲ್ಲಿಯೂ ಕೂಡ ಮೂರು ರೀತಿಯ ದುಡಿಮೆಗಾರರನ್ನು ಕಾಣಬಹುದು. ಮೊದಲನೆಯದಾಗಿ ಕೇವಲ ಕೆಲವೇ ಗಂಟೆಗಳಲ್ಲಿ ತಮಗೊಪ್ಪಿಸಿದ ಕೆಲಸವನ್ನು ಮುಗಿಸಿ ಹೋಗುವವರು. ಎರಡನೆಯದಾಗಿ ಪೂರ್ತಿ ದಿನ ಮನೆಯಲ್ಲಿಯೇ ಇದ್ದು ರಾತ್ರಿ ಮಾತ್ರ ಮನೆಗೆ ತೆರಳುವವರು ಮೂರನೆಯದಾಗಿ ಜೀವನಪೂರ್ತಿ ಒಂದೇ ಮನೆಯ ಕೆಲಸದಲ್ಲಿ ತೊಡಗಿರುವವರು. ಈ ಮೂರು ವರ್ಗಗಳಲ್ಲಿ ಮೊದಲ ವರ್ಗದ ದುಡಿಮೆಗಾರರು ತಮಗೆ ಎಷ್ಟು ವೇತನ ಕೊಡುತ್ತಾರೋ ಅಷ್ಟು ಕೆಲಸವನ್ನು ನಿಗಧಿತ ಅವಧಿಯೊಳಗೆ ಮುಗಿಸುವವರು. ಇಲ್ಲಿ ಮನೆ ಮಾಲೀಕರು ಹಾಗೂ ಮನೆಗೆಲಸಗಾರರ ನಡುವೆ ಅಂತಹ ಬಾಂಧವ್ಯ ಇರುವುದಿಲ್ಲ. ಇಲ್ಲಿ ಕೂಲಿಗಾಗಿ ಕೆಲಸ ಅಥವಾ ಕೆಲಸಕ್ಕಾಗಿ ಕೂಲಿ ಎನ್ನುವ ವಾತಾವರಣವಿರುತ್ತದೆ. ಆದರೆ ಎರಡನೇ ವರ್ಗದ ದುಡಿಮೆಗಾರರು ಮನೆ ಮಾಲೀಕರ ಜೊತೆ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಂಡವರಾಗಿದ್ದು ಇದರ ಆಧಾರದ ಮೇಲೆ ಅವರು ದಿನವಿಡೀ ಮನೆಯಲ್ಲಿಯೇ ಇದ್ದು ಕೆಲಸವನ್ನು ನಿರ್ವಹಿಸುತ್ತಾರೆ. ತಮ್ಮ ದುಡಿಮೆಗೆ ತಕ್ಕಂತೆ ಊಟ ಬಟ್ಟೆ ಅಲ್ಲದೇ ಕಷ್ಟದ ಸಮಯದಲ್ಲಿ ಆರ್ಥಿಕ ನೆರವನ್ನು ಪಡೆಯುತ್ತಾರೆ. ಅವರಿಗೆ ಮಾಸಿಕವಾಗಿ ಬರುವ ವೇತನವನ್ನು ಮನೆಮಾಲೀಕರು ಸುರಕ್ಷಿತವಾಗಿ ಬ್ಯಾಂಕಿನಲ್ಲಿಡುತ್ತಾರೆ. ಅವರ ಮಕ್ಕಳ ವಿದ್ಯಾಭ್ಯಾಸ ಹಾಗೂ ಆರೋಗ್ಯದ

ಖರ್ಚುವೆಚ್ಚಗಳನ್ನು ಮನೆಮಾಲೀಕರೇ ಭರಿಸುತ್ತಾರೆ. ಮೂರನೆಯ ವರ್ಗದ ದುಡಿಮೆಗಾರರು ಕೆಲವೇ ಸಂಖ್ಯೆಯಲ್ಲಿರುತ್ತಾರೆ. ಇವರು ಮನೆ ಮಾಲೀಕರ ಸಂಬಂಧಿಗಳಂತಿದ್ದು ಮೊದಲಿನಿಂದ ಕೊನೆವರೆಗೂ ಅಂದರೆ ಜೀವನ ಪೂರ್ತಿ ಮನೆಮಾಲೀಕರ ಮನೆಯಲ್ಲಿಯೇ ಒಂದು ಕೊಠಡಿಯಲ್ಲಿ ವಾಸ್ತವ್ಯ ಹೂಡಿರುತ್ತಾರೆ. ಕೆಲವೊಮ್ಮೆ ಮನೆಮಾಲೀಕರು ಕೂಡ ಪ್ರಮುಖ ವಿಷಯಗಳಲ್ಲಿ ಇವರ ಅಭಿಪ್ರಾಯವನ್ನು ಕೇಳುತ್ತಾರೆ. ಇವರ ವೇತನ ವಿಚಾರವನ್ನು ಮಾಲೀಕರೇ ನಿರ್ಧಾರ ಮಾಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಮನೆಯ ಸದಸ್ಯರಲ್ಲಿ ಒಬ್ಬರಾಗಿರುತ್ತಾರೆ ಎನ್ನಬಹುದು.

೫.೨: ವೃತ್ತಿ ನಿರತ ವರ್ಷಗಳು

ಹೊಸಪೇಟೆಯ ಮಹಿಳಾ ಮನೆಗೆಲಸಗಾರರ ಉದ್ಯೋಗದ ಮಾಹಿತಿಯನ್ನು ಪಡೆಯಲು ಅವರು ಎಷ್ಟು ವರ್ಷಗಳಿಂದ ಕೆಲಸದಲ್ಲಿ ತೊಡಗಿದ್ದಾರೆ. ಈ ಕೆಲಸದಲ್ಲಿ ತೊಡಗುವುದಕ್ಕಿಂತ ಮುಂಚಿತವಾಗಿ ಯಾವ ಕೆಲಸ ಮಾಡಲಾಗಿದೆ ಎಂಬ ವಿಷಯಗಳನ್ನು ಸಂಗ್ರಹಿಸಲು ಮನೆಗೆಲಸಗಾರರ ಸಂದರ್ಶನವನ್ನು ಮಾಡಲಾಯಿತು. ಕೆಲವು ಮನೆಗೆಲಸಗಾರರು ಈ ಕೆಲಸಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಕೃಷಿ ಕೆಲಸದಲ್ಲಿ ತೊಡಗಿದ್ದುದಾಗಿಯೂ ಕೆಲವರು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದುದಾಗಿಯೂ ಇನ್ನು ಕೆಲವರೂ ಯಾವ ಕೆಲಸದಲ್ಲಿಯೂ ತೊಡಗಿರಲಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಕೃಷಿ ಹಾಗೂ ಕಟ್ಟಡ ನಿರ್ಮಾಣ ಕಾರ್ಯವು ಋತು ಸಂಬಂಧಿ ಕೆಲಸಗಳಾಗಿದ್ದು ಅಲ್ಲಿ ಕೆಲಸವಿಲ್ಲದಾಗ ಮನೆಗೆಲಸದಲ್ಲಿ ತೊಡಗಿದ್ದಾರೆ. ಇನ್ನು ಕೆಲವರು ಕೃಷಿ ಹಾಗೂ ಕಟ್ಟಡ ನಿರ್ಮಾಣ ಕೆಲಸವು ಕಷ್ಟದಾಯಕವಾಗಿದ್ದು ಅನಾರೋಗ್ಯದ ಕಾರಣ ಆ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗದೇ ಮನೆಗೆಲಸದಲ್ಲಿ ತೊಡಗಿಕೊಂಡಿದ್ದಾರೆ. ಕೆಲ ಹೆಣ್ಣುಮಕ್ಕಳು ಮನೆಯಲ್ಲಿ ಹಣಕಾಸಿನ ಮುಗ್ಗಟ್ಟು ತಲೆದೋರಿದ ಕಾರಣಕ್ಕಾಗಿ ಇತ್ತೀಚೆಗೆ ಮಾತ್ರ ಈ ಕೆಲಸಕ್ಕೆ ಬಂದಿರುತ್ತಾರೆ. ಹೀಗೆ ಕೇವಲ ಒಂದು ವರ್ಷದಿಂದ ಮಾತ್ರ ಮನೆಗೆಲಸದಲ್ಲಿ ತೊಡಗಿದ ೧೭ ಮಹಿಳೆಯರು ಹೊಸಪೇಟೆಯಲ್ಲಿ ಇದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೫೬ ಮಹಿಳೆಯರು ಐದು ವರ್ಷಗಳಿಂದ ವೃತ್ತಿ ನಿರತರಾಗಿದ್ದಾರೆ. ಇನ್ನು ೭೯ ಮಹಿಳೆಯರು ಐದರಿಂದ ಹತ್ತು ವರ್ಷಗಳಿಂದ ಮನೆಗೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಆದರೆ ೯೮ ಮಹಿಳೆಯರು ಹತ್ತಕ್ಕೂ ಅಧಿಕ ವರ್ಷಗಳಿಂದ ಮನೆಗೆಲಸದಲ್ಲಿ ತೊಡಗಿದ್ದಾರೆ. ಇಷ್ಟು ದೀರ್ಘ ವರ್ಷಗಳಿಂದ ಮನೆಗೆಲಸದಲ್ಲಿ ನಿರತರಾಗಲು ಕಾರಣವೆಂದರೆ ಈ ಕೆಲಸವು ಅವರ ಅನುಕೂಲಕ್ಕೆ ತಕ್ಕಂತಿದ್ದು ಈ ಕೆಲಸಕ್ಕೆ ಮಹಿಳೆಯರು ಹೊಂದಿಕೊಂಡಿರುತ್ತಾರೆ. ಇನ್ನು ಕೆಲವು ಮಹಿಳೆಯರ ವೃತ್ತಿಯು ವಂಶಪಾರಂಪರ್ಯವಾಗಿ ಬಂದಂತೆ ಇರುತ್ತದೆ. ತಮ್ಮ ತಾಯಿ ಹಾಗೂ ಅತ್ತೆ ಮನೆ ಕೆಲಸವನ್ನು ಮಾಡುತ್ತಿದ್ದ ಕಾರಣಕ್ಕಾಗಿ ಇದೇ ಕೆಲಸವನ್ನು ಮುಂದುವರೆಸಿರುತ್ತಾರೆ.


ಕೋಷ್ಟಕ ೫.೨: ವೃತ್ತಿ ನಿರತ ವರ್ಷಗಳು

ಕ್ರಸಂ.	ವೃತ್ತಿ ನಿರತ ವರ್ಷಗಳು	ಒಟ್ಟು	ಶೇಕಡ
೦೧.	೦–೧ ವರ್ಷ	೧೭	೬.೮೦
೦೨.	೧–೫ ವರ್ಷ	೫೬	೨೨.೪೦
೦೩.	೫–೧೦ ವರ್ಷ	೭೯	೩೧.೬೦
೦೪.	೧೦ ಕ್ಕು ಅಧಿಕ	೯೮	೩೯.೨೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೨ರಲ್ಲಿ ವ್ಯಕ್ತವಾದ ಅಭಿಪ್ರಾಯದ ಪ್ರಕಾರ ೧೦ಕ್ಕಿಂತ ಹೆಚ್ಚು ವರ್ಷಗಳಿಂದ ಮನೆಗೆಲಸದಲ್ಲಿ ನಿರತರಾದವರ ಸಂಖ್ಯೆ ಅಧಿಕವಾಗಿದೆ. ಒಂದು ವರ್ಷದಿಂದ ಕೆಲಸದಲ್ಲಿ ತೊಡಗಿದವರು ಕೇವಲ ೧೭ ಮಹಿಳೆಯರಿದ್ದಾರೆ. ಅಸಂಘಟಿತ ವಲಯದ ಅತೀ ಕೆಳದರ್ಜೆಯ ಕೆಲಸ ಮನೆಗೆಲಸವಾಗಿದೆ. ಮನೆಗೆಲಸದ ದುಡಿಮೆಯು ಕೇವಲ ಜೀವನಾಧಾರ ದುಡಿಮೆಯಾಗಿದ್ದು, ಈ ಕೆಲಸಕ್ಕೆ ಯಾವ ರೀತಿಯ ಸರ್ಕಾರ ಹಾಗೂ ಕಾರ್ಮಿಕ ಸಂಘಟನೆಗಳ ನೆರವೂ ಇರುವುದಿಲ್ಲ. ಏಕೆಂದರೆ ಈ ದುಡಿಮೆಯನ್ನು ಸರ್ಕಾರದ ಲೆಕ್ಕಾಚಾರದಲ್ಲಿ ಸೇರಿಸಿರುವುದಿಲ್ಲ. ಆದರೂ ಅನೇಕ ಮಹಿಳೆಯರು ಈ ವೃತ್ತಿಯನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ ಎಂದರೆ ಭಾರತದಲ್ಲಿ ಬಡತನದ ತೀವ್ರತೆ ಎಷ್ಟೆಂಬುದನ್ನು ಗಮನಿಸಬಹುದು. ಈ ಬಡಜನ ತಮ್ಮ ಮೇಲಾಗುವ ಅನ್ಯಾಯ ಶೋಷಣೆಗಳನ್ನು ಎದುರಿಸುತ್ತಾ ಈ ಕೆಲಸಕ್ಕೆ ಅಂಟಿಕೊಂಡಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತರಾದ ಅಮರ್ತ್ಯಸೇನ್ ಪ್ರಕಟಿಸಿರುವ 'ಆರ್ಗುಮೆಂಟೆಟಿವ್ ಇಂಡಿಯನ್' ಪುಸ್ತಕದಲ್ಲಿ 'ಹಸಿದಿರುವಾಗ ಬುದ್ಧಿವಂತಿಕೆ ಬೆಳೆಯಲು ಸಾಧ್ಯವಿಲ್ಲ' ಎಂಬ ಹೇಳಿಕೆಯಂತೆ ಮನೆಗೆಲಸದ ದುಡಿಮೆಗಾರರಲ್ಲಿ ಶೇ ೬೫.೬ರಷ್ಟು ಮಹಿಳೆಯರು ಅವಿದ್ಯಾವಂತರಾಗಿದ್ದು ತಮ್ಮ ಮೇಲಾಗುವ ದೌರ್ಜನ್ಯವನ್ನು ಪ್ರತಿಭಟಿಸಲಾರದಷ್ಟು ಶಕ್ತಿಹೀನರಾಗಿದ್ದಾರೆ. ಏನೆಲ್ಲಾ ಸಂಕಷ್ಟಗಳನ್ನು ಎದುರಿಸಿ ಮಹಿಳೆಯರು ಈ ವೃತ್ತಿಯಲ್ಲಿರುವುದು ಎಂದರೆ ಬಡಮಹಿಳೆಯರ ಬದುಕಿನ ಅನಿವಾರ್ಯತೆಯನ್ನು ತೋರಿಸುತ್ತದೆ.

ಸ್ತಂಭರೇಖಾಚಿತ್ರ : ಮನೆಗೆಲಸದಲ್ಲಿ ತೊಡಗಿದ ಮಹಿಳೆಯರ ಸಂಖ್ಯೆ



ಮೇಲಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ox ಅಕ್ಷದಲ್ಲಿ ಮನೆಗೆಲಸದ ಮಹಿಳೆಯರ ವೃತ್ತಿನಿರತ ವರ್ಷಗಳನ್ನೂ oy ಅಕ್ಷದಲ್ಲಿ ವೃತ್ತಿಯಲ್ಲಿ ತೊಡಗಿದ ಮನೆಗೆಲಸದ ಮಹಿಳೆಯರ ಸಂಖ್ಯೆಯನ್ನು ತೋರಿಸಲಾಗಿದೆ. ರೇಖಾಚಿತ್ರದಲ್ಲಿ ಪಟ್ಟಿಗಳ ಎತ್ತರವು ಮಹಿಳಾ ಶ್ರಮಬಲದ ಗಾತ್ರವನ್ನು ಸೂಚಿಸುತ್ತಿದ್ದು ೧೦ ವರ್ಷಕ್ಕು ಹೆಚ್ಚು ವರ್ಷ ಈ ವೃತ್ತಿಯಲ್ಲಿ ತೊಡಗಿದವರ ಸಂಖ್ಯೆ ೯೮ ಆಗಿರುತ್ತದೆ. ಅಂದರೆ ಅತೀ ಕೆಳದರ್ಜೆಯ ದುಡಿಮೆಯಾದ ಮನೆಗೆಲಸದಲ್ಲಿಯೂ ಬಹುಕಾಲದಿಂದ ಮಹಿಳೆಯರು ದುಡಿಯುತ್ತಿದ್ದಾರೆ ಎಂದರೆ ಮನೆಗೆಲಸದ ದುಡಿಮೆಯನ್ನು ಸರ್ಕಾರ ನಿರ್ಲಕ್ಷಿಸುವಂತಿಲ್ಲ. ಸರ್ಕಾರವು ಮನೆಗೆಲಸದ ದುಡಿಮೆಗಾರರಿಗೆ ಸಂಘಟಿತ ವಲಯದ ಕೆಲಸಗಾರರಿಗೆ ಸಿಗುವ ರಕ್ಷಣೆ, ಕನಿಷ್ಠ ವೇತನ ಹಾಗೂ ಸೇವಾ ಭದ್ರತೆಗಳನ್ನು ಒದಗಿಸಬೇಕಾಗಿದೆ.

ಆದರೆ ಮನೆಗೆಲಸದ ಮಹಿಳೆಯರಿಗೆ ಸಾಮಾಜಿಕ ಭದ್ರತೆಯನ್ನು ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಇರುವ ಪ್ರಮುಖ ಅಡಚಣೆ ಎಂದರೆ ಭಾರತದಲ್ಲಿ ಮನೆಗೆಲಸದ ವೃತ್ತಿಯಲ್ಲಿ ನಿರತರಾದ ಮಹಿಳೆಯರ ಅಂಕಿ ಅಂಶಗಳ ಸರಿಯಾದ ಮಾಹಿತಿ ತಿಳಿದಿರುವುದಿಲ್ಲ. ಅಲ್ಲದೇ ಮನೆಗೆಲಸದ ಮಹಿಳೆಯರ ನೋಂದಣಿ ಕಾರ್ಯವೂ ನಡೆದಿರುವುದಿಲ್ಲ. ಈ ಕಾರಣದಿಂದಲೇ ಮನೆಗೆಲಸದ ಮಹಿಳೆಯರನ್ನು ಸರ್ಕಾರ ನಿರ್ಲಕ್ಷಿಸುವಂತಾಗಿದೆ.

ಜೆನ್‌ಬ್ರೆಮೆನ್ (೨೦೧೦) ಅವರು ೨೦೧೦ರಲ್ಲಿ ಪ್ರಕಟಗೊಳಿಸಿದ ಗ್ರಂಥ 'ಔಟ್ ಕ್ಯಾಸ್ಟ್ ಲೇಬರ್ ಇನ್ ಏಶಿಯಾ'ದಲ್ಲಿ ಸಂಘಟಿತ ವಲಯದಿಂದ ಹೊರಗುಳಿದ ನಗರದ ಮಹಿಳೆಯರ ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಈ ರೀತಿಯ ವೈವಿಧ್ಯಮಯ ಆರ್ಥಿಕ ಚಟುವಟಿಕೆಗಳು ಎಲ್ಲಿಯೂ ನೋಂದಣಿಯಾಗಿರುವುದಿಲ್ಲ.[೧] ಹಾಗೂ ರಹಸ್ಯಮಯವಾಗಿ ನಡೆದಿರುತ್ತದೆ. ಇದು ಅವರು ತಮ್ಮ ಉಳಿವಿಗಾಗಿ ನಡೆಸಿಕೊಂಡು ಹೋಗುತ್ತಿರುವ ವ್ಯವಹಾರವಾಗಿದೆ. ಇದಕ್ಕೆ ಯಾವುದೇ ಕಛೇರಿ ದಾಖಲೆಗಳಿರುವುದಿಲ್ಲ. ಈ ಜನರು ಬಡವರಾಗಿದ್ದು ಸಮಾಜದ ಅತೀ ಕೆಳಸ್ತರದಲ್ಲಿ ತಮ್ಮನ್ನು ಗುರುತಿಸಿ ಕೊಂಡವರಾಗಿರುತ್ತಾರೆ. ಆದರೂ ನಿಯತಕಾಲಿಕವಾದ ಅಂಕಿಅಂಶಗಳ ಕೊರತೆಯಿಂದಾಗಿ ಅಸಂಘಟಿತ ವಲಯದ ಗಾತ್ರ ಹಾಗೂ ಕಾರ್ಯನಿರತ ಶ್ರಮಿಕರ ಸಂಯೋಜನೆ ಕುರಿತು ಮಾಹಿತಿಗಳು ಹೆಚ್ಚಾಗಿ ಲಭ್ಯವಾಗದೇ ಇರುವುದು, ಈ ವಲಯದ ಅಧ್ಯಯನದ ಕುರಿತಾದ ಹಿನ್ನಡೆ ಎಂದೇ ಹೇಳಬಹುದು ಎಂದು ಅಸಂಘಟಿತ ವಲಯದ ದುಡಿಮೆಗಾರರ ಹಿತರಕ್ಷಣೆಗಾಗಿ ಸರ್ಕಾರಕ್ಕೆ ಮಾಹಿತಿ ಒದಗಿಸಿದ್ದಾರೆ.

೧೯೮೮ರ ನ್ಯಾಷನಲ್ ಕಮಿಷನ್ ಆನ್ ಸೆಲ್ಫ್ ಎಂಪ್ಲಾಯಿಡ್ ವುಮನ್ ಅಂಡ ವುಮನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್ (ಶ್ರಮಶಕ್ತಿ) ವರದಿಯಲ್ಲಿ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರ ದುಡಿಮೆ, ಅವರಿಗೆ ಸಿಗುವ ಪ್ರತಿಫಲದ ಕುರಿತು ಚರ್ಚಿಸಲಾಗಿದೆ. ಅಸಂಘಟಿತ ವಲಯದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದರೊಂದಿಗೆ ಪ್ರತೀ ಕ್ಷೇತ್ರದ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಶಿಫಾರಸು ಮಾಡಿದೆ. ಅದರ ಶಿಫಾರಸಿನ ಪ್ರಕಾರ ಮನೆಗೆಲಸದ ಮಹಿಳೆಯರ ನೋಂದಣಿ ಕಾರ್ಯ ಕೈಕೊಳ್ಳ ಬೇಕೆಂಬುದು ಪ್ರಮುಖವಾಗಿದೆ. ಇದರಿಂದ ಈ ವೃತ್ತಿಯಲ್ಲಿ ತೊಡಗಿದ ಮಹಿಳಾ ಶ್ರಮಿಕರ ಗಾತ್ರ ತಿಳಿಯುವುದಲ್ಲದೇ ಅವರ ಹಿತಾಸಕ್ತಿಗಳನ್ನು ಕಾಪಾಡಲು ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು

ನೆರವಾಗುತ್ತದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರು ಕೂಡ ತಮ್ಮ ಸ್ಥಿತಿಗತಿ ಸುಧಾರಣೆಗಾಗಿ ಸರ್ಕಾರದ ಸಹಾಯವನ್ನು ನಿರೀಕ್ಷಿಸುತ್ತಿದ್ದು ಸಮಿತಿಯ ಶಿಫಾರಸ್ಸು ಇದಕ್ಕೆ ಪೂರಕವಾಗಿದೆ.

೫.೩: ಮನೆಗೆಲಸದ ಮಹಿಳೆಯರ ಕೆಲಸದ ಮನೆಗಳ ಸಂಖ್ಯೆ ಹಾಗೂ ಕೆಲಸದ ಅವಧಿ ಮಾಹಿತಿ

ಅಸಂಘಟಿತ ವಲಯದ ದುಡಿಮೆಯು ಕಡಿಮೆ ಆದಾಯದ ಹಾಗೂ ವೃತ್ತಿ ಸುರಕ್ಷಿತ ಇಲ್ಲದ ದುಡಿಮೆಯಾಗಿರುತ್ತದೆ. ಸಂಘಟಿತ ವಲಯದ ದುಡಿಮೆಗಾರರಂತೆ ಇಲ್ಲಿನ ದುಡಿಮೆಗಾರರು ಚೌಕಾಶಿ ಶಕ್ತಿಯುಳ್ಳವರಾಗಿರುವುದಿಲ್ಲ. ಏಕೆಂದರೆ ಅವರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರೂ ವೃತ್ತಿಕೌಶಲ್ಯ ರಹಿತರೂ ಆಗಿರುವುದು. ಈ ಕಾರಣದಿಂದಾಗಿ ಸಂಘಟಿತ ವಲಯದಲ್ಲಿ ಪ್ರವೇಶ ದೊರಕಿಸಿಕೊಳ್ಳುವುದು ಕಷ್ಟವಾಗಿ ಅಸಂಘಟಿತ ವಲಯದಲ್ಲಿ ನೆಲೆಯೂರುತ್ತಾರೆ. ಡಾ. ಎಂ. ರಾಮಾಂಜನೇಯಲು (೨೦೦೬) ಕೂಡ ಇದೇ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಅನೌಪಚಾರಿಕ ಎಂಬ ಪದವು ಪಂಚವಾರ್ಷಿಕ ಯೋಜನೆಗಳಲ್ಲಿ ಬಳಸಲ್ಪಟ್ಟಿತು. ನಂತರ ಅಂತರಾಷ್ಟ್ರೀಯ ಕಾರ್ಮಿಕ ಆಯೋಗವು ಅನೌಪಚಾರಿಕ ಎಂಬ ಪದವನ್ನು ಬಳಸಿತು. ಮೂರನೇ ಜಗತ್ತಿನ ರಾಷ್ಟ್ರಗಳ ಆರ್ಥಿಕತೆಗಳ ವಿಶ್ಲೇಷಣೆಯ ವಿಚಾರದಲ್ಲಿ ಈ ಪದ ಬಳಸಲಾಗಿದೆ. ಅನೌಪಚಾರಿಕ ವಲಯದ ಕೆಲಸಗಾರರ ಸ್ಥಿತಿಗತಿಗಳು ಔಪಚಾರಿಕ ವಲಯದ ಕೆಲಸಗಾರರ ಸ್ಥಿತಿಗತಿಗಿಂತ ಭಿನ್ನವಾಗಿರುತ್ತದೆ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿರುವ ವಲಯ ಇದಾಗಿದೆ. ತಾಂತ್ರಿಕ ಬದಲಾವಣೆಗಳು ಹಾಗೂ ಆರ್ಥಿಕತೆಯ ಪುನ:ಶ್ಚೇತನದಂತಹ ಕಾರ್ಯಕ್ರಮಗಳ ಹೊರತಾಗಿಯೂ ಅಸಂಘಟಿತ ಕಾರ್ಮಿಕರ ಸಂಖ್ಯೆಯು ಅಧಿಕವಾಗಿರುತ್ತದೆ. ೧೯೯೦ರ ನಂತರ ಆರ್ಥಿಕ ಸುಧಾರಣೆಗಳಿಂದಾಗಿ ಸಂಘಟಿತ ವಲಯದ ಶ್ರಮಬಲವೂ ಹೊರದೂಡಲ್ಪಟ್ಟು ಅಸಂಘಟಿತ ವಲಯವನ್ನು ಸೇರಬೇಕಾಯಿತು. ಭಾರತದಂತಹ ಆರ್ಥಿಕತೆಯಲ್ಲಿ ಶ್ರಮಬಲದ ಪೂರೈಕೆ ಅಧಿಕವಾಗಿದ್ದು ಅದಕ್ಕೆ ಹೆಚ್ಚುತ್ತಿರುವ ಜೀವನವೆಚ್ಚ ಹಾಗೂ ಕಡಿಮೆಯಾದ ಉದ್ಯೋಗಾವಕಾಶಗಳು ಕಾರಣವಾಗಿವೆ ಎಂಬ ಅಂಶವನ್ನು ಬೆಳಕಿಗೆ ತಂದಿದ್ದಾರೆ.

ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ಕುಟುಂಬದ ಜೀವನ ವೆಚ್ಚ ಅಧಿಕಗೊಂಡಾಗ ಹೆಚ್ಚು ಹೆಚ್ಚು ಮನೆಗಳನ್ನು ಕೆಲಸಕ್ಕಾಗಿ ಆಯ್ದುಕೊಳ್ಳುತ್ತಾರೆ. ಏಕೆಂದರೆ ಒಂದು ಅಥವಾ ಎರಡು ಮನೆಗಳ ಕೆಲಸದಿಂದ ಬರುವ ಆದಾಯದಿಂದ ಜೀವನ ನಿರ್ವಹಣೆ ಕಷ್ಟವೆನಿಸುತ್ತದೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೧೮೧ ಮಹಿಳೆಯರು ೧ ರಿಂದ ೩ ಮನೆಗಳ ಕೆಲಸವನ್ನು ಒಪ್ಪಿಕೊಂಡಿರುತ್ತಾರೆ. ಇವರು ಬೆಳಗಿನ ಅವಧಿಯಲ್ಲಿ ಮನೆಗೆಲಸವನ್ನು ಮುಗಿಸಿ, ಬೇರೆ ಬೇರೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಮನೆಯ ಖರ್ಚು ವೆಚ್ಚಗಳನ್ನು ನಿಭಾಯಿಸಲು ಮಹಿಳೆಯರು ಈ ರೀತಿಯಾಗಿಯೂ ದುಡಿಯುತ್ತಿದ್ದಾರೆ. ಇನ್ನು ಕೆಲವರು ತಮ್ಮ ಕುಟುಂಬದ ಜವಾಬ್ದಾರಿಗಳು (ಚಿಕ್ಕ ಮಕ್ಕಳ ಪೋಷಣೆ ಹಾಗೂ ಹಿರಿಯರ ಆರೈಕೆ) ಅಧಿಕವಾಗಿದ್ದಾಗ ಕೆಲವೇ ಮನೆಗಳ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ. ಇನ್ನು ೫೯ ಮಹಿಳೆಯರು ೩ ರಿಂದ ೫ ಮನೆಗಳ ಕೆಲಸವನ್ನು ಒಪ್ಪಿಕೊಂಡಿರುತ್ತಾರೆ. ಇದರಿಂದಲೂ ಜೀವನ ನಿರ್ವಹಣೆ ಆಗದಿದ್ದ ಸಮಯದಲ್ಲಿ ಸಂಜೆ ಹೊತ್ತು ಹೂ ಕಟ್ಟುವ ಕೆಲಸ ಮಾಡುತ್ತಾರೆ. ಅದರಿಂದ ಅವರಿಗೆ ಸ್ವಲ್ಪ ಆದಾಯ ಬರುತ್ತದೆ. ಸುಮಾರು ೧೦ ಮಹಿಳೆಯರು ೫ಕ್ಕೂ ಅಧಿಕ ಮನೆಗಳ ಜವಾಬ್ದಾರಿಯನ್ನು

ಹೊತ್ತಿದ್ದಾರೆ. ಇವರಲ್ಲಿ ದೈಹಿಕವಾಗಿ ಶಕ್ತರಾದ ಮಹಿಳೆಯರು ಮಾತ್ರ ಇದ್ದುದು ತಿಳಿದು ಬಂದಿದೆ. ಶ್ರೀಮತಿ ನಿಶಾ ಶ್ರೀ ವಾಸ್ತವ (೨೦೦೪) ಅವರು ತಮ್ಮ ಗ್ರಂಥದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಅಸಂಘಟಿತ ವಲಯದಲ್ಲಿ ಕಾರ್ಮಿಕರು ಅನಕ್ಷರಸ್ಥರೂ ಹಾಗೂ ದೈಹಿಕ ಬಲವನ್ನು ಹೊಂದಿದವರೂ ಆಗಿರುತ್ತಾರೆ. ಅವರು ತಮ್ಮ ದುಡಿಮೆಗೆ ತಮ್ಮ ದೈಹಿಕ ಶ್ರಮವನ್ನಷ್ಟೆ ನಂಬಿರುತ್ತಾರೆ ಎಂದಿದ್ದಾದೆ. ಹೀಗೆ ಮಹಿಳೆಯರು ಅನೇಕ ಮನೆಗಳನ್ನು ಒಪ್ಪಿಕೊಳ್ಳುವ ಕಾರಣವು ೧೯೭೫ರ ಟುವರ್ಡ್ಸ್ ಈಕ್ವಾಲಿಟಿ ವರದಿಯಲ್ಲಿಯೂ ಉಲ್ಲೇಖಿತವಾಗಿದೆ. ಪ್ರಮುಖವಾಗಿ ನಗರಗಳಲ್ಲಿ ಮನೆಗೆಲಸದ ದುಡಿಮೆಗಾರರು ಹೆಚ್ಚಾಗಿ ಕಂಡುಬರುತ್ತಾರೆ. ಆದರೂ ಅವರನ್ನು ಅಂದಾಜು ಮಾಡುವಲ್ಲಿ ಯಾವ ಪ್ರಯತ್ನಗಳೂ ನಡೆದಿರುವುದಿಲ್ಲ. ಅವರು ಕಾನೂನಿನ ರಕ್ಷಣೆ ಇಲ್ಲದೇ, ಕೆಲಸದ ಸುರಕ್ಷತೆ ಇಲ್ಲದೇ ದುಡಿಯುತ್ತಿದ್ದಾರೆ. ಶೋಷಣೆಯಿಂದ ಕೂಡಿದ ಬದುಕು ಇವರದಾಗಿದೆ. ಇತ್ತೀಚಿನ ಜೀವನ ನಿರ್ವಹಣೆ ಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಪಟ್ಟಣಗಳಲ್ಲಿ ಅವರ ಸಂಭಾವಣೆಯನ್ನು ಹೆಚ್ಚಿಸಿದರೂ ಅದು ಏರುತ್ತಿರುವ ಬೆಲೆಗೆ ಎಷ್ಟೂ ಸಾಟಿಯಾಗುವುದಿಲ್ಲ. ಮನೆಗೆಲಸದ ಮಹಿಳೆಯರಿಗೆ ನಿಗಧಿತ ಕೆಲಸದ ಅವಧಿ ಇರುವುದಿಲ್ಲ. ಅವರ ಕಡಿಮೆ ವೇತನವು ಅವರ ಮೂಲಭೂತ ಅವಶ್ಯಕತೆಗಳನ್ನು ನೆರವೇರಿಸಲು ಕೂಡ ಸಾಕಾಗುವುದಿಲ್ಲ. ಇಂತಹ ದುಡಿಮೆಗಾರರು ತಮ್ಮ ಕೂಲಿ ಹಾಗೂ ಅನುಭೋಗದ ಅಂತರವನ್ನು ಕಡಿಮೆ ಮಾಡಲು ಅನೇಕ ಮನೆಗಳಲ್ಲಿ ದುಡಿಯುತ್ತಾರೆ. ದಿನದ ೧೨ ಗಂಟೆಗಳಿಗೂ ಅಧಿಕ ಸಮಯವನ್ನು ಹೊರಗೆ ದುಡಿಯುವುದರಲ್ಲೇ ಕಳೆಯುತ್ತಾರೆ ಎಂದು ವರದಿಯಾಗಿದೆ.

ಕೆಲಸದ ಅವಧಿ :

ಮನೆಗೆಲಸದ ಮಹಿಳೆಯರು ತಮ್ಮ ಮನೆಯಲ್ಲಿ ಮಾಡುವ ಕೆಲಸಗಳನ್ನೇ ಮನೆಮಾಲೀಕರ ಮನೆ ಯಲ್ಲಿಯೂ ಮಾಡಬೇಕಾಗುತ್ತದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೨೭ ಮಹಿಳೆಯರು ೧/೨ ಗಂಟೆಯಿಂದ ೧ ಗಂಟೆಯವರೆಗೆ ಒಂದು ಮನೆಯ ಕೆಲಸದಲ್ಲಿ ತೊಡಗಿದ್ದಾರೆ. ಇದು ಕೇವಲ ಗಂಡುಮಕ್ಕಳಿರುವ ಮನೆಯಾಗಿರುತ್ತದೆ ಅಥವಾ ಚಿಕ್ಕ ಕುಟುಂಬವಿರುವ ಮನೆಯಾಗಿರುತ್ತದೆ. ಇದರ ಹೊರತಾಗಿ ಮಾಲೀಕರ ಮನೆಯಲ್ಲಿ ಕೇವಲ ಒಂದು ಅಥವಾ ಎರಡೇ ಕೆಲಸಗಳನ್ನು ಒಪ್ಪಿಕೊಂಡಿರುತ್ತಾರೆ. (ಬಟ್ಟೆ, ಪಾತ್ರೆ, ಕಸ, ನೆಲಸಾರಿಸುವಿಕೆಯಲ್ಲಿ ಯಾವುದಾದರೂ ಒಂದು) ಇನ್ನು ಉಳಿದ ೧೭೨ ಮಹಿಳೆಯರು ಒಂದು ಮನೆಯ ಕೆಲಸಕ್ಕೆ ೧ ರಿಂದ ೨ ಗಂಟೆಗಳನ್ನು ತೆಗೆದುಕೊಳ್ಳುತ್ತಾರೆ. ಇನ್ನು ೫೧ ಮಹಿಳೆಯರು ೨ಕ್ಕೂ ಅಧಿಕ ಗಂಟೆಗಳನ್ನು ಒಂದು ಮನೆಯ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಹೀಗೆ ಅವಿಭಕ್ತ ಕುಟುಂಬಗಳಲ್ಲಿ ದುಡಿಯುವ ಮಹಿಳೆಯರು ಕೇವಲ ಕೆಲವೇ ಮನೆಗಳನ್ನು ಅಥವಾ ಒಂದೇ ಮನೆಯ ಕೆಲಸವನ್ನು ಒಪ್ಪಿಕೊಂಡಿರುತ್ತಾರೆ. ಮನೆಯ ಸಮಸ್ತ ಜವಾಬ್ದಾರಿಯೂ ಇವರ ಹೆಗಲ ಮೇಲಿರುವುದರಿಂದ ಅಧಿಕ ಸಮಯವನ್ನು ಒಂದೇ ಮನೆಯಲ್ಲಿ ಕಳೆಯುತ್ತಾರೆ. ಒಟ್ಟಾರೆಯಾಗಿ ಮನೆಗೆಲಸವು ಜೀವನಾಧಾರ ದುಡಿಮೆಯಾಗಿರುವುದರಿಂದ, ದುಡಿಮೆಗಾರರು ಇದೇ ಕೆಲಸವನ್ನು ನಂಬಿಕೊಂಡಿರುವುದರಿಂದ ಕೆಲಸದ ಎಲ್ಲ ಕಷ್ಟಗಳನ್ನು ಭರಿಸುತ್ತಾ ಮುನ್ನಡೆಯಬೇಕಾಗುತ್ತದೆ. ಅನ್ಯಾಯ ಶೋಷಣೆಯ ವಿರುದ್ಧ ಧ್ವನಿ ಎತ್ತಿದರೆ ಕೆಲಸ ಕಳೆದುಕೊಳ್ಳಬೇಕಾಗುತ್ತದೆ.

ಕೋಷ್ಟಕ ೫.೩: ಮನೆಗೆಲಸದ ದುಡಿಮೆಯ ಚಿತ್ರಣವನ್ನು ತೋರಿಸುವ ಕೋಷ್ಟಕ

ಕ್ರ.ಸಂ	ವಿವರಣೆ	ಒಟ್ಟು	ಶೇಕಡ
೦೧	ಕೆಲಸದ ಮನೆಗಳು		
	೧-೩ ಮನೆಗಳು	೧೮೧	೭೨.೪೦
	೩-೫ ಮನೆಗಳು	೫೯	೨೩.೬೦
	೫ ಕ್ಕು ಅಧಿಕ	೧೦	೪.೦೦
	ಒಟ್ಟು	೨೫೦	೧೦೦.೦೦
೦೨	ಕೆಲಸದ ಅವಧಿ(ಒಂದು ಮನೆಯಲ್ಲಿ)		
	೦-೧ ಗಂಟೆ	೨೭	೧೦.೮೦
	೧-೨ ಗಂಟೆ	೧೭೨	೬೮.೮೦
	೨ ಕ್ಕು ಅಧಿಕ	೫೧	೨೦.೪೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೩ರಲ್ಲಿ ತಿಳಿಸಿರುವ ಮಾಹಿತಿಯ ಪ್ರಕಾರ ಮನೆಗೆಲಸದ ಮಹಿಳೆಯರು ಅಸಂಘಟಿತ ವಲಯದಲ್ಲಿ ಕಡಿಮೆ ಕೂಲಿ ಹಾಗೂ ಸುರಕ್ಷಿತವಲ್ಲದ ದುಡಿಮೆಯಲ್ಲಿ ತೊಡಗಿದ್ದಾರೆ. ಇವರು ಇಬ್ಬಗೆಯ ಹೊರೆಯನ್ನು ಹೊತ್ತು ಕೆಲಸ ನಿರ್ವಹಿಸುತ್ತಿದ್ದರೂ ಇವರ ದುಡಿಮೆಗೆ ಸರ್ಕಾರ ಯಾವ ಶಾಸನಾತ್ಮಕ ಬೆಂಬಲ ದೊರೆಕಿಸಿಕೊಟ್ಟಿರುವುದಿಲ್ಲ, ಕೇವಲ ದೈಹಿಕ ಶ್ರಮವನ್ನೇ ನಂಬಿಕೊಂಡು ದಿನದ ದೀರ್ಘ ಅವಧಿಗಳವರೆಗೆ ದುಡಿಮೆಯಲ್ಲಿ ನಿರತರಾಗಿ ತಮ್ಮ ಆರೋಗ್ಯ ಹಾಗೂ ತಮ್ಮ ಮನೆಯ ಹಿತಾಸಕ್ತಿಗಳನ್ನು ಕಡೆಗಾಣಿಸುವುದರಿಂದ ಕುಟುಂಬದ ಸದಸ್ಯರ ಮೇಲೂ ಮಹಿಳೆಯರ ದುಡಿಮೆ ದುಷ್ಪರಿಣಾಮಗಳನ್ನು ಬೀರುತ್ತಿವೆ ಎಂಬುದು ಗಮನಕ್ಕೆ ಬಂದಿದೆ.

೫.೪ : ಮನೆಗೆಲಸದ ಆಯ್ಕೆಗೆ ಕಾರಣ

ಮನೆಗೆಲಸವು ಅತೀ ಕಡಿಮೆ ಆದಾಯವನ್ನು ತಂದು ಕೊಡುವ, ವೃತ್ತಿ ಸುರಕ್ಷತೆ ಇಲ್ಲದ, ಸರ್ಕಾರದ ಹಾಗೂ ಕಾರ್ಮಿಕ ಸಂಘಗಳ ಬೆಂಬಲವನ್ನು ಪಡೆಯದ ಉದ್ಯೋಗವಾಗಿದೆ. ಇಲ್ಲಿನ ದುಡಿಮೆಗಾರರು ಅತೀ ಕೆಳದರ್ಜೆಯ ಅಂದರೆ ಬೇರೆಯವರ ಮನೆಯ ಚಾಕರಿಯಂತಹ ಕೆಲಸದಲ್ಲಿ ನಿರತರಾಗಿರುತ್ತಾರೆ. ಸಂವಿಧಾನವು ಸಮಾನತೆಯ ಹಕ್ಕನ್ನು ಲಿಂಗ, ಜಾತಿ, ವರ್ಗ ಭೇದವಿಲ್ಲದೇ ಜಾರಿಗೆ ತಂದಿದ್ದರೂ, ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಚಾಕರಿ ಮಾಡಿ ಬದುಕುವುದು ಎಂದರೆ ಅಂತಹ ಸನ್ನಿವೇಶ ಸೃಷ್ಟಿಯಾಗುವುದಕ್ಕೆ ಕಾರಣಗಳನ್ನು ಪರಿಶೀಲಿಸಬೇಕಾಗುತ್ತದೆ. ಜೋಸೆಫ್ ಕ್ಸೇವಿಯರ್ (೨೦೦೯) ಅವರು ಮನೆಗೆಲಸದವರು ಎಂದರೆ ಮನೆಯ ಕೆಲಸಕ್ಕಾಗಿ ನೇಮಿಸಲ್ಪಟ್ಟವರು ಹಾಗೂ ಗುಲಾಮರ ಸ್ಥಿತಿಗತಿಗಳಿಗಿಂತ ವಿಭಿನ್ನರಾದವರು. ಏಕೆಂದರೆ ಇವರು ತಮ್ಮ ಕೆಲಸಕ್ಕೆ ಕೂಲಿಯನ್ನು ಪಡೆಯುತ್ತಾರೆ ಮತ್ತು ತಮ್ಮ ಉದ್ಯೋಗವನ್ನು ಮಧ್ಯದಲ್ಲಿಯೇ ಬಿಡಲು ಸ್ವತಂತ್ರ್ಯರಾಗಿದ್ದಾರೆ ಎಂದು ತಿಳಿಸುವ ಮೂಲಕ ಮಹಿಳಾ ಮನೆಗೆಲಸದ ಸ್ಥಿತಿಗತಿಯ ಚಿತ್ರಣ ನೀಡಿರುತ್ತಾರೆ.

ಇಂತಹ ದುಡಿಮೆಯನ್ನು ಹೊಸಪೇಟೆಯ ಮಹಿಳೆಯರು ಆಯ್ಕೆ ಮಾಡಿಕೊಳ್ಳಲು ಕಾರಣ ಏನು ಎಂಬ ಪ್ರಶ್ನೆಗೆ ಮನೆಗೆಲಸದ ಮಹಿಳೆಯರ ಪ್ರತಿಕ್ರಿಯೆ ಈ ರೀತಿಯಾಗಿರುತ್ತದೆ.

ಕೋಷ್ಟಕ ೫.೪: ಮನೆಗೆಲಸದ ಆಯ್ಕೆಗೆ ಕಾರಣಗಳ ಮಾಹಿತಿ

ಕ್ರಸಂ	ಮನೆಗೆಲಸದ ಆಯ್ಕೆಗೆ ಕಾರಣ	ಒಟ್ಟು	ಶೇಕಡ
೦೧	ಅನಕ್ಷರತೆ	೧೧೫	೪೬
೦೨	ಮೈನ್ಸ್ ನಿಂತಿದೆ	೧೫	೦೬
೦೩	ಮನೆನಿರ್ವಹಣೆ	೧೨೦	೪೮
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೪ರಲ್ಲಿ ವ್ಯಕ್ತವಾದ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೧೧೫ ಮಹಿಳೆಯರು ಅನಕ್ಷರಸ್ಥರಾದ್ದರಿಂದ ಬೇರೆ ಕೆಲಸ ದೊರೆಯದೇ ಈ ಕೆಲಸಕ್ಕೆ ಬಂದಿರುತ್ತಾರೆ. ಅಭಿವೃದ್ಧಿಶೀಲ ಭಾರತದಲ್ಲಿ ಶೇ. ೨೬ರಷ್ಟು ಜನ ಬಡತನರೇಖೆಯ ಕೆಳಗೆ ಜೀವಿಸಿದ್ದಾರೆ. ಇಂತಹ ಜನ ಜೀವನದ ಮೂಲಭೂತ ಅವಶ್ಯಕತೆಗಳಿಗೂ ಪರದಾಡುವ ಸ್ಥಿತಿ ಎದುರಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ದುಡಿಮೆಯ ಕ್ಷೇತ್ರಕ್ಕೆ ಎಳೆದೊಯ್ಯುತ್ತಾರೆ. ಪದ್ಮಿನಿ ಸೇನ್ ಗುಪ್ತಾರವರೂ (೧೯೬೦) ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಡಿಮೆ ಕೂಲಿಯಿಂದ ಸಂಸಾರ ನಿರ್ವಹಣೆ ಆಗದೇ ಹೋದಾಗ ಹೆಣ್ಣುಮಕ್ಕಳು ಚಿಕ್ಕಮಕ್ಕಳು ದುಡಿಮೆಯ ರಂಗಕ್ಕೆ ಇಳಿಯುತ್ತಾರೆ ಎಂದಿದ್ದಾರೆ. ೧೯೭೫ರ ಟುವರ್ಡ್ಸ್ ಈಕ್ವಾಲಿಟಿ ವರದಿಯ ಪ್ರಕಾರ ಅನೇಕ ಮಹಿಳೆಯರು ತಮ್ಮ ಕೆಲಸ ಮುಗಿಸಲು ಚಿಕ್ಕಮಕ್ಕಳ ಸಹಾಯ ಪಡೆದಿರುತ್ತಾರೆ ಹೀಗೆ ಹೆಣ್ಣುಮಕ್ಕಳು ೮-೯ ವರ್ಷಗಳಿಂದಲೇ ದುಡಿಯಲು ಪ್ರಾರಂಭಿಸುತ್ತಾರೆ. ಹೀಗೆ ಬಡತನವು ಮಹಿಳೆಯರ ಅನಕ್ಷರತೆಗೆ ಕಾರಣವಾಗಿದೆ. ಹೀಗೆ ಅನಕ್ಷರತೆಯಿಂದ ಮಹಿಳೆಯರು ಸಂಘಟಿತ ವಲಯದ ಉದ್ಯೋಗಾವಕಾಶಗಳನ್ನು ಪಡೆಯುವಲ್ಲಿ ವಿಫಲರಾಗುತ್ತಾರೆ. ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಮಹಿಳೆಯರು ಸಂಘಟಿತ ವಲಯದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗಿದೆ ಎಂಬ ಅಭಿಪ್ರಾಯವನ್ನು ಡಾ. ಹೆಚ್.ಎಂ. ಹೇಮಲತಾ (೨೦೦೬) ಅವರು ವ್ಯಕ್ತಪಡಿಸಿದ್ದಾರೆ. ಎಲ್ಲಿ ಶಿಕ್ಷಣದ ಕೊರತೆ ಇರುತ್ತದೆಯೋ ಅಲ್ಲಿ ಅಜ್ಞಾನ ಅಂಧಕಾರಗಳು ತಾಂಡವವಾಡುತ್ತವೆ. ಸಂಪ್ರದಾಯಸ್ಥ ಸಮಾಜದಲ್ಲಿ ಮಹಿಳೆಯರನ್ನು ದೂರದ ಕೆಲಸಗಳಿಗೆ ಕಳಿಸಲು ಹಿಂದೇಟು ಹಾಕುತ್ತಾರೆ. ಅವರ ಚಲನೆಯ ಮೇಲಿನ ನಿರ್ಬಂಧವು ಮಹಿಳೆಯರು ಅಸಂಘಟಿತ ವಲಯದ ಕೆಲಸದಲ್ಲಿ ತೊಡಗುವಂತೆ ಮಾಡುತ್ತದೆ. ಅಲ್ಲದೇ ಮನೆಗೆಲಸದ ಸೇವೆಗೆ ಹೆಚ್ಚಿನ ಆದಾನಗಳು(ಬಂಡವಾಳ, ಶಿಕ್ಷಣ,ಕೌಶಲ್ಯ, ತರಬೇತಿ) ಬೇಕಾಗಿರುವುದಿಲ್ಲವಾದ್ದರಿಂದ ಯಾವ ಹೆಚ್ಚಿನ ಶ್ರಮವಿಲ್ಲದೇ ಈ ಕೆಲಸ ಲಭ್ಯವಾಗುತ್ತದೆ. ಹೀಗೆ ಅನಕ್ಷರಸ್ಥ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ.

ಸುಮಾರು ೧೫ ಮಹಿಳೆಯರು ಹೊಸಪೇಟೆಯಲ್ಲಿ ಗಣಿಗಾರಿಕೆ (ಮೈನ್ಸ್) ಸ್ಥಗಿತವಾಗಿರುವುದರಿಂದ ಮನೆಗೆಲಸದಲ್ಲಿ ತೊಡಗಿದ್ದಾರೆ. ಮೈನ್ಸ್ ಮತ್ತೆ ಪ್ರಾರಂಭವಾದರೆ ಮತ್ತೆ ಅದೇ ಕೆಲಸಕ್ಕೇ ಮರಳುವ ಇಂಗಿತ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಮನೆಗೆಲಸದ ದುಡಿಮೆಯಿಂದ ಮಹಿಳೆಯರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಆದರೆ ಗಣಿಗಾರಿಕೆಯಿಂದ ಉತ್ತಮ ಕೂಲಿ ದೊರಕುತ್ತದೆ ಎಂಬ ಆಶಾಭಾವ ಮಹಿಳೆಯರದಾಗಿದೆ.

ಮನೆಗೆಲಸದ ಮಹಿಳೆಯರಲ್ಲಿ ೧೨೦ ಮಹಿಳೆಯರು ಕುಟುಂಬದ ಆರ್ಥಿಕ ಮುಗ್ಗಟ್ಟಿನಿಂದಾಗಿ ಮನೆಗೆಲಸದಲ್ಲಿ ತೊಡಗಿರುತ್ತಾರೆ. ಆದರೆ ಆರ್ಥಿಕ ಮುಗ್ಗಟ್ಟು ಇದ್ದವರು ಮನೆಗೆಲಸವನ್ನೇ ಏಕೆ ಆಯ್ಕೆ ಮಾಡಿಕೊಳ್ಳಬೇಕು? ಬೇರೆ ಕೆಲಸವನ್ನು ಏಕೆ ಆಯ್ಕೆ ಮಾಡಿಕೊಳ್ಳಲಿಲ್ಲ? ಅದೂ ಅಲ್ಲದೇ ಮನೆಗೆಲಸದಿಂದ ಹೆಚ್ಚಿನ ಆದಾಯ ಬರುವುದಿಲ್ಲ ಎಂಬುದಾದರೆ ಈ ಕೆಲಸದಲ್ಲಿ ಮಹಿಳೆಯರು ತೊಡಗಲು ಕಾರಣವೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಮಹಿಳೆಯರ ಪ್ರತಿಕ್ರಿಯೆ ಈ ರೀತಿಯಾಗಿರುತ್ತದೆ. ಮೊದಲನೆಯದಾಗಿ ಅಧಿಕ ಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾದ ಕಾರಣ ಬೇರೆ (ಸಂಘಟಿತ ವಲಯದ) ಕೆಲಸ ಬರುವುದಿಲ್ಲ. ಎರಡನೆಯದಾಗಿ ಸಾಂಪ್ರದಾಯಿಕ ಕಟ್ಟುಪಾಡುಗಳಿಂದಾಗಿ ಮಹಿಳೆಯರನ್ನು ದೂರದ ಸ್ಥಳಗಳಿಗೆ ಕಳಿಸುತ್ತಿಲ್ಲ.

ಅದೂ ಅಲ್ಲದೇ ಕೃಷಿ ಕೆಲಸ ಹಾಗೂ ಕಟ್ಟಡ ನಿರ್ಮಾಣದಂತಹ ಕೆಲಸಗಳನ್ನು ಮಾಡಲು ಮಹಿಳೆಯರಿಗೆ ಸಾಧ್ಯವಾಗುತ್ತಿಲ್ಲ. ಇಂತಹ ಕೆಲಸಗಳಿಗೆ ದೂರದ ಸ್ಥಳಗಳಿಗೆ ತೆರಳಬೇಕಾಗುತ್ತದಲ್ಲದೇ, ಹೆಚ್ಚು ಹೊತ್ತು ಮನೆಯಿಂದ ಹೊರಗುಳಿಯಬೇಕಾಗುತ್ತದೆ. ಕೆಲವು ಸಮಯ ಕತ್ತಲಾಗಿ ಮನೆಗೆ ಬರಬೇಕಾಗುತ್ತದೆ ಇವೆಲ್ಲವನ್ನು ಮನೆಯ ಹಿರಿಯರು ಒಪ್ಪಿಕೊಳ್ಳುವುದಿಲ್ಲ ವಿರೋಧಿಸುತ್ತಾರೆ. ಅದೂ ಅಲ್ಲದೇ ಸಾಮಾನ್ಯವಾಗಿ ಮಹಿಳೆಯರು ೧೫ರಿಂದ ೪೫ ವರ್ಷಗಳ ಅವಧಿಯಲ್ಲಿ ಹೊರಗಿನ ದುಡಿಮೆಯಲ್ಲಿ ತೊಡಗಲು ದೈಹಿಕವಾಗಿ ಸಮರ್ಥರಿರುತ್ತಾರೆ. ಈ ಅವಧಿ ಮಹಿಳೆಯರಿಗೆ ಸಂತಾನೋತ್ಪತ್ತಿಯ ಸಮಯವೂ ಆಗಿರುವುದರಿಂದ ಮಹಿಳೆಯರು ತಮಗೆ ಅನುಕೂಲವಾಗುವಂತಹ (ಮಗುವಿಗೆ ಹಾಲುಣಿಸಲು ಆಗಿಂದಾಗ್ಗೆ ಮನೆಗೆ ಹೋಗಲು ಹಾಗೂ ಮನೆಯ ಕೆಲಸಗಳನ್ನು ನಿಭಾಯಿಸಲು) ಹೊಂದಾಣಿಕೆಯುಳ್ಳ ಕೆಲಸವನ್ನೇ ಆಯ್ದುಕೊಳ್ಳುತ್ತಾರೆ. ಇಂತಹ ಕೆಲಸಗಳಿಗೆ ಕಡಿಮೆ ವೇತನ ಆದರೂ ಕೂಡ ಮಹಿಳೆ ಇಬ್ಬಗೆಯ ಹೊರೆಯನ್ನು ನಿಭಾಯಿಸಬೇಕಾಗಿರುವ ಕಾರಣ ಮನೆಗೆಲಸದ ಸೇವೆಯನ್ನೇ ಒಪ್ಪಿಕೊಳ್ಳುತ್ತಾರೆ. ಇದೇ ಅಭಿಪ್ರಾಯವನ್ನು ಡಾ. ಹೆಚ್.ಎಂ. ಹೇಮಲತಾ (೨೦೦೬) ಅವರೂ ವ್ಯಕ್ತಪಡಿಸಿದ್ದಾರೆ. ಮಹಿಳೆಯರು ಸಾಮಾನ್ಯವಾಗಿ Flexible ಆಗಿರುವ ಕೆಲಸವನ್ನೇ ಇಷ್ಟಪಡುತ್ತಾರೆ ಎಂದಿದ್ದಾರೆ.

ಮನೆಯಲ್ಲಿ ಹಣಕಾಸಿನ ತೊಂದರೆ ಎದುರಾದಾಗ ಮಹಿಳೆ ವೃತ್ತಿರಂಗಕ್ಕೆ ಧುಮುಕಬೇಕಾಗುತ್ತದೆ. ಅಲ್ಲಿಯವರಿಗೆ ಮಹಿಳೆ ಕೇವಲ ಮನೆಯಲ್ಲಿ ಕೂಲಿ ರಹಿತ ದುಡಿಮೆಯಲ್ಲಿ ನಿರತಳಾಗಿರುತ್ತಾಳೆ. ಮನೆಯಲ್ಲಿ ಯಜಮಾನ ಸಾವನ್ನಪ್ಪಿದಾಗ, ಅಥವಾ ದುಡಿಯುವ ಪತಿ ಅನಾರೋಗ್ಯಕ್ಕೀಡಾದಾಗ ಕುಟುಂಬ ಆರ್ಥಿಕ ಸಂಕಷ್ಟವನ್ನೆದುರಿಸಬೇಕಾಗುತ್ತದೆ. ಇಂತಹ ಸಮಯದಲ್ಲಿ ಪತಿಯ ದುಡಿಮೆಗೆ ಬೆಂಬಲವಾಗಿ ತನ್ನ ಕುಟುಂಬದ ಗೌರವವನ್ನು ಕಾಪಾಡಲು ಹಾಗೂ ಕುಟುಂಬವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರುಮಾಡಲು ಹೊರಗಿನ ಕೂಲಿ ಸಹಿತ ದುಡಿಮೆಗೆ ಬರುತ್ತಾರೆ. ಇದರಿಂದ ತಕ್ಕ ಮಟ್ಟಿಗೆ

ಮನೆಯ ಪರಿಸ್ಥಿತಿ ಸುಧಾರಿಸಿದರೂ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವೇನೂ ದೊರೆಯುವುದಿಲ್ಲ. ತಾನು ದುಡಿದ ಹಣವನ್ನೆಲ್ಲ ಮನೆಯೊಡೆಯನಿಗೆ ಒಪ್ಪಿಸಬೇಕಾಗುವುದರಿಂದ ಮನೆಗೆಲಸದ ದುಡಿಮೆಯಲ್ಲಿ ಮಹಿಳೆ ಅಂಚಿನ ಉತ್ಪಾದಕಳಾಗಿ ಇರುತ್ತಾರೆ.

೫.೫: ಮನೆ ಮಾಲೀಕರ ಮನೆಯಲ್ಲಿ ನಿರ್ವಹಿಸುವ ಕೆಲಸಗಳ ಮಾಹಿತಿ

ಮನೆಯಲ್ಲಿ ನಿರ್ವಹಿಸುವ ಕೆಲಸಗಳನ್ನೇ ಮಹಿಳೆಯರು ಮನೆ ಮಾಲೀಕರ ಮನೆಯಲ್ಲಿಯೂ ನಿರ್ವಹಿಸುತ್ತಾರೆ. ಮನೆಯಲ್ಲಿ ಸಾಮಾನ್ಯವಾಗಿ ಮಹಿಳೆಯರು ಕಸ ಗುಡಿಸುವುದು, ನೆಲ ಸಾರಿಸುವುದು, ಬಟ್ಟೆ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಕ್ಕಳ ಆರೈಕೆ ಹಾಗೂ ಹಿರಿಯರ ಆರೈಕೆ, ಮನೆಯೊಡತಿಯೊಂದಿಗೆ ಮಾರುಕಟ್ಟೆಗೆ ಹೋಗುವುದು ಹೀಗೆ ಹೊರಗಿನ ಕೆಲಸಗಳು ಸೇರಿರುತ್ತವೆ. ಆದರೆ ಹೆಚ್ಚಿನ ರೀತಿಯಲ್ಲಿ ಮನೆಗೆಲಸದ ಮಹಿಳೆಯರು ನಿರ್ವಹಿಸುವುದು ಬಟ್ಟೆ, ಪಾತ್ರೆ, ಕಸಗುಡಿಸಿ ನೆಲಸಾರಿಸುವುದು. ಕೆಲವು ಮನೆಗೆಲಸಗಾರರು ಕೇವಲ ಅಡುಗೆ ಕೆಲಸವನ್ನು ಮಾಡುತ್ತಿದ್ದಾರೆ. ಭಕ್ರಿ ಮಾಡುವುದು, ಅನ್ನ ಸಾಂಬಾರು, ಚಪಾತಿ ಪಲ್ಯಗಳನ್ನು ಮಾಡುವುದು ಹಾಗೂ ಹಬ್ಬದ ದಿನಗಳಲ್ಲಿ ಹಬ್ಬದಡಿಗೆಯನ್ನು ಮಾಡುವುದು. ಅಡುಗೆ ಕೆಲಸದವರಲ್ಲಿ ಎರಡು ಬಗೆಯನ್ನು ಕಾಣುತ್ತೇವೆ. ಹಬ್ಬದ ದಿನಗಳಲ್ಲಿ ಹಾಗೂ ಮನೆಗಳಲ್ಲಿ ಕಾರ್ಯಕ್ರಮಗಳಿದ್ದಾಗ ಮಾತ್ರ ಹೋಗಿ ಮನೆ ಮಾಲೀಕರು ಹೇಳಿದ ಕೆಲಸವನ್ನು ಮಾಡುವವರು. ಇವರು ತಮ್ಮ ಕೆಲಸಕ್ಕೆ ವೇತನವನ್ನು ಹಿಂದೆಯೇ ಪಡೆಯುತ್ತಾರೆ. ಇನ್ನೊಂದು ಬಗೆಯ ಮನೆಗೆಲಸಗಾರರು ಅಡುಗೆ ಕೆಲಸವನ್ನು ತಿಂಗಳುಗಟ್ಟಲೆ ಮಾಡಿ ಮಾಸಿಕ ವೇತನವನ್ನು ಪಡೆಯುವವರು. ಶ್ರೀಮಂತರು ತಮ್ಮ ಮನೆಯಲ್ಲಿ ಅಡುಗೆ ಕೆಲಸಕ್ಕೆ ಸೇವಕರನ್ನು ನೇಮಿಸಿಕೊಳ್ಳುತ್ತಾರೆ. ಮಧ್ಯಮ ವರ್ಗದ ಬ್ರಾಹ್ಮಣರು ಹಾಗೂ ಲಿಂಗಾಯತರು ತಮ್ಮ ಮನೆಯ ಕೆಲಸದ ಒತ್ತಡ ಹೆಚ್ಚಾದಾಗ ಅಡುಗೆ ಮಾಡಲೂ ಕೂಡ ಸೇವಕರನ್ನು ನೇಮಿಸಿಕೊಳ್ಳುತ್ತಾರೆ. ಅಡುಗೆ ಕೆಲಸಕ್ಕೆ ಸಾಮಾನ್ಯವಾಗಿ ಮನೆಮಾಲೀಕರು ಸ್ವಜಾತಿಯವರನ್ನೇ ನೇಮಿಸಿಕೊಳ್ಳುತ್ತಾರೆ. ಬ್ರಾಹ್ಮಣರು ವೈಶ್ಯರನ್ನು ನೇಮಿಸಿಕೊಳ್ಳುವುದು ರೂಢಿಯಲ್ಲಿದೆ. ಹೊಸಪೇಟೆಯಲ್ಲಿ ೨೧ ಮಹಿಳೆಯರು ಅಡುಗೆ ಕೆಲಸಕ್ಕಾಗಿ ನಿಯುಕ್ತರಾಗಿದ್ದಾರೆ. ಇವರ ತಿಂಡಿ ಊಟವೂ ಮಾಲಿಕರ ಮನೆಯಲ್ಲಿ ಮುಗಿದು ಹೋಗುತ್ತದೆ.

ಇನ್ನು ೨೨೨ ಮಹಿಳೆಯರು ಮನೆಯ ಎಲ್ಲಾ ಕೆಲಸ (ಅಡುಗೆಯನ್ನು ಹೊರತು ಪಡಿಸಿ) ಬಟ್ಟೆ ಸ್ವಚ್ಛಗೊಳಿಸುವುದು, ನೆಲಸಾರಿಸುವುದು, ಕಸಗುಡಿಸುವುದು, ಪಾತ್ರೆ ತೊಳೆಯುವುದರಲ್ಲಿ ತೊಡಗಿರುತ್ತಾರೆ. ತಮ್ಮ ಕೆಲಸಕ್ಕೆ ಮಾಸಿಕ ವೇತನವನ್ನು ಪಡೆಯುತ್ತಾರೆ, ಹಾಗೆಯೇ ೭ ಮಹಿಳೆಯರು ಕೇವಲ ಬಟ್ಟೆ ಒಗೆಯುವ ಕೆಲಸಕ್ಕೆ ಹೋಗುತ್ತಿದ್ದಾರೆ. ಇವರು ಸಾಮಾನ್ಯವಾಗಿ ಮಡಿವಾಳ ಜಾತಿಗೆ ಸೇರಿದವರಾಗಿದ್ದು ಮನೆತನದ ವೃತ್ತಿಯೂ ಬಟ್ಟೆ ಒಗೆಯುವುದಾದ್ದರಿಂದ ಕೆಲವು ಮನೆಗಳಿಗೆ ತೆರಳಿ ಬಟ್ಟೆ ಸ್ವಚ್ಛಗೊಳಿಸುವ ಕೆಲಸವನ್ನು ಒಪ್ಪಿಕೊಂಡಿರುತ್ತಾರೆ. ಇವರು ಕೂಡ ಮಾಸಿಕ ವೇತನವನ್ನು ಪಡೆಯತ್ತಾರೆ. ಮಡಿವಾಳ ವೃತ್ತಿಯವರೂ ಕೂಡ ಎರಡು ರೀತಿಯ ಕೆಲಸ ಒಪ್ಪಿಕೊಂಡಿರುತ್ತಾರೆ ಅದರಲ್ಲಿ ಬಟ್ಟೆ ಒಗೆದು ಇಸ್ತ್ರಿ ಮಾಡಿಕೊಡುವುದು. ಇದಕ್ಕೆ ದಿನದ ಅಥವಾ ಬಟ್ಟೆಯ ಲೆಕ್ಕವನ್ನು ವೇತನವಾಗಿ ಪಡೆಯುತ್ತಾರೆ. ಇನ್ನುಳಿದವರು ಒಡೆಯರ ಮನೆಗಳಗೆ ತೆರಳಿ ಬಟ್ಟೆ ಸ್ವಚ್ಛಗೊಳಿಸಿ ಕೊಡುತ್ತಾರೆ. ಈ ಅಧ್ಯಯನದಲ್ಲಿ ಕೇವಲ ಮಾಸಿಕವಾಗಿ ವೇತನ ಪಡೆಯುವ ಮನೆಗೆಲಸದವರನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಕೋಷ್ಟಕ ೫.೫: ಕೆಲಸದ ಮಾಹಿತಿ ಹಾಗೂ ಕೆಲಸದ ಸ್ಥಳದ ದೂರದ ಮಾಹಿತಿ

ಕ್ರಸಂ	ವಿವರಣೆ	ಒಟ್ಟು	ಶೇಕಡ
೦೧	**ನಿರ್ವಹಿಸುವ ಕೆಲಸ**		
	ಬಟ್ಟೆ	೦೭	೨.೮೦
	ಎಲ್ಲಾ ಕೆಲಸ(ಬಟ್ಟೆ,ಪಾತ್ರೆ,ಕಸ)	೨೨೨	೮೮.೮೦
	ಅಡುಗೆ	೨೧	೮.೪೦
	ಒಟ್ಟು	**೨೫೦**	**೧೦೦.೦೦**
೦೨	**ಕೆಲಸದ ಸ್ಥಳದ ದೂರ**		
	೧/೨ ಕಿ.ಮಿ.ನಿಂದ ೧ ಕಿ.ಮಿ	೧೭೮	೭೧.೨೦
	೧ ಕಿ.ಮಿ ಗೂ ಅಧಿಕ	೭೨	೨೮.೮೦
	ಒಟ್ಟು	**೨೫೦**	**೧೦೦.೦೦**

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೫ರಲ್ಲಿ ತಿಳಿಸಿರುವ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ಅಧಿಕ ಸಂಖ್ಯೆಯ ಮಹಿಳೆಯರು ಅಂದರೆ ೨೨೨ ಮಹಿಳೆಯರು ಮಾಲೀಕರ ಮನೆಯಲ್ಲಿ ಬಟ್ಟೆ, ಪಾತ್ರೆ, ಕಸ ಗುಡಿಸಿ ನೆಲ ಸಾರಿಸುವ ಎಲ್ಲಾ ಕೆಲಸಕ್ಕಾಗಿ ನಿಯುಕ್ತಿ ಹೊಂದಿದವರು ಹಾಗೂ ೭ ಜನ ಮಹಿಳೆಯರು ಕೇವಲ ಬಟ್ಟೆ ಸ್ವಚ್ಛಗೊಳಿಸುವುದಕ್ಕಾಗಿ ಹಾಗೂ ೨೧ ಮಹಿಳೆಯರು ಅಡುಗೆ ಕಾರ್ಯದಲ್ಲಿ ತೊಡಗಿದವರಾಗಿದ್ದಾರೆ.

ಕೆಲಸದ ಸ್ಥಳದ ದೂರ :

ಮನೆಗೆಲಸದ ಮಹಿಳೆಯರು ಕಡಿಮೆ ಕೂಲಿಯನ್ನು ಪಡೆಯುತ್ತಿದ್ದು ಅವರಿಗೆ ಕೆಲಸದ ಸಮಯ ಕೂಡ ನಿಗಧಿಯಾಗಿರುವುದಿಲ್ಲ. ಮನೆಮಾಲೀಕರನ್ನು ಮೆಚ್ಚಿಸಲು ಹೆಚ್ಚು ಸಮಯದವರೆಗೆ ಕೆಲಸ ನಿರ್ವಹಿಸಬೇಕಾಗುತ್ತದೆ. ಇದೇ ಅಭಿಪ್ರಾಯವು ಯು. ಕಲ್ಪಾಗಮ್ (೧೯೯೪) ಅವರು ಬರೆದ 'ಲೇಬರ್ ಅಂಡ ಜಂಡರ್' ಕೃತಿಯಲ್ಲೂ ವ್ಯಕ್ತವಾಗಿದೆ. ಕೆಲಸದ ಮನೆಗಳು ಬಹಳ ದೂರ ಇದ್ದು ಅಲ್ಲಿಗೆ ತೆರಳುವ ಕೆಲಸಗಾರರು ತಮ್ಮ ದಿನದ ಅಧಿಕ ಸಮಯವನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಮನೆಗೆಲಸದ ಮಹಿಳೆಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ದೂರದ ಸಮಸ್ಯೆಯೂ ಒಂದಾಗಿದೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರಲ್ಲಿ ೧೭೮ ಮಹಿಳೆಯರು ತಾವು ಕೆಲಸ ಮಾಡುವ ಮನೆಗಳಿಗೆ ತೆರಳಲು ಸುಮಾರು ೧೦ ನಿಮಿಷಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಕೆಲಸಮಾಡುವ ಮನೆಗಳು ೧/೨ ಕಿ.ಮೀ. ನಿಂದ ೧ ಕಿ.ಮೀ ದೂರದಲ್ಲಿವೆ. ಇನ್ನು ೭೨ ಮಹಿಳೆಯರ ಮಾಲೀಕರ ಮನೆಗಳು ೧ ಕಿ.ಮೀ.ಗಿಂತ ಅಧಿಕ ದೂರದಲ್ಲಿವೆ.

ಮನೆಯ ಹತ್ತಿರವೇ ಇರುವ ಮನೆಗಳ ಕೆಲಸವನ್ನು ಸಾಮಾನ್ಯವಾಗಿ ಚಿಕ್ಕ ಮಕ್ಕಳ ಪಾಲನೆಯಲ್ಲಿ ತೊಡಗಿದವರು ಒಪ್ಪಿಕೊಳ್ಳುತ್ತಾರೆ. ಎಲ್ಲರಿಗೂ ಈ ಅವಕಾಶ ದೊರೆಯದೇ ಸಾಮಾನ್ಯವಾಗಿ ದೂರದ ಮನೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಕೆಲಸವು ಮಹಿಳೆಯರಿಗೆ ಅನಿವಾರ್ಯ ಆಗಿರುವುದರಿಂದ ಕೆಲಸದ ಸಮಯದಲ್ಲಿ ಏನೇ ಅನಾನುಕೂಲಗಳಿದ್ದರು ಮಹಿಳೆಯರು ಎದುರಿಸಲೇಬೇಕಾಗುತ್ತದೆ. ಹೊಸಪೇಟೆಯಂತಹ ಊರುಗಳಲ್ಲಿ ಸರಿಯಾದ ಸಮಯಕ್ಕೆ ನಗರ ಸಾರಿಗೆ ಬಸ್‌ಗಳ ಅನುಕೂಲವಿರದೇ ಮಹಿಳೆಯರು ದೂರದ ಮನೆಗಳಿಗೆ ಮಳೆ ಚಳಿಯನ್ನು ಲೆಕ್ಕಿಸದೇ ತೆರಳಬೇಕಾಗುತ್ತದೆ. ಇಲ್ಲದಿದ್ದರೆ ಮನೆಮಾಲೀಕರ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ಒಟ್ಟಾರೆಯಾಗಿ ಮನೆಗೆಲಸವು ಅಧಿಕವಾಗಿ ದೈಹಿಕ ಶ್ರಮವನ್ನೇ ಅಪೇಕ್ಷಿಸುವ ವೃತ್ತಿಯಾಗಿದೆ.

೫.೬: ಮನೆಗೆಲಸದ ಸೇವೆಗೆ ತರಬೇತಿಯ ಅವಶ್ಯಕತೆ

ಮನೆಗೆಲಸದ ದುಡಿಮೆಯಲ್ಲಿ ತೊಡಗುವ ಮಹಿಳೆಯರು ಸಾಮನ್ಯವಾಗಿ ಅನಕ್ಷರಸ್ಥರಾಗಿರುತ್ತಾರೆ. ಅವರು ಯಾವ ವೃತ್ತಿ ತರಬೇತಿಯನ್ನು ಪಡೆದಿರುವುದಿಲ್ಲ ಅಲ್ಲದೇ ಮನೆಗೆಲಸ ಎಂದರೆ ಮಹಿಳೆಯರು ಸಾಮಾನ್ಯವಾಗಿ ತಮ್ಮ ಮನೆಯಲ್ಲಿ ನಿರ್ವಹಿಸುವ ಕೆಲಸಗಳನ್ನೇ ನಿರ್ವಹಿಸುತ್ತಿರುವರಾದ್ದರಿಂದ ಈ ಕೆಲಸಕ್ಕೆ ಯಾವ ತರಬೇತಿಯ ಅವಶ್ಯಕತೆ ಇರುವುದಿಲ್ಲ. ಇದೇ ಅಭಿಪ್ರಾಯವನ್ನು ಸಿದ್ಧಾರ್ಥ ಸರ್ಕಾರ ಅವರೂ (೨೦೦೫) ವ್ಯಕ್ತಪಡಿಸಿದ್ದಾರೆ. ಮನೆಗೆಲಸದ ಮಹಿಳೆಯರು ಯಾವ ವೃತ್ತಿ ನೈಪುಣ್ಯತೆಯನ್ನು ಪಡೆಯಬೇಕಾಗಿಲ್ಲ. ಇದನ್ನು ಕೇವಲ ಅನುಭವದಿಂದ ಪಡೆಯಬಹುದಾಗಿದೆ ಎಂದಿದ್ದಾರೆ. ಕೋಷ್ಟಕ ೫.೬ ರಲ್ಲಿ ಮನೆಗೆಲಸದ ದುಡಿಮೆಗಾರರಿಗೆ ತರಬೇತಿಯ ಅವಶ್ಯಕತೆ ಕುರಿತು ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಲಾಗಿದೆ.

ಕೋಷ್ಟಕ ೫.೬: ತರಬೇತಿಯ ಅವಶ್ಯಕತೆ

ಕ್ರಸಂ	ವಿವರಣೆ	ಒಟ್ಟು	ಶೇಕಡಾ
	ಕೆಲಸಕ್ಕೆ ತರಬೇತಿಯ ಅವಶ್ಯಕತೆ		
೦೧	ಇದೆ	--	--
೦೨	ಇಲ್ಲ	೨೫೦	೧೦೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೬ರಲ್ಲಿ ತಿಳಿಸಿರುವ ಮಾಹಿತಿಯಂತೆ ಹೊಸಪೇಟೆಯ ಎಲ್ಲಾ ಮಹಿಳಾ ಮನೆಗೆಲಸಗಾರರಿಗೂ ತರಬೇತಿಯ ಅವಶ್ಯಕತೆ ಇರುವುದಿಲ್ಲ ಇದೇ ಅಭಿಪ್ರಾಯವು ೨೦೦೨ರ ಕಾರ್ಮಿಕರ ರಾಷ್ಟ್ರೀಯ ಸಮಿತಿಯ ವರದಿಯಲ್ಲಿ ಉಲ್ಲೇಖಿತವಾಗಿದೆ. ಅಸಂಘಟಿತ ವಲಯದ ಕೆಲಸಗಳಲ್ಲಿ ಮುಖ್ಯವಾದ ಹಾಗೂ ಅತೀ ಶೋಷಿತ ವರ್ಗವಾದ ಮನೆಗೆಲಸದ ದುಡಿಮೆಗಾರರನ್ನು ಪತ್ತೆ ಹಚ್ಚುವಲ್ಲಿ ಸರಿಯಾದ ಅಂಕಿ ಅಂಶಗಳ ಅಲಭ್ಯತೆಯನ್ನು ಸಮಿತಿಯು ಮನಗಂಡಿದೆ ಹಾಗು ಈ ಕೆಲಸಕ್ಕೆ ಯಾವ ಕೌಶಲ್ಯ ಹಾಗೂ ತರಬೇತಿಯ ಅವಶ್ಯಕತೆ ಇರುವುದಿಲ್ಲ ಎಂದು ವರದಿಯಾಗಿದೆ.

ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಿಗೆ ಯಾವ ಆದಾನಗಳೂ ಬೇಕಾಗಿರುವುದಿಲ್ಲ ಎಂಬ ಹೇಳಿಕೆಯಂತೆ ಮನೆಗೆಲಸದ ಮಹಿಳೆಯರ ಶ್ರಮಬಲವು ಅಧಿಕವಾಗಿ, ಅವರ ವೃತ್ತಿಯಲ್ಲಿಯೇ ಸ್ಪರ್ಧೆಯೇರ್ಪಟ್ಟು ಕಡಿಮೆ ಕೂಲಿ ನಿರ್ಧಾರವಾಗುತ್ತದೆ ಎಂಬುದು ಸತ್ಯ ಸಂಗತಿಯಾಗಿದೆ. ಮನೆಗೆಲಸದ ದುಡಿಮೆಗೂ ಕನಿಷ್ಟ ಕೂಲಿಯನ್ನು ಕೊಡಬೇಕಾಗಿರುವುದು ಅವಶ್ಯವೆನಿಸಿದೆ.

೫.೭: ಮನೆಗೆಲಸದ ವೃತ್ತಿಯಿಂದ ಆರೋಗ್ಯದ ಮೇಲಾಗುವ ಪರಿಣಾಮ

ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಮಹಿಳೆಯರು ಮನೆಗೆಲಸದ ಮೇಲೆ ಅವಲಂಬಿತವಾಗಿದ್ದು, ಮಹಿಳೆಯರ ಜೀವನಾಧಾರ ದುಡಿಮೆಯಾಗಿದೆ. ಮನೆಗೆಲಸವು ಅಸಂಘಟಿತ ವಲಯಕ್ಕೆ ಸೇರಿರುವುದರಿಂದ ಈ ಕೆಲಸದಲ್ಲಿ ತೊಡಗಿದ ಮಹಿಳೆಯರಿಗೆ ಕೂಲಿಯಲ್ಲದೇ ಬೇರೆ ಯಾವ ಸರ್ಕಾರದ ಸೌಲಭ್ಯಗಳೂ ದೊರಕುವುದಿಲ್ಲ. ಸಂಘಟಿತ ವಲಯದ ಕಾರ್ಮಿಕರು ತಮ್ಮ ಒಡೆಯರ ಜೊತೆ ಚೌಕಾಶಿ ಮನೋಭಾವವನ್ನು ತೋರಿಸಿ ಲಾಭವನ್ನು ಪಡೆಯುತ್ತಾರೆ. ಆದರೆ ಈ ಚೌಕಾಶಿ ಶಕ್ತಿಯು ಅಸಂಘಟಿತ ವಲಯದ ಕಾರ್ಮಿಕರಿಗೆ ಇರುವುದಿಲ್ಲ. ಈ ರೀತಿಯ ಚೌಕಾಶಿ ಶಕ್ತಿಯು ಸಂಘಟಿತ ವಲಯದ ಕಾರ್ಮಿಕರಲ್ಲಿ ಇರಲು ಕಾರಣ ಅವರ ಶೈಕ್ಷಣಿಕ ಅರ್ಹತೆ ಮತ್ತು ವೃತ್ತಿ ನೈಪುಣ್ಯತೆ ಅದರ ಜೊತೆ ಕಾರ್ಮಿಕ ಸಂಘಗಳ ಬೆಂಬಲ. ಇದಾವುದೇ ಬೆಂಬಲವಿಲ್ಲದೇ ಅಸಂಘಟಿತ ವಲಯದ ಕಾರ್ಮಿಕರು ನಿರಾಶಾದಾಯಕ ವಾತಾವರಣದಲ್ಲಿ ಸುರಕ್ಷತೆ ಇಲ್ಲದೇ, ರಜಾ ಸೌಲಭ್ಯ ಹಾಗೂ ವೈದ್ಯಕೀಯ ಸೌಲಭ್ಯಗಳಿಲ್ಲದೇ ಕಾರ್ಯನಿರ್ವಹಿಸುತ್ತಿದ್ದಾರೆ.

ಹೊಸಪೇಟೆಯ ಮನೆಗೆಲಸದ ಮಹಿಳೆಯರ ವೃತ್ತಿಯಲ್ಲಿ ಇರುವ ಅನುಕೂಲಗಳು ಹಾಗೂ ಅನಾನುಕೂಲಗಳ ವಿವರ ಕೋಷ್ಟಕ ೫.೭ರಲ್ಲಿ ದಾಖಲಾಗಿರುತ್ತದೆ.

ಕೋಷ್ಟಕ ೫.೭: ವೃತ್ತಿಯಿಂದ ಆರೋಗ್ಯದ ಮೇಲಾಗುವ ಪರಿಣಾಮ

ಕ್ರ.ಸಂ	ವಿವರಣೆ	ಒಟ್ಟು	ಶೇಕಡಾ
೦೧	**ವೃತ್ತಿಯಲ್ಲಿ ರಜಾ ಸೌಲಭ್ಯ**		
	ಇದೆ	೧೩೫	೫೪.೦೦
	ಇಲ್ಲ	೧೧೫	೪೬.೦೦
	ಒಟ್ಟು	**೨೫೦**	**೧೦೦.೦೦**
೦೨	**ವೃತ್ತಿಯಿಂದ ಕೆಟ್ಟ ಪರಿಣಾಮ**		
	ಇದೆ	೨೩೭	೯೪.೮೦
	ಇಲ್ಲ	೧೩	೫.೨೦
	ಒಟ್ಟು	**೨೫೦**	**೧೦೦.೦೦**
೦೩	**ವೃತ್ತಿಯಲ್ಲಿ ತೃಪ್ತಿ**		
	ಇದೆ	೧೧	೪.೪೦
	ಇಲ್ಲ	೨೩೯	೯೫.೬೦
	ಒಟ್ಟು	**೨೫೦**	**೧೦೦.೦೦**

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೭ರಲ್ಲಿ ತಿಳಿಸಿರುವ ಮಾಹಿತಿಯಂತೆ ಹೊಸಪೇಟೆಯ ಮನೆಗೆಲಸದ ದುಡಿಮೆಗಾರರಲ್ಲಿ ೧೩೩ ಮಹಿಳೆಯರು ವೃತ್ತಿಯಲ್ಲಿ ರಜಾ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ರಜಾ ಸೌಲಭ್ಯ ಎಂದರೆ ಕೇವಲ ಒಂದು ಅಥವಾ ಎರಡು ದಿನಗಳದ್ದಾಗಿರುತ್ತದೆ ಅದಕ್ಕೂ ಹೆಚ್ಚಿನ ದಿನಗಳವರೆಗೆ ಕೆಲಸಕ್ಕೆ ಹೋಗದಿದ್ದರೆ ಪ್ರತೀಕೂಲ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಏಕೆಂದರೆ ಮನೆಗೆಲಸದವರು ಗೈರು ಹಾಜರಾದರೆ ಮನೆಮಾಲೀಕರಿಗೆ ಬಹಳ ಹೊರೆಯಾಗುತ್ತದೆ. ಅಷ್ಟೊಂದು ಮಟ್ಟಿಗೆ ಮನೆಮಾಲೀಕರು ಮನೆಗೆಲಸದವರ ಮೇಲೆ ಅವಲಂಬಿತರಾಗಿದ್ದಾರೆ. ಈ ಕಾರಣಕ್ಕಾಗಿ ಕೇವಲ ಅನಿವಾರ್ಯ ಪರಿಸ್ಥಿತಿ ಒದಗಿಬಂದಾಗ ಮಾತ್ರ ಒಂದೆರಡು ದಿನಗಳ ರಜೆಯನ್ನು ಪಡೆಯುತ್ತಿದ್ದಾರೆ. ಆದರೆ ಸಂಘಟಿತ ವಲಯದ ಕಾರ್ಮಿಕರಿಗೆ ನೀಡುವಂತೆ ಹೆರಿಗೆ ರಜೆ, ಅನಾರೋಗ್ಯ ರಜೆಗಳನ್ನು ನೀಡುವುದಿಲ್ಲ. ಮಹಿಳೆಯರು ಇಂತಹ ಸಮಯದಲ್ಲಿ ಕೆಲಸವನ್ನು ಬಿಡಬೇಕಾಗುತ್ತದೆ. ಇಲ್ಲದಿದ್ದರೆ ಹಸುಗೂಸನ್ನು ಮನೆಯಲ್ಲಿಯೇ ಬಿಟ್ಟು ದುಡಿಮೆಗೆ ತೆರಳಬೇಕಾಗುತ್ತದೆ. ಇಲ್ಲದೇ ಹೋದರೆ ಮನೆಯ ಸದಸ್ಯರು ಎರಡು ಹೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ಒದಗಿಬರುತ್ತದೆ. ಹೀಗೆ ಮನೆಗೆಲಸದ ಮಹಿಳೆಯರು ರಜಾ ಸೌಲಭ್ಯವನ್ನು ಪಡೆದರೂ ಅದು ಪೂರ್ಣ ಪ್ರಮಾಣದ ಲಾಭವನ್ನೇನೂ ಕೊಡುವುದಿಲ್ಲ. ಆದರೆ ೧೧೫ ಮಹಿಳೆಯರು ವೃತ್ತಿಯಲ್ಲಿ ಯಾವ ರೀತಿಯ ರಜಾ ಸೌಲಭ್ಯವನ್ನು ಪಡೆಯುವುದಿಲ್ಲ. ಒಂದು ದಿನ ಕೆಲಸಕ್ಕೆ ಗೈರು ಹಾಜರಾದರೆ ಅವರ ಒಂದು ದಿನದ ಕೂಲಿಯನ್ನು ಕಡಿತಗೊಳಿಸಲಾಗುತ್ತದೆ. ಇದೇ ರೀತಿ ವಾರಗಟ್ಟಲೆ ಕೆಲಸಕ್ಕೆ ಹಾಜರಾಗದಿದ್ದರೆ ಕೆಲಸದಿಂದಲೇ ತೆಗೆದು ಹಾಕುತ್ತಾರೆ.

ಇದೇ ಅಭಿಪ್ರಾಯವನ್ನು ಸ್ವಾಸ್ತಿ ಮಿತ್ತರ್ ಅವರೂ ವ್ಯಕ್ತಪಡಿಸಿದ್ದಾರೆ. ಮಹಿಳೆಯರು ತಾಯಿ ಹಾಗೂ ಗೃಹಿಣಿಯ ಪಾತ್ರವನ್ನು ನಿರ್ವಹಿಸುವುದಲ್ಲದೇ, ಮನೆಯ ನಿರ್ವಹಣೆ ಕೂಡ ಮಾಡಬೇಕಾಗಿ ರುವುದರಿಂದ ಹೊಂದಾಣಿಕೆಯ (Flexible) ಕೆಲಸವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಸಣ್ಣ ಕಾರ್ಖಾನೆ ಗಳಲ್ಲಿಯೂ ಕೂಡ ಮಹಿಳೆಯರು ಹೇಗೆ ಶೋಷಣೆಗೊಳಗಾಗುತ್ತಾರೆ ಎಂಬ ವಿಷಯವನ್ನು ಕಲ್ಕತ್ತಾದ ಒಬ್ಬ ಮಹಿಳೆ ಜೀವನ ಸ್ಥಿತಿಯ ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ಫಾತೀಮಾ ಎಂಬ ಕಲ್ಕತ್ತಾದ ಕಾರ್ಖಾನೆಯಲ್ಲಿಯ ಉದ್ಯೋಗಿ ತನ್ನ ಮಗುವಿಗೆ ಎದೆ ಹಾಲು ಉಣಿಸಲು ಮೈಲುಗಟ್ಟಲೆ ನಡೆದು ಹೋಗಬೇಕು. ಫಾತೀಮಾ ತನ್ನ ಊಟದ ಅವಧಿಯಲ್ಲಿ ಮನೆಗೆ ಬಂದು ಮಗುವಿಗೆ ಹಾಲುಣಿಸಿ ಹೋಗುವ ಹೊತ್ತಿಗೆ ಸ್ವಲ್ಪ ತಡವಾಗುತ್ತದೆ. ಈ ಅವಧಿಯನ್ನು ಫಾತೀಮಾಳ ವಾರದ ವೇತನದಲ್ಲಿ ಕಡಿತಗೊಳಿಸಲಾಗುತ್ತದೆ ಎಂಬ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಸ್ಥಿತಿಗತಿಯ ವಿವರಣೆ ನೀಡಿರುತ್ತಾರೆ. ಇದೇ ಅಭಿಪ್ರಾಯವನ್ನು ಮೈಥಿಲಿ ವಿಶ್ವನಾಥನ್ (೧೯೮೪) ಅವರೂ ಕೂಡ ವ್ಯಕ್ತಪಡಿಸುತ್ತಾರೆ. ಸಂತಾನೋತ್ಪತ್ತಿಯ ಸಮಯದಲ್ಲಿ ಕೂಡ ಮಹಿಳೆಯರಿಗೆ ರಜೆ ಸೌಲಭ್ಯವಿರುವುದಿಲ್ಲ. ರಜೆ ಬೇಕೆಂದರೆ ಕೆಲಸವನ್ನು ಕಳೆದುಕೊಳ್ಳಬೇಕಾಗುತ್ತದೆ. ೧/೨ ಗಂಟೆ ಕೆಲಸಕ್ಕೆ ತಡವಾಗಿ ಹೋದರೂ ೧/೨ ದಿನದ ಸಂಬಳವನ್ನು ಕಳೆದುಕೊಳ್ಳಬೇಕಾಗುತ್ತದೆಂದು ಟುವರ್ಡ್ಸ್ ಈಕ್ವಾಲಿಟಿ (೧೯೭೫) ವರದಿ ಯಲ್ಲಿಯೂ ವಿವರಿಸಿದ್ದಾರೆ. ಹೀಗೆ ಮನೆಗೆಲಸದ ಮಹಿಳೆಯರಿಗೂ ಕೂಡ ರಜಾ ಸೌಲಭ್ಯವಿರುವುದಿಲ್ಲ, ಇದ್ದರೂ ಅದು ಕೇವಲ ೩ ದಿನಗಳದ್ದಾಗಿರುತ್ತದೆ. ಮಳೆ ಚಳಿಯನ್ನದೆ ಸರಿಯಾದ ಸಮಯಕ್ಕೆ ಕೆಲಸಕ್ಕೆ

ತೆರಳಬೇಕು. ಅನಾರೋಗ್ಯದ ಸಮಯದಲ್ಲಿಯೂ ಕಾರ್ಯ ನಿರತರಾಗಬೇಕಾಗುತ್ತದೆ. ಇಲ್ಲದಿದ್ದರೆ ಜೀವನಾಧಾರವಾದ ಉದ್ಯೋಗವನ್ನು ಕಳೆದುಕೊಳ್ಳಬೇಕಾಗುತ್ತದೆ.

ವೃತ್ತಿಯಿಂದ ಕೆಟ್ಟ ಪರಿಣಾಮ :

ಅಸಂಘಟಿತ ವಲಯದ ದುಡಿಮೆಯು ಸುರಕ್ಷಿತವಲ್ಲದ ಸ್ಥಳದಲ್ಲಿ ನಡೆದಿರುತ್ತದೆ. ಉದಾಹರಣೆಗಾಗಿ ಗೃಹ ಆಧಾರಿತ ಚಟುವಟಿಕೆಗಳಲ್ಲಿ ಒಂದಾದ ಬೀಡಿ ಕಟ್ಟುವ ಕೆಲಸವೂ ಕೂಡ ಸಣ್ಣಪುಟ್ಟ ಮನೆಗಳಲ್ಲಿ ನಡೆದಿರುತ್ತದೆ. ಊದುಬತ್ತಿ ತಯಾರಿಸಲು ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಇರುವುದಿಲ್ಲ ಸಣ್ಣ ಮಕ್ಕಳು ಹಿರಿಯರೂ ಹತ್ತಿರವೇ ಇದ್ದು ಈ ಕೆಲಸದಲ್ಲಿ ತೊಡಗಿರುತ್ತಾರೆ. ಊದುಬತ್ತಿಯ ಧೂಳು, ತಂಬಾಕಿನ ವಾಸನೆ ಸೇವನೆಯಿಂದ ಶ್ವಾಸಕೋಶದ ತೊಂದರೆ ಎದುರಾಗಬಹುದಾದ ಸಾಧ್ಯತೆ ಹೆಚ್ಚು. ಹೀಗೆ ಅಸಂಘಟಿತ ವಲಯದ ಕೆಲಸಗಳು ಸುರಕ್ಷಿತವಲ್ಲದ ಸ್ಥಳಗಳಲ್ಲಿ ನಡೆಯುವುದರಿಂದ ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿದೆ. ಇದೇ ರೀತಿಯಾಗಿ ಅಸಂಘಟಿತ ವಲಯದ ಎಲ್ಲ ದುಡಿಮೆಗಳಿಂದಲೂ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಖಂಡಿತ ಎಂದು ಹೇಳಬಹುದು.

ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ವೃತ್ತಿಯಿಂದ ಅನೇಕ ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದಾರೆ. ಸಮಿಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೨೩೭ ಮಹಿಳೆಯರು ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಂದರೆಯನ್ನು ಎದುರಿಸುತ್ತಿದ್ದಾರೆ. ಉದಾ: ಬಟ್ಟೆ ಒಗೆಯಲು ಸಾಬೂನು, ಸೋಡಾ ಹಾಗೂ ಅನೇಕ ರೀತಿಯ ಸರ್ಫ್ ಪೌಡರಗಳನ್ನು ಬಳಸಬೇಕಾಗುತ್ತದೆ. ಇವು ರಾಸಾಯನಿಕ ಮಿಶ್ರಣಗಳಿಂದ ತಯಾರಿಸಿದ್ದಾದ್ದರಿಂದ ಕೈ ಕಾಲುಗಳು ಸೀಳುವುದಲ್ಲದೇ ಉರಿ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ರಕ್ತವೂ ಕಾಣಿಸಿಕೊಳ್ಳುತ್ತದೆ. ದೀರ್ಘ ಸಮಯದವರೆಗೆ ಈ ರೀತಿಯ ಡಿಟರ್ಜಂಟಗಳನ್ನು ಬಳಸುವುದರಿಂದ ಚರ್ಮಕಾಯಿಲೆಗೆ ತುತ್ತಾಗುತ್ತೀರೆಂದು ಚರ್ಮರೋಗ ತಜ್ಞರು ಸಲಹೆ ನೀಡಿದರೂ ದುಡಿಮೆ ಮುಖ್ಯವಾಗಿರುವುದರಿಂದ ಮಹಿಳೆಯರು ಯಾವ ಸಲಹೆ ಸೂಚನೆಗಳನ್ನು ಪಾಲಿಸಲಾಗುತ್ತಿಲ್ಲ. ಒಂದು ದಿನಕ್ಕೆ ೧೨ ಗಂಟೆಗಳಿಗೂ ಅಧಿಕ ಸಮಯ ಮಳೆ ಚಳಿಯಲ್ಲಿ ಬಿಸಿಲಿನಲ್ಲಿ ಕೆಲಸಮಾಡುವುದರಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಬಿಸಿಲಿನಲ್ಲಿ ಹೆಚ್ಚು ಓಡಾಡಿ ತಲೆ ಉರಿ, ಕಣ್ಣುರಿಗಳಂತಹ ಉಷ್ಣ ಸಂಬಂಧಿ ಕಾಯಿಲೆಗಳು ಬರುತ್ತವೆ. ಮಳೆಗಾಲದಲ್ಲಿ ಶೀತಬಾಧೆ ಹೀಗೆ ಅವಿರತವಾಗಿ ದುಡಿಯುವುದರಿಂದ ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಕಾಲುನೋವು ಬೆನ್ನು ನೋವುಗಳಂತೂ ಸಾಮಾನ್ಯವಾದ ಕಾಯಿಲೆಗಳಾಗಿ ಬಿಟ್ಟಿವೆ. ಮನೆಯ ಹೊರಗಡೆ ಕುಳಿತು ಕೆಲಸ ಮಾಡಬೇಕಾಗಿರುವುದರಿಂದ ಮಳೆ, ಚಳಿ, ಬಿಸಿಲುಗಳಿಂದ ಬಳಲಿಕೆ ಉಂಟಾಗುತ್ತದೆ. ವೈದ್ಯರ ಬಳಿ ಚಿಕಿತ್ಸೆಗಾಗಿ ಹೋದರೆ ಪೌಷ್ಠಿಕ ಆಹಾರ ತೆಗೆದುಕೊಳ್ಳಲು, ಹಾಗೂ ವಿಶ್ರಾಂತಿ ತೆಗೆದುಕೊಳ್ಳಲು ಸಲಹೆ ನೀಡುತ್ತಾರೆ. ಆದರೆ ಇವರೆಡೂ ಮನೆಗೆಲಸದ ಮಹಿಳೆಯರಿಗೆ ಮರೀಚಿಕೆಯಾಗಿ ಬಿಟ್ಟಿವೆ. ಅಡುಗೆ ವೃತ್ತಿಯಲ್ಲಿ ತೊಡಗಿದ ಮಹಿಳೆಯರೂ ಕೂಡ ಗ್ಯಾಸ್ ಅಥವಾ ಒಲೆಯ ಎದುರು ಹೆಚ್ಚು ಸಮಯ ನಿಲ್ಲಬೇಕಾಗುವುದರಿಂದಲೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಲವು ಮಹಿಳೆಯರು ಅತಿಯಾದ ಡಿಟರ್ಜೆಂಟಗಳ ಬಳಕೆಯಿಂದ ಹಾನಿಯಾದ ಕೈಕಾಲು ಬೆರಳುಗಳನ್ನು ತೋರಿಸಿರುತ್ತಾರೆ. ಅದಕ್ಕೆ ಅಸಂಘಟಿತ ವಲಯದ ಕೆಲಸವನ್ನು ಸುರಕ್ಷಿತವಲ್ಲದ ಕೆಲಸ ಎಂದೇ ಕರೆಯಲಾಗಿದೆ.

ಆದರೆ ಸುಮಾರು ೧೩ ಮಹಿಳೆಯರು ತಾವು ವೃತ್ತಿಯಲ್ಲಿ ಯಾವ ತೊಂದರೆಯನ್ನು ಎದುರಿಸುತ್ತಿಲ್ಲ ಎಂದೇ ತಿಳಿಸಿರುತ್ತಾರೆ. ಇದು ಅವರ ವೃತ್ತಿ ಗೌರವದ ಪ್ರತೀಕವಾಗಿದೆ ಮಹಿಳೆಯರು ತಮ್ಮ ಹೇಳಿಕೆಯನ್ನು ಈ ರೀತಿಯಾಗಿ ಸಮರ್ಥಿಸಿಕೊಂಡಿದ್ದಾರೆ. ತಾವು ಅನಕ್ಷರಸ್ಥರಾಗಿದ್ದರೂ ಕೂಡ ಈ ದುಡಿಮೆಯಲ್ಲಿ ತೊಡಗಿ ತಮ್ಮ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ. ನಮ್ಮ ವೃತ್ತಿಯಿಂದ ಯಾವ ತೊಂದರೆಯೂ ನಮಗೆ ಎದುರಾಗಿರುವುದಿಲ್ಲ ಎಂದಿದ್ದಾರೆ. ಈ ರೀತಿ ಪ್ರತಿಕ್ರಿಯೆ ನೀಡಿದ ಮಹಿಳೆಯರು ಅಡುಗೆ ವೃತ್ತಿಯಲ್ಲಿ ತೊಡಗಿದ ಮಹಿಳೆಯರಾಗಿದ್ದಾರೆ.

ಆದರೆ ವೃತ್ತಿಯಿಂದ ಕೆಟ್ಟ ಪರಿಣಾಮಗಳನ್ನು ಎದುರಿಸುವವರ ಸಂಖ್ಯೆ ಅಧಿಕವಾಗಿದ್ದು, ಮನೆಗೆಲಸದ ಮಹಿಳೆಯರು ತಮಗೂ ವೃತ್ತಿ ಸುರಕ್ಷತೆ ಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ.

ಮನೆಗೆಲಸದ ವೃತ್ತಿಯಲ್ಲಿ ತೃಪ್ತಿ:

ಅಸಂಘಟಿತ ಮಹಿಳೆಯರು ತಮ್ಮ ವೃತ್ತಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಮನೆಯಿಂದ ಹೊರಗೆ ಹೋಗಿ ದುಡಿಯಲು ಸಮಾಜದಲ್ಲಿ ಮಹಿಳೆಯ ಚಲನೆಯ ಮೇಲಿರುವ ನಿರ್ಬಂಧ ಒಂದೆಡೆಯಾದರೆ, ಕೆಲಸದ ಸ್ಥಳಗಳಲ್ಲಿ ಎದುರಾಗುವ ಸಮಸ್ಯೆಗಳೇ ಬೇರೆ ಆದರೂ ಕೂಡ ತಮ್ಮ ಕುಟುಂಬದ ಆರ್ಥಿಕ ಮುಗ್ಗಟ್ಟನ್ನು ಕಡಿಮೆ ಮಾಡಲು ದುಡಿಮೆಗೆ ಬರುವ ಮಹಿಳೆಗೆ ವೃತ್ತಿ ಜೀವನ ಸಂತೃಪ್ತಿ ತಂದಿಲ್ಲವೆಂದೇ ವಿಶ್ಲೇಷಿಸಲಾಗಿದೆ.

ಹೊಸಪೇಟೆಯ ೨೪೦ ಮಹಿಳೆಯರಿಗೂ ತಮ್ಮ ವೃತ್ತಿ ಜೀವನ ತೃಪ್ತಿ ತಂದಿರುವುದಿಲ್ಲ. ಹಾಗೂ ತಮಗೆ ಬೇರೆ ಕೆಲಸ (ಇದಕ್ಕಿಂತ ಉತ್ತಮ ರೀತಿಯ) ಸಿಕ್ಕರೆ ಈ ಕೆಲಸವನ್ನು ಬಿಟ್ಟು ಬೇರೆ ಕೆಲಸಕ್ಕೆ ಹೋಗುತ್ತೇವೆ ಎಂದು ಉತ್ತರಿಸುವ ಮೂಲಕ ಮನೆಗೆಲಸದ ದುಡಿಮೆಯ ಮೇಲಿರುವ ತಮ್ಮ ಅನಾದರವನ್ನು ವ್ಯಕ್ತಪಡಿಸಿದ್ದಾರೆ.

ಶ್ರಮ ಶಕ್ತಿಯ ನೈಜ ಕೂಲಿಯು ಅವರು ದುಡಿಯುವ ಸ್ಥಳದ ವಾತಾವರಣ, ಪಡೆಯುವ ಸಂಬಳ, ಕೆಲಸದ ಸುರಕ್ಷತೆಯ ಮೇಲೆ ಅವಲಂಬಿತವಾಗಿದೆ. ಆದರೆ ಮನೆಗೆಲಸದ ಮಹಿಳೆಯರು ಈ ಯಾವ ಉತ್ತಮ ಅವಕಾಶಗಳನ್ನು ತಮ್ಮ ವೃತ್ತಿಯಲ್ಲಿ ಪಡೆದಿಲ್ಲವಾದ್ದರಿಂದ ಅವರ ನೈಜಕೂಲಿಯ ಮಟ್ಟ ಅತೀ ಕಡಿಮೆಯಾಗಿದೆ. ಇಂತಹ ಮಹಿಳೆಯರು ಉತ್ತಮ ಉದ್ಯೋಗಾವಕಾಶಗಳು ಬಂದರೆ ಈ ಕೆಲಸವನ್ನು ಬಿಟ್ಟು ಹೋಗುವ ನಿರ್ಧಾರಕ್ಕೆ ಬಂದಿರುತ್ತಾರೆ.

ನಿಶಾ ಶ್ರೀವಾಸ್ತವ ಅವರು ತಮ್ಮ ಲೇಖನದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಹಿಳೆಯರು ಉದ್ಯೋಗಸ್ಥರು ಎಂದಾಕ್ಷಣ ಸಾಂಸಾರಿಕ ಗುಲಾಮಗಿರಿಯಿಂದ ಮುಕ್ತರು ಎಂದೇನೂ ಪರಿಗಣಿಸಬೇಕಿಲ್ಲ ಅಲ್ಲದೇ ಉದ್ಯೋಗಸ್ಥರು ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಪರಿಸ್ಥಿತಿ ಸರಿ ಇಲ್ಲದಿದ್ದರೆ ಅದು ಗುಲಾಮಗಿರಿ ಎಂದೇ ಪರಿಗಣಿಸಲ್ಪಡುತ್ತದೆ. ಮಹಿಳೆಯರು ಹೊರಗೆ ದುಡಿಯುವುದು ಸಾಮಾಜಿಕ ನಿಬಂಧನೆಗೊಳಪಟ್ಟಿದೆ ಮಹಿಳೆಯರು ಎಂಬ ಕಾರಣಕ್ಕೆ ಕುಟುಂಬದಲ್ಲಿ ಹಾಗೂ ವೃತ್ತಿರಂಗದಲ್ಲಿ ನಿರ್ಲಕ್ಷ್ಯಕ್ಕೊಳಪಟ್ಟು ಸೀಮಾಂತ ದುಡಿಮೆಗಾರರಾಗಿ ಸುರಕ್ಷಿತವಲ್ಲದ ದುಡಿಮೆಯಲ್ಲಿ ನಿರತರಾಗಿದ್ದಾರೆ.

ಮಹಿಳೆಯರಿಗೆ ಉದ್ಯೋಗ ಎಂದರೆ ಬಹುಮುಖ್ಯ ಆದರೆ ಅದು ಬೆನ್ನು ಮುರಿಯುವ (ಅತೀ ಶ್ರಮದಾಯಕ) ಕೆಲಸವಾಗಿದ್ದು ಮಹಿಳೆಯರ ಯೋಗಕ್ಷೇಮ ಗೌಣವಾಗಿದ್ದರೆ ಅಂತಹ ಕೆಲಸ ಉಪಯುಕ್ತಕಾರಿಯಲ್ಲ ಎಂಬ ಹೇಳಿಕೆ ನೀಡಿರುತ್ತಾರೆ. ಮಹಿಳೆಯರನ್ನು ಈ ದುಃಸ್ಥಿತಿಯಿಂದ ಮೇಲೆ ತರಬೇಕೆಂದರೆ ಅವರಿಗೆ ವಿದ್ಯಾಭ್ಯಾಸದ ಅವಕಾಶ ನೀಡಿ, ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳುವ ಸಂದರ್ಭ ಒದಗಿಸಿ ಕೊಡಬೇಕು. ಸಾಮಾಜಿಕ ಕಟ್ಟುಪಾಡುಗಳನ್ನು ಕಡಿಮೆ ಮಾಡಿ ನಿರ್ಭಯವಾಗಿ ಆರ್ಥಿಕತೆಯಲ್ಲಿ ಭಾಗವಹಿಸುವ ವಾತಾವರಣ ಕಲ್ಪಿಸಿಕೊಡಬೇಕೆಂಬ ಸಲಹೆ ನೀಡಿದ್ದಾರೆ.

ಜೆನ್‌ಬ್ರೆಮೆನ್ (೧೯೯೯) ಅವರೂ ಕೂಡ ವೃತ್ತಿಯಲ್ಲಿ ತೃಪ್ತಿ ಇಲ್ಲದೇ ವೃತ್ತಿ ಬದಲಾಯಿಸುವ ಕಾರ್ಮಿಕ ಪಡೆಯ ಬಗ್ಗೆ ಚಿಂತನೆ ನಡೆಸಿದ್ದಾರೆ. ಔಪಚಾರಿಕ ಉದ್ಯೋಗವನ್ನು ಪಡೆಯಲಾಗದ ಕಾರ್ಮಿಕರು ಅನೌಪಚಾರಿಕ ವಲಯದಲ್ಲಿ ನೆಲೆಯನ್ನು ಕಂಡುಕೊಂಡರು. ಸರ್ಕಾರದ ಧೋರಣಾ ಕ್ರಮಗಳು ಕಾರ್ಮಿಕರನ್ನು ಔಪಚಾರಿಕ ವಲಯದಿಂದ ಹೊರಗುಳಿಯುವಂತೆ ಮಾಡಿವೆ. ದಿನೇ ದಿನೇ ಹೆಚ್ಚುತ್ತಿರುವ ಶ್ರಮಶಕ್ತಿಗೆ ಕಡಿಮೆ ಕೂಲಿಯನ್ನು ಕೊಡುವುದಲ್ಲದೇ ಅವರ ಸಮಸ್ಯೆಗಳ ಪರಿಹಾರಕ್ಕೆ ಯಾವ ರೀತಿಯಿಂದಲೂ ಸ್ಪಂದಿಸಲಿಲ್ಲ. ಹೀಗಾಗಿ ಕಾರ್ಮಿಕರು ತಮ್ಮ ವೃತ್ತಿಯನ್ನು ಆಗಿಂದಾಗ್ಗೆ ಬದಲಾಯಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಇವರನ್ನು ಲೇಖಕರು 'ಫುಟ್ ಲೂಸ್ ವರ್ಕಫೋರ್ಸ್' ಎಂದು ಸಂಬೋಧಿಸಿದ್ದಾರೆ. ಈ ವಲಯದ ಕಾರ್ಮಿಕರ ಸುಧಾರಣೆಗೆ ಲೇಖಕರು ಗಂಭೀರವಾದ ಚಿಂತನೆ ನಡೆಸಿದ್ದಾರೆ.

೫.೮: ಬೇರೆ ಕೆಲಸದಲ್ಲಿ ಆಸಕ್ತಿ

ಹೊಸಪೇಟೆಯ ಮನೆಗೆಲಸದ ದುಡಿಮೆಗಾರರಲ್ಲಿ ಕೇವಲ ೧೦ ಮಹಿಳೆಯರು ತಮ್ಮ ವೃತ್ತಿಯಲ್ಲಿ ತೃಪ್ತಿ ಇದೆ ಎಂದು ಪ್ರತಿಕ್ರಿಯಿಸಿದರೆ ಉಳಿದ ೨೪೦ ಮಹಿಳೆಯರು ತಮಗೆ ಉತ್ತಮ ವಾತಾವರಣದ, ಹಣಕಾಸಿನ ವ್ಯವಸ್ಥೆ ಉತ್ತಮವಾಗಿರುವ ಕೆಲಸ ಸಿಕ್ಕರೆ ತಾವು ಖಂಡಿತವಾಗಿ ಈ ಉದ್ಯೋಗ ಬದಲಿಸುತ್ತೇವೆ ಎಂದು ಪ್ರತಿಕ್ರಿಯಿಸುವುದರ ಮೂಲಕ ತಮ್ಮ ವೃತ್ತಿಯ ಮೇಲಿನ ಅಸಂತೃಪ್ತಿಯನ್ನು ಬಹಿರಂಗವಾಗಿ ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೫.೮: ಬೇರೆ ಕೆಲಸದಲ್ಲಿ ಆಸಕ್ತಿ

ಕ್ರಸಂ.	ಬೇರೆ ಕೆಲಸದಲ್ಲಿ ಆಸಕ್ತಿ	ಒಟ್ಟು	ಶೇಕಡ
೦೧	ಇದೆ	೨೪೦	೯೬
೦೨	ಇಲ್ಲ	೧೦	೦೪
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೮ರ ಮಾಹಿತಿಯಂತೆ ಹೊಸಪೇಟೆಯ ೨೪೦ ಮನೆಗೆಲಸದ ಮಹಿಳೆಯರು ಬೇರೆ ಕೆಲಸದಲ್ಲಿ ಆಸಕ್ತಿ ಹೊಂದಿದವರಾಗಿದ್ದಾರೆ. ಆದರೆ ಕೇವಲ ಹತ್ತು ಮಹಿಳೆಯರಿಗೆ ಬೇರೆ ಕೆಲಸದಲ್ಲಿ ಆಸಕ್ತಿ ಇರುವುದಿಲ್ಲ. ಮಹಿಳೆಯರು ನಿರ್ವಹಿಸುತ್ತಿರುವ ಮನೆಗೆಲಸದ ವೃತ್ತಿಯನ್ನು ಬಿಟ್ಟು ಬೇರೆ

ಕೆಲಸಕ್ಕೆ ಹೋಗಬೇಕೆಂದರೆ ಆ ಕೆಲಸದ ವಾತಾವರಣ, ಆದಾಯವು ಮನೆಗೆಲಸದ ವೃತ್ತಿಗಿಂತ ಉತ್ತಮವಾಗಿರಬೇಕು ಎಂಬುದು ಮಹಿಳೆಯರ ಅಭಿಪ್ರಾಯವಾಗಿದೆ. ಅಲ್ಲದೇ ಮನೆಗೆಲಸದ ವೃತ್ತಿಯು ಅಸಂಘಟಿತ ವಲಯದ ವೃತ್ತಿಯಲ್ಲಿಯೇ ಅತೀ ಕೆಳದರ್ಜೆಯ ಕೆಲಸವೆಂದೇ ತೀರ್ಮಾನಿಸಲ್ಪಟ್ಟಿರುವುದು ಮಹಿಳೆಯರ ಗಮನಕ್ಕೆ ಬಂದಿರುತ್ತದೆ. ಆದರೆ ಮನೆಗೆಲಸದ ದುಡಿಮೆಗಾರರ ಸೇವೆಯೂ ನಗರ ಪ್ರದೇಶದ ಜನರಿಗೆ ಅಗತ್ಯವಾಗಿರುವುದಲ್ಲದೇ, ಭಾರತದಂತಹ ದೇಶದಲ್ಲಿ ಹೆಚ್ಚುತ್ತಿರುವ ಶ್ರಮಶಕ್ತಿಗೆ ಉದ್ಯೋಗ ಒದಗಿಸುವ ಕ್ಷೇತ್ರವಾಗಿದೆ. ಈ ಕಾರಣದಿಂದ ಸರ್ಕಾರವು ಮನೆಗೆಲಸದ ದುಡಿಮೆಗಾರರಿಗೂ ಸಂಘಟಿತ ವಲಯದ ದುಡಿಮೆಗಾರರಂತೆ ವೃತ್ತಿ ಸುರಕ್ಷತೆ, ಕನಿಷ್ಠ ವೇತನದಂತಹ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಮನೆಗೆಲಸದ ಹಾಗೂ ಮನೆ ಮಾಲೀಕರ ಅಗತ್ಯತೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಹಾಗಾಗುತ್ತದೆ.

೫.೯: ಕೂಲಿಯಲ್ಲದೇ ಇತರೆ ಸೌಲಭ್ಯ

ಮನೆಗೆಲಸದ ದುಡಿಮೆಗಾರರು ಮಾಸಿಕ ವೇತನದ ಜೊತೆ ಇತರೆ (ಊಟ, ತಿಂಡಿ) ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ೨೦೨ ಮಹಿಳೆಯರು ದಿನನಿತ್ಯ ಊಟ, ತಿಂಡಿ ಹಾಗೂ ಕಾಫಿಯನ್ನು ಪಡೆಯುತ್ತಿದ್ದಾರೆ. ಆದರೆ ೨೦ ಮಹಿಳೆಯರು ಊಟ ತಿಂಡಿ ಯಲ್ಲದೇ ಜೀವನಕ್ಕೆ ಅವಶ್ಯವಿರುವ ಇತರೆ ಸೌಲಭ್ಯಗಳನ್ನು ಪಡೆದಿದ್ದಾರೆ. ಉಳಿದ ೨೮ ಮಹಿಳೆಯರು ಮಾತ್ರ ಮನೆ ಮಾಲೀಕರಿಂದ ಯಾವ ಸಹಾಯವನ್ನು ಪಡೆಯುತ್ತಿಲ್ಲ.

ಮನೆಗೆಲಸದ ಮಹಿಳೆಯರೂ ಕೂಡ ಮಾಲೀಕರ ನೆರವನ್ನೇ ಅಪೇಕ್ಷಿಸುತ್ತಿರುತ್ತಾರೆ. ಏಕೆಂದರೆ ಮನೆಗೆಲಸದ ದುಡಿಮೆಯೇ ಸಂಜೆ ಅಥವಾ ರಾತ್ರಿಗೆ ಮುಗಿಯುವಾಗ, ಮತ್ತೆ ಮನೆಯಲ್ಲಿ ಕೆಲಸ ಮಾಡುವುದೆಂದರೆ ಶ್ರಮದಾಯಕವೆನಿಸುತ್ತದೆ ಇಂತಹ ಸಂದರ್ಭಗಳಲ್ಲಿ ಕೆಲವು ಪದಾರ್ಥಗಳನ್ನಾಗಲೀ, ಅಡುಗೆಯನ್ನಾಗಲೀ ಮನೆ ಮಾಲೀಕರಿಂದ ನಿರೀಕ್ಷಿಸುತ್ತಾರೆ. ಆದರೆ ಇತರೆ ಸೌಲಭ್ಯ ಸಿಗುವ ಎಲ್ಲಾ ೨೦೨ ಮಹಿಳೆಯರಿಗೂ ಉತ್ತಮ ಗುಣಮಟ್ಟದ ಅಡುಗೆ ದಿನನಿತ್ಯ ಸಿಗುವುದಿಲ್ಲ. ಕೇವಲ ಉಳಿದ ಅನ್ನ ಸಾಂಬಾರುಗಳನ್ನು, ಹಳೆಯ ಬಟ್ಟೆಯನ್ನು ಮಾತ್ರ ಕೊಡುತ್ತಾರೆ. ಆದರೆ ಕೆಲವು ಮಹಿಳೆಯರು ತಮಗೆ ದಿನ ನಿತ್ಯ ಮನೆಮಾಲೀಕರ ಮನೆಯಲ್ಲಿ ಗುಣಮಟ್ಟದ ಊಟ ತಿಂಡಿ ದೊರೆಯುತ್ತದೆ. ವರ್ಷಕ್ಕೊಮ್ಮೆ ಹೊಸಸೀರೆ ಕೊಡಿಸುತ್ತಾರೆ ಅಲ್ಲದೇ ನಮ್ಮ ಸಂಕಷ್ಟಗಳ ಸಮಯದಲ್ಲಿ ಮನೆಮಾಲೀಕರು ಸಹಾಯ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ.

ಕೋಷ್ಟಕ ೫.೯: ಕೂಲಿಯಲ್ಲದೇ ಇತರ ಸೌಲಭ್ಯಗಳು

ಕ್ರ.ಸಂ.	ಕೂಲಿಯಲ್ಲದೆ ಇತರೆ ಸೌಲಭ್ಯ	ಒಟ್ಟು	ಶೇಕಡ
೦೧	ಊಟ/ತಿಂಡಿ/ಬಟ್ಟೆ	೨೦೨	೮೦.೮
೦೨	ಏನೂ ಇಲ್ಲ	೨೮	೧೧.೨
೦೩	ಎಲ್ಲಾ ಸೌಲಭ್ಯವಿದೆ	೨೦	೮.೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೯ರಲ್ಲಿ ತಿಳಿಸಿದ ಮಾಹಿತಿಯ ಪ್ರಕಾರ ಮನೆಗೆಲಸದ ಮಹಿಳೆಯರಲ್ಲಿ ತಮಗೆ ದೊರಕುತ್ತಿರುವ ಇತರೆ ಸೌಲಭ್ಯಗಳ (ಕೂಲಿಯಲ್ಲದೇ ಇತರ ಸೌಲಭ್ಯ) ಬಗ್ಗೆ ಅಸಂತೋಷವಿರುವುದರಿಂದ ಮಹಿಳೆಯರು ತಮಗೆ ಬೇರೆ ಕೆಲಸದಲ್ಲಿ ಆಸಕ್ತಿ ಇದೆ ಎಂದು ಪ್ರತಿಕ್ರಿಯಿಸಿರುತ್ತಾರೆ.

ಮಹಿಳೆಯರ ದುಡಿಮೆಯನ್ನು ಕುಟುಂಬದ ಸದಸ್ಯರು ವಿರೋಧಿಸುತ್ತಿಲ್ಲ. ಏಕೆಂದರೆ ಎಲ್ಲಾ ಮಹಿಳೆಯರ ಸಂಬಳದ ಮೇಲೆ ಕುಟುಂಬ ಅವಲಂಬನೆ ಹೊಂದಿದೆ, ಹೀಗಿರುವಾಗ ಕುಟುಂಬದ ಸದಸ್ಯರು ವಿರೋಧಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಂದು ವೇಳೆ ಪ್ರಬಲವಾಗಿ ವಿರೊಧಿಸಿದ್ದೇ ಆದರೆ ಮನೆತನದ ಖರ್ಚಿಗೂ ಪರದಾಡಬೇಕಾಗುತ್ತದೆ. ಮನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ ಮಾತ್ರ ಮಹಿಳೆಯರು ಮನೆಯಿಂದ ಹೊರಗೆ ಬಂದು ದುಡಿಯಲು ತೊಡಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಮಹಿಳೆ ಮನೆಯ ಹಾಗೂ ಸಮಾಜದ ಕಟ್ಟುಪಾಡುಗಳನ್ನು ಮೀರಿ ನಡೆದುಕೊಳ್ಳುತ್ತಾಳೆಂದೇ ಹೇಳಬಹುದು. ಮಹಿಳೆಯರಿಗಿರುವ ಒಂದೇ ಗುರಿ ಎಂದರೆ ಕುಟುಂಬದ ಯಜಮಾನನಿಗೆ ಬೆಂಬಲವಾಗಿ ನಿಲ್ಲುವುದು ಹಾಗೂ ಮನೆತನದ/ಕುಟುಂಬದ ಗೌರವವನ್ನು ಕಾಪಾಡುವುದು. ಅದಕ್ಕಾಗಿ ಮಹಿಳೆ ಕುಟುಂಬದ ಸದಸ್ಯರ ಮನವೊಲಿಸುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಹಾಗೂ ಬಾಹ್ಯ ಜಗತ್ತಿನ ನಿಷ್ಠುರ ನುಡಿಗಳನ್ನು ಸಹಿಸಿಕೊಳ್ಳುತ್ತಾಳೆ. ಹೀಗೆ ಮಹಿಳೆ ತನ್ನತನವನ್ನೇ ಕಡೆಗಾಣಿಸಿ ಕುಟುಂಬದ ಗೌರವವನ್ನು ಎತ್ತಿ ಹಿಡಿಯುವುದಕ್ಕಾಗಿ ಸಂಪಾದನೆಯಲ್ಲಿ ತೊಡಗುವುದರಿಂದ ಮಹಿಳೆಯರನ್ನು ಹೊಂದಾಣಿಕೆಯಾಗಬಲ್ಲ ಕೌಟುಂಬಿಕ ಸಂಪನ್ಮೂಲ ಎಂದು ಶ್ರೀಲತಾ ಭಾಟ್ಲಿವಾಲಾ (೧೯೯೮) ಅವರು ಕರೆದಿರುವುದು ಅರ್ಥಪೂರ್ಣ ವಾಗಿದೆ.

೫.೧೦: ಮನೆಗೆಲಸದ ಮಹಿಳೆಯರ ಕಾನೂನು ಪ್ರಜ್ಞೆ

ಅಧಿಕ ಸಂಖ್ಯೆಯ ಮನೆಗೆಲಸದ ಮಹಿಳೆಯರು ಅನಕ್ಷರಸ್ಥರು ಆಗಿರುತ್ತಾರೆ. ಅವರಿಗೆ ತಮ್ಮ ವೃತ್ತಿ ಸುರಕ್ಷತೆಯ ಬಗ್ಗೆ ಯಾವ ಅರಿವೂ ಇರುವುದಿಲ್ಲ. ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳ ಮಾಹಿತಿಯೂ ಅವರಿಗಿರುವುದಿಲ್ಲ. ಮಹಿಳೆಯರು ಯಾವ ಸಂಘ ಸಂಸ್ಥೆಗಳಲ್ಲಿಯೂ ತಮ್ಮ ಹೆಸರನ್ನು ನೋಂದಣಿ ಕೂಡ ಮಾಡಿಸಿರುವುದಿಲ್ಲ. ದಿನವಿಡೀ ದುಡಿಯುವುದರಲ್ಲೇ ಹೆಚ್ಚಿನ ಸಮಯ ಕಳೆಯುವುದರಿಂದ ಅಸ್ತಿತ್ವದಲ್ಲಿರುವ ಸಂಘ ಸಂಸ್ಥೆಗಳ ಪರಿಚಯ ಇರುವುದಿಲ್ಲ. ಈ ಕಾರಣಕ್ಕಾಗಿ ಮಹಿಳೆಯರ ಹೆಸರು ನೋಂದಣಿಯಾಗಿರುವುದಿಲ್ಲ. ಅಲ್ಲದೇ ಅನಕ್ಷರಸ್ಥರಾದ್ದರಿಂದ ಅವರಿಗೆ ಕಾನೂನಿನ ಅರಿವು ಪ್ರಜ್ಞೆ ಇರುವುದಿಲ್ಲ.

ಕೋಷ್ಟಕ ೫.೧೦: ಮಹಿಳೆಯರ ಕಾನೂನು ಪ್ರಜ್ಞೆ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡ
೧	ಸರ್ಕಾರಿ ಕಛೇರಿಗಳಲ್ಲಿ ನೋಂದಣಿ ಮಾಡಿಸಿರುತ್ತಾರೆ		
	ಹೌದು	೦	೦
	ಇಲ್ಲ	೨೫೦	೧೦೦
	ಒಟ್ಟು	೨೫೦	೧೦೦
೨	ಕೆಲಸದ ರಕ್ಷಣೆ ಬಗ್ಗೆ ಇರುವ ಕಾನೂನುಗಳ ಪರಿಚಯ		
	ಇದೆ	೦	೦
	ಇಲ್ಲ	೨೫೦	೧೦೦
	ಒಟ್ಟು	೨೫೦	೧೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೧೦ರ ಮಾಹಿತಿಯಂತೆ ಹೊಸಪೇಟೆಯ ಯಾವ ಮಹಿಳಾ ಮನೆಗೆಲಸಗಾರರೂ ತಮ್ಮ ಹೆಸರನ್ನು ಸರ್ಕಾರಿ ಕಛೇರಿಗಳಲ್ಲಿ ನೋಂದಣಿ ಮಾಡಿಸಿರುವುದಿಲ್ಲ. ಇದೇ ಅಭಿಪ್ರಾಯವನ್ನು ನೈಲಾ ಕಬೀರ್ (೧೯೯೫) ಅವರೂ ಕೂಡ ವ್ಯಕ್ತಪಡಿಸಿದ್ದಾರೆ. ಅಸಂಘಟಿತ ವಲಯದ ಸ್ವ ಉದ್ಯೋಗಗಳ ಕುರಿತಾಗಿ ಲೇಖನ ದಲ್ಲಿ ಅನೌಪಚಾರಿಕ ವಲಯದಲ್ಲಿ ಮಹಿಳೆಯರು ಅಸುರಕ್ಷಿತರು ನೋಂದಣಿಯಾಗದವರು, ಅಂಚಿನ ಸೇವೆಗೆ ಸೇರಿದವರು, ಕಪ್ಪು ಆರ್ಥಿಕತೆಯ ಉದ್ಯೋಗಿಗಳೆಂದು ಪರಿಗಣಿಸಲ್ಪಟ್ಟವರು ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಕಾರಣಕ್ಕಾಗಿಯೇ ಶ್ರಮಶಕ್ತಿಯ ವರದಿಯಲ್ಲಿ ತಿಳಿಸಿರುವಂತೆ ಪ್ರತೀ ಮನೆಗೆಲಸಗಾರರನ್ನು ಗುರುತಿಸಿ ಅವರ ಹೆಸರನ್ನು ನೋಂದಣಿ ಮಾಡಿಸುವ ಮುಖಾಂತರ ಗುರುತಿನ ಚೀಟಿಯನ್ನು ಒದಗಿಸಿ ಕನಿಷ್ಟ ವೇತನವನ್ನು ಜಾರಿಗೊಳಿಸುವ ಅಗತ್ಯತೆಯನ್ನು ತಿಳಿಸಲಾಗಿದೆ.

ಮಹಿಳಾ ಮನೆಗೆಲಸಗಾರರು ತಮ್ಮ ಕೆಲಸದ ರಕ್ಷಣೆಯ ಬಗ್ಗೆ ಇರುವ ಕಾನೂನುಗಳನ್ನು ಅರ್ಥ ಮಾಡಿಕೊಂಡಿರುವುದಿಲ್ಲ. ಇದಕ್ಕೆ ಪ್ರಮುಖ ಕಾರಣ ಅನಕ್ಷರತೆ ಹಾಗೂ ಸಮಯದ ಅಭಾವ. ಕಾನೂನುಗಳ ಬಗ್ಗೆ ತಿಳಿದುಕೊಳ್ಳಲು ಮಾಧ್ಯಮಗಳ ನೆರವನ್ನು ಪಡೆದುಕೊಳ್ಳಬೇಕಾಗುತ್ತದೆ. ಮನೆಗೆಲಸದ ವೃತ್ತಿಯಲ್ಲಿ ವಿರಾಮವೇ ಇರುವುದಿಲ್ಲ ಅರ್ಧ ದಿನವನ್ನು ವೇತನಸಹಿತ ದುಡಿಮೆಯಲ್ಲಿ ಕಳೆದರೆ ಅರ್ಧ ದಿನವನ್ನು ವೇತನರಹಿತ ದುಡಿಮೆಯಲ್ಲಿ ಕಳೆಯುತ್ತಾರೆ. ಅದೃಷ್ಟವಶಾತ್ ಸ್ವಲ್ಪ ಸಮಯ ದೊರೆತರೆ ಮನೋರಂಜನೆ ನೀಡುವಂತಹ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ. ದೇಹ ಹಾಗೂ ಮನಸ್ಸು ಬಳಲಿದಾಗ ಮನೋರಂಜನೆ ಮಾತ್ರ ಮನಸ್ಸಿಗೆ ಮುದ ನೀಡಬಲ್ಲದು. ಪತ್ರಿಕೆಗಳನ್ನು ಓದಲು ಅಕ್ಷರ ಜ್ಞಾನವಿರುವುದಿಲ್ಲ ಹೀಗೆ ಮಹಿಳೆಯರಿಗೆ ಅಸ್ತಿತ್ವದಲ್ಲಿರುವ ಕಾನೂನುಗಳ ಮಾಹಿತಿ ಇರುವುದಿಲ್ಲ. ಟುವರ್ಡ್ಸ್ ಈಕ್ವಾಲಿಟಿ ವರದಿಯೂ ಕೂಡ ಇದೇ ಮಾಹಿತಿಯನ್ನು ಒದಗಿಸಿದೆ. ೧೯೭೧ರ ಸಮೀಕ್ಷೆಯ ಅಂದಾಜಿನ ಪ್ರಕಾರ ಶೇ. ೬೨.೧ರಷ್ಟು ಗ್ರಾಮೀಣ ಮಹಿಳೆಯರು ಅನಕ್ಷರಸ್ಥರಾಗಿದ್ದು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಅರ್ಥ ಮಾಡಿಕೊಳ್ಳಲಾರದಷ್ಟು ಅಶಕ್ತರಾಗಿದ್ದಾರೆ. ಈ ನ್ಯೂನ್ಯತೆಯಿಂದಲೇ ಮಹಿಳೆಯರು ತಮ್ಮ ಚೌಕಾಶಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬುದಾಗಿದೆ. ನಗರ ಪ್ರದೇಶದ ಮನೆಗೆಲಸದ

ಮಹಿಳೆಯರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿರುವುದರಿಂದ ಕಾನೂನುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿರುವುದಿಲ್ಲ. ಈ ಕಾರಣಕ್ಕಾಗಿ ಮಹಿಳೆಯರು ವಿದ್ಯಾವಂತರಾಗಬೇಕಾಗಿದೆ. ಅಲ್ಲದೇ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಜನರ ಗಮನಕ್ಕೆ ತರುವ ಮಾಧ್ಯಮಗಳ ಅವಶ್ಯಕತೆ ಇದೆ.

೫.೧೧: ಇತರೆ ಮಾಹಿತಿ

ಮನೆಗೆಲಸದ ಮಹಿಳೆಯರು ತಮ್ಮ ದಿನ ನಿತ್ಯದ ಜೀವನೋಪಾಯಕ್ಕಾಗಿ ಸರ್ಕಾರದ ಯಾವ ಸವಲತ್ತುಗಳನ್ನು ಹೊಂದಿರುವರು? ಹಾಗೂ ಸರ್ಕಾರದಿಂದ ಯಾವ ಸವಲತ್ತುಗಳ ಅಪೇಕ್ಷೆಯಲ್ಲಿದ್ದಾರೆ? ಅಲ್ಲದೇ ಮನೆಗೆಲಸದ ಮಹಿಳೆಯರ ಸ್ಥಿತಿಗತಿ ಸುಧಾರಣೆಯಲ್ಲಿ ಒಗ್ಗಟ್ಟಿನ ಅವಶ್ಯಕತೆ ಹಾಗೂ ಕಾರ್ಮಿಕ ಸಂಘಗಳ ನೆರವಿನ ಅಗತ್ಯತೆಗಳ ಕುರಿತು ಮಾಹಿತಿ ಪಡೆಯಲಾಗಿದೆ. ಮಾಹಿತಿ ಈ ರೀತಿಯಾಗಿರುತ್ತದೆ.

ಕೋಷ್ಟಕ ೫.೧೧: ಇತರೆ ಮಾಹಿತಿ

ಕ್ರ.ಸಂ.	ವಿವರಣೆ	ಒಟ್ಟು	ಶೇಕಡ
೧	**ಪಡಿತರ ಚೀಟಿ/ಬಿ.ಪಿ.ಎಲ್/ಎ.ಪಿ.ಎಲ್. ಕಾರ್ಡುಗಳು**		
	ಇದೆ	೨೧೬	೮೬.೪೦
	ಇಲ್ಲ	೩೪	೧೩.೬೦
	ಒಟ್ಟು	೨೫೦	೧೦೦.೦೦
೨	**ಒಗ್ಗಟ್ಟಿನ ಅವಶ್ಯಕತೆ**		
	ಇದೆ	೨೫೦	೧೦೦.೦೦
	ಇಲ್ಲ	೦	೦.೦೦
	ಒಟ್ಟು	೨೫೦	೧೦೦.೦೦
೩	**ಕಾರ್ಮಿಕ ಸಂಘಟನೆಗಳ ನೆರವು**		
	ಬೇಕು	೨೫೦	೧೦೦.೦೦
	ಬೇಡ	೦	೦.೦೦
	ಒಟ್ಟು	೨೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೫.೧೧ರ ಮಾಹಿತಿಯಂತೆ ಮನೆಗೆಲಸದ ಮಹಿಳೆಯರು ನ್ಯಾಯಬೆಲೆ ಅಂಗಡಿಯ ಸದುಪಯೋಗ ಪಡೆದುಕೊಂಡಿರುವ ಕುರಿತು ಮಾಹಿತಿ ವ್ಯಕ್ತವಾಗಿದೆ.

ಭಾರತವು ಅಭಿವೃದ್ಧಿಶೀಲ ರಾಷ್ಟ್ರವಾಗಿದ್ದು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಅನೇಕ ಕಾರ್ಯ ಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದಿರುತ್ತದೆ. ಬಡವರ ಏಳಿಗೆಗೆ ವ್ಯವಸ್ಥಿತ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಮಾನತೆಯ ಸಾಧನೆಗೆ ಪ್ರಯತ್ನಿಸುತ್ತಿದೆ. ಇಂತಹ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯೂ ಒಂದಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯು ಭಾರತದಲ್ಲಿ ಯೋಜನೆಗಳು ಪ್ರಾರಂಭವಾದಾಗಿನಿಂದಲೂ ಜಾರಿಯಲ್ಲಿದೆ. ಇದನ್ನು ಅವಶ್ಯಕ ಸಾಮಗ್ರಿಗಳನ್ನು ಸಹಾಯಧನ ಬೆಲೆಯಲ್ಲಿ

ಸರಬರಾಜು ಮಾಡಲು ಜಾರಿಗೊಳಿಸಲಾಯಿತು. ನ್ಯಾಯ ಬೆಲೆ ಅಂಗಡಿಗಳೆಂಬ ಭಾರೀ ಜಾಲದ ಮೂಲಕ ಕಾರ್ಯನಿರ್ವಹಿಸುವ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಅಧಿಕ ಬೆಲೆಯ ವಿರುದ್ಧ ನೊಂದ ಜನರ ಹಿತಾಸಕ್ತಿಗಳನ್ನು ಕಾಪಾಡುವ ಪ್ರಾಥಮಿಕ ಗುರಿಹೊಂದಿದೆ. ಇದು ಗೋಧಿ, ಅಕ್ಕಿ, ಸಕ್ಕರೆ, ಅಡುಗೆ ಎಣ್ಣೆ, ನಿಯಂತ್ರಿತ ಬಟ್ಟೆ, ಕಲ್ಲಿದ್ದಲು, ಸೀಮೆಎಣ್ಣೆ ಇತ್ಯಾದಿ ಕೆಲವು ಅವಶ್ಯಕ ಸಾಮಾಗ್ರಿಗಳನ್ನು ಸಹಾಯಧನ ಬೆಲೆಯಲ್ಲಿ ನೀಡುವುದು. ಬಡತನ ರೇಖೆಗಿಂತ ಕೆಳಗೆ ಮತ್ತು ಬಡತನ ರೇಖೆಗಿಂತ ಮೇಲಿರುವ ಜನರಿಗೆ ಹಸಿವು ಮತ್ತು ಅಪೌಷ್ಠಿಕತೆಯನ್ನು ನಿವಾರಿಸುವ ಉದ್ದೇಶದಿಂದ ಈ ವ್ಯವಸ್ಥೆ ಜಾರಿಗೆ ಬಂದಿದೆ.

ಹೊಸಪೇಟೆಯ ಮಹಿಳಾ ಮನೆಗೆಲಸಗಾರರಲ್ಲಿ ೨೧೬ ಮಹಿಳೆಯರು ಈ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸಲಾದ (ಪಡಿತರ ಚೀಟಿ/ಬಿ.ಪಿ.ಎಲ್/ಎ.ಪಿ.ಎಲ್.) ಕಾರ್ಡಗಳನ್ನು ಹೊಂದಿ ಅದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ. ಈ ಕಾರಣದಿಂದಲೇ ಅತೀ ಕಡಿಮೆ ಮಾಸಿಕ ವೇತನವನ್ನು ಹೊಂದಿದ ಮಹಿಳೆಯರ ಮಾಸಿಕ ಖರ್ಚು ಕಡಿಮೆ ಇರುತ್ತದೆ. ಕೇವಲ ೩೪ ಮಹಿಳೆಯರು ಈ ಕಾರ್ಡಗಳನ್ನು ಇನ್ನೂ ಮಾಡಿಸಿಲ್ಲ. ಈ ಮಹಿಳೆಯರಿಗೆ ಆದಷ್ಟು ಜಾಗ್ರೃತವಾಗಿ ಈ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಹೇಳಲಾಯಿತು. ಆದರೆ ಬಿ.ಪಿ.ಎಲ್. ಕಾರ್ಡಗಳನ್ನು ಹೊಂದಿದ ಕೆಲವು ಮಹಿಳೆಯರು ನಮ್ಮನ್ನು ಇತ್ತೀಚೆಗೆ ಎ.ಪಿ.ಎಲ್. ಕಾರ್ಡದಾರರೆಂದು ಪರಿಗಣಿಸಿ ಕಡಿಮೆ ಸಾಮಾನು ಕೊಡುತ್ತಾರೆ. ಹಾಗೂ ಬಿ.ಪಿ.ಎಲ್. ಕಾರ್ಡದಾರರಿಗಿಂತ ಹೆಚ್ಚಿನ ಬೆಲೆ ವಿಧಿಸುತ್ತಾರೆ ಎಂದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿಸಿರುತ್ತಾರೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ ಅಲ್ಲದೇ ಹೆಣ್ಣು ಶಿಶುವಿಗೆ ಜನ್ಮ ನೀಡಿದ ಮಹಿಳೆಯರಿಗೆ ಭಾಗ್ಯಲಕ್ಷ್ಮೀ ಬಾಂಡನ್ನು ವಿತರಿಸಲಾಗುತ್ತದೆ. ಹಾಗೂ ಪ್ರೌಢ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್‌ಗಳನ್ನು ವಿತರಣೆ ಮಾಡಿರುವ ಸಂಗತಿ ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿದುಬಂದಿದೆ. ಸಮವಸ್ತ್ರ, ಉಚಿತ ಬ್ಯಾಗ್, ಪಠ್ಯ ಪುಸ್ತಕ, ಬಿಸಿಯೂಟ ವ್ಯವಸ್ಥೆ, ವಿದ್ಯಾರ್ಥಿ ವೇತನವನ್ನು ತಮ್ಮ ಮಕ್ಕಳಿಗೆ ಶಾಲೆಗಳಲ್ಲಿ ಕೊಡುತ್ತಿದ್ದಾರೆ ಎಂದು ಸರ್ಕಾರದ ಶೈಕ್ಷಣಿಕ ಪ್ರಗತಿ ಕಾರ್ಯಕ್ರಮಗಳನ್ನು ಮಹಿಳೆಯರು ಪ್ರಶಂಶಿಸಿದ್ದಾರೆ.

ಹೀಗೆ ಸರ್ಕಾರದಿಂದಾಗುವ ಸಹಾಯಗಳ ಕುರಿತ ಮಾಹಿತಿ ಕೇಳಿದಾಗ ವಿವರಣೆ ನೀಡಿದ್ದಾರೆ. ಆದರೆ ಸರ್ಕಾರದ ಸಹಾಯವನ್ನು ನಿರೀಕ್ಷಿಸುತ್ತಿರುವ ವಿಧವಾ ಮಹಿಳೆಯರಿಗೆ, ವೃದ್ಧಾಪ್ಯ ವೇತನ ಪಡೆಯುವವರಿಗೆ ಸರ್ಕಾರ ಕೊಡುತ್ತಿರುವ ಮಾಶಾಸನ(ರೂ. ೫೦೦) ಸಾಕಾಗುತ್ತಿಲ್ಲ. ಹಾಗೂ ವಯಸ್ಸಾದ ಮೇಲೆ ದುಡಿಯುವುದೂ ಕಷ್ಟವಾಗುತ್ತಿದೆ. ಈ ಕಾರಣದಿಂದಾಗಿ ಮಾಶಾಸನವನ್ನಾದರೂ ಹೆಚ್ಚಿಸಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

ಒಗ್ಗಟ್ಟಿನ ಅವಶ್ಯಕತೆ :

ಮಹಿಳಾ ಮನೆಗೆಲಸಗಾರರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಶಿಕ್ಷಣದಿಂದ ವಂಚಿತರಾದುದರಿಂದ ಮನೆಗೆಲಸದಂತಹ ದುಡಿಮೆಯಲ್ಲಿ ನಿರತರಾಗಿದ್ದಾರೆ.

ಇವರ ದುಡಿಮೆಯು ಕೇವಲ ಹೊಟ್ಟೆಪಾಡಿಗಷ್ಟೇ ಆಗುತ್ತದೆ ಇವರಿಗೆ ರಜಾ ಸೌಲಭ್ಯವಿಲ್ಲ. ಅನಾರೋಗ್ಯದ ಸಮಯದಲ್ಲೂ, ಪ್ರತಿಕೂಲ ಹವಾಮಾನದಲ್ಲೂ ನಿರಂತರವಾಗಿ ದುಡಿಮೆಯಲ್ಲಿ ತೊಡಗಿರಬೇಕಾಗುತ್ತದೆ. ಮನೆಮಾಲೀಕರು ಕೊಡುವ ಸಂಬಳ ಅತೀ ಕಡಿಮೆ ಇರುವುದರಿಂದ ಮನೆ ನಿರ್ವಹಣೆ ಆಗುವುದಿಲ್ಲ. ಅದಕ್ಕಾಗಿ ಅನೇಕ ಮನೆಗಳ ಕೆಲಸವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಿರಂತರ ಶೋಷಣೆ ನಡೆಯುತ್ತಿದ್ದರೂ ಅದನ್ನು ಎದುರಿಸುವ ಅಥವಾ ವಿರೋಧಿಸುವ ಪ್ರಯತ್ನ ಮಾಡುವುದಿಲ್ಲ ತಮ್ಮ ಕೆಲಸದ ರಕ್ಷಣೆಯ ಕುರಿತು ಅಸ್ತಿತ್ವಕ್ಕೆ ಬಂದಿರುವ ಕಾನೂನುಗಳೂ ಇವರಿಗೆ ಗೊತ್ತಿಲ್ಲ. ಗೊತ್ತಿದ್ದರೂ ಅವುಗಳ ಕುರಿತು ಪ್ರಶ್ನೆಮಾಡಿದರೆ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಮಹಿಳಾ ಮನೆಗೆಲಸಗಾರರ ಶ್ರಮಬಲ ಅಧಿಕ ವಿರುವುದರಿಂದ ಕೂಲಿ ಕೂಡ ಕಡಿಮೆ. ಮನೆಗೆಲಸದ ದುಡಿಮೆಗಾರರನ್ನು ಸರ್ಕಾರ ಕಾರ್ಮಿಕರೆಂದು ಮಾನ್ಯ ಮಾಡದಿರುವುದರಿಂದ ಇವರಿಗೆ ಉದ್ಯೋಗ ಕ್ಷೇತ್ರದಲ್ಲಿ ಯಾವ ಸೌಲಭ್ಯಗಳೂ ಇಲ್ಲ. ತಮ್ಮ ಕುಟುಂಬದ ಹಣಕಾಸಿನ ಮುಗ್ಗಟ್ಟನ್ನು ಪರಿಹರಿಸಲು ಸಾಲ ಮಾಡಬೇಕಾಗುತ್ತದೆ ಹೀಗೆ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಲು ಆಗದೇ ಜೀವನ ದುರ್ಭರವಾಗಿದೆ. ಒಟ್ಟಾರೆಯಲ್ಲಿ ಕುಟುಂಬದಲ್ಲಿ ಹಾಗೂ ಹೊರಗಿನ ದುಡಿಮೆಯಲ್ಲಿ ಸುರಕ್ಷತೆ ಇಲ್ಲದೇ, ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಲಾರದಂತಾಗಿದ್ದಾರೆ.

ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಮನೆಗೆಲಸದ ಮಹಿಳೆಯರಿಗೆ ಕನಿಷ್ಠ ವೇತನವನ್ನು ಜಾರಿಗೊಳಿಸಿ, ಉದ್ಯೋಗ ಸುರಕ್ಷಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅವಶ್ಯಕತೆ ಇದೆ. ಇದನ್ನು ಸರ್ಕಾರದ ಗಮನಕ್ಕೆ ತರಲು ಮನೆಗೆಲಸದ ಮಹಿಳೆಯರು ಒಗ್ಗೂಡಿ ಹೋರಾಡಬೇಕಾಗಿದೆ. ಹೊಸಪೇಟೆಯ ಎಲ್ಲಾ ಮನೆಗೆಲಸಗಾರರೂ ತಮ್ಮ ಸ್ಥಿತಿಗತಿ ಸುಧಾರಣೆಗೆ ಒಗ್ಗಟ್ಟಿನ ಅವಶ್ಯಕತೆ ಇದೆ ಎಂಬುದನ್ನು ಮನಗಂಡಿದ್ದಾರೆ. ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳ ಕುರಿತು ಗ್ರಂಥವನ್ನು ಬರೆದ ಫಜಲ್ ಅಹ್ಮದ್(೧೯೯೯) ಅವರು ಅನೌಪಚಾರಿಕ ವಲಯದ ಕಾರ್ಮಿಕರು ಅನಕ್ಷರಸ್ಥರೂ, ಮೌಢ್ಯವುಳ್ಳವರೂ ಆಗಿರುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅನೌಪಚಾರಿಕ ವಲಯದ ಉದ್ಯಮಪತಿಗಳು ತಮ್ಮ ಕೆಲಸಗಾರರು ಒಗ್ಗಟ್ಟಾಗದ ಹಾಗೆ ನೋಡಿ ಕೊಳ್ಳುತ್ತಾರೆ. ಅದಕ್ಕೆ ಅವರು ತಿಳುವಳಿಕೆ ಕಡಿಮೆ ಇರುವ ಅನಕ್ಷರಸ್ಥರನ್ನು, ಆದರೆ ದೈಹಿಕ ಬಲವನ್ನು ಹೊಂದಿದ ವ್ಯಕ್ತಿಗಳನ್ನೇ ನೇಮಕ ಮಾಡಿಕೊಳ್ಳುತ್ತಾರೆ. ಅವರ ಕೆಲಸವು ಯಾವಾಗಲೂ ಅಸುರಕ್ಷತೆಯಿಂದ ಕೂಡಿರುತ್ತದೆ. ಕಾರ್ಮಿಕರಿಗೆ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ. ಅವರು ತಮ್ಮ ಮಾಲೀಕರ ಕರುಣೆಯಿಂದಲೇ ಬದುಕಬೇಕಾಗುತ್ತದೆ ಇಲ್ಲದಿದ್ದರೆ ತಮ್ಮ ಕೆಲಸವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ರಾಷ್ಟ್ರೀಯ ಸಮಿತಿಯ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ.

ಜೆನ್‌ಬ್ರೆಮನ್ (೧೯೯೬) ಅವರೂ ಕೂಡ ತಮ್ಮ ಅಭಿಪ್ರಾಯವನ್ನು ಇದೇ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಅಸಂಘಟಿತ ವಲಯದ ಕಾರ್ಮಿಕರ ಸುಧಾರಣೆಗಾಗಿ ಅತೀ ಕಡಿಮೆ ಪ್ರಯತ್ನಗಳು ನಡೆದಿವೆ. ಕಾರ್ಮಿಕರು ಅಸಂಘಟಿತರಾಗದ ಕಾರಣ ಹಾಗೂ ಕಾರ್ಮಿಕರ ಸಂಘಗಳ ಬೆಂಬಲವಿಲ್ಲದೇ ಇಂತಹ ಅನಿರೀಕ್ಷಿತ ಆಘಾತಗಳನ್ನು ಎದುರಿಸಬೇಕಾಗಿದೆ. ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿಗತಿ ಕುರಿತಾದ ಸಂಶೋಧನೆಗಳು ಬಹಳ ನಡೆದಿಲ್ಲವಾದ ಕಾರಣ ಅವರ ಶೋಷಣೆ ನಿರಂತರವಾಗಿ ನಡೆದಿದೆ. ಅದರಲ್ಲಿ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚು ಅನಾನುಕೂಲವಾಗಿದೆ.

ಡಾ. ತನೂಜ್‌ಕುಮಾರ (೨೦೦೬)ಅವರ ಅಭಿಪ್ರಾಯದ ಪ್ರಕಾರ ಅಸಂಘಟಿತ ವಲಯದ ದುಡಿಮೆಗಾರರು ದೇಶದಾದ್ಯಂತ ಹರಿದು ಹಂಚಿ ಹೋಗಿದ್ದಾರೆ. ಅವರು ಒಬ್ಬ ಪ್ರತಿನಿಧಿಯನ್ನು ಹೊಂದಿ ಒಂದೇ ಸೂರಿನಡಿ ಒಗ್ಗೂಡದೇ ಇರುವುದೇ ಅವರ ಸಮಸ್ಯೆಗಳಿಗೆ ಮೂಲ ಕಾರಣ ಎಂದಿದ್ದಾರೆ. ಹೊಸಪೇಟೆಯ ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ತಮ್ಮಲ್ಲಿ ಒಗ್ಗಟ್ಟು ಇಲ್ಲದ ಕಾರಣ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿ ಒಮ್ಮತಕ್ಕೆ ಬಂದಿರುವುದಿಲ್ಲ ಅದೂ ಅಲ್ಲದೇ ಎಲ್ಲ ಕಾರ್ಮಿಕರೂ ಒಗ್ಗಟ್ಟಾಗಿ ಚರ್ಚಿಸಲು ಅವರಿಗೆ ಸಮಯದ ಅಭಾವವಿದೆ. ಹೊಸಪೇಟೆಯಲ್ಲಿ ಮಹಿಳಾ ಮನೆಗೆಲಸಗಾರರ ಸಂಖ್ಯೆ ಅಧಿಕವಾಗಿರುವುದರಿಂದ ಒಬ್ಬ ಮನೆಗೆಲಸದ ಮಹಿಳೆ ತನ್ನ ಬೇಡಿಕೆ ಈಡೇರದ ಪಕ್ಷದಲ್ಲಿ ಕೆಲಸಕ್ಕೆ ಹೋಗದಿದ್ದರೆ ಇನ್ನೊಬ್ಬ ಮಹಿಳೆ ಆ ಕೆಲಸಕ್ಕೆ ಹಾಜರಾಗುತ್ತಾಳೆ ಎಂದು ಕ್ಷೇತ್ರ ಕಾರ್ಯದ ಸಮಯದಲ್ಲಿ ತಿಳಿಸಿರುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಮನೆಗೆಲಸಗಾರರು ಒಗ್ಗಟ್ಟಾಗಿ ಹೋರಾಟಕ್ಕಿಳಿದಾಗ ಮಾತ್ರ ಅವರ ಬೇಡಿಕೆಗಳು ಈಡೇರಿ ಸಮಸ್ಯೆಗಳು ಪರಿಹಾರ ಕಾಣಬಹುದಾಗಿದೆ.

ಕಾರ್ಮಿಕ ಸಂಘಗಳ ಬೆಂಬಲ : ಹೊಸಪೇಟೆಯ ಎಲ್ಲಾ ಮನೆಗೆಲಸಗಾರರೂ ತಮ್ಮ ಸಮಸ್ಯೆಗಳು ಪರಿಹಾರ ಕಾಣಬೇಕೆಂದರೆ ಬರೀ ಹೋರಾಟದಿಂದ ಸಾಧ್ಯವಿಲ್ಲ. ಇದಕ್ಕೆ ಸರ್ಕಾರದ ಹಾಗೂ ಕಾರ್ಮಿಕ ಸಂಘಗಳ ಬೆಂಬಲ ಬೇಕಾಗುತ್ತದೆ ಎಂಬುದನ್ನು ಮನಗಂಡಿದ್ದಾರೆ. ಏಕೆಂದರೆ ಸಂಘಟಿತ ವಲಯದ ಕಾರ್ಮಿಕರು ತಮ್ಮ ಒಡೆಯರ ಹತ್ತಿರ ಚೌಕಾಶಿ ಮನೋಭಾವವನ್ನು ತೋರಿ ಹೆಚ್ಚಿಗೆ ವೇತನವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಕಾರಣ ಕಾರ್ಮಿಕ ಸಂಘಗಳ ಬೆಂಬಲವಿರುತ್ತದೆ ಎಂದು ಮನೆಗೆಲಸದ ದುಡಿಮೆಗಾರರು ಮನಗಂಡಿದ್ದಾರೆ. ಅದೇ ಕಾರಣಕ್ಕೆ ತಮ್ಮ ಹೋರಾಟಕ್ಕೆ ಕಾರ್ಮಿಕ ಸಂಘಗಳ ಬೆಂಬಲ ದೊರೆತರೇ ವೃತ್ತಿಯಲ್ಲಿ ಅನುಕೂಲ ಪಡೆಯಬಹುದೆಂಬ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ.

ಈ ಅಧ್ಯಾಯದಲ್ಲಿ ಅನಕ್ಷರಸ್ಥ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿದ್ದರೂ ಅವರು ರಾಜಕೀಯ ಕ್ಷೇತ್ರದ ಬಗ್ಗೆ ಆಸಕ್ತಿ ಹೊಂದಿದವರಾಗಿದ್ದಾರೆ ಎಂಬ ವಿಷಯಕ್ಕೆ ಮಹತ್ವ ಕೊಡಲಾಗಿದೆ. ಮಹಿಳೆಯರು ಮತದಾನದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಪ್ರಜಾಪ್ರಭುತ್ವದ ಯಶಸ್ಸಿಗೆ ಪರೋಕ್ಷವಾಗಿ ಕಾರಣರಾಗಿದ್ದಾರೆ. ಅದರೆ ಸರ್ಕಾರದ ಕೃಪಾಪೋಷಿತ ಸಂಘಟಿತ ವಲಯದ ದುಡಿಮೆಯಲ್ಲಿ ತೊಡಗಲು ಸಾಧ್ಯವಾಗುತ್ತಿಲ್ಲ. ಈ ಅವಕಾಶ ಕೇವಲ ಕೆಲವೇ ಅಕ್ಷರಸ್ಥ ಮಹಿಳೆಯರಿಗೆ ಲಭ್ಯವಾಗುತ್ತಿದೆ. ಹೀಗಾಗಿ ಅಸಂಘಟಿತ ವಲಯ ಎಂದರೆ ಮಹಿಳೆಯರಿಗಾಗಿಯೇ ಅಸ್ತಿತ್ವಕ್ಕೆ ಬಂದಂಥಹ ವಲಯ ಎಂಬ ಅಂಶ ಸಾಬೀತಾಗಿದೆ.

ಅಸಂಘಟಿತ ವಲಯದ ಅತೀ ಕೆಳಸ್ತರದ ದುಡಿಮೆಯಲ್ಲಿ ನಿರತರಾದ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಅವಲೋಕಿಸಿದಾಗ ಮಹಿಳಾ ದುಡಿಮೆಗಾರರ ಬದುಕಿನ ದಾರುಣ ಚಿತ್ರಣ ಅರಿವಿಗೆ ಬರುತ್ತದೆ. ದಣಿದ ದೇಹಕ್ಕೆ ವಿಶ್ರಾಂತಿ ಇಲ್ಲ. ದೇಹ ದಣಿಯುವವರೆಗೆ ಕೆಲಸ ಮಾಡಿದರೂ ಕೈ ತುಂಬಾ ಸಂಬಳವಿಲ್ಲ. ದಿನದ ೧೨ ಗಂಟೆಗಳಿಗೂ ಅಧಿಕ ಸಮಯ ಕೆಲಸದಲ್ಲಿ ತೊಡಗಿರುವ ಮಹಿಳೆಯರು ಅಪೌಷ್ಠಿಕತೆ ಹಾಗೂ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಮನೆಮಕ್ಕಳ ಯೋಗಕ್ಷೇಮದ ಕಡೆ ಗಮನ

ಹರಿಸುತ್ತಿಲ್ಲ. ಇದನ್ನು ಮಾನವ ಸಂಪನ್ಮೂಲದ ಅದಕ್ಷ ಬಳಕೆ ಎಂದು ಪರಿಗಣಿಸಲಾಗಿದೆ. ಸರ್ಕಾರ ಮಹಿಳಾ ದುಡಿಮೆಗಾರರ ಸಮಸ್ಯೆಗಳಿಗೆ ಸ್ಪಂದಿಸುವುದರಿಂದ ಮಾತ್ರ ಈ ಸಮಸ್ಯೆಗಳಿಗೆ ಕಾಲಕ್ರಮೇಣ ಪರಿಹಾರ ಸಿಗಬಹುದೆಂದು ಆಶಿಸಲಾಗಿದೆ. ಮುಂದಿನ ಅಧ್ಯಾಯದಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರ ಕುರಿತು ಮನೆ ಮಾಲೀಕರ ಅಭಿಪ್ರಾಯಗಳನ್ನು ತಿಳಿಸಿರುವುದಲ್ಲದೇ ಇಬ್ಬರ ಅಭಿಪ್ರಾಯಗಳನ್ನು ತಾಳೆ ನೋಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಜೆನ್ ಬ್ರೆಮೆನ್ (೨೦೧೦)ಅವರ 'ಔಟ್ ಕ್ಯಾಸ್ಟ ಲೇಬರ್ ಇನ್ ಏಶಿಯಾ' ಕೃತಿಯಲ್ಲಿ ಅಸಂಘಟಿತ ವಲಯದ ಕೆಲಸ ಕಾರ್ಯಗಳು ಹಾಗೂ ಕಾರ್ಮಿಕರ ಹೆಸರು ಎಲ್ಲಿಯೂ ನೋಂದಣಿಯಾಗಿರುವುದಿಲ್ಲ ಎಂಬ ಮಾಹಿತಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಪು.ಸಂ. ೨೦೧ನ್ನು ನೋಡುವುದು.

೨. ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಗಾತ್ರ ಅಧಿಕಗೊಳ್ಳಲು ಕಾರಣಗಳನ್ನು ತಿಳಿಯಲು ರಾಮಾಂಜನೇಯಲು ಎಂ. (೨೦೦೬) ಅವರ ಕೃತಿ 'ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್ ಇನ್ ಇಂಡಿಯ'ದ ಪು.ಸಂ.೯೪ ರಿಂದ ೯೮ನ್ನು ನೋಡುವುದು.

ಅಧ್ಯಾಯ ಆರು

ಮನೆ ಮಾಲೀಕರ ಮಾಹಿತಿ

೬.೧. ಹೊಸಪೇಟೆಯ ಪ್ರಮುಖ ಬಡಾವಣೆಗಳು - ಮಾಲೀಕರ ಸಂಖ್ಯೆ

೬.೨. ಮನೆಗೆಲಸದವರಿಗೆ ಕೊಡುವ ಕೂಲಿ ಮಾಹಿತಿ

೬.೩. ಮನೆಗೆಲಸದವರ ಕೂಲಿ

೬.೪. ಕೆಲಸದವರ ಹಿನ್ನೆಲೆ

೬.೫. ಸ್ವಜಾತಿಯವರಾಗದಿದ್ದರೆ ಮನೆಯಲ್ಲಿ ಪ್ರವೇಶ

೬.೬. ಮನೆಗೆಲಸದವರು ಪರಿಚಯವಾಗುವ ರೀತಿ

೬.೭. ಮನೆಗೆಲಸದವರಿಗೆ ಕೂಲಿ ನಿರ್ಧರಿಸುವ ರೀತಿ

೬.೮. ಮನೆಗೆಲಸದ ಅವಧಿ

೬.೯. ಕೆಲಸದವರ ದಾಖಲೆ ಪರಿಶೀಲನೆ

೬.೧೦. ಕೂಲಿಯಲ್ಲದೇ ಇತರೆ ಸೌಲಭ್ಯಗಳು

೬.೧೧. ರಜಾ ಸೌಲಭ್ಯ

೬.೧೨. ಮನೆಗೆಲಸದವರೊಡನೆ ಸಂಬಂಧ

೬.೧೩. ದುರ್ವರ್ತನೆ ವಿರುದ್ಧ ಕ್ರಮ

೬.೧೪ ಕಷ್ಟ ಕಾಲದಲ್ಲಿ ನೆರವು

ಅಧ್ಯಾಯ ಆರು

ಮನೆ ಮಾಲೀಕರ ಮಾಹಿತಿ

ಹೊಸಪೇಟೆ ನಗರವು ಗಣಿಗಾರಿಕೆ ಹಾಗೂ ಕೈಗಾರಿಕೀಕರಣದ ಪ್ರಭಾವದಿಂದಾಗಿ ಶ್ರೀಮಂತ ನಗರವಾಗಿ ಬೆಳೆದಿದೆ. ಶ್ರೀಮಂತರು ಹಾಗೂ ಮಧ್ಯಮ ವರ್ಗದ ಜನರ ಸಂಪಾದನೆ ಹೆಚ್ಚಿದಂತೆಲ್ಲ ವ್ಯಕ್ತಿಗಳ ತಲಾ ಆದಾಯದಲ್ಲಿ ಏರಿಕೆ ಕಂಡುಬಂದಿದೆ. ಜೊತೆಗೆ ಸಾಕ್ಷರತಾ ಪ್ರಮಾಣದಲ್ಲೂ ಏರಿಕೆಯಾಗಿದೆ. ಈ ಎರಡು ಕಾರಣಗಳಿಂದಾಗಿ ಹೊಸಪೇಟೆಯ ಶ್ರೀಮಂತ ಹಾಗೂ ಮಧ್ಯಮ ವರ್ಗದ ಜನರು ತಮ್ಮ ಮನೆಗಳಲ್ಲಿ ಕೆಲಸಕ್ಕಾಗಿ ಮನೆಗೆಲಸಗಾರರನ್ನು ನೇಮಿಸಿಕೊಂಡಿದ್ದಾರೆ. ಈ ಅಧ್ಯಯನವು ಮನೆಮಾಲೀಕರ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸುವುದರ ಜೊತೆಗೆ ಮನೆಮಾಲೀಕರು ಮನೆಗೆಲಸಗಾರರ ಬಗ್ಗೆ ನೀಡಿರುವ ಮಾಹಿತಿಯನ್ನು ಒಳಗೊಂಡಿರುತ್ತದೆ.

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯಕ್ಕಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ನಗರೀಕರಣದ ಪ್ರಭಾವದಿಂದಾಗಿ ಗ್ರಾಮಗಳಿಂದ ಜನರು ದುಡಿಮೆಯನ್ನರಸಿ ಹೊಸಪೇಟೆ ನಗರಕ್ಕೆ ಧಾವಿಸುತ್ತಿದ್ದಾರೆ. ಹೀಗೆ ನಗರದಲ್ಲಿ ದುಡಿಯುವ ವರ್ಗ ರೂಪುಗೊಂಡಿದೆ. ಒಟ್ಟಾರೆ ಅಭಿಪ್ರಾಯ ಎಂದರೆ ಹೊಸಪೇಟೆ ನಗರದಲ್ಲಿ ಮನೆಗೆಲಸದ ಮಹಿಳಾ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗಿದೆ. ಅದರ ಜೊತೆಗೆ ಇಂತಹ ದುಡಿಮೆಗಾರರ ಸಮಸ್ಯೆಗಳೂ ಹೆಚ್ಚಾಗಿವೆ. ಇಂತಹ ದುಡಿಯುವ ಮಹಿಳೆಯರ ಸ್ಥಿತಿಗತಿಗಳನ್ನು ಸಮಗ್ರವಾಗಿ ಅಧ್ಯಯನಕ್ಕೊಳಪಡಿಸಿ ಸೂಕ್ತ ಪರಿಹಾರ ಸೂಚಿಸಲು ಪ್ರಯತ್ನಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿರುತ್ತದೆ.

ಪ್ರಸ್ತುತ ಅಧ್ಯಯನದ ಉದ್ದೇಶ ಮನೆಗೆಲಸದವರು ಹಾಗೂ ಮನೆಮಾಲೀಕರ ನಡುವಿನ ಸಂಬಂಧವನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕಾಗಿ ಹೊಸಪೇಟೆಯ ಶ್ರೀಮಂತ ಬಡಾವಣೆಗಳ ಮನೆಮಾಲೀಕರು ಮನೆಗೆಲಸಗಾರರ ಬಗ್ಗೆ ನೀಡಿರುವ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಉದ್ದೇಶಕ್ಕಾಗಿ ಮಾದರಿ

ಪ್ರಶ್ನಾವಳಿಯನ್ನು ತಯಾರಿಸಲಾಗಿದೆ. ಪ್ರಶ್ನಾವಳಿಯ ಮೊದಲ ಭಾಗವು ಮನೆಮಾಲೀಕರ ಕುಟುಂಬದ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡಿರುತ್ತದೆ. ಎರಡನೆ ಭಾಗವು ಮನೆಮಾಲೀಕರು ತಮ್ಮ ಮನೆಗೆಲಸಗಾರರ ಬಗ್ಗೆ ನೀಡಿರುವ ಮಾಹಿತಿಯನ್ನು ಒಳಗೊಂಡಿರುತ್ತದೆ. ಅದರಲ್ಲಿ ಪ್ರಮುಖವಾಗಿ ಮನೆಗೆಲಸದವರಿಗೆ ಮಾಸಿಕವಾಗಿ ಕೊಡುವ ಕೂಲಿಯ ಬಗ್ಗೆ ಮಾಹಿತಿ ಪಡೆಯಲಾಗಿದೆ. ನಂತರ ಮನೆಗೆಲಸಗಾರರನ್ನು ನೇಮಕ ಮಾಡಿಕೊಳ್ಳುವಾಗ ಅನುಸರಿಸುವ ವಿಧಾನವನ್ನು ಕುರಿತು ವಿಚಾರಿಸಲಾಗಿದೆ. (ಜಾತಿ, ವಯಸ್ಸು, ವಿಳಾಸದ ಮಾಹಿತಿ) ಮೇಲ್ಜಾತಿಯ ಮನೆ ಮಾಲೀಕರು ತಮ್ಮ ಜಾತಿಯವರಲ್ಲದ ಮನೆಗೆಲಸಗಾರರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಜಾತಿ ಕುರಿತ ವಿಚಾರವು ಇಲ್ಲಿ ಚರ್ಚೆಗೊಳಪಟ್ಟಿದೆ. ಮನೆಗೆಲಸಗಾರರು ಎಷ್ಟು ಗಂಟೆಗಳ ಕಾಲ ಕೆಲಸ ಮಾಡುತ್ತಾರೆ? ಹಾಗೂ ಮನೆಗೆಲಸದವರ ಬದಲಾವಣೆಯ ಪ್ರಶ್ನೆಯನ್ನು ಎತ್ತಲಾಗಿದೆ. ಮನೆಗೆಲಸಗಾರರಿಗೆ ಕೂಲಿಯಲ್ಲದೇ ಮಾಲೀಕರು ಕೊಡುವ ಸೌಲಭ್ಯಗಳು ಹಾಗೂ ರಜಾ ಸೌಲಭ್ಯವನ್ನು ಎಷ್ಟು ಮನೆ ಮಾಲೀಕರು ಮಾಡಿಕೊಟ್ಟಿರುವರು ಇತ್ಯಾದಿ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

೬.೧: ಹೊಸಪೇಟೆಯ ಪ್ರಮುಖ ಬಡಾವಣೆಗಳು

ಮನೆಮಾಲೀಕರು ಹಾಗೂ ಮನೆಗೆಲಸಗಾರರಿಗೆ ಕೇಳಿದ ಪ್ರಶ್ನೆಗಳಲ್ಲಿ ಕೆಲವು ಏಕರೂಪದ ಪ್ರಶ್ನೆಗಳಾಗಿದ್ದು, ಈ ಪ್ರಶ್ನೆಗಳಿಂದ ಇಬ್ಬರ ಅಭಿಪ್ರಾಯಗಳನ್ನು ತುಲನೆ ಮಾಡಲು ಅನುಕೂಲವಾಗಿದೆ. ಹೊಸಪೇಟೆಯ ಒಟ್ಟು ೧೫೦ ಮನೆಮಾಲೀಕರಿಂದ ಮಾಹಿತಿ ಪಡೆಯಲಾಗಿದೆ. ಈ ಮಾಹಿತಿಯು ಹೊಸಪೇಟೆಯ ಎಲ್ಲಾ ಬಡಾವಣೆಗಳನ್ನು ಪ್ರತಿನಿಧಿಸುವುದರ ಜೊತೆಗೆ ಎಲ್ಲ ವರ್ಗದ ಹಾಗೂ ಎಲ್ಲ ಜಾತಿಯವರನ್ನು ಪ್ರತಿನಿಧಿಸುತ್ತದೆ. ಅಧ್ಯಯನಕ್ಕೊಳಪಡಿಸಲಾದ ಪ್ರಮುಖ ಬಡಾವಣೆಗಳೆಂದರೆ ಮೃತ್ಯುಂಜಯ ನಗರ, ಬಸವೇಶ್ವರ ನಗರ, ಗಾಂಧಿ ಕಾಲೋನಿ, ನೆಹರೂ ಕಾಲೋನಿ, ಎಂ.ಪಿ.ಪ್ರಕಾಶ ಬಡಾವಣೆ, ಅಮರಾವತಿ, ಪಟೇಲ ನಗರ, ರಾಣಿಪೇಟೆ, ಆಕಾಶವಾಣಿ ಸುತ್ತಲಿನ ಪ್ರದೇಶ, ತೇರ್‌ಬಜಾರ್ ಪ್ರದೇಶ ಪ್ರಮುಖವಾದವುಗಳು.

ಕ್ಷೇತ್ರಕಾರ್ಯದ ಸಮಯದಲ್ಲಿ ಮಹಿಳಾ ಮನೆಮಾಲೀಕರನ್ನೇ ಸಮೀಕ್ಷೆಗೊಳಪಡಿಸಲಾಗಿದೆ. ಏಕೆಂದರೆ ಮನೆಗೆಲಸದ ಮಹಿಳೆಯರ ನೇಮಕ, ಕೂಲಿ ಜವಾಬ್ದಾರಿಗಳನ್ನು ನಿಭಾಯಿಸುವವರು ಮಹಿಳೆಯರೇ ಆಗಿರುವುದರಿಂದ ಮಹಿಳೆಯರಿಂದ ಮಾಹಿತಿ ಪಡೆಯಲಾಗಿದೆ. ಕೋಷ್ಟಕ ೬.೧ರಲ್ಲಿ ಮನೆ ಮಾಲೀಕರ ಪ್ರಮುಖ ಬಡಾವಣೆಗಳು ಹಾಗೂ ಸಂಖ್ಯೆಯನ್ನು ಕೊಡಲಾಗಿದೆ.

ಕೋಷ್ಟಕ ೬.೧: ಹೊಸಪೇಟೆಯ ಪ್ರಮುಖ ಬಡಾವಣೆಗಳು

ಕ್ರಸಂ.	ಹೊಸಪೇಟೆಯ ಪ್ರಮುಖ ಬಡಾವಣೆಗಳು	ಮ.ಮಾ. ಸಂಖ್ಯೆ
೧	ಮೃತ್ಯುಂಜಯ ನಗರ	೨೫
೨	ಬಸವೇಶ್ವರ ನಗರ	೨೫
೩	ರಾಣಿಪೇಟೆ	೧೮
೪	ಅಮರಾವತಿ	೨೦
೫	ತೇರ್ ಬಜಾರ್	೬
೬	ಆಕಾಶವಾಣಿ ಸುತ್ತಲಿನ ಪ್ರದೇಶ	೧೦
೭	ನೆಹರೂ ಕಾಲೋನಿ	೧೬
೮	ಗಾಂಧಿ ಕಾಲೋನಿ	೧೦
೯	ಪಟೇಲ ನಗರ	೧೫
೧೦	ಎಂ.ಪಿ.ಪ್ರಕಾಶ ನಗರ	೫
	ಒಟ್ಟು – ೧೦	೧೫೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೬.೧ರಲ್ಲಿ ತೋರಿಸಿದ ಮಾಹಿತಿಯು ಹೊಸಪೇಟೆಯ ಮನೆ ಮಾಲೀಕರ ಸಂದರ್ಶನದ ಮಾಹಿತಿಯನ್ನು ಒದಗಿಸುತ್ತದೆ. ಮನೆಗೆಲಸಗಾರರನ್ನು ನೇಮಕ ಮಾಡಿಕೊಳ್ಳುವಲ್ಲಿ ಶ್ರೀಮಂತ ವರ್ಗದವರ ಜೊತೆ ಮಧ್ಯಮ ವರ್ಗದವರೂ ಮುಂದಾಗಿದ್ದಾರೆ. ಇದು ಅವರ ಮನೆತನದ ಸ್ಥಾನಮಾನ ಹಾಗೂ ಗೌರವದ ಪ್ರತೀಕವಾಗಿದೆ. ಮಧ್ಯಮ ವರ್ಗದ ಮಹಿಳೆಯರು ತಮಗೊದಗಿ ಬಂದ ವಿದ್ಯಾಭ್ಯಾಸದ ಅವಕಾಶಗಳನ್ನು ಉಪಯೋಗಿಸಿಕೊಂಡು ಶಿಕ್ಷಣವನ್ನು ಪಡೆದು ಉದ್ಯೋಗದಲ್ಲಿ ತೊಡಗಿದ್ದಾರೆ. ಇಂತಹ ಮಹಿಳೆಯರಿಗೆ ಮನೆಯ ಜವಾಬ್ದಾರಿ ಹಾಗೂ ಉದ್ಯೋಗದ ಜವಾಬ್ದಾರಿಯನ್ನು ನಿಭಾಯಿಸುವುದು ಕಷ್ಟದಾಯಕವಾಗಿ ಮನೆಗೆಲಸಕ್ಕಾಗಿ ಸೇವಕರನ್ನು ನೇಮಿಸಿಕೊಂಡಿದ್ದಾರೆ. ಅದೂ ಅಲ್ಲದೇ ಹೊಸಪೇಟೆ ಯಲ್ಲಿಯೂ ಗಣಿಗಾರಿಕೆ ಹಾಗೂ ಕಾರ್ಖಾನೆಗಳಲ್ಲಿ ಉದ್ಯೋಗವನ್ನರಿಸಿ ಬಂದ ಮಹಿಳೆಯರು ಅಲ್ಲಿ ತಮಗೆ ಸೂಕ್ತ ಕೆಲಸ ಸಿಗದೇ, ಮನೆಗೆಲಸದಂತಹ ದುಡಿಮೆಯಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಹೊರಗಿನಿಂದ ವಲಸೆ ಬಂದ ಮಹಿಳೆಯರಲ್ಲದೇ ಹೊಸಪೇಟೆಯ ಬಡ ಮಹಿಳೆಯರೂ ಕೂಡ ತಮ್ಮ ಸ್ಥಿತಿಗತಿಯನ್ನು ಮನಗಂಡು ಕೆಲಸದಲ್ಲಿ ತೊಡಗಿದ್ದಾರೆ. ಈ ಕಾರಣಗಳಿಂದಾಗಿ ಮನೆಮಾಲೀಕರಿಗೆ ತಮ್ಮ ಮನೆಯ ಕೆಲಸಕ್ಕಾಗಿ ದುಡಿಮೆಗಾರರು ಸುಲಭವಾಗಿ ದೊರಕುತ್ತಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ಮನೆಗೆಲಸಗಾರರು ಹಾಗೂ ಮನೆಮಾಲೀಕರ ಅಗತ್ಯತೆಗಳಿಗೆ ಪೂರಕವಾದ ಸನ್ನಿವೇಶ ಹೊಸಪೇಟೆಯಲ್ಲಿ ಸೃಷ್ಠಿಯಾಗಿದೆ ಎನ್ನಬಹುದು. ಅಂದರೆ ಮನೆಮಾಲೀಕರಿಗೆ ದುಡಿಮೆಗಾರರ ಅಗತ್ಯತೆ ಇದೆ. ಮನೆಗೆಲಸಗಾರರಿಗೆ ತಮ್ಮ ಬದುಕನ್ನು ನಡೆಸಲು ಕೆಲಸದ ಅವಶ್ಯಕತೆ ಇದೆ. ಆದರೆ ಮನೆಗೆಲಸದ ಮಹಿಳೆಯರ ಜೀವನ ಕೇವಲ ಒಂದು ಮನೆಯಲ್ಲಿ ಕೆಲಸ ಮಾಡುವುದರಿಂದ ನಡೆಯುವುದಿಲ್ಲವಾದ್ದರಿಂದ ಅವರು ನಾಲ್ಕಾರು ಮನೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ರೀತಿ ಮನೆಗೆಲಸ ನಿರ್ವಹಿಸುವ ದುಡಿಮೆಗಾರರನ್ನು ಮನೆಮಾಲೀಕರು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೆ, ಮನೆಗೆಲಸಗಾರರ ಬಗ್ಗೆ ಮನೆಮಾಲೀಕರಿಗಿರುವ ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಮನೆಮಾಲೀಕರ ಸಂಕ್ಷಿಪ್ತ ಕೌಟುಂಬಿಕ ಮಾಹಿತಿಯನ್ನು ಪ್ರಶ್ನಾವಳಿಯ ಮೊದಲ ಭಾಗದಲ್ಲಿ ಪಡೆಯಲಾಗಿದೆ. ಈ ವರದಿಯ ಪ್ರಕಾರ ಎಲ್ಲ ಮನೆಮಾಲೀಕರೂ ವಿವಾಹಿತರಾಗಿದ್ದು, ಅವರ ಮಾಸಿಕ ಆದಾಯ ೨೦,೦೦೦ಕ್ಕಿಂತ ಮೇಲ್ಪಟ್ಟೆ ಇರುತ್ತದೆ. ಕೆಲವೊಂದು ಕುಟುಂಬಗಳಲ್ಲಿ ಪತಿ ಪತ್ನಿ ಇಬ್ಬರೂ ಉದ್ಯೋಗಸ್ಥರಾಗಿದ್ದು ಮನೆಗೆಲಸದವರ ಮೇಲೆ ಹೆಚ್ಚಾಗಿ ಅವಲಂಬಿತರಾಗಿದ್ದಾರೆ. ಸಮೀಕ್ಷೆಗೊಳಪಡಿಸಲಾದ ೧೫೦ ಮನೆಮಾಲೀಕರಲ್ಲಿ ಪರಿಶಿಷ್ಟ ಜಾತಿಯ ೫ ಮಹಿಳೆಯರಿದ್ದಾರೆ. ೧೭ ಮಹಿಳೆಯರು ಪರಿಶಿಷ್ಟ ಪಂಗಡದವರಾಗಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ೭೧ ಮಹಿಳೆಯರಲ್ಲದೇ ಇತರೇ ಅಂದರೆ ಸಾಮಾನ್ಯ ವರ್ಗಕ್ಕೆ ಸೇರಿದ ೫೭ ಮಹಿಳೆಯರು ಇದ್ದಾರೆ. ಅತೀ ಹೆಚ್ಚಿನ ಮಹಿಳೆಯರು ಹಿಂದುಳಿದ ವರ್ಗಕ್ಕೆ ಸೇರಿದ್ದು ಇದು II A, II B, III A, III B, C-I, ವರ್ಗಗಳನ್ನೊಳಗೊಂಡಿರುತ್ತದೆ. ಸಾಮಾನ್ಯ ವರ್ಗದವರು ಎರಡನೇ ಸ್ಥಾನದಲ್ಲಿದ್ದು ಪರಿಶಿಷ್ಟ ವರ್ಗದ ಮಹಿಳೆಯರು ಮೂರನೇ ಹಾಗೂ ಪರಿಶಿಷ್ಟ ಜಾತಿಯ ಮಹಿಳೆಯರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಮನೆಮಾಲೀಕರು ಮತ್ತು ಮನೆಗೆಲಸದ ದುಡಿಮೆಗಾರರ ಜಾತಿವಾರು ವರ್ಗೀಕರಣವನ್ನು ವಿಶ್ಲೇಷಿಸಲಾಗಿ ತಿಳಿದುಬರುವ ಅಂಶವೇನೆಂದರೆ, ಎರಡು ಸಂದರ್ಭಗಳಲ್ಲಿಯೂ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿರುವುದು. ಆದರೆ ಗಮನಿಸಬಹುದಾದಂತಹ ಅಂಶವೇನೆಂದರೆ ಮನೆಮಾಲೀಕರ ಸಂದರ್ಭದಲ್ಲಿ ಸಾಮಾನ್ಯ ವರ್ಗದವರು ಅಧಿಕ ಸಂಖ್ಯೆಯಲ್ಲಿರುವುದು ಮತ್ತು ಮನೆಗೆಲಸದ ದುಡಿಮೆಗಾರರಲ್ಲಿ ಸಾಮಾನ್ಯ ವರ್ಗದವರು ಕಡಿಮೆ ಸಂಖ್ಯೆಯಲ್ಲಿರುವುದು.

೬.೨: ಮನೆಗೆಲಸದವರಿಗೆ ಕೊಡುವ ಕೂಲಿ ಮಾಹಿತಿ

ಮನೆಗೆಲಸದವರಿಗೆ ಕೂಲಿಯನ್ನು ಮಾಸಿಕವಾಗಿ ಕೊಡಲಾಗುತ್ತಿದ್ದು ಈ ಕೂಲಿಯ ಮಾಹಿತಿಯನ್ನು ಕೋಷ್ಟಕ ೬.೨ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೬.೨: ಮನೆಗೆಲಸದವರ ಕೂಲಿ ಮಾಹಿತಿ

ಕ್ರ.ಸಂ.	ಕೂಲಿಯ ವಿವರ	ಒಟ್ಟು	ಶೇಕಡ
೧	೧೦೦ ರಿಂದ ೨೦೦ ರೂ.ಗಳು	೪	೨.೬೬
೨	೨೦೦ ರಿಂದ ೫೦೦ ರೂ.ಗಳು	೫೪	೩೬.೦೦
೩	೫೦೦ ರಿಂದ ೧೦೦೦ ರೂ.ಗಳು	೮೧	೫೪.೦೦
೪	೧೦೦೦ ರಿಂದ ೧೫೦೦ ರೂ.ಗಳು	೭	೪.೬೭
೫	೧೫೦೦ ಕ್ಕೂ ಅಧಿಕ	೪	೨.೬೭
	ಒಟ್ಟು	೧೫೦	೧೦೦.೦೦

ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೬.೨ರಲ್ಲಿ ತೋರಿಸಿದಂತೆ ಮನೆಮಾಲೀಕರು ಮನೆಗೆಲಸದ ಸೇವಕರಿಗೆ ಕೊಡುವ ಮಾಸಿಕ ಕೂಲಿಯ ವಿವರ ಈ ರೀತಿಯಾಗಿದೆ. ಹೊಸಪೇಟೆಯ ೧೫೦ ಮನೆಮಾಲೀಕರಲ್ಲಿ ಮನೆಗೆಲಸಗಾರರಿಗೆ ೧೦೦ರಿಂದ ೨೦೦ ರೂ.ಗಳ ಮಾಸಿಕ ಕೂಲಿ ಕೊಡುವ ಕೇವಲ ನಾಲ್ಕು ಕುಟುಂಬಗಳಿವೆ.

ಈ ಕೂಲಿಯು ಅತೀ ಕಡಿಮೆಯಾಗಿದ್ದು ಕಡಿಮೆ ಕೂಲಿ ಕೊಡುವ ಕಾರಣವನ್ನು ಮಾಲೀಕರಿಂದ ಕೇಳಿ ಪಡೆಯಲಾಗಿದೆ. ಮನೆಯಲ್ಲಿ ಕೇವಲ ಇಬ್ಬರೇ ಇದ್ದು ಕೆಲಸದ ಒತ್ತಡ ಅತೀ ಕಡಿಮೆ ಇದ್ದಾಗ ಇಷ್ಟು ಕಡಿಮೆ ಪ್ರಮಾಣದ ಕೂಲಿ ನಿರ್ಧಾರವಾಗುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ೫೪ ಕುಟುಂಬಗಳ ಮಹಿಳೆಯರು ತಮ್ಮ ಮನೆಗೆಲಸದವರಿಗೆ ೨೦೦ ರಿಂದ ೫೦೦ ರೂ. ಗಳ ಮಾಸಿಕ ಸಂಭಾವನೆಯನ್ನು ನೀಡುತ್ತಿದ್ದಾರೆ. ಅಲ್ಲದೇ ೮೧ ಕುಟುಂಬದ ಮಹಿಳೆಯರು ೫೦೦ ರಿಂದ ೧೦೦೦ ರೂ.ಗಳ ಮಾಸಿಕ ಸಂಭಾವನೆ ನೀಡುತ್ತಿದ್ದಾರೆ. ಆದರೆ ೭ ಕುಟುಂಬದ ಮಹಿಳೆಯರು ಮಾತ್ರ (ಒಂದು ಸಾವಿರದಿಂದ ಒಂದೂವರೆ ಸಾವಿರ ರೂಪಾಯಿಗಳ) ೧೦೦೦ ದಿಂದ ೧೫೦೦ ಸಾವಿರ ರೂ.ಗಳ ಮಾಸಿಕ ವೇತನ ನೀಡುತ್ತಿದ್ದಾರೆ. ಕೇವಲ ೪ ಕುಟುಂಬದವರು ಮಾತ್ರ ೧೫೦೦ ರೂ. ಗಳಿಗೂ ಅಧಿಕ ಮಾಸಿಕ ವೇತನವನ್ನು ನೀಡುತ್ತಿದ್ದಾರೆ. ಅಧಿಕ ವೇತನವನ್ನು ಕೊಡಲು ಕಾರಣ ಮನೆಯ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಬೆಳಗಿನಿಂದ ಸಾಯಂಕಾಲದವರೆಗೆ ಮನೆಯಲ್ಲಿಯೇ ಇರುವುದು.

೬.೩: ಕೂಲಿ ಮಾಹಿತಿ

ಕಡಿಮೆ ಕೂಲಿಯು ನ್ಯಾಯ ಸಮ್ಮತವೇ ಎಂದು ವಿಚಾರಿಸಿದಾಗ ೧೮ ಕುಟುಂಬದ ಮಾಲೀಕರು ನ್ಯಾಯ ಸಮ್ಮತ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿರುತ್ತಾರೆ. ಅವರ ಅಭಿಪ್ರಾಯದಲ್ಲಿ ಮನೆಗೆಲಸದ ಮಹಿಳೆಯರು ಅನೇಕ ಮನೆಗಳನ್ನು ಒಪ್ಪಿಕೊಂಡಿರುತ್ತಾರೆ. ಹೀಗೆ ಅವರು ಒಂದು ಮನೆಯ ಕೂಲಿಯನ್ನಷ್ಟೇ ನಂಬಿಕೊಂಡಿರುವುದಿಲ್ಲ. ಅದರಿಂದ ನಮ್ಮ ಮನೆಯ ಕೆಲಸಕ್ಕೆ ನಾವು ಕೊಡುವ ಕೂಲಿ ನ್ಯಾಯ ಸಮ್ಮತ ಎಂಬ ಅಭಿಪ್ರಾಯ ತಿಳಿಸಿದ್ದಾರೆ. ಆದರೆ ಅಧಿಕ ಸಂಖ್ಯೆಯ ಮಹಿಳೆಯರು ಅಂದರೆ ೧೩೨ ಮಹಿಳೆಯರು ನಾವು ಕೊಡುವ ಕೂಲಿಯು ನ್ಯಾಯಸಮ್ಮತವಲ್ಲ ಎಂದೇ ತಿಳಿಸಿರುತ್ತಾರೆ. ಹೀಗೆ ಮನೆಗೆಲಸದ ಮಹಿಳೆಯರು ಕಡಿಮೆ ಕೂಲಿ ಸಿಗುವ ಕೆಳದರ್ಜೆಯ ಕೆಲಸದಲ್ಲಿ ನಿರತರಾಗಿರುತ್ತಾರೆ.

೬.೪: ಕೆಲಸದವರ ಹಿನ್ನೆಲೆ

ಮನೆಗೆಲಸದ ಮಹಿಳೆಯರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವಾಗ ೯೬ ಮಹಿಳೆಯರು ದುಡಿಮೆಗಾರರ ಹಿನ್ನೆಲೆ, ವಿಳಾಸ, ಜಾತಿ, ವಯಸ್ಸು ಇತ್ಯಾದಿ ಮಾಹಿತಿಗಳನ್ನು ಪಡೆದಿರುತ್ತಾರೆ. ಉಳಿದ ೫೪ ಮಹಿಳೆಯರು ಮನೆಗೆಲಸದವರ ಹಿನ್ನಲೆಯನ್ನು ವಿಚಾರಿಸಿರುವುದಿಲ್ಲ. ಮಹಿಳಾ ದುಡಿಮೆಗಾರರು ಮೊದಲಿನಿಂದಲೂ ಪರಿಚಿತರಾಗಿರುವುದು ಇದಕ್ಕೆ ಕಾರಣವಾಗಿದೆ.

೬.೫: ಸ್ವಜಾತಿಯವರಾಗದಿದ್ದರೆ ಮನೆಯಲ್ಲಿ ಪ್ರವೇಶ

ಭಾರತದಲ್ಲಿ ಜಾತಿ ವ್ಯವಸ್ಥೆಯು ಇನ್ನೂ ರೂಢಿಯಲ್ಲಿರುವುದು ಸಾಬೀತಾಗಿರುವುದು ಮನೆಮಾಲೀಕರು ಬೇರೆ ಜಾತಿಯವರ ಬಗ್ಗೆ ತೋರಿರುವ ಪ್ರತಿಕ್ರಿಯೆಯಿಂದ. ಹೊಸಪೇಟೆಯಲ್ಲಿ ಸಮೀಕ್ಷೆಗೊಳಗಾದ ೧೫೦ ಮನೆಮಾಲೀಕರಲ್ಲಿ ೩೫ ಮಹಿಳೆಯರು ಮನೆಗೆಲಸದವರು ಸ್ವಜಾತಿಯವರಾಗದಿದ್ದರೂ ಮನೆಯಲ್ಲಿ ಪ್ರವೇಶ ನೀಡುತ್ತಿದ್ದಾರೆ. ಆದರೆ ೧೧೫ ಮಹಿಳೆಯರು ಬೇರೆ ಜಾತಿಯವರಿಗೆ ಮನೆಯೊಳಗೆ ಪ್ರವೇಶ ನೀಡುತ್ತಿಲ್ಲ. ಮನೆಯಲ್ಲಿ ಅಡುಗೆ ಕೋಣೆ ಹಾಗೂ ದೇವರ ಕೋಣೆಯಲ್ಲಿ ತಮ್ಮದಲ್ಲದ ಜಾತಿಯವರಿಗೆ ಪ್ರವೇಶ ನಿರಾಕರಿಸಿರುತ್ತಾರೆ.

೬.೬: ಮನೆಗೆಲಸದವರು ಪರಿಚಯವಾದ ರೀತಿ

ಹೊಸಪೇಟೆಯಲ್ಲಿ ಮನೆಗೆಲಸದ ಮಹಿಳೆಯರು ಶ್ರೀಮಂತ ಹಾಗೂ ಮಧ್ಯಮ ವರ್ಗದ ಕುಟುಂಬ ದವರಿಗೆ ಅನಿವಾರ್ಯವಾಗಿದ್ದಾರೆ. ಈ ರೀತಿಯಿಂದ ಮನೆಗೆಲಸದವರು ಪರಿಚಯವಾದ ಮಾಹಿತಿಯನ್ನು ಮನೆಮಾಲೀಕರನ್ನು ಕೇಳಿ ಪಡೆಯಲಾಯಿತು. ಕೋಷ್ಟಕ ೬.೬ರಲ್ಲಿ ಮನೆಗೆಲಸದವರು ಮನೆಮಾಲೀಕರಿಗೆ ಹೇಗೆ ಪರಿಚಯವಾಗುವರು ಎಂಬ ವಿಷಯವನ್ನು ತೋರಿಸಲಾಗಿದೆ.

ಕೋಷ್ಟಕ ೬.೩: ಮನೆಗೆಲಸದವರು ಪರಿಚಯವಾಗುವ ರೀತಿ

ಕ್ರಸಂ.	ಮನೆಗೆಲಸದವರು ಪರಿಚಯವಾಗುವ ರೀತಿ	ಒಟ್ಟು	ಶೇಕಡ
೦೧	ಮನೆಗೆಲಸದವರಿಂದ	೩೩	೨೨.೦೦
೦೨	ಸಂಬಂಧಿಗಳಿಂದ	೧೧	೭.೩೩
೦೩	ಅಕ್ಕ ಪಕ್ಕದವರಿಂದ	೭೬	೫೦.೬೭
೦೪	ಸ್ವಂತ ಪರಿಚಯ	೩೦	೨೦.೦೦
	ಒಟ್ಟು	೧೫೦	೧೦೦.೦೦


ಮೂಲ: ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕ ೬.೩ರಲ್ಲಿ ತೋರಿಸಿರುವ ಮಾಹಿತಿಯಂತೆ ೩೩ ಮನೆಮಾಲಿಕರಿಗೆ ಮನೆಗೆಲಸದವರನ್ನು ಇತರ ಮನೆಗೆಲಸದವರೇ ಪರಿಚಯ ಮಾಡಿಕೊಟ್ಟಿದ್ದಾರೆ. ಇನ್ನು ಕೇವಲ ೧೧ ಮಹಿಳೆಯರು ತಮ್ಮ ಸಂಬಂಧಿಗಳಿಂದ ಪರಿಚಯವಾಗಿದ್ದಾರೆ. ಆದರೆ ಅಧಿಕ ಸಂಖ್ಯೆಯ ಮನೆಗೆಲಸದವರು ಪರಿಚಯವಾಗುವುದು ಅಕ್ಕ ಪಕ್ಕದವರಿಂದಲೇ ಎಂದು ೭೬ ಮನೆಮಾಲೀಕರ ಅಭಿಪ್ರಾಯವಾಗಿದೆ. ಇನ್ನು ೩೦ ಮನೆಮಾಲೀಕರಿಗೆ ಇದು ಸ್ವಂತ ಪರಿಚಯವಾಗಿದೆ ಅಂದರೆ ಮನೆ ಮಾಲೀಕರಿಗೆ ಮನೆಗೆಲಸದವರು ಮೊದಲಿನಿಂದಲೂ ತಿಳಿದವರಾಗಿದ್ದಾರೆ ಒಟ್ಟಾರೆಯಾಗಿ ಮನೆಗೆಲಸಗಾರರ ಮಾಹಿತಿಯನ್ನು ಪಡೆಯುವುದು ಅಂತಹ ಕಷ್ಟಕರ ವಿಷಯವಾಗಿ ಉಳಿದಿರುವುದಿಲ್ಲ.

ಪಾರ್ವತಿ ರಘುರಾಮ (೧೯೯೯) ಅವರೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಳ್ಳಿಗಳಿಂದ ವಲಸೆ ಬರುವ ಮನೆಗೆಲಸಗಾರರಿಗೂ ಸಹ ಇದೇ ರೀತಿಯ ಮನೆಗೆಲಸದ ಮಾಹಿತಿ ಇವರಿಗಿಂತ ಮುಂಚೆ ಬಂದ ಮನೆಗೆಲಸದವರಿಂದ ಹಾಗೂ ಅಕ್ಕ ಪಕ್ಕದವರಿಂದ ಲಭ್ಯವಾಗುತ್ತದೆ ಎಂಬ ಮಾಹಿತಿಯನ್ನು ಒದಗಿಸಿದ್ದಾರೆ.

ಆದರೆ ಕೆಲವು ದೊಡ್ಡ ಪಟ್ಟಣಗಳಲ್ಲಿ ಮನೆಗೆಲಸದವರ ಮಾಹಿತಿ ಬೇಗನೇ ಸಿಗುವುದಿಲ್ಲವಾದ ಕಾರಣ ಮನೆಮಾಲೀಕರು ಮಧ್ಯಸ್ಥಗಾರರ ಮೊರೆ ಹೋಗಬೇಕಾಗುತ್ತದೆ. ಈ ಕೆಳಗಿನ ರೇಖಾಚಿತ್ರದಲ್ಲಿ ಮನೆಮಾಲೀಕರಿಗೆ ಮನೆಗೆಲಸದವರು ಪರಿಚಯವಾಗುವ ರೀತಿಯನ್ನು ತೋರಿಸಲಾಗಿದೆ.

ಪೈ ರೇಖಾ ಚಿತ್ರ : ಮನೆಗೆಲಸದವರ ಪರಿಚಯ



ಪೈ ರೇಖಾಚಿತ್ರದಲ್ಲಿ ಮನೆಗೆಲಸದ ಮಹಿಳೆಯರು ಪರಿಚಯವಾಗುವ ರೀತಿಯನ್ನು ವಿವಿಧ ಭಾಗಗಳಲ್ಲಿ ಚಿತ್ರಿಸಲಾಗಿದೆ. ರೇಖಾ ಚಿತ್ರದ ವಿವಿಧ ಭಾಗಗಳು ಅಥವಾ ವರ್ತುಲದ ವಿಭಾಗಗಳು ವಿವಿಧ ಪರಿಮಾಣದ ವಿಭಾಗಗಳ ಪರಸ್ಪರ ಹೋಲಿಕೆಯನ್ನು ತಿಳಿಯಲು ಸಹಾಯ ಮಾಡುತ್ತವೆ. ವರ್ತುಲದ ದೊಡ್ಡ ವಿಭಾಗವು ಮನೆಗೆಲಸದವರು ಅಕ್ಕ ಪಕ್ಕದವರಿಂದ ಪರಿಚಯವಾಗುತ್ತಾರೆ ಎಂಬ ಮಾಹಿತಿಯನ್ನು ಚಿಕ್ಕ ವಿಭಾಗವು ಸಂಬಂಧಿಗಳಿಂದ ಪರಿಚಯವಾಗುವ ಮಾಹಿತಿಯನ್ನು ಒದಗಿಸುತ್ತವೆ.

೬.೭: ಮನೆಗೆಲಸದವರಿಗೆ ಕೂಲಿ ನಿರ್ಧರಿಸುವ ಕ್ರಮ

ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ವ್ಯಕ್ತಿಗೆ ಹಣದ ರೂಪದಲ್ಲಾಗಲೀ ಯಾವುದೇ ವಸ್ತುಗಳ ರೂಪದಲ್ಲಾಗಲೀ ಸಿಗುವ ಪಾವತಿಯನ್ನು ಕೂಲಿ ಅಥವಾ ವರಮಾನ ಎನ್ನಲಾಗುತ್ತದೆ. ಈ ರೀತಿ ಕೂಲಿಯನ್ನು ಹೊಸಪೇಟೆಯ ಮನೆಗೆಲಸಗಾರರು ಮಾಸಿಕವಾಗಿ ಪಡೆಯುತ್ತಿದ್ದಾರೆ. ೧೩೪ ಮಹಿಳೆಯರು ಮನೆಯಲ್ಲಿ ವಾಸಮಾಡುವ ಜನರ ಆಧಾರದ ಮೇಲೆ ಕೂಲಿ ನಿಗಧಿ ಮಾಡುತ್ತಿದ್ದರೆ. ಇನ್ನು ಕೇವಲ ೧೬ ಮಹಿಳೆಯರು ಕೆಲಸದ ಆಧಾರದ ಮೇಲೆ ಕೂಲಿ ನಿರ್ಧರಿಸುತ್ತಿದ್ದಾರೆ. ಅಧಿಕ ಸಂಖ್ಯೆಯ ಮಹಿಳೆಯರು ಜನರ ಲೆಕ್ಕವೇ ಸರಿ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

೬.೮: ಮನೆಗೆಲಸದ ಅವಧಿ

ಮನೆಗೆಲಸದ ಮಹಿಳೆಯರು ಅತೀ ದೀರ್ಘ ಸಮಯದವರೆಗೆ ಮನೆಗೆಲಸದ ಸೇವೆಯಲ್ಲಿ ನಿರತರಾಗಬೇಕಾಗುತ್ತದೆ. ಏಕೆಂದರೆ ಒಂದು ಮನೆಯ ಕೆಲಸದಿಂದ ಸಿಗುವ ವೇತನದಿಂದ ತಮ್ಮ ಮನೆಯ ಆರ್ಥಿಕ ಬಿಕ್ಕಟ್ಟು ಬಗೆಹರಿಯದೇ ಹೋದಾಗ ಅನೇಕ ಮನೆಗಳ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ದಿನಕ್ಕೆ ೧೨ ಗಂಟೆಗಳವರೆಗೆ ದುಡಿಯಬೇಕಾಗುತ್ತದೆ. ಅನೇಕ ಮನೆಗಳಲ್ಲಿ ಕೆಲಸ ಒಪ್ಪಿಕೊಂಡ ಕಾರಣ ದಿನದ ಹೆಚ್ಚಿನ ಸಮಯ ಹೊರಗಿನ ದುಡಿಮೆಯಲ್ಲೇ ಕಳೆಯಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ಮೈಥಿಲಿ ವಿಶ್ವನಾಥನ್(೧೯೯೪) ಅವರು ವ್ಯಕ್ತಪಡಿಸಿದ್ದಾರೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ೧೨೦ ಮಹಿಳೆಯರ ಮನೆಯಲ್ಲಿ ಒಂದು ಗಂಟೆಗಳ ಕಾಲ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ೩೦ ಮಹಿಳೆಯರ ಮನೆಗೆಲಸದವರು ೨ ಗಂಟೆಗಳಿಗೂ ಅಧಿಕ ಸಮಯ ಕೆಲಸ ನಿರ್ವಹಿಸುತ್ತಿದ್ದಾರೆ. ಒಂದಕ್ಕಿಂತ ಕಡಿಮೆ



ಗಂಟೆಗಳ ಕಾಲ ಕೆಲಸ ಮಾಡುವವರು ಅತೀ ಕಡಿಮೆ ಸಂಭಾವನೆ ಪಡೆಯುತ್ತಿದ್ದಾರೆ ಮತ್ತು ತಮ್ಮ ಮನೆ ಖರ್ಚಿಗೆ ತಮ್ಮ ಕೂಲಿ ಸಾಕಾಗದೇ ಹೋದಾಗ ಅನೇಕ ಮನೆಯ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ.

೬.೯: ಕೆಲಸದವರ ದಾಖಲೆ ಪರಿಶೀಲನೆ

ಸಂಘಟಿತ ವಲಯದಲ್ಲಿ ಉದ್ಯೋಗವನ್ನು ಪಡೆಯಲು ಅನೇಕ ರೀತಿಯ ಕಟ್ಟುಪ್ಪಣೆಗಳಿರುತ್ತವೆ. ಕನಿಷ್ಠ ವಿದ್ಯಾಭ್ಯಾಸ, ತರಬೇತಿ ಹೊಂದಿದವರೂ ಕೂಡ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಹಾಗೂ ಉದ್ಯೋಗ ಸಂಸ್ಥೆಯವರು ವಿಧಿಸುವ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆದರೆ ಅಸಂಘಟಿತ ವಲಯದ ಕೆಲಸಗಳನ್ನು ಪಡೆಯಲು ಈ ಯಾವ ಕಟ್ಟುಪ್ಪಣೆಗಳಿರುವುದಿಲ್ಲ ಹಾಗೂ ಸಾಮಾನ್ಯವಾಗಿ ಶೈಕ್ಷಣಿಕ ಅರ್ಹತೆ, ವೃತ್ತಿ ತರಬೇತಿ ಹೊಂದದ ಅಭ್ಯರ್ಥಿಗಳು ಯಾವ ದಾಖಲೆಗಳನ್ನು ಹೊಂದಿರುವುದಿಲ್ಲ. ಅಲ್ಲದೇ ಮನೆಗೆಲಸದಂತಹ ಕೆಲಸಗಳಿಗೆ ತರಬೇತಿ ಹಾಗೂ ಶಿಕ್ಷಣದ ಅವಶ್ಯಕತೆ ಇರುವುದಿಲ್ಲ. ಸಾಮಾನ್ಯವಾಗಿ ಮನೆಗೆಲಸದ ದುಡಿಮೆಗಾರರು ಮನೆಮಾಲೀಕರಿಗೆ ಪರಿಚಯದವರೇ ಆಗಿರುವುದರಿಂದ ಅವರ ದಾಖಲೆ ಪರಿಶೀಲಿಸುವ ಅಗತ್ಯ ಇರುವುದಿಲ್ಲ. ಅಸಂಘಟಿತ ವಲಯಕ್ಕೆ ಸೇರಿದ ಮನೆಗೆಲಸದ ದುಡಿಮೆಯು ಅತೀ ಕೆಳದರ್ಜೆಯ ಕೆಲಸವಲ್ಲದೇ ಖಾಯಂ ಉದ್ಯೋಗ ಕೂಡ ಆಗಿರುವುದಿಲ್ಲ. ಒಂದು ವೇಳೆ ದುಡಿಮೆಗಾರರು ದುರ್ವರ್ತನೆ ತೋರಿದರೆ ಕೆಲಸದಿಂದ ವಜಾ ಮಾಡುತ್ತಿದ್ದಾರೆ. ಹೀಗಾಗಿ ಮಾಲಿಕರು ಅವರ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ.

೬.೧೦: ಕೂಲಿಯಲ್ಲದೇ ಮನೆಗೆಲಸದವರಿಗೆ ಕೊಡುವ ಇತರೆ ಸೌಲಭ್ಯಗಳು

ಹೊಸಪೇಟೆಯ ಮನೆಗೆಲಸದ ಮಹಿಳೆಯರು ತಮ್ಮ ಕೆಲಸಕ್ಕೆ ಮಾಸಿಕವಾಗಿ ಕೂಲಿಯನ್ನು ಪಡೆಯುತ್ತಾರೆ. ಅದರ ಜೊತೆಗೆ ದೈನಂದಿನ ಕೆಲಸಗಳು ಮುಗಿದ ತಕ್ಷಣ ತಿಂಡಿ ಕಾಫಿ ಹಾಗೂ ಊಟವನ್ನು ಪಡೆಯುತ್ತಾರೆ. ಆದರೆ ಇದು ನಿಯಮಿತವಾಗಿ ಎಲ್ಲ ಕೆಲಸಗಾರರಿಗೂ ಸಿಗುವ ಸೌಲಭ್ಯ ವಾಗಿರುವುದಿಲ್ಲ. ಕೆಲವು ಮನೆಮಾಲೀಕರು ಊಟ ತಿಂಡಿಯನ್ನಷ್ಟೇ ಒದಗಿಸಿದರೆ ಇನ್ನು ಕೆಲವರು ಮನೆಗೆಲಸದವರನ್ನು ತಮ್ಮ ಆಪ್ತರಂತೆ ಕಾಣುತ್ತಾ ಎಲ್ಲ ಸೌಕರ್ಯಗಳನ್ನು ಮಾಡಿಕೊಡುತ್ತಾರೆ. ಆದರೆ ಇನ್ನು ಕೆಲವು ಮನೆಮಾಲೀಕರು ಏನನ್ನು ಕೊಡುವ ಅಭ್ಯಾಸವಿಟ್ಟುಕೊಂಡಿರುವುದಿಲ್ಲ. ಆದರೆ ಈ ರೀತಿ ಕೂಲಿಗೆ ಪೂರಕವಾಗಿ ಊಟ ತಿಂಡಿ ಒದಗಿಸುವುದರಿಂದ ಮನೆಗೆಲಸದವರ ನೈಜಕೂಲಿ ಅಧಿಕವಾಗುತ್ತದೆ. ಸಮೀಕ್ಷೆಗೊಳಗಾದ ೧೫೦ ಮನೆಮಾಲೀಕರಲ್ಲಿ ೧೧೭ ಮಹಿಳೆಯರು ತಾವು ಮನೆಗೆಲಸಗಾರರಿಗೆ ಊಟ ತಿಂಡಿ ಒದಗಿಸುತ್ತೇವೆ ಎಂದು ಉತ್ತರಿಸಿದ್ದಾರೆ. ಮನೆಗೆಲಸದವರಿಗೆ ಊಟ, ತಿಂಡಿಯ ಜೊತೆ ಅವರ ಕಷ್ಟಕಾಲದಲ್ಲಿ ಆರ್ಥಿಕ ನೆರವನ್ನು ನೀಡುತ್ತೇವೆ ಎಂದು ೧೩ ಮನೆಮಾಲೀಕರು ಪ್ರತಿಕ್ರಿಯಿಸಿದ್ದಾರೆ. ಆದರೆ ಇನ್ನುಳಿದ ೨೦ ಮನೆಮಾಲೀಕರು ತಾವು ಮನೆಗೆಲಸಗಾರರಿಗೆ ಯಾವ ರೀತಿಯ (ಊಟ, ತಿಂಡಿ, ಕಾಫಿ, ಹಣದ ಸಹಾಯ) ಸಹಾಯವನ್ನು ಮಾಡುವುದಿಲ್ಲ ಎಂದು ತಿಳಿಸಿದ್ದಾರೆ. ತಮ್ಮ ಈ ನಿಲುವಿಗೆ ತಕ್ಕ ಸಮರ್ಥನೆಯನ್ನು ಮನೆಮಾಲೀಕರು ನೀಡಿರುತ್ತಾರೆ. ಮೊದಲನೆಯದಾಗಿ ಮನೆಗೆಲಸದ ಮಹಿಳೆಯರು ತಮ್ಮ ಜೊತೆ ವಿಶ್ವಾಸದಿಂದ ನಡೆದುಕೊಂಡರೆ ನಾವೂ ಕೂಡ ಎಲ್ಲ ರೀತಿಯ ಸಹಾಯ ಮಾಡಿಕೊಡುತ್ತೇವೆ. ಅವರು ವ್ಯತಿರಿಕ್ತವಾಗಿ ನಡೆದುಕೊಂಡರೆ ನಾವು ಸಹಾಯ ಮಾಡುವುದರಲ್ಲಿ

ಅರ್ಥವಿಲ್ಲ ಎಂದೇ ಪ್ರತಿಕ್ರಿಯಿಸಿರುತ್ತಾರೆ. ಏಕೆಂದರೆ ಮನೆಗೆಲಸದ ಮಹಿಳೆಯರಿಗೆ ತಾವು ಪಡೆಯುವ ಕೂಲಿ ಕಡಿಮೆ ಎನಿಸಿದಾಗ ಹೆಚ್ಚಿಗೆ ಕೂಲಿ ಸಿಗುವ ಮನೆಯ ಕೆಲಸವನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ಅರ್ಧದಲ್ಲಿ ಕೆಲಸವನ್ನು ಬಿಟ್ಟು ಹೋಗುವವರಿಗೆ ನಾವು ಯಾವ ರೀತಿಯಲ್ಲಿ ಸಹಾಯ ಮಾಡುವುದು ಎಂಬುದು ಮನೆಮಾಲೀಕರ ಅಭಿಪ್ರಾಯ. ಎರಡನೆಯದಾಗಿ ಕೆಲವು ಮನೆಗೆಲಸದ ಮಹಿಳೆಯರು ಮನೆಮಾಲೀಕರಿಂದ ಸಂಕಷ್ಟದ ಸಮಯದಲ್ಲಿ ಹಣಪಡೆದು ಮೋಸಮಾಡಿದ ಪ್ರಸಂಗಗಳನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿಸಿರುತ್ತಾರೆ. ಶೇ. ೧೩.೩೩ರಷ್ಟು ಮನೆಮಾಲೀಕರು ಮನೆಗೆಲಸದವರಿಗೆ ಈ ಕಾರಣಗಳಿಂದ ಬೇರೆಯಾವ ಸಹಾಯವನ್ನು ಮಾಡುತ್ತಿಲ್ಲ. ಆದರೆ ಅಧಿಕ ಸಂಖ್ಯೆಯ ಮಹಿಳೆಯರಿಗೆ ತಮ್ಮ ತಿಂಗಳ ಸಂಬಳದ ಜೊತೆ ಇತರೆ ಸೌಲಭ್ಯಗಳು ದೊರೆಯುತ್ತಿವೆ ಎಂಬುದೇ ಸಮಾಧಾನಕರ ಸಂಗತಿಯಾಗಿದೆ.

೬.೧೧: ರಜಾ ಸೌಲಭ್ಯ

ಅಸಂಘಟಿತ ವಲಯದ ಕೆಲಸಗಾರರಿಗೆ ಸಂಘಟಿತ ವಲಯದ ಉದ್ಯೋಗಿಗಳಿಗೆ ಸಿಗುವ ಯಾವ ಸೌಲಭ್ಯಗಳೂ ದೊರೆಯುವುದಿಲ್ಲ. ಅದರಲ್ಲಿ ಪ್ರಮುಖವಾಗಿ ರಜಾ ಸೌಲಭ್ಯ. ವರ್ಷದ ೩೬೫ ದಿನಗಳೂ ನಿರಂತರವಾಗಿ ದುಡಿಯುವುದು ಅಸಾಧ್ಯ. ಅದರಲ್ಲೂ ಪ್ರಮುಖವಾಗಿ ಸಂತಾನೋತ್ಪತ್ತಿಯಂತಹ ಗುರುತರ ಹೊಣೆಯನ್ನು ಹೊತ್ತುಕೊಂಡ ಮಹಿಳೆಯರಿಗೆ ರಜಾ ಸೌಲಭ್ಯ ಒದಗಿಸಿಕೊಡಬೇಕು. ಆದರೆ ಅಸಂಘಟಿತ ವಲಯದ ಯಾವ ನೌಕರರು ಹೆರಿಗೆ ರಜೆಯಂತಹ ಮೂಲಭೂತ ಸೌಲಭ್ಯವನ್ನು ಪಡೆದಿರುವುದಿಲ್ಲ. ಇಂತಹ ಸಮಯದಲ್ಲಿ ಮಹಿಳೆಯರು ತಮ್ಮ ಕೆಲಸವನ್ನೇ ಬಿಟ್ಟುಕೊಡಬೇಕಾಗುತ್ತದೆ. ಇಲ್ಲದಿದ್ದರೆ ಕೆಲವೇ ದಿನಗಳ ವಿರಾಮ ಪಡೆದು ಪುನಃ ಕೆಲಸಕ್ಕೆ ಹೋಗುತ್ತಾರೆ. ಇದು ಮಹಿಳೆಯರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಹೊಸಪೇಟೆಯ ಮನೆಮಾಲೀಕರಲ್ಲಿ ೧೪೭ ಮಹಿಳೆಯರು ತಾವು ಮನೆ ಕೆಲಸಗಾರರಿಗೆ ರಜಾ ಸೌಲಭ್ಯ ಮಾಡಿಕೊಡುತ್ತೇವೆ ಎಂದೇ ತಿಳಿಸಿರುತ್ತಾರೆ. ಆದರೆ ರಜೆ ಅವಧಿಯು ಕೇವಲ ಒಂದು ಅಥವಾ ಎರಡೇ ದಿನಗಳದ್ದಾಗಿರುತ್ತದೆ ಎಂಬುವ ವಿಷಯವನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಇನ್ನು ಮೂವರು ಮನೆಮಾಲೀಕರು ಯಾವುದೇ ರಜಾ ಸೌಲಭ್ಯ ಮಾಡಿಕೊಟ್ಟಿರುವುದಿಲ್ಲ. ಇದಕ್ಕೆ ಪ್ರಮುಖ ಕಾರಣವನ್ನು ಕೂಡ ಕೊಟ್ಟಿರುತ್ತಾರೆ. ತಾವು ತಮ್ಮ ಕೈಲಾಗದಂತಹ ಸಂದರ್ಭದಲ್ಲೇ ಮನೆಗೆಲಸವನ್ನು ಬೇರೆಯವರಿಗೆ ಒಪ್ಪಿಸುವುದು. ಹೀಗಾಗಿ ಅವರು ರಜೆ ಮಾಡಿದರೆ ನಾವು ಮನೆಗೆಲಸದವರನ್ನು ನೇಮಕ ಮಾಡಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ, ಹೀಗಾಗಿ ನಾವು ಮನೆಗೆಲಸದವರಿಗೆ ಯಾವುದೇ ರಜಾ ಸೌಲಭ್ಯ ಒದಗಿಸಿಕೊಡುವುದಿಲ್ಲ ಎಂದಿದ್ದಾರೆ. ಒಟ್ಟಾರೆಯಾಗಿ ಕೆಲಸಗಾರರಿಗೆ ಬೇಕಾಗುವ ಸೌಲಭ್ಯಗಳು ಅಸಂಘಟಿತ ವಲಯದಲ್ಲಿ ಇರುವುದಿಲ್ಲ. ಅಸಂಘಟಿತ ವಲಯದ ಮಹಿಳೆಯರಿಗೆ ಈ ಸೌಲಭ್ಯಗಳು ಸಿಗದೇ ಇರಲು ಪ್ರಮುಖ ಕಾರಣವೇನೆಂದರೆ ಈ ವಲಯದ ಉದ್ಯೋಗಿಗಳಿಗೆ ಸರ್ಕಾರದ ಹಾಗೂ ಸಂಘ ಸಂಸ್ಥೆಗಳ ಬೆಂಬಲವಿರುವುದಿಲ್ಲ. ಹೀಗಾಗಿ ತಮಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯಗಳಿಗಾಗಿ ಹೋರಾಡಲು ಕೆಲಸಗಾರರಿಗೆ ಸ್ವಾತಂತ್ರ್ಯ ವಿರುವುದಿಲ್ಲ. ಕಾನೂನು ಬೆಂಬಲವಿಲ್ಲದೇ ಹೋರಾಟಕ್ಕಿಳಿದರೆ ಉದ್ಯೋಗವಂಚಿತರಾಗಬೇಕಾಗುತ್ತದೆ ಎಂಬ ಭಯ ಮಹಿಳೆಯರನ್ನು ಕಾಡುತ್ತಿದೆ. ಅಲ್ಲದೆ ಮನೆಗೆಲಸದ ಮಹಿಳೆಯರಿಗೆ ತಮ್ಮ ಕುಟುಂಬದ

ನಿರ್ವಹಣೆಗಾಗಿ ಕೆಲಸದಲ್ಲಿ ಮುಂದುವರೆಯುವುದು ಅನಿವಾರ್ಯವಾದ ಕಾರಣ, ಈ ಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳನ್ನು ಮೌನವಾಗಿ ಸಹಿಸಿಕೊಂಡಿದ್ದಾರೆ.

೬.೧೨: ಮನೆಗೆಲಸದವರೊಡನೆ ಸಂಬಂಧ

ಸಾಮಾನ್ಯವಾಗಿ ಮನೆ ಮಾಲೀಕರು ಮನೆಗೆಲಸಗಾರರಿಗೆ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡುತ್ತಿದ್ದಾರೆ ಹೀಗೆ ೧೪೭ ಮನೆ ಮಾಲೀಕರು ಮನೆಗೆಲಸದ ದುಡಿಮೆಗಾರರ ಜೊತೆ ಉತ್ತಮ ಸಂಬಂಧವನ್ನು ಹೊಂದಿರುತ್ತಾರೆ. ಅಂದರೆ ಮನೆಮಾಲೀಕರು ತಾವು ಕೊಡುವ ಸಂಬಳವಾಗಲೀ ಅನುಕೂಲವಾಗಲೀ ಮನೆಗೆಲಸದವರಿಗೆ ತೃಪ್ತಿ ತಂದಿದೆ ಎಂದೇ ಅಭಿಪ್ರಾಯ ಹೊಂದಿರುತ್ತಾರೆ. ಆದರೆ ಸಂಘಟಿತ ವಲಯದ ವೇತನ ಹಾಗೂ ಸೌಲಭ್ಯಗಳಿಗೆ ಹೋಲಿಸಿದಾಗ ಅಸಂಘಟಿತ ವಲಯದ ದುಡಿಮೆಗಾರರು ಸೌಲಭ್ಯ ವಂಚಿತರಾಗಿರುವುದು ಗಮನಕ್ಕೆ ಬರುತ್ತದೆ. ಆದರೆ ೩ ಮನೆಮಾಲೀಕರು ಮಾತ್ರ ಮನೆಗೆಲಸಗಾರರ ಜೊತೆ ಉತ್ತಮ ಸಂಬಂಧ ಹೊಂದಿರುವುದಿಲ್ಲ. ಹೀಗೆ ಉತ್ತಮ ಸಂಬಂಧವನ್ನು ಹೊಂದಿಲ್ಲದವರು ಆಗಿಂದಾಗ್ಗೆ ಮನೆಗೆಲಸದವರನ್ನು ಬದಲಾವಣೆ ಮಾಡುತ್ತಿದ್ದಾರೆ.

೬.೧೩: ದುರ್ವರ್ತನೆ ವಿರುದ್ಧ ಕ್ರಮ

ಮನೆಗೆಲಸಗಾರರು ಆಕಸ್ಮಿಕವಾಗಿ ದುರ್ವರ್ತನೆ ತೋರಿದರೆ ಬುದ್ಧಿವಾದ ಹೇಳುತ್ತೇವೆಂದು ೭೮ ಮನೆಮಾಲೀಕರು ತಿಳಿಸಿರುತ್ತಾರೆ. ಮೊದಲನೆಯದಾಗಿ ಈ ಮಾಲೀಕರು ತಮ್ಮ ಮನೆಯ ದುಡಿಮೆಗಾರರ ಬಗ್ಗೆ ಉತ್ತಮ ಅಭಿಪ್ರಾಯವನ್ನೇ ಹೊಂದಿದವರಾಗಿದ್ದಾರೆ. ನಮ್ಮ ನಮೂನೆಯಲ್ಲಿಯ ೭೮ ಮನೆಗೆಲಸಗಾರರು ತಾವು ಕೆಲಸ ನಿರ್ವಹಿಸುವ ಮನೆಯಲ್ಲಿ ಯಾವ ರೀತಿಯ ದುರ್ವರ್ತನೆ (ಕಳ್ಳತನ ಮಾಡುವುದು, ಪದೇ ಪದೇ ಕೆಲಸಕ್ಕೆ ಗೈರು ಹಾಜರಾಗುವುದು, ಕೆಲಸವನ್ನು ಚೊಕ್ಕಟವಾಗಿ ಮಾಡದೇ ಇರುವುದು) ತೋರುತ್ತಿಲ್ಲ. ಒಂದು ವೇಳೆ ಈ ರೀತಿ ನಡೆದುಕೊಂಡಿದ್ದೇ ಆದರೆ ಬುದ್ಧಿವಾದ ಹೇಳುತ್ತಾರೆ. ಉಳಿದ ೭೨ ಮನೆಮಾಲೀಕರು ಮನೆಗೆಲಸದವರ ಬಗ್ಗೆ ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಒಂದು ವೇಳೆ ದುರ್ವರ್ತನೆ ತೋರಿದರೆ ಅವರನ್ನು ಕೆಲಸದಿಂದ ಬಿಡಿಸಿ ಬಿಡುತ್ತೇವೆ ಎಂದಿದ್ದಾರೆ, ಏಕೆಂದರೆ ಅಸಂಘಟಿತ ವಲಯದ ಕೆಲಸಗಳು ಖಾಯಂ ಅಲ್ಲದ ಕಾರಣ ಹಾಗೂ ಕಾರ್ಖಾನೆಯ ಕಾನೂನುಗಳನ್ನು ಅಳವಡಿಸದ ಕಾರಣ ಉದ್ಯೋಗಿಗಳನ್ನು ಯಾವಾಗ ಬೇಕಾದರು ಕೆಲಸದಿಂದ ವಜಾ ಮಾಡಬಹುದಾಗಿದೆ. ಇದೇ ರೀತಿ ಮನೆಗೆಲಸಗಾರರನ್ನು ಕೆಲಸದಿಂದ ತೆಗೆದುಹಾಕುತ್ತೇವೆ ಎಂದು ಪ್ರತಿಕ್ರಿಯಿಸುವುದರ ಮೂಲಕ ಅಸಂಘಟಿತ ವಲಯದ ಉದ್ಯೋಗಗಳು ಸುರಕ್ಷಿತವಲ್ಲ ಹಾಗೂ ಉದ್ಯೋಗಿಗಳಿಗೆ ನಿರಂತರ ಆದಾಯ ತಂದುಕೊಡುವಂಥವಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿರುತ್ತದೆ.

೬.೧೪: ಕಷ್ಟಕಾಲದಲ್ಲಿ ನೆರವು

ಹೊಸಪೇಟೆಯ ಮನೆಮಾಲೀಕರು ಮನೆಗೆಲಸಗಾರರಿಗೆ ಕಷ್ಟಕಾಲದಲ್ಲಿ ನೆರವಾಗುತ್ತಿದ್ದಾರೆ. ಸಮೀಕ್ಷೆಗೊಳಗಾದ ೧೫೦ ಮನೆಮಾಲೀಕರಲ್ಲಿ ೧೩೭ ಮಹಿಳೆಯರು ಕಷ್ಟಕಾಲದಲ್ಲಿ ಆರ್ಥಿಕ ನೆರವನ್ನು ನೀಡುತ್ತಿದ್ದಾರೆ. ಕೇವಲ ೧೩ ಮಹಿಳೆಯರು ನಾವು ಕೂಲಿಯಲ್ಲದೇ ಬೇರೆ ಸಹಾಯ ಮಾಡುವುದಿಲ್ಲ, ಕಷ್ಟ ಕಾಲದಲ್ಲಿ ಹಣದ ಸಹಾಯ ಮಾಡಿದ್ದೇ ಆದರೆ ಅದು ಮರು ಪಾವತಿಯಾಗುವ ವಿಶ್ವಾಸ

ನಮ್ಮಲ್ಲಿಲ್ಲ. ಏಕೆಂದರೆ ಮನೆಗೆಲಸಗಾರರು ಆಗಿಂದಾಗ್ಗೆ ಮನೆಗಳನ್ನು ಬದಲಾವಣೆ ಮಾಡುವ ಕಾರಣ ನಾವು ಯಾವ ಸಹಾಯ ಮಾಡಲೂ ಮುಂದಾಗುವುದಿಲ್ಲ ಎಂದೇ ಉತ್ತರಿಸಿದ್ದಾರೆ. ಈ ರೀತಿ ಸರ್ಕಾರದ ಸಹಾಯವೂ ಇಲ್ಲದೇ ಮನೆಮಾಲೀಕರ ಸಹಕಾರವೂ ಇಲ್ಲದೇ ಕೆಲವು ಮನೆಗೆಲಸಗಾರರು ಸಂಕಷ್ಟದಲ್ಲಿ ಸಿಲುಕಿರುತ್ತಾರೆ. ಮನೆ ಮಾಲೀಕರು ಮಾತ್ರ ತಾವು ಮನೆಗೆಲಸದ ಮಹಿಳೆಯರಿಗೆ ಎಲ್ಲಾ ರೀತಿಯ ಸಹಕಾರ ಸಹಾಯ ಮಾಡುತ್ತೇವೆ ಎಂದು ಪ್ರತಿಕ್ರಿಯಿಸುವುದರ ಮೂಲಕ ತಮ್ಮ ಮನೆಯ ಕೆಲಸ ಕಾರ್ಯಗಳಿಗೆ ಅನಿವಾರ್ಯವಾಗಿ ಬೇಕೇ ಬೇಕಾದ ಮಹಿಳೆಯರ ಜೀವನ ಸಂಕಷ್ಟದಲ್ಲಿ ಇಲ್ಲ ಎಂಬರ್ಥ ಬರುವಂತೆ ಕ್ಷೇತ್ರ ಕಾರ್ಯದ ಸಮಯದಲ್ಲಿ ತಮ್ಮ ನಿಲುವನ್ನು ಮಂಡಿಸಿದ್ದಾರೆ.

ಮನೆಗೆಲಸದ ಮಹಿಳಾ ದುಡಿಮೆಗಾರರು ಹಾಗೂ ಮನೆ ಮಾಲೀಕರು ಕ್ಷೇತ್ರಕಾರ್ಯದ ಸಮಯದಲ್ಲಿ ನೀಡಿದ ಮಾಹಿತಿಯನ್ನು ಈ ಅಧ್ಯಾಯದಲ್ಲಿ ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಮನೆಗೆಲಸದ ದುಡಿಮೆಗಾರರು ಮನೆಮಾಲೀಕರಿಗೆ ಅವಶ್ಯವಾಗಿ ಬೇಕಾಗಿದ್ದಾರೆ. ತಮ್ಮ ದಿನ ನಿತ್ಯದ ಕೆಲಸಗಳಿಗೆ ಮಹಿಳೆಯರ ನೆರವು ಬೇಕಾಗಿದೆ. ಆದರೂ ಹೆಚ್ಚಿನ ಸಂಭಾವನೆಯನ್ನು ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಮಹಿಳೆಯರಿಗೆ ಅಗತ್ಯವಿದ್ದಾಗ ರಜಾ ಸೌಲಭ್ಯವನ್ನು ನೀಡುತ್ತಿಲ್ಲ. ಜಾತಿವ್ಯವಸ್ಥೆಯ ವಿಷಯದಲ್ಲಿಯೂ ಮಾಲೀಕರದು ದೃಢ ನಿಲುವಾಗಿದೆ. ದೇವರಮನೆ ಹಾಗೂ ಅಡುಗೆ ಮನೆಗಳಿಗೆ ತಳಸಮುದಾಯದ ಮಹಿಳೆಯರಿಗೆ ಪ್ರವೇಶವಿರುವುದಿಲ್ಲ.

ಕೆಲವು ಮಾಲೀಕರು ಮಾತ್ರ ಮನೆಗೆಲಸದ ದುಡಿಮೆಗಾರರ ವಿಷಯದಲ್ಲಿ ಸಡಿಲ ನಿಲುವು ತಳೆದಿದ್ದಾರೆ. ಇಂತಹ ಅಪರೂಪದ ಪ್ರಸಂಗಗಳನ್ನು ಕ್ಷೇತ್ರ ಕಾರ್ಯದ ಸಮಯದಲ್ಲಿ ಗಮನಿಸಲಾಗಿದೆ. ಕೆಲವು ಮಾಲೀಕರು ಮಹಿಳಾ ದುಡಿಮೆಗಾರರಿಗೆ ಊಟ, ಬಟ್ಟೆಯನ್ನು ಒದಗಿಸುವುದರ ಮೂಲಕ ವಿಶಾಲ ವ್ಯಕ್ತಿತ್ವವನ್ನು ಮೆರೆದಿದ್ದಾರೆ. ಆದರೆ ಕೆಲಸದವರನ್ನು ಕೆಳಮಟ್ಟದಲ್ಲಿಯೇ ನೋಡುತ್ತಿರುವ ಪ್ರಸಂಗಗಳೇ ಅಧಿಕವಾಗಿರುವುದು ಶೋಚನೀಯ ಸಂಗತಿಯಾಗಿದೆ.

ಸಮೀಕ್ಷೆಗೊಳಪಡಿಸಲಾದ ೧೫೦ ಮನೆಮಾಲೀಕರಲ್ಲಿ ೧೩ ಮನೆಗಳ ಮಾಲೀಕರು ಮನೆಗೆಲಸದವರ ಬಗ್ಗೆ ವ್ಯತಿರಿಕ್ತ ಹೇಳಿಕೆಯನ್ನು ನೀಡಿರುತ್ತಾರೆ. ಇವರು ಮನೆಗೆಲಸದ ದುಡಿಮೆಗಾರರ ಬಗ್ಗೆ ಯಾವುದೇ ರಿಯಾಯಿತಿ ತೋರಿಸಲು ಮುಂದಾಗಿರುವುದಿಲ್ಲ. ಮನೆಗೆಲಸದವರ ಸಂಕಷ್ಟಗಳಲ್ಲಿ ನೆರವಾಗುವುದಿಲ್ಲ ಎಂಬ ನೇರ ಉತ್ತರ ಕೊಟ್ಟಿರುತ್ತಾರೆ. ಮನೆಗೆಲಸದ ದುಡಿಮೆಗಾರರ ಬಗ್ಗೆ ಇರುವ ಅನಾದರವೇ ಇದಕ್ಕೆ ಕಾರಣ. ಅಲ್ಲದೇ ಮಹಿಳೆಯರು ಆಗಿಂದಾಗ್ಗೆ ಕೆಲಸದ ಮನೆಗಳನ್ನು ಬದಲಾಯಿಸುವುದು ಇದಕ್ಕೆ ಕಾರಣವಾಗಿದೆ. ಇಂತಹ ಮನೋಭಾವವನ್ನು ಹೊಂದಿದವರ ಮನೆಯಲ್ಲಿಯೂ ಮಹಿಳೆಯರು ದುಡಿಯುತ್ತಿದ್ದಾರೆ ಎಂದರೆ ಅದು ಬಡ ಮಹಿಳೆಯರ ಬದುಕಿನ ಅನಿವಾರ್ಯತೆಯನ್ನು ಎತ್ತಿತೋರಿಸುತ್ತದೆ.

ಮನೆಮಾಲೀಕರ ಮಾಹಿತಿ ಎಂಬ ಈ ಅಧ್ಯಾಯದಲ್ಲಿ ಮನೆಮಾಲೀಕರು ತಮ್ಮ ಮನೆಗೆಲಸದ ದುಡಿಮೆಗಾರರ ಬಗ್ಗೆ ನೀಡಿದ ಮಾಹಿತಿಯನ್ನು ಕುರಿತು ವಿಶ್ಲೇಷಿಸಲಾಗಿದೆ. ಇದರಿಂದ ಮಾಲೀಕರು ಹಾಗೂ ದುಡಿಮೆಗಾರರ ಅಭಿಪ್ರಾಯಗಳನ್ನು ತುಲನಾತ್ಮಕವಾಗಿ ನೋಡಲು ಸಾಧ್ಯವಾಗಿದೆ. ಅಧ್ಯಯನದಲ್ಲಿ ವ್ಯಕ್ತವಾದಂತೆ ಮನೆಗೆಲಸದ ದುಡಿಮೆಗಾರರು ತಮ್ಮ ಮಾಲೀಕರ ಬಗ್ಗೆ ಪೂರಕವಾದ ಅಂಶಗಳನ್ನೇ

ನೀಡಿರುತ್ತಾರೆ. ಮಹಿಳೆಯರು ಮಾಲೀಕರ ಜೊತೆ ಉತ್ತಮ ಸಂಬಂಧ ಹೊಂದಿದ್ದಾರೆ. ಹಾಗೂ ಮಾಲೀಕರಿಂದ ಇತರೆ ಸೌಲಭ್ಯಗಳನ್ನೂ ಪಡೆದಿದ್ದಾರೆ. ಆದರೆ ರಜಾ ಸೌಲಭ್ಯ, ಕಡಿಮೆ ಕೂಲಿಯ ಕುರಿತಾಗಿ ಹಾಗೂ ಜಾತಿಭೇದ ವಿಷಯದಲ್ಲಿ ಮಹಿಳೆಯರಿಗೆ ಅಸಂತೃಪ್ತಿ ಇದೆ. ಇದಕ್ಕೆ ಮಹಿಳೆಯರು ತಮ್ಮ ಆತ್ಮಾವಲೋಕನವನ್ನು ಮಾಡಿಕೊಂಡಿದ್ದಾರೆ. ಸ್ವಜಾತಿಯವರೂ ಕೂಡ ಕೆಳವರ್ಗದವರು ಎನ್ನುವ ಕಾರಣಕ್ಕೆ ತಮ್ಮನ್ನು ಕೀಳಾಗಿ ಕಾಣುತ್ತಿರುವುದು ಮಹಿಳೆಯರಿಗೆ ನೋವನ್ನುಂಟು ಮಾಡಿರುವ ಸಂಗತಿಯಾಗಿದೆ. ಈ ಕಾರಣದಿಂದ ಶಿಕ್ಷಣ ಮಾತ್ರ ತಮ್ಮ ಸ್ಥಿತಿಗತಿ ಸುಧಾರಿಸಲು ನೆರವಾಗಬಲ್ಲದು ಎಂಬುದನ್ನು ಅರಿತಿದ್ದಾರೆ.

ಮಾಲೀಕರೂ ಕೂಡ ಮಹಿಳಾ ದುಡಿಮೆಗಾರರ ಕುರಿತು ಉತ್ತಮ ಅಭಿಪ್ರಾಯವನ್ನೇನೋ ವ್ಯಕ್ತಪಡಿಸಿದ್ದಾರೆ. ಆದರೆ ಅಧಿಕ ಕೂಲಿ ಕೊಡುವ ಹಾಗೂ ರಜಾ ಸೌಲಭ್ಯ ಒದಗಿಸಿಕೊಡುವ ವಿಷಯದ ಕುರಿತು ರಾಜಿಯಾಗಲು ಸಿದ್ಧವಿರುವುದಿಲ್ಲ. ಮನೆಗೆಲಸದ ಮಹಿಳೆಯರಿಗೆ ತಾವು ಕೊಡುವ ಕೂಲಿ ನ್ಯಾಯ ಸಮ್ಮತ ಎಂಬುದು ಮಾಲೀಕರ ವಾದವಾಗಿದೆ. ಮನೆ ಮಾಲೀಕರು ತಮ್ಮ ಮನೆಯಲ್ಲಿ ಕೆಲಸದ ಒತ್ತಡವಿದ್ದಾಗ ಮನೆಗೆಲಸದವರನ್ನು ನೇಮಿಸಿಕೊಳ್ಳುತ್ತಿದ್ದಾರೆ. ಕೆಲಸದವರು ಮೇಲಿಂದ ಮೇಲೆ ರಜಾ ತೆಗೆದುಕೊಂಡರೆ ಕೆಲಸದ ಒತ್ತಡ ತಮ್ಮ ಮೇಲೆ ಬೀಳುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜಾತಿ ವಿಷಯದಲ್ಲಂತೂ ಮನೆ ಮಾಲೀಕರು ತಮ್ಮ ಬಿಗಿ ನಿಲುವನ್ನು ತಿಳಿಸಿರುತ್ತಾರೆ. ಹೀಗೆ ಮನೆಮಾಲೀಕರಿಗೆ ಮನೆಗೆಲಸದ ದುಡಿಮೆಗಾರರು ಅನಿವಾರ್ಯವಾದರೂ ಅವರಿಗೆ ರಿಯಾಯಿತಿ ತೋರುವಲ್ಲಿ ಮಾತ್ರ ಹಠಮಾರಿ ಧೋರಣೆ ವ್ಯಕ್ತಪಡಿಸಿದ್ದಾರೆ.

ಆದರೂ ಬಡ ಮಹಿಳೆಯರಿಗೆ ದುಡಿಮೆಯು ಅನಿವಾರ್ಯವಾಗಿದೆ. ಅದರಂತೆಯೇ ನಗರದ ಮಹಿಳೆಯರಿಗೆ ಮಹಿಳಾ ಮನೆಗೆಲಸಗಾರರ ಅಗತ್ಯವಿದೆ. ಹೀಗೆ ಮನೆಗೆಲಸಗಾರರು ಮಾಲೀಕರನ್ನು ಮಾಲೀಕರು ಮನೆಗೆಲಸದ ದುಡಿಮೆಗಾರರನ್ನು ಅವಲಂಬಿಸಿ ಬದುಕು ಸಾಗಿಸಬೇಕಾದ ವಾತಾವರಣ ಹೊಸಪೇಟೆಯಲ್ಲಿ ಸೃಷ್ಟಿಯಾಗಿದೆ.

ಅಧ್ಯಾಯ ಏಳು

ಉಪಸಂಹಾರ

೭.೧ ಅಧ್ಯಯನದ ಫಲಿತಗಳು

೭.೨ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿ-ಗತಿ ಅವಲೋಕನ

೭.೩ ಸಲಹೆಗಳು

ಅಧ್ಯಾಯ ಏಳು

ಉಪಸಂಹಾರ

ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು, ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿಗತಿಗಳ ಅವಲೋಕನವನ್ನು ಮತ್ತು ಸೂಕ್ತ ಸಲಹೆಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

೭.೧ ಅಧ್ಯಯನದ ಫಲಿತಗಳು

- ಲಿಂಗಾಧಾರಿತ ಸಮಾಜದಲ್ಲಿ ಮಹಿಳೆಯರು ಕೆಳಮಟ್ಟದ ಸ್ಥಾನಮಾನವನ್ನು ಹೊಂದುವುದು ಸಾಮಾನ್ಯ ಎಂಬುದು ನಮ್ಮ ಅಧ್ಯಯನದ ಮೂಲಕ ಬೆಳಕಿಗೆ ಬಂದಂತಹ ಸತ್ಯವಾಗಿದೆ. ಈ ಅಧ್ಯಯನವು ನಾಲ್ಕು ಉದ್ದೇಶಗಳನ್ನು ಹೊಂದಿದ್ದು ಮೊದಲನೆಯ ಹಾಗೂ ಎರಡನೆಯ ಉದ್ದೇಶಗಳಿಗೆ ಆನುಷಂಗಿಕ ಮೂಲಗಳಾದ ಪ್ರಕಟಿತ ಹಾಗೂ ಅಪ್ರಕಟಿತ ಗ್ರಂಥಗಳು, ವರದಿಗಳು, ಹಾಗೂ ಲೇಖನಗಳಿಂದ ಉತ್ತರವನ್ನು ಕಂಡುಕೊಳ್ಳಲಾಗಿದೆ.

ಅನೌಪಚಾರಿಕ ವಲಯದ ಉದಯಕ್ಕೆ ಕಾರಣವಾದ ಅಂಶಗಳತ್ತ ಪ್ರಸಿದ್ಧ ವಿದ್ವಾಂಸರಾದ ಸಂತೋಷ ಮರೋತ್ರ ಮತ್ತು ಮೇರಿಯೋ ಬಿಗ್ಗೇರಿ (೨೦೦೭) ಅವರು ಕೂಡ ಬೆಳಕು ಚೆಲ್ಲಿದ್ದಾರೆ. ಔಪಚಾರಿಕ ವಲಯವು ಹೆಚ್ಚಿದ ಶ್ರಮಶಕ್ತಿಗೆ ಉದ್ಯೋಗವನ್ನು ಒದಗಿಸಿಕೊಡುವಲ್ಲಿ ಆದ ವೈಫಲ್ಯತೆಯಿಂದ ಅನೌಪಚಾರಿಕ ವಲಯ ಉದಯವಾಯಿತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ರೀತಿ ಪ್ರಸಿದ್ಧ ವಿದ್ವಾಂಸರ ಗ್ರಂಥಗಳಲ್ಲದೇ ಶ್ರಮಶಕ್ತಿ (೧೯೮೮) ವರದಿ, ಅರ್ಜುನ್ ಸೇನ್ ಗುಪ್ತ (೨೦೦೭) ವರದಿಗಳಲ್ಲಿಯೂ ಅಸಂಘಟಿತ ವಲಯದ ಉದಯದ ಕುರಿತಾಗಿ ವಿಶ್ಲೇಷಿಸಲಾಗಿದೆ. ಈ ಎಲ್ಲ ವಿದ್ವಾಂಸರ ಅಭಿಪ್ರಾಯ ದಲ್ಲಿಯೂ ಅನೌಪಚಾರಿಕ ವಲಯವು ಔಪಚಾರಿಕ ವಲಯದ ಕೃಪಾಪೋಷಿತ ವಲಯ ಎಂಬುದು ಮತ್ತೊಮ್ಮೆ ಸಾಬೀತಾಗಿರುತ್ತದೆ. ಔಪಚಾರಿಕ ವಲಯದಿಂದ ಹೊರಗುಳಿದ ಶ್ರಮವರ್ಗ ಅನೌಪಚಾರಿಕ ವಲಯದಲ್ಲಿ ನೆಲೆಕಂಡುಕೊಂಡಿರುವ ಕಾರಣದಿಂದಾಗಿ ಕಾರ್ಮಿಕ ಮಾರುಕಟ್ಟೆಯಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದ ವರ್ಗೀಕರಣಕ್ಕೆ ಕಾರಣವಾಗಿದೆ. ಒಟ್ಟಾರೆ ಗ್ರಂಥಗಳ ಅಭಿಪ್ರಾಯಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಬೆಳಕಿಗೆ ಬಂದಿವೆ.

ಮೊದಲನೆಯದಾಗಿ ಸಂಘಟಿತ ವಲಯವು ಶೇಕಡ ೧೦ಕ್ಕಿಂತ ಕಡಿಮೆ ಪ್ರಮಾಣದ ಶ್ರಮಿಕರಿಗೆ ಮಾತ್ರ ಉದ್ಯೋಗ ಒದಗಿಸಲು ಶಕ್ತವಾಗಿದೆ. ಈ ಕಾರಣದಿಂದ ಉಳಿದ ಶೇಕಡ ೯೦ಕ್ಕಿಂತ ಅಧಿಕವಾಗಿರುವ ಶ್ರಮಬಲ ಅಸಂಘಟಿತ ಸ್ವರೂಪದ ದುಡಿಮೆಯಲ್ಲಿ ನಿರತರಾಗಿದ್ದಾರೆ. ಇದರಿಂದ ವ್ಯಕ್ತವಾಗುವ ಅಭಿಪ್ರಾಯ ವೆಂದರೆ ಭಾರತದಲ್ಲಿ ಹೆಚ್ಚುತ್ತಿರುವ ಶ್ರಮವರ್ಗಕ್ಕೆ ಉದ್ಯೋಗ ಒದಗಿಸಲು ಸಂಘಟಿತ ವಲಯದಲ್ಲಿ ಸಾಧ್ಯವಾಗದ ಕಾರಣ ಅಸಂಘಟಿತ ವಲಯ ರೂಪುಗೊಂಡಿದೆ.

ಎರಡನೆಯದಾಗಿ ಭಾರತದಲ್ಲಿ ಸಾಕ್ಷರತಾ ದರ ನಿರೀಕ್ಷಿತ ಮಟ್ಟದಲ್ಲಿ ಅಧಿಕಗೊಳ್ಳದೇ ಇದ್ದುದರಿಂದ ಅನಕ್ಷರಸ್ಥ ಶ್ರಮಿಕರು ಸಂಘಟಿತ ವಲಯದ ಉದ್ಯೋಗವನ್ನು ಪಡೆಯಲು ಅಸಮರ್ಥರಾಗಿದ್ದಾರೆ. ಸಂಘಟಿತ ವಲಯವು ಅಪೇಕ್ಷಿಸುವ ಶಿಕ್ಷಣ, ತರಬೇತಿ ಮತ್ತು ಅಲ್ಲಿನ ಪ್ರವೇಶ ಪರೀಕ್ಷೆ ಮುಂತಾದ ಪ್ರಕ್ರಿಯೆಗಳನ್ನು ಪೂರೈಸಲಾಗದ ಕಾರ್ಮಿಕರು ಈ ವಲಯದಿಂದ ಹೊರಗುಳಿದಿದ್ದಾರೆ.

ಮೂರನೆಯದಾಗಿ ಸಂಘಟಿತ ವಲಯವು ಹೆಚ್ಚಿನ ಬಂಡವಾಳ, ಹೆಚ್ಚಿನ ತಾಂತ್ರಿಕತೆಯನ್ನು ನಿರೀಕ್ಷಿಸುತ್ತದೆ. ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಗೆ ಇಷ್ಟು ಪ್ರಮಾಣದ ಬಂಡವಾಳ ಮತ್ತು ತಾಂತ್ರಿಕತೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಉತ್ಪಾದನೆ ಕುಂಠಿತವಾಗಿ ಆರ್ಥಿಕ ಹಿನ್ನಡೆಯಾಗಿದೆ ಆರ್ಥಿಕ ಬೆಳವಣಿಗೆ ವಿಳಂಬವಾಗುತ್ತಿದೆ ಎಂಬುದು ಅನೌಪಚಾರಿಕ ವಲಯದ ಪ್ರಗತಿಗೆ ವರದಾನವಾಗಿದೆ. ಏಕೆಂದರೆ ಅನೌಪಚಾರಿಕ ವಲಯದ ಉದ್ಯಮಗಳು ಕಡಿಮೆ ಬಂಡವಾಳ ಹಾಗು ಕಡಿಮೆ ನೈಪುಣ್ಯತೆಯಿಂದ ನಡೆಯುವಂತಹವಾಗಿವೆ. ಅಲ್ಲದೇ ಸಣ್ಣ ಸರಕುಗಳ ಉತ್ಪಾದನೆ ಇಲ್ಲಿ ಸಾಧ್ಯವಾಗುತ್ತದೆ. ಇದು ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಗೆ ಹೊಂದಾಣಿಕೆಯಾಗು ವಂತಹದಾಗಿದೆ.

ನಾಲ್ಕನೆಯದಾಗಿ ಅಸಂಘಟಿತ ವಲಯದ ಪ್ರಮುಖ ಲಕ್ಷಣಗಳಲ್ಲಿ ಸುಲಭ ಪ್ರವೇಶವೂ ಒಂದಾಗಿದೆ. ಏಕೆಂದರೆ ಇಲ್ಲಿನ ಉದ್ಯೋಗಗಳನ್ನು ಪಡೆಯಲು ಹೆಚ್ಚಿನ ನಿರ್ಬಂಧಗಳಿರುವುದಿಲ್ಲ. ಸಂಘಟಿತ ವಲಯವು ವಿಧಿಸುವ ಹತ್ತು ಹಲವು ನಿರ್ಬಂಧಗಳನ್ನು ಪೂರೈಸಲಾಗದ ಜನ ಅಸಂಘಟಿತ ವಲಯದಲ್ಲಿ ನೆಲೆ ಕಂಡುಕೊಂಡಿದ್ದಾರೆ. ಹೀಗೆ ಭಾರತದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯೋಗ ಒದಗಿಸುತ್ತಿದೆ. ಈ ಎಲ್ಲ ದೃಷ್ಟಿಕೋನಗಳೂ ಅನೌಪಚಾರಿಕ ವಲಯದ ವಿಕಸನಕ್ಕೆ ಪುಷ್ಠಿ ಒದಗಿಸಿವೆ ಎಂದೇ ಹೇಳಬಹುದು. ಈ ಕಾರಣಗಳಿಂದಾಗಿ ಕಾರ್ಮಿಕ ಮಾರುಕಟ್ಟೆಯಲ್ಲಿ ಸರ್ಕಾರದ ಕೃಪಾಪೋಷಿತ ಸಂಘಟಿತ ಮಾರುಕಟ್ಟೆಯ ಜೊತೆಗೆ ಅಸಂಘಟಿತ ಮಾರುಕಟ್ಟೆಯ ಉದಯವೂ ಆಗಿದೆ.

- ಅಸಂಘಟಿತ ವಲಯದಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡು ಬರಲು ಕಾರಣವಾದ ಅಂಶಗಳನ್ನು ವಿಶ್ಲೇಷಿಸುವುದು ಅಧ್ಯಯನದ ಎರಡನೆಯ ಉದ್ದೇಶವಾಗಿದೆ. ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡು ಬರಲು ಪ್ರಮುಖ ಕಾರಣ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಎಂಬುದು ಲಿಂಗ ಸಂಬಂಧಿ ಅಧ್ಯಯನಗಳ ತಜ್ಞರಾದ ಕಲ್ಪಾಗಮ್.ಯು. ಅವರ ಅಭಿಪ್ರಾಯವಾಗಿದೆ. ಪುರುಷರು ಸಾಮಾನ್ಯವಾಗಿ ಉತ್ಪಾದನಾಕಾರರು, ಕುಟುಂಬದ ರಕ್ಷಕರು ಎಂದು ಪ್ರತಿಬಿಂಬಿಸುತ್ತಾ

ಮಹಿಳೆಯರ ಕರ್ತವ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಗಂಡು ಮಕ್ಕಳ ಬಗ್ಗೆ ತೋರುವ ಕಾಳಜಿಯನ್ನು ಹೆಣ್ಣುಮಕ್ಕಳ ಬಗ್ಗೆ ತೋರಿಸುವುದಿಲ್ಲ. ಕಾರಣ ಹೆಣ್ಣುಮಕ್ಕಳು ಶಿಕ್ಷಣ ವಂಚಿತರಾಗುತ್ತಾರೆ. ಇಂತಹ ಶಿಕ್ಷಣ ವಂಚಿತ ಬಡ ಕುಟುಂಬದ ಮಹಿಳೆಯರು ಅನೌಪಚಾರಿಕ ವಲಯದ ಕಡಿಮೆ ವೇತನದ ದುಡಿಮೆಯಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಇದರೊಂದಿಗೆ ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯಗಳೂ, ಮೂಢ ನಂಬುಗೆಗಳೂ ಮಹಿಳೆಯ ಚಲನೆಯ ಮೇಲೆ ನಿರ್ಬಂಧವನ್ನು ಹೇರಿವೆಯಾದ್ದರಿಂದ ದೂರಪ್ರದೇಶಗಳ ದುಡಿಮೆಯನ್ನು ಮಹಿಳೆಯರು ಒಪ್ಪಿಕೊಳ್ಳುವುದಿಲ್ಲ.

- ಅಸಂಘಟಿತ ವಲಯದ ದುಡಿಮೆಗಳು ವೈವಿಧ್ಯಮಯವಾಗಿವೆ. ಶೇ.೯೦ ಕ್ಕಿಂತ ಅಧಿಕ ಮಹಿಳೆಯರು ಇಂತಹ ಕೆಲಸಗಳಲ್ಲಿ ತೊಡಗಿದ್ದಾರೆ. ಉದಾ: ಹೈನುಗಾರಿಕೆ, ರೇಷ್ಮೆಉದ್ಯಮ, ಕಟ್ಟಡ ನಿರ್ಮಾಣ, ಆಹಾರ ತಯಾರಿಕೆ, ಮನೆಗೆಲಸದ ದುಡಿಮೆ, ತರಕಾರಿ ಮಾರಾಟ ಇತ್ಯಾದಿ. ಈ ರೀತಿಯ ವೈವಿಧ್ಯಮಯ ಕೆಲಸಗಳಲ್ಲಿ ಮನೆಗೆಲಸದ ದುಡಿಮೆಯು ಅತ್ಯಂತ ಕೆಳಸ್ತರದ ದುಡಿಮೆ ಹಾಗೂ ಮಹಿಳೆಯರಿಗಾಗಿಯೇ ಇರುವ ದುಡಿಮೆ ಎನಿಸಿಕೊಂಡಿದೆ. ಕೈಗಾರಿಕೀಕರಣ ಹಾಗೂ ನಗರೀಕರಣದ ಪ್ರಭಾವದಿಂದಾಗಿ ಮನೆಗೆಲಸದ ದುಡಿಮೆಗಾರರಿಗೆ ಪ್ರಚೋದನೆ ದೊರೆತಂತಾಗಿದೆ ಎಂಬುದು ಎಸ್ತರ್ ಬೋಸರಪ್ (೨೦೦೮) ಅವರ ಅಭಿಪ್ರಾಯವಾಗಿದೆ. ಒಟ್ಟಾರೆ ವಿದ್ವಾಂಸರ ಅಭಿಪ್ರಾಯವನ್ನು ಕೂಲಂಕುಷವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿ ಲಿಂಗಸಂಬಂಧಿ ತಾರತಮ್ಯದ ಕಾರಣದಿಂದಾಗಿ ಮತ್ತು ಅಧಿಕ ಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾದ ಕಾರಣದಿಂದಾಗಿ ಈ ದುಡಿಮೆಯಲ್ಲಿ ಮಹಿಳೆಯರು ಅಧಿಕವಾಗಿ ತೊಡಗಿದ್ದಾರೆ. ಅಲ್ಲದೇ ಭಾರತದ ಬಡ ಮಹಿಳೆಯರಿಗೆ ಇದು ಹೊಂದಾಣಿಕೆಯಾಗುವಂತಹ(ಫ್ಲೆಕ್ಸಿಬಲ್) ದುಡಿಮೆಯಾಗಿರುವುದರಿಂದ ಅಧಿಕ ಸಂಖ್ಯೆಯ ಮಹಿಳೆಯರು ಈ ದುಡಿಮೆಯಲ್ಲಿ ನಿರತರಾಗಿದ್ದಾರೆ.

  ಶ್ರಮಶಕ್ತಿ ವರದಿಯಲ್ಲಿ ದಾಖಲಾಗಿರುವಂತೆ ೧೯೭೭ರ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ೪ ಲಕ್ಷ ಮನೆಗೆಲಸದ ಮಹಿಳೆಯರಿರುವುದು ಬೆಳಕಿಗೆ ಬಂದಿದೆ. ಹೊಸಪೇಟೆಯ ನಗರ ಪ್ರದೇಶದಲ್ಲಿ ಸಮೀಕ್ಷೆಗೊಳಪಡಿಸಲಾದ ೨೫೦ ಮಹಿಳಾ ಮನೆಗೆಲಸದ ದುಡಿಮೆಗಾರರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಅಧ್ಯಯನವು ಮೂರನೆಯ ಉದ್ದೇಶವಾಗಿದ್ದು ಇದರಿಂದ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಲು ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಮೇಲೆ ಬೆಳಕು ಚೆಲ್ಲಬಹುದಾಗಿದೆ.

- ಮಹಿಳಾ ದುಡಿಮೆಗಾರರು ಸಮಾಜದಲ್ಲಿ ಕ್ಷೀಣಿಸಿದ ಧ್ವನಿಯ, ಹತಾಶ ಮನೋಭಾವದ ಸೀಮಾಂತ ದುಡಿಮೆಗಾರರಾಗಿದ್ದಾರೆಂಬುದು ಕ್ಷೇತ್ರಕಾರ್ಯದ ಮೂಲಕ ದೃಢಪಟ್ಟಿದೆ. ಇದಕ್ಕೆ ಪ್ರಮುಖ ಕಾರಣ ಅಧಿಕ ಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾಗಿರುವುದು. ಸಮೀಕ್ಷೆಗೊಳಪಡಿಸಲಾದ ಮಹಿಳೆಯರಲ್ಲಿ ಶೇ. ೬೫.೬ರಷ್ಟು ಅನಕ್ಷರಸ್ಥರಿದ್ದಾರೆ. ಅನಕ್ಷರಸ್ಥ ಮಹಿಳೆಯರು ನಾಗರಿಕ ಪ್ರಪಂಚದ ಅವಕಾಶಗಳಿಂದ ವಂಚಿತರಾಗಬೇಕಾಗುತ್ತದೆ.

ಶಿಕ್ಷಣ ವಂಚಿತ ಮಹಿಳೆಯರು ಕೌಶಲ್ಯರಹಿತರೂ, ವೃತ್ತಿ ತರಬೇತಿ ಇಲ್ಲದವರೂ ಆಗಿರುವುದರಿಂದ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ. ವಿಪರ್ಯಾಸದ ಸಂಗತಿಯೆಂದರೆ ಶೇಕಡ ೩೫ಕ್ಕಿಂತ ಅಧಿಕ ಸಂಖ್ಯೆಯ ಮಹಿಳೆಯರು ತಕ್ಕಮಟ್ಟಿಗೆ ವಿದ್ಯಾಭ್ಯಾಸವನ್ನೂ ಪೂರೈಸಿದ್ದರೂ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿರುವುದು. ಇದರಿಂದ ಭಾರತದಲ್ಲಿ ಬಡತನದ ತೀವ್ರತೆ ಎಷ್ಟೆಂಬುದನ್ನು ಗಮನಿಸಬಹುದಾಗಿದೆ.

- ಮಹಿಳಾ ದುಡಿಮೆಗಾರರನ್ನು ಅವಿವಾಹಿತರು, ವಿವಾಹಿತರು, ವಿಧವೆಯರು ಹಾಗೂ ಪರಿತ್ಯಕ್ತೆಯರು ಎಂದು ಗುರುತಿಸಲಾಗಿದ್ದು, ವಿವಾಹಿತ ಮಹಿಳೆಯರ ಸಂಖ್ಯೆ ಅಧಿಕವಾಗಿದೆ. ಆದರೆ ವಿವಾಹಿತ ಮಹಿಳೆಯರೂ ಸಂಕಷ್ಟಗಳಿಂದ ದೂರವಾಗಿರುವುದಿಲ್ಲ. ಕೌಟುಂಬಿಕ ಸಮಸ್ಯೆಗಳು(ಪತಿಯ ದುರಾಭ್ಯಾಸ, ಅವಿದ್ಯಾವಂತ ಮಕ್ಕಳು) ಬಾಧಿಸುತ್ತಿವೆ. ವಿಧವಾ ಸ್ತ್ರೀಯರು ಹಾಗೂ ಪರಿತ್ಯಕ್ತೆಯರು ಸಮಾಜದ ಕೆಂಗಣ್ಣಿಗೆ ಗುರಿಯಾಗಿ ಯಾತನೆಯ ಬದುಕನ್ನು ಸಾಗಿಸುತ್ತಿದ್ದಾರೆ. ಸರ್ಕಾರ ಕೊಡುತ್ತಿರುವ ವಿಧವಾ ಮಾಶಾಸನ(ರೂ. ೪೦೦)ವನ್ನು ಹೆಚ್ಚಿಸುವ ಕೋರಿಕೆಯನ್ನು ವಿಧವಾ ಸ್ತ್ರೀಯರು ಸಲ್ಲಿಸಿರುತ್ತಾರೆ. ಪರಿತ್ಯಕ್ತ ಮಹಿಳೆಯರು ಇದಾವ ಸಹಾಯ ಧನವಿಲ್ಲದೇ ಮನೆಗೆಲಸದ ದುಡಿಮೆಯಲ್ಲಿಯೇ ಬದುಕನ್ನು ಸಾಗಿಸುತ್ತಿದ್ದಾರೆ.

- ಸಮೀಕ್ಷೆಗೊಳಗಾದ ೨೫೦ ಮಹಿಳಾ ದುಡಿಮೆಗಾರರಲ್ಲಿ ಶೇ. ೧೮ರಷ್ಟು ಮಹಿಳೆಯರು ವಲಸೆ ಬಂದವರಾಗಿದ್ದು, ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ. ಶೇ. ೮೨ರಷ್ಟು ಮಹಿಳೆಯರು ಹೊಸಪೇಟೆಯ ವಾಸಿಗಳಾಗಿದ್ದು ತಮ್ಮ ಚಲನೆಯ ಮೇಲಿನ ನಿರ್ಬಂಧದಿಂದ ಸ್ಥಳೀಯವಾಗಿ ಸಿಗುವ ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿದ್ದಾರೆ.

  ಮನೆಗೆಲಸದ ದುಡಿಮೆಯಲ್ಲಿ ಎಲ್ಲ ಜಾತಿಯ ವರ್ಗದ ಮಹಿಳೆಯರೂ ನಿರತರಾಗಿದ್ದಾರೆ. ಅಧಿಕ ಸಂಖ್ಯೆಯ ಮಹಿಳೆಯರು ಹಿಂದುಳಿದ ವರ್ಗಕ್ಕೆ (ಶೇ.೪೫.೨) ಸೇರಿದವರಾಗಿದ್ದಾರೆ. ಅತೀ ಕಡಿಮೆ (ಶೇ. ೬) ಸಾಮಾನ್ಯ ವರ್ಗದ ಮಹಿಳೆಯರಿದ್ದಾರೆ. ಮಹಿಳೆಯರ ಜಾತಿವಾರು ವರ್ಗೀಕರಣದಲ್ಲಿ ವ್ಯಕ್ತವಾದ ಮಾಹಿತಿಯ ಪ್ರಕಾರ ಸಮಾಜದ ಕೆಳಸಮುದಾಯದ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ (ಶೇ. ೯೪) ಮನೆಗೆಲಸದ ದುಡಿಮೆಯಲ್ಲಿ ನಿರತರಾಗಿರುವುದನ್ನು ಗಮನಿಸಬಹುದು. ಇದರಿಂದ ತಿಳಿದುಬರುವ ಅಂಶವೇನೆಂದರೆ ಬಹಳ ಹಿಂದಿನಿಂದಲೂ ತಳಸಮುದಾಯದ ಜನರನ್ನು ಶಿಕ್ಷಣ ವಂಚಿತರನ್ನಾಗಿ ಮಾಡಿದ್ದರ ಪರಿಣಾಮವಾಗಿ ಇಂತಹ ಜನ ಸಮಾಜದ ಅತೀ ಕೆಳ ಸ್ಥರದ ದುಡಿಮೆಯಲ್ಲಿ ನಿರತರಾಗಬೇಕಾಗಿದೆ.

- ಶಿಕ್ಷಣದ ಅಗತ್ಯತೆಯನ್ನು ಸ್ತ್ರೀಯರು ಮನಗಂಡಿರುತ್ತಾರೆ. ಪ್ರತಿಯೊಬ್ಬರಿಗೂ ಶಿಕ್ಷಣದ ಅವಶ್ಯಕತೆ ಇದೆ. ತಮ್ಮ ಇಬ್ಬರು (ಗಂಡು, ಹೆಣ್ಣು) ಮಕ್ಕಳಿಗೂ ಅಗತ್ಯ ಶಿಕ್ಷಣ ಕೊಡಿಸುತ್ತೇವೆಂಬ ಹೇಳಿಕೆ ಯನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ನೀಡಿರುತ್ತಾರೆ. ಏಕೆಂದರೆ ಶತಶತಮಾನಗಳಿಂದ ಪುರುಷನ ಅಧೀನಳಾಗಿ ಬದುಕಿ ಈಗ ಬಂಧನದಿಂದ ಮುಕ್ತಿಗಾಗಿ ಹಾತೊರೆಯುತ್ತಿದ್ದಾಳೆ. ಶಿಕ್ಷಣದಿಂದ

ವಂಚಿತರಾಗಿರುವ ಮಹಿಳೆಯರು ಸಮಾಜದಲ್ಲಿ ಅನುಭವಿಸುತ್ತಿರುವ ಶೋಷಣೆ, ಯಾತನೆ ಯಾರಿಗೂ ಬೇಡವಾಗಿದೆ. ಶಿಕ್ಷಿತ ಮಹಿಳೆಯರು ಸಮಾಜದಲ್ಲಿ ಹಾಗೂ ಆರ್ಥಿಕತೆಯಲ್ಲಿ ಹೊಂದಿರುವ ಗೌರವ ಹಾಗೂ ಸ್ವಾತಂತ್ರ್ಯವನ್ನು ಅನುಭವಿಸುವ ಇಚ್ಛೆ ಎಲ್ಲ ಮನೆಗೆಲಸದ ಮಹಿಳಾ ದುಡಿಮೆಗಾರರದಾಗಿದೆ. ಈ ಕಾರಣಕ್ಕಾಗಿ ತಮ್ಮ ಮುಂದಿನ ಸಂತತಿಯನ್ನಾದರೂ ಶಿಕ್ಷಣವಂತರನ್ನಾಗಿಸುವ ಛಲವನ್ನು ಮಹಿಳೆಯರು ಹೊಂದಿದ್ದಾರೆ.

- ಹೊಸಪೇಟೆಯ ಮನೆಗೆಲಸದ ದುಡಿಮೆಗಾರರೂ ಸಾಮಾಜಿಕ ಕಟ್ಟುಪಾಡುಗಳಿಂದ ಬಂಧಿತರಾಗಿದ್ದಾರೆ. ಕುಟುಂಬಕ್ಕಾಗಿ ದುಡಿಯುವುದು ಅನಿವಾರ್ಯವಾದರೂ ಕುಟುಂಬದ ಸದಸ್ಯರ ಹಾಗೂ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗಿದೆ. ಮನೆಯ ಹತ್ತು ಹಲವು ಕಟ್ಟಪ್ಪಣೆಗಳನ್ನು ಪಾಲಿಸಬೇಕಾಗಿದೆ. ಇವೆಲ್ಲವುಗಳನ್ನು ದಾಟಿ ದುಡಿಮೆಯ ರಂಗ ಪ್ರವೇಶಿಸುವುದು ಎಂದರೆ ಅದು ಅಸಂಘಟಿತ ವಲಯದ ಕೆಳಸ್ತರದ ದುಡಿಮೆಯಾಗಿರುತ್ತದೆ.

  ನಮ್ಮ ಅಧ್ಯಯನದ ಸಂದರ್ಭದಲ್ಲಿ ವ್ಯಕ್ತವಾದ ಮಾಹಿತಿಯ ಪ್ರಕಾರ ಅಧಿಕ ಸಂಖ್ಯೆಯ ಮಹಿಳೆಯರು (ಶೇ. ೬೦) ವೃತ್ತಿಯಲ್ಲಿ ಜಾತಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದು ಸಮಾಜದ ಅಸಮಾನತೆಯ, ಶೋಷಣೆಯ ಪ್ರತಿರೂಪವಾಗಿದೆ. ಮತ್ತು ಸಮೀಕ್ಷೆಗೊಳಗಾದ ಎಲ್ಲ ಮಹಿಳೆಯರನ್ನು ಸಮಾಜದಲ್ಲಿ ಪುರುಷರಂತೆ ಗೌರವದಿಂದ ಕಾಣುತ್ತಿಲ್ಲ.

- ಮಹಿಳೆಯರಿಲ್ಲದೇ ಪುರುಷರ ಜೀವನ ಅಪೂರ್ಣ ಎಂಬ ನಿಲುವನ್ನು ರಾಮ್‌ನರೇಶ್ ಠಾಕೂರ್ (೨೦೦೧) ಅವರು ವ್ಯಕ್ತಪಡಿಸಿದ್ದಾರೆ. ಆದರೆ ಉದ್ಯೋಗ ಮತ್ತು ಆದಾಯದ ವಿಷಯಕ್ಕೆ ಬಂದಾಗ ಮಹಿಳೆಯರನ್ನು ಪುರುಷನ ಸಮಾನ ಕಾಣಲಾಗುತ್ತಿಲ್ಲ. ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯನ್ನು ಅಂಚಿನ ಉತ್ಪಾದಕಳೆಂದು, ಪತಿಯ ದುಡಿಮೆಗೆ ಪೂರಕವಾಗಿ ಮಹಿಳೆಯ ದುಡಿಮೆ ಎಂದೂ ಪರಿಭಾವಿಸಲಾಗಿದೆ. ಮನೆಗೆಲಸದ ದುಡಿಮೆಗಾರರ ಮನೆಯಲ್ಲಿ ಮಹಿಳೆಯರ ಪತಿಯೇ ಸಮಸ್ತ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಹಾಗೂ ಮಹಿಳೆಯರು ತಾವು ದುಡಿದ ಹಣವನ್ನು ಮನೆಯ ಯಜಮಾನನಿಗೇ ಒಪ್ಪಿಸುತ್ತಿದ್ದಾರೆ. ಮನೆಯ ಪ್ರಮುಖ ವಿಷಯಗಳಲ್ಲಿ (ಮಕ್ಕಳ ಓದು, ಮದುವೆ) ಯಜಮಾನನ ಮಾತೇ ಅಂತಿಮವಾಗಿದೆ. ಇದರ ಮೂಲಕ ಭಾರತೀಯ ಮಹಿಳೆಯ ಅಧೀನ ಪರಿಸ್ಥಿತಿ ಬೆಳಕಿಗೆ ಬಂದಿದೆ.

- ಕುಟುಂಬದಲ್ಲಿ, ಸಮಾಜದಲ್ಲಿ, ವೃತ್ತಿರಂಗದಲ್ಲಿ ನಿರಂತರ ಶೋಷಣೆಯನ್ನು ಅನುಭವಿಸುತ್ತಿದ್ದರೂ ಪ್ರತಿಭಟನಾ ಮಾರ್ಗವನ್ನು ಮಾತ್ರ ಮನೆಗೆಲಸದ ದುಡಿಮೆಗಾರರು ತುಳಿದಿರುವುದಿಲ್ಲ. ಅಸಮಾನತೆ ಎಂಬ ಸಾಮಾಜಿಕ ಪಿಡುಗು ಕುಟುಂಬ ಹಂತದಲ್ಲಿಯೇ ಪ್ರಾರಂಭವಾಗುತ್ತದೆ ಎಂಬುದು ಮಹಿಳೆಯರಿಗೆ ಮನವರಿಕೆಯಾಗಿದೆ. ಅನ್ಯಾಯದ ವಿರುದ್ಧ ಧ್ವನಿ ಎತ್ತಬಹುದಾದ ಹಕ್ಕು ಮಹಿಳೆಗಿದ್ದರೂ ಅದನ್ನು ಮಹಿಳೆ ಸದುಪಯೋಗಪಡಿಸಿಕೊಳ್ಳದೇ ಇರಲು ಕಾರಣವೇನೆಂದರೆ ಸಾಮಾಜಿಕ ಕಟ್ಟುಪಾಡುಗಳು. ಭಾರತದಂತಹ ಸನ್ನಿವೇಶದಲ್ಲಿ ಮಹಿಳೆಯನ್ನು ಅನ್ಯಾಯದ ವಿರುದ್ಧ ಪ್ರತಿಭಟಿಸದಂತೆ

ಕಟ್ಟಿಹಾಕಿರುವ ಸನ್ನಿವೇಶಗಳೇ ಹೆಚ್ಚಾಗಿವೆ. ಅಲ್ಲದೇ ಮನೆಗೆಲಸದ ದುಡಿಮೆಗಾರರಲ್ಲಿ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತದೆ. ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಿಭಾಯಿಸಿ ಮನೆಯ ಜವಾಬ್ದಾರಿಯನ್ನು ನಿಭಾಯಿಸುವುದರಲ್ಲೇ ದಿನದ ಪೂರ್ತಿ ಸಮಯ ಮುಗಿದು ಹೋಗುತ್ತದೆ. ಇನ್ನು ಎಲ್ಲಾ ದುಡಿಮೆಗಾರರೂ ಒಂದು ಕಡೆ ಸಭೆ ಸೇರಿ ತಮ್ಮ ಸಮಸ್ಯೆಗಳ ಕುರಿತು ಚರ್ಚಿಸಲು ಸಮಯದ ಅಭಾವವಿದೆ. ಪ್ರತಿಭಟನೆಯಿಂದ ಮಾತ್ರ ಯಾವುದಾದರೂ ಸಮಸ್ಯೆ ಬೆಳಕಿಗೆ ಬರುವುದು. ಅಲ್ಲದೇ ಅಧಿಕ ಸಂಖ್ಯೆಯ ಮಹಿಳಾ ದುಡಿಮೆಗಾರರು ಅನಕ್ಷರಸ್ಥರಾಗಿರುವುದರಿಂದ ತಮ್ಮ ವೃತ್ತಿ ಸುರಕ್ಷತೆಯ ಬಗ್ಗೆ ಇರುವ ಕಾನೂನುಗಳ ಅರಿವು ಮಹಿಳೆಯರಿಗೆ ಇಲ್ಲದೇ ಇರುವುದು. ಒಂದು ವೇಳೆ ಕಾನೂನುಗಳ ಅರಿವು ಇದ್ದರೂ ಅದನ್ನು ಮಾಲೀಕರಿಂದ ಕೇಳಿ ಪಡೆಯುವಲ್ಲಿ ಇರುವ ಭಯ. ಹೀಗೆ ಸಮಸ್ಯೆಗಳ ಸರಮಾಲೆಯಲ್ಲಿ ಮನೆಗೆಲಸದ ಮಹಿಳೆಯರು ಜೀವನ ನೂಕುತ್ತಿದ್ದಾರೆ. ಮಹಿಳಾ ದುಡಿಮೆಗಾರರು ಕುಟುಂಬದ ಒಳಗಿನ ಮತ್ತು ಹೊರಗಿನ ದುಡಿಮೆಯಲ್ಲಿ ನಿರತರಾಗಿರುವುದರಿಂದ ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಹರಿಸಲಾಗುತ್ತಿಲ್ಲ. ಇದರಿಂದ ೯೬ ಮಹಿಳೆಯರ ಮಕ್ಕಳು ಶಾಲೆಯನ್ನು ಅರ್ಧಕ್ಕೇ ನಿಲ್ಲಿಸಿರುತ್ತಾರೆ.

ನಮ್ಮ ಅಧ್ಯಯನದ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿಯಂತೆ ಆರ್ಥಿಕ ಮುಗ್ಗಟ್ಟಿನಿಂದ ಶೇ. ೮೮.೫೪ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಬಡತನದ ವಿಷವರ್ತುಲ ಮಹಿಳೆಯರನ್ನು ವಿದ್ಯಾಭ್ಯಾಸ ವಂಚಿತರನ್ನಾಗಿ ಮಾಡಿರುವುದಲ್ಲದೇ ಇದು ಮಹಿಳೆಯರ ಮಕ್ಕಳನ್ನೂ ಆವರಿಸಿದೆ. ಮಹಿಳೆಯರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಹಂಬಲವನ್ನು ಹೊಂದಿದವರಾಗಿದ್ದರೂ ಅವರ ಬಯಕೆ ಪೂರ್ಣ ಪ್ರಮಾಣದಲ್ಲಿ ಈಡೇರುತ್ತಿಲ್ಲ. ಅಲ್ಲದೇ ಕೌಟುಂಬಿಕ ಕಾರಣಗಳಿಂದಲೂ, ಮಕ್ಕಳ ಅನಾರೋಗ್ಯದಿಂದಲೂ ಮಕ್ಕಳು ಶಾಲೆಯನ್ನು ಅರ್ಧಕ್ಕೆ ನಿಲ್ಲಿಸುವಂತಾಗಿದೆ. ಮಹಿಳೆಯರು ಮನೆಗೆಲಸದ ದುಡಿಮೆಯಲ್ಲಿ ನಿರತರಾಗಲು ಆರ್ಥಿಕ ಪರಿಸ್ಥಿತಿಗಳು ಹೇಗೆ ಕಾರಣವಾಗಿವೆ ಎಂಬ ಮಾಹಿತಿ ಈ ಮುಂದಿನಂತೆ ವ್ಯಕ್ತವಾಗಿದೆ.

- ಮಹಿಳೆಯರು ಸಾಮನ್ಯವಾಗಿ ಉದ್ಯೋಗ ಕ್ಷೇತ್ರಕ್ಕೆ ಬರುವುದು ಕುಟುಂಬದಲ್ಲಿ ಆಕಸ್ಮಿಕ ಅವಘಡಗಳು ತಲೆದೋರಿದಾಗ. ಕುಟುಂಬದ ಯಜಮಾನನ ದುಡಿಮೆಯಿಂದ ಸಂಸಾರ ಸಾಗಿಸಲು ಸಾಧ್ಯವಾಗದೇ ಹೋದಾಗ ಮತ್ತು ಮನೆಯ ಯಜಮಾನ ಅನಾರೋಗ್ಯ ಪೀಡಿತನಾದಾಗ ಮಹಿಳೆ ತನ್ನ ಕುಟುಂಬವನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಲು ದುಡಿಮೆಯಲ್ಲಿ ತೊಡಗುತ್ತಾಳೆ. ಆದರೆ ಶಿಕ್ಷಣ ಮತ್ತು ವೃತ್ತಿ ಕೌಶಲ್ಯವನ್ನು ಹೊಂದದಿರುವ ಕಾರಣದಿಂದಾಗಿ ಅಸಂಘಟಿತ ವಲಯಕ್ಕೆ ಸೀಮಿತಳಾಗುತ್ತಾಳೆ.
- ಅಸಂಘಟಿತ ವಲಯದ ಕೆಳಸ್ತರದ ದುಡಿಮೆ ಎನಿಸಿಕೊಂಡ ಮನೆಗೆಲಸದ ದುಡಿಮೆಯಲ್ಲಿ ಮಹಿಳೆಯರು ವಸತಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಸಮೀಕ್ಷೆಗೊಳಗಾದ ೨೫೦ ಮಹಿಳೆಯರಲ್ಲಿ ಶೇ. ೮೦.೮ರಷ್ಟು ಮಹಿಳೆಯರು ಕಚ್ಚಾಮನೆಯಲ್ಲಿ ವಾಸವಾಗಿದ್ದಾರೆ. ಇನ್ನುಳಿದವರು ಗುಡಿಸಲು ವಾಸಿಗಳಾಗಿದ್ದಾರೆ. ಮಹಿಳೆಯರ ದುಡಿಮೆ ಜೀವನ ನಿರ್ವಹಣೆಗೆ ಸಾಕಾಗದೇ ಇದ್ದಾಗ ಮನೆಯ

ನಿರ್ಮಾಣ ಹಾಗೂ ದುರಸ್ತಿ ದುಸ್ಸಾಹಸದ ಮಾತಾಗಿದೆ. ಈ ಕಾರಣಗಳಿಂದಾಗಿ ಮಹಿಳೆಯರು ಸರ್ಕಾರದ ಸಹಾಯಕ್ಕಾಗಿ ಎದುರು ನೋಡುತ್ತಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಮನೆಗೆಲಸಗಾರರು ದಿನವಿಡೀ ಕಷ್ಟಪಟ್ಟು ದುಡಿದರೂ ನೆಮ್ಮದಿಯಿಂದ ರಾತ್ರಿಯನ್ನು ಕಳೆಯುವ ಭಾಗ್ಯವನ್ನು ಪಡೆದಿರುವುದಿಲ್ಲ.

ನಮ್ಮ ನಮೂನೆಯಲ್ಲಿಯ ಶೇಕಡ ೭೧.೨ರಷ್ಟು ಮಹಿಳೆಯರು ಸ್ವಂತ ಮನೆಯಲ್ಲಿ ವಾಸ ಮಾಡುತ್ತಿರುವರಾದರೂ ಅವುಗಳು ವಾಸಯೋಗ್ಯವಾಗಿರುವುದಿಲ್ಲ. ಕಚ್ಚಾ ಸ್ವರೂಪದಲ್ಲಿದ್ದು ದುರಸ್ತಿ ಮಾಡಿಸಲು ಮಹಿಳೆಯರಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಅಲ್ಲದೇ ಕೇವಲ ಎರಡೇ ಕೋಣೆಗಳನ್ನು ಹೊಂದಿರುವುದರಿಂದ ಮನೆಯ ಎಲ್ಲ ಸದಸ್ಯರಿಗೂ ಸ್ಥಳದ ಅಭಾವ ಕಾಡುತ್ತಿದೆ. ಅಧಿಕ ಸಂಖ್ಯೆಯ ಮಹಿಳೆಯರು ಮನೆಯಲ್ಲಿ ಕೇವಲ ಗೃಹಬಳಕೆಯ ವಸ್ತುಗಳನ್ನು ಹೊಂದಿದ್ದಾರೆ. ಯಾವ ಮಹಿಳೆಯರ ಮನೆಯಲ್ಲೂ ಐಶಾರಾಮಿ ವಸ್ತುಗಳಿರುವುದಿಲ್ಲ.

- ಮಹಿಳೆಯರ ಕೌಟುಂಬಿಕ ಆದಾಯವು ಮಾಸಿಕ ಮೂರು ಸಾವಿರಕ್ಕಿಂತ ಅಧಿಕವಿರುವ ಕುಟುಂಬಗಳೇ ಅಧಿಕವಿರುವುದು ಗಮನಾರ್ಹ ಸಂಗತಿಯಾಗಿದೆ. ಆದರೂ ಕುಟುಂಬದ ಸದಸ್ಯರ ಸಂಖ್ಯೆ ಅಧಿಕವಿರುವುದರಿಂದ ಹಾಗೂ ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆ ನಾಗಾಲೋಟದಲ್ಲಿ ಏರುತ್ತಿರುವುದರಿಂದ ಹೆಚ್ಚಿದ ಆದಾಯವು ಜೀವನ ನಿರ್ವಹಣೆಗೆ ಸಾಕಾಗದೇ ಅನೇಕ ಮಹಿಳೆಯರು ಸಾಲಗಾರರಾಗಿದ್ದಾರೆ. ಮಕ್ಕಳ ಅನಾರೋಗ್ಯದ ಪರಿಸ್ಥಿತಿಯಿಂದಾಗಿ, ಮನೆ ದುರಸ್ಥಿಗಾಗಿ, ಮಕ್ಕಳ ಓದಿಗಾಗಿ ಸಾಲ ಮಾಡಿದ್ದರೂ, ಮಹಿಳೆಯರು ತಾವೇ ದುಡಿದು ಈ ಸಾಲವನ್ನು ತೀರಿಸಬೇಕಾಗಿದೆ. ಈ ಕಾರಣಗಳಿಂದಾಗಿ ಮಹಿಳೆಯರು ತಮಗೆ ಸುಲಭವಾಗಿ ಸಿಗುವಂತಹ ಮನೆಗೆಲಸದ ದುಡಿಮೆಯಲ್ಲಿ ತೊಡಗಿದ್ದಾರೆ.

- ಮಹಿಳೆಯರು ರಾಜಕೀಯ ಪ್ರಜ್ಞೆಯುಳ್ಳವರಾಗಿದ್ದಾರೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ಶೇ. ೭೫.೨ರಷ್ಟು ಮಹಿಳೆಯರು ಮತದಾನದ ಗುರುತಿನ ಚೀಟಿ ಹೊಂದಿದ್ದು, ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ. ತಮ್ಮ ಸಮಸ್ಯೆಗಳನ್ನು ಪರಿಹರಿಸುವ ನಾಯಕರನ್ನು ಆರಿಸಿ ತರಲು ಕಾಯ್ದು ಕುಳಿತಿದ್ದಾರೆ. ಚುನಾವಣೆಯಲ್ಲಿ ಅಕ್ರಮ ನಡೆಯುತ್ತಿರುವುದು ಮಹಿಳೆಯರಿಗೆ ತಿಳಿದ ವಿಷಯವಾಗಿದೆ. ಚುನಾಯಿತ ಪ್ರತಿನಿಧಿಗಳು ಪ್ರಜೆಗಳ ಕಲ್ಯಾಣಕ್ಕಾಗಿ ದುಡಿಯಬೇಕು ಎಂಬುದು ಮಹಿಳೆಯರ ಆಶಯವಾಗಿದೆ.

- ಮನೆಗೆಲಸದ ಮಹಿಳಾ ದುಡಿಮೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಇಲ್ಲಿನ ದುಡಿಮೆಗಾರರಿಗೆ ಸಾಮಾಜಿಕ ಭದ್ರತಾ ಕ್ರಮಗಳು ಅನ್ವಯವಾಗದಿರಲು ಕಾರಣಗಳನ್ನು ವಿಶ್ಲೇಷಿಸುವುದು ಅಧ್ಯಯನದ ನಾಲ್ಕನೆಯ ಉದ್ದೇಶವಾಗಿರುತ್ತದೆ.

- ಮನೆಗೆಲಸವು ಮಹಿಳೆಯರಿಗಾಗಿಯೇ ಇರುವ ಕೆಲಸ ಎಂಬುದು ಶ್ರಮಶಕ್ತಿ (೧೯೮೮) ವರದಿಯಲ್ಲಿ ಉಲ್ಲೇಖಿತವಾಗಿದೆ. ಮಹಿಳೆಯರು ತಮಗೆ ಹೊಂದಾಣಿಕೆಯಾಗುವ ಕೆಲಸ ಎಂದು ಈ ಕೆಲಸದಲ್ಲಿ

ತೊಡಗಿದ್ದರೂ ಅನೇಕ ಸಮಸ್ಯೆಗಳನ್ನೆದುರಿಸಬೇಕಾಗಿದೆ. ಮೊದಲನೆಯದಾಗಿ ಸಮಾಜದ ಅತೀ ಕೆಳ ಸ್ತರದ ದುಡಿಮೆ ಎಂದೇ ಗುರುತಿಸಲಾದ ಮನೆಗೆಲಸದ ದುಡಿಮೆಯಲ್ಲಿ ಮಹಿಳೆಯರು ತೊಡಗಲು ಕಾರಣವಾದ ಅಂಶಗಳನ್ನು ಪರಿಶೀಲಿಸಲಾಗಿದೆ. ಮನೆಗೆಲಸದ ಆಯ್ಕೆಗೆ ಕಾರಣ ಅನಕ್ಷರತೆ ಎಂದು ನಮ್ಮ ನಮೂನೆಯಲ್ಲಿಯ ಶೇ. ೪೬ರಷ್ಟು ಮಹಿಳೆಯರ ಅಭಿಪ್ರಾಯವಾಗಿದೆ. ಅಲ್ಲದೇ ಶೇ.೪೮ ರಷ್ಟು ಮಹಿಳೆಯರು ಮನೆಯ ನಿರ್ವಹಣೆಗಾಗಿ ಈ ದುಡಿಮೆಯಲ್ಲಿ ನಿರತರಾಗಿದ್ದಾರೆ. ಮನೆಗೆಲಸದ ದುಡಿಮೆಗೆ ಹೆಚ್ಚಿನ ಕೌಶಲ್ಯ (ಶಿಕ್ಷಣ, ತರಬೇತಿ) ಬೇಕಾಗಿರುವುದಿಲ್ಲವಾದ್ದರಿಂದ ಯಾವ ಶ್ರಮವಿಲ್ಲದೇ ಅನಕ್ಷರಸ್ಥ ಮಹಿಳೆಯರಿಗೆ ಈ ಕೆಲಸ ಲಭ್ಯವಾಗುತ್ತದೆ.

- ಮನೆಗೆಲಸದ ಮಹಿಳೆಯರೂ ಕೂಡ ತಮ್ಮ ಕುಟುಂಬದ ವೆಚ್ಚ ಅಧಿಕಗೊಂಡಾಗ ಹೆಚ್ಚು ಹೆಚ್ಚು ಮನೆಗಳನ್ನು ಕೆಲಸಕ್ಕಾಗಿ ಒಪ್ಪಿಕೊಂಡಿದ್ದಾರೆ. ಇದರಿಂದಲೂ ಜೀವನ ನಿರ್ವಹಣೆ ಆಗದೇ ಹೋದಾಗ ಮಹಿಳೆಯರು ಕೆಲವು ಉಪಕಸುಬುಗಳಲ್ಲಿ (ಹೂಕಟ್ಟುವ ಹಾಗೂ ದೀಪದ ಬತ್ತಿಮಾಡುವ) ತೊಡಗಿಕೊಂಡಿದ್ದಾರೆ. ಅಲ್ಲದೇ ದಿನದ ಹೆಚ್ಚು ಸಮಯ ಹೊರಗಿನ ದುಡಿಮೆಯಲ್ಲಿ ನಿರತರಾಗಿದ್ದಾರೆ. ಶೇ ೨೦ಕ್ಕೂ ಅಧಿಕ ಮಹಿಳೆಯರು ಒಂದು ಮನೆಯಲ್ಲಿ ಎರಡು ಗಂಟೆಗಳಿಗೂ ಅಧಿಕ ಸಮಯ ಕಾರ್ಯನಿರತರಾಗಿರಬೇಕಾಗಿದೆ. ಕೇವಲ ದೈಹಿಕ ಶ್ರಮವನ್ನೇ ನಂಬಿಕೊಂಡು ದಿನದ ದೀರ್ಘ ಅವಧಿಗಳವರೆಗೆ ದುಡಿಮೆಯಲ್ಲಿ ನಿರತರಾಗಿ ತಮ್ಮ ಆರೋಗ್ಯ ಹಾಗೂ ಮನೆಯ ಹಿತಾಸಕ್ತಿಗಳನ್ನು ಕಡೆಗಣಿಸುವುದರಿಂದ ಕುಟುಂಬದ ಸದಸ್ಯರ ಮೇಲೂ ಮಹಿಳೆಯರ ದುಡಿಮೆ ದುಷ್ಪರಿಣಾಮ ಬೀರುತ್ತಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಬಡತನದ ಪರಿಸ್ಥಿತಿಯಿಂದಾಗಿ ಮಹಿಳೆಯರು ಪೌಷ್ಠಿಕಾಂಶದ ಕೊರತೆ ಹಾಗೂ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇಂತಹ ಮಹಿಳೆಯರು ಕಟ್ಟಡ ನಿರ್ಮಾಣ, ಹಾಗೂ ಕೃಷಿ ಕೆಲಸವನ್ನು ನಿರ್ವಹಿಸಲು ಶಕ್ತರಾಗಿರುವುದಿಲ್ಲ. ಅಲ್ಲದೇ ಮಹಿಳೆಯರು ಈ ಕೆಲಸಗಳಿಗಾಗಿ ದೂರದ ಸ್ಥಳಗಳಿಗೆ ತೆರಳಬೇಕಾಗಿ ರುವುದರಿಂದ ತಮ್ಮ ಮನೆಯ ಹತ್ತಿರವೇ ಲಭ್ಯವಾಗುವ ಮನೆಗೆಲಸದ ದುಡಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮನೆಯಲ್ಲಿ ಹಣಕಾಸಿನ ತೊಂದರೆ ಎದುರಾದಾಗ ಮಹಿಳೆ ವೃತ್ತಿರಂಗಕ್ಕೆ ಧುಮುಕಬೇಕಾಗುತ್ತದೆ. ಅಲ್ಲಿಯವರೆಗೆ ಮನೆಯಲ್ಲಿ ಕೂಲಿರಹಿತ ದುಡಿಮೆಯಲ್ಲಿ ನಿರತಳಾಗಿರುತ್ತಾಳೆ. ಮನೆಯಲ್ಲಿಯ ಆರ್ಥಿಕ ಬಿಕ್ಕಟ್ಟಿನಿಂದ ಕೂಲಿಸಹಿತ ದುಡಿಮೆಗೆ ಬರುತ್ತಾರೆ. ಹೊಸಪೇಟೆಯ ಶೇ.೪೮ ರಷ್ಟು ಮಹಿಳೆಯರು ಕುಟುಂಬ ನಿರ್ವಹಣೆಗಾಗಿ ಮನೆಗೆಲಸದ ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ.

ಮನೆಗೆಲಸದ ದುಡಿಮೆಯಲ್ಲಿ ನಿರತರಾದ ಮಹಿಳೆಯರಿಗೆ ಯಾವ ರೀತಿಯ ಸಾಮಾಜಿಕ ಭದ್ರತಾ ಕ್ರಮಗಳು ಅನ್ವಯವಾಗುವುದಿಲ್ಲ. ಏಕೆಂದರೆ ಇಲ್ಲಿನ ದುಡಿಮೆಗಾರರು ಸಂಘಟಿತ ವಲಯದ ದುಡಿಮೆ ಗಾರರಂತೆ ವೃತ್ತಿ ನೈಪುಣ್ಯತೆ ಮತ್ತು ಶಿಕ್ಷಣವನ್ನು ಪಡೆಯದೇ ಇರುವುದು. ಅಲ್ಲದೇ ಇಲ್ಲಿನ ದುಡಿಮೆಗಳು ನಿರಂತರವಾಗಿರುವುದಿಲ್ಲ. ಮಹಿಳೆಯರು ತಮ್ಮ ವೃತ್ತಿಯನ್ನು ಆಗಿಂದಾಗ್ಗೆ ಬದಲಾವಣೆ ಮಾಡುತ್ತಿರುತ್ತಾರೆ. ಈ ಕಾರಣದಿಂದಾಗಿ ಇಂತಹ ದುಡಿಮೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ತರಲಾಗುತ್ತಿಲ್ಲ.

'ಹಸಿದಿರುವಾಗ ಬುದ್ಧಿವಂತಿಕೆ ಬೆಳೆಯಲು ಸಾಧ್ಯವಿಲ್ಲ' ಎಂಬ ಅಮರ್ತ್ಯಸೇನ ಅವರ ಹೇಳಿಕೆಯಂತೆ ಬಡತನದ ವಿಷ ವರ್ತುಲದಲ್ಲಿ ತೊಳಲಾಡುತ್ತಿರುವ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿದ್ದಾರೆ. ಅಸ್ತಿತ್ವದಲ್ಲಿರುವ ಕಾನೂನುಗಳ ಅರಿವಿಲ್ಲದೇ ವೃತ್ತಿ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮೊದಲನೆಯದಾಗಿ ಮನೆಗೆಲಸವನ್ನು ದುಡಿಮೆ ಎಂದು ಪರಿಗಣಿಸದೇ ಕೇವಲ ಮಹಿಳೆಯರು ತಮ್ಮ ಜೀವನ ನಿರ್ವಹಣೆಗೆ ಮಾಡುವ ಕೆಲಸ ಎಂದೇ ಪರಿಗಣಿಸಿ ಮನೆಗೆಲಸದ ದುಡಿಮೆಯನ್ನು ಅಪಮೌಲ್ಯಗೊಳಿಸಲಾಗಿದೆ.

ಅಸ್ತಿತ್ವದಲ್ಲಿರುವ ಕಾನೂನುಗಳೂ ಸಹಿತ ಮನೆಗೆಲಸದ ದುಡಿಮೆಗಾರರಿಗೆ ಅನ್ವಯಿಸದೇ ಇರಲು ಪ್ರಮುಖ ಕಾರಣ ಮಹಿಳೆಯರ ಹೆಸರು ಸರ್ಕಾರಿ ದಾಖಲೆಗಳಲ್ಲಿ ನೋಂದಣಿಯಾಗದೇ ಇರುವುದು. ಈ ಕಾರಣದಿಂದ ದುಡಿಮೆಗಾರರ ಸಂಖ್ಯೆ ನೀತಿನಿರೂಪಕರಿಗೆ ಗೊತ್ತಾಗದೇ ಮಹಿಳೆಯರ ಪರವಾಗಿ ಕಾನೂನುಗಳನ್ನು ರಚಿಸುವಲ್ಲಿ ಅಡೆತಡೆಯಾಗಿದೆ.

- ಮನೆಗೆಲಸದ ದುಡಿಮೆಯು ಅನೌಪಚಾರಿಕ ವಲಯದ ಗುಣಲಕ್ಷಣಗಳನ್ನು ಹೊಂದಿದ್ದು ಈ ಕೆಲಸಕ್ಕೆ ಸರ್ಕಾರದ ಹಾಗು ಯಾವ ಸಂಘಸಂಸ್ಥೆಗಳ ಬೆಂಬಲವಿರುವುದಿಲ್ಲ. ಈ ಕಾರಣದಿಂದ ಮನೆಮಾಲೀಕರು ತಮ್ಮ ಮನೆಯ ಕೆಲಸಗಾರರಿಗೆ ಯಾವುದೇ ಸೌಲಭ್ಯವನ್ನು ಮಾಡಿಕೊಟ್ಟಿರುವುದಿಲ್ಲ. ಮಹಿಳೆಯರಿಗೆ ರಜಾ ಸೌಲಭ್ಯವಿಲ್ಲ, ಕಡಿಮೆ ವೇತನವನ್ನು ಪಡೆಯುತ್ತಿದ್ದಾರೆ ಹಾಗೂ ಯಾವುದೇ ಸಾಮಾಜಿಕ ಭದ್ರತೆ (ಹೆರಿಗೆ ರಜೆ, ಪಿಂಚಣಿ ಸೌಲಭ್ಯ) ಗಳೂ ಇರುವುದಿಲ್ಲ. ಮನೆಮಾಲೀಕರಿಗೆ ಬೇಕಾದಾಗ ಮಾತ್ರ ಕೆಲಸ ನಿರತರಾಗಿರಬೇಕಾಗಿದೆ. ಹಾಗೂ ಮಾಸಿಕ ವೇತನವಲ್ಲದೇ ಇತರೇ ಸೌಲಭ್ಯಗಳೂ(ಊಟ, ಕಾಫಿ, ತಿಂಡಿ, ಬಟ್ಟೆ, ಸಾಲ) ಮನೆಮಾಲೀಕರ ಕೃಪೆಯಿಂದಲೇ ದೊರೆಯ ಬೇಕಾಗಿದೆ.

ಆದರೂ ಮಹಿಳೆಯರು ತಮ್ಮ ಹಕ್ಕುಗಳನ್ನು ಮಂಡಿಸಲು ಅಸಹಾಯಕರಾಗಿದ್ದಾರೆ. ತಮ್ಮ ಕೆಲಸವು ಹಂಗಾಮಿಯಾಗಿದ್ದು ಯಾವುದೇ ವೃತ್ತಿ ಸುರಕ್ಷತೆ ಇಲ್ಲದ್ದು ಎಂಬ ಅರಿವು ಮಹಿಳೆಯರಿಗಿದೆ. ಈ ಕಾರಣಕ್ಕಾಗಿ ಮಹಿಳೆಯರು ಪ್ರತಿಭಟನೆಯ ಹಾದಿ ತುಳಿದಿರುವುದಿಲ್ಲ. ಒಂದು ವೇಳೆ ಪ್ರತಿಭಟನೆಯ ಮಾರ್ಗವನ್ನು ತುಳಿದಿದ್ದೇ ಆದರೆ ಉದ್ಯೋಗ ವಂಚಿತರಾಗಬೇಕಾಗುತ್ತದೆ. ನಮ್ಮ ನಮೂನೆಯಲ್ಲಿಯ ಶೇ.೯೪ ಕ್ಕಿಂತ ಅಧಿಕ ಮಹಿಳೆಯರು ತಮ್ಮ ವೃತ್ತಿಯಲ್ಲಿ ತೃಪ್ತಿಯನ್ನು ಹೊಂದಿರುವುದಿಲ್ಲ. ಮನೆಗೆಲಸದ ವೃತ್ತಿಗಿಂತ ಹೆಚ್ಚಿನ ವೇತನ ಸಿಗುವ ಕೆಲಸ ಸಿಕ್ಕರೆ ತಮ್ಮ ವೃತ್ತಿಯನ್ನು ಬದಲಾಯಿಸುವ ಇಚ್ಛೆ ವ್ಯಕ್ತ ಪಡಿಸಿದ್ದಾರೆ.

ಈ ಎಲ್ಲ ಸಮಸ್ಯೆಗಳ ಹೊರತಾಗಿಯೂ ಮಹಿಳೆಯರು ಅನಿವಾರ್ಯವಾಗಿ ಈ ಕೆಲಸದಲ್ಲಿ ಮುಂದುವರೆದಿದ್ದಾರೆ. ತಮ್ಮ ಪರಿಸ್ಥಿತಿಯಿಂದ ಹೊರಬರಲು ಸರ್ಕಾರ ಹಾಗೂ ಚುನಾಯಿತ ಪ್ರತಿನಿಧಿಗಳ ಸಹಾಯವನ್ನು ನಿರೀಕ್ಷಿಸುತ್ತಿದ್ದಾರೆ. ಅರ್ಜುನ್ ಸೇನ ಗುಪ್ತಾ ಅವರ ವರದಿ(೨೦೦೭)ಯಲ್ಲಿ 'ಅಸಂಘಟಿತ ವಲಯದ ದುಡಿಮೆಗಾರರು ಆರ್ಥಿಕತೆಯಲ್ಲಿ ಅತೀ ಕೆಳವರ್ಗಕ್ಕೆ ಸೇರಿದವರಾಗಿದ್ದಾರೆ. ಅವರು ಇನ್ನೂ ಕೆಳಗೆ ಬೀಳದಂತೆ ಸಾಮಾಜಿಕ ಕಟ್ಟೆಯನ್ನು ಕಟ್ಟಬೇಕು' ಎಂದು ಶಿಫಾರಸ್ಸು ಮಾಡಿದ್ದಾರೆ.

೭.೨ ಮನೆಗೆಲಸದ ಮಹಿಳಾ ದುಡಿಮೆಗಾರರ ಸ್ಥಿತಿ-ಗತಿಗಳ ಅವಲೋಕನ

ಹೊಸಪೇಟೆಯ ಮಹಿಳಾ ಮನೆಗೆಲಸಗಾರರ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಈ ಕೆಳಗಿನ ಅಂಶಗಳು ಬೆಳಕಿಗೆ ಬಂದಿವೆ.

ಸಕಾರಾತ್ಮಕ ಅಂಶಗಳು

ಮನೆಗೆಲಸದ ಮಹಿಳಾ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ (ಶೇ. ೬೫.೬) ಅನಕ್ಷರಸ್ಥರಾಗಿರುವುದು ನಮ್ಮ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಅವರ ಸಧ್ಯದ ಸ್ಥಿತಿಯಾಗಿದೆ. ಆದರೆ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶಿಕ್ಷಣದ ಪ್ರಾಮುಖ್ಯತೆ ಮನವರಿಕೆಯಾಗಿದೆ. ಶಿಕ್ಷಿತ ಮಹಿಳೆಯರಂತೆ ಗೌರವದ ಸ್ಥಾನ ಮಾನವನ್ನು ಹೊಂದುವ ಬಯಕೆ ವ್ಯಕ್ತಪಡಿಸಿದ್ದಾರೆ.

ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಿಂದ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಸಿಗುತ್ತಿಲ್ಲ. ಈ ಕಾರಣದಿಂದ ಅಧಿಕ ಸಂಖ್ಯೆಯ ಮಹಿಳೆಯರು ಸಂಘಟಿತ ವಲಯದ ಉದ್ಯೋಗದಿಂದ ವಂಚಿತರಾದ ಮಾಹಿತಿ ನಮ್ಮ ಅಧ್ಯಯನದಿಂದ ದೃಢಪಟ್ಟಿದೆ. ಆದರೆ ಶಿಕ್ಷಣದ ಮಹತ್ವವನ್ನು ಮನಗಂಡಿರುವ ಮಹಿಳೆಯರು ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಸಮಾನ ವಿದ್ಯಾಭ್ಯಾಸದ ಅವಕಾಶಗಳನ್ನು ಮಾಡಿ ಕೊಡುವುದಾಗಿ ತಿಳಿಸಿದ್ದಾರೆ. ಇದರಿಂದ ಲಿಂಗಸಂಬಂಧಿ ತಾರತಮ್ಯ ಕುಟುಂಬ ಹಂತದಿಂದ ಕ್ರಮೇಣ ಮರೆಯಾಗುತ್ತಿರುವ ಸೂಚನೆಗಳು ಕಾಣುತ್ತಿವೆ.

ನಮ್ಮ ಸಮಾಜದಲ್ಲಿ ಜಾತಿ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಆದರೂ ನಮ್ಮ ನಮೂನೆಯಲ್ಲಿ ಶೇ. ೪೦ರಷ್ಟು ಮಹಿಳೆಯರು ತಮ್ಮ ಮನೆಯ ಎಲ್ಲ ಕೋಣೆಗಳಿಗೆ (ಅಡುಗೆ ಮನೆ ಮತ್ತು ದೇವರ ಮನೆ) ಅನ್ಯ ಜಾತಿಯ ಮಹಿಳೆಯರಿಗೆ ಪ್ರವೇಶಾವಕಾಶ ಮಾಡಿಕೊಡುತ್ತಿದ್ದಾರೆ. ಇದರಿಂದ ಶತಶತಮಾನಗಳಿಂದ ಆಚರಿಸಿಕೊಂಡು ಬಂದ ಜಾತಿ ವ್ಯವಸ್ಥೆಯಲ್ಲಿ ಕೊಂಚ ಸಡಿಲಿಕೆಯಾಗುತ್ತಿರುವ ಲಕ್ಷಣಗಳು ಎದ್ದು ಕಾಣುತ್ತಿವೆ.

ನಗರೀಕರಣವು ಅಭಿವೃದ್ಧಿಶೀಲ ರಾಷ್ಟ್ರಗಳ ಅಗತ್ಯತೆ ಆಗಿದೆ. ನಮ್ಮ ನಮೂನೆಯಲ್ಲಿ ಶೇ. ೧೮ಕ್ಕಿಂತ ಅಧಿಕ ಮಹಿಳೆಯರು ಗ್ರಾಮಗಳಿಂದ ವಲಸೆ ಬಂದು ನಗರದಲ್ಲಿ ನೆಲೆಸಿರುವುದರಿಂದ ನಗರೀಕರಣ ಪ್ರಕ್ರಿಯೆಗೆ ಪುಷ್ಠಿ ಒದಗಿಸಿದಂತಾಗಿದೆ.

ನಕಾರಾತ್ಮಕ ಅಂಶಗಳು

ಮನೆಗೆಲಸದ ಮಹಿಳಾ ದುಡಿಮೆಗಾರರು ದಿನದ ಎಂಟು ಗಂಟೆಗಳಿಗೂ ಅಧಿಕ ಸಮಯ ಹೊರಗಿನ ದುಡಿಮೆಯಲ್ಲಿ ತೊಡಗಿದಾಗ್ಯೂ ಅವರ ನಾಮರೂಪಿ ಮತ್ತು ನೈಜಕೂಲಿಯಲ್ಲಿ ಏನೂ ಬದಲಾವಣೆ ಕಂಡುಬಂದಿರುವುದಿಲ್ಲ.

೭.೩ ಸಲಹೆಗಳು

ಅಸಂಘಟಿತ ವಲಯದ ದುಡಿಮೆಗಾರರಿಂದ ಶೇ. ೬೫ರಷ್ಟು ಆದಾಯ ನಮ್ಮ ರಾಷ್ಟ್ರೀಯ ಆದಾಯಕ್ಕೆ ಸೇರ್ಪಡೆಯಾಗುತ್ತಿರುವುದು ಇದುವರೆಗೆ ನಡೆದ ಅಧ್ಯಯನಗಳಿಂದ ತಿಳಿದು ಬಂದ

ಸಂಗತಿಯಾಗಿದೆ. ಅಲ್ಲದೇ ಅಸಂಘಟಿತ ವಲಯವು ಶೇ. ೯೦ರಷ್ಟು ಜನರಿಗೆ ಉದ್ಯೋಗ ಒದಗಿಸಿದೆ. ಸರ್ಕಾರ ಇಲ್ಲಿನ ದುಡಿಮೆಗಾರರ ಕ್ಷೇಮಾಭಿವೃದ್ಧಿಯತ್ತ ಗಮನ ಹರಿಸಬೇಕಾಗಿರುವ ದೃಷ್ಟಿಯಿಂದ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ.

ಸಂಘಟಿತ ವಲಯದ ದುಡಿಮೆಗಾರರಂತೆ ಅಸಂಘಟಿತ ವಲಯದ ದುಡಿಮೆಗಾರರನ್ನು ಕಾನೂನಿನ ಚೌಕಟ್ಟಿನಲ್ಲಿ ತರುವ ವ್ಯವಸ್ಥೆ ನಡೆಯಬೇಕಾಗಿದೆ.

ಅಸಂಘಟಿತ ವಲಯದ ಕೆಲಸದಲ್ಲಿ ನಿರತರಾದ ಮಹಿಳೆಯರನ್ನು ದುಡಿಮೆಗಾರರು ಎಂದೂ ಅವರ ಕೆಲಸವನ್ನು ದುಡಿಮೆ ಎಂದೂ ಪರಿಗಣಿಸಬೇಕು. ಮಹಿಳೆಯರಿಗೆ ವಾರದ ರಜೆ, ಕೆಲಸದ ಭದ್ರತೆಯ ಜೊತೆ ವೃತ್ತಿ ಸುರಕ್ಷತೆಯನ್ನೂ ಒದಗಿಸಿ ಕೊಡಬೇಕು.

ಮನೆಗೆಲಸದ ಮಹಿಳಾ ದುಡಿಮೆಗಾರರ ನೋಂದಣಿ ಕಾರ್ಯ ನಡೆದಿರುವುದಿಲ್ಲ. ಈ ಕಾರಣದಿಂದ ಮಹಿಳಾ ಮನೆಗೆಲಸದ ಶ್ರಮಿಕರ ಗಾತ್ರ ನಿಖರವಾಗಿ ತಿಳಿದು ಬಂದಿರುವುದಿಲ್ಲ. ಕಾರಣ ಅವರ ನೋಂದಣಿ ಕಾರ್ಯ ಶೀಘ್ರವಾಗಿ ನಡೆಯಬೇಕಾಗಿದೆ.

ಅಧಿಕ ಸಂಖ್ಯೆಯ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಸರ್ಕಾರದ ಕಾರ್ಯ ಯೋಜನೆಗಳು ಮಹಿಳೆಯರಿಗೆ ಅರ್ಥವಾಗುತ್ತಿಲ್ಲ. ಇಂತಹ ಯೋಜನೆಗಳನ್ನು ಮಹಿಳೆಯರಿಗೆ ಮನವರಿಕೆ ಮಾಡಿಕೊಡುವ ಮಾಧ್ಯಮಗಳ ಅವಶ್ಯಕತೆ ಎದ್ದು ಕಾಣುತ್ತಿದೆ.

ಕೊನೆಯದಾಗಿ ಮನೆಗೆಲಸದ ದುಡಿಮೆಗಾರರು ತಮ್ಮ ಚೌಕಾಸಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವೃತ್ತಿ ಪರಿಣತಿಯನ್ನು ಪಡೆಯಬೇಕು. ಅಲ್ಲದೇ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಒಗ್ಗಟ್ಟಾಗಿ ಹೋರಾಟ ನಡೆಸಬೇಕು. ಸಾಂಘಿಕ ಹೋರಾಟದಿಂದ ಮಾತ್ರ ಮಹಿಳೆಯರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬರಲು ಸಾಧ್ಯವಾಗುತ್ತದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು (ಇಂಗ್ಲಿಷ್)

೨. ರಿಪೋರ್ಟ್ಸ್

೩. ಜರ್ನಲ್ಸ್

೪. ಥೀಸೀಸ್

೫. ಪರಾಮರ್ಶನ ಗ್ರಂಥಗಳು (ಕನ್ನಡ)

ಪರಾಮರ್ಶನ ಗ್ರಂಥಗಳು (ಇಂಗ್ಲಿಷ್)

ಅಮರೇಶ್ ದುಬೆ (೨೦೦೫) 'ಎಕನಾಮಿಕ್ ಲಿಬರಲೈಜೇಷನ್ ಅಂಡ್ ವುಮೆನ್ಸ್ ವರ್ಕ ಫೋರ್ಸ್ ಪಾರ್ಟಿಸಿಪೇಷನ್ ರೇಟ್', ಬಿಬೆಕ್ ಡೆಬ್ರೆ ಅಂಡ್ ಪಿ.ಡಿ. ಕೌಶಿಕ್ (ಸಂ) *ರಿಫಾರ್ಮಿಂಗ್ ದಿ ಲೇಬರ್ ಮಾರ್ಕೆಟ್*, ಅಕ್ಯಾಡೆಮಿಕ್ ಫೌಂಡೇಷನ್, ನ್ಯೂ ದೆಲ್ಲಿ.

ಅನಿತಾ ಆರ್ಯ (೨೦೦೦) *ಇಂಡಿಯನ್ ವುಮೆನ್*, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂ ದೆಲ್ಲಿ.

ಅನಿಲ್ ಕುಮಾರ್ ಜೈನ್ (೨೦೦೧) 'ವುಮೆನ್ ಎಂಪ್ಲಾಯ್ಮೆಂಟ್ ಅಂಡ್ ಎಕನಾಮಿಕ್ ಡೆವೆಲಪ್‌ಮೆಂಟ್, ದಿ ಇಂಡಿಯನ್ ಪರ್‌ಸ್ಪೆಕ್ಟಿವ್', ಮೂರ್ತಿ.ಎಸ್. (ಸಂ) *ವುಮೆನ್ ಅಂಡ್ ಎಂಪ್ಲಾಯ್‌ಮೆಂಟ್*, ಆರ್.ಎಸ್.ಬಿ.ಎ. ಪಬ್ಲಿಕೇಷನ್, ಜೈಪುರ್.

ಆಲ್ವಾ ಮಿರ್ಡಾಲ್ ಅಂಡ್ ವಿಯೋಲಾ ಕೀನ್ (೧೯೫೬) *ವುಮೆನ್ಸ್ ಟು ರೋಲ್ಸ್ ಹೋಮ್ ಅಂಡ್ ವರ್ಕ್*, ರೋಟ್‌ಲೆಜ್ ಅಂಡ್ ಕೆಗಾನ್‌ಪಾಲ್, ಲಂಡನ್.

ಅಮಲ್ ಮಂಡಲ್ (೨೦೦೯) 'ಇನ್‌ವಿಜಿಬಿಲಿಟಿ ಅಂಡ್ ಆರ್ಡಿಯಲ್ ಆಫ್ ವುಮೆನ್ ವರ್ಕರ್ಸ್ ಇನ್ ಇಂಡಿಯ' ಮನೋರಂಜನ್ ಪಾಲ್ (ಸಂ) *ಜೆಂಡರ್ ಅಂಡ್ ಡಿಸ್ಕ್ರಿಮಿನೇಷನ್*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

ಬೌಡ್ ಐ.ಎಸ್.ಎ. (೧೯೯೨) *ಫಾರ್ಮ್ಸ್ ಆಫ್ ಪ್ರೊಡಕ್ಷನ್ ಅಂಡ್ ವುಮೆನ್ ಲೇಬರ್*, ಸೇಜ್ ಪಬ್ಲಿಕೇಷನ್ಸ್ ನ್ಯೂ ದೆಲ್ಲಿ.

ಬಿನಿತಾ ವರ್ಮಾ (೧೯೯೩) *ಎಕ್ಸಪ್ಲಾಯಿಟೇಷನ್ ಆಫ್ ವುಮೆನ್ ಲೇಬರ್ ಇನ್ ಇಂಡಿಯ*, ದೀಪ್ ಅಂಡ್ ದೀಪ್ ಪಬ್ಲಿಕೇಷನ್, ನ್ಯೂ ದೆಲ್ಲಿ.

ಬಾರ್ಬರಾ. ಎ. ಗುಟೆಕ್ (೨೦೦೦) 'ವುಮೆನ್ ಇನ್ ಮ್ಯಾನೇಜ್‌ಮೆಂಟ್' ನಳಿನಿ ಶಾಸ್ತ್ರಿ ಅಂಡ್ ಸುಬ್ರತಾ ಪಾಂಡೆ (ಸಂ) *ವುಮೆನ್ ಎಂಪ್ಲಾಯೀಸ್ ಅಂಡ್ ಹ್ಯೂಮನ್ ರಿಸೋರ್ಸ ಮ್ಯಾನೇಜ್‌ಮೆಂಟ್*, ಯೂನಿವರ್ಸಿಟಿ ಪ್ರೆಸ್, ಹೈದರಾಬಾದ್.

ಬಲ್ಬೀರ್ ಸೋನಿ (೨೦೦೬) *ಎಂಪವರ್‌ಮೆಂಟ್ ಆಫ್ ವುಮೆನ್ ವರ್ಕರ್ಸ್*, ಡಾಮಿನೆಂಡ್ ಪಬ್ಲಿಶರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂ ದೆಲ್ಲಿ.

ಬೋಸರಪ್. ಇ. (೨೦೦೮) *ವುಮೆನ್ ರೋಲ್ ಇನ್ ಎಕಾನಾಮಿಕ್ ಡೆವೆಲಪ್‌ಮೆಂಟ್*, ಅರ್ತಸ್ಕ್ಯಾನ್ ಇನ್ ಯು.ಕೆ. ಅಂಡ್ ಯು.ಎಸ್.ಎ.

ಚಂದ್ರ ಪ್ರಕಾಶ್ ಅಜಾದ್ (೨೦೦೮) 'ಎಂಪವರ್‌ಮೆಂಟ್ ಆಫ್ ವುಮೆನ್ ಇನ್ ಪೋಸ್ಟ್ ಇಂಡಿಪೆಂಡೆಂಟ್ ಇರಾ,ಎನ್ ಎನಲಿಸಿಸ್' ಅಜಿತ್ ಕುಮರ್ ಸಿನ್ಹಾ (ಸಂ) *ನ್ಯೂ ಡೈಮೆನ್ಷನ್ಸ್ ಆಫ್ ವುಮೆನ್ ಎಂಪವರ್‌ಮೆಂಟ್*, ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಚಿತ್ಕಾರ (೨೦೦೧) *ವುಮೆನ್ ಅಂಡ್ ಸೋಸಿಯಲ್ ಟ್ರಾನ್ಸಫಾರ್ಮೇಷನ್,* ಎ.ಪಿ.ಎಚ್. ಪಬ್ಲಿಶಿಂಗ್ ಕಾರ್ಪೋರೇಷನ್, ನ್ಯೂ ದೆಲ್ಲಿ.

ಚನ್ನ.ಎಸ್.ಎಮ್. (೨೦೦೬) *ವುಮೆನ್ಸ್ ರೋಲ್ಸ್ ಅಂಡ್ ಸ್ಟೇಟಸ್,* ಜಿನೆಸಿಸ್ ಪಬ್ಲಿಶಿಂಗ್ ಪ್ರೈ.ಲಿ. ನ್ಯೂ ದೆಲ್ಲಿ.

ದಸ್ತಗೀರ್ ಅಲಮ್ (೨೦೦೮) 'ವುಮೆನ್ ಇನ್ ಲೇಬರ್ ಮಾರ್ಕೆಟ್, ಎನ್ ಆಸ್ಪೆಕ್ಟ ಆಫ್ ಸೋಸಿಯಲ್ ಜಸ್ಟೀಸ್', ಅಜಿತ ಕುಮರ್ ಸಿನ್ಹಾ.(ಸಂ) *ನ್ಯೂ ಡೈಮೆನ್ಷನ್ಸ್ ಆಫ್ ವುಮೆನ್ ಎಂಪವರ್ಮೆಂಟ್,* ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ದಿಗುಮೂರ್ತಿ ಭಾಸ್ಕರರಾವ್ (೧೯೯೯) *ಸ್ಟೇಟಸ್ ಆಫ್ ವರ್ಲ್ಡ್ಸ್ ವುಮೆನ್,* ಡಿಸ್ಕವರೀ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ದಿಗುಮೂರ್ತಿ ಭಾಸ್ಕರರಾವ್ ಅಂಡ್ ದಿಗುಮೂರ್ತಿ ಪುಷ್ಪಲತಾರಾವ್ (೧೯೯೮) *ವುಮೆನ್ ಎಜುಕೇಷನ್ ಅಂಡ್ ಎಂಪವರ್‌ಮೆಂಟ್,* ಡಿಸ್ಕವರೀ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ಡೊರಿಯನ್ ರೊವನ್ ಕ್ಯಾಂಪ್‌ಬೆಲ್ (೨೦೦೬) *ಡೆವೆಲಪ್ಮೆಂಟ್ ವಿತ್ ವುಮೆನ್,* ರೋವತ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಎಲಿಜೆಬೆತ್ ಹಿಲ್ (೨೦೧೦) *ವರ್ಕರ್ ಐಡೆಂಟಿಟಿ ಅಂಡ್ ಏಜನ್ಸಿ ಅಂಡ್ ಎಕನಾಮಿಕ್ ಡೆವೆಲಪ್ ಮೆಂಟ್,* ರೋತಲೆಜ್ ಲಂಡನ್ ಅಂಡ್ ನ್ಯೂಯಾರ್ಕ.

ಇಳಾಭಟ್ (೧೯೮೭) 'ದಿ ಇನ್‌ವಿಜಿಬಿಲಿಟಿ ಆಫ್ ಹೋಮ್ ಬೇಸಡ್ ವರ್ಕ, ದಿ ಕೇಸ್ ಆಫ್ ಪೀಸ್ ರೇಟ್ ವರ್ಕರ್ಸ್ ಇನ್ ಇಂಡಿಯ', ಆಂಡ್ರಿಯಾ ಮೆನೆಫೀ ಸಿಂಘ–ಅನಿತಾಕೆಲ್ಲಸ್ ವಿಟಾನೆನ್ (ಸಂ) *ಇನ್‌ವಿಜಿಬಲ್ ಹ್ಯಾಂಡ್ಸ್, ವುಮೆನ್ ಇನ್ ಹೋಮ್ ಬೇಸಡ್ ಪ್ರೊಡಕ್ಷನ್ಸ್,* ಸೇಜ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಪಾಲೇಂದ್ರ. ಕೆ. ಸೂಡಾನ್. ನಿರ್ಮಲ .ಕೆ.ಗುಪ್ತಾ. (೧೯೯೦) *ವುಮೆನ್ ಅಟ್ ವರ್ಕ ಇನ್ ಡೆವೆಲಪಿಂಗ್ ಎಕಾನಮೀಸ್,* ಅನಮೋಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಫಜಲ್ ಅಹಮದ್ (೧೯೯೯) *ಲೇಬರ್ ಇನ್ ಇನ್‌ಫಾರ್ಮಲ್ ಸೆಕ್ಟರ್,* ಮುನಾಕ್ ಪಬ್ಲಿಕೇಷನ್ಸ. ಪ್ರೈ.ಲಿ., ನ್ಯೂ ದೆಲ್ಲಿ.

ಪಾಲೇಂದ್ರ. ಕೆ. ಸೂಡಾನ್. (೨೦೦೧) 'ಜೆಂಡರ್ ಬಯಾಸ್ ಇನ್ ಎಂಪ್ಲಾಯಮೆಂಟ್ ಆಫ್ ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್'. ಮೂರ್ತಿ.ಎಸ್.(ಸಂ) *ವುಮೆನ್ ಅಂಡ್ ಎಂಪ್ಲಾಯ್ ಮೆಂಟ್,* ದೀಪಕ್ ಪರ್ನಾಮಿ, ಆರ್.ಎಸ್.ಬಿ.ಎ. ಪಬ್ಲಿಶರ್ಸ, ಜೈಪುರ್.

ಗೌಡ ಎನ್.ಕೆ. ಅಂಡ್ ಗೋಗಿಶ್ ಎಸ್.ಎನ್. (೨೦೦೬) ವಿಜನ್ ಆಫ್ ವುಮೆನ್ ಎಂಪ್ಲಾಯ್ ಮೆಂಟ್ ಇನ್ ಇಂಡಿಯ. ಒಡೆಯರ್ .ಡಿ. ಹೆಗ್ಗಡೆ, (ಸಂ) *ಎಂಪವರಿಂಗ್ ವುಮೆನ್ ಇನ್ ಇಂಡಿಯ.*

ಗುರ್‌ಶರನ್ ಉರಂದನ್ (೧೯೯೪) *ಚೈಲ್ಡ ಲೇಬರ್ ಅಂಡ್ ವುಮೆನ್ ವರ್ಕರ್ಸ್*, ಆಶಿಶ್ ಪಬ್ಲಿಕೇಶನ್ಸ್, ನ್ಯೂ ದೆಲ್ಲಿ.

ಇಂದಿರಾ ಕುಮಾರಿ. ವೈ. ಸಾಂಬಸಿವರಾವ್ (೧೯೯೯) *ಎಂಪವರ್‌ಮೆಂಟ್ ಅಂಡ್ ರೂರಲ್ ಡೆವೆಲಪ್‌ಮೆಂಟ್*, ಸೀರೀಸ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಜನ್ ಬ್ರೆಮೆನ್ (೧೯೯೪) *ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

.... (೧೯೯೬) *ಫುಟ್ ಲೂಜ್ ಲೇಬರ್ಸ್-ವರ್ಕಿಂಗ್ ಇನ್ ಇಂಡಿಯಾಸ್ ಇನ್ ಫಾರ್ಮಲ್ ಎಕಾನಮಿ*, ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

.... (೨೦೦೪) *ದಿ ಮೇಕಿಂಗ್ ಅಂಡ್ ಅನ್ ಮೇಕಿಂಗ್ ಆಫ್ ಎನ್ ಇಂಡಸ್ಟ್ರಿಯಲ್ ವರ್ಕಿಂಗ್ ಕ್ಲಾಸ್*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

.... (೧೯೯೯) 'ದಿ ಇನ್‌ಫಾರ್ಮಲ್ ಸೆಕ್ಟರ್-ಎ ಕನ್‌ಕ್ಲೂಡಿಂಗ್ ರಿವಿವ್', ಜೊನಾಥನ್ .ಪಿ.ಪ್ಯಾರಿ., ಜನ್ ಬ್ರೆಮೆನ್ (ಸಂ) *ದಿ ವರ್ಲ್ಡ್ಸ್ ಆಫ್ ಇಂಡಿಯನ್ ಇಂಡಸ್ಟ್ರಿಯಲ್ ಲೇಬರ್*, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

.... (೧೯೯೯) *ದಿ ಲೇಬರಿಂಗ್ ಪೂರ್ ಇನ್ ಇಂಡಿಯ*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

.... (೨೦೧೦) *ಔಟ್ ಕ್ಯಾಸ್ಟ ಲೇಬರ್ ಇನ್ ಏಶಿಯ*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ನ್ಯೂ ದೆಲ್ಲಿ.

ಜೆನೆತ್ ಹೆನ್ಸಾಲ್ ಮೋಮ್ಸೆನ್ (೧೯೯೯) 'ಮೇಡ್ಸ್ ಆನ್ ದಿ ಮೂವ್, ವಿಕ್ಟಿಮ್ ಆರ್ ವಿಕ್ಟರ್. ಜೆನೆತ್ ಹೆನ್ಸಾಲ್ ಮೊಮ್ಸೆನ್' (ಸಂ) *ಜೆಂಡರ್ ಮೈಗ್ರೇಷನ್ ಅಂಡ್ ಡೊಮೆಸ್ಟಿಕ್ ಸರ್ವೀಸ್*, ರೋತ್‌ಲೆಜ್ ಆಕ್ಸಫಾಮ್, ಮಿಲ್ಟನ್ ಪಾರ್ಕ, ಅಬಿಂಗ್ಡಮ್.

ಜ್ಯೋತಿ ಕಿರಣ್ (೧೯೯೪) *ವುಮೆನ್ ಲೇಬರ್ ಫೋರ್ಸ್ ಅಂಡ್ ನ್ಯಾಷನಲ್ ಪ್ರೋಡಕ್ಟ*, ಪ್ರಿಂಟವೆಲ್ ಜೈಪುರ್.

ಜಜೀರ್ ಜಿಬಾನೆಸನ್ .ಎಮ್. ಅಂಡ್ ಇಲಿಯಾಸ್. ಪಿ. (೨೦೦೯) 'ಕಾನ್ಸೆಪ್ಟ್ಸ ಕನ್ವೆನ್ಷನ್ಸ್ ಅಂಡ್ ಕೇಸಸ್ ಇನ್ ಅನ್‌ಆರ್ಗನೈಸಡ್ ಲೇಬರ್ ಇಶ್ಯೂಸ್,' ಸೆಲ್ವಕುಮಾರ್ .ಎ. (ಸಂ) *ಸ್ಟೇಟಸ್ ಆಫ್ ಅನ್‌ಆರ್ಗನೈಸಡ್ ಲೇಬರ್*, ಡಿಸ್ಕವರಿ ಪಬ್ಲಿಶಿಂಗ್ ಹೌಸ್ ಪ್ರೈ.ಲಿ., ನ್ಯೂ ದೆಲ್ಲಿ.

ಜೋಸ್.ಎ. (೧೯೮೯) *ಲಿಮಿಟೆಡ್ ಆಫಶನ್ಸ್, ವುಮೆನ್ ವರ್ಕರ್ಸ್ ಇನ್ ರೂರಲ್ ಇಂಡಿಯ*, ಐ.ಎಲ್.ಓ. ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಜೋಸೆಫ್ ಕ್ಸೇವಿಯರ್.ಎಸ್ ಅಂಡ್ ಬಸ್ಟಿನ್ ಜೆರೋಮ್.ವಿ. (೨೦೦೯) 'ವುಮೆನ್ ಡೊಮೆಸ್ಟಿಕ್ ವರ್ಕ ಇನ್ ದಿ ಅನ್‌ಆರ್ಗನೈಸಡ್ ಸೆಕ್ಟರ್,' ಸೆಲ್ವಕುಮಾರ್. ಎ. (ಸಂ) *ಸ್ಟೇಟಸ್ ಆಫ್ ಅನ್‌ಆರ್ಗನೈಸಡ್ ಲೇಬರ್*, ಡಿಸ್ಕವರಿ ಪಬ್ಲಿಶಿಂಗ್ ಹೌಸ್ ಪ್ರೈ.ಲಿ. ನ್ಯೂ ದೆಲ್ಲಿ.

ಕಲ್ಪಾಗಮ್.ಯು. (೧೯೯೪) *ಲೇಬರ್ ಅಂಡ್ ಜೆಂಡರ್*, ಸೇಜ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಕುದಮುಲ ಶ್ರೀರಾಮೂರ್ತಿ (೧೯೮೬) *ಅರ್ಬನ್ ಲೇಬರ್ ಇನ್ ಇನ್‌ಫಾರ್ಮಲ್ ಸೆಕ್ಟರ್*, ಬಿ.ಆರ್. ಪಬ್ಲಿಶಿಂಗ್ ಕಾರ್ಪೋರೇಷನ್ಸ್, ನ್ಯೂ ದೆಲ್ಲಿ.

ಕ್ರಿಷ್ಣಮೂರ್ತಿ ಡಿ.ಬಿ. ಅಂಡ್ ರಾಮಣ್ಣ.ಡಿ.ವಿ. (೨೦೦೧) 'ಎಂಪ್ಲಾಯ್‌ಮೆಂಟ್ ಫಾರ್ ಜೆಂಡರ್ ಈಕ್ವಾಲಿಟಿ –ಪಾಲಿಸಿ ಇಂಟರ್ವೆನ್ಷನ್ಸ್', ಮೂರ್ತಿ.ಎಸ್.(ಸಂ) *ವುಮೆನ್ ಅಂಡ್ ಎಂಪ್ಲಾಯ್‌ಮೆಂಟ್*, ದೀಪಕ್ ಪರ್ನಾಮಿ ಆರ್.ಎಸ್.ಬಿ.ಎ. ಪಬ್ಲಿಶರ್ಸ, ಜೈಪುರ್.

ಲಾಲ್ನೆಯಿತ್ ಜೋವಿ (೨೦೦೭) ವುಮೆನ್ಸ್ *ಡೆವೆಲಪ್‌ಮೆಂಟ್ ಇನ್ ಇಂಡಿಯ ಪ್ರಾಬ್ಲೆಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್*, ಮಿತ್ತಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಲೀಲ ಗುಲಾತಿ (೧೯೯೨) 'ವುಮೆನ್ ಇನ್ ದಿ ಅನ್‌ಆರ್ಗನೈಸಡ್ ಸೆಕ್ಟರ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಕೇರಳ.' ಅಲಕ್. ಎನ್. ಶರ್ಮ, ಸೀಮ ಸಿಂಗ್ (ಸಂ) *ವುಮೆನ್ ಅಂಡ್ ವರ್ಕ, ಚೇಂಜಿಂಗ್ ಸೀನರಿಯೋ ಇನ್ ಇಂಡಿಯ*, ಇಂಡಿಯನ್ ಸೊಸೈಟಿ ಆಫ್ ಲೇಬರ್ ಎಕಾನಾಮಿಕ್ಸ. ಪಾಟ್ನ.

ಲೋರ್ಡ್ಸ್ ಆರಿಪ್ಪೆ (೧೯೯೭) 'ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್'. ನಳಿನಿ ವಿಶ್ವನಾಥನ್ ಲಿನ್ ದುಗಾನ್, ಲೂರಿ ನಿಲ್ಸನ್ ಆಫ್ ನಾನ್ ವಿಗರಸಮ್ (ಸಂ) *ದಿ ವುಮೆನ್ ಜೆಂಡರ್ ಅಂಡ್ ಡೆವೆಲಪ್‌ಮೆಂಟ್*, ಜುಬಾನ್, ನ್ಯೂ ದೆಲ್ಲಿ.

ಲಕ್ಷ್ಮೀಪತಿ ಕೋಲಾರ್ (೨೦೦೨) 'ದಲಿತ ಚಳುವಳಿ ಒಂದು ಪರಾಮರ್ಶೆ.' ಅರವಿಂದ ಮಾಲಗತ್ತಿ (ಸಂ) *ದಲಿತ ಮಾರ್ಗ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೈಥಿಲಿ ವಿಶ್ವನಾಥನ್ (೧೯೯೪) *ವುಮೆನ್ ಅಂಡ್ ಸೊಸೈಟಿ*, ಪ್ರಿಂಟ್ವೆಲ್ ಜೈಪುರ್.

ಮೀರ ದೇಸಾಯಿ ಎಮ್.ಕ್ರಿಷ್ಣ (೧೯೮೭) *ವುಮೆನ್ ಅಂಡ್ ಸೊಸೈಟಿ ಇನ್ ಇಂಡಿಯ*, ಅಜಂತಾ ಪಬ್ಲಿಕೇಷನ್ಸ್ ನ್ಯೂ ದೆಲ್ಲಿ.

ಮಹೇಶ್.ವಿ ಜೋಶಿ (೧೯೯೯) *ವುಮೆನ್ ರೂರಲ್ ಲೇಬರರ್ಸ್*, ಎ.ಪಿ.ಎಚ್. ಪಬ್ಲಿಶಿಂಗ್ ಕಾರ್ಪೋರೇಷನ್ಸ್, ನ್ಯೂ ದೆಲ್ಲಿ.

ಮಾರ್ಥ.ಸಿ.ನುಸ್‌ಬಾಮ್ (೨೦೦೦) *ವುಮೆನ್ ಅಂಡ್ ಹ್ಯೂಮನ್ ಡೆವೆಲಪ್‌ಮೆಂಟ್*, ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಜ್.

ಮಿಶ್ರ, ಆರ್.ಸಿ. (೨೦೦೬) *ವುಮೆನ್ ಇನ್ ಇಂಡಿಯ ಟುವರ್ಡ್ಸ್ ಜೆಂಡರ್ ಈಕ್ವಾಲಿಟಿ*, ಆಥರ್ ಪ್ರೆಸ್, ನ್ಯೂ ದೆಲ್ಲಿ.

ಮಾಥುರಿನಾಥ್ (೨೦೦೩) *ರೂರಲ್ ವರ್ಕ ಫೋರ್ಸ ಇನ್ ಇಂಡಿಯ*, ಬಿ.ಆರ್. ಪಬ್ಲಿಶಿಂಗ್ ಕಾರ್ಪೋರೇಷನ್ಸ್, ನ್ಯೂ ದೆಲ್ಲಿ.

ಮಿರಾಯಿ ಚಟರ್ಜಿ ಅಂಡ್ ಜಯಶ್ರೀ ವ್ಯಾಸ್ (೨೦೦೦) 'ಆರ್ಗನೈಜಿಂಗ್ ಇನ್ಸೂರನ್ಸ್ ಫಾರ್ ವುಮೆನ್ ವರ್ಕರ್ಸ್,' ರೇನಾನಾ ಜಾಬ್ವಾಲಾ. ಆರ್.ಕೆ.ಎ. ಸುಬ್ರಮಣ್ಯ. (ಸಂ) *ದಿ ಅನ್‌ಆರ್ಗನೈಸಡ್ ಸೆಕ್ಟರ್, ವರ್ಕ ಸೆಕ್ಯೂರಿಟಿ ಅಂಡ್ ಸೋಸಿಯಲ್ ಪ್ರೊಟೆಕ್ಷನ್*, ಸೇಜ್ ಪಬ್ಲಿಕೇಷನ್ಸ್ ನ್ಯೂ ದೆಲ್ಲಿ.

ಮುತ್ತುರಾಜ.ಸಿ. (೨೦೦೧) 'ಜೆಂಡರ್ ಅಂಡ್ ಎಂಪ್ಲಾಯಿಮೆಂಟ್ ಇನ್ ಇಂಡಿಯ–ಎನ್ ಅಜೆಂಡಾ ಫಾರ್ ದಿ ೨೧ ಸೆಂಚುರಿ.' ಮೂರ್ತಿ.ಎಸ್. (ಸಂ) *ವುಮೆನ್ ಅಂಡ್ ಎಂಪ್ಲಾಯಿಮೆಂಟ್*, ದೀಪಕ್ ಪರ್ನಾಮಿ, ಆರ್.ಎಸ್.ಬಿ.ಎ. ಪಬ್ಲಿಶರ್ಸ್, ಜೈಪುರ್.

ನೈಲ ಕಬೀರ್ (೧೯೯೫) *ರಿವರ್ಸಡ್ ರಿಯಾಲಿಟೀಸ್–ಜೆಂಡರ್ ಹೈರಾರ್ಕೀಸ್ ಇನ್ ಡೆವೆಲಪ್ ಮೆಂಟ್ ಥಾಟ್*, ಕಾಲಿ ಫಾರ್ ವುಮೆನ್, ನ್ಯೂ ದೆಲ್ಲಿ.

ನಿಶಾ ಶ್ರೀವಾಸ್ತವ (೨೦೦೪) 'ವರ್ಕ ಈಸ್ ವರ್ತ', ಕಲ್ಪಾಗಮ್.ಯು ಅಂಡ ನಿಶಾ ಶ್ರೀವಾಸ್ತವ (ಸಂ) *ಲೇಬರ್ ಅಂಡ್ ಪಾವರ್ಟೀ*, ಸೆಗ್ಮೆಂಟ್ ಬುಕ್ಸ್ ನ್ಯೂ ದೆಲ್ಲಿ.

ನರೇಂದ್ರಕುಮಾರ್ (೨೦೦೭) 'ಜೆಂಡರ್ ಡಿಸ್ಕ್ರಿಮಿನೇಷನ್ ಇನ್ ಅಗ್ರಿಕಲ್ಚರಲ್ ವೇಜಸ್–ಎ ಕೇಸ್ ಸ್ಟಡಿ ಇನ್ ಕರ್ನೂಲ್ ಡಿಸ್ಟ್ರಿಕ್ಟ ಆಫ್ ಆಂಧ್ರಪ್ರದೇಶ್.' ಲಿಂಗಮೂರ್ತಿ. ಎನ್ ಅಂಡ್ ಪಾಪಿರೆಡ್ಡಿ (ಸಂ) *ಟುವರ್ಡ್ಸ್ ಜೆಂಡರ್ ಈಕ್ವಾಲಿಟಿ, ಇಂಡಿಯನ್ ಎಕ್ಸಪೀರಿಯನ್ಸ್*, ಸೀರಿಯಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ನಿರುಲಾ ಸಿಂಗ್ (೧೯೯೯) *ವುಮೆನ್ ಪ್ರಾಬ್ಲೆಮ್ಸ್ ಅಂಡ್ ಅದರ್ ಅಪ್ರೆಶನ್ಸ್*, ಎ.ಪಿ.ಎಚ್ ಪಬ್ಲಿಶಿಂಗ್ ಕಾರ್ಪೋರೇಷನ್, ನ್ಯೂ ದೆಲ್ಲಿ.

ನಿರಂಜನ್ (೨೦೦೦) *ಸ್ಟೇಟಸ್ ಆಫ್ ವುಮೆನ್ ಅಂಡ್ ಫ್ಯಾಮಿಲಿ ವೆಲ್‌ಫೇರ್*, ಕನಿಶ್ಕ ಪಬ್ಲಿಶರ್ಸ್ ಡಿಸ್ಟ್ರಿಬ್ಯೂಟರ್ಸ್ ನ್ಯೂ ದೆಲ್ಲಿ.

ನಕ್ಕಿರನ್ (೨೦೦೯) *ಜೆಂಡರ್ ಇಶ್ಯೂಸ್ ಇನ್ ಕಾರ್ಪೋರೇಷನ್ಸ್*, ಅಭಿಜೀತ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ನಿತಿನ್ ದೋಶಿ (೨೦೦೭) *ಟುವರ್ಡ್ಸ್ ಎಂಪವರ್‌ಮೆಂಟ್ ಆಫ್ ವುಮೆನ್*, ಜಿ.ಎಸ್. ರಾವತ್, ಸೈಬರ್ ಟೆಕ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ನಿಶಿಕಾಂತ್. ಜಾ. (೨೦೦೮) 'ವುಮೆನ್ ಎಂಪವರ್ಮೆಂಟ್.' ಅಜಿತ್ ಕುಮಾರ್ ಸಿನ್ಹಾ (ಸಂ) *ನ್ಯೂ ಡೈಮೆನ್ಷನ್ಸ್ ಆಫ್ ವುಮೆನ್ ಎಂಪವರ್‌ಮೆಂಟ್*, ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ನಿವೇದಿತ ಮೆನನ್ (೧೯೯೯) *ಜೆಂಡರ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯ*, ಅಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ಆಕ್ಸಫರ್ಡ.

ನಿರ್ಮಲ ಬ್ಯಾನರ್ಜಿ (೧೯೮೫) *ವುಮೆನ್ ವರ್ಕರ್ಸ್ ಇನ್ ದಿ ಅನ್‌ಆರ್ಗನೈಸಡ್ ಸೆಕ್ಟರ್*, ಸಂಗಮ್ ಬುಕ್ಸ್ ಪ್ರೈ.ಲಿ. ಹೈದರಾಬಾದ್.

ಪಂತ್.ಎಸ್.ಸಿ (೧೯೮೫) *ಇಂಡಿಯನ್ ಲೇಬರ್ ಪ್ರಾಬ್ಲೆಮ್ಸ್*, ಚೈತನ್ಯಾ ಪಬ್ಲಿಶಿಂಗ್ ಹೌಸ್, ಅಲಹಾಬಾದ್.

ಪಾರ್ಥಸಾರಥಿ.ಜಿ. ಅಂಡ್ ಅನ್ನಿ ನಿರ್ಮಲಾ.ಕೆ. (೧೯೯೯) 'ಮಾರ್ಜಿನಲೈಜೇಷನ್ ಹೈಪೋಥಿಸೀಸ್ ಪೋಸ್ಟ ಗ್ರೀನ್ ರೆವಲೂಷನ್ ಪೀರಿಯಡ್,' ಪಪೋಲಾ. ಟಿ. ಎಸ್. ಅಂಡ್ ಅಲಕ್.ಎನ್.

ಶರ್ಮ. (ಸಂ) *ಜೆಂಡರ್ ಅಂಡ್ ಎಂಪ್ಲಾಯಿಮೆಂಟ್ ಇನ್ ಇಂಡಿಯ*, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ಪ್ರಿಯಾಂಕ ಶರ್ಮ (೨೦೦೮) *ವುಮೆನ್ಸ್ ಎಂಪವರ್‌ಮೆಂಟ್ ಅಂಡ್ ವರ್ಕಿಂಗ್ ವುಮೆನ್*, ಬುಕ್ ಎನ್‌ಕ್ಲೇವ್, ಜೈಪುರ್.

ಪಾರ್ವತಿ. ರಘುರಾಮ್ (೧೯೯೯) 'ಇಂಟರ್ ಲಿಂಕಿಂಗ್ ಪ್ರಾಜೆಕ್ಟರೀಸ್.' ಜೆನೆತ್ ಹೆನ್ಸಾಲ್ ಮೊಮ್ಸೆನ್ (ಸಂ) *ಮೈಗ್ರೇಷನ್ ಅಂಡ್ ಡೊಮೆಸ್ಟಿಕ್ ವರ್ಕ ಇನ್ ಇಂಡಿಯ*, ರಾತ್‌ಲೆಜ್ ಆಕ್ಸಫಾಮ್, ಮಿಲ್ಟನ್ ಪಾರ್ಕ, ಅಬಿಂಗಡಮ್.

ಪದ್ಮಿನಿ ಸೆನ್ ಗುಪ್ತ (೧೯೬೦) *ವುಮೆನ್ ವರ್ಕರ್ಸ್ ಆಫ್ ಇಂಡಿಯ*, ಏಶಿಯ ಪಬ್ಲಿಶಿಂಗ್ ಹೌಸ್, ಬಾಂಬೆ.

ಪಮೋಲ.ಟಿ.ಎಸ್. ಅಂಡ್ ಅಲಕ್.ಎನ್ ಶರ್ಮ (೧೯೯೯) *ಜೆಂಡರ್ ಅಂಡ್ ಎಂಪ್ಲಾಯಮೆಂಟ್ ಇನ್ ಇಂಡಿಯ*, ವಿಕಾಸ್ ಪಬ್ಲಿಶಿಂಗ್ ಹೌಸ್ ಪ್ರೈ.ಲಿ., ನ್ಯೂ ದೆಲ್ಲಿ.

ಪೀಟರ್ ಕಸ್ಟರ್ಸ್ (೧೯೯೭) *ಕ್ಯಾಪಿಟಲ್ ಅಕ್ಯುಮಿಲೇಷನ್ ಅಂಡ್ ವುಮೆನ್ಸ್ ಲೇಬರ್ ಇನ್ ಏಶಿಯನ್ ಎಕನಾಮಿಕ್ಸ್*, ವಸ್ತಾರ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಪ್ರೇಮ್ ಚೌಧರಿ (೧೯೯೪) *ದಿ ವೀಲ್ಡ್ ವುಮೆನ್ ಜೆಂಡರ್ ಸ್ಟಡೀಸ್*, ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್, ಆಕ್ಸಫರ್ಡ.

ಪಶುಪತಿನಾಥ ಸಿಂಗ್ (೨೦೦೧) 'ಜೆಂಡರ್ ಡಿಸ್ಕ್ರಿಮಿನೇಷನ್ ಇನ್ ಎಂಪ್ಲಾಯಮೆಂಟ್–ಎ ಮಿತ್ ಅಂಡ್ ರಿಯಾಲಿಟಿ.' ಮೂರ್ತಿ.ಎಸ್. (ಸಂ) *ವುಮೆನ್ ಅಂಡ್ ಎಂಪ್ಲಾಯಮೆಂಟ್*, ದೀಪಕ್ ಪರ್ನಾಮಿ, ಆರ್.ಎಸ್.ಬಿ.ಎ. ಪಬ್ಲಿಶರ್ಸ್, ಜೈಪುರ್.

ಪದ್ಮಾವತಿ ದಾಶರಥಿ (೨೦೦೮) 'ಜೆಂಡರ್ ಈಕ್ವಾಲಿಟಿ ಎಂಪ್ಲಾಯಮೆಂಟ್ ಅಂಡ್ ಡೈವರ್ಸಿಟಿ'. ಅಜಿತಕುಮಾರ್ ಸಿನ್ಹಾ (ಸಂ) *ನ್ಯೂ ಡೈಮೆನ್ಷನ್ಸ್ ಆಫ್ ವುಮೆನ್ ಎಂಪವರ್‌ಮೆಂಟ್*, ದೀಪ್ ಅಂಡ್ ದೀಪ್ ಪಬ್ಲಿಶರ್ಸ್, ನ್ಯೂ ದೆಲ್ಲಿ.

ರೇನಾನ ಜಾಬ್ವಾಲ (೧೯೯೨) 'ವುಮೆನ್ಸ್ ಸ್ಟ್ರಗಲ್ಸ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್,' ಸುಜಾತಾ ಗೊತಾಸ್ಕರ್ (ಸಂ) *ಸ್ಟ್ರಗಲ್ಸ್ ಆಫ್ ವುಮೆನ್ ಎಟ್ ವರ್ಕ*, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ರಾಮ್ ನರೇಶ್ ಥಾಕೂರ್ (೨೦೦೧) 'ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ವರ್ಕ ಆಂಡ್ ಎಂಪ್ಲಾಯಮೆಂಟ್, ಪ್ರಾಬ್ಲೆಮ್ಸ್ ಅಂಡ್ ಪ್ರಾಸ್ಪೆ ಕ್ಟ್ಸ್.' ಮೂರ್ತಿ ಎಸ್. (ಸಂ) *ವುಮೆನ್ ಅಂಡ್ ಎಂಪ್ಲಾಯಮೆಂಟ್*, ದೀಪಕ್ ಪರ್ನಾಮಿ. ಆರ್. ಎಸ್.ಬಿ.ಎ. ಪಬ್ಲಿಕೇಷನ್ಸ್, ಜೈಪುರ್.

ರವಿಪ್ರಕಾಶ್ ಯಾದವ್ (೨೦೦೧) 'ಫಿಮೇಲ್ ಎಂಪ್ಲಾಯಮೆಂಟ್ ಇನ್ ನಾನ್‌ಫಾರ್ಮ ಸೆಕ್ಟರ್' ಮೂರ್ತಿ. ಎಸ್. (ಸಂ) *ವುಮೆನ್ ಎಂಪ್ಲಾಯಮೆಂಟ್*, ದೀಪಕ್ ಪರ್ನಾಮಿ ಆರ್,ಎಸ್ ಬಿ. ಎ. ಪಬ್ಲಿಕೇಶನ್ಸ್, ಜೈಪುರ್.

ರಾಯ್.ಸಿ.ಪಿ. (೨೦೦೨) *ವರ್ಕಿಂಗ್ ವುಮೆನ್ ಇನ್ ಇಂಡಿಯ, ಸಂ–೧,* ಅನ್‌ಮೋಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ರಾಯ್.ಸಿ.ಪಿ. (೨೦೦೨) *ವರ್ಕಿಂಗ್ ವುಮೆನ್ ಇನ್ ಇಂಡಿಯ ಸಂ–೨,* ಅನ್‌ಮೋಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ರಾಮಚಂದ್ರನ್.ಎಸ್. (೨೦೦೮) 'ಇಂಪ್ಯಾಕ್ಟ ಆಫ್ ಗ್ಲೋಬಲೈಜೇಷನ ಆನ್ ಅಗ್ರಿಕಲ್ಚರ್ ಲೇಬರ್.' ವಿನಾಯಕ ರೆಡ್ಡಿ.ಎ. ಅಂಡ್ ಯಾದ್ಗಿರಾಚಾರ್ಯ.ಎಮ್. (ಸಂ) *ಇಂಡಿಯನ್ ಅಗ್ರಿಕಲ್ಚರ್ ಚಾಲೆಂಜಸ್ ಆಫ್ ಗ್ಲೋಬಲೈಜೇಷನ್,* ನ್ಯೂ ಕಂಟ್ರಿ ಪಬ್ಲಿಕೇಷನ್, ನ್ಯೂ ದೆಲ್ಲಿ.

ರಾಮೇಶ್ವರಿ ಪಾಂಡ್ಯ (೨೦೦೮) *ವುಮೆನ್ ಇನ್ ಚೇಂಜಿಂಗ್ ಇಂಡಿಯ,* ಸೀರಿಯಲ್ಸ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ರುಕ್ಮಿಣಿ ರಾವ್ ಅಂಡ್ ಸಾಬಾ ಹುಸೇನ್ (೧೯೮೭) 'ಇನ್ವಿಜಿಬಲ್ ಹ್ಯಾಂಡ್ಸ್, ವುಮೆನ್ ಇನ್ ದಿ ಹೋಮ್ ಬೇಸಡ್ ಪ್ರೊಡಕ್ಷನ್ ಇನ್ ದಿ ಗಾರ್ಮೆಂಟ್ ಎಕ್ಸಪೋರ್ಟ ಇಂಡಸ್ಟ್ರೀ ಇನ್ ನ್ಯು ದೆಲ್ಲಿ'. ಅಂಡ್ರಿಯಾ ಮುನಿಫಿ ಸಿಂಗ್, ಅನಿತ ,ಕೆಲ್ಲಸ್,ವಿಟಾನೆನ್ (ಸಂ) *ಇನ್ವಿಜಿಬಲ್ ಹ್ಯಾಂಡ್ಸ್–ವುಮೆನ್ ಇನ್ ಹೋಮ್ ಬೇಸಡ್ ಪ್ರೊಡಕ್ಷನ್,* ಸೇಜ್ ಪಬ್ಲಿಕೆಷನ್ಸ್, ನ್ಯೂ ದೆಲ್ಲಿ.

ರಾಮಾಂಜನೇಯಲು. ಎಮ್. (೨೦೦೬) *ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್ ಇನ್ ಇಂಡಿಯ,* ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಶರ್ಮಾ ಬಿ.ಕೆ. ವಿಶ್ವಮಿತ್ತರ್ (೧೯೯೦) *ಚೈಲ್ಡ್ ಲೇಬರ್ ಅಂಡ್ ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್,* ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಸಿದ್ಧಾರ್ಥ ಸರ್ಕಾರ್ ಅಂಡ್ ಅನಿಲ್ ಭೂಮಾಲಿ (೨೦೦೫) *ಡಿಸ್‌ಅಡ್ವಾಂಟೇಜಡ್ ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್,* ಅಭಿಜೀತ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಸುಭಾಶಿನಿ ಮಹಾಪಾತ್ರ (೨೦೦೬) *ಡೆವೆಲಪ್‌ಮೆಂಟ್ ಆಫ್ ವುಮೆನ್: ಚಾಲೆಂಜಸ್ ಅಂಡ್ ರೆಸ್ಪಾನ್ಸ್,* ರಜತ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಸ್ವಪ್ನ ಮುಖೋಪಾಧ್ಯಾಯ 'ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್,' ರಾಮಾನುಜಮ್. ಎಂ.ಎಸ್. (ಸಂ) *ಎಂಪ್ಲಾಯಮೆಂಟ್ ಪ್ರಮೋಷನ್ ಇನ್ ದಿ ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್,* ನ್ಯೂ ಏಜ್ ಇಂಟರ್‌ನ್ಯಾಷನಲ್ ಪ್ರೈ.ಲಿ., ನ್ಯೂ ದೆಲ್ಲಿ.

ಸೈಯದ್ ನೂಮನ್ ಅಹಮದ್ (೨೦೦೮) 'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಎಂಪ್ಲಾಯಮೆಂಟ್ ಎನ್ ಓವರ್ ವಿವ್.' ಅಜಿತ್ ಕುಮಾರ್ ಸಿನ್ಹ (ಸಂ) *ನ್ಯೂ ಡೈಮೆನ್ಷನ್ಸ್ ಆಫ್ ವುಮೆನ್ ಎಂಪವರ್ಮೆಂಟ್,* ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಸಂತೋಷ ಮರೋತ್ರ ಅಂಡ್ ಮೇರಿಯೋ ಬಿಗ್ಗೆರಿ (೨೦೦೭) 'ದಿ ಎಂಪಿರಿಕಲ್ ಕಾಂಟೆಕ್ಸ್ಟ ಅಂಡ್ ಎ ಥಿಯೊರಿಟಿಕಲ್ ಫ್ರೇಮ್ ವರ್ಕ', ಸಂತೋಷ ಮರೋತ್ರ ಅಂಡ್ ಮೇರಿಯೋ ಬಿಗ್ಗೇರಿ

(ಸಂ) *ಏಸಿಯನ್ ಇನ್‌ಫಾರ್ಮಲ್ ವರ್ಕರ್‍ಸ್, ಗ್ಲೋಬಲ್ ರಿಸ್ಕ್ಸ್ ಅಂಡ್ ಲೋಕಲ್ ಪ್ರೊಟೆಕ್ಷನ್*, ರೊತ್ಲೆಜ್ ಮಿಲ್ಪನ್ ಪಾರ್ಕ, ಆಕ್ಸ್‌ಫರ್ಡ್, ನ್ಯೂ ದೆಲ್ಲಿ.

ಶ್ರೀಲತ ಬಾಟ್ಲಿವಾಲ (೧೯೯೮) *ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ*, ನಿಯಾಸ್, ಬೆಂಗಳೂರು.

ಸಾವಿತ್ರಿ ಅರ್ಪುತಮೂರ್ತಿ (೧೯೯೦) *ವುಮೆನ್ ವರ್ಕ ಅಂಡ್ ಡಿಸ್ಕ್ರಿಮಿನೇಷನ್*, ಆಶಿಶ್ ಪಬ್ಲಿಕೇಷನ್ಸ್ ಹೌಸ್, ನ್ಯೂ ದೆಲ್ಲಿ.

ಸುಬ್ರಮಣ್ಯ ಆರ್.ಕೆ.ಎ. ಅಂಡ್ ರೇನಾನಾ ಜಾಬ್ವಾಲಾ (೨೦೦೦) *ಮೀಟಿಂಗ್ ಬೇಸಿಕ್ ನೀಡ್ಸ್ ದಿ ಅನ್‌ಆರ್ಗನೈಜಡ್ ಸೆಕ್ಟರ್*, ವರ್ಕ ಸೆಕ್ಯುರಿಟಿ ಅಂಡ್ ಸೋಸಿಯಲ್ ಪ್ರೊಟೆಕ್ಷನ್, ಸೇಜ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಶುಷ್ಮಾ ಶ್ರೀವಾಸ್ತವ (೨೦೦೮) *ವುಮೆನ್ ಎಂಪವರ್ಮೆಂಟ್*, ಕಾಮನ್‌ವೆಲ್ತ ಪಬ್ಲಿಶರ್ಸ್, ನ್ಯೂ ದೆಲ್ಲಿ.

ಸುಮಿತ್ರ ಕುಮಾರಿ (೨೦೦೬) *ಡೈನಾಮಿಕ್ಸ್ ಆಫ್ ವುಮೆನ್ ಎಂಪವರ್‌ಮೆಂಟ್*, ಅಲ್ಫಾ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಸ್ವಪ್ನ ಮುಖೋಪಾಧ್ಯಾಯ (೧೯೯೯) 'ಲೊಕೇಟಿಂಗ್ ವುಮೆನ್ ವಿಥಿನ್ ಇನ್‌ಫಾರ್ಮಲ್ ಸೆಕ್ಟರ್ ಹೈರಾರ್ಕೀಸ್.' ಪಪೋಲಾ ಟಿ.ಎಸ್. ಅಂಡ್ ಅಲಕ್ ಎನ್. ಶರ್ಮ (ಸಂ) *ಜೆಂಡರ್ ಅಂಡ್ ಎಂಪ್ಲಾಯಮೆಂಟ್ ಇನ್ ಇಂಡಿಯ*, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ಸ್ಮಿತ (೨೦೦೭) *ಲಾಕಡ್ ಹೋಮ್ ಅಂಡ್ ಎಮ್ಟಿ ಸ್ಕೂಲ್ಸ್*, ಜುಬಾನ್, ನ್ಯೂ ದೆಲ್ಲಿ.

ಸುನಂದ ಸಾಗರ್ ರೋಜಮೇಯರ್ (೨೦೦೨) *ವುಮೆನ್ಸ್ ರೈಟ್ಸ್, ಸರ್ಚ ಫಾರ್ ಐಡೆಂಟಿಟಿ*, ಡಾಮಿನಂಟ್ ಪಬ್ಲಿಶರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂ ದೆಲ್ಲಿ.

ಸ್ವಾಸ್ತಿ ಮಿತ್ತರ್ (೧೯೯೪) 'ಅನ್‌ಆರ್ಗನೈಜಿಂಗ್ ವುಮೆನ್ ಇನ್ ಕ್ಯಾಜುವಲೈಜಡ್ ವರ್ಕ' ಶೈಲ ರೊಬೊತಮ್ ಅಂಡ್ ಸ್ವಾಸ್ತಿ ಮಿತ್ತರ್ (ಸಂ) *ಡಿಗ್ನಿಟಿ ಅಂಡ್ ಡೇಲಿ ಬ್ರೆಡ್*, ರೋತ್ಲೆಜ್ ಲಂಡನ್.

ತಿವಾರಿ ಆರ್.ಎಸ್. (೨೦೦೫) *ಇನ್‌ಫಾರ್ಮಲ್ ಸೆಕ್ಟರ್ ವರ್ಕರ್ಸ್ ಪ್ರಾಬ್ಲೆಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್*, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ತಲ್ವಾರ್ ಸಾಬನ್ನಾ (೨೦೦೭) *ವುಮೆನ್ ಎಜುಕೇಷನ್ ಅಂಡ್ ಜೆಂಡರ್ ಡಿಸ್ಕ್ರಿಮಿನೇಷನ್*, ಸೀರಿಯಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ತನುಜ ಕುಮಾರ್ ಬಿಸಾಯಿ (೨೦೦೬) 'ವರ್ಕ ಪಾರ್ಟಿಸಿಪೇಷನ್ ಅಂಡ್ ಇನ್‌ಫಾರ್ಮಲ್ ಸೆಕ್ಟರ್' ಪ್ರದೀಪ್ ಕುಮರ್ ಸ್ವಾಯನ್ ಅಂಡ್ ಸೂರ್ಯನಾರಾಯಣ ತ್ರಿಪಾಟಿ (ಸಂ) *ಅನ್ ಈಕ್ವಲ್ ಟ್ರೀಟ್ಮೆಂಟ್ ಟು* ವುಮೆನ್ *ಅಂಡ್ ಜೆಂಡರ್ ಬಯಾಸ್*, ಸೋನಾಲಿ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಥಿಯೋ ವಾನ್ ಡೆರ್ಲೂಪ್ (೧೯೯೬) *ಇಂಡಸ್ಟ್ರಿಯಲ್ ಡೈನಾಮಿಕ್ಸ್ ಅಂಡ್ ಫ್ರಾಗ್ಮೆಂಟೆಡ್ ಲೇಬರ್ ಮಾರ್ಕೆಟ್ಸ್*, ಸೇಜ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ತ್ರಿಪಾಠಿ.ಎಸ್.ಎನ್. (೨೦೦೩) *ವುಮೆನ್ ಇನ್‌ಫಾರ್ಮಲ್ ಸೆಕ್ಟರ್*, ಡಿಸ್ಕವರಿ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ಉಷಾ ಶರ್ಮ (೨೦೦೩) *ವುಮೆನ್ ಇನ್ ಸೌತ್ ಏಶಿಯ, ಎಂಪ್ಲಾಯಮೆಂಟ್ ಅಂಡ್ ಹ್ಯೂಮನ್ ಡೆವೆಲಪ್‌ಮೆಂಟ್*, ಆಥರ್ ಪ್ರೆಸ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ಊರ್ಸುಲ ಶರ್ಮ (೧೯೮೬) *ವುಮೆನ್ ವರ್ಕ ಕ್ಲಾಸ್ ಅಂಡ್ ದಿ ಅರ್ಬನ್ ಹೌಸ್ ಹೋಲ್ಡ*, ತೆವಿಸ್ಟಾಕ್ ಪಬ್ಲಿಕೇಷನ್ಸ್ ಲಿ., ಲಂಡನ್.

ವನಿತಾ ಸಿಂಗ್ (೨೦೦೭) *ವುಮೆನ್ ಡೊಮೆಸ್ಟಿಕ್ಸ್ : ವಿಥಿನ್ ಹೌಸ್ ಹೋಲ್ಡ್ಸ್*, ರಾವತ್ ಪಬ್ಲಿಕೇಷನ್ಸ್, ಜೈಪುರ್.

ವಿಪ್ಲಾ ಛೋಪ್ರ (೨೦೦೧) 'ಎಂಪ್ಲಾಯಮೆಂಟ್ ಅಂಡ್ ಆಕ್ಯೂಪೇಷನಲ್ ಸ್ಟ್ರಕ್ಚರ್ ಅಫ್ ವುಮೆನ್ ಇನ್ ಇಂಡಿಯ', ಮೂರ್ತಿ ಎಸ್. (ಸಂ) *ವುಮೆನ್ ಅಂಡ್ ಎಂಪ್ಲಾಯಮೆಂಟ್*, ದೀಪಕ್ ಪರ್ನಾಮಿ ಆರ್.ಎಸ್.ಬಿ.ಎ. ಪಬ್ಲಿಶರ್ಸ್, ಜೈಪುರ್.

ವಿನಿತ ಕೌಲ್ (೨೦೦೦) *ವುಮೆನ್ ಅಂಡ್ ದಿ ವಿಂಡ್ ಆಫ್ ಚೇಂಜ್*, ಗ್ಯಾನ್ ಪಬ್ಲಿಶಿಂಗ್ ಹೌಸ್, ನ್ಯೂ ದೆಲ್ಲಿ.

ವಿಲ್ಲಿಯಮ್ ಧರ್ಮರಾಜ .ಬಿ. (೨೦೦೯) 'ಎ ಸೈನ್ ಖಾನಾನ್ ಫಾರ್ ಎಜುಕೇಟಿಂಗ್ ದಿ ಅನ್ ಆರ್ಗನೈಜಡ್ ವರ್ಕರ್ಸ್,' ಸೆಲ್ವಕುಮಾರ್ ಎ (ಸಂ) *ಸ್ಟೇಟಸ್ ಆಫ್ ಅನ್‌ಆರ್ಗನೈಜಡ್ ಲೇಬರ್*, ಡಿಸ್ಕವರಿ ಪಬ್ಲಿಶಿಂಗ್ ಹೌಸ್ ಪ್ರೈ.ಲಿ., ನ್ಯೂ ದೆಲ್ಲಿ.

ಜರೀನಾ ಭಾಟಿ (೧೯೮೭) 'ಎಕಾನಾಮಿಕ್ ಕಾಂಟ್ರಿಬ್ಯೂಷನ್ ಆಫ್ ವುಮೆನ್ ಟು ದಿ ಹೌಸ್ ಹೋಲ್ಡ ಬಜೆಟ್–ಎ ಕೇಸ್ ಸ್ಟಡಿ ಆಫ್ ದಿ ಬೀಡಿ ಇಂಡಸ್ಟ್ರಿ'–ಆಂಡ್ರಿಯ ಮೆನಿಫಾ ಸಿಂಗ್, ಅನಿತ ಕೆಲ್ಲಸ್ ವಿಟಾನೆನ್ (ಸಂ) *ಇನ್‌ವಿಜಿಬಲ್ ಹ್ಯಾಂಡ್ಸ್–ವುಮೆನ್ ಇನ್ ದಿ ಹೋಮ್ ಬೇಸಡ್ ಪ್ರೊಡಕ್ಷನ್*, ಸೇಜ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ.

ರಿಪೋರ್ಟ್ಸ್

ಸೆನ್ಸಸ್ ಆಫ್ ಇಂಡಿಯ (೨೦೦೧) ಕರ್ನಾಟಕ ಸೀರೀಸ್–೩೦, **ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್**, ಡೈರೆಕ್ಟೊರೇಟ್ ಆಫ್ ಸೆನ್ಸಸ್ ಆಪರೇಷನ್ಸ್.

ಸೆನ್ಸಸ್ ಆಫ್ ಇಂಡಿಯ (೨೦೧೧) ಕರ್ನಾಟಕ ಸೀರೀಸ್–೩೦, **ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್** ಡೈರೆಕ್ಟೋರೇಟ್ ಆಫ್ ಸೆನ್ಸಸ್ ಆಪರೇಷನ್ಸ್.

ಗವರ್ನಮೆಂಟ್ ಆಫ್ ಇಂಡಿಯ (೧೯೭೫) **ಟುವರ್ಡ್ಸ್ ಈಕ್ವಾಲಿಟಿ**, ರಿಪೋರ್ಟ್ ಆಫ್ ದಿ ಕಮಿಟಿ ಆನ್ ದಿ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯ, ಡಿಪಾರ್ಟಮೆಂಟ್ ಅಫ್ ಸೋಸಿಯಲ್ ವೆಲ್ಫೇರ್, ನ್ಯೂ ದೆಲ್ಲಿ.

ಗವರ್ನಮೆಂಟ್ ಆಫ್ ಇಂಡಿಯ (೨೦೦೭) **ನ್ಯಾಷನಲ್ ಕಮಿಶನ್ ಫಾರ್ ಎಂಟ್ರಪ್ರೈಸಸ್ ಇನ್ ದಿ ಅನ್‌ಆರ್ಗನೈಸಡ್ ಸೆಕ್ಟರ್**, ಎ ರಿಪೋರ್ಟ್ ಆನ್ ದಿ ಕಂಡೀಷನ್ಸ್ ಆಫ್ ವರ್ಕ ಅಂಡ್ ಪ್ರಮೋಷನ್ಸ್ ಆಫ್ ಲೈವ್ಲಿಹುಡ್ ಇನ್ ದಿ ಅನ್ ಆರ್ಗನೈಸಡ್ ಸೆಕ್ಟರ್, ನ್ಯೂ ದೆಲ್ಲಿ.

ಗವರ್ನಮೆಂಟ್ ಅಫ್ ಇಂಡಿಯ (೧೯೯೮) **ನ್ಯಾಷನಲ್ ಕಮಿಷನ್ ಆನ್ ಸೆಲ್ಫ್ ಎಂಪ್ಲಾಯಡ್ ವುಮೆನ್ ಅಂಡ್ ವುಮೆನ್ ಇನ್ ದಿ ಇನ್‌ಫಾರ್ಮಲ್ ಸೆಕ್ಟರ್** (ಶ್ರಮಶಕ್ತಿ), ನ್ಯೂ ದೆಲ್ಲಿ.

ಗ್ಲೋಬಲ್ ವೇಜ್ ರಿಪೋರ್ಟ್ (೨೦೧೦–೧೧) **ವೇಜ್ ಪಾಲಿಸೀಸ್ ಇನ್ ಟೈಮ್ಸ್ ಆಫ್ ಕ್ರೈಸಿಸ.** ಇನ್‌ಫಾರ್ಮಲ್ ಲೇಬರ್ ಆಫೀಸ್ ಜಿನೇವಾ, ಅಕ್ಯಾಡಮಿಕ್ ಫೌಂಡೇಷನ್, ನ್ಯೂ ದೆಲ್ಲಿ.

ಎ ವರ್ಲ್ಡ್ ಬ್ಯಾಂಕ್ ಕಂಟ್ರಿ ಸ್ಟಡಿ (೧೯೯೧) **ಜೆಂಡರ್ ಅಂಡ್ ಪಾವರ್ಟಿ ಇನ್ ಇಂಡಿಯ**, ವರ್ಲ್ಡ್ ಬ್ಯಾಂಕ ವಾಶಿಂಗ್‌ಟನ್ ಡಿ.ಸಿ.

ಗವರ್ನಮೆಂಟ ಆಫ್ ಇಂಡಿಯ (೨೦೦೨,೧೯೯೧,೧೯೬೭) **ರಿಪೋರ್ಟ್ಸ್ ಆಫ್ ದಿ ನ್ಯಾಷನಲ್ ಕಮಿಷನ್ ಆನ್ ಲೇಬರ್**, ಅಕ್ಯಾಡಮಿಕ್ ಫೌಂಡೇಷನ್, ನ್ಯೂ ದೆಲ್ಲಿ.

ಗವರ್ನಮೆಂಟ ಆಫ್ ಇಂಡಿಯ (೧೯೯೫) **ಹ್ಯೂಮನ್ ಡೆವೆಲಪ್‌ಮೆಂಟ್ ರಿಪೋರ್ಟ್**, ಪ್ಲಾನಿಂಗ್ ಪ್ರೊಗ್ರಾಮಿಂಗ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟಮೆಂಟ್, ನ್ಯೂ ದೆಲ್ಲಿ.

ಗವರ್ನಮೆಂಟ್ ಆಫ್ ಇಂಡಿಯ (೨೦೦೬) **ಹ್ಯೂಮನ್ ಡೆವೆಲಪ್‌ಮೆಂಟ್ ರಿಪೋರ್ಟ್**, ಪ್ಲಾನಿಂಗ್ ಪ್ರೊಗ್ರಾಮಿಂಗ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟಮೆಂಟ್ ನ್ಯೂ ದೆಲ್ಲಿ.

ಗವರ್ನಮೆಂಟ್ ಆಫ್ ಇಂಡಿಯ (೨೦೧೦) **ಹ್ಯೂಮನ್ ಡೆವೆಲಪ್‌ಮೆಂಟ್ ರಿಪೋರ್ಟ್**, ಪ್ಲಾನಿಂಗ್ ಪ್ರೊಗ್ರಾಮಿಂಗ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ ದಿಪಾರ್ಟಮೆಂಟ್, ನ್ಯೂ ದೆಲ್ಲಿ.

ಗವರ್ನಮೆಂಟ್ ಆಫ್ ಇಂಡಿಯ (೨೦೧೦–೧೧) **ಎಕನಾಮಿಕ್ ಸರ್ವೆ**, ಹ್ಯೂಮನ್ ಡೆವೆಲಪ್‌ಮೆಂಟ್ ಈಕ್ವಿಟಿ ಅಂಡ್ ಎನ್ವಿರಾನ್ಮೆಂಟ್, ಆಕ್ಸಫರ್ಡ ಯೂನಿವರ್ಸಿಟಿ ಮಿನಿಸ್ಟ್ರಿ ಆಫ್ ಫೈನಾನ್ಸ್ ಡಿಪಾರ್ಟಮೆಂಟ್ ಆಫ್ ಎಕನಾಮಿಕ್ ಅಫೇರ್ಸ್ ಆಕ್ಸಫರ್ಡ ಯೂನಿವರ್ಸಿಟಿ ಪ್ರೆಸ್.

ಗವರ್ನಮೆಂಟ್ ಆಫ್ ಕರ್ನಾಟಕ (೨೦೧೦-೧೧) **ಎಕನಾಮಿಕ್ ಸರ್ವೆ ಆಫ್ ಕರ್ನಾಟಕ**, ಪ್ಲಾನಿಂಗ್ ಪ್ರೊಗ್ರಾಮಿಂಗ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ ಡಿಪಾರ್ಟಮೆಂಟ್, ಬೆಂಗಳೂರು.

ಗವರ್ನಮೆಂಟ್ ಆಫ್ ಕರ್ನಾಟಕ (೨೦೦೬) **ಹ್ಯೂಮನ್ ಡೆವೆಲಪ್‌ಮೆಂಟ್ ರಿಪೋರ್ಟ**, ಪ್ಲಾನಿಂಗ್ ಪ್ರೊಗ್ರಾಮಿಂಗ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ ಡಿಪಾರ್ಟಮೆಂಟ್, ಬೆಂಗಳೂರು.

ಜರ್ನಲ್ಸ್

ಜೀಮೋಲ್ ಉನ್ನಿ (೨೦೦೧) 'ಜೆಂಡರ್ ಅಂಡ್ ಇನ್‌ಫಾರ್ಮಾಲಿಟಿ ಇನ್ ಲೇಬರ್ ಮಾರ್ಕೆಟ್ ಇನ್ ಸೌತ್ ಏಶಿಯ' (ಪು.ಸಂ.೨೩೬೦) **ಎಕಾನಾಮಿಕ್ ಅಂಡ್ ಪೊಲಿಟಿಕಲ್** ವೀಕ್ಲಿ.

ಲೂಯಿಸ್ ವಾಟ್ಟೆ (೨೦೦೧) **'ಕೇರಲಾಸ್** ಇನ್‌ಫಾರ್ಮಲ್ ಲೇಬರ್ ಮಾರ್ಕೆಟ್ ಇಂಟರ್‌ವೆನ್ಷನ್ಸ್ ವರ್ಕ ಟು ವೆಲ್ ಬೀಯಿಂಗ್?' (ಪು.ಸಂ. ೨೫೯೩) **ಎಕನಾಮಿಕ್ ಅಂಡ್ ಪೊಲಿಟಿಕಲ್** ವೀಕ್ಲಿ.

ಪ್ರಿಯಾಂಕಾ ಸಿಂಗ್, ಬಿ.ಪಿ. ಸಿಂಗ್ (೨೦೦೮) 'ಹ್ಯೂಮನ್ ರೈಟ್ಸ ಅಂಡ್ ಜೆಂಡರ್ ದಿಸ್ಕ್ರಿಮಿನೇಷನ್' ಎ.ಎನ್ ಸಿನ್ಹಾ, ಇನಸ್ಟಿಟ್ಯೂಟ್ ಆಫ್ ಸೋಸಿಯಲ್ ಸ್ಟಡೀಸ್,ಪಾಟ್ನ.ಜರ್ನಲ್ **ಆಫ್ ಸೋಸಿಯಲ್ ಅಂಡ್ ಎಕನಾಮಿಕ ಸ್ಟಡೀಸ್** (ಪು.ಸಂ.೧೧೦)

ಅಜಿತ್. ಕೆ. ಘೋಶ್. (೨೦೧೦) 'ಇಂಡಿಯಾಸ್ ಎಂಪ್ಲಾಯಮೆಂಟ್ ಚಾಲೆಂಜ್', **ದಿ ಇಂಡಿಯನ್ ಜರ್ನಲ್ ಆಫ್ ಲೇಬರ್ ಎಕಾನಾಮಿಕ್ಸ್ ಸಂ. ೫೩** (ಪು.ಸಂ. ೧೫೪)

ರಂಜನ್ ಕುಮಾರ್ ಭರತ್ (೨೦೦೮) 'ಅನ್‌ಆರ್ಗನೈಸಡ್ ಸೆಕ್ಟರ್', **ಟ್ರಾನ್ಸಫಾರ್ಮಿಂಗ್** ಇಂಡಿಯ. ಟುವರ್ಡ್ಸ ಸಸ್ಟೇನಬಲ್ ಎಕನಾಮಿಕ ಡೆವೆಲಪ್‌ಮೆಂಟ್ ಅಂಡ್ ಈಕ್ವಿಟಬಲ್ ಗ್ರೋತ್ (ಪು.ಸಂ ೧೧–೧೨)

ಎ.ಟಿ.ಎಂ.ನೂರಲ್ ಅಮಿನ್ (೨೦೦೮) 'ಡಿಫೈನಿಂಗ್ ಡಿಸೆಂಟ್ ವರ್ಕ' **ಟ್ರಾನ್ಸಫಾರ್ಮಿಂಗ್ ಇಂಡಿಯ** ಟುವರ್ಡ್ಸ ಸಸ್ಟೇನಬಲ್ ಎಕಾನಾಮಿಕ ದೆವೆಲಪ್‌ಮೆಂಟ್ ಅಂಡ್ ಈಕ್ವಿಟಬಲ್ ಗ್ರೋತ್ (ಪು.ಸಂ ೧೯)

ತ್ರಿಲೋಚನ್ ತ್ರಿಪಾಠಿ .ಡಿ. (೨೦೦೮) 'ಚಾಲೆಂಜಸ್ ಆಫ್ ರೂರಲ್ ನಾನ್ ಫಾರ್ಮ ಸೆಕ್ಟರ್', **ಟ್ರಾನ್ಸಫಾರ್ಮಿಂಗ್ ಇಂಡಿಯ;** ಟುವರ್ಡ್ಸ ಸಸ್ಟೇನಬಲ್ ಎಕನಾಮಿಕ ಡೆವೆಲಪ್‌ಮೆಂಟ್ ಅಂಡ್ ಈಕ್ವಿಟಬಲ್ ಗ್ರೋತ್ (ಪು.ಸಂ.೨೧).

ಅನಾಮಿಕಾ ಪ್ರಿಯದರ್ಶಿನಿ (೨೦೧೧) 'ದಿ ಕ್ವಯಟ್ ರೆವಲೂಷನ್ ಅಂಡ್ ವುಮೆನ್ಸ್ ಪ್ರಾಲಿಟೇರಿಯನೈಶೇಷನ್,' **ಎಕನಾಮಿಕ ಅಂಡ್ ಪೊಲಿಟಿಕಲ್ ವೀಕ್ಲಿ** (ಪು.ಸಂ.೭೩–೭೮)

ದೇವಿಕಾ.ಜೆ. (೨೦೧೧) 'ಎ ಟ್ಯಾಕ್ಟಫುಲ್ ಯೂನಿಯನ್ –ಡೊಮೆಸ್ಟಿಕ್ ವರ್ಕರ್ಸ್ ಯೂನಿಯನಿಸಮ್ ಮೋಲಿಟಿಕ್ಸ್ ಅಂಡ್ ಸಿಟಿಜನ್‌ಶಿಪ್ ಇನ್ ಕೇರಳಾ,' ಇಂಡಿಯ. **ಇಂಡಿಯನ್ ಜರ್ನಲ್ ಆಫ್ ಜೆಂಡರ್ ಸ್ಟಡೀಸ್** (ಪು.ಸಂ. ೧೮೬–೧೮೭)

ಕಿಶೋರ್ ಬಿರ್ಡಿಕರ್ ಅಂಡ್ ಅದರ್ಸ್ (೨೦೧೧) 'ಅಂಡರ್ ಸ್ಟ್ಯಾಂಡಿಂಗ್ ಲೇಬರ್ ಮಾರ್ಕೆಟ್ ಫ್ಲೆಕ್ಸಿಬಿಲಿಟಿ ಇನ್ ಇಂಡಿಯ.' **ಜರ್ನಲ್ ಆಫ್ ಸೊಸಿಯಲ್ ಅಂಡ್ ಎಕನಾಮಿಕ್ ಡೆವೆಲಪ್ಮೆಂಟ್ ಸಂ–೧೩,** (ಪು.ಸಂ. ೪೫)

ಥೀಸೀಸ್

ಸುಂದರ್.ಆರ್. ರೋಗಿ. (೧೯೯೮) **ಬೀಡಿ ವರ್ಕರ್ಸ್ ಇನ್ ಕರ್ನಾಟಕ,** ಎ ಸೋಸಿಯಲಾಜಿಕಲ್ ಸ್ಟಡಿ ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ನೀಲಪ್ಪ. ಬಿ. ಹೊಸಮನಿ (೨೦೦೨) **ಹ್ಯಾಂಡ್‌ಲೂಮ್ ವೀವರ್ಸ್ ಆಫ್ ನಾರ್ತ ಕರ್ನಾಟಕ–ಎ ಸೊಸಿಯಲಾಜಿಕಲ್ ಸ್ಟಡಿ,** ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ಅರಿಫಾ. ಸುಲ್ತಾನ ಎಸ್. ಮಕಾಂದಾರ್ (೨೦೦೭) **ವುಮೆನ್ ಎಂಟ್ರಪ್ರೆನ್ಯೂರ್ಸ್ ಇನ್ ಇನ್ ಫಾರ್ಮಲ್ ಸೆಕ್ಟರ್,** ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ರೇಖ.ಕೆ.ಜಾಧವ.(೨೦೦೨) **ವುಮೆನ್ ಎಂಟ್ರಪ್ರೆನ್ಯೂರ್ಸ್–ಎ ಸೋಸಿಯಲಾಜಿಕಲ್ ಸ್ಟಡಿ ಆಫ್ ಸೆಲ್ಫ್ ಎಂಪ್ಲಾಯಿಡ್ ವುಮೆನ್,** ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ರಾಮಕ್ರಿಷ್ಣಮೂರ್ತಿ.ಎಸ್. (೧೯೯೬) **ಎಕನಾಮಿಕ್ಸ್ ಆಫ್ ಹ್ಯಾಂಡಿಕ್ರಾಫ್ಟ್ಸ್–ವುಮೆನ್ ಇನ್ ಕನ್ಯಾಕುಮಾರಿ ಡಿಸ್ಟ್ರಿಕ್ಟ್ ತಿರುನೇಲ್ವೇಲಿ ಮನೋನ್ಮಣಿಯಮ್,** ಸುಂದರ್‌ನಗರ್ ಯೂನಿವರ್ಸಿಟಿ.

ರತ್ನಕುಮಾರಿ.ಎನ್.ಎಸ್.ಕೆ.ವಿ. (೨೦೦೩) **ವುಮೆನ್ ಇನ್ ಇನ್‌ಫಾರ್ಮಲ್ ಸೆಕ್ಟರ್–ಎ ಕೇಸ್ ಸ್ಟಡಿ ಇನ್ ಅನಕಪಲ್ಲಿ ಆಂಧ್ರಪ್ರದೇಶ,** ದಿಪಾರ್ಟಮೆಂಟ್ ಆಫ್ ಎಕನಾಮಿಕ್ಸ್, ಆಂಧ್ರ ಯೂನಿವರ್ಸಿಟಿ, ವಾಲ್ಟೇರ್.

ತಿಪ್ಪಯ್ಯ.ಪಿ. (೧೯೯೩) **ಇನ್‌ಫಾರ್ಮಲ್ ಸೆಕ್ಟರ್ ಅಂಡ್ ದಿ ಅರ್ಬನ್ ಪೂರ್ ಇನ್ ಮೆಟ್ರೋಪಾಲಿಟನ್ ಏರಿಯ,** ಎ ಕೇಸ್ ಸ್ಟಡಿ ಆಫ್ ಬೆಂಗಳೂರು, ಐ.ಎಸ್.ಇ.ಸಿ. ಬೆಂಗಳೂರು.

ಕ್ರಿಷ್ಣಯ್ಯ.ಎಮ್. (೧೯೯೪) **ಕ್ಯಾಜುವಲ್ ರೆಗ್ಯುಲರ್ ಅಂಡ್ ಮಾರ್ಜಿನಲ್ ಲೇಬರ್ ಸಿಸ್ಟಮ್ ಇನ್ ಸೆಮಿಅರಿಡ್ ಏರಿಯಾಸ್–ಎ ಕೇಸ್ ಸ್ಟಡಿ ಆಫ್ ಟು ವಿಲೇಜಸ್ ಇನ್ ಆಂಧ್ರಪ್ರದೇಶ,** ಸೆಸ್ ಬೇಗಮ್ ಪೇಟ್, ಹೈದರಾಬಾದ್.

ವೈಜಂತಿಮಾಲಾ ಕೆ. ರಾವಲೆ. (೨೦೦೧) **ಅರ್ಬನ್ ಇನ್‌ಫಾರ್ಮಲ್ ಸೆಕ್ಟರ್ ಇನ್ ಕರ್ನಾಟಕ–ಎ ಕೇಸ್ ಸ್ಟಡಿ ಆಫ್ ವೆಜಿಟೇಬಲ್ ವೆಂಡರ್ಸ್ ಇನ್ ಹುಬ್ಬಿ ಅಂಡ್ ಧಾರವಾಡ ಸಿಟಿ,** ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ಪರಾಮರ್ಶನ ಗ್ರಂಥಗಳು (ಕನ್ನಡ)

ಅಂಜಿನಪ್ಪ ಬಿ.ಎಚ್ (೨೦೦೬) *ಮಹಿಳೆ ಮತ್ತು ದುಡಿಮೆ*, ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.

ಬಸವರಾಜ ಸಬರದ (೨೦೦೫) *ಬಳ್ಳಾರಿ ಜಿಲ್ಲಾ ದರ್ಶನ*, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

ಚಂದ್ರಶೇಖರ್ ಟಿ.ಆರ್. (೨೦೦೬) *ಅಭಿವೃದ್ಧಿ ಅಧ್ಯಯನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

—— (೨೦೦೮) *ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

—— (೨೦೦೭) *ಕರ್ನಾಟಕದ ಅಭಿವೃದ್ಧಿಯ ಆಕೃತಿ*, ಪಲ್ಲವ ಪ್ರಕಾಶನ, ಚೆನ್ನಪಟ್ಟಣ.

ಚಂದ್ರಪೂಜಾರಿ ಎಂ. (೨೦೦೮) *ಸಂಶೋಧನಾ ಪ್ರಸ್ತಾವ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

—— (೨೦೦೫) *ಸಂಶೋಧಕರು ಮತ್ತು ಕ್ಷೇತ್ರಕಾರ್ಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

—— (೨೦೦೯) *ಸಂಶೋಧನೆ ಏನು? ಏಕೆ? ಹೇಗೆ?*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

—— (೨೦೦೫) *ಸಮಾಜ ಸಂಶೋಧನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಚಂದ್ರಶೇಖರ್ ಟಿ.ಆರ್. (೨೦೧೧) *ಹಕ್ಕು–ಹಂಗು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಛಾಯಾ ದೇಗಾಂವಕರ್ (೨೦೦೭) *ಮಹಿಳೆ ಮತ್ತು ಆರ್ಥಿಕತೆ*, ಮಹಿಳಾ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಗಂಗಾಧರ ಪಿ.ಎಸ್. (೨೦೦೫) *ರಾಜಕೀಯ ಚಿಂತಕರು ವಿದ್ಯಮಾನಗಳು ಮತ್ತು ಪ್ರಕ್ರಿಯೆಗಳು*, ಚೈತ್ರ ಪ್ರಕಾಶನ, ಬೆಂಗಳೂರು.

ಹೇಮಲತಾ ಹೆಚ್.ಎಂ. (೨೦೦೬) *ಮಹಿಳಾ ಅಧ್ಯಯನ–೩*, ಡಿ.ವಿ.ಕೆ. ಮೂರ್ತಿ, ಮೈಸೂರು.

ಹನುಮಂತಯ್ಯ ಎಲ್. (೨೦೦೨) 'ದಲಿತ ಚಳುವಳಿ: ಒಂದು ತಾತ್ವಿಕ ಚಿಂತನೆ', ಡಾ. ಅರವಿಂದ ಮಾಲಗತ್ತಿ (ಸಂ) *ದಲಿತ ಮಾರ್ಗ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಹಂದೆ ಕೆ.ಆರ್. (೨೦೦೬) *ಶಿಕ್ಷಣ ಸಂಚಯ ಜೀವನ ದರ್ಶನ*, ವಿದ್ಯಾಶ್ರೀ ಪಬ್ಲಿಕೇಷನ್ಸ್, ಉಡುಪಿ.

ಹಾಲತಿ ಸೋಮಶೇಖರ್ (೨೦೦೭) *ಮಹಿಳಾ ಚಳುವಳಿ : ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ*, ವಿಸ್ಮಯ ಪ್ರಕಾಶನ, ಮೈಸೂರು.

ಇಂದಿರಾ ಆರ್. (೨೦೦೨) *ಮಹಿಳೆ ಮತ್ತು ಸಂಸ್ಕೃತಿ*, ಪ್ರಕಟಣ ವಿಭಾಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇಂದಿರಾ ಎಸ್. (೨೦೧೦) *ಮಹಿಳೆ ಮತ್ತು ಸವಾಲುಗಳು*, ಶೃತಿ ಲೋಕ ಪ್ರಕಾಶನ, ಕೆ.ಜಿ.ಕೊಪ್ಪಲ್, ಮೈಸೂರು.

ಕಲ್ಬುರ್ಗಿ ಎಂ.ಎಂ. (೧೯೯೨) *ಕನ್ನಡ ಸಂಶೋಧನಾ ಶಾಸ್ತ್ರ*, ಸೌಜನ್ಯ ಪ್ರಕಾಶನ, ಕಲ್ಯಾಣ ನಗರ, ಧಾರವಾಡ.

ಲಕ್ಷ್ಮೀಪತಿ ಕೋಲಾರ (೨೦೦೨) 'ದಲಿತ ಚಳುವಳಿ–ಒಂದು ಪರಾಮರ್ಶೆ', ಅರವಿಂದ ಮಾಲಗತ್ತಿ (ಸಂ) *ದಲಿತ ಮಾರ್ಗ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೋಹನ್ ಎಸ್.ಕೆ. (೨೦೦೭) *ಕನಾಟಕದ ಹತ್ತಿ ಕೈ ಮಗ್ಗಗಳಲ್ಲಿ ನೇಯುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು–ಸಮಾಜ ಶಾಸ್ತ್ರೀಯ ಅಧ್ಯಯನ*, ಕುವೆಂಪು ವಿಶ್ವವಿದ್ಯಾಲಯ–ಸಹ್ಯಾದ್ರಿ, ಶಿವಮೊಗ್ಗ.

ಮಣಿಪಾಲ್ ಆರ್.ಕೆ. (೨೦೦೨) 'ದಲಿತ ಪ್ರಜ್ಞೆ ಒಂದು ಟಿಪ್ಪಣಿ' ಡಾ. ಅರವಿಂದ ಮಾಲಗತ್ತಿ (ಸಂ) *ದಲಿತ ಮಾರ್ಗ*, ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.

ಮೃತ್ಯುಂಜಯ ರುಮಾಲೆ (೨೦೦೫) 'ಜಿಲ್ಲೆ ಅನುಭವಿಸಿದ ಅನಾಥ ಪ್ರಜ್ಞೆ', ಬಸವರಾಜ ಸಬರದ (ಪ್ರ.ಸಂ) *ಬಳ್ಳಾರಿ ಜಿಲ್ಲಾ ದರ್ಶನ*, ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

ಮಲ್ಲಿಕಾ ಘಂಟಿ (೨೦೦೫) 'ಸಮಾಜ ಮಹಿಳೆ ಮತ್ತು ಸವಾಲುಗಳು', ಬಸವರಾಜ ಸಬರದ, *ಬಳ್ಳಾರಿ ಜಿಲ್ಲಾ ದರ್ಶನ*, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

ಮಹದೇವ ಸಿ. ಸುಬ್ಬಣ್ಣ ರೈ ಎ. (೨೦೦೨) *ಹೊಸಪೇಟೆ ತಾಲೂಕು ದರ್ಶನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ನರಸಿಂಹಾಚಾರ್ ಎ.ಎಲ್. (೧೯೯೨) *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ*, ಭಾರತೀಯ ಪ್ರಕಾಶನ, ಸರಸ್ವತೀಪುರಂ, ಮೈಸೂರು.

ಒಡೆಯರ್ ಡಿ. ಹೆಗ್ಗಡೆ. ಅನ್ನಪೂರ್ಣೇಶ್ವರಿ.ಎನ್. (೨೦೦೩) *ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು*, ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ, ಮೈಸೂರು.

ಶಂಕರ್‌ರಾವ್ ಚ.ನ. (೨೦೦೬) *ಭಾರತೀಯ ಸಮಾಜ–ಸಂರಚನೆ ಮತ್ತು ಪರಿವರ್ತನೆ*, ಜೈಭಾರತ್ ಪ್ರಕಾಶನ, ಮಂಗಳೂರು.

ಶಿವಚಿತ್ತಪ್ಪ ಕೆ. ಚೌಡೇಗೌಡ ಎಂ. (೨೦೦೫) *ಮಹಿಳೆ ಮತ್ತು ಅಭಿವೃದ್ಧಿ*, ಚಿನ್ಮಯ ಪ್ರಕಾಶನ, ಮೈಸೂರು.

ಶಿವಾನಂದ ವಿರಕ್ತಮಠ (೨೦೦೫) 'ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳು', ಡಾ. ಬಸವರಾಜ ಸಬರದ (ಪ್ರ.ಸಂ) *ಬಳ್ಳಾರಿ ಜಿಲ್ಲಾ ದರ್ಶನ*, ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ.

ಶೈಲೇಂದ್ರ ಸಂಗಾರ್ (೨೦೦೭) *ಕಾಸ್ಟ್, ಕ್ಲಾಸ್, ಅಂಡ್ ಸೋಶಿಯಲ್ ಇನ್‌ಈಕ್ವಾಲಿಟಿ ಇನ್ ಇಂಡಿಯಾ*, ಅನ್‌ಮೋಲ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ

ಶ್ರೀಮತಿ ಹೆಚ್.ಎಸ್. (೨೦೦೭) *ಮಹಿಳಾ ಆರ್ಥಿಕತೆ*, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಗೀತಾ ಪಿ. (೨೦೦೭) *ಗಣಿಗಾರಿಕೆ ಮತ್ತು ಪರಿಸರ*, ಸಖಿ ಪ್ರಕಾಶನ, ಹೊಸಪೇಟೆ.

ಉಷಾ ಎಂ. (೨೦೦೪) *ಮಹಿಳಾ ಚಳುವಳಿ ಮತ್ತು ವಿಷಯಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯಲಕ್ಷ್ಮೀ ಎಸ್. ಕರೀಕಲ್. (೨೦೦೭) *ಮಹಿಳೆ ಮತ್ತು ಸಮಾಜ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯಶ್ರೀ ಸಬರದ (೨೦೦೫) *ಮಹಿಳೆ ಶೋಷಣೆ–ಸವಾಲುಗಳು*, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ.

ಕರ್ನಾಟಕ ಸರ್ಕಾರ (೨೦೧೦–೧೧) *ಕರ್ನಾಟಕ ಆರ್ಥಿಕ ಸಮೀಕ್ಷೆ*, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ (೨೦೦೯) *ಕರ್ನಾಟಕ ಕಾರ್ಮಿಕ ಪತ್ರಿಕೆ, ತ್ರೈಮಾಸಿಕ–ಸಂಪುಟ–೮, ಸಂಚಿಕೆ–೩*, ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ (೨೦೧೦) *ಕರ್ನಾಟಕ ಕಾರ್ಮಿಕ ಪತ್ರಿಕೆ–ತ್ರೈಮಾಸಿಕ*, ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಬೆಂಗಳೂರು.

ಬಳ್ಳಾರಿ ಜಿಲ್ಲಾ ಅಂಕಿ–ಅಂಶಗಳ ನೋಟ (೨೦೦೫–೦೬), ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಬಳ್ಳಾರಿ.